ಶಾಲಾ ಶಿಕ್ಷಣದ ಅಭಿವೃದ್ಧಿಯಲ್ಲಿ ಸಮುದಾಯದ ಸಹಭಾಗಿತ್ವ

(ಎಸ್.ಡಿ.ಎಂ.ಸಿ.ಯನ್ನು ಅನುಲಕ್ಷಿಸಿ)

(ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯೂ) ವಿಷಯಕ್ಕೆ ಸಂಬಂಧಿಸಿದಂತೆ ಪಿ.ಎಚ್.ಡಿ ಪದವಿಗಾಗಿ
ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ರಾಜೇಂದ್ರ ಪ್ರಸಾದ್.ಪಿ
ಸಂಶೋಧನಾ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ, ಹಂಪಿ

ಮಾರ್ಗದರ್ಶಕರು

ಡಾ.ಎಚ್.ಡಿ. ಪ್ರಶಾಂತ್
ಸಹ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276

೨೦೧೧

ಶಾಲಾ ಶಿಕ್ಷಣದ ಅಭಿವೃದ್ಧಿಯಲ್ಲಿ ಸಮುದಾಯದ ಸಹಭಾಗಿತ್ವ

(ಎಸ್.ಡಿ.ಎಂ.ಸಿ.ಯನ್ನು ಅನುಲಕ್ಷಿಸಿ)

(ಸಮಾಜ ಕಾರ್ಯ (ಎಂ.ಎಸ್.ಡಬ್ಲ್ಯೂ) ವಿಷಯಕ್ಕೆ ಸಂಬಂಧಿಸಿದಂತೆ ಪಿ.ಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಮಹಾಪ್ರಬಂಧ)

ಸಂಶೋಧಕರು

ರಾಜೇಂದ್ರ ಪ್ರಸಾದ್.ಪಿ
ಸಂಶೋಧನಾ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ, ಹಂಪಿ

ಮಾರ್ಗದರ್ಶಕರು

ಡಾ.ಎಚ್.ಡಿ. ಪ್ರಶಾಂತ್
ಸಹ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸಮಾಜ ವಿಜ್ಞಾನಗಳ ನಿಕಾಯ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276

೨೦೧೧

ದೃಢೀಕರಣ ಪತ್ರ

ಶಾಲಾ ಶಿಕ್ಷಣದ ಅಭಿವೃದ್ಧಿಯಲ್ಲಿ ಸಮುದಾಯದ ಸಹಭಾಗಿತ್ವ (ಎಸ್.ಡಿ.ಎಂ.ಸಿಯನ್ನು ಅನುಲಕ್ಷಿಸಿ) ಎಂಬ ವಿಷಯದ ಕುರಿತು ರಾಜೇಂದ್ರಪ್ರಸಾದ್.ಪಿ ಅವರು ನನ್ನ ಮಾರ್ಗದರ್ಶನದಲ್ಲಿ ಸಂಶೋಧನ ಅಧ್ಯಯನ ಮಾಡಿ ಪಿ.ಎಚ್.ಡಿ ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರಸ್ತುತ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದಾರೆ.

ಸದರಿ ಮಹಾಪ್ರಬಂಧವು ನನ್ನ ಮಾರ್ಗದರ್ಶನದಲ್ಲಿ ಸಿದ್ಧಗೊಂಡಿದ್ದು, ಇದರ ಯಾವುದೇ ಭಾಗವು ಈ ಮುಂಚೆ ಇತರೆ ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲ ಎಂದು ದೃಢೀಕರಿಸುತ್ತೇನೆ.

ಸ್ಥಳ: ವಿದ್ಯಾರಣ್ಯ

ದಿನಾಂಕ : ೦೧.೦೪.೨೦೧೧

(ಡಾ.ಎಚ್.ಡಿ. ಪ್ರಶಾಂತ್)
ಮಾರ್ಗದರ್ಶಕರು ಮತ್ತು ಸಹ ಪ್ರಾಧ್ಯಾಪಕರು
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವ ವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276

ಪ್ರಮಾಣ ಪತ್ರ

ಶಾಲಾ ಶಿಕ್ಷಣದ ಅಭಿವೃದ್ಧಿಯಲ್ಲಿ ಸಮುದಾಯದ ಸಹಭಾಗಿತ್ವ (ಎಸ್.ಡಿ.ಎಂ.ಸಿ.ಯನ್ನು ಅನುಲಕ್ಷಿಸಿ) ಎಂಬ ವಿಷಯದ ಕುರಿತು ಡಾ.ಎಚ್.ಡಿ. ಪ್ರಶಾಂತ್ ಅವರ ಮಾರ್ಗದರ್ಶನದಲ್ಲಿ ಸಂಶೋಧನ ಅಧ್ಯಯನ ಮಾಡಿ ಪಿ.ಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಪ್ರಸ್ತುತ ಮಹಾಪ್ರಬಂಧವನ್ನು ಸಲ್ಲಿಸುತ್ತಿದ್ದೇನೆ.

ಸದರಿ ಮಹಾಪ್ರಬಂಧವನ್ನು ಈವರೆಗೆ ಯಾವುದೇ ಪದವಿಗಾಗಿ ಸಲ್ಲಿಸಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಸ್ಥಳ : ವಿದ್ಯಾರಣ್ಯ

ದಿನಾಂಕ : ೦೧-೦೪-೨೦೧೧

(ರಾಜೇಂದ್ರಪ್ರಸಾದ್.ಪಿ)
ಸಂಶೋಧನ ವಿದ್ಯಾರ್ಥಿ
ಅಭಿವೃದ್ಧಿ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ 583276

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ಮಹತ್ವ

೧.೧ಪ್ರಸ್ತಾವನೆ

ನಮ್ಮ ಸಂವಿಧಾನದ ಆಶಯ ಹಾಗೂ ೨೧ನೇ ಶತಮಾನದ ಜಾಗತಿಕ ಗುರಿಯಂತೆ ಎಲ್ಲಾ ಮಕ್ಕಳಿಗೆ ಸಮಾನ ಗುಣಮಟ್ಟ ಶಿಕ್ಷಣ ನೀಡುವುದು ನಮ್ಮ ಮುಂದಿನ ಗುರಿಯಾಗಿದೆ. ಇದನ್ನು ಸಾಧಿಸಿಕೊಳ್ಳುವಲ್ಲಿ ಅನೇಕ ಪ್ರಯತ್ನಗಳು ೯೦ರ ದಶಕದಿಂದ ಸ್ವಲ್ಪ ವೇಗವಾಗಿ ನಡೆದಿದೆ. ಕಳೆದ ೬೫ ವರ್ಷಗಳಲ್ಲಿ ಶಾಲಾ ಶಿಕ್ಷಣದ ಸಾರ್ವತ್ರಿಕರಣಕ್ಕೆ ಪ್ರಯತ್ನಗಳು ನಿರಂತರವಾಗಿ ನಡೆದಿವೆ. ಈ ಕುರಿತು ನಡೆದ ವಾದಗಳಲ್ಲಿ ಶಾಲಾ ಶಿಕ್ಷಣದ ಆಡಳಿತದಲ್ಲಿ ಸಮುದಾಯದ ಸಹಭಾಗಿತ್ವವನ್ನು ಜಾರಿಗೆ ತರುವ ಅಗತ್ಯವನ್ನು ತಿಳಿಸಿವೆ. ಈ ನಿಟ್ಟಿನಲ್ಲಿ ಸಂವಿಧಾನಾತ್ಮಕ ತಿದ್ದುಪಡಿಗಳನ್ನು ತರಲು ಹಲವು ರಾಜ್ಯಗಳು ಪ್ರಯತ್ನಿಸಿದರೆ, ಕೆಲವು ರಾಜ್ಯಗಳು ಈ ಮಾದರಿಗಳನ್ನು ಅಳವಡಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಈ ಕುರಿತು ನಡೆದ ಅಧ್ಯಯನಗಳಲ್ಲಿ ಪ್ರಮುಖ ಅಧ್ಯಯನಗಳಾದ ಪ್ರೋಭ್, (ಪಬ್ಲಿಕ್ ರಿಪೋರ್ಟ್ ಆನ್ ಬೇಸಿಕ್ ಎಜುಕೇಷನ್);ಎಂ.ಡಿ.ಉಷಾದೇವಿಯವರ ಎ ಸ್ಟಡಿ ಆನ್ ಪಾರ್ಟಿಸಿಪೇಟರಿ ಇನ್ಸ್ಟಿಟ್ಯೂಟ್ಷನಲ್ ಸ್ಟ್ರಕ್ಚರ್ ಇನ್ ದಿ ಸೆಂಟ್ರೇಲೈಜಡ್ ಮ್ಯಾನೇಜ್‌ಮೆಂಟ್ ಎಜುಕೇಷನ್; ಮತ್ತು ಆರ್ ಗೋವಿಂದರವರ ಕಮ್ಯೂನಿಟಿ ಪಾರ್ಟಿಸಿಪೇಷನ್ ಅಂಡ್ ಎಂಪಾವರ್‌ಮೆಂಟ್ ಇನ್ ಪ್ರೈಮರಿ ಎಜುಕೇಷನ್; ಡಾ.ರಾಜಾರಾಮಣ್ಣನವರ ಶಿಕ್ಷಣ ಕಾರ್ಯಪಡೆ ವರದಿ; .ಎಚ್.ಡಿ ಪ್ರಶಾಂತ್ ಅವರ ಶಾಲಾ ಶಿಕ್ಷಣದ ವಿಕೇಂದ್ರೀಕರಣ ಮತ್ತು ಎಸ್.ಡಿ.ಎಂ.ಸಿ ಕಾರ್ಯಕ್ಷಮತೆ;ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ; ವಿ.ಪಿ.ನಿರಂಜನಾರಾಧ್ಯ ಅವರ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಕಾರ್ಯವೈಖರಿ ಕುರಿತ ಸಂಶೋಧನಾ ಅಧ್ಯಯನ ವರದಿಗಳು ಖಚಿತ ಪಡಿಸಿದ್ದು, ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವವನ್ನು ಖಾತ್ರಿಪಡಿಸುವುದು ನಮ್ಮ ಮುಂದಿರುವ ಸವಾಲು ಮತ್ತು ಶಾಲಾ ಶಿಕ್ಷಣದ ಅಭಿವೃದ್ಧಿಗೆ ವಿಕೇಂದ್ರಿಕೃತ ಆಡಳಿತವೆ ಪರಿಣಾಮಕಾರಿ ಕಾರ್ಯತಂತ್ರ ಎಂದು ಸ್ಪಷ್ಟಪಡಿಸಿವೆ.

ಈ ಹಿನ್ನಲೆಯಲ್ಲಿ ನೋಡಿದಾಗ ಎಲ್ಲರಿಗೂ ಸಮಾನ ಹಾಗೂ ಗುಣಮಟ್ಟದ ಶಿಕ್ಷಣ ನೀಡಬೇಕೆಂದರೆ ಪಾರದರ್ಶಕ ಹಾಗೂಪರಿಣಾಮಕಾರಿ ಶಿಕ್ಷಣ ನೀಡುವ ಶಿಕ್ಷಕರ ಬದ್ಧತೆ, ಉತ್ತರದಾಯಿತ್ವ ಆಡಳಿತ ಹಾಗೂ ಸಮುದಾಯ ಸಹಭಾಗಿತ್ವದೊಂದಿಗೆ ಮಾತ್ರ ಸಾಧ್ಯ ಎಂಬುದು ಮೇಲೆ ತಿಳಿಸಿದ ಅಧ್ಯಯನಗಳಿಂದ ಈಗಾಗಲೇ ತಿಳಿದುಬಂದಿದೆ. ಇದು ಸಾಧ್ಯವಾಗಬೇಕಾದರೆ ಸರ್ಕಾರಿ ಆಡಳಿತದೊಂದಿಗೆ ಸಮುದಾಯದ ಉತ್ತರದಾಯಿತ್ವವನ್ನು ಹೊಂದಿರುವ ಮೇಲುಸ್ತುವಾರಿ ವ್ಯವಸ್ಥೆಯನ್ನು ಎಲ್ಲ ಶಾಲೆಗಳಲ್ಲಿ ಜಾರಿಗೊಳ್ಳಬೇಕು. ಇದು ಶಿಕ್ಷಣ ವ್ಯವಸ್ಥೆಯಲ್ಲಿನ ಎಲ್ಲ ಸಂಕೀರ್ಣ ಸಮಸ್ಯೆಗಳಿಗೆ ತಕ್ಷಣ ಪರಿಹಾರ ನೀಡುವ ಹೊಸ ಸೂತ್ರ ಎಂದು ಹೇಳುತ್ತಿಲ್ಲ. ಆದರೆ ಗುಣಮಟ್ಟದ ಶಿಕ್ಷಣಕ್ಕೆ ಸಮುದಾಯದ ಸಹಭಾಗಿತ್ವ ಒಂದು ಪ್ರಮುಖ ಕಾರ್ಯತಂತ್ರ. ಈ ಕಾರ್ಯತಂತ್ರಗಳ ಪ್ರಯತ್ನಗಳು ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವದಿಂದಾಗುವ ಅನುಕೂಲಗಳನ್ನು ಗುರುತಿಸಿ ಶಾಲೆಗಳಲ್ಲಿ ಸಾರ್ವತ್ರಿಕ ಅವಕಾಶ ಹಾಗೂ ಶೈಕ್ಷಣಿಕ ಗುಣಮಟ್ಟವನ್ನು ಹೆಚ್ಚಿಸಲು ಸಮುದಾಯದ ಸಕ್ರಿಯ ಭಾಗವಹಿಸುವಿಕೆ ಅವಶ್ಯಕ ಎಂದು ಪ್ರತಿಪಾದಿಸಿವೆ.

ಈ ನಿಟ್ಟಿನಲ್ಲಿ ಕರ್ನಾಟಕದಲ್ಲಿ ಡಾ. ರಾಜರಾಮಣ್ಣ ಅವರ ಅಧ್ಯಕ್ಷತೆಯಲ್ಲಿ ಆಯೋಜಿಸಲಾದ ಕಾರ್ಯತಂಡದ ವರದಿಯ ಶಿಫಾರಸ್ಸಿನಂತೆ ಕರ್ನಾಟಕ ರಾಜ್ಯದ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯದ ಸಕ್ರಿಯ ಪಾತ್ರವನ್ನು ಹೆಚ್ಚಿಸಲು ಶಾಲಾ ಮಟ್ಟದಲ್ಲಿ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗಳ ರಚನೆ ಮಾಡಲು ಆದೇಶಿಸಲಾಯಿತು. ದಿನಾಂಕ ೧೪.೦೬.೨೦೦೬ ರಂದು ಅಧಿಸೂಚನೆ ಹೊರಡಿಸುವುದರ ಮೂಲಕ ರಾಜ್ಯದ ಎಲ್ಲಾ ಸರ್ಕಾರಿ ಕಿರಿಯ, ಹಿರಿಯ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಈ ಸಮಿತಿಗಳು ರಚನೆಯಾಗಿವೆ. ಇವುಗಳು ತಳಮಟ್ಟದಲ್ಲಿ ಹೇಗೆ ಆಚರಣೆಗೆ ಬರುತ್ತವೆ, ಎಸ್.ಡಿ.ಎಂ.ಸಿ.ಗಳು ಸಾಧಿಸಿದ ಸಾಧನೆಗಳಾವುವು? ಅವು ಎದುರಿಸಿದ

ಸಮಸ್ಯೆಗಳಾವುವು? ಇನ್ನೂ ಮುಂತಾದ ವಿಷಯಗಳನ್ನು ಆಯಾ ನೆಲೆಯಲ್ಲಿ ಅರ್ಥ ಮಾಡಿಕೊಳ್ಳುವುದು ಪ್ರಸ್ತುತ ಅಧ್ಯಯನದಆಶಯ.

ಗುಣಾತ್ಮಕ ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕೆ ಶಾಲಾ ಆಡಳಿತ ನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಸ್ಥಳೀಯ ಜನರ ಭಾಗವಹಿಸುವಿಕೆ ಇಲ್ಲದಿರುವುದು ಪ್ರಮುಖವಾದ ಕಾರಣ ಮತ್ತು ಮಕ್ಕಳ ಶಿಕ್ಷಣದ ಸರ್ವತೋಮುಖ ಅಭಿವೃದ್ಧಿಯು ಸಮುದಾಯದ ಸಹಭಾಗಿತ್ವವನ್ನು ಅವಲಂಬಿಸಿದೆ ಎಂದು ಹಲವು ಅಧ್ಯಯನಗಳು ಹೇಳಿವೆ ಅವುಗಳಲ್ಲಿ ಪ್ರಮುಖವಾದವು (ವೈದ್ಯನಾಥನ್, ೨೦೦೦; ಸಾರಥಿ ಆಚಾರ್, ೨೦೦೦; ಎನ್.ಕೃಷ್ಣಾಜಿ, ೨೦೦೦; ಜೋಸೆಫ್ ಥಾಮಸ್, ೨೦೦೦; ಶ್ರೀವಾಸ್ತವ ರವಿ, ೧೯೯೭, ೨೦೦೧; ವಿಮಲಾ ರಾಮಚಂದ್ರನ್, ೧೯೯೯, ೨೦೦೩;ಕರ್ನಾಟಕ ಸರ್ಕಾರ ೧೯೯೯, ೧೯೯೮;ಆರ್. ಗೋವಿಂದ; ೨೦೦೦, ೨೦೦೩;ರಾಜರಾಮಣ್ಣ ಕಾರ್ಯಪಡೆ ವರದಿ ೧೯೯೯; ಎಂ.ಡಿ ಉಷಾದೇವಿ, ೨೦೦೩; ಎಚ್.ಡಿ. ಪ್ರಶಾಂತ್, ೨೦೦೫, ೨೦೦೬, ೨೦೦೯; ಸುಂದರ್, ೨೦೦೬; ವಿ.ಪಿ.ನಿರಂಜನಾರಾಧ್ಯ, ೨೦೦೪;). ಈ ಅಧ್ಯಯನಗಳು ಶಿಕ್ಷಕರ ಮತ್ತು ಪೋಷಕರ ಕ್ರಿಯಾತ್ಮಕ ಪಾರದರ್ಶಕ ಸಹಯೋಗದಿಂದ ಕೂಡಿದ ಪ್ರಜಾಸತ್ತೆಯ ನೆಲೆಯ ಸಮುದಾಯದ ಪಾಲ್ಗೊಳ್ಳುವಿಕೆಯ ಅಗತ್ಯವನ್ನು ತಿಳಿಸುತ್ತವೆ. ಸಮುದಾಯದ ಸಹಭಾಗಿತ್ವವನ್ನು ಪ್ರಜಾಸತ್ತೆಯ ನೆಲೆಯಲ್ಲಿ ಪರಿಣಾಮಕಾರಿಯಾಗಿ ಶಾಲೆಯ ಒಟ್ಟಾರೆ ಚಟುವಟಿಕೆಗಳಲ್ಲಿ ಏಕೆ ಆಚರಣೆಗೆ ತರಲು ಸಾಧ್ಯವಾಗುತ್ತಿಲ್ಲವೆಂಬುದನ್ನು ಪರಿಶೀಲಿಸಿರುವ ಈ ಅಧ್ಯಯನಗಳು ಕೆಲವು ನಿರ್ಧಾರಕ್ಕೆ ಬಂದಿವೆ.

ಮುಂದುವರಿದು ಹೇಳುವುದಾದರೆ ಹದಿನಾಲ್ಕು ವರ್ಷದವರೆಗಿನ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ನೀಡಬೇಕೆನ್ನುವ ವಿಷಯಕ್ಕೆ ಸಂಬಂಧಿಸಿದಂತೆ ೧೯೯೩ರಲ್ಲಿ ಉನ್ನಿಕೃಷ್ಣನ್ ಮತ್ತು ಆಂಧ್ರಪ್ರದೇಶ ಸರ್ಕಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಸರ್ಕಾರದ ವ್ಯಾಜ್ಯದಲ್ಲಿ ಸರ್ವೋಚ್ಚ ನ್ಯಾಯಲಯವು ನೀಡಿದ ಐತಿಹಾಸಿಕ ತೀರ್ಪಿನಲ್ಲಿ "ಈ ದೇಶದ ಪ್ರತಿಯೊಬ್ಬ ನಾಗರೀಕನಿಗೂ ಜೀವಿಸುವ ಹಕ್ಕಿದೆ. ಜೀವಿಸುವ ಹಕ್ಕು ಒಂದು ಮೂಲಭೂತ ಹಕ್ಕು. ಗೌರವಾನ್ವಿತ ಜೀವನ ನಡೆಸಲು ಪ್ರತಿಯೊಬ್ಬ ನಾಗರೀಕನಿಗೂ ಕನಿಷ್ಠ ಶಿಕ್ಷಣದ ಅವಶ್ಯಕತೆ ಇದೆ. ಆದ್ದರಿಂದಲೇ ಶಿಕ್ಷಣ ಜೀವಿಸುವ ಹಕ್ಕಿನ ಅವಿಭಾಜ್ಯ ಅಂಗವಾಗಿ ಹರಿದು ಬರುತ್ತದೆ. ಜೀವಿಸುವ ಹಕ್ಕು ಮೂಲಭೂತ ಹಕ್ಕಾದರೆ, ಶಿಕ್ಷಣ ಪಡೆಯುವ ಹಕ್ಕು ಕೂಡ ಪ್ರತಿಯೊಬ್ಬ ನಾಗರೀಕನ ಮೂಲಭೂತ ಹಕ್ಕು" ಎಂದು ತಿಳಿಸಿದೆ. ಇದು ಭಾರತದ ಶಾಲಾ ಶಿಕ್ಷಣ ಸಾರ್ವತ್ರೀಕರಣದ ಇತಿಹಾಸದಲ್ಲಿ ಒಂದು ಹೊಸ ಮೈಲಿಗಲ್ಲು. ನ್ಯಾಯಾಲಯದ ಈ ತೀರ್ಪು ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕೆಂದು ಘೋಷಿಸಿ ೧೪ ನೇ ವಯಸ್ಸಿನವರೆಗೆ ಅದನ್ನು ನೀಡುವ ಪೂರ್ಣ ಜವಾಬ್ದಾರಿಯು ಸರ್ಕಾರದ ಮೇಲಿದ್ದು ೧೪ ವರ್ಷದ ನಂತರ ರಾಜ್ಯದ ಆರ್ಥಿಕ ಇತಿಮಿತಿಗಳನ್ನು ಅವಲಂಬಿಸಿರುತ್ತದೆ ಎಂದು ಸ್ಪಷ್ಟ ಮಾತುಗಳಲ್ಲಿ ಮನದಟ್ಟು ಮಾಡಿಕೊಟ್ಟತ್ತು. ಈ ತೀರ್ಪು ಸ್ವಾತಂತ್ರ್ಯ ನಂತರದ ಭಾರತದಲ್ಲಿ ಸಂವಿಧಾನದ ಆಶಯವಾಗಿದ್ದ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಆಶಯವನ್ನು ಈಡೇರಿಸಲು ಅಗತ್ಯ ರಾಜಕೀಯ ಇಚ್ಚಾಶಕ್ತಿಯನ್ನು ಪ್ರದರ್ಶಿಸಿದೆ. ಅಸಡ್ಡೆ ತೋರಿದ ಆಳುವ ವರ್ಗ ಮತ್ತು ಸರ್ಕಾರಗಳಿಗೆ ಒಂದು ರೀತಿಯ ಗಂಭೀರವಾದ ಎಚ್ಚರಿಕೆಯಾಗಿದೆ.

ಈ ತೀರ್ಪಿನ ನಂತರ ಶಿಕ್ಷಣವನ್ನು ಮೂಲಭೂತ ಹಕ್ಕೆಂದು ಪರಿಗಣಿಸಿ ೬ರಿಂದ ೧೪ ವಯಸ್ಸಿನವರೆಗಿನ ಎಲ್ಲಾ ಮಕ್ಕಳಿಗೆ ಶಿಕ್ಷಣದ ಹಕ್ಕನ್ನು ಪ್ರತಿಪಾದಿಸುವ ೮೬ನೇ ಸಂವಿಧಾನದ ತಿದ್ದುಪಡಿಯನ್ನು ೨೦೦೨ರಲ್ಲಿ ಮಾಡಲಾಯಿತು. ಈ ಕಾಯ್ದೆಯ ಪ್ರಕಾರ ಸಂವಿಧಾನಕ್ಕೆ ೨೧ (ಎ) ಎಂಬ ಹೊಸ ಪರಿಚ್ಛೇದ ಸೇರ್ಪಡೆಗೊಂಡಿತು. ಈಗ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ೨೦೦೯ ಕಾಯ್ದೆಯು ಏಪ್ರೀಲ್ ೨೦೧೦ ರಿಂದ ದೇಶಾದ್ಯಂತ ಜಾರಿಗೆ ಬಂದಿದೆ. ಈ ಎಲ್ಲಾ ಪ್ರಯತ್ನಗಳ ನಡುವೆಯೂ ಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸದಿರಲು ಪ್ರಜಾಪ್ರಭುತ್ವ ವ್ಯವಸ್ಥೆಗಳ ರಾಜಕೀಯ ಇಚ್ಚಾಶಕ್ತಿ, ಅಗತ್ಯ ಹಣಕಾಸು ನೀಡುವಲ್ಲಿನ

ವೈಫಲ್ಯ ಹಾಗೂ ದೂರದೃಷ್ಟಿಯ ಕೊರತೆಯೇ ಕಾರಣವಾಗಿದೆ. ಸಾಂವಿಧಾನಿಕ ನೀತಿ, ಸಂವಿಧಾನದ ನಿರ್ದೇಶಿತ ತತ್ವದ ನಾಲ್ಕನೇ ಭಾಗದಲ್ಲಿ ಅಳವಡಿಸಲಾಗಿರುವುದರಿಂದ ಕಾಯ್ದೆಯ ರೂಪದಲ್ಲಿ ಅಥವಾ ನ್ಯಾಯಾಲಯದ ಮೂಲಕ ಅನುಷ್ಠಾನಗೊಳಿಸಲು ಇನ್ನೂ ಸಾಧ್ಯವಾಗಿಲ್ಲ ಎಂಬುದು ವಿಷಾದದ ಸಂಗತಿ.

ವಿಶೇಷವಾಗಿ ಸ್ವಾತಂತ್ರ್ಯ ನಂತರದ ಅಭಿವೃದ್ಧಿ ಚರ್ಚೆಗಳು ದೇಶದ ಸಾಮಾಜಿಕ ಅಭಿವೃದ್ಧಿಗೆ ಶಿಕ್ಷಣ ಪ್ರಮುಖ ಸಾಧನವೆಂದು ಪರಿಗಣಿಸಿವೆ. ಹೀಗಾಗಿಯೇ ದೇಶದ ಅಭಿವೃದ್ಧಿಗಾಗಿ ಶಿಕ್ಷಣವನ್ನು ಉತ್ತೇಜಿಸಲು ಸರ್ಕಾರಗಳು ಉತ್ಸುಕವಾಗಿವೆ. ಪ್ರಾಥಮಿಕ ಶಿಕ್ಷಣವನ್ನು ೦೬ ರಿಂದ ೧೪ನೇ ವಯೋಮಾನದ ಮಕ್ಕಳಿಗೆ ಸಾರ್ವತ್ರೀಕರಣಗೊಳಿಸುವ ನಿಟ್ಟಿನಲ್ಲಿ ಸರ್ಕಾರಗಳು ಹಲವು ಪ್ರಮುಖ ಹೆಜ್ಜೆಗಳನ್ನು ಇರಿಸಿವೆ. ಈ ದಿಕ್ಕಿನಲ್ಲಿ ಕಳೆದ ಆರು ದಶಕಗಳಲ್ಲಿ ಶೈಕ್ಷಣಿಕ ಮೂಲಸೌಕರ್ಯಗಳ ವ್ಯವಸ್ಥೆಯ ಅಭಿವೃದ್ಧಿಯಲ್ಲಿ ಗುರುತಿಸಬಹುದಾದ ಬದಲಾವಣೆಯಾಗಿದೆ. ಅದರಲ್ಲೂ ಕಟ್ಟಡ ಮತ್ತು ಇತರ ಮೂಲ ಸೌಲಭ್ಯ ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆ ಉಂಟಾಗಿದೆ. ಆದರೂ, ಗುಣಾತ್ಮಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ನಮ್ಮ ಸಾಧನೆ ಮಾತ್ರ ಸುಧಾರಣೆಯಾಗಿಲ್ಲ. ಸಾಮಾನ್ಯವಾಗಿ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣ ಮತ್ತು ನಿರ್ಧಿಷ್ಟವಾಗಿ ಅದರ ಗುಣಮಟ್ಟದ ವೃದ್ಧಿ ನಮ್ಮ ಮುಂದಿನ ಗುರಿಯಾಗಿದೆ.ನಮ್ಮಲ್ಲಿ ಪ್ರಸ್ತುತ ಇರುವ ದಾಖಲಾತಿ, ಹಾಜರಾತಿ, ಕನಿಷ್ಠ ಮಟ್ಟದ ಕಲಿಕೆ,ಇತ್ಯಾದಿ ಶೈಕ್ಷಣಿಕ ಚಲಕಗಳ ಸ್ಥಿತಿಗತಿಗಳು ಇದಕ್ಕೊಂದು ಸ್ಪಷ್ಟ ನಿದರ್ಶನ. ಸರ್ಕಾರವೇ ನೀಡುವ ಅಂಕಿ ಅಂಶಗಳ ಪ್ರಕಾರ ೨೦೦೫ – ೦೬ ನೇ ಸಾಲಿನಲ್ಲಿ ನಡೆದ ಆರ್ಥಿಕ ಸಮೀಕ್ಷೆಯಲ್ಲಿ ತಿಳಿಸಿರುವಂತೆ ಒಟ್ಟು ಇರುವ ೫೩,೫೭೩ ಪ್ರಾಥಮಿಕ ಶಾಲೆಗಳಲ್ಲಿ ೧೯,೮೨೨ ಶಾಲೆಗಳಿಗೆ ಕುಡಿಯುವ ನೀರಿಲ್ಲ, ೧೪,೨೫೬ ಶಾಲೆಗಳಿಗೆ ಕೊಠಡಿಗಳಿಲ್ಲ, ೨೪,೪೦೮ ಶಾಲೆಗಳಿಗೆ ಆಟದ ಮೈದಾನವಿಲ್ಲ, ೨೩,೬೧೨ ಶಾಲೆಗಳಿಗೆ ಕಾಂಪೌಂಡುಗಳ ಕೊರತೆ ಇದೆ. ಇನ್ನೊಂದೆಡೆ ಸರ್ಕಾರಗಳೇ ನವೋದಯ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ತೆಗೆದು ಕೆಲವರಿಗೆ ಮಾತ್ರ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುವ ಮೂಲಕ ತಾರತಮ್ಯ ತೋರಿಸುತ್ತಿವೆ. ಅಲ್ಲದೆ ಈಗಲೂ ಕರ್ನಾಟಕದ ಸರ್ವಶಿಕ್ಷಣ ಅಭಿಯಾನ ವಾರ್ಷಿಕ ವರ್ಕ್‌ಪ್ಲಾನ್ ೨೦೧೦-೨೦೧೧ರ ಪ್ರಕಾರ ೩೨ ಶೈಕ್ಷಣಿಕ ಜಿಲ್ಲೆಗಳಲ್ಲಿ ಶಾಲೆ ಬಿಡುವ ವಿದ್ಯಾರ್ಥಿಗಳಸಂಖ್ಯೆ ೧,೧೧,೨೧೮ ಇರುವುದನ್ನು ನೋಡಬಹುದು.

ಹೀಗೆ ಸಂಖ್ಯೆಯ ದೃಷ್ಟಿಯಿಂದ ಅಭಿವೃದ್ಧಿ ಸೌಲಭ್ಯಗಳು ಹೆಚ್ಚಳವಾದರೂ ಅಭಿವೃದ್ಧಿ ಯೋಜನೆ ಮತ್ತು ಕಾರ್ಯಕ್ರಮಗಳು ತಳಮಟ್ಟದಲ್ಲಿ ಪರಿಣಾಮಕಾರಿಯಾಗಿ ಅಗತ್ಯ ಇರುವವರಿಗೆ ತಲುಪುತ್ತಿಲ್ಲ ಮತ್ತು ಅಭಿವೃದ್ಧಿಯ ಪ್ರಯತ್ನಗಳು ಬಡತನ ನಿವಾರಣೆಯಲ್ಲಿ ಸಫಲವಾಗಿಲ್ಲ ಎಂಬ ಜಾಗೃತಿಯು ರೂಪಗೊಳ್ಳುತ್ತಿರುವ ಹಂತದಲ್ಲಿ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಜನರ ಭಾಗವಹಿಸುವಿಕೆಗೆ ವಿಶೇಷ ಒತ್ತು ನೀಡಲಾಯಿತು. ಅದರಲ್ಲಿಯೂ ೧೯೭೦ರ ದಶಕದ ಮಧ್ಯಭಾಗದಲ್ಲಿ ಈ ಪರಿಕಲ್ಪನೆಗೆ ವಿಶೇಷವಾದ ಆದ್ಯತೆ ದೊರೆಯಿತು. ಕೃಷಿಸುಧಾರಣೆ ಮತ್ತು ಗ್ರಾಮೀಣಾಭಿವೃದ್ಧಿ ಕುರಿತು ೧೯೭೯ರಲ್ಲಿ ರೋಮ್‌ನಲ್ಲಿ ನಡೆದ ವಿಶ್ವ ಸಮಾವೇಶ (ಡಬ್ಲ್ಯೂಸಿಐಆರ್‌ಡಿ)ದಲ್ಲಿ ಇದುವರೆಗೂ ವಿಶ್ವದಲ್ಲಿ ನಡೆದ ಅಭಿವೃದ್ಧಿ ಪ್ರಯತ್ನಗಳು ಬಡತನ ನಿವಾರಣೆಯಲ್ಲಿ ಏಕೆ ಯಶಸ್ಸು ಕಾಣಲಿಲ್ಲ? ಇದರ ವೈಫಲ್ಯಕ್ಕೆ ಕಾರಣಗಳೇನು? ಎಂಬುದನ್ನು ಕಂಡುಕೊಳ್ಳಲು ಈ ಸಮಾವೇಶದಲ್ಲಿ ಪ್ರಯತ್ನ ಮಾಡಲಾಯಿತು. ಈ ದಿಕ್ಕಿನಲ್ಲಿ ಈ ಸಮಾವೇಶವು ಜನರಿಗೆ ನೆರವಾಗಲೆಂದೇ, ಯೋಜಿಸಲಾದ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನರ ಸಕ್ರಿಯ ಭಾಗವಹಿಸುವಿಕೆ ಇಲ್ಲದಿರುವುದು ಹಾಗೂ ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವ ಹಂತದಿಂದ ಪ್ರಾರಂಭಗೊಂಡು ಎಲ್ಲಾ ಹಂತಗಳಲ್ಲಿ ಜನರ ಭಾಗವಹಿಸುವಿಕೆಯನ್ನು ತರಬೇಕು ಎಂಬ ನಿರ್ಣಯವನ್ನು ಈ ಸಮಾವೇಶವು ಅಂಗೀಕರಿಸಿತು.

ಈ ಮೇಲಿನ ವಿಚಾರಗಳಲ್ಲಿ ನಮಗೆ ಕೆಲವು ಪ್ರಮುಖ ಪ್ರಶ್ನೆಗಳು ಎದುರಾಗುತ್ತವೆ. ಅವುಗಳೆಂದರೆ, ಅಭಿವೃದ್ಧಿ ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಈ ಮೊದಲು ಹೇಗೆ ರೂಪಿಸಲಾಗುತ್ತಿತ್ತು? ಅವುಗಳನ್ನು ಹೇಗೆ ಪರಿಭಾವಿಸಿಕೊಳ್ಳಲಾಗಿತ್ತು? ಹೇಗೆ ಅನುಷ್ಠಾನ ಮಾಡಲಾಗುತ್ತಿತ್ತು? ಇದನ್ನು ಯಾರು

ರೂಪಿಸುತ್ತಿದರು? ಇತ್ಯಾದಿ. ಇದನ್ನು ಸರಳವಾಗಿ ಹೇಳುವುದಾದರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಎರಡು ವಿಧಗಳಲ್ಲಿ ರೂಪಿಸಲಾಗುತ್ತಿತ್ತು. ಒಂದು ಪೂರೈಕೆ ಆಧಾರಿತ. ಮತ್ತೊಂದು ಬೇಡಿಕೆ ಆಧಾರಿತ ಅಭಿವೃದ್ಧಿ ಕಾರ್ಯಕ್ರಮಗಳು. ಪೂರೈಕೆ ಪ್ರೇರಿತ ಅಭಿವೃದ್ಧಿಯ ಮುಖ್ಯ ಲಕ್ಷಣಗಳೆಂದರೆ ಅವು ಕೇಂದ್ರಿಕೃತ ನಿರ್ಧಾರದಿಂದ ರೂಪಗೊಂಡಿರುತ್ತವೆ. ಅವು ಸಂಪನ್ಮೂಲಗಳ ಲಭ್ಯತೆಯ ಮೇಲೆ ಆಧಾರಿತವಾಗಿರುತ್ತವೆ. ಅವುಗಳಲ್ಲಿ ಜನರ ಬೇಕು-ಬೇಡ ಅಥವಾ ಅವರ ಅಗತ್ಯಗಳಿಗೆ ಹೆಚ್ಚಿನ ಒತ್ತು ಇಲ್ಲ. ಅವುಗಳನ್ನು ತ್ವರಿತವಾಗಿ ಅನುಷ್ಠಾನಗೊಳಿಸಬಹುದು. ಆದರೆ ಅದರಲ್ಲಿ ಜನರ ಭಾಗವಹಿಸುವಿಕೆ ಇರುವುದಿಲ್ಲ. ಯೋಜನೆ ಅನುಷ್ಠಾನವಾದ ಬಳಿಕ ಆಡಳಿತ ಮತ್ತು ನಿರ್ವಹಣೆಗೆ ತೊಡಕು ಎದುರಾಗುತ್ತದೆ. ಅಲ್ಲದೇ ಸಂಪನ್ಮೂಲಗಳ ಕ್ರೂಢೀಕರಣಕ್ಕೆ ತೊಡಕು ಉಂಟಾಗುತ್ತದೆ. ಇಂತಹ ಯೋಜನೆಗಳು ಸುಸ್ಥಿರವಲ್ಲ. ಸಾಮಾನ್ಯವಾಗಿ ಇಂತಹ ಯೋಜನೆಗಳಿಂದ ಸಮುದಾಯಕ್ಕೆ ಹಾನಿಯಾಗುತ್ತದೆ. ಬಡವರು ಮತ್ತು ಸೌಲಭ್ಯಗಳನ್ನು ಪಡೆಯುವಲ್ಲಿ ಅವಕಾಶದ ಕಡೆಯಂಚಿನಲ್ಲಿರುವ ಜನರು ಶಿಕ್ಷಣ ಸೌಲಭ್ಯ, ಆರೋಗ್ಯ ರಕ್ಷಣೆ ಹಾಗೂ ಸುಭದ್ರ ಮತ್ತು ಸುಸ್ಥಿತಿ ಸಾಮಾಜಿಕ ಜೀವನ ಮಟ್ಟದಿಂದ ವಂಚನೆ. ಹೀಗೆ ಈ ಅಂಶಗಳು ವಂಚಿತ ಜನರನ್ನು ಆರ್ಥಿಕ ಬೆಳವಣಿಗೆ ಗತಿಯಿಂದ ಹಿಂದೆ ಹಾಕುತ್ತಿದೆ. ಅಷ್ಟೇ ಅಲ್ಲದೇ ಅದು ಉಳ್ಳವರು ಮತ್ತು ಇಲ್ಲದವರನಡುವಿನ ಅಂತರವನ್ನು ಮತ್ತಷ್ಟು ಹೆಚ್ಚಿಸುತ್ತಿದೆ.

ಬೇಡಿಕೆ ಪ್ರೇರಿತ ಅಭಿವೃದ್ಧಿಯ ಗುಣಲಕ್ಷಣಗಳೆಂದರೆ ಅವು ಸಂಬಂಧಿತ ಜನರ ನಿರ್ಧಾರಗಳಿಂದಲೇ ರೂಪಗೊಳ್ಳುತ್ತವೆ. ಅವುಗಳಲ್ಲಿ ಸ್ಥಳೀಯ ಸಂಪನ್ಮೂಲಗಳನ್ನು ಕ್ರೂಢೀಕರಿಸಿ ಬಳಸಿಕೊಳ್ಳುವ ಸಾಧ್ಯತೆ ಹೆಚ್ಚಿರುತ್ತದೆ. ಜನರ ಅಗತ್ಯತೆಗಳ ಮೇಲೆ ಆಧಾರಿತವಾಗಿರುವುದರಿಂದ ಜನರ ಪಾಲ್ಗೊಳ್ಳುವಿಕೆ ಹೆಚ್ಚಿರುವುದರ ಜೊತೆಗೆ ಇದರಲ್ಲಿ ಅನುಷ್ಠಾನ ನಿಧಾನವಾದರೂ, ಪರಿಣಾಮಕಾರಿ ಆಡಳಿತ ಮತ್ತು ನಿರ್ವಹಣೆ ಸಾಧ್ಯವಾಗುತ್ತದೆ. ಇಂತಹ ಯೋಜನೆಗಳು ಸುಸ್ಥಿರವಾಗಿದ್ದು, ಸಮುದಾಯ ಸಮತೋಲನ ಕಾಯ್ದುಕೊಂಡಿರುತ್ತವೆ. ಜನರು ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಪ್ರಮುಖ ಪಾತ್ರಧಾರಿಗಳೇ ಹೊರತು ಬಾಹ್ಯವಾಗಿ ವಿನ್ಯಾಸಗೊಳಿಸಿದ ಕಾರ್ಯಕ್ರಮಗಳ ಗುರಿಗಳಲ್ಲ ಎಂಬುದನ್ನು ಸಮುದಾಯ ಪ್ರೇರಿತ ಅಭಿವೃದ್ಧಿಯು ಗುರುತಿಸುತ್ತದೆ. ಈ ರೀತಿಯ ಅಭಿವೃದ್ಧಿಯಲ್ಲಿ ನಿರ್ಧಾರಗಳು ಮತ್ತು ಸಂಪನ್ಮೂಲಗಳು ಸಮುದಾಯ ಗುಂಪುಗಳ ಕೈಯಲ್ಲಿರುವುದಲ್ಲದೇ, ಅವು ಸೇವೆ ಒದಗಿಸುವ ಮತ್ತು ಬೇಡಿಕೆ ಪ್ರೇರಿತ ಬೆಂಬಲ ಒದಗಿಸುವ ಚುನಾಯಿತ ಸ್ಥಳೀಯ ಸರಕಾರಗಳು, ಖಾಸಗಿ ರಂಗ, ಸರಕಾರೇತರ ಸಂಘಟನೆಗಳು ಮತ್ತು ಕೇಂದ್ರ ಸರಕಾರಿ ಸಂಸ್ಥೆಗಳ ಜೊತೆ ಪಾಲುದಾರಿಕೆಯೊಂದಿಗೆ ಕೆಲಸ ಮಾಡಬಹುದು. ಈ ಅಭಿವೃದ್ಧಿಯ ಮುಖ್ಯ ತತ್ವಗಳೆಂದರೆ ಅಭಿವೃದ್ಧಿ ಯೋಜನೆಗಳನ್ನು ರೂಪಿಸುವುದು, ನಿಯಂತ್ರಿಸುವುದು, ಇದಕ್ಕೆ ಬೇಕಾಗುವ ಅಗತ್ಯಸಂಪನ್ಮೂಲಗಳನ್ನು ಸಮುದಾಯಕ್ಕೆ ಒದಗಿಸುವುದು. ಆ ಮೂಲಕ ಅಬಿವೃದ್ಧಿ ಪ್ರಕ್ರಿಯೆಯಲ್ಲಿ ಜನರು ಸ್ವತಃ ಪಾಲುದಾರರು ಎಂದು ಪರಿಗಣಿಸುವುದು. ಈಗಾಗಲೇ ಇರುವ ಸಾಂಸ್ಥಿಕ ಆಧಾರದ ಮೇಲೆ ರೂಪಿಸುವ ಜೊತೆ ಜೊತೆಗೆ ಅಗತ್ಯವಾಗಿ ಬೇಕಾಗುವ ಸಾಂಸ್ಥಿಕ ಚೌಕಟ್ಟನ್ನು ಕಂಡುಕೊಳ್ಳುವ ಮೂಲಕ ಜನರ ಭಾಗವಹಿಸುವಿಕೆ ಮತ್ತು ಸಮುದಾಯದ ಸಶಕ್ತೀಕರಣಕ್ಕೆ ಮಹತ್ವ ನೀಡುವುದು. ಸುಸ್ಥಿರತೆ ಮತ್ತು ಸಮತೆಯ ಪ್ರಶ್ನೆಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಜನಕೇಂದ್ರಿತ ಮತ್ತು ಜನನಿಯಂತ್ರಿತ ಅಭಿವೃದ್ಧಿಯು ಒಂದು ಬದಲಿ ಮಾರ್ಗವಾಗಿ ವಿಕಾಸಗೊಳ್ಳುತ್ತಿದೆ.

ಆದುದರಿಂದ ಇತ್ತೀಚಿನ ಅಭಿವೃದ್ಧಿ ಪ್ರಯತ್ನಗಳ ಕಣ್ಣೋಟವು ಭಾಗವಹಿಸುವಿಕೆಯ ಮೂಲಕ ಸಾಂಸ್ಥಿಕ ಸಾಮರ್ಥ್ಯವನ್ನು ಹೆಚ್ಚಿಸುವುದಕ್ಕೆ ಮತ್ತು ಸ್ಥಳೀಯ ಸ್ವಾವಲಂಬನೆಯ ಮೂಲಕ ಸಶಕ್ತೀಕರಣಕ್ಕೆ ಹೆಚ್ಚಿನ ಒತ್ತು ನೀಡುತ್ತದೆ. ಸಮುದಾಯ ಶಾಲೆಗಳಲ್ಲಿ ಭಾಗವಹಿಸುವುದು ಕಡಿಮೆ ಸಂಖ್ಯೆಯಲ್ಲಿದ್ದರೂ ಅವರನ್ನು ಅವರದೆ ಆದ ಸಾಮಾಜಿಕ ನೆಲೆಗಟ್ಟಿನಲ್ಲಿ ಅರ್ಥೈಸಿಕೊಂಡು ನಮ್ಮೊಂದಿಗೆ ಕರೆದೊಯ್ಯಬೇಕಾಗಿದೆ. ಸಮುದಾಯದ ಸಬಲೀಕರಣ ಮತ್ತು ಸಕ್ರೀಯ ಭಾಗವಹಿಸುವಿಕೆ ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ.

ಹೀಗಾಗಿ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಶಿಕ್ಷಕರಷ್ಟೇ ಅಲ್ಲ, ಸಮುದಾಯವು ಅತಿಮುಖ್ಯ ಪಾತ್ರ ವಹಿಸಬೇಕಾಗಿದೆ. ಶಿಕ್ಷಕ ಮತ್ತು ಸಮುದಾಯ ಶೈಕ್ಷಣಿಕ ಪ್ರಕ್ರಿಯೆಯ ಒಂದೇ ನಾಣ್ಯದ ಎರಡು ಮುಖಗಳಿದ್ದಂತೆ. ಶಾಲಾ ಶಿಕ್ಷಣವು ಗುಣಾತ್ಮಕವಾಗಿ ಸಾರ್ವತ್ರೀಕರಣವಾಗಬೇಕಾದರೆ ಮುಖ್ಯವಾಗಿ ಸಮುದಾಯವನ್ನು ತೊಡಗಿಸಿಕೊಳ್ಳಬೇಕಾಗಿದೆ. ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸಲು ದೇಶದಲ್ಲಿ ಹತ್ತು-ಹಲವು ಪ್ರಯತ್ನಗಳು ನಿರಂತರವಾಗಿ ನಡೆಯುತ್ತಾ ಬಂದಿವೆ.

ಶಿಕ್ಷಣದ ಸಾರ್ವತ್ರೀಕರಣಕ್ಕೆ ಸಂಬಂಧಿಸಿದಂತೆ ಹಲವಾರು ಸವಾಲುಗಳು ನಮ್ಮ ಮುಂದೆ ಇವೆ. ರಾಜ್ಯ ಸರ್ಕಾರವು ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳಲು ಅನೇಕ ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ. ಸಮುದಾಯವನ್ನು ಶಿಕ್ಷಣದ ಸಾರ್ವತ್ರೀಕರಣದಲ್ಲಿ ತೊಡಗಿಸಿಕೊಳ್ಳುವ ಮೊದಲ ಪ್ರಯತ್ನವಾಗಿ ದಿನಾಂಕ ೨೭-೦೨-೧೯೮೮ರಲ್ಲಿ ಸರ್ಕಾರವು ಆದೇಶವೊಂದನ್ನು ಹೊರಡಿಸಿತು. ಈ ಆದೇಶದನ್ವಯ ರಾಜ್ಯದಲ್ಲಿ ಅಂದು ಜಾರಿಯಲ್ಲಿದ್ದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳನ್ನು ಹಾಗೂ ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಯನ್ನು ಗಮನದಲ್ಲಿಟ್ಟುಕೊಂಡು ಪ್ರಾಥಮಿಕ ಶಾಲೆಗಳಲ್ಲಿ ಹಿಂದೆ ಅಸ್ಥಿತ್ವದಲ್ಲಿದ್ದ 'ಶಾಲಾಭಿವೃದ್ಧಿ ಸಮಿತಿ'ಗಳನ್ನು "ಶೈಕ್ಷಣಿಕ ಸಮಿತಿಗಳೆಂದು" ಪುನರ್ ನಾಮಕರಣ ಮಾಡುವ ತೀರ್ಮಾನ ಕೈಗೊಳ್ಳಲಾಯಿತು. ಈ ಸಮಿತಿಯಲ್ಲಿ ಕೇವಲ ಜನ ಪ್ರತಿನಿಧಿಗಳು ಮತ್ತು ಊರಿನ ಗಣ್ಯವ್ಯಕ್ತಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು. ಇದಾದ ನಂತರ ಜುಲೈ ೧೯೯೩ರಲ್ಲಿ ಪ್ರಾಥಮಿಕ ಶಿಕ್ಷಣದ ನಿರ್ದೇಶಕರು ರಾಜ್ಯದ ಎಲ್ಲಾ ಉಪನಿರ್ದೇಶಕರಿಗೆ ಬರೆದ ಪತ್ರದಲ್ಲಿ ರಾಜ್ಯದ ಎಲ್ಲಾ ಶಾಲೆಗಳಲ್ಲಿ ೯ ರಿಂದ ೧೧ ಜನರನ್ನೊಳಗೊಂಡ "ಶಾಲಾಭಿವೃದ್ಧಿ ಸಮಿತಿ" ರಚಿಸುವಂತೆ ಸೂಚನೆ ಹೊರಡಿಸಲಾಯಿತು. ಈ ಪತ್ರದನ್ವಯ ಸಮಿತಿಯಲ್ಲಿ ಮೊಟ್ಟ ಮೊದಲ ಬಾರಿಗೆ ಒಬ್ಬ ಪೋಷಕ ಪ್ರತಿನಿಧಿಗೆ ಅವಕಾಶ ಕಲ್ಪಿಸಲಾಯಿತು. ಆಗಸ್ಟ್ ೧೯೯೫ ರಲ್ಲಿ ಪ್ರತಿಯೊಂದು ಗ್ರಾಮದಲ್ಲಿ ಶೈಕ್ಷಣಿಕ ಚಟುವಟಿಕೆಗಳ ಉಸ್ತುವಾರಿ ನೋಡಿಕೊಳ್ಳಲು ಗ್ರಾಮ ಶಿಕ್ಷಣ ಸಮಿತಿಗಳನ್ನು ರಚಿಸುವಂತೆ ಸರ್ಕಾರ ಆದೇಶ ಹೊರಡಿಸಿ, ಈ ಸಮಿತಿಯಲ್ಲಿ ಕನಿಷ್ಠ ೭ ರಿಂದ ಗರಿಷ್ಠ ೧೫ ಸದಸ್ಯರಿರಬೇಕು, ಇದರಲ್ಲಿ ಪೋಷಕ ಪ್ರತಿನಿಧಿಯೊಬ್ಬರಿಗೆ ಅವಕಾಶ ಕಲ್ಪಿಸಲಾಗಿತ್ತು. ಒಟ್ಟಾರೆ ಸರ್ವಶಿಕ್ಷಣ ಅಭಿಯಾನದ ಪೂರ್ವದಲ್ಲಿದ್ದ ಶಾಲಾಭಿವೃದ್ಧಿ/ಶಿಕ್ಷಣ ಸಮಿತಿ/ಗ್ರಾಮ ಶಿಕ್ಷಣ ಸಮಿತಿಗಳ ಮೂಲಕ ಶಾಲಾ ಶಿಕ್ಷಣದಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳಲು ಹಲವು ಪ್ರಯತ್ನಗಳಾಗಿದ್ದು, ಇವುಗಳಲ್ಲಿ ಜನಪ್ರತಿನಿಧಿ ಮತ್ತು ಊರಿನ ಗಣ್ಯ ವ್ಯಕ್ತಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು.

ಕರ್ನಾಟಕ ಸರ್ಕಾರವು ಈ ನೆಲೆಗಟ್ಟನ್ನು ಅರ್ಥಮಾಡಿಕೊಂಡು ಪ್ರಾಥಮಿಕ ಶಿಕ್ಷಣದಲ್ಲಿ ತರಬೇಕಾಗಿರುವ ಸುಧಾರಣೆಗಳ ಬಗೆಗೆ ಅಧ್ಯಯನ ಮಾಡಲು ೧೯೯೦ರಲ್ಲಿ ಡಾ.ರಾಜರಾಮಣ್ಣ ನೇತೃತ್ವದ ಶಿಕ್ಷಣ ಕಾರ್ಯಪಡೆಯನ್ನು ರಚಿಸಿತು. ಈ ಕಾರ್ಯಪಡೆಯು ಮಧ್ಯಂತರ ವರದಿಯ ಶಿಫಾರಸ್ಸಿನಂತೆ ಕರ್ನಾಟಕ ರಾಜ್ಯದ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರಲು ಹಾಗೂ ಶಾಲಾ ಆಡಳಿತದಲ್ಲಿ ಸಮುದಾಯ ಸಕ್ರೀಯ ಪಾತ್ರವನ್ನು ಖಚಿತ ಪಡಿಸಲು ಹಾಗೂ ತತ್ಸಂಬಂಧಿಯಾದ ವಿಷಯಗಳನ್ನು ಕುರಿತು ಕೆಲಸ ನಿರ್ವಹಿಸಲು ಕರ್ನಾಟಕ ರಾಜ್ಯ ಸರ್ಕಾರವು ಆದೇಶ ಸಂಖ್ಯೆ ನಿ (ಅ.ಸಂ) ಆ.ಶಾ/ಕ.ಶಿ.ಕಾ.ತಿ-೨೦೦೦-೦೧, ದಿನಾಂಕ ೩೦-೦೩-೨೦೦೧ ರಲ್ಲಿ ಕರ್ನಾಟಕ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ.) ಯನ್ನು ರಚಿಸುವ ಆದೇಶ ಹೊರಡಿಸಿತು.

ಮುಂದುವರಿದು ಹೊಸ ತಿದ್ದುಪಡಿಗೆ ಕಾರಣಗಳನ್ನು ಸಹ ಪಟ್ಟಿ ಮಾಡಿತ್ತು. ಅವೆಂದರೆ, ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಸಾಧಿಸುವುದು. ಶಾಲೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡುವುದನ್ನು ಖಚಿತ ಪಡಿಸಿಕೊಳ್ಳುವ ಉದ್ದೇಶದಿಂದ, ತಮ್ಮ ಮಕ್ಕಳ ಏಳಿಗೆಯ ಬಗ್ಗೆ ಸದಾ ಕಾಳಜಿಯುಳ್ಳ ಪೋಷಕರು/ಪಾಲಕರು ಶಿಕ್ಷಣ ಪ್ರಕ್ರಿಯೆಯಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವಂತೆ

ಮಾಡಲು ಶಿಕ್ಷಣ ವ್ಯವಸ್ಥೆಯನ್ನು ವಿಕೇಂದ್ರೀಕರಿಸಿ ಶಾಲಾ ಆಡಳಿತವನ್ನು ಸುಧಾರಿಸಲು, ಶಿಕ್ಷಕರನ್ನು ಪ್ರೇರೇಪಿಸಿ ಅವರ ಜವಾಬ್ದಾರಿಯನ್ನು ಹೆಚ್ಚಿಸಲು, ಗ್ರಾಮ ಶಿಕ್ಷಣ ಸಮಿತಿಗಳ ರಚನೆಯಲ್ಲಿ ಉಳಿದುಕೊಂಡಿದ್ದ ನ್ಯೂನತೆಗಳನ್ನು ಹೋಗಲಾಡಿಸುವುದು. ಶಾಲಾ ಯೋಜನೆ ಹಾಗೂ ಅಭಿವೃದ್ಧಿಗಾಗಿ ಶಾಲೆಯನ್ನೇ ಒಂದು ಘಟಕವನ್ನಾಗಿ ಪರಿಗಣಿಸಿ ಜವಾಬ್ದಾರಿಯುತ ದಾಖಲೆಗಳನ್ನು ತಯಾರಿಸುವುದು. ಶಾಲಾ ದಾಖಲಾತಿ, ಹಾಜರಾತಿ, ಶಾಲಾ ಶಿಕ್ಷಣದ ಗುಣಮಟ್ಟ ಸುಧಾರಣೆ ಕುರಿತಂತೆ ಇರುವ ಸಮಸ್ಯೆಗಳನ್ನು ಸ್ಥಳೀಯವಾಗಿ ಪರಿಹರಿಸಲು ಪ್ರಯತ್ನ ಮಾಡುವುದು. ತರಗತಿಯ ಚಟುವಟಿಕೆಗಳನ್ನು ಶಿಸ್ತು ಬದ್ಧವಾಗಿ ಸಂಘಟಿಸಲು, ಸ್ಥಳೀಯರಿಂದ ಸಂಪನ್ಮೂಲಗಳನ್ನು ಕ್ರೂಢಿಕರಿಸುವ ಉದ್ದೇಶದಿಂದ ಎಸ್.ಡಿ.ಎಂ.ಸಿ.ಗಳನ್ನು ಶಾಲೆಗಳಲ್ಲಿರಚಿಸಲು ರಾಜಾರಾಮಣ್ಣ ಕಾರ್ಯಪಡೆ ತನ್ನ ವರದಿಯಲ್ಲಿ ಶಿಫಾರಸ್ಸು ಮಾಡಿತ್ತು.

ಸದರಿ ಆದೇಶದನ್ವಯ ಪ್ರತಿಯೊಂದು ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ-ತಾಯಂದಿರು ಆ ಶಾಲೆಯ ಪಾಲಕ ಪರಿಷತ್ತಿನ ಸದಸ್ಯರಾಗಿರುತ್ತಾರೆ.ಪಾಲಕ ಪರಿಷತ್ತು ೯ ಪಾಲಕ ಪ್ರತಿನಿಧಿಗಳನ್ನು ಆಯ್ಕೆ ಮಾಡುತ್ತದೆ. ಈ ೯ ಜನರು ಸೇರಿ ಒಬ್ಬ ಅಧ್ಯಕ್ಷನನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಉಳಿದಂತೆ ಈ ಸಮಿತಿಯಲ್ಲಿ ಪದನಿಮಿತ್ತ ಮತ್ತು ನಾಮನಿರ್ದೇಶನ ಸದಸ್ಯರು ಇರುತ್ತಾರೆ. ಈ ಸಮಿತಿಯ ಕಾರ್ಯದರ್ಶಿ ಆ ಶಾಲೆಯ ಮುಖ್ಯ ಶಿಕ್ಷಕರಾಗಿರುತ್ತಾರೆ.

ರಾಜ್ಯದಲ್ಲಿ ಈ ಸರ್ಕಾರಿ ಆದೇಶವು ಹೆಚ್ಚು ಉತ್ಸಾಹ ಮತ್ತು ಪರಿಣಾಮಕಾರಿಯಾಗಿ ಜಾರಿಗೆ ಬಂದಿತ್ತು. ಈ ಕಾರಣದಿಂದ ಎಲ್ಲಾ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ಸಮಿತಿಗಳು ರಚನೆಗೊಂಡವು. ೨೦೦೧ ಆಗಸ್ಟ್ ಅಂತ್ಯಕ್ಕೆ ಶೇಕಡ ೭೦ ರಿಂದ ೮೦ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ಗಳು ರಚನೆಗೊಂಡು ಕೆಲಸ ನಿರ್ವಹಿಸಲು ಪ್ರಾರಂಭಿಸಿದವು. ಎಸ್.ಡಿ.ಎಮ್.ಸಿ ಸಮಿತಿಗಳು ಮೂರು ವರ್ಷಗಳನ್ನು ಪೂರೈಸಿದ ಹಿನ್ನಲೆಯಲ್ಲಿ ಅವುಗಳ ಕಾರ್ಯ ಕ್ಷಮತೆಯನ್ನು ಇಲಾಖೆಯು ಮೌಲ್ಯಮಾಪನ ಮಾಡಿಸಿತು. ಎಸ್.ಡಿ.ಎಂ.ಸಿಯ ಕಾರ್ಯಕ್ಷಮತೆಯನ್ನು ಸಮಗ್ರವಾಗಿ ಅಧ್ಯಯನ ಮಾಡಲಾಯಿತು. ರಾಜ್ಯದಲ್ಲಿ ಪ್ರಾಮಾಣಿಕ ಕಳಕಳಿಯಿಂದ ಆದರಲ್ಲೂ ವಿಶೇಷವಾಗಿ ಕೆಳಹಂತದಲ್ಲಿ ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ-ತಾಯಂದಿರನ್ನು ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಕೆಲಸ ಪ್ರಾರಂಭವಾಗಿದ್ದು ೨೦೦೦ ರ ನಂತರದಲ್ಲಿ

ಶಾಲಾ ಶಿಕ್ಷಣದ ಸಾರ್ವತ್ರೀಕರಣದ ಪಿರಮಿಡ್ಡಿನ ತಳಹದಿಯೆಂದರೆ, ಮೂಲ ವಾರಸುದಾರರಾದ ಮಕ್ಕಳು, ಶಿಕ್ಷಕರು, ಪಾಲಕರು, ಪೋಷಕರು ಮತ್ತು ಸಮುದಾಯ, ಸ್ಥಳೀಯ ಜನಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ. ಮೂಲ ವಾರಸುದಾರರಾಗಿರುವತಳಹದಿಯನ್ನು ಹೊರತು ಪಡಿಸಿ ಉಳಿದೆಲ್ಲ ಹಂತಗಳು ಅಂದರೆ ಶಿಕ್ಷಣ ಸಂಯೋಜಕರ ಕಛೇರಿ, ಗುಚ್ಚ ಸಂಪನ್ಮೂಲ ಕೇಂದ್ರ, ಕ್ಷೇತ್ರ ಶಿಕ್ಷಣಾಧಿಕಾರಿ ಕಛೇರಿ, ಕ್ಷೇತ್ರ ಸಂಪನ್ಮೂಲ ಕೇಂದ್ರ, ಉಪನಿರ್ದೇಶಕರ ಕಛೇರಿ, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಕೇಂದ್ರ, ಸಾರ್ವಜನಿಕ ಶಿಕ್ಷಣ ಇಲಾಖೆ ಈ ಎಲ್ಲಾ ಇಲಾಖೆಗಳು ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕೆ ಅಗತ್ಯವಾದ ಬೆಂಬಲ, ತರಬೇತಿ ಮತ್ತು ಸಂಪನ್ಮೂಲಗಳನ್ನು ಒದಗಿಸುವ ಮೂಲಕ ಪರೋಕ್ಷವಾಗಿ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವ ವ್ಯವಸ್ಥೆಗಳಾಗಿರುತ್ತವೆ. ಪಿರಮಿಡ್ ತಳಹದಿಯಲ್ಲಿರುವ ಮೂಲವಾರಸುದಾರರಾದ ಮಕ್ಕಳು, ಶಿಕ್ಷಕರು, ಪಾಲಕರು, ಪೋಷಕರು ಮತ್ತು ಸಮುದಾಯ ಈ ಎಲ್ಲಾ ಬೆಂಬಲದಿಂದ ಸಾರ್ವತ್ರೀಕರಣ ಪ್ರಕ್ರಿಯೆಯನ್ನು ಸಾಧಿಸಬಲ್ಲ ಮುಖ್ಯ ಪಾತ್ರವನ್ನು ವಹಿಸಬೇಕಾಗಿದೆ. ಶಾಲಾ ಶಿಕ್ಷಣದ ಸಾರ್ವತ್ರೀಕರಣ ಸಾಧ್ಯ-ಅಸಾಧ್ಯತೆಗಳು ಮೂಲವಾರಸುದಾರರ ಮನಸ್ಥಿತಿ, ಸಾಮರ್ಥ್ಯ ಮತ್ತು ಬದ್ಧತೆಗಳನ್ನು ಅವಲಂಭಿಸಿರುತ್ತವೆ. ಆದ್ದರಿಂದ ನಮ್ಮ ಈ ಎಲ್ಲಾ ಅಭಿವೃದ್ಧಿ ಯೋಜನೆಗಳು ಕೆಳಹಂತದಲ್ಲಿ ರೂಪಗೊಳ್ಳಬೇಕಾಗಿದೆ.

ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಸ್ಥಾಪಿಸಲ್ಪಟ್ಟಿರುವ ಪ್ರತಿಯೊಂದು ಶಾಲೆಯು ಒಂದು ಪುಟ್ಟ ಸಮಾಜದಂತಿದ್ದು, ನಾವು ರೂಪಿಸಿಕೊಳ್ಳಲು ಉದ್ದೇಶಿಸಿರುವ ಸಮಾಜದ ಎಲ್ಲಾ ಮೌಲ್ಯಗಳನ್ನು ರೂಪಿಸಿಕೊಳ್ಳುವ ಒಂದು ಪ್ರಾಯೋಗಿಕ ಪ್ರಯೋಗಾಲಯವಾಗಿರುತ್ತದೆ. ನಮ್ಮ ಸಂವಿಧಾನದ ಮೂಲ ಆಶಯಗಳಾದ ಸಮಾನತೆ, ಸಮಾನ ಅವಕಾಶ, ಸಾಮಾಜಿಕ ನ್ಯಾಯ, ಮುಂತಾದ ಮೂಲ ಆಶಯಗಳನ್ನು ಸಮಾಜದ ದೈನಂದಿನ ಬದುಕಾಗಿಸಿಕೊಳ್ಳುವುದರ ಮೂಲಕ ಪ್ರತಿಯೊಬ್ಬ ನಾಗರೀಕನೂ ಸಂವಿಧಾನದ ಈ ಮೂಲಾಶಯಗಳನ್ನು ಕರಗತ ಮಾಡಿಕೊಂಡು ಒಂದು ಉತ್ತಮ ಸಮಾಜವನ್ನು ರೂಪಿಸುವ ನಿಟ್ಟಿನಲ್ಲಿ ಶಿಕ್ಷಣ ವ್ಯವಸ್ಥೆ ಕಾರ್ಯ ನಿರ್ವಹಿಸಬೇಕಾಗಿದೆ. ನಮ್ಮ ಸಂವಿಧಾನಾತ್ಮಕ ಎಲ್ಲಾ ಮೌಲ್ಯಗಳು ಶಿಕ್ಷಣ ವ್ಯವಸ್ಥೆಯ ಅಡಿಪಾಯವಾಗಬೇಕಾಗುತ್ತದೆ. ಶಿಕ್ಷಣ ವ್ಯವಸ್ಥೆಯು ಸಮಾನತೆಯ ಸಂದೇಶವನ್ನು ಸಾರುವ ಒಂದು ಸಾರ್ವತ್ರಿಕ ಸ್ಥಳವಾಗಬೇಕು.

ಈಗಾಗಲೇ ನಮ್ಮ ಶಿಕ್ಷಣ ವ್ಯವಸ್ಥೆಯು ಸರಬರಾಜು ಆಧಾರಿತ ವ್ಯವಸ್ಥೆಯಾಗಿ ರೂಪುಗೊಂಡಿದೆ. ವ್ಯವಸ್ಥೆಯ ಮೂಲವಾರಸುದಾರರ ಆಶಯ ಮತ್ತು ಅಭಿಪ್ರಾಯಗಳಿಗೆ ಸಾಕಷ್ಟು ಮನ್ನಣೆ ಸಿಗದಿರುವ ಮನಸ್ಥಿತಿಯೊಂದಿಗೆ ರೂಪಿಸಲ್ಪಟ್ಟ ಶಿಕ್ಷಣ ವ್ಯವಸ್ಥೆಯು ಕೇವಲ ಸರ್ಕಾರ ಮತ್ತು ಸರ್ಕಾರದ ಇಲಾಖೆಗಳ ವ್ಯವಸ್ಥೆಯೆಂಬ ಒಂದು ಮನಸ್ಥಿತಿಯನ್ನು ಹುಟ್ಟುಹಾಕಿದೆ.ಇದು ಶಾಲೆ ಮತ್ತು ಶಿಕ್ಷಣ ವ್ಯವಸ್ಥೆ ಸಮುದಾಯದ ಅವಿಭಾಜ್ಯ ಅಂಗವೆಂಬ ಸಾರ್ವತ್ರಿಕ ಸತ್ಯವನ್ನು ಅರ್ಥ ಮಾಡಿಕೊಂಡು ರೂಪಿಸಿದ ವ್ಯವಸ್ಥೆಯಾಗಲಿಲ್ಲ. ಕಾಲ ಕ್ರಮೇಣ ಸಮುದಾಯ ಸಕ್ರೀಯವಾಗಿ ಶಾಲಾ ಚಟುವಟಿಕೆಗಳಲ್ಲಿ ಭಾಗಿಯಾಗದಿದ್ದರೆ ಶಿಕ್ಷಣದ ಸಾರ್ವತ್ರೀಕರಣ ಸಾಧ್ಯವಿಲ್ಲವೆಂಬ ಸತ್ಯವನ್ನು ಅರಿತ ಸರ್ಕಾರ ಮತ್ತು ನೀತಿ ನಿರೂಪಕರು ಕ್ರಮೇಣವಾಗಿ ಸಮುದಾಯವನ್ನು ಒಳಗೊಳ್ಳುವ ಪ್ರಕ್ರಿಯೆಗೆ ಚಾಲನೆ ನೀಡಿತು. ಪ್ರಾರಂಭದಲ್ಲಿ ಇಂತಹ ಪ್ರಕ್ರಿಯೆಗಳು ಕೇವಲ ಸಾಂಕೇತಿಕವಾಗಿದ್ದು, ಇತ್ತೀಚಿಗಷ್ಟೆ ಮೂಲವಾರಸುದಾರರನ್ನು ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಸಕ್ರೀಯವಾಗಿ ತೊಡಗಿಸಿಕೊಳ್ಳುವ ಪ್ರಕ್ರಿಯೆಗಳು ಅತ್ಯಂತ ಕಳಕಳಿ ಮತ್ತು ಪ್ರಾಮಾಣಿಕತೆಯಿಂದ ಅನುಷ್ಠಾನಗೊಳ್ಳುತ್ತಿವೆ.

ಇಂತಹ ಪ್ರಯತ್ನಕ್ಕೊಂದು ಅತ್ಯುತ್ತಮ ಉದಾಹರಣೆಯೆಂದರೆ ಕರ್ನಾಟಕ ರಾಜ್ಯ ಸರ್ಕಾರ ಅನುಷ್ಠಾನಗೊಳಿಸಿರುವ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಪರಿಕಲ್ಪನೆ ಮತ್ತು ಕಾನೂನುಬದ್ಧ ಮಾದರಿ ಉಪವಿಧಿಗಳು. ಕಳೆದ ೧೦ ವರ್ಷಗಳಿಂದ ಜಾರಿಯಲ್ಲಿರುವ ಈ ಪ್ರಕ್ರಿಯೆಯು ಇತ್ತೀಚಿಗಷ್ಟೆ ಅಂದರೆ ಜೂನ್ ೨೦೦೬ರ ನಂತರ ಒಂದು ಕಾನೂನು ಬದ್ಧ ಪ್ರಜಾಸತ್ತಾತ್ಮಕ ವಿಕೇಂದ್ರಿಕರಣ ಪ್ರಕ್ರಿಯೆಯಾಗಿ ರೂಪಗೊಂಡಿತ್ತು. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಕರ್ನಾಟಕ ಪಂಚಾಯತ್‌ರಾಜ್ ಕಾಯ್ದೆ ೧೯೯೩ರ ಅಡಿಯಲ್ಲಿ ಒಂದು ಶಾಸನಬದ್ಧ ಸಮಿತಿಯಾಗಿದ್ದು, ನಾಗರೀಕ ಸೌಕರ್ಯಗಳ ಸಮಿತಿಗಳಡಿಯಲ್ಲಿ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ಮಾದರಿ ಉಪವಿಧಿಗಳನ್ನು ರಚಿಸಲಾಗಿದೆ. ಕರ್ನಾಟಕ ಸರ್ಕಾರವು ತನ್ನ ಅಧಿಕೃತ ರಾಜ್ಯಪತ್ರದಲ್ಲಿ ದಿನಾಂಕ ೧೪-೦೬-೨೦೦೬ರಂದು ಅಧಿಸೂಚನೆ ಹೊರಡಿಸುವುದರ ಮೂಲಕ ರಾಜ್ಯದ ಎಲ್ಲಾ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸುವಂತೆ ಆದೇಶಿಸಿದೆ.

ಇದು ಗ್ರಾಮ ಪಂಚಾಯಿತಿ ಹಂತದಲ್ಲಿ ಅಧಿಕಾರದ ವಿಕೇಂದ್ರಿಕರಣದ ಪ್ರಕ್ರಿಯೆಯಲ್ಲಿ ಹೊಸ ಇತಿಹಾಸವನ್ನು ಸೃಷ್ಟಿಸಿದೆ. ಮತ್ತು "ಕರ್ನಾಟಕ ರಾಜ್ಯದ ಶೈಕ್ಷಣಿಕ ಇತಿಹಾಸದಲ್ಲಿ ಒಂದು ಹೊಸ ಮೈಲಿಗಲ್ಲಾಗಿದೆ", ಮುಂದುವರಿದು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ ೨೦೦೯ರಲ್ಲಿ ಜಾರಿಯಾಗಿದ್ದು, ಕಾಯ್ದೆಯ ಅಡಿಯಲ್ಲಿ ಶಾಲಾ ನಿರ್ವಹಣಾ ಸಮಿತಿಗಳು/ಎಸ್.ಡಿ.ಎಂ.ಸಿ.ಗಳಿಗೆ ವಿಶೇಷ ಕಾನೂನಾತ್ಮಕ ಅವಕಾಶವನ್ನು ಕಲ್ಪಿಸಿದ್ದು, ಇದು ಎಸ್.ಡಿ.ಎಂ.ಸಿ.ಗಳಿಗೆ ಮತ್ತಷ್ಟು ಕಾನೂನಿನ ಬಲವನ್ನು ತಂದುಕೊಟ್ಟಿದೆ. ಈಗ ಈ ಎಸ್.ಡಿ.ಎಂ.ಸಿಗಳು ಕರ್ನಾಟಕ ರಾಜ್ಯ ಪಂಚಾಯತಿ ಅಧಿನಿಯಮ ೧೯೯೩

ಮಾತ್ರವಲ್ಲದೆ ಕೇಂದ್ರ ಸರ್ಕಾರದ ಶಿಕ್ಷಣ ಹಕ್ಕು ಕಾಯ್ದೆ ೨೦೦೯ರ ಅನ್ವಯವು ಕಾನೂನಾತ್ಮಕ ಸಮಿತಿಯಾಗಿದೆ. ಈ ರೀತಿ ಭಾಗವಹಿಸುವಾತ್ಮಕ ಸಂಶೋಧನೆಯ ಮೂಲಕ ರೂಪಗೊಂಡ ಮಾದರಿ ಉಪವಿಧಿಗಳ ಪ್ರತಿ ಇಂದು ನಮ್ಮ ಕೈಯಲ್ಲಿದೆ. ಈ ಉಪವಿಧಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದರ ಮೂಲಕ ಸಮುದಾಯವನ್ನು ಶಿಕ್ಷಣ ಪ್ರಕ್ರಿಯೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸಾರ್ವತ್ರೀಕರಣಕ್ಕೆ ಗುಣಾತ್ಮಕತೆಯ ಕಾಯಕಲ್ಪವನ್ನು ಕಲ್ಪಿಸಬೇಕಾಗಿದೆ.

ಈ ಹಿನ್ನಲೆಯಲ್ಲಿ ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯ ಸಹಭಾಗಿತ್ವವನ್ನು ಖಾತರಿಪಡಿಸಿಕೊಳ್ಳಲು ಮತ್ತು ಸಮುದಾಯ ಅದರಲ್ಲೂ ವಿಶೇಷವಾಗಿ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ-ತಾಯಂದಿರು ಶಾಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕೆಂಬ ಉದ್ದೇಶದಿಂದ ರಾಜ್ಯ ಸರ್ಕಾರವು 'ಎಸ್.ಡಿ.ಎಂ.ಸಿ.' ಎಂಬ ಪ್ರಜಾ ಸತ್ತಾತ್ಮಕ ಸಾಂಸ್ಥಿಕ ಚೌಕಟ್ಟನ್ನು ಜಾರಿಗೆ ತಂದಿದೆ. ಎಸ್.ಡಿ.ಎಂ.ಸಿ.ಗಳ ಕಾರ್ಯಕ್ಷಮತೆಯನ್ನು ಅರ್ಥಮಾಡಿಕೊಳ್ಳಲು ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನ ಮಾಡಲಾಗಿದೆ.

ಜೊತೆಗೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ತಳಹದಿಯಲ್ಲಿ ಸಮುದಾಯದ ಪಾತ್ರವನ್ನು ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿಗಳ ಪಾತ್ರದ ಬಗ್ಗೆ ಪ್ರಸಕ್ತ ಅಧ್ಯಯನ ಬೆಳಕು ಚೆಲ್ಲುತ್ತದೆ. ಈ ಎಸ್.ಡಿ.ಎಂ.ಸಿ.ಗಳ ರಚನೆ, ಕಾರ್ಯಚಟುವಟಿಕೆಗಳ ಬಗ್ಗೆ ಮೌಲ್ಯಮಾಪನ ನಡೆಸಿ, ಅವುಗಳ ಸಾಮಾರ್ಥ್ಯ ಹಾಗೂ ಮಿತಿಗಳನ್ನು ಗುರುತಿಸುವುದು ಮತ್ತು ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಪಾತ್ರದ ಬಗ್ಗೆ ತಿಳಿ ಹೇಳುವುದು ಇದರಲ್ಲಿ ಸೇರಿದೆ. ಅಧ್ಯಯನದ ಮೂಲಕ ಕಂಡುಕೊಳ್ಳುವ ಫಲಿತಾಂಶಗಳ ಆಧಾರದ ಮೇಲೆ ಎಸ್.ಡಿ.ಎಂ.ಸಿ.ಗಳನ್ನು ಸಶಕ್ತಗೊಳಿಸುವ ಶಿಫಾರಸ್ಸುಗಳನ್ನು ನೀಡುವುದು ಅಧ್ಯಯನದ ಮುಖ್ಯ ಉದ್ದೇಶವಾಗಿರುತ್ತದೆ.ಈ ನೆಲೆಯಲ್ಲಿ ಶಾಲಾ ಶಿಕ್ಷಣದ ಕ್ಷೇತ್ರದಲ್ಲಿ ಸಮುದಾಯದ ಸಹಭಾಗಿತ್ವದ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳುವ ನಿಟ್ಟಿನಲ್ಲಿ ಮೊದಲಿಗೆ ಈ ಕ್ಷೇತ್ರದಲ್ಲಿ ನಡೆದಿರುವ ಅಧ್ಯಯನಗಳನ್ನು ವಿಶಾಲ ನೆಲೆಯಲ್ಲಿ ಅರ್ಥಮಾಡಿಕೊಳ್ಳಲು ಪ್ರಯತ್ನ ಮಾಡಿದರೂ ನಿರ್ದಿಷ್ಟವಾಗಿ ಶಾಲಾ ಶಿಕ್ಷಣದ ಅಭಿವೃದ್ಧಿಯಲ್ಲಿ ಸಮುದಾಯದ ಸಹಭಾಗಿತ್ವ ಕುರಿತು ನಡೆದಿರುವ ಅಧ್ಯಯನಗಳನ್ನು ಅರ್ಥಮಾಡಿಕೊಳ್ಳಲು ಇಲ್ಲಿ ಪ್ರಯತ್ನಮಾಡಲಾಗಿದೆ.

೧.೨ಅಧ್ಯಯನಗಳ ಸಮೀಕ್ಷೆ

ಶಾಲಾ ಶಿಕ್ಷಣದ ಅಭಿವೃದ್ಧಿಯಲ್ಲಿ ಸಮುದಾಯ ಸಹಭಾಗಿತ್ವ ಇವತ್ತು ಎಲ್ಲರಿಂದಲೂ ಕೇಳಿಬರುತ್ತಿದೆ. ಕಾರಣ ಶಿಕ್ಷಣ ಮಾನವ ಅಭಿವೃದ್ಧಿ ವಿಚಾರದಲ್ಲಿ ಪ್ರಮುಖ ಸ್ಥಾನವನ್ನು ಪಡೆದಿದೆ. ಸಹಭಾಗಿತ್ವ ಅಥವಾ ಪಾಲ್ಗೊಳ್ಳುವಿಕೆಯುಎಲ್ಲಾ ಪ್ರದೇಶಗಳಲ್ಲಿ ಮತ್ತು ಎಲ್ಲಾ ಜನ-ವರ್ಗಗಳಲ್ಲಿ ಸಮಾನವಾಗಿರುವುದಿಲ್ಲ. ಸಹಭಾಗಿತ್ವ ಅಥವಾ ಪಾಲ್ಗೊಳ್ಳುವಿಕೆ ಪ್ರಮಾಣದಲ್ಲಿಯೂ ಸಹ ಪ್ರಾದೇಶಿಕ, ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ, ರಾಜಕೀಯ ಮತ್ತು ಲಿಂಗತ್ವ ಅಂತರ, ಅಸಮಾನತೆಗಳನ್ನು ಅನೇಕ ಅಧ್ಯಯನಗಳು ಗುರುತಿಸಿವೆ. ಇದೇ ರೀತಿ ಶಾಲಾ ಶಿಕ್ಷಣದಲ್ಲಿ ಮೇಲಿನ ಅಂತರಗಳು ತೀವ್ರವಾಗುತ್ತಿಯೋ ಅಥವಾ ಕುಗ್ಗುತ್ತಿವಿಯೋ ಎನ್ನುವುದನ್ನು ತಿಳಿಯಲು ಹಲವು ಅಧ್ಯಯನಗಳು ಪ್ರಯತ್ನಿಸಿವೆ. ನಮ್ಮ ಅಧ್ಯಯನದ ದೃಷ್ಟಿಯಿಂದ ಪ್ರಮುಖವಾದ ಅಧ್ಯಯನಗಳನ್ನು ಕಾಲಮಿತಿಯ ಒಳಗೆ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದ್ದೇನೆ.

ಪ್ರಶಾಂತ್ ಎಚ್.ಡಿ., (೨೦೦೬), ಅವರ "ಶಾಲಾ ಶಿಕ್ಷಣದ ವಿಕೇಂದ್ರಿಕರಣ ಎಸ್.ಡಿ.ಎಂ.ಸಿ. ಕಾರ್ಯಕ್ಷಮತೆ" ಎನ್ನುವ ಪುಸ್ತಕದಲ್ಲಿ ಮೂರು ಅಧ್ಯಾಯಗಳನ್ನಾಗಿ ಮಾಡಿಕೊಂಡು ಇದರಲ್ಲಿ ಮುಖ್ಯವಾಗಿ ಸಂಶೋಧನೆಯ ಮೂಲ ಸಿದ್ಧಾಂತಗಳನ್ನು ತಮ್ಮ ಅಧ್ಯಯನದಲ್ಲಿ ತೊಡಗಿಸಿಕೊಂಡಿದ್ದಾರೆ.

ಅಧ್ಯಯನದ ವಿಧಾನ ವಿವರಿಸುತ್ತಾ ಸಮುದಾಯದ ಸಹಬಾಗಿತ್ವ ಏಕೆ, ಅದರ ಪ್ರಯತ್ನಗಳು, ಅಧ್ಯಯನದ ಮಿತಿ ಮತ್ತು ಮಹತ್ವವನ್ನು ವಿವರಿಸಿದ್ದಾರೆ. ಶಾಲಾ ಶಿಕ್ಷಣದಲ್ಲಿ ವಿಕೇಂದ್ರಿಕರಣ ನಡೆದು ಬಂದ ದಾರಿಯನ್ನು ಹೇಳುತ್ತಾ, ಅಂದು ಮತ್ತು ಇಂದು ಇರುವ ಪ್ರಯತ್ನಗಳೇನು ಎಂಬುದನ್ನು ವಿಶ್ಲೇಷಣೆಗೆ ಒಳಪಡಿಸುವ ಮೂಲಕ ಎಸ್.ಡಿ.ಎಂ.ಸಿಯನ್ನು ಹೊಸದಾಗಿ ನೋಡುವ ಪ್ರಯತ್ನವನ್ನು ಮಾಡಿದ್ದಾರೆ. ಶಾಲಾ ನಿರ್ವಹಣೆಯಲ್ಲಿ ಎಸ್.ಡಿ.ಎಂ.ಸಿ ಪಾತ್ರ ಏನು? ಸಭೆ ನಿರ್ಣಯಗಳು, ಸಮನ್ವಯತೆ ಮತ್ತು ಶಾಲಾ ಶಿಕ್ಷಣದಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ವಿವರಿಸಿದ್ದಾರೆ. ಶಾಲಾ ಶಿಕ್ಷಣದಲ್ಲಿನ ತೊಡಕುಗಳು ಮತ್ತು ಪರಿಹಾರಗಳನ್ನು ತಮ್ಮ ಸಂಶೋಧನೆಯಲ್ಲಿ ಲೇಖಕರು ಕಂಡುಕೊಂಡಿದ್ದಾರೆ.

ಮೊದಲ ಅಧ್ಯಾಯದಲ್ಲಿ ಶಾಲಾ ಹಂತದಲ್ಲಿ ಆಡಳಿತಕ್ಕೆ ಸಂಬಂಧಿಸಿದಂತೆ ಇರುವ ಸವಾಲುಗಳೇನು ಎಂಬುದನ್ನು ಚರ್ಚಿಸುತ್ತಾ. ಈ ನಿಟ್ಟಿನಲ್ಲಿ ಕೆಲವು ರಾಜ್ಯಗಳು ತಳಮಟ್ಟಕ್ಕೆ ಅಧಿಕಾರವನ್ನು ವರ್ಗಾಯಿಸುವುದರ ಬಗ್ಗೆ ಪ್ರಸ್ತಾಪವನ್ನು ಸಹ ಮಾಡಿದ್ದಾರೆ. ಇಂತಹ ಪ್ರಯತ್ನಗಳಿಂದ ತಳಮಟ್ಟದ ಸಮುದಾಯಗಳು ಕೂಡ ಸಹಭಾಗಿತ್ವದ ಮೂಲಕ ಪಾಲ್ಗೊಳ್ಳುವಿಕೆಗೆ ಸಹಾಯಕವಾಗಿವೆ ಎಂಬುದನ್ನು ಸಹ ಗುರುತಿಸಿದ್ದಾರೆ. ಇದಕ್ಕೆ ಪೂರಕವಾಗಿ ಅನೇಕ ಅಧ್ಯಯನಗಳ ವರದಿಗಳು, ವಿವಿಧ ಸಮಿತಿಗಳ ವರದಿಗಳನ್ನು ಇಲ್ಲಿ ನೀಡಿದ್ದಾರೆ. ಸಮುದಾಯ ಸಹಭಾಗಿತ್ವವು ಭಾರತದ ಮಟ್ಟಗೆ ಹೊಸದೇನು ಅಲ್ಲ ಎನ್ನುವುದನ್ನು ತಿಳಿಸುತ್ತಾ ಸರ್ಕಾರಗಳ ದೂರದೃಷ್ಟಿಯ ಕೊರತೆಯಿಂದ ಸಮುದಾಯವನ್ನು ಕಾಲಕಾಲಕ್ಕೆ ದೂರವಿಡುವ ಪ್ರಯತ್ನಗಳು ನಡೆಯುತ್ತಾ ಬಂದಿರುವುದನ್ನು ಸೂಕ್ಷ್ಮವಾಗಿ ತಿಳಿಸಿದ್ದಾರೆ. ವಿಕೇಂದ್ರೀಕರಣವು ಶಾಲಾ ಹಂತಕ್ಕೂ ಕೂಡ ವಿಸ್ತರಿಸಿ ಶಾಲಾಭಿವೃದ್ಧಿಗಳಲ್ಲಿ ಸ್ಥಳೀಯ ಸಮುದಾಯದ ಎಸ್.ಡಿ.ಎಂ.ಸಿ.ಯ ಪ್ರತಿನಿಧಿಗಳ ಅನಿವಾರ್ಯತೆಯನ್ನು ಗುರುತಿಸಿದ್ದಾರೆ.

ಅಧ್ಯಾಯ ಎರಡರಲ್ಲಿ ಗಾಂಧೀಜಿಯವರ ಗ್ರಾಮ ಸ್ವರಾಜ್ ಕಲ್ಪನೆ ಹಾಗೂ ವಿಕೇಂದ್ರಿಕರಣದ ಹಾದಿಯನ್ನು ಗುರುತಿಸುವ ಪ್ರಯತ್ನಗಳನ್ನು ಚರ್ಚಿಸುವ ಮೂಲಕ ಶಾಲಾ ಶಿಕ್ಷಣದಲ್ಲಿ ಇದುವರೆಗೂ ವಿಕೇಂದ್ರಿಕರಣಕ್ಕಾಗಿ ನಡೆದ ಪ್ರಯತ್ನಗಳನ್ನು ವಿಶ್ಲೇಷಿಸಲಾಗಿದೆ. ಜೊತೆಗೆ ಪಂಚಾಯತ್ ರಾಜ್‌ಗಳ ವ್ಯವಸ್ಥೆ, ಸಾಕ್ಷರ ಆಂದೋಲನಗಳ ಮೂಲಕ ವಿಕೇಂದ್ರಿಕರಣಕ್ಕೆ ಯಾವ ಅನುಕೂಲವಾಯಿತು. ಎಸ್.ಡಿ.ಎಂ.ಸಿ ಏಕೆ ಎಂಬುದರ ಕುರಿತು ಶೈಕ್ಷಣಿಕ ವರದಿಗಳ ಮೂಲಕ ಚರ್ಚಿಸಿದ್ದಾರೆ. ಪ್ರಜಾಪ್ರಭುತ್ವದ ಮೂಲ ಆಶಯಗಳನ್ನು ಸಾಧಿಸಲು ಸಹಭಾಗಿತ್ವದ ಅಭಿವೃದ್ಧಿ ಮಾದರಿಯು ಎಷ್ಟು ಪರಿಣಾಮಕಾರಿಯಾದುದು ಎಂಬ ವಾದವನ್ನು ಮಂಡಿಸಿದ್ದಾರೆ. ಅಲ್ಲದೇ ಶಿಕ್ಷಣ ಜ್ಞಾನದ ಉತ್ಪಾದನೆಗೆ ಸ್ಥಳೀಯ ಜ್ಞಾನವನ್ನು ಅಳವಡಿಸಿಕೊಳ್ಳಬೇಕು ಈ ಮೂಲಕ ವಿಕೇಂದ್ರಿಕರಣದ ನಿಜವಾದ ಅರ್ಥ ಬರಲು ಸಾಧ್ಯ ಎಂಬುದನ್ನು ತಿಳಿಸಿದ್ದಾರೆ.

ಕೊನೆಯ ಮೂರನೇ ಅಧ್ಯಾಯದಲ್ಲಿ ಶಾಲಾ ಸೌಲಭ್ಯ ನಿರ್ಮಾಣ ಮತ್ತು ಶೈಕ್ಷಣಿಕ ಉತ್ತೇಜಕಗಳ ಅನುಷ್ಠಾನ ಹಾಗೂ ಶಾಲಾ ಅಭಿವೃದ್ಧಿ ಹಾಗೂ ನಿರ್ವಹಣೆಯಲ್ಲಿ ಎಸ್.ಡಿ.ಎಂ.ಸಿ.ಗಳ ಪಾತ್ರ, ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಸಮುದಾಯದ ಸಹಭಾಗಿತ್ವ ಇವುಗಳ ಬಗ್ಗೆ ಚರ್ಚಿಸಿದ್ದಾರೆ. ಕೊನೆಯಲ್ಲಿ ಹೇಳುವುದಾದರೆ, ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಯಲ್ಲಿ ಸ್ಥಳೀಯ ತಳಮಟ್ಟದ ಜನರು ಭಾಗವಹಿಸುವಿಕೆಯ ಮೂಲಕ ಆರ್ಥಿಕ, ಸಾಮಾಜಿಕ, ಭಿನ್ನತೆಯ ನಡುವೆಯೇ ಸುಧಾರಣೆಯಲ್ಲಿ ಈ ಅಂಶಗಳು ಪ್ರಭಾವ ಬೀರುವುದರಿಂದ ಅವುಗಳಿಗೆ ಬೇಕಾದ ಪರಿಹಾರಗಳನ್ನು ವಿಕೇಂದ್ರೀಕರಣದ ನೆಲೆಯಲ್ಲಿ ಕಂಡುಕೊಳ್ಳವುದು ಉತ್ತಮ ಎನ್ನುವುದನ್ನು ಇವರು ಪ್ರತಿಪಾದಿಸಿದ್ದಾರೆ.

ಎಂ.ಡಿ.ಉಷಾದೇವಿ.,(೨೦೦೨), ಇನ್ಸ್ಟಿಟ್ಯೂಟ್ ಫಾರ್ ಸೋಷಿಯಲ್ ಅಂಡ್ ಎಕಾನಮಿಕ್ ಚೇಂಜ್ ಸಂಸ್ಥೆ, ಬೆಂಗಳೂರು, "ಎ ಸ್ಟಡಿ ಆನ್ ಪಾರ್ಟಿಸಿಪೇಟರಿ ಇನ್ಸ್ಟಿಟ್ಯೂಷನಲ್ ಸ್ಟ್ರಕ್ಚರ್ ಇನ್ ದ ಸೆಂಟ್ರಲೈಜಡ್

ಮ್ಯಾನೇಜ್‌ಮೆಂಟ್ ಆಫ್ ಎಲಿಮೆಂಟರಿ ಎಜುಕೇಷನ್" ಅಧ್ಯಯನವನ್ನು ನಡೆಸಿದ್ದು. ಈ ಅಧ್ಯಯನವು ಸಮುದಾಯ ಸಹಭಾಗಿತ್ವದ ಅನೇಕ ಸಕರಾತ್ಮಕ ಮತ್ತು ನಕರಾತ್ಮಕ ಅಂಶಗಳನ್ನು ಹೊರಹಾಕಿದೆ, ಈ ಅಧ್ಯಯನವು ಸಂಗ್ರಹಿಸಿದ ೫೨ ಶಾಲಾ ಸಮಿತಿಗಳ ದತ್ತಾಂಶಗಳ ವಿಶ್ಲೇಷಣೆಯನ್ನು ಆಧರಿಸಿದೆ. ಇದರಲ್ಲಿ ೪೩೨ ಗ್ರಾಮ ಶಿಕ್ಷಣ ಸಮಿತಿಯ ಸದಸ್ಯರು ಮತ್ತು ೪೯೧ ಸಮುದಾಯ ಸದಸ್ಯರನ್ನು ರಾಜ್ಯದ ಬೇರೆ ಬೇರೆ ಪ್ರದೇಶಗಳಿಂದ ತೆಗೆದುಕೊಳ್ಳಲಾಗಿದೆ. ಈ ಅಧ್ಯಯನವು ಪ್ರಥಮವಾಗಿ ಗ್ರಾಮ ಶಿಕ್ಷಣ ಸಮಿತಿಯ ಜವಾಬ್ದಾರಿಯನ್ನು ನೋಡಲಾಗಿದ್ದು, ಇದರಲ್ಲಿ ಮಹಿಳೆಯರ ಪರಿಣಾಮಕಾರಿ ಭಾಗವಹಿಸುವಿಕೆ, ಸಮಿತಿ ಸದಸ್ಯರ ಅಧಿಕಾರ, ಸದಸ್ಯರು ಶಾಲೆಗೆ ಭೇಟಿ ನೀಡಿರುವ ಸಂಖ್ಯೆ, ಹಣಕಾಸು ನೆರವು, ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಕರೆತರುವಲ್ಲಿ ಹಾಗೂ ಸಂಪನ್ಮೂಲ ಕ್ರೋಢಿಕರಣದಲ್ಲಿ ಸಮುದಾಯದ ಸಹಭಾಗಿತ್ವ ಮುಂತಾದ ವಿಷಯಗಳ ಬಗ್ಗೆ ಬೆಳಕು ಚೆಲ್ಲಿದೆ. ಉಪ ಸಂಹಾರದಲ್ಲಿ ಗ್ರಾಮ ಶಿಕ್ಷಣ ಸಮಿತಿಯ ಶೈಕ್ಷಣಿಕ ಆಡಳಿತದಲ್ಲಿ ವಿಕೇಂದ್ರಿಕರಣವು ಪರಿಣಾಮಕಾರಿ ಬಳಕೆಯಾಗುತ್ತಿದ್ದು. ಇದು ಸಹಭಾಗಿತ್ವದ ಸಾಂಸ್ಥಿಕ ರಚನೆಯಾಗಿದೆ. ಕಾನೂನಾತ್ಮಕ ಅಧಿಕಾರವಿಲ್ಲದಿರುವುದು ಒಂದು ಪ್ರಮುಖವಾದ ಕೊರತೆಯಾಗಿದೆ. ಅಲ್ಲದೆ ಸರಿಯಾಗಿ ಸಭೆಗಳು ನಡೆಯದಿರುವುದು, ಸಭೆಗಳಲ್ಲಿ ಕನಿಷ್ಠ ಹಾಜರಿ, ಗ್ರಾಮದ ಶಾಲೆಯ ಅಭಿವೃದ್ಧಿಯ ಒಡೆತನದಲ್ಲಿ ಸಮುದಾಯ ಸಹಭಾಗಿತ್ವ ಕಾಣಿಸಿಕೊಳ್ಳದಿರುವುದು ಮತ್ತು ನಿಧಾನ ಪ್ರಗತಿಯಾಗುತ್ತಿರುವುದನ್ನು ಗುರುತಿಸಿದ್ದಾರೆ.

ಪ್ರಶಾಂತ್.ಎಚ್.ಡಿ., (೨೦೦೫), ಅವರ "ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ" ಎಂಬ ಪುಸ್ತಕದಲ್ಲಿ ಪ್ರಸ್ತಾವನೆಯೂ ಸೇರಿದಂತೆ ಏಳು ಅಧ್ಯಾಯಗಳಿವೆ. ಪ್ರತಿ ಅಧ್ಯಾಯಕ್ಕೆ ಹಲವು ಉಪವಿಭಾಗಗಳನ್ನು ನೀಡಿದ್ದರಿಂದ ವಿವರಣೆಯಲ್ಲಿ ಸ್ಪಷ್ಟತೆಯಿದೆ. ಪ್ರಸ್ತಾವನೆಯಲ್ಲಿ ಅಧ್ಯಯನದ ಉದ್ದೇಶ, ಮಹತ್ವ, ಅಧ್ಯಯನಕ್ಕೆ ಒಳಪಡಿಸಿದ ಕ್ಷೇತ್ರ ಪರಿಚಯ, ಅಧ್ಯಯನದ ಮಿತಿ ಮುಂತಾದವುಗಳನ್ನು ವಿವರಿಸಲಾಗಿದೆ. ಇವೆಲ್ಲವುಗಳನ್ನು ವಿವರಿಸುವಾಗ ರಾಷ್ಟ್ರ, ರಾಜ್ಯ, ಜಿಲ್ಲೆ ಹಾಗೂ ಗ್ರಾಮ ಪಂಚಾಯತ್ ಮಟ್ಟದ ಅಂಕಿ ಅಂಶಗಳನ್ನು ನೀಡುತ್ತಾ ವಿಶಾಲವಾದ ಸೂಕ್ಷ್ಮ ಮಟ್ಟದವರೆಗಿನ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ಅಧ್ಯಯನದ ಕ್ಷೇತ್ರ ಆಯ್ಕೆಯಲ್ಲಿ ಮುಂಬೈ ಕರ್ನಾಟಕ, ಹೈದ್ರಾಬಾದ್ ಕರ್ನಾಟಕ, ಬಳ್ಳಾರಿ ಜಿಲ್ಲೆಯ ಗ್ರಾಮಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಪ್ರಾಥಮಿಕ ಶಿಕ್ಷಣ ಪಡೆಯುವಲ್ಲಿ ಸ್ಥಳೀಯ ಗ್ರಾಮಮಟ್ಟದ ಅಂಶಗಳು ಹೇಗೆ ಪ್ರಭಾವ ಬೀರುತ್ತವೆ ಎಂಬುದನ್ನು ತಳವರ್ಗದ ಹಿನ್ನಲೆಯಲ್ಲಿ ವಿಶ್ಲೇಷಿಸುವ ಗುರಿ ಈ ಅಧ್ಯಯನಕ್ಕೆ ಇದೆ. ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಅನುಸರಿಸುವ ಎಲ್ಲ ಕಾರ್ಯಗಳನ್ನು ಲೇಖಕರು ಮೂರು ಅಂಶಗಳಲ್ಲಿ ವಿಂಗಡಿಸಿದ್ದಾರೆ. ಮೊದಲನೆಯದಾಗಿ ಮೂಲಸೌಲಭ್ಯಗಳು, ಎರಡನೆಯದಾಗಿ ಶಾಲಾ ಬೌದ್ಧಿಕ ಪರಿಸರ ಹಾಗೂ ಮೂರನೆಯದಾಗಿ ವಿದ್ಯಾರ್ಥಿಗಳಿಗೆ ಒದಗಿಸುವ ಪ್ರೋತ್ಸಾಹಕ ಅಂಶ ಇವೆಲ್ಲವುಗಳು ಕೆಳಗಿನ ಸೌಕರ್ಯಗಳನ್ನು ಒಳಗೊಂಡಿವೆ. ಕಪ್ಪುಹಲಗೆ ಯೋಜನೆ, ಡಿಪಿಇಪಿ, ಮನನ ಶಿಬಿರ, ಚೈತನ್ಯ ತರಬೇತಿ, ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಪ್ರೋತ್ಸಾಹ ಧನ, ಪಾಠಿಚೀಲ, ಆಹಾರ ಧಾನ್ಯ, ಬಿಸಿಊಟ, ಅಕ್ಷರ ದಾಸೋಹ ಮುಂತಾದವುಗಳು. ಈ ಎಲ್ಲ ಕಾರ್ಯಕ್ರಮಗಳಲ್ಲಿ ಅಂತರ್ ಸಂಬಂಧವಿದೆ. ಇವೆಲ್ಲವುಗಳ ಒಟ್ಟಾರೆ ಉದ್ದೇಶವೆಂದರೆ ಆರರಿಂದ ಹದಿನಾಲ್ಕು ವರ್ಷದ ಮಕ್ಕಳು ಶಾಲೆ ತಪ್ಪಿಸದಂತೆ ನೋಡಿಕೊಳ್ಳುವುದಾಗಿದೆ. ಈ ಎಲ್ಲ ಕಾರ್ಯಕ್ರಮಗಳು ಒಂದು ರೀತಿ ಗೊಂದಲ ಸೃಷ್ಟಿಸಿವೆ. ಬಾಲಕಿಯರಿಗೆ ಶಿಕ್ಷಣ ಪಡೆಯುವ ಆಸಕ್ತಿ ಇದೆ ಆದರೆ ಅವಕಾಶಗಳು ಕಡಿಮೆ, ತಳವರ್ಗದ ಪಾಲಕರು ಉಚಿತ ಸೌಲಭ್ಯ ಪಡೆಯಲು ಮಾತ್ರ ಶಾಲೆಗೆ ಕಳುಹಿಸುತ್ತಾರೆ ಎಂಬುದನ್ನು ಅಧ್ಯಯನವು ತಿಳಿಸುತ್ತದೆ.

ಎರಡನೇ ಅಧ್ಯಾಯದಲ್ಲಿ ಪ್ರಾಥಮಿಕ ಶಿಕ್ಷಣದ ಪ್ರಾಮುಖ್ಯತೆಯನ್ನು ವಿಭಿನ್ನ ದೃಷ್ಟಿಕೋನದ ಹಿನ್ನಲೆಯಲ್ಲಿ ಚರ್ಚಿಸಲಾಗಿದೆ. ಶಿಕ್ಷಣ ಎಲ್ಲಾ ಸಾಮಾಜಿಕ ರೋಗಗಳಿಗೆ ಸಿದ್ಧ ಔಷಧಿ. ನಮ್ಮ ಸಂವಿಧಾನದ ಪ್ರಕಾರ ಉಚಿತ

ಪ್ರಾಥಮಿಕ ಶಿಕ್ಷಣ ಕೊಡುವುದು ಸರಕಾರದ ಹೊಣೆ, ಈ ಶಿಕ್ಷಣ ಕಡ್ಡಾಯವೂ ಆಗಿದೆ. ಇದು ಮಾನವನಲ್ಲಿ ತೊಡಗಿಸಿದ ಬಂಡವಾಳ ಎಂದು ಗ್ರಹಿಸಬೇಕಾಗಿದೆ. ಮಗುವಿಗೆ ಶಿಕ್ಷಣ ಶಿಕ್ಷೆಯಾಗದೆ, ಆತನ ವ್ಯಕ್ತಿತ್ವ ವಿಕಾಸಕ್ಕೆ ಹಾಗೂ ಉತ್ತಮ ನಡವಳಿಕೆಗೆ ಉತ್ತೇಜನ ನೀಡಬೇಕು. ಸಾಮಾಜಿಕ ಪ್ರಗತಿ, ಸಾಮಾಜಿಕ ನ್ಯಾಯಗಳ ಬಗ್ಗೆ ಎಚ್ಚರಿಕೆ ಹೊಂದಿರಬೇಕು. ಇದರ ಮೂಲಕ ಸಾಮಾಜಿಕ ಅಭಿವೃದ್ಧಿ ಸಾಧಿಸಬೇಕಾಗಿದೆ.

ಮೂರನೇ ಅಧ್ಯಾಯದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿರುವ ಪ್ರಾದೇಶಿಕ ಅಸಮಾನತೆಯನ್ನು ವಿವರಿಸಲಾಗಿದೆ. ಅಮರ್ತ್ಯಸೇನ್ ಅವರು ಸಾಕ್ಷರತೆ ಅಭಿವೃದ್ಧಿಯ ಸಾಧನ ಹಾಗೂ ಸಾಧ್ಯವೂ ಆಗಿದೆ ಎಂದು ಹೇಳಿದ್ದಾರೆ. ಹೀಗಾಗಿ ಶಿಕ್ಷಣಕ್ಕೆ ತನ್ನದೇ ಆದ ಮಹತ್ವವಿದೆ. ಭಾರತ ಏಕೆ ಬಡರಾಷ್ಟ್ರವಾಗಿದೆ ಎಂದರೆ ಬೇರೆ ಕಾರಣ ಬೇಕಾಗಿಲ್ಲ. ನಿರಕ್ಷತೆಯೇ ನಮ್ಮ ಬಡತನಕ್ಕೆ ಕಾರಣವಾಗಿದೆ. ವಿಶ್ವದ ನಿರಕ್ಷರಿಗಳಲ್ಲಿ ಮೂರನೆ ಒಂದು ಭಾಗದಷ್ಟು ಜನ ಭಾರತದಲ್ಲಿದ್ದಾರೆ. ಪರಿಶಿಷ್ಟ ಜಾತಿ, ಪಂಗಡ ಮತ್ತು ಮುಸ್ಲಿಂರಲ್ಲಿ ಸಾಕ್ಷರತೆಯ ಪ್ರಮಾಣ ಕಡಿಮೆ ಇದೆ ಎಂದು ಲೇಖಕರು ಅಂಕಿ ಅಂಶಗಳಿಂದ ಸಾಬೀತು ಮಾಡಿದ್ದಾರೆ.

ಶಿಕ್ಷಣದ ಬಗ್ಗೆ ಪಾಲಕರು ಹೊಂದಿರುವ ಅಭಿಪ್ರಾಯ. ನೌಕರಶಾಹಿ ಹಾಗೂ ಆಳುವವರ ಅಭಿಪ್ರಾಯಗಳನ್ನು ನಾಲ್ಕನೇ ಅಧ್ಯಾಯದಲ್ಲಿ ವಿಭಿನ್ನ ರೀತಿಯಲ್ಲಿ ವಿಶ್ಲೇಷಿಸಲಾಗಿದೆ. ಬಾಲಕರನ್ನು ಶಾಲೆಗೆ ಕಳುಹಿಸಲು ಪಾಲಕರು ಆಸಕ್ತಿ ಹೊಂದಿಲ್ಲ ಎಂಬ ನಿಲುವು ಮಾಧ್ಯಮಗಳದ್ದಾಗಿದೆ. ಶೈಕ್ಷಣಿಕ ಕ್ಷೇತ್ರದಲ್ಲಿಯ ಇತ್ತೀಚಿನ ಬದಲಾವಣೆಗಳು ಮಕ್ಕಳನ್ನು ಶಾಲೆಗೆ ಆಕರ್ಷಿಸುತ್ತವೆ ಎಂಬ ವಾದವೂ ಇದೆ. ಶೇಕಡ ತೊಂಬತ್ತಾರರಷ್ಟು ಪಾಲಕರು ಶಿಕ್ಷಣ ಅವಶ್ಯಕ ಎಂದು ಹೇಳಿದ್ದಾರೆ. ಶೇಕಡ ಎಂಬತ್ತೆಂಟರಷ್ಟು ಪಾಲಕರು ಬಾಲಕಿಯರಿಗೂ ಶಿಕ್ಷಣ ಅವಶ್ಯಕವಾಗಿದೆ ಎಂದು ಪ್ರತಿಪಾದಿಸಿದ್ದಾರೆ. ಗಂಡು ಮಕ್ಕಳ ಶಿಕ್ಷಣದ ಬಗ್ಗೆ ಇರುವ ಕಾಳಜಿ ಹೆಣ್ಣು ಮಕ್ಕಳ ಶಿಕ್ಷಣಕ್ಕಿಲ್ಲ ಎಂಬುದನ್ನು ಗುರುತಿಸಿದ್ದಾರೆ. ಇದಕ್ಕೆ ಅಂಕಿ ಅಂಶಗಳನ್ನು ವಿಶ್ಲೇಷಿಸುತ್ತಾ ವಿವರಿಸುವ ಯತ್ನ ಆಗಿದೆ.

ಶಾಲೆಯಲ್ಲಿರುವ ಮೂಲಸೌಲಭ್ಯಗಳನ್ನು ಐದನೇ ಅಧ್ಯಾಯದಲ್ಲಿ ವಿವರಿಸಲಾಗಿದೆ. ಮೂಲಸೌಲಭ್ಯಗಳ ಉದ್ದೇಶ ಎಂದರೆ ಮಗುವನ್ನು ಶಾಲೆಗೆ ಆಕರ್ಷಿಸುವುದು. ಸರ್ಕಾರಿ ಶಾಲೆಗಳಲ್ಲಿ ಮೂಲಭೂತ ಸೌಲಭ್ಯಗಳ ಕೊರತೆಯನ್ನು ವಿಶ್ಲೇಷಿಸಿದ್ದಾರೆ. ಅಸ್ಪೃಶ್ಯತೆಯಿಂದ ಮಕ್ಕಳು ಹೇಗೆ ಶಾಲಾ ಶಿಕ್ಷಣದಿಂದ ವಂಚಿತರಾಗುತ್ತಾರೆ ಹಾಗೂ ರಾಜಕೀಯ ಹಿತಾಶಕ್ತಿ ಹಾಗೂ ಭ್ರಷ್ಟಾಚಾರದ ಬಗ್ಗೆ ಬೆಳಕನ್ನು ಚೆಲ್ಲುತ್ತಾ ಶಿಕ್ಷಕರಲ್ಲಿರುವ ಅಪನಂಬಿಕೆ ಹಾಗೂ ಮುಖ್ಯ ಶಿಕ್ಷಕರಿಗೆ ಶಿಕ್ಷಣೇತರ ಕೆಲಸಗಳ ಒತ್ತಡದ ಬಗ್ಗೆಯು ವಿಶ್ಲೇಷಿದ್ದಾರೆ.

ಆರನೇ ಅಧ್ಯಾಯದಲ್ಲಿ ಎಲ್ಲರನ್ನು ಆಕರ್ಷಿಸುವ ಕೆಲವರನ್ನು ವಿಕರ್ಷಿಸುವ ಬಿಸಿಊಟದ ಚರ್ಚೆ ಗಮನಾರ್ಹವಾಗಿದೆ. ಲೇಖಕರು ಮುಖ್ಯವಾಗಿ ಮೂರು ಉದ್ದೇಶಗಳನ್ನು ಇಟ್ಟುಕೊಂಡು ಅಧ್ಯಯನ ನಡೆಸಿದ್ದಾರೆ. ಶಿಕ್ಷಣದ ಬೆಳವಣಿಗೆ, ಮಕ್ಕಳಲ್ಲಿ ಪೌಷ್ಟಿಕತೆ ಹಾಗೂ ಸಾಮಾಜಿಕ ಸಮಾನತೆ ತರುವುದರ ಬಗ್ಗೆ ಗಹನವಾಗಿ ಚರ್ಚಿಸುತ್ತಾ ಅಧ್ಯಯನವು ಬಿಸಿಊಟ ಹಾಗೂ ಅಸ್ಪೃಶ್ಯತೆಯ ಸಮಸ್ಯೆಯ ಬಗ್ಗೆ ವಿಶೇಷ ಅಧ್ಯಯನದ ಅಗತ್ಯ ಇದೆ ಎಂದು ಹೇಳಿದ್ದಾರೆ.

ಕೊನೆಯ ಅಧ್ಯಾಯ ಏಳರಲ್ಲಿ ಬಹುರೂಪಿಯಾಗಿ ಬದಲಾವಣೆ ಹೊಂದುತ್ತಿರುವ ಪ್ರಾಥಮಿಕ ಶಿಕ್ಷಣದ ಹಲವು ಸಮಸ್ಯೆ ಹಾಗೂ ಪರಿಹಾರಗಳನ್ನು ಸೂಚಿಸಿದ್ದಾರೆ.

ಟಿ.ಆರ್. ಚಂದ್ರಶೇಖರ್.,(೨೦೦೬).ಅವರ "ಕರ್ನಾಟಕದ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ" ಎನ್ನುವ ಲೇಖನವು ಅನುಷಾಂಗಿಕ ಮಾಹಿತಿಯನ್ನು ಆಧರಿಸಿ ಕಟ್ಟಲಾಗಿದೆ. ಲೇಖಕರು ಪ್ರಮುಖವಾಗಿ ಮೂರು

ಆಯಾಮಗಳನ್ನು ಚರ್ಚೆಗೆ ಒಳಪಡಿಸಿದ್ದಾರೆ, ಪ್ರಾದೇಶಿಕ ಸ್ವರೂಪ, ಜಾತಿ ಸ್ವರೂಪ, ಲಿಂಗ ಸಂಬಂಧಿ ಸ್ವರೂಪಗಳನ್ನು ಚರ್ಚಿಸುತ್ತಾ, ಮಧ್ಯದಲ್ಲಿ ಶಾಲೆ ಬಿಡುವ ಮಕ್ಕಳ ಸಮಸ್ಯೆಗೆ ಅನೇಕ ಕಾರಣಗಳನ್ನು ಗುರುತಿಸಿದ್ದಾರೆ. ಸಾಮಾಜಿಕ, ರಾಜಕೀಯ, ಚಾರಿತ್ರಿಕ ಕಾರಣಗಳು ಬಹು ಮುಖ್ಯ ಎಂದಿದ್ದಾರೆ. ಉಚಿತ ಪಠ್ಯಪುಸ್ತಕ, ಸಮವಸ್ತ್ರ, ಊಟ ಇತ್ಯಾಧಿ ಸೌಲಭ್ಯಗಳನ್ನು ಒದಗಿಸುವುದರಿಂದ ಸ್ವಲ್ಪ ಮಟ್ಟಿಗೆ ಕಡಿಮೆಗೊಳಿಸಲಾಗಿದೆ. ಆದರೆ ಸಮುದಾಯದ ವಲಸೆಗಳು ಪುನಾರಾವರ್ತನೆಯಾಗುವ ಪ್ರದೇಶಗಳಲ್ಲಿ ಮಕ್ಕಳು ಶಾಲೆ ಬಿಡುವುದನ್ನು ಕಡಿಮೆಗೊಳಿಸಲು ಉದ್ಯೋಗ ಭದ್ರತೆಯು ಪ್ರಮುಖವಾಗುತ್ತದೆ ಎಂದು ಪ್ರತಿಪಾದಿಸಲಾಗಿದೆ.

ಪದ್ಮಶ್ರೀ, ಆರ್.ಪಿ.,(೨೦೦೪), ಎಂ.ಎಡ್, ಸ್ನಾತಕೋತ್ತರ ಶಿಕ್ಷಣ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯದಲ್ಲಿ. "ಎನ್ ಎಂಪಿರಿಕಲ್ ರಿಸರ್ಚ್ ಸ್ಟಡಿ ಆನ್ ಕಮ್ಯೂನಿಟಿ ಪಾರ್ಟಿಸಿಪೇಷನ್ ಇನ್ ದಿ ಪ್ರೋಷೆಸ್ ಆಫ್ ಯೂನಿವರ್ಷಲೇಷನ್ ಆಫ್ ಎಲಿಮೆಂಟರಿ ಎಜುಕೇಷನ್ ಯಾನ್ ಇವಾಲೋವೆಟೇಡ್ ಸ್ಟಡಿ" ಎಂಬ ವಿಷಯದಲ್ಲಿ ಡೆಸೆರ್ಟೇಷನ್ ಸಲ್ಲಿಸಿದ್ದು. ಶಾಲಾಭಿವೃದ್ಧಿಯಲ್ಲಿ ಆಗಿರುವ ಪರಿಣಾಮ ಹಾಗೂ ಶಾಲೆಯಲ್ಲಿ ಎಸ್.ಡಿ.ಎಂ.ಸಿ ಕೆಲಸದ ಬಗ್ಗೆ ಮತ್ತು ಎಸ್.ಡಿ.ಎಂ.ಸಿ.ಯ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಸರ್ವ ಶಿಕ್ಷಣ ಅಭಿಯಾನ ಅನುಷ್ಠಾನದ ಸಂದರ್ಭದಲ್ಲಿ ಪ್ರಾಥಮಿಕ ಶಾಲಾ ಶಿಕ್ಷಣದ ಸಾರ್ವತ್ರೀಕರಣದ ಪ್ರಕ್ರಿಯೆಯಲ್ಲಿ ಎಸ್.ಡಿ.ಎಂ.ಸಿ ಪಾತ್ರದ ಬಗ್ಗೆ ಹೆಚ್ಚಿನ ವಿಷಯವನ್ನು ಈ ಅಧ್ಯಯನವು ತಿಳಿಸುತ್ತದೆ. ಈ ಅಧ್ಯಯನವು ೩೦ ಶಾಲೆಗಳನ್ನು ಒಳಗೊಂಡಿದ್ದು. ಇದರಲ್ಲಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳನ್ನು ಬೆಂಗಳೂರು ನಗರದ ಉತ್ತರ ಜಿಲ್ಲೆಯಲ್ಲಿ ಆಯ್ಕೆ ಮಾಡಿಕೊಂಡು ಅಧ್ಯಯನ ನಡೆಸಲಾಗಿದೆ. ಈ ಅಧ್ಯಯನದ ಒಟ್ಟಾರೆ ಸಾರಂಶವೆಂದರೆ ಶಿಕ್ಷಣ ಇಲಾಖೆಯು ನೀಡಿರುವ ಮಾರ್ಗಸೂಚಿಯಂತೆ ಶೇಕಡ ೮೦ರಷ್ಟು ಶಾಲೆಗಳಲ್ಲಿ ಎಸ್.ಡಿ.ಎಂ.ಸಿಯು ರಚನೆಯಾಗಿದ್ದು. ಉಳಿದ ಶೇಕಡ ೨೦ರಷ್ಟು ಶಾಲೆಗಳಲ್ಲಿ ನಂತರದ ಮೂರು ತಿಂಗಳು, ಕೆಲವು ಆರು ತಿಂಗಳು ಇನ್ನೂ ಕೆಲವು ಒಂದು ವರ್ಷದ ನಂತರ ರಚನೆಯಾಗಿದೆ. ಎಸ್.ಡಿ.ಎಂ.ಸಿ ಪದಾಧಿಕಾರಿಗಳ ಶೈಕ್ಷಣಿಕ ಸ್ಥಿತಿಯು ನಾಮನಿರ್ದೇಶಿತ ಸದಸ್ಯರಿಗಿಂತ ಭಿನ್ನವಾಗಿದ್ದು, ಹೆಚ್ಚಿನ ಚುನಾಯಿತ ಎಸ್.ಡಿ.ಎಂ.ಸಿ ಸದಸ್ಯರು ಅನಕ್ಷರಸ್ಥರಾಗಿದ್ದು ಅಥವಾ ಕಡಿಮೆ ಓದಿದವರಾಗಿದ್ದಾರೆ. ಅಲ್ಲದೆ ದ್ವಿತೀಯ ಹಂತದ ಸಹಭಾಗಿದಾರರ ಸಹಭಾಗಿತ್ವವು ಕಡಿಮೆ ಮಟ್ಟದಲ್ಲಿದ್ದು. ಇದಕ್ಕೆ ಕಾರಣ ಹಿಂದೆ ಇದ್ದ ಗ್ರಾಮ ಶಿಕ್ಷಣ ಸಮಿತಿ ಹಾಗೂ ಎಸ್.ಡಿ.ಎಂ.ಸಿ ನಡುವೆ ಇರುವ ತಿಕ್ಕಾಟವಾಗಿದೆ ಎಂಬುದನ್ನು ತಿಳಿಸುತ್ತಾರೆ. ಈ ಅಧ್ಯಯನದ ಒಟ್ಟಾರೆ ಸಾರಂಶವೆಂದರೆ ಶಾಲಾಭಿವೃದ್ಧಿಯಲ್ಲಿ ಸಮುದಾಯ ಸಂಬಂಧ ಹಾಗೂ ತನ್ನ ಪಾತ್ರದ ಮೂಲಕ ಶಾಲೆಯ ಮೂಲಭೂತ ಸೌಕರ್ಯಗಳಿಗೆ ತನ್ನ ಕೊಡುಗೆಯನ್ನು ನೀಡಿದ್ದು. ಶಾಲೆಗೆ ಮಕ್ಕಳ ದಾಖಲಾತಿ ಹಾಗೂ ಶಾಲೆಗೆ ಹೋಗುತ್ತಿಲ್ಲದ ಮಕ್ಕಳು ಮತ್ತು ಶಾಲೆ ಬಿಟ್ಟಿದ್ದ ಮಕ್ಕಳನ್ನು ಮುಖ್ಯವಾಹಿನಿಗೆ ತರುವಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ಸಮುದಾಯವು ಅದರಲ್ಲೂ ಎಸ್.ಡಿ.ಎಂ.ಸಿಯು ಪ್ರಮುಖವಾದ ಪಾತ್ರವನ್ನು ವಹಿಸಿದೆ. ಸೇತುಬಂಧ ಶಾಲೆಯನ್ನು ನಡೆಸಿ. ಮಕ್ಕಳ ಕಲಿಕೆಯನ್ನು ವಯಸ್ಸು ಹಾಗೂ ತರಗತಿಗೆ ತಕ್ಕಂತೆ ಕನಿಷ್ಠ ಕಲಿಕಾ ಹಂತವನ್ನು ತಲುಪಲು ಸಮುದಾಯವು ತನ್ನ ಪಾತ್ರವನ್ನು ವಹಿಸಿದ್ದು. ಅದರಲ್ಲೂಹೆಣ್ಣು ಮಕ್ಕಳನ್ನು ಮುಖ್ಯವಾಹಿನಿಗೆ ತರುವಲ್ಲಿ ಸಮುದಾಯ ಪಾಲ್ಗೊಳ್ಳುವಿಕೆಯು ವಿಶೇಷ ಮಾರ್ಗಗಳ ಮೂಲಕ ಗರಿಷ್ಠ ಪಾತ್ರವನ್ನು ವಹಿಸಿದೆ. ಈ ಅಂಶಗಳನ್ನು ವಿಶ್ಲೇಷಿಸಿದಾಗ ಮಕ್ಕಳ ಶೇಕಡ ನೂರರಷ್ಟು ದಾಖಲಾತಿ ಯಶಸ್ವಿಯಾಗಲು ಸಮುದಾಯವು ಪರಿಣಾಮಕಾರಿಯಾಗಿ ಮತ್ತು ದಕ್ಷವಾಗಿ ಕೆಲಸ ಮಾಡಿದರೆ ಸಾಧ್ಯ ಎನ್ನುವುದನ್ನು ಗುರುತಿಸಿದೆ.ಈ ಅಧ್ಯಯನವು ಮಕ್ಕಳು ಶಾಲೆಯಲ್ಲಿ ಉಳಿಯುವಿಕೆಗೆ ಸಮುದಾಯವು ಗಮನಾರ್ಹ ಪಾತ್ರವನ್ನು ವಹಿಸಿದ್ದು. ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯಿಂದ ನೀಡುವ ಮಕ್ಕಳ ಉತ್ತೇಜಕ ಸೌಲಭ್ಯಗಳನ್ನು ಹಾಗೂ ಇತರೆ ದಾನಿಗಳಿಂದ ಪಡೆದುಕೊಂಡು ಒಗ್ಗೂಡಿಸಿ ಅವುಗಳನ್ನು ಮಕ್ಕಳಿಗೆ ತಲುಪಿಸುವಲ್ಲಿ ಸಕ್ರೀಯ ಪಾತ್ರವನ್ನು ವಹಿಸಿದೆ ಇವುಗಳ ಬಗ್ಗೆ ಅನೇಕ ಸಂಕೇತಗಳನ್ನು ನೋಡಬಹುದು. ಆದರೆ ಮಕ್ಕಳ ಕಲಿಕೆಯಲ್ಲಿ ಹಾಗೂ ಶಾಲಾ ಭೌತಿಕ ಸೌಕರ್ಯಗಳ

ಗುಣಾತ್ಮಕತೆಯಲ್ಲಿ ಸಮುದಾಯ ಪಾಲ್ಗೊಳ್ಳುವಿಕೆಯ ಬಗ್ಗೆ ಸ್ಪಷ್ಟವಾದ ಸಂಕೇತಗಳು ಈ ಅಧ್ಯಯನದಲ್ಲಿ ಕಂಡುಬರುವುದಿಲ್ಲ. ಇದರಲ್ಲಿ ಸಮುದಾಯ ಅದರಲ್ಲೂ ಬಹಳ ಮುಖ್ಯವಾಗಿ ಎಸ್.ಡಿ.ಎಂ.ಸಿ ಸದಸ್ಯರಿಗೆ ಶಾಲಾ ಶಿಕ್ಷಣದ ಗುಣಾತ್ಮಕತೆಯ ಬಗ್ಗೆ ತರಬೇತಿಯ ಅವಶ್ಯಕತೆ ಇದೆ ಎಂಬುದನ್ನು ಈ ಅಧ್ಯಯನವು ಗುರುತಿಸಿದೆ. ಶಾಲಾ ಆಡಳಿತ ಹಾಗೂ ಮೇಲ್ವಿಚಾರಣೆಯ ಪಾತ್ರದಲ್ಲಿ ಗಮನಾರ್ಹ ಪ್ರಗತಿ ಕಾಣಬಹುದಾಗಿದ್ದು, ಶಿಕ್ಷಕರ ಹಾಜರಿ, ಸ್ಥಳೀಯ ರಜೆಗಳನ್ನು ನಿರ್ಣಹಿಸುವುದು, ದಾನಿಗಳನ್ನು ಗುರುತಿಸುವುದು ಹಾಗೂ ಸಂಪನ್ಮೂಲ ಕ್ರೋಢಿಕರಣದ ಲೆಕ್ಕಪರಿಶೋಧನೆ, ಆರೋಗ್ಯ ಶಿಬಿರಗಳನ್ನು ಆಯೋಜಿಸುವುದು, ಕ್ರೀಡಾ ಚಟುವಟಿಕೆಗಳ ಆಯೋಜನೆ ಇನ್ನೂ ಮುಂತಾದ ಕ್ಷೇತ್ರಗಳಲ್ಲಿ ಸಮುದಾಯವು ತನ್ನ ಪ್ರಮುಖವಾದ ಪಾತ್ರವನ್ನು ವಹಿಸಿವೆ ಎಂಬುದನ್ನು ಗುರುತಿಸಿದ್ದಾರೆ.

ಸುಂದರ ರೇನಾಜಿ., (೨೦೦೬), ಅವರ "ಸರ್ಕಾರಿ ಶಾಲೆಗಳಲ್ಲಿ ಮಕ್ಕಳ ಶಿಕ್ಷಣ: ಪೋಷಕರು ಎಡವಿರುವುದು ಎಲ್ಲಿ? ಎಂಬ ಲೇಖನದಲ್ಲಿ ತಮ್ಮ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ ನೀಡುವಾಗ ಪೋಷಕರು ಎಲ್ಲಿ ಎಡವಿದ್ದಾರೆ ಎಂಬುದನ್ನು ಚರ್ಚಿಸಿದ್ದಾರೆ. ವ್ಯಾಪಾರಿ ಘಟಕಗಳಂತೆ ತಲೆ ಎತ್ತಿ ಸ್ಪರ್ಧೆಗೆ ನಿಂತಿರುವ ಅನೇಕ ಸರ್ಕಾರೇತರ ಶಾಲೆಗಳು ಬಾಹ್ಯ ಆಡಂಬರದ ಮಂಚೂಣಿಯಲ್ಲಿರುವ ಶಾಲೆ, ಪೋಷಕರು ಗ್ರಾಮೀಣ ಪ್ರದೇಶದಲ್ಲಿರುವ ದೂರದ ಶಾಲೆಯನ್ನೆ ಆಯ್ಕೆ ಮಾಡುತ್ತಿರುವುದು, ತಮ್ಮ ಪ್ರತಿಷ್ಠೆಯ ವಿಚಾರ ಎಂದು ಭಾವಿಸುತ್ತಿದ್ದಾರೆ. ಮನೆಯ ಅಂಗಳದ ಬದಿಯಲ್ಲಿಯೇ ಇರುವ ಸರ್ಕಾರಿ ಶಾಲೆಗಳ ಬಗ್ಗೆ ಗಮನ ಕೊಡದೆ ಒಂದು ರೀತಿಯ ಅಸ್ಪೃಶ್ಯತೆಯಿಂದ ನೋಡುವ ಬೆಳವಣಿಗೆ ಆಘಾತಕಾರಿ ಎನಿಸುತ್ತದೆ ಎಂದಿದ್ದಾರೆ. ವಾಸ್ತವವಾಗಿ ಇಂದಿನ ಸರ್ಕಾರಿ ಶಾಲೆಗಳು, ಗುಣಾತ್ಮಕ ಶಿಕ್ಷಣದ ದೃಷ್ಟಿಯಿಂದ ಎಷ್ಟೊಂದು ಮುಂದುವರಿದಿದೆ ಎಂಬುವುದು ನಮ್ಮ ಸಮಾಜದ ಬಹುತೇಕರಿಗೆ ಇನ್ನೂ ಗೊತ್ತಿಲ್ಲ. ಪರೀಕ್ಷೆಗಾಗಿ ಕಂಠಪಾಠ ಮಾಡಿಸಿ ಅಂಕಗಿಟ್ಟಿಸುವ, ಇಂಗ್ಲೀಷ್ ಕಲಿಸುವ ಶಾಲೆಗಳು ಮಾತ್ರ ಶಾಲೆಗಳೆಂಬ ಪೂರ್ವಾಗ್ರಹಕ್ಕೆ ಸಿಲುಕಿರುವ ಕಾರಣ ಸರ್ಕಾರಿ ಶಾಲೆಯ ಮೌಲ್ಯಗಳು ಕಳೆಗುಂದುತ್ತಿವೆ. ಸರ್ಕಾರೇತರ ಶಾಲೆಗಳು ಬಾಹ್ಯ ಆಡಂಬರ ಹಾಗೂ ಆರ್ಥಿಕ ಭಾರಕ್ಕಾಗಿ ಜೀವನ ನಡೆಸುವ ನಮ್ಮ ಪೂರ್ವಬಂಧುಗಳು, ಅದರ ಶೇಕಡ ೨೨ ಭಾಗದಷ್ಟು ಗಮನವನ್ನು ಕಲಿಕೆಗೆ ಕೊಟ್ಟು, ತಮ್ಮ ಮಗುವನ್ನು ಹತ್ತಿರದ ಶಾಲೆಗೆ ಕಳುಹಿಸಿ, ನೆಮ್ಮದಿಯಿಂದ ಇರಬಹುದಲ್ಲವೇ? ಸರ್ಕಾರೇತರ ಶಾಲೆಗೆ ಕಳುಹಿಸುವ ಪೋಷಕರು ತೆಗೆದುಕೊಳ್ಳುವ ಶೈಕ್ಷಣಿಕ ಕಾಳಜಿಯನ್ನು ಇಲ್ಲಿ ಅಂದರೆ ಸರ್ಕಾರಿ ಶಾಲೆಗಳಲ್ಲಿ ತೆಗೆದುಕೊಂಡು ಅನಗತ್ಯ ಆರ್ಥಿಕ ನಷ್ಟ ಹಾಗೂ ಒತ್ತಡಗಳನ್ನು ತಪ್ಪಿಸಬಹುದಲ್ಲ? ಆದರೆ ತಮ್ಮ ಪ್ರತಿಷ್ಠೆಯನ್ನು ಮಾತ್ರ ಬಿಟ್ಟು ಬಿಡಬೇಕಾಗುತ್ತದೆ. ಶಿಕ್ಷಣ ವ್ಯವಸ್ಥೆಯಲ್ಲಿ ನಡೆಯುವ ಪ್ರತಿಷ್ಠೆಯ ಅಂಶವೇ ಒಂದು ಮಗುವಿನ ಭವಿಷ್ಯವನ್ನು ಬಲಿತೆಗೆದುಕೊಳ್ಳುವುದಾಗಿದೆ. ಗುಣಾತ್ಮಕ ಶಿಕ್ಷಣವನ್ನು ನೀಡುವಲ್ಲಿ ಸರ್ಕಾರಿ ಶಾಲೆಗಳಲ್ಲಿ ನಿಡುವ ವ್ಯವಸ್ಥೆಯ ಮುಂದೆ ಸರ್ಕಾರೇತರ ಶಾಲೆಗಳು ಎಂದೆಂದೂ ಸ್ಪರ್ಧಿಸಲಾರವು ಎಂದಿದ್ದಾರೆ.

ನಿರಂಜನಾರಾಧ್ಯ ವಿ.ಪಿ., (೨೦೦೬), "ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯ ಪಾಲ್ಗೊಳ್ಳುವಿಕೆ, ಹಿನ್ನಲೆ, ಅಭಿವೃದ್ಧಿ ಮತ್ತು ಸವಾಲು" ಎಂಬ ಲೇಖನವನ್ನು ಕನ್ನಡ ಹಂಪಿ ವಿಶ್ವ ವಿದ್ಯಾಲಯಯ ಅಭಿವೃದ್ಧಿ ಅಧ್ಯಯನ ವಿಭಾಗವು ೨೦೦೬ ರಲ್ಲಿ ಶಾಲಾ ಶಿಕ್ಷಣದ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಎಸ್.ಡಿ.ಎಂ.ಸಿಗಳಿಂದ ಆದ ಪರಿಣಾಮದ ಬಗ್ಗೆ ಸಂಘಟಿಸಿದ್ದ ಕಾರ್ಯಾಗಾರದಲ್ಲಿ ಸಂಶೋಧನಾ ಲೇಖನವನ್ನು ಮಂಡಿಸಿದ್ದರು. ಇದರಲ್ಲಿ ಪಂಚಾಯಿತಿಯ ಭಾಗವಾಗಿ ಶಾಲಾ ಶಿಕ್ಷಣದಲ್ಲಿ ಎಸ್.ಡಿ.ಎಂ.ಸಿ.ಯು ಸಮುದಾಯ ಭಾಗವಹಿಸುವಿಕೆಯನ್ನು ಬಲಪಡಿಸುವುದರ ಬಗ್ಗೆ ವಿಶೇಷ ಗಮನವನ್ನು ಹರಿಸಿದ್ದು, ಎಸ್.ಡಿ.ಎಂ.ಸಿಯ ರಚನೆಯ ಮೂಲಕ ಸಮುದಾಯ ಭಾಗವಹಿಸುವಿಕೆಯನ್ನು ತಿಳಿಸಿದೆ. ಈ ವರದಿಯ ಲೇಖಕರು ಸಮದಾಯ ಭಾಗವಹಿಸುವಿಕೆಗೆ ಇದು ದೇಶದಲ್ಲಿಯೇ ಮಾದರಿಯಾಗಿದೆ ಎಂದು ಪ್ರತಿಪಾದಿಸುತ್ತಾರೆ. ಈ ಅಧ್ಯಯನವು ಈ ಕೆಳಕಂಡ ಶಿಫಾರಸ್ಸುಗಳನ್ನು ನೀಡಿದೆ. ಅವುಗಳೆಂದರೆ, ಹೊಸದಾಗಿ ಜಾರಿಗೆ ಬಂದಿರುವ ಈ ಉಪವಿಧಿಗಳ ಬಗ್ಗೆ

ಸಮುದಾಯಕ್ಕೆ ಅದರಲ್ಲೂ ವಿಶೇಷವಾಗಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳಿಗೆ ಹಾಗೂ ತಂದೆ-ತಾಯಿಗಳಿಗೆ ಸಂಪೂರ್ಣ ಮಾಹಿತಿಯನ್ನು ನೀಡಬೇಕು. ಸಾರ್ವತ್ರಿಕ ಶಾಲಾ ಶಿಕ್ಷಣಕ್ಕಾಗಿ ಇರುವ ಕಾರ್ಯಕ್ರಮಗಳ ಬಗ್ಗೆ ಮಾಹಿತಿಯನ್ನು ತಿಳಿಸಬೇಕು. ಸಮುದಾಯ ಭಾಗವಹಿಸುವಿಕೆ ಕಡಿಮೆ ಇರಲು ಕಾರಣವೆಂದರೆ ಮಾಹಿತಿ ಕೊರತೆ, ಈಗಾಗಿ ಅಗತ್ಯವಾದ ಪೂರ್ಣ ಮಾಹಿತಿಯು ಅಭಿವೃದ್ಧಿಗೆ ಸಲಕರಣೆಯಾಗಿದ್ದು, ಇಂತಹ ಮಾಹಿತಿಗಳನ್ನು ಅಗತ್ಯವಾಗಿ ನೀಡಬೇಕು. ಎಲ್ಲಾ ಎಸ್.ಡಿ.ಎಂ.ಸಿ ಸದಸ್ಯರುಗಳಿಗೆ ಪೂರ್ಣಪ್ರಮಾಣದಲ್ಲಿ ಪರಿಣಾಮಕಾರಿಯಾಗಿ ಹಾಗೂ ಅರ್ಥಪೂರ್ಣ ತರಬೇತಿಯನ್ನು ನೀಡಬೇಕು. ಎಸ್.ಡಿ.ಎಂ.ಸಿ ಎಲ್ಲಾ ಚಟುವಟಿಕೆಗಳು ಎಲ್ಲರಿಗೂ ಗೊತ್ತಾಗುವ ರೀತಿಯಲ್ಲಿ ಮತ್ತು ಪಾರದರ್ಶಕವಾಗಿ ಹಾಗೂ ಉತ್ತರದಾಯಿತ್ವದಿಂದ ಕೂಡಿರಬೇಕು.

ಎಂ. ನಂಜುಂಡಸ್ವಾಮಿ., (೨೦೦೭), ಅವರ "ಗ್ರಾಮೀಣ ಪ್ರದೇಶದಲ್ಲಿನ ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು" ಎಂಬ ಲೇಖನದಲ್ಲಿ ಸಮಾಜದ ಎಲ್ಲಾ ವರ್ಗದ ಮಕ್ಕಳಿಗೆ ಉಚಿತ ಕಡ್ಡಾಯ ಪ್ರಾಥಮಿಕ ಶಿಕ್ಷಣ ಒದಗಿಸುವ ಜವಾಬ್ದಾರಿಯನ್ನು ಸರ್ಕಾರ ಪೂರ್ಣಗೊಳಿಸಬೇಕಾಗಿದೆ. ಗ್ರಾಮೀಣ ಪ್ರದೇಶದ ಶೈಕ್ಷಣಿಕ ಪ್ರಗತಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸಮನ್ವಯ ಶಿಕ್ಷಣದ ನೀತಿ ರೂಪಿಸಿ ಪಂಚವಾರ್ಷಿಕ ಯೋಜನೆಗಳಲ್ಲಿ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು. ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಲು ಪಠ್ಯಕ್ರಮ, ಬೋಧನಾ ಕ್ರಮ ಮತ್ತು ಶಿಕ್ಷಣ ಸಾಧ್ಯ ಸಲಕರಣೆಗಳನ್ನು ಪೂರೈಸಲು ಸರ್ಕಾರ, ಶಿಕ್ಷಕರು, ಪೋಷಕರು ಇಡೀ ಸಮಾಜವೇ ಶ್ರಮಿಸಬೇಕು. ಮಧ್ಯದಲ್ಲಿಯೇ ಶಾಲೆಯನ್ನು ಬಿಡುವ ಮಕ್ಕಳ ಸಂಖ್ಯೆಯನ್ನು ಕಡಿಮೆಗೊಳಿಸಲು ಸಮುದಾಯ ಸಹಭಾಗಿತ್ವ ಸೂಕ್ತವೆನಿಸುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿರುವ ಬಡತನ, ಅಸಮಾನತೆ, ನಿರುದ್ಯೋಗ, ಅನಕ್ಷರತೆ, ಜಾತಿಯತೆ ಇವುಗಳನ್ನು ಹೋಗಲಾಡಿಸುವಂತಹ ಪ್ರಯತ್ನವನ್ನು ವ್ಯಕ್ತಿ, ಸಂಘ-ಸಂಸ್ಥೆಗಳು, ಸರ್ಕಾರ ಮತ್ತು ಸಮಾಜವು ಜಂಟಿಯಾಗಿ ಮಾಡಬೇಕಾಗಿದೆ. ಆಗ ಮಾತ್ರ ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಶಿಕ್ಷಣದ ಸುಧಾರಣೆಯಾಗಲು ಸಾಧ್ಯ ಎಂಬ ಆಶಯವನ್ನು ವ್ಯಕ್ತಪಡಿಸಿದ್ದಾರೆ.

ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಕನ್ಸಲ್ಟೇಷನ್ ಕಾರ್ಯಗಾರ, ಕಲೆಕ್ಟಿವ್ ಬೈ ಸರ್ವ ಶಿಕ್ಷಣ ಅಭಿಯಾನ ಮತ್ತು ಪ್ರಜಾಯತ್ನ ೨೦೦೬-೦೭ ಎಂಬ ವಿಷಯದಲ್ಲಿ ಪ್ರಜಾಯತ್ನ ಕರ್ನಾಟಕ ಮತ್ತು ಸರ್ವ ಶಿಕ್ಷಣ ಅಭಿಯಾನ ಹೊಸ ದೆಹಲಿ. ಜಂಟಿಯಾಗಿ ನಡೆಸಿದ ಕಾರ್ಯಾಗಾರದಲ್ಲಿ ಗ್ರಾಮ ಪಂಚಾಯಿತಿ ಮಟ್ಟದ ಎಸ್.ಡಿ.ಎಂ.ಸಿ ಸದಸ್ಯರು, ಮುಖ್ಯ ಶಿಕ್ಷಕರು, ನಾಗರೀಕ ಸೌಕರ್ಯ ಸಮಿತಿಯ ಸದಸ್ಯರು, ಸಮೂಹ ಸಂಪನ್ಮೂಲ ವ್ಯಕ್ತಿಗಳು, ಮತ್ತು ಅಂಗನವಾಡಿ ಮೇಲ್ವಿಚಾರಕರು ಭಾಗವಹಿಸಿದ್ದರು. ಒಟ್ಟು ೨೦೬೨ ಶಾಲೆಗಳು, ೨೧೭೬ ಶಿಕ್ಷಕರು, ೧೧೪೪೭ ಎಸ್.ಡಿ.ಎಂ.ಸಿ ಸದಸ್ಯರು, ೯೬೮ ನಾಗರೀಕ ಸೌಕರ್ಯ ಸಮಿತಿ ಸದಸ್ಯರು ಭಾಗವಹಿಸಿ, ವಿವಿಧ ಶೈಕ್ಷಣಿಕ ಸಮಸ್ಯೆಗಳನ್ನು ಚರ್ಚಿಸಿದರು, ಇದರಲ್ಲಿ ಮಕ್ಕಳ ಕಲಿಕಾ ವಿಧಾನ, ಮೂಲಭೂತ ಸೌಕರ್ಯ, ಮಕ್ಕಳ ದಾಖಲಾತಿ ಮತ್ತು ಹಾಜರಾತಿ, ಶಿಕ್ಷಕರ ಸಮಸ್ಯೆ ಮುಂತಾದವುಗಳು ಚರ್ಚೆಗೆ ಬಂದವು. ಇದರಲ್ಲಿ ಶಾಲಾ ಸಮಿತಿ ಮತ್ತು ನಾಗರೀಕ ಸೌಕರ್ಯ ಸಮಿತಿಯು ಜಂಟಿಯಾಗಿ ಕ್ರಿಯಾ ಯೋಜನೆಯನ್ನು ಮಾಡಬೇಕು ಎಂಬುದರ ಬಗ್ಗೆ ತಿಳಿಸುತ್ತಾ ಕರ್ನಾಟಕ ರಾಜ್ಯದ ಎಸ್.ಡಿ.ಎಂ.ಸಿಗಳನ್ನು ಬಲಪಡಿಸಲು ಈ ಕೆಳಕಂಡ ಶಿಫಾರಸ್ಸುಗಳನ್ನು ನೀಡಲಾಯಿತು. ಅವುಗಳೆಂದರೆ ಎಸ್.ಡಿ.ಎಂ.ಸಿ ಅಧ್ಯಕ್ಷರು ಪ್ರಜಾಪ್ರಭುತ್ವ ಮಾದರಿಗೆ ಹೆಚ್ಚು ಒತ್ತು ಕೊಟ್ಟು ಕೆಲಸ ನಿರ್ವಹಿಸಬೇಕು. ಒಂಬತ್ತು ಸದಸ್ಯರಿಗೂ ಸಮಾನ ಅವಕಾಶಗಳನ್ನು ನೀಡಬೇಕು. ಶಾಲಾ ಅನುದಾನವನ್ನು ಉತ್ತಮವಾಗಿ ಬಳಕೆಮಾಡಲು ಪ್ರತಿನಿಧಿಗಳು ಸಭೆ ಸೇರಿ ಯೋಜನೆ ಮಾಡಬೇಕು. ಶಾಲಾ ಸಮಿತಿ ಮತ್ತು ಸಮುದಾಯದ ನಡುವೆ ಯಾವುದೇ ಸಂಬಂಧ ಕಾಣಿಸುತ್ತಿಲ್ಲವಾದ ಕಾರಣ ಕಾಲ ಕಾಲಕ್ಕೆ ತಂದೆ-ತಾಯಿ ಪರಿಷತ್ತು ಸಭೆಗಳನ್ನು ನಡೆಸಬೇಕು ಇದರಲ್ಲಿ ಶಾಲೆಯ ವೆಚ್ಚದ ವರದಿ, ಮಕ್ಕಳ ಕಲಿಕಾ ಕೌಶಲ್ಯ, ಶಾಲೆಗೆ ಮಕ್ಕಳ ಹಾಜರಾತಿ ಮತ್ತು ಇತರೆ ಸಮಸ್ಯೆಗಳ ಬಗ್ಗೆ ಚರ್ಚಿಸಬೇಕು. ಮಕ್ಕಳ ಕಲಿಕೆಯ ವಿಧಾನ ಹಾಗೂ ಮಕ್ಕಳ ಗೈರು

ಹಾಜರಿಯ ಬಗ್ಗೆ ಶಾಲಾ ಸಮಿತಿ, ಸಮೂಹ ಸಂಪನ್ಮೂಲ ವ್ಯಕ್ತಿ ಹಾಗೂ ಶಾಲಾ ಶಿಕ್ಷಕರು ಹೆಚ್ಚು ಗಮನವನ್ನು ನೀಡಬೇಕು. ಶಾಲೆಗೆ ನೀಡುವ ನಿಧಿ ಮತ್ತು ಅದಕ್ಕೆ ಬೇಕಾದ ಹಣವನ್ನು ಶಾಲೆ ಪ್ರಾರಂಭದಲ್ಲಿಯೇ ನೀಡಬೇಕು. ಮಕ್ಕಳ ವಿಧ್ಯಾರ್ಥಿ ವೇತನ ಮತ್ತು ಶಿಕ್ಷಕರ ವೇತನ ಸಕಾಲದಲ್ಲಿ ಬರಬೇಕು ಎಂಬುದನ್ನು ವರಧಿಯಲ್ಲಿ ತಿಳಿಸಲಾಗಿದೆ.

ರಾಮಚಂದ್ರನ್., (೧೯೯೬), ಅವರ "ಆನ್ ಕೇರಳ ಡೆವಲಪ್‌ಮೆಂಟ್ ಅಚೀವ್‌ಮೆಂಟ್ಸ್ ಇನ್ ಡ್ರೀಚ್ ಆ್ಯಂಡ್ ಅಮರ್ತ್ಯಸೇನ್" (ಎಡಿಟ್ಸ್) ಇಂಡಿಯನ್ ಡೆವಲಪ್‌ಮೆಂಟ್ ಸೆಲೆಕ್ಟ್ ರೀಜಿನಲ್ ಪ್ರಾಸ್‌ಪೆಕ್ಟೀವ್ಸ್" ಎಂಬ ಕೃತಿಯಲ್ಲಿ ಶಿಕ್ಷಣದ ಮಹತ್ವವನ್ನು ಕುರಿತು ಹೇಳಿದ್ದಾರೆ. ಶೈಕ್ಷಣಿಕ ಪ್ರಗತಿ ಮತ್ತು ಸಾಮಾಜಿಕ ಬದಲಾವಣೆಗಳ ನಡುವೆ ಅನೇಕ ಸಂಬಂಧವಿರುವುದನ್ನು ಇವರು ತಮ್ಮ ಅಧ್ಯಯನದಲ್ಲಿ ಕೇರಳದ ಉದಾಹರಣೆಗಳ ಜೊತೆಗೆ ದೃಢೀಕರಿಸಿದ್ದಾರೆ. ವ್ಯಕ್ತಿಯ ಸ್ವ-ಪ್ರತಿಷ್ಠೆ, ಸ್ವ-ರಕ್ಷಣೆಗೆ ಸಾಕ್ಷರತೆ ಮೂಲ ಸಾಧನ ಎಂದಿದ್ದಾರೆ. ಅಕ್ಷರ ಜ್ಞಾನವು ಸಂಪ್ರದಾಯ ಮತ್ತು ಜಾತಿ ಧರ್ಮ ಬೇಧಗಳ ಸಂಕೋಲೆಗಳಿಂದ ಹೊರ ಬರಲು ನೆರವಾಗುತ್ತದೆ. ಸಮಾಜದಲ್ಲಿಯ ಸಾಂಪ್ರದಾಯಿಕ ನಂಬಿಕೆಗಳನ್ನು ಹೋಗಲಾಡಿಸಬೇಕಾದರೆ ಶಿಕ್ಷಣವು ಅತ್ಯಂತ ಪ್ರಮುಖ ಎಂದು ವಾದಿಸಿದ್ದಾರೆ.

ಪ್ರೋಬ್., (೧೯೯೮), ಅವರ "ಪಬ್ಲಿಕ್ ರಿಪೋರ್ಟ್ ಆನ್ ಬೇಸಿಕ್ ಎಜುಕೇಷನ್" ಎಂಬ ವರದಿಯಲ್ಲಿ ಅಕ್ಷರ ಕಲಿಯದ ಪಾಲಕರು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ಕೊಡುವುದಿಲ್ಲವೆಂದು ಸಾಮಾನ್ಯ ನಂಬಿಕೆ ಇದೆ. ಮಾಧ್ಯಮಗಳಲ್ಲೂ ಈ ರೀತಿಯ ವರದಿಗಳಿವೆ. ಇದಕ್ಕೆ ವಿರುದ್ಧವಾಗಿ ಪಾಲಕರು ತಮ್ಮ ಮಕ್ಕಳ ವಿದ್ಯಾಭ್ಯಾಸದ ಬಗೆಗೆ ವಿಶೇಷ ಆಸಕ್ತಿ ವಹಿಸುತ್ತಾರೆ ಎಂಬುದು ಪ್ರೋಬ್ ಅಧ್ಯಯನದಿಂದ ಸಾಬಿತಾಗಿದೆ. ವಾಸ್ತವವಾಗಿ ಶೇಕಡ ೮೦ರಷ್ಟು ಪಾಲಕರು ಎಲ್ಲಾ ಮಕ್ಕಳಿಗೆ ಶಿಕ್ಷಣ ಕಡ್ಡಾಯವಾಗಿರಬೇಕೆಂದು ಅಭಿಪ್ರಾಯ ಪಟ್ಟಿದ್ದಾರೆ. ಶೇಕಡ ೯೮ ರಷ್ಟು ಪಾಲಕರು ಗಂಡು ಮಕ್ಕಳು ಶಾಲೆ ಕಲಿಯಲು, ಶೇಕಡ ೮೯ ರಷ್ಟು ಪಾಲಕರು ಹೆಣ್ಣು ಮಕ್ಕಳು ಶಾಲೆ ಕಲಿಯಲು ಆಧ್ಯತೆ ನೀಡಿದ್ದಾರೆ. ಆದರೆ ಕೆಲವೆ ಕೆಲವು ಪಾಲಕರು ಮಾತ್ರ ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸ ಬೇಕಿಲ್ಲವೆಂದಿದ್ದಾರೆ. ಇನ್ನು ಕೆಲವು ಪೋಷಕರು ಶಿಕ್ಷಣವಿದ್ದರೆ ಮಾತ್ರ ಸಮಾಜದಲ್ಲಿ ಮುಂದುವರಿಯಲು ಸಾಧ್ಯ ಎಂದು ಹೇಳುವುದನ್ನು ಪ್ರೊಬ್ ಅಧ್ಯಯನ ತಂಡ ಗುರುತಿಸಿದೆ.

ಉನಚಿಗಿರವರ.,(೨೦೦೭), "ಶಾಲಾ ಶಿಕ್ಷಣದ ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಎಸ್.ಡಿ.ಎಂ.ಸಿಗಳ ಅಧ್ಯಯನ-ಬೆಂಗಳೂರು ನಗರ ಜಿಲ್ಲೆ. ಜೂನ್ ೨೦೦೭ ರ ಅಧ್ಯಯನವನ್ನು ರೂಟ್ಸ್ (ಆರ್‌ಡಿಸಿಎಸ್)ರವರು ಕೈಗೊಂಡಿದ್ದು. ಇದರ ಸಹಯೋಗವನ್ನು ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆ ಬೆಂಗಳೂರು ವಹಿಸಿಕೊಂಡಿತ್ತು. ಈ ಅಧ್ಯಯನದ ವರದಿಯಂತೆ ಬೆಂಗಳೂರು ಉತ್ತರ ಜಿಲ್ಲೆ ಹಾಗೂ ದಕ್ಷಿಣ ಜಿಲ್ಲೆಯ ೫೮ ಶಾಲೆಯ ೯ ಕ್ಲಸ್ಟರ್‌ಗಳಲ್ಲಿ ಸಮೀಕ್ಷೆ ನಡೆಸಲಾಯಿತು. ಈ ಸಮೀಕ್ಷೆಯು ೪೩೪ ಶಿಕ್ಷಕರು ಮತ್ತು ೫೫೫ ಎಸ್.ಡಿ.ಎಂ.ಸಿ ಸದಸ್ಯರುಗಳನ್ನು ಒಳಗೊಂಡಿತ್ತು. ಈ ಅಧ್ಯಯನವು ಮುಖ್ಯವಾಗಿ ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಎಸ್.ಡಿ.ಎಂ.ಸಿ ಪಾಲ್ಗೊಳ್ಳುವಿಕೆಯ ವಿವಿಧ ಹಂತಗಳನ್ನು ಅರ್ಥಮಾಡಿಕೊಳ್ಳುವುದಾಗಿತ್ತು. ಈ ಅಧ್ಯಯನದಲ್ಲಿ ಗುರುತಿಸಿದ ಪ್ರಮುಖ ಅಂಶಗಳೆಂದರೆ ಅಧ್ಯಯನದ ಒಟ್ಟು ೫೮ ಶಾಲೆಗಳಲ್ಲಿ ೪೨ ಶಾಲೆಗಳು ಕೆ.ಎಸ್.ಕ್ಯೂ.ಎ.ಓ. ಗೆ ಒಳಗೊಂಡಿದ್ದು. ಶೇಕಡ ೩೧ ರಷ್ಟು ಶಾಲೆಗಳು ಕಲಿಕೆಯಲ್ಲಿ ಸಾಧರಣಾ ಮಟ್ಟದಲ್ಲಿದ್ದು, ಅಂದರೆ ಶೇಕಡಾ ೪೦ ಗಿಂತಲೂ ಕಡಿಮೆ ಮಟ್ಟವನ್ನು ಹೊಂದಿವೆ. ಒಟ್ಟಾರೆ ೫೭ ಶಾಲೆಗಳಲ್ಲಿ ಸರಾಸರಿ ಕಲಿಕಾ ಮಟ್ಟವನ್ನು ಅಂದರೆ ೫೦ ರಷ್ಟು ಕಡಿಮೆ ಕಲಿಕಾ ಮಟ್ಟವನ್ನು ಹೊಂದಿರುವ ಶಾಲೆಗಳಾಗಿವೆ. ಶೇಕಡಾ ೩೦ ರಷ್ಟು ಎಸ್.ಡಿ.ಎಂ.ಸಿ ಸದಸ್ಯರಿಗೆ ಅವರ ಕರ್ತವ್ಯ ಮತ್ತು ಜವಾಬ್ದಾರಿಗಳ ಬಗ್ಗೆ ತರಬೇತಿ ಹೊಂದಿದ್ದರು, ಅದರ ಸ್ಪಷ್ಟವಾದ ಅರಿವು ಇರುವುದಿಲ್ಲ, ಆಗಾಗಿ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಯು ಇತರೆ ಬೇರೆ ವಿಧಾನಗಳನ್ನು ಕಂಡುಕೊಂಡು ಎಸ್.ಡಿ.ಎಂ.ಸಿ ಸದಸ್ಯರಿಗೆ ತರಬೇತಿಯನ್ನು ನೀಡಬೇಕು. ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ಮಾಸಿಕ

ಸಭೆ ನಡೆಸಲು ಎಸ್.ಡಿ.ಎಂ.ಸಿ ಚುನಾಯಿತ ಪ್ರತಿನಿಧಿಗಳನ್ನು ಸಂಪರ್ಕಿಸಿ ದಿನಾಂಕ ಗೊತ್ತುಪಡಿಸಬೇಕು. ಆದರೆ ಹೆಚ್ಚಿನ ಸಂದರ್ಭಗಳಲ್ಲಿ ಶಿಕ್ಷಕರೆ ತಮ್ಮ ಅನುಕೂಲಕ್ಕೆ ತಕ್ಕಂತೆ ಸಭೆಯ ದಿನಾಂಕವನ್ನು ನಿಗಧಿಗೊಳಿಸುತ್ತಿದ್ದು. ಸಭೆಯನ್ನು ನಡೆಸಲಾಗುತ್ತಿದೆ ಎಂದು ಅಧ್ಯಯನವು ಗುರುತಿಸಿದೆ. ೪೩೪ ಶಿಕ್ಷಕರ ಪ್ರಕಾರ ಶಾಲಾ ಚಟುವಟಿಕೆಗಳಲ್ಲಿ ಮತ್ತು ಸಭೆಗಳಲ್ಲಿ ಎಸ್.ಡಿ.ಎಂ.ಸಿ ಸದಸ್ಯರು ೧೯.೩ ರಷ್ಟು ಮಾತ್ರ ಪರಿಣಾಮಕಾರಿಯಾಗಿ ಭಾಗವಹಿಸುತ್ತಿದ್ದಾರೆ ಎಂಬುದನ್ನು ಇದು ತಿಳಿಸುತ್ತದೆ.

ಥೇಕ್‌ಡತ್ ಕೆ.ಕೆ., (೧೯೯೮), ಅವರ "ಶತಮಾನದ ಅಂಚಿನಲ್ಲಿ ಶಿಕ್ಷಣ" ಎನ್ನುವ ಗ್ರಂಥದಲ್ಲಿ ಶಾಲೆಗೆ ಹೋಗುವ ಮಕ್ಕಳ ಕುಟುಂಬದ ಆರ್ಥಿಕ ಸ್ಥಿತಿಗೂ ಮತ್ತು ಶೈಕ್ಷಣಿಕ ಹಿಂದುಳಿದಿರುವಿಕೆಗೂ ಅನ್ಯೋನ್ಯ ಸಂಬಂಧವಿದೆ ಎಂದು ಥೇಕ್‌ಡೆತ್ ಗುರುತಿಸಿದ್ದಾರೆ. ಮುಂಬೈನ ಮಹಾನಗರ ಪಾಲಿಕೆ ಶಾಲೆಗಳಿಗೆ ಹೋಗುವ ಮಕ್ಕಳ ಅಪೌಷ್ಟಿಕತೆ ಹಾಗೂ ಅದಕ್ಕೆ ಸಂಬಂಧಿಸಿದ ಕಾಯಿಲೆಗಳ ಬಗ್ಗೆ ಕೆಲವು ಮಾಹಿತಿಗಳನ್ನು ವಿವರಿಸಿದ್ದಾರೆ. ಪ್ರಾಥಮಿಕ ಶಾಲೆಗಳಿಗೆ ಹೋಗುವ ಶೇಕಡ ೩.೦೫ ಲಕ್ಷ ವಿದ್ಯಾರ್ಥಿಗಳನ್ನು ಪರೀಕ್ಷಿಸಿದ ವೈದ್ಯರು ಅಪೌಷ್ಟಿಕತೆ ಮತ್ತು ನಿರ್ಲಕ್ಷಕ್ಕೆ ಸಂಬಂಧಿಸಿದಂತೆ ಸುಮಾರು ಮಕ್ಕಳು ಅನಾರೋಗ್ಯಕ್ಕೆ ಒಳಗಾಗಿದ್ದಾರೆ. ಇವರಲ್ಲಿ ಶೇಕಡ ೨೬.೭೬ರಷ್ಟು ಮಕ್ಕಳು ಅನ್ನಾಂಗಗಳ ಕೊರತೆ ಇದ್ದರೆ ಶೇಕಡ ೫ ರಷ್ಟು ಮಕ್ಕಳು ರಕ್ತ ಹೀನತೆಯಿಂದ ಬಳಲುತಿದ್ದಾರೆ. ಶೇಕಡ ೫೯ ರಷ್ಟು ಮಕ್ಕಳಲ್ಲಿ ಹಲ್ಲಿನ ದೋಷ ಕಂಡು ಬಂದಿದೆ. ಈ ಮಕ್ಕಳನ್ನು ಏಪ್ರಿಲ್ ೧೯೯೬ ಮತ್ತು ಮಾರ್ಚ್ ೧೯೯೭ರ ನಡುವೆ ಬೃಹತ್ ಮುಂಬೈ ಮುನಿಸಿಪಲ್ ಕಾರ್ಪೊರೇಷನ್ (ಬಿ.ಎಂ.ಸಿ) ವೈದ್ಯಕೀಯ ಅಧಿಕಾರಿಗಳು ಪರೀಕ್ಷಿಸಿದ್ದರು ಎಂದು ಹೇಳಿದ್ದಾರೆ. ಅಧ್ಯಯನಕಾರರು ವಿಶೇಷವಾಗಿ ಬಡತನಕ್ಕೂ, ಮಕ್ಕಳ ಆರೋಗ್ಯಕ್ಕೂ ಮತ್ತು ಮಕ್ಕಳ ಶಾಲಾ ಭಾಗವಹಿಸುವಿಕೆಗೂ ಯಾವ ರೀತಿ ಸಹ ಸಂಬಂಧವಿದೆ ಎಂಬುದನ್ನು ಬಿಡಿಸಿ ಹೇಳಿದ್ದಾರೆ.

ಟಿ.ಆರ್.ಚಂದ್ರಶೇಖರ್., (೨೦೦೩), ಅವರು "ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು" ಎಂಬ ಕೃತಿಯಲ್ಲಿ ಮೂರು ಭಾಗಗಳಿವೆ. ಇದರಲ್ಲಿ ಲೇಖಕರು ಅಭಿವೃದ್ಧಿಯನ್ನು ಸಾಮಾಜಿಕ ನೆಲೆಯಲ್ಲಿ ಅನಾವರಣಗೊಳಿಸಲು ಪ್ರಯತ್ನಿಸಿದ್ದಾರೆ. ಅಭಿವೃದ್ಧಿಗೆ ಸಂಬಂಧಿಸಿದಂತೆ ಕರ್ನಾಟಕದ ಸಾಧನೆಗಳನ್ನು ಭಿನ್ನ ರೀತಿಯಲ್ಲಿ ವಿವರಿಸುತ್ತಾ " ಹಿಂದುಳಿದ ಜಿಲ್ಲೆಗಳಲ್ಲಿ ಶಿಕ್ಷಣ ಕಾಯಕಲ್ಪ" ಎಂಬ ಅಧ್ಯಯನದಲ್ಲಿ ಬಿಜಾಪುರ, ಬಾಗಲಕೋಟೆ, ಬಳ್ಳಾರಿ, ಬೀದರ್, ಗುಲ್ಬರ್ಗ, ರಾಯಚೂರು ಮತ್ತು ಕೊಪ್ಪಳ ಈ ಜಿಲ್ಲೆಗಳನ್ನು ಅತ್ಯಂತ ಹಿಂದುಳಿದ ಜಿಲ್ಲೆಗಳೆಂದು ಗುರುತಿಸಲಾಗಿದೆ. ಇದನ್ನು ಮಾನವ ಅಭಿವೃದ್ಧಿ ವರದಿ ಮತ್ತು ಜನಗಣತಿ ವರದಿ ಸ್ಪಷ್ಟಪಡಿಸಿದೆ. ವರಮಾನ ಸಾಕ್ಷರತೆಯ ನೆಲೆಯಿಂದ ನೋಡಿದರೆ, ಸದರಿ ಏಳು ಜಿಲ್ಲೆಗಳ ಸಾಕ್ಷರತೆ ಸಾಪೇಕ್ಷಿತ ಸ್ಥಾನಮಾನ ಉಳಿದ ಜಿಲ್ಲೆಗಳ ಸ್ಥಾನಮಾನಕ್ಕಿಂತ ಕೆಳಮಟ್ಟದಲ್ಲಿರುವುದು ಸ್ಪಷ್ಟಪಡಿಸಲಾಗಿದೆ. ಈ ಮೂಲಕ ಲೇಖಕರು ಹಿಂದುಳಿದ ಜಿಲ್ಲೆಗಳ ಅಭಿವೃದ್ಧಿ ಸ್ಥಿತಿಗತಿಗಳನ್ನು ಚರ್ಚಿಸಲು ಪ್ರಯತ್ನಿಸಿದ್ದಾರೆ. ಶಾಲೆಗೆ ಸೇರಿದ ಮಕ್ಕಳ ಪ್ರಮಾಣದ ಪ್ರಾದೇಶಿಕ ಸ್ವರೂಪವು ತುಂಬ ಕುತೂಹಲಕಾರಿಯಾಗಿದೆ ಎಂದಿದ್ದಾರೆ. ರಾಜ್ಯದ ಒಟ್ಟು ೬ ರಿಂದ ೧೪ ವಯೋಮಾನದ ಮಕ್ಕಳಲ್ಲಿ ಏಳು ಹಿಂದುಳಿದ ಜಿಲ್ಲೆಗಳ ಪಾಲು ಶೇಕಡ ೫೫.೬೭. ರಾಜ್ಯದಲ್ಲಿನ ಒಟ್ಟು ಶಾಲೆಗೆ ಸೇರಿದ ಮಕ್ಕಳಲ್ಲಿ ಅರ್ದಕ್ಕಿಂತ ಅಧಿಕ ಮಕ್ಕಳು ಹಿಂದುಳಿದ ಏಳು ಜಿಲ್ಲೆಗಳಲ್ಲಿ ಮಡುಗಟ್ಟಿಕೊಂಡಿರುವುದು ತಿಳಿದು ಬರುತ್ತದೆ ಎಂಬ ಆತಂಕವನ್ನು ವ್ಯಕ್ತಪಡಿಸಿದ್ದಾರೆ. ಯಾವ ದೇಶ ಪ್ರದೇಶದಲ್ಲಿ ೦–೬ರ ವಯೋಮಾನದ ಎಳೆಯ ಮಕ್ಕಳ ಪ್ರಮಾಣವು ಶೇಕಡ ೧೦ ಕ್ಕಿಂತ ಅಧಿಕವಾಗಿರುತ್ತದೆಯೋ ಅಲ್ಲಿ ಜನಸಂಖ್ಯೆಯ ಬೆಳವಣಿಗೆ ತೀವ್ರವಾಗಿರುತ್ತದೆ ಮತ್ತು ಅದರ ಒತ್ತಡ ಅಗಾಧವಾಗಿರುತ್ತದೆ ಎಂದು ತಿಳಿಸಿದ್ದಾರೆ.

ಅನಿತಾ ಕೆ., (೧೯೯೭), ಮೈಸೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ಅಪ್ರಕಟಿತ ಪಿ.ಎಚ್‌ಡಿ ಮಹಾಪ್ರಬಂಧವಾದ "ಎಜುಕೇಷನ್ ಫ್ಲಾನಿಂಗ್ ಫಾರ್ ಸ್ಕೂಲ್ ಎಜುಕೇಶನ್ : ಎ ಸ್ಟಡಿ ಫಾರ್ ತ್ರಿ ಡಿಸ್ಟ್ರಿಕ್ಟ್ ಇನ್ ಕರ್ನಾಟಕ" ಎಂಬುದರಲ್ಲಿ ೭೦ ಮತ್ತು ೮೦ರ ದಶಕದಲ್ಲಿ ಉಂಟಾದ ಸಾಕ್ಷರತಾ ಬದಲಾವಣೆಯನ್ನು

ವಿವರವಾಗಿ ಚರ್ಚೆಗೆ ಒಳಪಡಿಸಿದ್ದಾರೆ. ಇವರು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಾಕ್ಷರತೆಯಲ್ಲಿ ಕಂಡುಬಂದಿರುವ ಬದಲಾವಣೆಗಳನ್ನು ಮತ್ತು ಶಾಲಾಭಿವೃದ್ಧಿ ಯೋಜನೆಗಳು ಹೇಗೆ ಜಾರಿಗೆ ಬಂದಿವೆ ಎಂಬುದನ್ನು ಕೂಡ ತಮ್ಮ ಮಹಾಪ್ರಬಂಧದಲ್ಲಿ ವಿವರಿಸಿದ್ದಾರೆ.

ವಿ.ಪಿ.ನಿರಂಜನಾರಾಧ್ಯ., (೨೦೦೪), ಅವರ "ಶಾಲೆಗಳು ರಾಜಕೀಯ ಪಕ್ಷಗಳ ಶಾಖಾ ಕಛೇರಿಗಳಾಗಬೇಕೆ? ಎನ್ನುವ ಲೇಖನದಲ್ಲಿ ಶಿಕ್ಷಣವು ಮಾನವ ಹಕ್ಕು. ಇದನ್ನು ಯಾರು ಕಿತ್ತುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ವಿಶ್ಲೇಷಿಸುತ್ತಾ, ಶಾಲೆಗಳಲ್ಲಿ ಪಕ್ಷ ರಾಜಕೀಯವನ್ನು ಹುಟ್ಟು ಹಾಕುವ ಮೂಲಕ ಸಾರ್ವತ್ರೀಕರಣ ಪ್ರಕ್ರಿಯೆಯನ್ನು ಮೊಟಕುಗೊಳಿಸಿ, ಪ್ರಜಾಪ್ರಭುತ್ವಕ್ಕೆ ತಿಲಾಂಜಲಿ ಇಟ್ಟು, ಸರ್ವಾಧಿಕಾರಿ ವ್ಯವಸ್ಥೆಗೆ ಬುನಾದಿ ಹಾಕಿ, ತನ್ನದೇ ಆದ ಓಟ್ ಬ್ಯಾಂಕ್ ಒಂದನ್ನು ಸೃಷ್ಟಿಸಿಕೊಳ್ಳುವ ಹುನ್ನಾರ ನಡೆದಿದೆ. ಪ್ರಜಾಸತ್ತೆಯ ಉಳಿವಿಗಾಗಿ ಹೋರಾಡಬೇಕಾದ ಅನಿವಾರ್ಯತೆ ಬಂದಿದೆ. ಶಾಲೆಗಳನ್ನು ಪಕ್ಷ ರಾಜಕೀಯದಿಂದ ದೂರ ಉಳಿಸಬೇಕಾದ ಈ ಹೋರಾಟದಲ್ಲಿ ಎಲ್ಲ ಪ್ರಗತಿಪರ ಶಕ್ತಿಗಳ ಬೆಂಬಲ ನಿರ್ಮಾಣವಾಗಿ,ಶಾಲೆಗಳು ಕಲಿಕೆಯ ಪ್ರಾಥಮಿಕ ಕೇಂದ್ರಗಳಾಗಿ ಉಳಿಯಬೇಕೆ ಹೊರತು ಯಾವುದೇ ರಾಜಕೀಯ ಪಕ್ಷಗಳ ಶಾಖಾ ಕಛೇರಿಗಳಾಗಬಾರದು ಎಂಬುದನ್ನು ಸ್ಪಷ್ಟಪಡಿಸಿದ್ದಾರೆ.

ಸರ್ವ ಶಿಕ್ಷಣ ಅಭಿಯಾನ ಕರ್ನಾಟಕ ರಾಜ್ಯ ಹೊರ ತಂದಿರುವ ಪಬ್ಲೀಕೇಷನ್‌ನಲ್ಲಿ ಎಸ್.ಡಿ.ಎಂ.ಸಿ ಮತ್ತುಎಸ್.ಡಿ.ಎಂ.ಸಿ ಮತ್ತು ಪಂಚಾಯಿತಿ ನಡುವಿನ ಸಂಬಂಧದ ಕುರಿತಾಗಿ ಸತತವಾಗಿ ಪ್ರಶ್ನೆಗಳನ್ನು ಕೇಳಲಾಗಿದೆ. ಅವುಗಳೆಂದರೆ ಎಸ್.ಡಿ.ಎಂ.ಸಿಗಳಲ್ಲಿಯಾವ ಯಾವ ಸದಸ್ಯರು ಇರಬೇಕು, ಇವರಿಗೆ ಇರಬೇಕಾದ ಅರ್ಹತೆ, ಎಸ್.ಡಿ.ಎಂ.ಸಿಯ ಕರ್ತವ್ಯ ಮತ್ತು ಜವಾಬ್ದಾರಿಗಳೇನು, ನಾಗರೀಕ ಸೌಲಭ್ಯ ಸಮಿತಿಯ ಪಾತ್ರ, ಹಣಕಾಸಿನ ನಿರ್ವಹಣೆ, ಶಿಸ್ತು ಕ್ರಮ ಇತ್ಯಾದಿಗಳ ಬಗ್ಗೆಕೇಳಲಾಗಿದೆ.

ಶಿವರಾಜ ಬಿ.ಕೆ ವಿಠೋಬ ಭೀಮಣ್ಣ., (೨೦೦೫), ಅವರ "ಶಿಕ್ಷಣ ಮತ್ತು ಪ್ರಾದೇಶಿಕ ಅಸಮತೋಲನ" ಎಂಬ ಲೇಖನದಲ್ಲಿ ಪ್ರಮುಖವಾಗಿ ಶಿಕ್ಷಣವನ್ನು ನಿರ್ಧರಿಸುವ ಅಂಶಗಳಾದ ಶಿಕ್ಷಣ ಪ್ರಮಾಣ, ಶಾಲೆಗಳ ಸಂಖ್ಯೆ, ಶಿಕ್ಷಕರ ಸಂಖ್ಯೆ, ಶಾಲೆಬಿಟ್ಟ ಮಕ್ಕಳ ಸಂಖ್ಯೆ ಇವುಗಳನ್ನು ಆಧರಿಸಿ, ಆಯಾ ಪ್ರದೇಶಕ್ಕೆ ಅನುಗುಣವಾಗಿ ಹೊಂದಿರುವ ಅಸಮಾನತೆಯನ್ನು ವಿವಿಧ ದತ್ತಾಂಶಗಳ ಮೂಲಕ ವಿವರಿಸಿದ್ದಾರೆ. ಎಲ್ಲಾ ರಂಗದಲ್ಲೂ ಪ್ರಾದೇಶಿಕ ಅಸಮಾನತೆ ಎದ್ದು ಕಂಡಂತೆ ಶಿಕ್ಷಣದಲ್ಲಿಯೂ ಪ್ರಾದೇಶಿಕ ಅಸಮಾನತೆ ಕಂಡುಬರುತ್ತದೆ. ಸಾಕ್ಷರತೆ ಪ್ರಮಾಣವನ್ನು ವಿಭಾಗವಾರು ನೋಡಿದಾಗ ಗುಲ್ಬರ್ಗದಲ್ಲಿ ಪ್ರತಿಶತ ೫೦.೬೮ ರಷ್ಟಿದೆ. ಬೆಂಗಳೂರಿನಲ್ಲಿ ಪ್ರತಿಶತ ೮೩.೯೧ ರಷ್ಟಿದೆ. ಸಾಕ್ಷರತೆಯ ಪ್ರಮಾಣವು ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದೆ. ಇದಕ್ಕೆ ಹಲವಾರು ಕಾರಣಗಳನ್ನು ಗುರುತಿಸಿದ್ದಾರೆ. ಸಾಮಾಜಿಕ, ಆರ್ಥಿಕ, ನೈಸರ್ಗಿಕ ಮತ್ತು ರಾಜಕೀಯ ಕಾರಣಗಳು ಬಹುಮುಖ್ಯವಾದವು ಎಂದಿದ್ದಾರೆ. ಇವುಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಅಸಮರ್ಪಕ ಹಂಚಿಕೆ, ದೋಷ ಪೂರಿತ ಆರ್ಥಿಕ ನೀತಿ, ದಕ್ಷ ಆಡಳಿತದ ಕೊರತೆ, ಬಂಡವಾಳ ಕೊರತೆ, ಜಾತಿ ವ್ಯವಸ್ಥೆ, ಅಸಮರ್ಪಕ ಆರ್ಥಿಕ ಯೋಜನೆಗಳು, ಬಡತನ ಇನ್ನೂ ಮುಂತಾದ ಕಾರಣಗಳನ್ನು ಗುರುತಿಸಿದ್ದಾರೆ. ಸರ್ಕಾರಿ ಮತ್ತು ಸರ್ಕಾರೇತರ ಸಂಘ–ಸಂಸ್ಥೆಗಳು ಪ್ರಾಥಮಿಕ ಶಿಕ್ಷಣದ ಪ್ರಗತಿಗಾಗಿ ಹಾಕಿಕೊಂಡ ಯೋಜನೆಗಳು ವಿಫಲವಾಗುತ್ತವೆ. ಇದಕ್ಕೆ ಆಡಳಿತ ಯಂತ್ರದ ಕೊರತೆ ಇರಬಹುದು. ಅಥವ ರಾಜಕೀಯ ಪ್ರಭಾವಗಳಂತಹ ಹಲವಾರು ಕಾರಣಗಳಿವೆ. ಈ ಎಲ್ಲಾ ಕಾರಣಗಳನ್ನು ಬಗೆಹರಿಸುವ ನಿಟ್ಟಿನಲ್ಲಿ ಸರ್ಕಾರ ಮತ್ತು ಆಡಳಿತ ವರ್ಗ ರಾಜ್ಯದಲ್ಲಿ ಶೈಕ್ಷಣಿಕವಾಗಿ ಹಿಂದುಳಿದ ಪ್ರದೇಶಗಳತ್ತ ಹೆಚ್ಚು ಗಮನಹರಿಸಬೇಕು. ಇಲ್ಲದಿದ್ದರೆ ಶೈಕ್ಷಣಿಕ ಸೌಲಭ್ಯದಿಂದ ವಂಚಿತವಾದ ಜಿಲ್ಲೆಗಳು ಹಿಂದುಳಿಯುತ್ತಲೆ ಹೋಗುತ್ತದೆ. ಸೌಲಭ್ಯಗಳು ಪಡೆದುಕೊಂಡ ಜಿಲ್ಲೆಗಳು ಹಾಗೆಯೇ ಮುಂದುವರಿಯುತ್ತವೆ, ಇಲ್ಲದಿದ್ದರೆ ಅಭಿವದ್ಧಿಯಲ್ಲಿ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲ ಎಂದು ವಾದಿಸುತ್ತಾರೆ.

ಭಾರತೀಯ ಜ್ಞಾನ ವಿಜ್ಞಾನ ಸಮಿತಿ., (೨೦೦೮), ಮಂಡ್ಯ ಜಿಲ್ಲೆಯಲ್ಲಿ ಜಿಲ್ಲಾ ಶಿಕ್ಷಣ ತರಬೇತಿ ಸಂಸ್ಥೆಗೂಡಿ ಎಸ್.ಡಿ.ಎಂ.ಸಿ ಬಗ್ಗೆ ೨೦೦೮ – ೦೯ ರಲ್ಲಿ ಅಧ್ಯಯನ ಮಾಡಿ ವರದಿ ನೀಡಿದ್ದು. ಈ ಅಧ್ಯಯನದಲ್ಲಿ ೨ ಗ್ರಾಮ ಪಂಚಾಯಿತಿ ವ್ಯಾಪ್ತಿಯ ೧೦ ಶಾಲೆಯನ್ನು ಆಯ್ಕೆ ಗೊಳಿಸಿ, ಪ್ರತಿ ಶಾಲೆಯ ಅಧ್ಯಯನ ತಂಡವು ಸಭೆ ನಡೆಸಿ ಪ್ರತಿ ತಂಡವು ಒಂದೇ ಮಾದರಿಯ ವರದಿಯನ್ನು ಸಲ್ಲಿಸಲು ತೀರ್ಮಾನಿಸಿ, ಪಂಚಾಯಿತಿ ಮಟ್ಟದಲ್ಲಿ ಗ್ರಾಮ ಪಂಚಾಯತಿಯ ನಾಗರೀಕ ಸೌಕರ್ಯ ಸಮಿತಿಯ ಸಭೆ ನಡೆಸಿ ಸಮಸ್ಯೆಗಳನ್ನು ಚರ್ಚಿಸಲಾಯಿತು. ಈ ಅಧ್ಯಯನದ ಉದ್ದೇಶವೆಂದರೆ ಎಸ್.ಡಿ.ಎಂ.ಸಿಯ ಮೂಲಕ ಶಾಲೆಯ ಅಭಿವೃದ್ಧಿಯ ಬಗ್ಗೆ ಪರೀಶಿಲಿಸುವುದಾಗಿತ್ತು. ಹಾಗೂ ಅಧ್ಯಯನವು ಎಸ್.ಡಿ.ಎಂ.ಸಿ ಮತ್ತು ನಾಗರೀಕ ಸೌಕರ್ಯ ಸಮಿತಿಯ ನಡುವೆ ಈಗಿರುವ ಸಂಬಂಧ ಹಾಗೂ ಸಂಬಂಧಗಳನ್ನು ಬಲಪಡಿಸಲು ಮಾಡಬೇಕಾದ ವಿಧಾನಗಳನ್ನು ನೋಡಲಾಯಿತು. ಸಾರ್ವತ್ರಿಕ ಶಾಲಾ ಶಿಕ್ಷಣದಲ್ಲಿ ಎಸ್.ಡಿ.ಎಂ.ಸಿಯ ಪಾತ್ರದ ಬಗ್ಗೆ ಅಧ್ಯಯನ ನಡೆಸಲಾಯಿತು. ಈ ಅಧ್ಯಯನದ ಕೆಲವು ಶಿಪಾರಸ್ಸುಗಳು ಈ ಕೆಳಕಂಡಂತೆ ಇದ್ದು, ಅವುಗಳೆಂದರೆ ಸಾರ್ವಜನಿಕ ಶಿಕ್ಷಣ ಇಲಾಖೆಯು ನೀಡುತ್ತಿರುವ ಎಸ್.ಡಿ.ಎಂ.ಸಿ ತರಬೇತಿಯನ್ನು ಒಂದು ದಿನದಿಂದ ೩ ದಿನಕ್ಕೆ ವಿಸ್ತರಿಸಬೇಕು. ಪಂಚಾಯಿತಿ ಮಟ್ಟದಲ್ಲಿ ನಡೆಸುತ್ತಿರುವ ತರಬೇತಿ ಕಾರ್ಯಾಗಾರದಲ್ಲಿ ಹಾಜರಾತಿ ಕಡಿಮೆ ಇರುವುದರಿಂದ ಶಾಲಾ ಮಟ್ಟದಲ್ಲಿ ನಡೆಸಬೇಕು. ಶಾಲೆಗೆ ಭೇಟಿ ನೀಡಿದವರಿಗೆ ಶಿಕ್ಷಕರು ಬೋಧನಾ ವಿಧಾನವನ್ನು ತಿಳಿಸಬೇಕು. ಜೊತೆಗೆ ಎಸ್.ಡಿ.ಎಂ.ಸಿ ಕರ್ತವ್ಯ ಹಾಗೂ ಜವಬ್ದಾರಿಯ ಬಗ್ಗೆಯೂ ತಿಳಿಸಬೇಕು. ಇವುಗಳಿಂದ ಶಾಲೆಗೆ ಭೇಟಿ ನೀಡಿ ಶಾಲೆಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು ಹೆಚ್ಚಾಗುತ್ತದೆ. ವಾರ್ಷಿಕವಾಗಿ ಒಂದು ಬಾರಿ ಎಸ್.ಡಿ.ಎಂ.ಸಿ ಮೇಳವನ್ನು ಮಾಡುವುದು ಹಾಗೂ ಇದರಲ್ಲಿ ಪ್ರತಿ ಶಾಲೆಯ ವಾರ್ಷಿಕ ವರದಿಯನ್ನು ಮಂಡಿಸಬೇಕು. ಪಂಚಾಯಿತಿ ಹಂತದ ಶಿಕ್ಷಣ ಹಬ್ಬವನ್ನು ಮಾಡಿ ಚರ್ಚೆಗಳು, ಕ್ರೀಡಾ ಚಟುವಟಿಕೆ ಮುಂತಾದವುಗಳನ್ನು ಹಮ್ಮಿಕೊಂಡು ಸಾರ್ವಜನಿಕರ ಗಮನವನ್ನು ಸೆಳೆಯುವುದು. ಎಸ್.ಡಿ.ಎಂ.ಸಿಗೆ ಸಭೆ ಸೇರುವ ಸಮಯವನ್ನು ನಿಗಧಿ ಮಾಡಲು ಅವರಿಗೆ ಅವಕಾಶ ನೀಡಬೇಕು ಅಂದರೆ ಶಾಲೆ ಮುಗಿದ ನಂತರ ರಜಾ ದಿನಗಳಲ್ಲೂ ಕೂಡ ಮುಖ್ಯ ಶಿಕ್ಷಕರು ಇಂತಹ ಸಭೆಗಳಿಗೆ ಸಮಯವನ್ನು ಹೊಂದಿಸಿಕೊಳ್ಳಬೇಕು. ಎಸ್.ಡಿ.ಎಂ.ಸಿಯು ಶಾಲೆಯ ಎಲ್ಲಾ ವೆಚ್ಚಗಳನ್ನು ಸೂಚನಾ ಫಲಕದಲ್ಲಿ ಪ್ರಕಟಿಸಿ ಪಾರದರ್ಶಕತೆಯನ್ನು ತರಬೇಕು. ಪ್ರತಿ ಎಸ್.ಡಿ.ಎಂ.ಸಿ ಸಭೆಯಲ್ಲೂ ಈ ಹಣಕಾಸಿನ ವಿಚಾರಗಳನ್ನು ಮಂಡಿಸಬೇಕು ಹಾಗೂ ಶಾಲೆಯ ಬೇರೆ ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಉಪಸಮಿತಿಗಳನ್ನು ರಚಿಸಬೇಕು. ಆ ಮೂಲಕ ಶಿಕ್ಷಕರ ಹೆಚ್ಚುವರಿ ಕೆಲಸವನ್ನು ತಗ್ಗಿಸಿಬೇಕು. ಶಾಲೆಗಳು ಕೋರಂ ಇಲ್ಲದೆ ನಡೆಸಿದ ಎಸ್.ಡಿ.ಎಂ.ಸಿ ಸಭೆಗಳಿಗೆ ಯಾವುದೇ ಮಾನ್ಯತೆ ನೀಡಬಾರದು ಹಾಗೂ ಕೋರಂ ಇರುವಂತೆ ನೋಡಿಕೊಳ್ಳುವ ತತ್ವಗಳನ್ನು ಶಾಲೆಗಳು ಅಳವಡಿಸಿಕೊಳ್ಳುವುದು ಹಾಗೂ ಎಸ್.ಡಿ.ಎಂ.ಸಿ ಸಭೆಗಳಲ್ಲಿ ಪ್ರಜಾಪ್ರಭುತ್ವ ಮಾದರಿಯನ್ನು ಅನುಸರಿಸಬೇಕು ಎಂದು ಈ ಅಧ್ಯಯನವು ಶಿಫಾರಸ್ಸು ಮಾಡಿದೆ.

ಎಸ್.ಆರ್ ರೊಹಿತೇಕರ್, ಅವರ "ಪಂಚಾಯತ್ ರಾಜ್ ಮತ್ತು ಪ್ರಾಥಮಿಕ ಶಿಕ್ಷಣ" ಎಂಬ ಲೇಖನದಲ್ಲಿ ಸಮುದಾಯವು ಮಾನವ ನಿರ್ಮಿತಿಗೆ ಅಡಿಗಲ್ಲು. ಮಾನವ ಸಂಪನ್ಮೂಲ ಅಭಿವೃದ್ಧಿಯಾಗಬೇಕಾದರೆ, ತನ್ನದೇ ಆದ ಯೋಜನೆಗಳನ್ನು ರೂಪಿಸಿಕೊಳ್ಳಬೇಕು. ವೈಜ್ಞಾನಿಕವಾಗಿ ನಮ್ಮ ಗುರಿಯನ್ನು ಪೂರೈಸಿಕೊಳ್ಳುವ ವಿಧಾನವೇ ಯೋಜನಾ ಬದ್ಧ ಕಾರ್ಯಕ್ರಮ. ಯೋಜನೆಯನ್ನು ಸಿದ್ಧಗೊಳಿಸುವುದು ಮತ್ತು ಅನುಷ್ಠಾನಗೊಳಿಸುವುದು ಸಮುದಾಯ ಈ ಹಿನ್ನಲೆಯಲ್ಲಿ ವಿಕೇಂದ್ರೀಕರಣವು ಮಹತ್ವದ ಪಾತ್ರ ವಹಿಸುತ್ತದೆ ಎಂಬುದನ್ನು ತಿಳಿಸುತ್ತಾ, ರಾಜಕೀಯ, ಆರ್ಥಿಕ ಮತ್ತು ಶೈಕ್ಷಣಿಕವಾಗಿ ರಾಷ್ಟ್ರವನ್ನು ಮಾನವೀಯ ಮೌಲ್ಯಗಳ ತಳಹದಿಯ ಮೇಲೆ ಪುನಃ ರಚಿಸಲು ಗ್ರಾಮ ಸಮುದಾಯಗಳ ರಚನೆಯೊಂದೆ ರಾಜಮಾರ್ಗ ಎಂದಿದ್ದಾರೆ.

ವಿ.ಪಿ.ನಿರಂಜನನಾರಾಧ್ಯ..(೨೦೦೪), "ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಕಾರ್ಯವೈಖರಿಯ ಅಧ್ಯಯನ" ಇದನ್ನು ನೀತಿ ಯೋಜನಾ ಘಟಕವು ಕರ್ನಾಟಕ ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಅಜೀಂ ಪ್ರೇಮ್‌ಜಿ ಪ್ರತಿಷ್ಠಾನ ಹಾಗೂ ಮಗು ಮತ್ತು ಕಾನೂನು ಕೇಂದ್ರ ಭಾರತ ವಿಶ್ವವಿದ್ಯಾಲಯ ರಾಷ್ಟ್ರೀಯ ಕಾನೂನು ಶಾಲೆ ಜಂಟಿ ಪ್ರಯತ್ನವಾಗಿ ೨೦೦೧ನೇ ಸಾಲಿನಲ್ಲಿ ಪ್ರಾರಂಭವಾದ ಎಸ್.ಡಿ.ಎಂ.ಸಿಗಳು ೨೦೦೪ ನೇ ವರ್ಷದ ವೇಳೆಗೆ ೩ ವರ್ಷಗಳ ಕಾಲಾವಧಿಯನ್ನು ಪೂರೈಸಿದ ಹಿನ್ನಲೆಯಲ್ಲಿ ಶಾಲಾ ಪ್ರಕ್ರಿಯೆಯಲ್ಲಿ ಸಮುದಾಯದ ಪರಿಣಾಮಕಾರಿ ಭಾಗವಹಿಸುವಿಕೆಯನ್ನು ಅರಿಯಲು ಅಧ್ಯಯನವನ್ನು ಮಾಡಿ ಅನೇಕ ಶಿಫಾರಸ್ಸುಗಳನ್ನು ಮಾಡಿವೆ. ಈ ಅಧ್ಯಯನಗಳನ್ನು ರಾಜ್ಯದ ಎಸ್.ಡಿ.ಎಂ.ಸಿ ಬಗ್ಗೆ ವಿವಿಧ ದೃಷ್ಠಿಕೋನಗಳಲ್ಲಿ ಪರೀಕ್ಷಿಸಲು ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ನಡೆಸಲಾಯಿತು. ಆದರೆ ಇವೆಲ್ಲವೂಗಳು ೨೦೦೪ ವರ್ಷಗಳೊಳಗಿನ ಎಸ್.ಡಿ.ಎಂ.ಸಿಗಳ ಕಾರ್ಯವೈಖರಿಯನ್ನು ಮಾತ್ರ ಒಳಗೊಂಡಿದೆ.

ಮಂಗಳೂರು ಜಿಲ್ಲೆ ಹಾಗೂ ಉಡುಪಿ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸರ್ಕಾರೇತರ ಸಂಘಟನೆಯಾದ ವೆಲೋರೆಡ್ ಸಂಸ್ಥೆಯು ಎಸ್.ಡಿ.ಎಂ.ಸಿ ಕಾರ್ಯಚಟುವಟಿಕೆಯ ಬಗ್ಗೆ ವರದಿಯನ್ನು ೨೦೦೪ರಲ್ಲಿ ಹೊರತಂದಿದ್ದು, ಈ ವರದಿಯಲ್ಲಿ ಎಸ್.ಡಿ.ಎಂ.ಸಿ ರಚನೆಯ ಪ್ರಕ್ರಿಯೆ ಹಾಗೂ ಎಸ್.ಡಿ.ಎಂ.ಸಿಯಲ್ಲಿ ಚುನಾಯಿತ ಪ್ರತಿನಿಧಿಗಳ ಪಾಲ್ಗೊಳ್ಳುವಿಕೆಯ ಬಗ್ಗೆ ಅಧ್ಯಯನ ನಡೆಸಲಾಗಿದ್ದು, ಇದರಲ್ಲೂ ವಿಶೇಷವಾಗಿ ಶಾಲಾಭಿವೃದ್ಧಿ ಮತ್ತು ಮೇಲ್ವಿಚಾರಣೆಯಲ್ಲಿ ಮಹಿಳಾ ಎಸ್.ಡಿ.ಎಂ.ಸಿ ಸದಸ್ಯರ ಪಾತ್ರದ ಬಗ್ಗೆ ಕುರಿತಾಗಿದೆ. ಈ ವರದಿಯು ಈ ಕೆಳಕಂಡ ಪ್ರಮುಖವಾದ ಶಿಫಾರಸ್ಸುಗಳನ್ನು ನೀಡಿದ್ದು ಅವುಗಳೆಂದರೆ,

ಎಸ್.ಡಿ.ಎಂ.ಸಿ ರಚನೆ ಹಾಗೂ ನಿರ್ಧಾರದ ಪ್ರಕ್ರಿಯೆಯಲ್ಲಿ ಚುನಾಯಿತ ಪ್ರತಿನಿಧಿಗಳ ಹಸ್ತಕ್ಷೇಪಸಲ್ಲದು. ಶಾಲಾ ಅಭಿವೃದ್ಧಿಯ ಕಾರ್ಯವು, ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ ಸದಸ್ಯರ ನಡುವಿನ ಸಮನ್ವಯತೆಯಿಂದ ನಡೆಯಬೇಕು. ಶಾಲೆಯ ಮೌಲ್ಯಮಾಪನ ಹಾಗೂ ಶಿಕ್ಷಣಕ್ಕಾಗಿ ಸ್ಪಷ್ಟವಾದ ಮಾಹಿತಿಗಳನ್ನು ಪಾಲಕರಿಗೆ ನೀಡಬೇಕು ಎಂಬುದನ್ನು ತಿಳಿಸುತ್ತಾ, ಈ ಅಧ್ಯಯನದಲ್ಲಿ ಕೆಲವು ಕೊರತೆಗಳನ್ನು ಗುರುತಿಸಿದೆ. ಶಾಲಾ ಗುಣಾತ್ಮಕ ಕಲಿಕೆಗಿಂತ ಭೌತಿಕ ಸೌಕರ್ಯಕ್ಕೆ ಎಸ್.ಡಿ.ಎಂ.ಸಿಯು ಹೆಚ್ಚು ಒತ್ತು ನೀಡಿರುವುದು ಕಂಡು ಬಂದಿದೆ ಎನ್ನುವುದರ ಹೊರತಾಗಿ ಮಕ್ಕಳ ಶಾಲಾ ದಾಖಲಾತಿ ಹಾಗೂ ಹಾಜರಾತಿಯಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದು, ಎಸ್.ಡಿ.ಎಂ.ಸಿಗಳಿಗೆ ತರಬೇತಿಯನ್ನು ನೀಡುವಾಗ ಕಲಿಕೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ತರಬೇತಿಯನ್ನು ನೀಡಬೇಕು ಎಂಬ ಅಂಶವನ್ನು ತಿಳಿಸಿದೆ.

ಬಂಡೋಪಾಧ್ಯಾಯ.. (೨೦೦೬), ರಾಷ್ಟ್ರದ ಪ್ರತಿಯೊಂದು ಮಗುವೂ ಶಾಲೆಯಲ್ಲಿರುವಂತೆ ಮಾಡುವುದರ ಮೂಲಕ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಯಶಸ್ವಿಗಾಗಿ ಎಲ್ಲಾ ಮಕ್ಕಳಿಗೆ ಶಾಲಾ ಸೌಲಭ್ಯಗಳನ್ನು ವಿಸ್ತರಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಲೇ ಬಂದಿವೆ. ಆದರೂ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಕುರಿತು ವಿವಿಧ ಪ್ರದೇಶ, ಸಮುದಾಯ, ಜಾತಿ, ವರ್ಗ ಮತ್ತು ಲಿಂಗವಾರು ಭಿನ್ನತೆಗಳು ಉಳಿದುಕೊಂಡಿರುತ್ತವೆ. ಜೊತೆಗೆ ಶಿಕ್ಷಣದ ಗುಣಮಟ್ಟದಲ್ಲಿಯೂ ಕೊರತೆಗಳು ಕಂಡುಬರುತ್ತಿವೆ. ಇದರಿಂದಾಗಿ ರಾಷ್ಟ್ರಮಟ್ಟದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿ ಸಾಧನೆಗಾಗಿ ಪ್ರಾಮಾಣಿಕವಾದ ಪ್ರಯತ್ನಗಳನ್ನು ಮಾಡುವ ಅಗತ್ಯವಿರುತ್ತದೆ. ಈ ನಿಟ್ಟಿನಲ್ಲಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು, ಸರ್ಕಾರೇತರ ಸಂಘ-ಸಂಸ್ಥೆಗಳು, ಶಿಕ್ಷಣ ತಜ್ಞರು, ಸಮಾಜ ವಿಜ್ಞಾನಿಗಳು, ಜನಪ್ರತಿನಿಧಿಗಳು, ಶಿಕ್ಷಕರು, ಪೋಷಕರು, ಸಾರ್ವಜನಿಕರು ಸೇರಿಕೊಂಡು ಇಡೀ ಸಾಮಾಜಿಕ ವ್ಯವಸ್ಥೆಯೇ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ಗುರಿ ಸಾಧನೆಗೆ ಅಮೂಲಾಗ್ರವಾಗಿ ಶ್ರಮಿಸುವುದು ಸಾಮಾಜಿಕ ಆದ್ಯತೆ ಎನಿಸುತ್ತದೆ. ಈ ರೀತಿಯಾದ ಪ್ರಯತ್ನಗಳ ಫಲವಾಗಿ ದೀರ್ಘಾವಧಿಯಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಮತ್ತು ಅಭಿವೃದ್ಧಿ ಸಾಧ್ಯ ಎಂದು ಲೇಖಕರು ವಾದಿಸುತ್ತಾರೆ.

ಶಿಕ್ಷಣ ರೂಪಾಂತರ ವಿವಿಧ ಶಿಕ್ಷಣ ತಜ್ಞರ ಲೇಖನಗಳು., (೨೦೦೮), ರಾಷ್ಟ್ರೀಯ ಉನ್ನತ ಸಂಸ್ಥೆ, ನವ ಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್. ಬೆಂಗಳೂರು, ಇವರು ಉತ್ತಮ ಗುಣಮಟ್ಟದ ಪ್ರಾಥಮಿಕ ಶಿಕ್ಷಣದ ಮುಖ್ಯ ಅಂಶಗಳನ್ನು ತಿಳಿಸಿಕೊಡುವ ಉದ್ದೇಶದಿಂದ ಲೇಖನ ಮತ್ತು ಪ್ರಬಂದಗಳ ಸಂಕಲನವನ್ನು ಮಾಡಲಾಗಿದೆ. ಈ ಸಂಕಲನವನ್ನು ವಿಷಯಗಳಿಗನುಗುಣವಾಗಿ ಮೂರು ಭಾಗಗಳಾಗಿ ವಿಂಗಡಿಸಲಾಗಿದೆ. ಭಾಗ ಒಂದು ಶಿಶುಕೇಂದ್ರಿತ ಶಿಕ್ಷಣದ ಭಾಗದಲ್ಲಿ ಶಿಶು ಕೇಂದ್ರಿತ ವಿಷಯಗಳನ್ನು ಒಳಗೊಂಡಿದ್ದು ತಾತ್ವಿಕ ಮತ್ತು ಮನೋವೈಜ್ಞಾನಿಕ ರೀತಿಯ ವಿವರಣೆ ನೀಡುತ್ತದೆ. ಅದು ಶಿಕ್ಷಕರ ಕಾರ್ಯದ ಮೇಲೆ ಮತ್ತು ಒಂದು ಸಂಸ್ಥೆಯಾಗಿ ಶಾಲೆಯ ಕಣ್ಣೋಟವನ್ನು ಒದಗಿಸುತ್ತದೆ. ಶಿಶುಕೇಂದ್ರಿತ ಶಿಕ್ಷಣವು ೧೯೯೦ರ ದಶಕದ ನಂತರ ಭಾರತೀಯ ಶಿಕ್ಷಣ ಪದ್ಧತಿಯೊಳಕ್ಕೆ ಪ್ರವೇಶಿಸಿದ ಅತ್ಯಂತ ಮುಖ್ಯವಾದ ಪರಿಕಲ್ಪನೆಗಳಲ್ಲೊಂದಾಗಿದೆ. ಪ್ರಾಥಮಿಕ ಶಿಕ್ಷಣದ ಸುಧಾರಣೆಗೋಸ್ಕರವಾದ ಅನೇಕ ಮುಖ್ಯ ಹಾಗೂ ಭಾರಿ ಪ್ರಮಾಣದ ಪ್ರಯತ್ನಗಳು ಆಗಿವೆ. ಇದನ್ನು ಕೇಂದ್ರ ವಿಚಾರವಾಗಿ ಬಳಸಿಕೊಂಡಿವೆ. ಜೇನ್ ಸಾಹಿಯವರ ಪ್ರಬಂಧ ಮತ್ತು ಶಿಶು ಸಂಪನ್ಮೂಲ ಕೇಂದ್ರದ ಒಂದು ಪ್ರಬಂಧ, ಕಲಿಕೆಯಲ್ಲಿ ಶಿಶುಕೇಂದ್ರದ ಪರಿಕಲ್ಪನೆ ಮತ್ತು ಪರಿಣಾಮಗಳನ್ನು ಶೋಧಿಸುತ್ತವೆ. ಜಾನ್ ಬ್ಲಾಕೀ ಮತ್ತು ಪದ್ಮ ಸಾರಂಗಪಾಣಿ ಅವರ ಪ್ರಬಂಧಗಳು ಶಿಶು ಕೇಂದ್ರಿತ ಶಿಕ್ಷಣಕ್ಕೆ ಆಧಾರವಾಗಿರುವ ಮನೋವೈಜ್ಞಾನಿಕ ಸಿದ್ಧಾಂತಗಳನ್ನು ಪರಿಶೀಲಿಸುತ್ತವೆ. ಈ ವಿಷಯದಲ್ಲಿ ಮುಖ್ಯವಾಗಿರುವ ಪಿಯಾಜೆ ಸಿದ್ಧಾಂತವನ್ನು ವಿವರವಾಗಿ ಪರಿಶೀಲಿಸುತ್ತವೆ. ಪ್ರೇರಣೆ ಕುರಿತ ಎರಡು ಪ್ರಬಂಧಗಳ ಪೈಕಿ ಪಾಲ್‌ಟಶರ್ ಅವರ ಲೇಖನವು ಕಲಿಕೆಯಲ್ಲಿ ತರಗತಿ ಕೋಣೆಯ ಸಫಲತೆ ಮತ್ತು ವಿಫಲತೆ ಹಾಗೂ ಪರಿಣಾಮಗಳನ್ನು ಅರಿತುಕೊಳ್ಳಲು ಪ್ರೇರಣಾತ್ಮಕತೆಯ ಪರಿಕಲ್ಪನೆಯ ಸಿದ್ಧಾಂತವನ್ನು ವಿವರಣಾತ್ಮಕವಾಗಿ ಪರಿಶೀಲಿಸುತ್ತದೆ. ತರಗತಿ ಕೋಣೆಯಲ್ಲಿ ಶಿಕ್ಷಕನ ಪಾತ್ರ ಕುರಿತ ದೊರೋಥಿ ಜಿ.ಸ್ಕೀಲ್ ಹಾಗೂ ಜೋಸೆಫ್ ಜಿ. ಡೆಕರೋ ಅವರ ಮತ್ತು ತಾವು ಕಲಿತದ್ದನ್ನು ಮೌಲ್ಯ ಮಾಪನ ಮಾಡುವ ಕುರಿತ ಜಾನ್ ಎಲ್ಲೀ ಆವರ ಪ್ರಬಂಧಗಳು ಶಿಕ್ಷಣದ ಅಂಶವನ್ನು ಪರಿಶೀಲಿಸುತ್ತವೆ. ತಮ್ಮ ಶಿಕ್ಷಣದಲ್ಲಿ ಶಿಶು ಕೇಂದ್ರಿತ ಶಿಕ್ಷಣವನ್ನು ಅಪೇಕ್ಷಿಸುವ ಶಿಕ್ಷಕರು ಏನು ಮಾಡಬೇಕೆಂಬುದನ್ನು ಸಲಹೆ ಮಾಡುತ್ತವೆ.

ಭಾಗ ಎರಡರಲ್ಲಿ ಪಾಠಕ್ರಮದಲ್ಲಿ ಮತ್ತು ಶಿಕ್ಷಣಶಾಸ್ತ್ರದಲ್ಲಿ ಹೊಸ ಬದಲಾವಣೆಗಳು ಎಂಬ ಭಾಗದಲ್ಲಿ ಸೇರಿರುವ ಪ್ರಬಂಧಗಳು, ಭಾರತದಲ್ಲಿ ಪಾಠಕ್ರಮ ಮತ್ತು ಶಿಕ್ಷಣಶಾಸ್ತ್ರದಲ್ಲಿ ಮುಖ್ಯವಾದ ಸಂಗ್ರಹವಾಗಿವೆ. ಅವು ಭಾರತೀಯ ಶಿಕ್ಷಣ ಪದ್ಧತಿಯಲ್ಲಿ ಅತ್ಯಂತ ಮುಖ್ಯವಾದ ಪ್ರಯೋಗಗಳನ್ನು-ಪ್ರಗತ್ ಶಿಕ್ಷಣ ಸಂಸ್ಥೆಯ ಓದುವ ಕಾರ್ಯಕ್ರಮ, ಶಿಕ್ಷಣದಲ್ಲಿ ಕಲೆ ಮತ್ತು ನಾಟಕ, ವಿಜ್ಞಾನ ಬೋಧನೆ, ವಿವಿಧ ವರ್ಗಗಳ ತರಗತಿಗಾಗಿ ಪಾಠಕ್ರಮ ಮತ್ತು ಶಾಲೆಯಲ್ಲಿ ಸಮುದಾಯದ ಪಾತ್ರ ದಾಖಲಿಸುತ್ತವೆ.

ಭಾಗ ಮೂರರಲ್ಲಿ ಭಾರತೀಯ ಶಿಕ್ಷಣ ಪದ್ಧತಿಯ ಪ್ರಶ್ನೆಗಳು ಎ.ಆರ್.ವಾಸವಿಯವರ ಹೊಸ ಸಮಾಜಕ್ಕಾಗಿ ಶಾಲಾ ಶಿಕ್ಷಣ ಕುರಿತ ಪ್ರಬಂಧವು ಸಮಾಜವನ್ನು ರೂಪಾಂತರಿಸುವ ನಿಟ್ಟಿನಲ್ಲಿ ಶಿಕ್ಷಣವು ವಹಿಸಬಹುದಾದ ಪಾತ್ರದ ಬಗ್ಗೆ ವಿವರಿಸುತ್ತದೆ. ಭಾರತೀಯ ಶಾಲಾ ತರಗತಿಗಳು ಮಕ್ಕಳಿಗೆ ಏಕೆ ಬೇಸರ ತರಿಸುವ ಸ್ಥಳಗಳಾಗಿವೆ ಎಂಬುದನ್ನು ಪದ್ಮ ಸಾರಂಗಪಾಣಿ ಅವರ ಪ್ರಬಂಧ ಹೆಚ್ಚು ವಿಷದವಾಗಿ ಪರಿಶೀಲಿಸುತ್ತದೆ. ಈ ಸಂಗ್ರಹದಲ್ಲಿ ಸೇರ್ಪಡೆ ಮಾಡಿಕೊಂಡಿರುವ ಕೊನೆಯ ದಾಖಲೆ ಯುನಿಸೆಫ್ ಸಂಸ್ಥೆಯ ಗುಣಮಟ್ಟ ಸಾಧಿಸುವ ಸಲುವಾಗಿ ಶಿಕ್ಷಕರು ಯಾವ ನಡವಳಿಕೆಗಳನ್ನು ಅನುಸರಿಸಬೇಕು ಎಂಬುದರ ಬಗ್ಗೆ ಗಮನ ಸೆಳೆಯುತ್ತದೆ.

ಅಂಜು.ಜಿ.,(೨೦೦೨), ಅವರು "ಭಾರತದಲ್ಲಿ ಲಿಂಗ-ಸಮಾನತೆ" ಎನ್ನುವ ಲೇಖನದಲ್ಲಿ ಪ್ರಾಥಮಿಕ ಶಿಕ್ಷಣದಲ್ಲಿ ಲಿಂಗ-ಸಮಾನತೆ ತರುವ ಉದ್ದೇಶದಿಂದ ಸರ್ಕಾರ ಹಲವಾರು ಕಾರ್ಯಕ್ರಮಗಳನ್ನು ಹಾಕಿಕೊಂಡರೂ ಸಹ ಅದು ವಿಫಲವಾಗಿದೆ.ಕಾರ್ಯಕ್ರಮಗಳು ಅಥವಾ ಯೋಜನೆಗಳು ಸಾಧಿಸಬೇಕೆಂದು ಇಟ್ಟುಕೊಂಡಂತಹ

ಗುರಿಯನ್ನು ತಲುಪಿಲ್ಲ. ಇಂತಹ ಯೋಜನೆಗಳು ವಿನ್ಯಾಸ ಹಾಗೂ ಅನುಷ್ಠಾನದಲ್ಲಿ ಫಲಾನುಭವಿಗಳ ಕೊರತೆಯಿಂದ ಯಶಸ್ವಿಗೊಳಿಸುವಲ್ಲಿ ವಿಫಲವಾಗಿವೆ. ಇನ್ನು ಅನೇಕ ಯೋಜನೆಗಳು ಅನುಷ್ಠಾನದಲ್ಲಿನ ಲೋಪದೋಷಗಳಿಂದ ಯಶಸ್ವಿಯಾಗಿಲ್ಲ ಎಂದು ತಿಳಿಸಿದ್ದಾರೆ. ಇದಕ್ಕೆ ಹೊಸ ಹೊಸ ಯೋಜನೆಗಳನ್ನು ರೂಪಿಸಿ, ಅನುಷ್ಠಾನಕ್ಕೆ ತರುವ ಜೊತೆಯಲ್ಲಿಯೇ ಮಹಿಳೆಯರ/ಹೆಣ್ಣುಮಕ್ಕಳ ಶಾಲಾ ಭಾಗವಹಿಸುವಿಕೆಯನ್ನು ಹೆಚ್ಚು ಮಾಡಬೇಕು. ಜೊತೆಗೆ ಶಾಲಾ ಹಂತದಲ್ಲಿಯೇ ಲಿಂಗ ಅಸಮಾನತೆಯಿಂದ ಉಂಟಾಗುವ ಶೋಷಣೆಯ ವಿವಿಧ ಮುಖಗಳನ್ನು ತಿಳಿಸಬೇಕು. ಆ ಮೂಲಕ ಮಹಿಳಾಭಿವೃದ್ಧಿಗಾಗಿ ರೂಪಿಸಿ, ಆಚರಣೆಗೆ ತರುತ್ತಿರುವ ಕಾರ್ಯಕ್ರಮಗಳನ್ನು ಬಳಸಿಕೊಳ್ಳುವ ನಿಟ್ಟಿನಲ್ಲಿ ಮಹಿಳೆಯರನ್ನು ಜಾಗೃತಿ ಮೂಡಿಸುವ ಅಗತ್ಯವನ್ನು ಒತ್ತಿಹೇಳಿದ್ದಾರೆ.

ಶಾಂತಾ ಸಿನ್ಹ., (೨೦೦೬), ಶಿಕ್ಷಣ ಕ್ಷೇತ್ರದಲ್ಲಿ ಹಿಂದುಳಿದ ಪ್ರದೇಶಗಳೆಂದು ಪರಿಗಣಿಸಲ್ಪಟ್ಟಿರುವ ಪಂಜಾಬ, ಹರಿಯಾಣ, ಅಸ್ಸಾಂ, ಬಿಹಾರ, ತ್ರಿಪುರ, ಝಾರ್ಖಂಡ, ಒರಿಸ್ಸಾ, ಹಿಮಾಚಲ ಪ್ರದೇಶ ಮತ್ತು ಸಿಕ್ಕಿಂ ರಾಜ್ಯಗಳಲ್ಲಿ ಶಾಲೆಗೆ ಹೋಗುವ ವಯೋಮಾನದ ಶೇಕಡ ೯೦ರಷ್ಟು ಮಕ್ಕಳು ಸರ್ಕಾರಿ ಶಾಲೆಗೆ ಹಾಜರಾಗುವುದು ಬೆಳಕಿಗೆ ಬಂದಿದೆ. ವಿಶೇಷವೆಂದರೆ ಕೊಠಡಿಗಳ ಅಭಾವ, ಶಿಕ್ಷಕರ ಕೊರತೆ, ಕುಡಿಯುವ ನೀರು ಮತ್ತು ಶೌಚಾಲಯದ ಕೊರತೆ, ಕಳಪೆ ಮಟ್ಟದ ಶಿಕ್ಷಣ ಇತ್ಯಾದಿಗಳಿಂದ ಅಪಖ್ಯಾತಿಯಾದ ಸರ್ಕಾರಿ ಶಾಲೆಗಳಿಗೇಕೆ ಮಕ್ಕಳು ಹಾಜರಾಗುತ್ತಾರೆ? ಎಂಬ ಸಹಜವಾದ ಪ್ರಶ್ನೆ ಎದುರಾಗುತ್ತದೆ. ತಮ್ಮ ಮಕ್ಕಳು ಶಿಕ್ಷಣ ಪಡೆದು ವಿದ್ಯಾವಂತರಾದರೆ ಮಾತ್ರ ಬಡತನದ ವಿಷವೃತ್ತದಿಂದ ಪಾರಾಗಲು ಸಾಧ್ಯ ಎಂಬ ಪೋಷಕರ ದೃಢನಂಬಿಕೆಯೇ ಉತ್ತರವಾಗಿರುವುದು ಶಿಕ್ಷಣದ ಬೇಡಿಕೆಯನ್ನು ವ್ಯಕ್ತಪಡಿಸಿದಂತಾಗುತ್ತದೆ. ಒಂದರ್ಥದಲ್ಲಿ ಮಕ್ಕಳು ವಿದ್ಯಾವಂತರಾದರೆ ಬಡತನದ ವಿಷವೃತ್ತದಿಂದ ಪಾರಾಗುವುದು ವಿಳಂಬವಾದರೂ, ಬಡಕುಟುಂಬಗಳ ಜೀವನ ವಿಧಾನ ಮತ್ತು ಮೌಲ್ಯಗಳು ಬದಲಾಗುತ್ತವೆ ಎಂದು ಸಿನ್ಹ ವಾದಿಸುತ್ತಾರೆ.

ರಾಮಚಂದ್ರನ್., (೧೯೯೬), "ಆನ್ ಕೇರಳ ಡೆವಲಪ್‌ಮೆಂಟ್ ಅಚೀವ್‌ಮೆಂಟ್ಸ್ ಇನ್ ಜೀನ್ ಡ್ರೀಜ್ ಆ್ಯಂಡ್ ಅಮಾರ್ತ್ಯಸೇನ್" (ಎಡಿಟ್ಸ್) ಇಂಡಿಯನ್ ಡೆವಲಪ್‌ಮೆಂಟ್ : ಸೆಲೆಕ್ಟ್ ರೀಜನಲ್ ಪ್ರಾಸ್‌ಪೆಕ್ಟೀವ್ಸ್ ಎಂಬ ಕೃತಿಯಲ್ಲಿ ಶಿಕ್ಷಣದ ಮಹತ್ವವನ್ನು ಕುರಿತು ಹೇಳಿದ್ದಾರೆ. ಶೈಕ್ಷಣಿಕ ಪ್ರಗತಿ ಮತ್ತು ಸಾಮಾಜಿಕ ಬದಲಾವಣೆಗಳ ನಡುವೆ ಅನೇಕ ಸಂಬಂಧವಿರುವುದನ್ನು ಇವರು ತಮ್ಮ ಅಧ್ಯಯನದಲ್ಲಿ ಕೇರಳದ ಉದಾಹರಣೆಗಳ ಜೊತೆಗೆ ದೃಢಪಡಿಸಿದ್ದಾರೆ. ವ್ಯಕ್ತಿಯ ಸ್ವ-ಪ್ರತಿಷ್ಠೆ, ಸ್ವ-ರಕ್ಷಣೆಗೆ ಸಾಕ್ಷರತೆ ಮೂಲ ಸಾಧನ ಎಂದಿದ್ದಾರೆ. ಅಕ್ಷರ ಜ್ಞಾನವು ಸಂಪ್ರದಾಯ ಮತ್ತು ಜಾತಿ-ಧರ್ಮ ಭೇದಗಳ ಸಂಕೋಲೆಗಳಿಂದ ಹೊರಬರಲು ನೆರವಾಗುತ್ತದೆ. ಸಮಾಜದಲ್ಲಿನ ಸಾಂಪ್ರದಾಯಿಕ ನಂಬಿಕೆಗಳನ್ನು ಹೋಗಲಾಡಿಸಬೇಕಾದರೆ ಶಿಕ್ಷಣವು ಅತ್ಯಂತ ಪ್ರಮುಖ ಎಂದು ವಾದಿಸಿದ್ದಾರೆ.

ಅನಿತಾ ಬಿ.ಕೆ., (೨೦೦೦), ಅವರ "ವಿಲೇಜ್ ಕಾಸ್ಟ್ ಅಂಡ್ ಎಜುಕೇಷನ್" ಎನ್ನುವ ಕೃತಿಯಲ್ಲಿ ಸಮಾರೋಪವೂ ಸೇರಿದಂತೆ ಒಟ್ಟು ಎಂಟು ಅಧ್ಯಾಯಗಳಿವೆ. ಈ ಗ್ರಂಥವೂ ಕ್ಷೇತ್ರಾಧಾರಿತವಾದ ಮಾಹಿತಿ ಒಳಗೊಂಡು ವಿಶ್ಲೇಷಣೆಯ ಮೇಲೆ ರೂಪುಗೊಂಡಿದೆ. ಅಧ್ಯಯನಕ್ಕೆ ತುಮಕೂರು ಜಿಲ್ಲೆಯನ್ನು ಸೀಮಿತಗೊಳಿಸಿಕೊಂಡಿದ್ದಾರೆ. ಇವರು ತಮ್ಮ ಅಧ್ಯಯನದಲ್ಲಿ ನಗರ ಮತ್ತು ಗ್ರಾಮೀಣ ಪ್ರದೇಶಗಳ ವ್ಯತ್ಯಾಸವನ್ನು ಗುರುತಿಸುವ ಪ್ರಯತ್ನವನ್ನು ಮಾಡಿದ್ದಾರೆ. ಆ ಪ್ರಯತ್ನವನ್ನು ಶೈಕ್ಷಣಿಕ ಸಮಾಜಶಾಸ್ತ್ರೀಯ ದೃಷ್ಟಿಕೋನದಿಂದ ವಿವರಣೆ ನೀಡಿದ್ದಾರೆ. ನಿರ್ದಿಷ್ಟವಾಗಿ ಸಾಮಾಜಿಕ, ಸಾಂಸ್ಕೃತಿಕ ಪರಿಸರದ ಪ್ರಕ್ರಿಯೆಗಳು ಹಾಗೂ ಶಾಲೆ ನೆಲೆಗೊಂಡಿರುವ ಸ್ಥಳೀಯ ಸಾಮಾಜಿಕ ರಚನೆಯಲ್ಲಿ ಪ್ರತಿಬಿಂಬಿಸುತ್ತದೆ ಎಂಬುದನ್ನು ಅನಿತ ಅವರು ವಿಶ್ಲೇಷಣೆಗೆ ಒಳಪಡಿಸಿದ್ದಾರೆ. ಇನ್ನು ಮೂಲಭೂತ ಸೌಲಭ್ಯಗಳು, ಮಕ್ಕಳ ಆರೋಗ್ಯ ಸ್ಥಿತಿ, ಶಿಕ್ಷಕರ ಬೋಧನಾ ವಿಧಾನ ಇತ್ಯಾದಿ ಅಂಶಗಳು ಮಕ್ಕಳ ಕಲಿಕೆಯ ಜೊತೆ ಜೊತೆಗೆ, ಶಿಕ್ಷಕರ ಬೋಧನಾ

ಸಾಮರ್ಥ್ಯವನ್ನು ನಿರ್ಧರಿಸುವ ಅಂಶಗಳಾಗಿವೆ ಎಂಬುದನ್ನು ಸ್ಪಷ್ಟಪಡಿಸುತ್ತಾರೆ. ಕರ್ನಾಟಕದಲ್ಲಿನ ಸಾಕ್ಷರತೆಯನ್ನು ಕೇರಳ ರಾಜ್ಯದ ಸಾಕ್ಷರತೆಯ ಜೊತೆಗೆ ಹೋಲಿಸುತ್ತಾ, ಕೇರಳ ರಾಜ್ಯವು ಯಾವ ಯಾವ ಯೋಜನೆಗಳನ್ನು ಅಳವಡಿಸಿಕೊಂಡಿದೆ ಎಂಬುದನ್ನು ವಿವರಿಸುವ ಪ್ರಯತ್ನವನ್ನು ಅಧ್ಯಯನದಲ್ಲಿ ಮಾಡಿದ್ದಾರೆ. ಗ್ರಾಮೀಣ ಪ್ರದೇಶಗಳಲ್ಲಿ ಶಿಕ್ಷಣ ಏಕೆ ಹಿಂದುಳಿದಿದೆ? ಮತ್ತು ಶಾಲೆಗಳಲ್ಲಿನ ಕಲಿಕಾ ಗುಣಮಟ್ಟದ ಬಗ್ಗೆ ಸಂಕ್ಷಿಪ್ತವಾಗಿ ವಿವರಿಸಿದ್ದಾರೆ. ಒಟ್ಟಾರೆಯಾಗಿ ಈ ಅಧ್ಯಯನದಲ್ಲಿ ಮೂಲಭೂತ ಸೌಲಭ್ಯಗಳು, ಆದಾಯ, ಜಾತಿ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ಶೈಕ್ಷಣಿಕ ಹಿಂದುಳಿಯುವಿಕೆಗೆ ಪ್ರಮುಖವಾದ ಕಾರಣಗಳಾಗಿವೆ ಎಂಬ ಅಭಿಪ್ರಾಯವನ್ನು ಅಧ್ಯಯನಕಾರರು ವ್ಯಕ್ತಪಡಿಸಿದ್ದಾರೆ.

ಸಮುದಾಯ ಎಂದರೇನು ಎಂಬ ವಿಷಯಕ್ಕೆ ಸರಳವಾಗಿ ಅನೇಕ ಅಧ್ಯಯನಗಳು ವ್ಯಕ್ತಿ ಇತರರ ಜೊತೆ ಭಾಷೆ, ಸಂಸ್ಕಾರ, ಸಂಸ್ಕೃತಿ, ನಿಯಮ, ಜಾತಿ ನೆರವನ್ನು ಹಂಚಿಕೊಂಡು ಬದುಕುತ್ತಾನೋ ಅದೆ ಸಮುದಾಯ ಎಂದು ಹೇಳಿವೆ. ಈ ವಿಷಯವಾಗಿ ಅನೇಕ ಅಂತರಾಷ್ಟ್ರೀಯ ಸಂಶೋಧನೆಗಳಾಗಿದ್ದು ಈ ಕೆಳಗೆ ಅವುಗಳನ್ನು ತಿಳಿಸಲಾಗಿದೆ.

ಶ್ಲಾಫರ್., (೧೯೯೪), ತನ್ನ ಸಂಶೋಧನೆಯಲ್ಲಿ ಹೇಳುವಂತೆ ಕೆಲವು ಸಮುದಾಯಗಳು ಏಕರೂಪವಾಗಿರುತ್ತವೆ. ಕೆಲವು ಭಿನ್ನ ವರ್ಗದವರಗಿರುತ್ತದೆ. ಕೆಲವು ಸಮುದಾಯಗಳು ಪ್ರಜಾಪ್ರಭುತ್ವದ ಮೂಲಕ ಆರಿಸಲ್ಪಟ್ಟವನ ಮುಂದಾಳುವಿನ ಮಾರ್ಗದರ್ಶನದಲ್ಲಿ ನಡೆಯುತ್ತವೆ ಮತ್ತು ಪ್ರತ್ಯೇಕ ಆಡಳಿತ ನಡೆಸುವ ಅಧಿಕಾರ ಹೊಂದಿರುತ್ತಾರೆ. ಕೆಲವು ಸರಕಾರ ನೇಮಿಸಿದಂತ ಅಧಿಕಾರಿಗಳು ಅದನ್ನು ಕಾರ್ಯರೂಪಕ್ಕೆ ತರುತ್ತಾರೆ.

ಬೆಂಟರ್., (೧೯೬೪), ಸಮುದಾಯದ ಮೂರು ಅಂಶಗಳ ಬಗ್ಗೆ ಮಾತನಾಡುತ್ತಾನೆ. ಅವುಗಳೆಂದರೆ ಮೊದಲನೆಯದು ಸಮುದಾಯವು ಗುಂಪು ರಚನೆ, ಬೇರೆ ಬೇರೆ ವಿಚಾರಧಾರೆಯನ್ನು ಇಟ್ಟುಕೊಂಡು ಬಂದಂತಹ ಜನರು ಒಂದೆ ಗುರಿಯನ್ನು ಹೊಂದಿ ಶೈಕ್ಷಣಿಕ ಸಮಸ್ಯೆಗಳು, ಒಗ್ಗಟ್ಟಾಗಿ ನಿಭಾಯಿಸುವ ಪ್ರಯತ್ನವನ್ನು ಮಾಡುತ್ತಾರೆ. ಎರಡನೆಯದರಲ್ಲಿ ಹಲವಾರು ಸಮಾನ ಮನಸ್ಸಿನವರಿದ್ದು ಇವರಲ್ಲಿ ಸಾಮುದಾಯಿಕ ಲಕ್ಷಣಗಳು ಕಂಡು ಬರುತ್ತವೆ. ಮೂರನೆಯದರಲ್ಲಿ ಸಮುದಾಯಕ್ಕೆ ತನ್ನದೆ ಆದ ಸ್ಥಾನಿಕ ಸ್ವಾಯತ್ತತೆ ಮತ್ತು ಜವಾಬ್ದಾರಿ ಇರುತ್ತದೆ.

ಬ್ರೆ., (೧೯೯೬), ಮೂರು ಪ್ರಕಾರದ ಸಮುದಾಯವು ಇರುವುದನ್ನು ಹೇಳುತ್ತಾನೆ. ಅವುಗಳೆಂದರೆ ಒಂದು ಭೂಗೋಳಿಕ ಸಮುದಾಯ, ಅಲ್ಲಿರುವಂತಹ ಜನರು ಹೋಬಳಿ, ತಾಲ್ಲೂಕು ಅಥವಾ ಜಿಲ್ಲೆಗಳಿಂದ ಬಂದಿರಬಹುದು. ಎರಡನೆಯದು ಜಾತಿ, ಮತ, ಧರ್ಮ ಆಧಾರಿತ ಸಮುದಾಯ, ಮೂರನೆಯದು ಕುಟುಂಬ ಆಧಾರಿತ ಹಾಗೂ ಶೈಕ್ಷಣಿಕ ಆಧಾರಿತ ಸಮುದಾಯ ಇದರಲ್ಲಿ ಪಾಲಕರ ಸಂಘ, ಶಿಕ್ಷಣ ಸಂಸ್ಥೆಗಳು ಮತ್ತು ಇತರ ಸಂಸ್ಥೆಗಳು ವಿದ್ಯಾರ್ಥಿಗಳ ಅಭಿವೃದ್ಧಿಗಾಗಿ ಶ್ರಮಿಸುವುದು.

ಶ್ಯಾಪರ್., (೧೯೯೪), ಏಳು ವಿವಿಧ ಪ್ರಕಾರದ ಪಾಲ್ಗೊಳ್ಳುವಿಕೆಯನ್ನು ವಿಶ್ಲೇಷಿಸುತ್ತಾನೆ. ಅವುಗಳೆಂದರೆ ಮೊದಲನೆಯದು ಮಕ್ಕಳನ್ನು ಶಾಲೆಗೆ ಸೇರಿಸುವ ಮೂಲಕ ಅಥವ ಪ್ರಾಥಮಿಕ ಆರೋಗ್ಯದ ಸೇವೆಯ ಮೂಲಕ ಪಾಲ್ಗೊಳ್ಳುತ್ತಾನೆ. ಎರಡು ಹಣ, ಪಠ್ಯ ಮತ್ತು ಪೀಠೋಪಕರಣಗಳ ಮತ್ತು ಕೆಲಸ ಕಾರ್ಯಗಳ ಮೂಲಕ ಪಾಲ್ಗೊಳ್ಳುತ್ತಾನೆ. ಮೂರು ಪಾಲಕರ ಸಭೆಗೆ ಅಥವಾ ಶಾಲೆಗಳ ಸಭೆಯಲ್ಲಿ ಹಾಜರಿರುವ ಮೂಲಕ ಮತ್ತು ಅಲ್ಲಿ ತೆಗೆದುಕೊಂಡಂತಹ ನಿರ್ಧಾರಗಳನ್ನು ತನ್ನ ವಿಮರ್ಶೆಯ ಮೂಲಕ ಪಾಲ್ಗೊಳ್ಳುತ್ತಾನೆ, ನಾಲ್ಕನೆಯದು ಯಾವುದೇ ಒಂದು ವಿಷಯದ ಮೇಲೆ ಸಮಾಲೋಚನೆಯ ಮೂಲಕ. ಐದು ಸೇವೆಗೈಯಲು ಪಾಲುದಾರರಾಗಿ ಪಾಲ್ಗೊಳ್ಳುವುದು. ಆರು ಪ್ರತಿನಿಧಿಯಾಗಿ ಅಧಿಕಾರವನ್ನು ಅನುಷ್ಠಾನಗೊಳಿಸುವ ಮೂಲಕ ಪಾಲ್ಗೊಳ್ಳುವುದು.

ಏಳು ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ಅಭ್ಯಸಿಸಿ, ಅವಲೋಕಿಸಿ ಸರಿಯಾದ ಯೋಜನೆ ಮೂಲಕ ಹೆಜ್ಜೆ ಹೆಜ್ಜೆಗೂ ಅನುಷ್ಠಾನಗೊಳಿಸುವುದರ ಮೂಲಕ ಪಾಲ್ಗೊಳ್ಳುವುದು. ಶ್ಯಾಪರ್ ತನ್ನ ಸಂಶೋಧನೆಯಲ್ಲಿ ಉನ್ನತ ಮಟ್ಟದ ಪಾಲ್ಗೊಳ್ಳುವಿಕೆ ಕುರಿತು ವಿಶಾಲವಾದ ಅರ್ಥವನ್ನು ಕೊಡುತ್ತಾನೆ. ಇದನ್ನು ಶಿಕ್ಷಣ ಸಮುದಾಯಕ್ಕೂ ಬಳಸಬಹುದು. ಅವುಗಳೆಂದರೆ ಮಾಹಿತಿಯನ್ನು ಸಂಗ್ರಹಿಸುವುದು ಮತ್ತು ಪರಿಶೀಲಿಸುವುದು. ಆದ್ಯತೆ ಅನುಸಾರ ಗುರಿಗಳನ್ನು ನಿಗಧಿಪಡಿಸುವುದು. ಲಭ್ಯವಿದ್ದ ಸಂಪನ್ಮೂಲಗಳನ್ನು ಪರಿಶೀಲಿಸುವುದು. ವಿವಿಧ ಯೋಜನೆಗಳನ್ನು ಸರಿಯಾಗಿ ನಿರ್ಧರಿಸುವುದು. ಈ ಯೋಜನೆಗಳನ್ನು ಅನುಷ್ಠಾನಗೊಳಿಸಲು ಜವಾಬ್ದಾರಿಯನ್ನು ಹಂಚಿಕೊಟ್ಟು ಯೋಜನೆಗಳನ್ನು ಸಫಲಗೊಳಿಸುವುದು. ಯೋಜನೆಗಳನ್ನು ನಿಭಾಯಿಸುವುದು. ಯೋಜನೆಯ ಅಭಿವೃದ್ಧಿಯನ್ನು ಅವಲೋಕಿಸುವುದು. ಪರಿಣಾಮ ಮತ್ತು ಪ್ರಭಾವವನ್ನು ಅವಲೋಕಿಸುವುದು. ಶಿಕ್ಷಣದಲ್ಲಿ ಸಮುದಾಯ ಪಾಲ್ಗೊಳ್ಳುವಿಕೆಯು ಶಾಲೆಗಳಲ್ಲಿ ಅಲ್ಲದೇ ಕುಟುಂಬ, ಸಮಾಜ, ಸಮುದಾಯದಲ್ಲಿ ತನ್ನ ಪಾತ್ರವನ್ನು ಹೊಂದಿದೆ. ಇದರಲ್ಲಿ ಯಾವುದೇ ಒಂದು ಗುಂಪು ಸಂಪೂರ್ಣ ಜವಾಬ್ದಾರಿಯನ್ನು ನಿರ್ವಹಿಸಲು ಸಾಧ್ಯವಿಲ್ಲ. ಮಕ್ಕಳು ಎಲ್ಲಿಯವರೆಗೆ ಪಾಲಕರ ಮತ್ತು ಕುಟುಂಬದ ಜೊತೆ ಇರುತ್ತಾರೊ ಅಲ್ಲಿಯವರೆಗೆ ಮಾತ್ರ ಶಿಕ್ಷಣ ಕೊಡಲು ಸಾಧ್ಯವಾಗುತ್ತದೆ. ಸಮಾಜ ಮತ್ತು ಸಮುದಾಯ ಪಾಲಕರಿಗೆ ಸಹಕಾರವನ್ನು ನೀಡಬೇಕು. ಶಾಲೆಗಳು ವಿವಿಧ ಪಾಠೋಪಕರಣಗಳ ಮೂಲಕ ಮಕ್ಕಳಲ್ಲಿರುವ ಕೌಶಲ್ಯವನ್ನು ಬೆಳಸಬೇಕು. ಈ ಎಲ್ಲ ಗುಂಪುಗಳ ಮಧ್ಯೆ ಸೇತುವೆ ಬೆಳೆದರೆ ಹೆಚ್ಚಿನ ಪಾಲ್ಗೊಳ್ಳುವಿಕೆ ಸಾಧ್ಯವಿದೆ ಮತ್ತು ಸಮರ್ಥವಾಗಿ ಹಾಗೂ ಪರಿಣಾಮಕಾರಿಯಾಗಿ ಶಿಕ್ಷಣವನ್ನು ನೀಡಲು ಸಹಾಯವಾಗುತ್ತದೆ ಎಂಬುದನ್ನು ವಿವಿಧ ಅಂತರಾಷ್ಟ್ರೀಯ ಸಂಶೋಧನೆಗಳು ಈ ವಿಷಯವನ್ನು ಎತ್ತಿ ಹಿಡಿಯುತ್ತವೆ.

ಕೊಲೆಟ್ ಮತ್ತು ಪರಕೀನ್., (೧೯೯೫). ಇವರ ಅಧ್ಯಯನ ಪ್ರಕಾರ ಸಮುದಾಯ ಪಾಲ್ಗೊಳ್ಳುವ ಬೇರೆ ಬೇರೆ ವಿಧಾನಗಳನ್ನು ಸಂಶೋಧಿಸಿದ್ದಾರೆ. ಅವುಗಳೆಂದರೆ ಸಂಶೋಧನೆ ಮತ್ತು ಅಂಕಿ ಅಂಶಗಳನ್ನು ಸಂಗ್ರಹಿಸುವುದು ಅವುಗಳನ್ನು ಶಿಕ್ಷಣ ತಜ್ಞರ ಜೊತೆ ಚರ್ಚಿಸುವುದು. ಶಾಲೆಯ ಆಡಳಿತ ಮಂಡಳಿಗೆ ತಿಳಿಸುವುದು. ನಂತರ ಪಠ್ಯಕ್ರಮದ ಚೌಕಟ್ಟುಗಳ ಬಗ್ಗೆ ಅರ್ಥಮಾಡಿಕೊಳ್ಳುವುದು. ಕಲಿಕಾ ಸಾಮಾಗ್ರಿಗಳನ್ನು ಒದಗಿಸುವುದು ಹಾಗೂ ಅವುಗಳ ಅಭಿವೃದ್ಧಿ, ಶಾಲಾ ಕಟ್ಟಡಗಳನ್ನು ಕಟ್ಟಿಸುವುದು ಹಾಗೂ ಕಟ್ಟುವುದರಲ್ಲಿ ಸಹಾಯ ಮಾಡುವುದರ ಬಗ್ಗೆ ಹೆಚ್ಚು ಬೆಳಕನ್ನು ಚೆಲ್ಲಿದ್ದಾರೆ.

ಹೆನವೇಲ್ಡ್ ಮತ್ತು ಕ್ರೇಗ್., (೧೯೯೬). ಇವರ ಪ್ರಕಾರ ಸಬ್ ಸಹಾರದ ಆಫ್ರಿಕಾದಲ್ಲಿ ಶಿಕ್ಷಣದಲ್ಲಿ ಸಮುದಾಯ ಮತ್ತು ಪಾಲಕರ ಪಾಲ್ಗೊಳ್ಳುವಿಕೆ ಒಂದು ಮಹತ್ವದ ಹೆಜ್ಜೆ ಇದರಲ್ಲಿ ಐದು ಪ್ರಕಾರಗಳನ್ನು ಗುರುತಿಸಿದ್ದಾರೆ. ಒಂದನೆಯದು ಕಲಿಕಾ ಇಚ್ಛೆಯ ಮಕ್ಕಳಿಗೆ ಕಲಿಸುವಿಕೆ. ಎರಡು ಸಮುದಾಯದಿಂದ ಆರ್ಥಿಕ ಮತ್ತು ಕಲಿಕಾ ಸಾಮಾಗ್ರಿ ಕೊಡುಗೆ. ಮೂರು ಶಾಲೆ, ಪಾಲಕ ಮತ್ತು ಸಮುದಾಯದ ನಡುವೆ ಸಂಪರ್ಕವನ್ನು ಸಾಧಿಸುವುದು. ನಾಲ್ಕು ಶಾಲೆಯ ಆಡಳಿತದಲ್ಲಿ ಸಮುದಾಯದ ಮಹತ್ವದ ಪಾತ್ರ. ಐದು ಪಾಲಕರ ಮತ್ತು ಸಮುದಾಯದ ಸೂಕ್ತ ಮಾರ್ಗದರ್ಶನ ಬಗ್ಗೆ ಗುರುತಿಸಿದ್ದಾರೆ.

ವಿಲಿಯಮ್., (೧೯೯೪). ಇವರ ಪ್ರಕಾರ ಮೂರು ಮಾದರಿಯ ಶಿಕ್ಷಣ ಹಾಗೂ ಸಮುದಾಯಗಳಿವೆ. ಇವುಗಳಲ್ಲಿ ಮೊದಲನೆಯದು ಸಾಂಪ್ರದಾಯಿಕ ಸಮುದಾಯ ಆಧಾರಿತ ಶಿಕ್ಷಣ. ಈ ಮಾದರಿಯಲ್ಲಿ ಸಾಮಾಜಿಕ ಸಂಬಂಧಗಳಿಗೆ ಒತ್ತುಕೊಟ್ಟು ಶಾಲೆ ಮತ್ತು ಸಮುದಾಯದಲ್ಲಿ ಸಂಪರ್ಕ ಏರ್ಪಡುತ್ತದೆ. ಎರಡನೆಯದು ಸರಕಾರಿ ಶಿಕ್ಷಣ, ಈ ಮಾದರಿಯಲ್ಲಿ ಸಮುದಾಯದ ಪಾತ್ರ ಕಡಿಮೆ ಇದ್ದರೂ ಎಲ್ಲ ರೀತಿಯ ಸೌಲಭ್ಯಗಳನ್ನು ಒದಗಿಸುವಲ್ಲಿ ಸರಕಾರವು ವಿಫಲ ಅವಕಾಶ ಹೊಂದಿದೆ, ಮೂರನೆಯದು ಸಹಕಾರಿ ಶಿಕ್ಷಣ ಈ ಮಾದರಿಯಲ್ಲಿ ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ಸರಕಾರ ಮತ್ತು ಸಮುದಾಯ ಒಟ್ಟುಗೂಡಿ ಶಿಕ್ಷಣವನ್ನು ನೀಡುವುದು.

ಎಪಸ್ಟೆನೆನ, (೧೯೯೫-೯೭), ಪ್ರಕಾರ ಮಕ್ಕಳ ಶೈಕ್ಷಣಿಕ ಪ್ರಗತಿಗೆ ಮತ್ತು ಹೆಚ್ಚಿನ ಪ್ರಗತಿಗೆ ಶಾಲೆ, ಕುಟುಂಬ ಮತ್ತು ಸಮುದಾಯದ ಸಹಭಾಗಿತ್ವದ ಕುರಿತು ಹೀಗೆ ಹೇಳುತ್ತಾನೆ. ಅದೆಂದರೆ ಶಾಲೆಯ ವಾತವರಣ ಮತ್ತು ಕಾರ್ಯಸೂಚಿಯನ್ನು ಉತ್ತಮಗೊಳಿಸುವುದು, ಕುಟುಂಬದ ಸಹಾಯ ಮತ್ತು ಸಹಕಾರ ನೀಡುವುದು, ಪಾಲಕರ ಕೌಶಲ್ಯವನ್ನು ಮತ್ತು ಮುಂದಾಳತ್ವವನ್ನು ಹೆಚ್ಚಿಸುವುದು, ಕುಟುಂಬವನ್ನು ಬೇರೆ ಬೇರೆ ಶಾಲೆಗಳ ಜೊತೆಗೂಡಿಸುವುದು ಹಾಗೂ ಶಿಕ್ಷಕರಿಗೆ ಸಹಕಾರ ನೀಡುವುದು. ಇವುಗಳಿಂದ ಯಾವ ರೀತಿ ಫಲಕಾರಿಯಾಗುತ್ತವೆ ಎಂದರೆ, ಪಾಲಕತ್ವದ ಮೂಲಕ ಶಾಲೆಗಳಲ್ಲಿ ಕೌಟುಂಬಿಕ ವಾತವರಣ ನಿರ್ಮಿಸುವುದು, ತಿಳುವಳಿಕೆಯನ್ನು ನೀಡುವುದರ ಮೂಲಕ ಕುಟುಂಬ ಮತ್ತು ಶಾಲೆಗಳ ಮಧ್ಯೆ ಕೌಟುಂಬಿಕ ವಾತವರಣ ನಿರ್ಮಿಸಿ ಮಕ್ಕಳ ಬೆಳವಣಿಗೆ ಮತ್ತು ಶೈಕ್ಷಣಿಕ ಕಾರ್ಯಕ್ರಮಗಳ ಕುರಿತು ತಿಳುವಳಿಕೆ ನೀಡುವುದು, ಸ್ವ ಪ್ರೇರಣೆಯ ಮೂಲಕ ಪಾಲಕರ ಸಹಾಯ ಮತ್ತು ಸಹಕಾರವನ್ನು ಕೋರಿ ಕಾರ್ಯವನ್ನು ನಿರ್ವಹಿಸುವುದು, ಮನೆ ಕೆಲಸವನ್ನು ನೀಡಿ ಮಕ್ಕಳಿಗೆ ಮನೆ ಪಾಠಮಾಡಿಸುವುದು, ಪಠ್ಯಕ್ರಮದ ಅನುಗುಣವಾಗಿ ಚಟುವಟಿಕೆಗಳನ್ನು ಮಾಡುವುದು, ನಿರ್ಧರಿಸುವುದು ಮತ್ತು ಉಪಾಯಗಳನ್ನು ಮಾಡುವುದು, ಶಾಲೆಯ ಸಭೆಗಳಿಗೆ, ಪಾಲಕರ ಮತ್ತು ಕುಟುಂಬದ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದರ ಮೂಲಕ ನಿರ್ಧಾರ ತೆಗೆದುಕೊಳ್ಳುವಂತೆ ಮಾಡುವುದು. ಸಮುದಾಯದ ಸಂಪನ್ಮೂಲಗಳನ್ನು ಗುರುತಿಸಿ ಸಮುದಾಯದ ಜೊತೆ ಹೊಂದಾಣಿಕೆ ಮಾಡಿಕೊಂಡು ಆ ಮೂಲಕ ಪ್ರಗತಿಗೆ ಬಳಸುವುದು.

ಪ್ರಾಥಮಿಕ ಶಿಕ್ಷಣ ಕುರಿತು ೧೯೯೦ರ ದಶಕದ ಮಧ್ಯಭಾಗದಲ್ಲಿ ನಡೆದ ಪ್ರಮುಖ ಅಧ್ಯಯನದಲ್ಲಿ ಪ್ರೋಬ್ ತಂಡದ ಅಧ್ಯಯನ ಅತ್ಯಂತ ಪ್ರಮುಖ. ಇದು ೧೯೯೬ರ ಸೆಪ್ಟೆಂಬರ್‌ನಿಂದ ಡಿಸೆಂಬರ್ ೧೯೯೬ರ ವರೆಗೆ ನಡೆಸಿದ ಕ್ಷೇತ್ರಕಾರ್ಯ ಆಧಾರಿತ ಅಧ್ಯಯನವಾಗಿದೆ. ಈ ತಂಡವು ಕಂಡುಕೊಂಡ ಪ್ರಮುಖ ಅಂಶವೆಂದರೆ ಶಾಲೆ ದೊರೆಯುವಿಕೆಯನ್ನು ಕೇವಲ ಭೌತಿಕ ಅಂತರದಿಂದ ಪರಿಗಣಿಸದೇ ಸಾಮಾಜಿಕ ಅಂತರವನ್ನು ಕೂಡ ಪರಿಗಣಿಸಬೇಕು ಎಂಬುದನ್ನು ಒತ್ತಿಹೇಳುತ್ತದೆ. ಹೀಗೆ ಪರಿಗಣಿಸುವಾಗ ಸ್ಥಳೀಯ ಶಾಲೆಗೆ ಮಕ್ಕಳು ಹೋಗುವಾಗ ಇರಬಹುದಾದ ಅನೇಕ ಸಾಮಾಜಿಕ ಅಡೆತಡೆಗಳನ್ನು ಪರಿಗಣಿಸಿದೆ.ಗ್ರಾಮೀಣ ಪೋಷಕರು ವಿಶೇಷವಾಗಿ ಹೆಣ್ಣುಮಕ್ಕಳನ್ನು ಬೇರೊಂದು ಗ್ರಾಮಕ್ಕೆ ಶಾಲೆಗೆ ಕಳುಹಿಸಲು ಹೆಚ್ಚಿನ ಆಸಕ್ತಿಯನ್ನು ತೋರುವುದಿಲ್ಲ. ಹೀಗಾಗಿ ಐದು, ಆರು, ಏಳನೇ ತರಗತಿಯ ನಂತರ ಹೆಚ್ಚಿನ ಹೆಣ್ಣು ಮಕ್ಕಳು ಶಾಲೆಗೆ ಹೋಗಬೇಕೆಂಬ ಆಸಕ್ತಿಯನ್ನು ಹೊಂದಿದ್ದರೂ ಪೋಷಕರ ವಿರುದ್ಧವಾಗಿ ಶಾಲೆಗೆ ಹೋಗಲಾರದ ಸ್ಥಿತಿ ಇದೆ ಎಂಬುದನ್ನು ಈ ಅಧ್ಯಯನ ತಿಳಿಸುತ್ತದೆ. ಈ ಸಮೀಕ್ಷೆಯಲ್ಲಿ ಬಿಹಾರ್, ಮಧ್ಯಪ್ರದೇಶ, ರಾಜಸ್ತಾನ, ಉತ್ತರ ಪ್ರದೇಶ ಹಾಗೂ ಹಿಮಾಚಲ ಪ್ರದೇಶಗಳಿಂದ ರ್‍ಯಾಂಡಮ್ ಆಗಿ ಆಯ್ಕೆ ಮಾಡಿಕೊಂಡ ೨೩೪ ಹಳ್ಳಿಗಳ ಶಾಲಾ ಸೌಲಭ್ಯ, ೧೩೭೬ ಕುಟುಂಬಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ.ಈ ಐದು ರಾಜ್ಯಗಳು ದೇಶದ ಒಟ್ಟು ಜನಸಂಖ್ಯೆಯಲ್ಲಿ ಶೇಕಡ ೪೦ ರಷ್ಟನ್ನು ಹೊಂದಿದೆ. ಮಧ್ಯದಲ್ಲಿ ಶಾಲೆಬಿಟ್ಟ ಅಥವಾ ಶಾಲೆಯಿಂದ ಹೊರಗುಳಿದಿರುವ ಒಟ್ಟು ಮಕ್ಕಳ ಸಂಖ್ಯೆಯಲ್ಲಿ ಶೇಕಡ ೫೦ಕ್ಕೂ ಹೆಚ್ಚಿನ ಮಕ್ಕಳು ಈ ರಾಜ್ಯಗಳಲ್ಲಿ ಇದ್ದಾರೆ. ಹಿಮಾಚಲ ಪ್ರದೇಶವನ್ನು ಹೊರತುಪಡಿಸಿ ಇತರೆ ರಾಜ್ಯಗಳು ಶಿಕ್ಷಣ ಕ್ಷೇತ್ರದಲ್ಲಿ ಕನಿಷ್ಠ ಮಟ್ಟದ ಸಾಧನೆಯನ್ನು ಮಾಡಿಲ್ಲ. ಮೊದಲನೆಯ ಭಾಗದಲ್ಲಿ ಪ್ರಾಥಮಿಕ ಶಿಕ್ಷಣದ ಅವಶ್ಯಕತೆಯನ್ನು ಕುರಿತು ಚರ್ಚೆ ಮಾಡಲಾಗಿದೆ. ಅಲ್ಲದೇ ರಾಷ್ಟ್ರದ ವಿವಿಧ ರಾಜ್ಯಗಳಲ್ಲಿನ ಸಾಕ್ಷರತೆಯ ವ್ಯತ್ಯಾಸಗಳನ್ನು ಕುರಿತು ಚರ್ಚೆ ಮಾಡಲಾಗಿದೆ. ಸಾಕ್ಷರತೆ ಮತ್ತು ಶಿಕ್ಷಣವು ರಾಷ್ಟ್ರದಲ್ಲಿ ನಿಧಾನಗತಿಯ ಪ್ರಗತಿಯನ್ನು ಹೊಂದಿದೆ ಎಂಬ ಅಭಿಪ್ರಾಯಕ್ಕೆ ಈ ಅಧ್ಯಯನ ಬಂದಿದೆ. ಎರಡನೇ ಭಾಗದಲ್ಲಿ ಶಿಕ್ಷಣದ ಕುರಿತು ಜನರು ಹೊಂದಿರುವ ನಂಬಿಕೆ ಮತ್ತು ವಾಸ್ತವಾಂಶಗಳನ್ನು ವಿಶ್ಲೇಷಿಸಿದ್ದಾರೆ. ಅವೆಂದರೆ ಎಷ್ಟರ ಮಟ್ಟಿಗೆ ಶಾಲೆಗಳು ಎಲ್ಲರಿಗೂ ದೊರಕುತ್ತಿವೆ. ಶಾಲೆಗಳಲ್ಲಿ ಸಮಾನತೆ ಇದೆಯೇ, ಶಾಲೆಯನ್ನು ಮಧ್ಯದಲ್ಲಿ ಬಿಟ್ಟ ಮಕ್ಕಳು ದುಡಿಯುತ್ತಿದ್ದಾರೆ, ಪ್ರಾಥಮಿಕ ಶಿಕ್ಷಣ ಉಚಿತ ಇನ್ನೂ ಮುಂತಾದ ಅಂಶಗಳನ್ನು ವಿವರಿಸಿದ್ದಾರೆ. ಪ್ರೋಬ್ ಅಧ್ಯಯನ ತಂಡವು ಶಾಲೆ ದೊರೆಯುವಿಕೆಯು ಕೇವಲ ಬೌದ್ಧಿಕ ಅಂತರದಿಂದ

ಪರಿಗಣಿಸದೇ, ಸಾಮಾಜಿಕ ಅಂತರವನ್ನೂ ಕೂಡ ಪರಿಗಣಿಸಬೇಕು. ಹೀಗೆ ಪರಿಗಣಿಸುವಾಗ ಸ್ಥಳೀಯ ಶಾಲೆಗೆ ಮಕ್ಕಳು ಹೋಗುವಾಗ ಇರಬಹುದಾದ ಅನೇಕ ಅಡೆತಡೆಗಳನ್ನು ಪರಿಗಣನೆ ಮಾಡಬೇಕಾಗುತ್ತದೆ. ಅನೇಕ ಪ್ರದೇಶಗಳಲ್ಲಿ ಹಳ್ಳಿಗಳು ಬಹಳ ಮಟ್ಟಿಗೆ ಬೇರೆ ಬೇರೆ ಜನವಸತಿ ನೆಲೆಗಳಾಗಿ ವಿಂಗಡಣೆಯಾಗಿರುತ್ತವೆ. (ಇದು ಜಾತಿ ಆಧಾರಿತವಾಗಿಯೂ ಇರಬಹುದು) ಮತ್ತು ಒಂದು ಜನವಸತಿ ನೆಲೆಯಲ್ಲಿನ ಮಕ್ಕಳು ಮತ್ತೊಂದು ಜನವಸತಿಯಲ್ಲಿರುವ ಶಾಲೆಗೆ ಜಾತಿ ಸಂಘರ್ಷಗಳಿಂದಾಗಿ ಹೋಗಲು ಸಾಧ್ಯವಾಗದಿರಬಹುದು. ಸರಕಾರಿ ಅಂಕಿ–ಅಂಶಗಳು, ಶೈಕ್ಷಣಿಕ ಸಮೀಕ್ಷೆಗಳು (ರಾಷ್ಟ್ರ ಮತ್ತು ರಾಜ್ಯಮಟ್ಟದ) ಶೈಕ್ಷಣಿಕ ಅಧ್ಯಯನಗಳಿಂದ ತಿಳಿದು ಬರುವ ಅಂಶವೆಂದರೆ ಗ್ರಾಮೀಣ ಪ್ರದೇಶದ ಹೆಚ್ಚಿನ ಕುಟುಂಬಗಳಿಗೆ ಅನುಕೂಲವಾದ ಅಂತರದಲ್ಲಿ ಪ್ರಾಥಮಿಕ ಶಾಲೆಗಳು ದೊರಕುತ್ತಿವೆ. ಎಂಬುದು ಆದರೆ ರಾಷ್ಟ್ರಮಟ್ಟದಲ್ಲಿ ಶೇಕಡ ೭೧ರಷ್ಟು ಗ್ರಾಮಗಳಲ್ಲಿ ಮಾಧ್ಯಮಿಕ ಶಾಲೆಯು ಇಲ್ಲವಾಗಿದೆ. ಇದು ಹಿಂದಿನ ಅತ್ಯಂತ ಗಂಭೀರವಾದ ಸಮಸ್ಯೆ. ಅಂದರೆ ಗ್ರಾಮೀಣ ಪ್ರದೇಶದ ಪೋಷಕರು ವಿಶೇಷವಾಗಿ ಹೆಣ್ಣು ಮಕ್ಕಳನ್ನು ಪಕ್ಕದ ಅಥವಾ ಬೇರೊಂದು ಗ್ರಾಮಕ್ಕೆ ಶಾಲೆಗೆ ಕಳುಹಿಸಲು ಹೆಚ್ಚಿನ ಆಸಕ್ತಿಯನ್ನು ತೋರುವುದಿಲ್ಲ. ಹೀಗಾಗಿ ಐದು, ಆರು, ಏಳನೇ ತರಗತಿಯ ನಂತರ ಹೆಚ್ಚಿನ ಹೆಣ್ಣುಮಕ್ಕಳು ಶಾಲೆಗೆ ಹೋಗಬೇಕೆಂಬ ಆಸಕ್ತಿಯನ್ನು ಹೊಂದಿದ್ದರೂ ಪೋಷಕರಿಗೆ ವಿರುದ್ಧವಾಗಿ ಶಾಲೆಗೆ ಹೋಗಲಾರದ ಸ್ಥಿತಿ ಇದೆ ಎಂಬುದನ್ನು ಈ ಅಧ್ಯಯನ ತಂಡ ಗುರುತಿಸಿದೆ.

ಒಟ್ಟಾರೆ ಪ್ರೋಬ್ ತಂಡದ ಅಧ್ಯಯನವು ಶಾಲೆ ಪರಿಸರ, ಗ್ರಾಮದ ಶೈಕ್ಷಣಿಕ ಪರಿಸರದಲ್ಲಿ ಪ್ರಮುಖವೆನಿಸಿದ ಶಿಕ್ಷಣಕ್ಕೆ ಪೂರಕವಾದ ಪರಿಸ್ಥಿತಿ ಮತ್ತು ಅಂತಹ ಪರಿಸ್ಥಿತಿಯನ್ನು ಹುಟ್ಟು ಹಾಕುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುವ ಅಂಶಗಳನ್ನು ಕುರಿತು ಅಧ್ಯಯನ ಮಾಡಿದೆ. ಶಿಕ್ಷಣಕ್ಕೆ ಪೂರಕವಾಗಿಲ್ಲದ ಪರಿಸರವು ಮಕ್ಕಳ ಬೌದ್ಧಿಕ ಬೆಳವಣಿಗೆಯನ್ನು ಉಸಿರುಗಟ್ಟಿಸುವಂತೆ ಮಾಡುತ್ತದೆ. ಇಂತಹ ಸ್ವರೂಪವನ್ನು ಹೊಂದಿದ ಶಾಲಾ ಪರಿಸರವು ಮಕ್ಕಳ ಶಿಕ್ಷಣದ ಬಗ್ಗೆ ಅನಾಸಕ್ತಿಯನ್ನು ಹುಟ್ಟಿಸುತ್ತವೆ. ಅಲ್ಲದೇ ಶಿಕ್ಷಕರಲ್ಲಿ ಗುಣಾತ್ಮಕ ಬೋಧನಾ ಶಕ್ತಿಯನ್ನು ಕುಂದಿಸುತ್ತದೆ ಎಂದು ಪ್ರೋಬ್ ಅಧ್ಯಯನ ತಂಡ ಗುರುತಿಸಿದೆ. ಈ ಅಧ್ಯಯನವು ಪ್ರಾಥಮಿಕ ಶಿಕ್ಷಣ ಕುರಿತು ನಡೆಸಿದ ಇತ್ತೀಚಿನ ಅಧ್ಯಯನಗಳಲ್ಲಿ ಅತ್ಯಂತ ಪ್ರಮುಖವಾಗಿದೆ.

ಪ್ರಾಥಮಿಕ ಶಿಕ್ಷಣ ಕುರಿತು ನಡೆದಿರುವ ಇನ್ನೂ ಕೆಲವು ಪ್ರಮುಖ ಅಧ್ಯಯನಗಳೆಂದರೆ : (ವೈದ್ಯನಾಥನ್, ೨೦೦೦; ಸಾರಥಿ ಆಚಾರ್, ೨೦೦೦; ಎಸ್. ಕೃಷ್ಣಾಜಿ೨೦೦೦; ಜೋಸೆಫ್ ಥಾಮಸ್, ೨೦೦೦; ಶ್ರೀ ವಾಸ್ತವ ರವಿ, ೧೯೯೭, ೨೦೦೧; ವಿಮಲಾ ರಾಮಚಂದ್ರನ್, ೧೯೯೯, ೨೦೦೩; ಕರ್ನಾಟಕ ಸರ್ಕಾರ ೧೯೯೬,೧೯೯೮; ಆರ್. ಗೋವಿಂದ, ೨೦೦೦, ೨೦೦೩; ಎಂ.ಡಿ. ಉಷಾದೇವಿ, ೨೦೦೩). ಹೀಗೆ ಪ್ರಾಥಮಿಕ ಶಿಕ್ಷಣ ಕುರಿತು ನಡೆದಿರುವ ಅಧ್ಯಯನಗಳು ನಮಗೆ ಬಹಳಷ್ಟು ಸಿಗುತ್ತವೆ. ವಿಶೇಷವೆಂದರೆ ೧೯೯೦ರ ದಶಕದ ಮೊದಲಾರ್ಧ ಭಾಗದಲ್ಲಿ ನಡೆದಿರುವ ಬಹಳಷ್ಟು ಅಧ್ಯಯನಗಳು ಶಿಕ್ಷಣ ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಹಿಡಿಯಾಗಿ ನೋಡಿವೆ. ಆದರೆ ೧೯೯೦ರ ದಶಕದ ಕೊನೆಯ ಭಾಗದಲ್ಲಿ ನಡೆದ ಕೆಲವು ಅಧ್ಯಯನಗಳು ಶಿಕ್ಷಣ ವ್ಯವಸ್ಥೆ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಬಿಡಿಬಿಡಿಯಾಗಿ ನೋಡುವ ಮೂಲಕ ಶೈಕ್ಷಣಿಕ ಅಭಿವೃದ್ಧಿಗೆ ಇರಬಹುದಾದ ಸ್ಥಳೀಯ ಸಾಮಾಜಿಕ ತೊಡಕುಗಳನ್ನು ವಿಶ್ಲೇಷಿಸಿವೆ. ಅಲ್ಲದೇ ಕೆಲವು ಅಧ್ಯಯನಗಳು ಸಮುದಾಯದ ಸಹಭಾಗಿತ್ವವನ್ನು ಒತ್ತಿ ಹೇಳಿವೆ. ಈ ಹಿನ್ನೆಲೆಯಲ್ಲಿ ನಮಗೆ ಪ್ರಮುಖವಾಗಿ ಕಂಡುಬರುವ ಅಧ್ಯಯನಗಳೆಂದರೆ ಪ್ರೋಬ್, ಎಂ.ಡಿ.ಉಷಾದೇವಿ ಮತ್ತು ಆರ್.ಗೋವಿಂದ ಅವರ ನೇತೃತ್ವದಲ್ಲಿ ನಡೆದಿರುವ ಅಧ್ಯಯನಗಳು. ನಿರ್ದಿಷ್ಟವಾಗಿ ಆರ್.ಗೋವಿಂದ ಅವರು ೨೦೦೩ರಲ್ಲಿ ಹೊರತಂದಿರುವ ಕಮ್ಯೂನಿಟಿ ಪಾರ್ಟಿಸಿಪೇಷನ್ ಅಂಡ್ ಎಂಪಾವರ್‌ಮೆಂಟ್ ಇನ್ ಪ್ರೈಮರಿ ಎಜುಕೇಷನ್ ಎಂಬ ಪುಸ್ತಕದಲ್ಲಿ ಪ್ರಾಸ್ತಾವನೆಯು ಸೇರಿದಂತಿರುವ ಹತ್ತು ಲೇಖನಗಳು ಸಮುದಾಯ ಭಾಗವಹಿಸುವಿಕೆಯಿಂದ ಪ್ರಾಥಮಿಕ ಶಿಕ್ಷಣದಲ್ಲಿ ಉಂಟಾಗಿರುವ ಪ್ರಗತಿಯನ್ನು ವಿವಿಧ ರಾಜ್ಯಗಳ ಅನುಭವಗಳ ಆಧಾರದಲ್ಲಿ ವಿಶ್ಲೇಷಣೆ ನಡೆಸಿದೆ.

ಅಲ್ಲದೇ ಮುಂದಿನ ಶತಮಾನದಲ್ಲಿ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಸಮುದಾಯದ ಸಹಭಾಗಿತ್ವವು ಅತ್ಯಂತ ಅಗತ್ಯ ಎಂಬುದನ್ನು ಒತ್ತಿ ಹೇಳಿವೆ.

ಆದರೆ ಶಿಕ್ಷಣದಲ್ಲಿ ಸಮುದಾಯದ ಭಾಗವಹಿಸುವಿಕೆಯು ಭಾರತದ ಮಟ್ಟಿಗೆ ಹೊಸದಾದ ಪರಿಕಲ್ಪನೆಯಲ್ಲ. ಶಿಕ್ಷಣವನ್ನು ಸ್ವಾತಂತ್ರ ಪೂರ್ವದ ವರ್ಷಗಳಲ್ಲಿ ಬಿಡುಗಡೆಯ ಅಭಿಯಾನದ ದೃಷ್ಟಿಯಲ್ಲಿ ನೋಡಲಾಗುತ್ತಿತ್ತು. ನಿರ್ದಿಷ್ಟವಾಗಿ ಗಾಂಧಿಯವರ ಶಿಕ್ಷಣ ನೀತಿಯಲ್ಲಿ, ಶಾಲೆ ಅಥವಾ ಯಾವುದೇ ಬಗೆಯ ಶೈಕ್ಷಣಿಕ ವ್ಯವಸ್ಥೆಯು ಸಮುದಾಯದ ಒಂದು ಭಾಗವಾಗಿ ಕಂಡುಬರುತ್ತದೆ. ಹೀಗಾಗಿ ಶಾಲೆಯ ಕೆಲಸ ಕಾರ್ಯದಲ್ಲಿ ಸಮುದಾಯದ ಭಾಗವಹಿಸುವಿಕೆಯ ಪ್ರಶ್ನೆಯು ಹೆಚ್ಚಿನ ಚರ್ಚೆ ಹಾಗೂ ಅನುಸಂಧಾನಗಳು ನಡೆದಿರುವ ವಿಷಯವಾಗಿದೆ. ಇದೇನೆ ಇದ್ದರೂ ಸ್ವಾತಂತ್ರ್ಯ ನಂತರದ ವರ್ಷಗಳಲ್ಲಿ ಇದಕ್ಕೆ ಭಿನ್ನವಾದ ಸಂಗತಿಗಳು ಶಿಕ್ಷಣ ಕ್ಷೇತ್ರದಲ್ಲಿ ಬೆಳವಣಿಗೆಯಾಗಿವೆ. ಪ್ರಾಥಮಿಕ ಶಿಕ್ಷಣವನ್ನು ಸರಕಾರೀಕರಣಗೊಳಿಸುವ ಗುಣ ಲಕ್ಷಣದಿಂದ ಶಾಲೆಯೆಂಬುದು ಸಮುದಾಯ ಸೇವೆಯಿಂದ ಸಂಪೂರ್ಣವಾಗಿ ವಿಮುಖಗೊಂಡಿತು. ಮತ್ತೆ ಸಮುದಾಯದ ಭಾಗವಹಿಸುವಿಕೆಯು ಪ್ರಮುಖವಾದ ಚರ್ಚೆಯ ವಿಷಯವಾಗಿದ್ದು ೧೯೮೦ರ ದಶಕದ ಮಧ್ಯಭಾಗದಲ್ಲಿ, ಅದರಲ್ಲಿಯೂ ವಿಕೇಂದ್ರಿಕರಣವು ಶೈಕ್ಷಣಿಕ ವ್ಯವಸ್ಥೆಯ ಪುನರ್ ನಿರ್ಮಾಣದ ಮತ್ತು ಬದಲಾವಣೆಯ ಪ್ರಕ್ರಿಯೆಗೆ ಅತ್ಯಂತ ಪ್ರಮುಖವಾದ ಅಂಶ ಎಂದು ಗುರುತಿಸಿದ ನಂತರ (ಆರ್. ಗೋವಿಂದ, ೨೦೦೩). ಈ ಪ್ರಕ್ರಿಯೆ ಮೂಲ ಉದ್ದೇಶ ಶಾಸನಬದ್ಧ ಜವಬ್ದಾರಿಗಳನ್ನು ನೀಡುವ ಮೂಲಕ, ಪೋಷಕರು ಸ್ಥಳೀಯ ಜನಸಮುದಾಯ ಮತ್ತು ಸ್ಥಳೀಯ ಚುನಾಯಿತ ಜನಪ್ರತಿನಿಧಿಗಳನ್ನು ಶೈಕ್ಷಣಿಕ ವ್ಯವಸ್ಥೆಯ ಅಭಿವೃದ್ಧಿಗೆ ತೊಡಗಿಸುವುದಾಗಿದೆ.

ಹೀಗೆ ಶಾಲಾ ಶಿಕ್ಷಣದ ಅಭಿವೃದ್ಧಿಗೆ ಶಿಕ್ಷಣ ಆಯೋಗಗಳ ನೀತಿ ನಿಯಮಗಳು, ಸಂಶೋಧನೆಯ ಅಧ್ಯಯನಗಳುಪರವಹಿಸಿದ್ದು ಒಂದು ಕಡೆಯಾದರೆ, ರಾಷ್ಟ್ರದಾದ್ಯಂತ ಅನೇಕ ರಾಜ್ಯಗಳಲ್ಲಿ ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಸಮುದಾಯದ ಸಹಭಾಗಿತ್ವಕ್ಕೆ ಇರುವ ಪ್ರಮುಖ ಕಾರ್ಯಕ್ರಮಗಳು ಇದಕ್ಕೆ ಸಾಕ್ಷಿಯಾಗಿವೆ. ಹೀಗೆ ಆಚರಣೆಯಲ್ಲಿ ಇರುವ ಬಹುತೇಕ ಎಲ್ಲಾ ಕಾರ್ಯಕ್ರಮಗಳ ಪ್ರಮುಖ ಚಟುವಟಿಕೆ ಸಮುದಾಯ ಸಹಭಾಗಿತ್ವವನ್ನು ಅಭಿವೃದ್ಧಿಪಡಿಸುವುದಾಗಿದೆ. ಕೆಲವು ಕಾರ್ಯಕ್ರಮಗಳು ವಿಶೇಷವಾಗಿ ಶಾಲೆ ಮತ್ತು ಸಮುದಾಯ ಹೆಚ್ಚು ಹತ್ತಿರವಾಗುವಂತೆ ಮಾಡುವ ಜೊತೆಗೆ ಸ್ಥಳೀಯ ಸಮುದಾಯದ ಸದಸ್ಯರುಗಳನ್ನು ತೊಡಗಿಸಿಕೊಂಡು ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗೆ ಸಹಕಾರಿಯಾಗುವ ಕಾರ್ಯತಂತ್ರಗಳನ್ನು ಉತ್ತಮ ರೀತಿಯಲ್ಲಿ ಕಂಡುಕೊಂಡಿವೆ. ಅವುಗಳಲ್ಲಿ ಪ್ರಮುಖವಾದವೆಂದರೆ ಕೇರಳದಲ್ಲಿ ಡಿ.ಪಿ.ಇ.ಪಿ ಕಾರ್ಯಕ್ರಮದಡಿಯಲ್ಲಿ ರಚನೆ ಗೊಂಡಿರುವ ತಾಯಂದಿರು ಮತ್ತು ಶಿಕ್ಷಕರು ಜೊತಗೂಡಿರುವ ಸಂಘಗಳು, ರಾಜಸ್ಥಾನದಲ್ಲಿ ಲೋಕ ಜಂಬಿಷ್ ಕಾರ್ಯಕ್ರಮದ ಅಡಿಯಲ್ಲಿ ಸ್ಥಾಪನೆಯಾಗಿರುವ 'ಕೋರ್ ಟೀಮ್ ಅಂಡ್ ವಿಮೆನ್ಸ್ ಗ್ರೂಪ್'.ಹೀಗೆ ಗ್ರಾಮ ಶಿಕ್ಷಣ ಸಮಿತಿಗಳನ್ನು ಹೊರತುಪಡಿಸಿದಂತೆ ಇನ್ನೂ ಅನೇಕ ಸಮಿತಿಗಳು ಹಲವಾರು ರಾಜ್ಯಗಳಲ್ಲಿ ಕಂಡುಬರುತ್ತವೆ. ಇನ್ನೂ ಕೆಲವು ರಾಜ್ಯಗಳಲ್ಲಿ ನಿರ್ದಿಷ್ಟವಾಗಿ ಮಧ್ಯಪ್ರದೇಶದಲ್ಲಿ ಶಿಕ್ಷಣ ಸಮಿತಿಗಳನ್ನು ಚುನಾಯಿತ ಪಂಚಾಯತಿ ರಾಜ್ ಸಂಸ್ಥೆಯ ಜೊತೆಗೆ ಸಮನ್ವಯ ಮಾಡುವ ಪ್ರಯತ್ನವು ಬಹಳ ಗಂಭೀರವಾಗಿ ನಡೆಯುತ್ತಿದೆ (ಆರ್. ಗೋವಿಂದ, ೨೦೦೩). ಪ್ರಾಥಮಿಕ ಶಿಕ್ಷಣದಲ್ಲಿ ಸಮುದಾಯದ ಭಾಗವಹಿಸುವಿಕೆ ಮತ್ತು ಅವುಗಳ ಸಬಲೀಕರಣದ ನಿರ್ಧಾರಗಳು ಪ್ರಮುಖವಾದ ಸ್ಥಾನವನ್ನು ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಪಡೆದುಕೊಳ್ಳುತ್ತಿದೆ. ಇದು ಕೇವಲ ಶಿಕ್ಷಣದ ನಿರ್ವಹಣೆ ಮತ್ತು ಆಡಳಿತಕ್ಕೆ ಸಂಬಂಧಿಸಿದ ಸೀಮಿತ ಚರ್ಚೆಯಾಗದೆ ಸಾರ್ವಜನಿಕ ಆಡಳಿತದಲ್ಲಿ ರಾಜಕೀಯ ಪುನರ್ ಸಂಘಟನೆಯ ಮಾಪನವಾಗಿದೆ. ಬದಲಾಗುವ ಮಾದರಿಯ ರಚನೆಯನ್ನು ಸ್ಪಷ್ಟವಾಗಿ ನಿರ್ಮಾಣ ಮಾಡುವಲ್ಲಿ ವಿವಿಧ ರಾಜ್ಯಗಳು ತಮ್ಮದೆ ಪ್ರಯತ್ನಗಳನ್ನು

ಮುಂದುವರಿಸಿವೆ. ಆದರೆ ಇಂತಹ ಸಮಿತಿಗಳ ರಚನೆಯಲ್ಲಿ ರಾಜ್ಯಶಾಸನ ಮತ್ತು ಭಾಗವಹಿಸುವ ಸಮುದಾಯ ಗುಂಪುಗಳ ಸ್ವರೂಪವು ಪ್ರತಿ ರಾಜ್ಯದಲ್ಲಿ ಬದಲಾಗಿದೆ.

೧.೩ ಸಮಸ್ಯೀಕರಣ

ಇದುವರೆಗೆ ನಡೆದಿರುವ ಅಧ್ಯಯನಗಳನ್ನು ಸಮೀಕ್ಷೆಗೆ ಒಳಪಡಿಸಿದಾಗ ಅನೇಕ ಪ್ರಶ್ನೆಗಳು ನಮ್ಮಗೆ ಬರುತ್ತವೆ. ಅವುಗಳಲ್ಲಿ ಪ್ರಮುಖವಾದ ಪ್ರಶ್ನೆಗಳು ಅಂದರೆ-ಗುಣಾತ್ಮಕ ಶಾಲಾ ಶಿಕ್ಷಣದ ಅಭಿವೃದ್ಧಿಗೆ ಸಹಭಾಗಿತ್ವವನ್ನು ಪರಿಣಾಮಗೊಳಿಸುವ ಬಗೆ ಹೇಗೆ? ಅಲ್ಲಿ ನಾವು ಕಂಡುಕೊಂಡಿರುವ ಸತ್ಯಗಳು ಯಾವುವು? ಅವು ಯಾವ ಬಗೆಯ ಸಾಮಾಜಿಕ, ರಾಜಕೀಯ ಮತ್ತು ಆಡಳಿತಾತ್ಮಕ ಸವಾಲುಗಳನ್ನು ಎದುರಿಸುತ್ತಿವೆ? ಸಮುದಾಯದ ಸಹಭಾಗಿತ್ವ ಪರಿಣಾಮಕಾರಿಯಾಗಬೇಕಾದರೆ ಇರಬಹುದಾದ ದಾರಿಗಳು ಯಾವುವು? ಸಾಧ್ಯತೆಗಳು ಯಾವುವು? ಅದಕ್ಕೆ ನಮ್ಮ ಸಾಮಾಜಿಕ ಜವಾಬ್ದಾರಿಗಳು ಯಾವುವು? ನಮ್ಮ ಬದ್ಧತೆಯೇನು? ಅದಕ್ಕೆ ಎಷ್ಟು ಸಮಯ ಬೇಕು? ಬೇಕಾಗಿರುವ ಹಣಕಾಸಿನ ಸೌಲಭ್ಯಗಳೆಷ್ಟು? ಇತ್ಯಾದಿ ಅಂಶಗಳನ್ನು ವಿಶ್ಲೇಣಾತ್ಮಕವಾಗಿ ಚರ್ಚಿಸಿ ಒಮ್ಮತಾಭಿಪ್ರಾಯಕ್ಕೆ ಬರುವ ಮೂಲಕ ಕ್ರಿಯಾ ಯೋಜನೆಯನ್ನು ನಾವೆಲ್ಲರೂ ಸೇರಿ ರೂಪಿಸಬೇಕಿದೆ. ಈ ಕಾರಣಕ್ಕಾಗಿಯೇ ಈ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿರುವ ಮತ್ತು ಅದರ ಪಾಲುದಾರರು ತಳಮಟ್ಟದಲ್ಲಿ ಆಚರಣೆಗೆ ತರುತ್ತಿರುವ ಆಡಳಿತ ವರ್ಗ, ಶಿಕ್ಷಕರು, ಎಸ್.ಡಿ.ಎಂ.ಸಿ. ಸದಸ್ಯರು, ಪಂಚಾಯತ್ ರಾಜ್ ಸಂಸ್ಥೆಗಳು ಅದರ ಜನಪ್ರತಿನಿಧಿಗಳು, ಈ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ಆಸಕ್ತರನ್ನು ಹೇಗೆ ಒಟ್ಟುಗೂಡಿಸಿ ಕೆಲಸ ನಿರ್ವಹಿಸಬಹುದು ಎಂಬುದನ್ನು ಕಂಡುಕೊಳ್ಳಬಹುದಾಗಿದೆ.

ಶಾಲಾ ಶಿಕ್ಷಣ ವ್ಯವಸ್ಥೆಯ ನಿಯಂತ್ರಣವು ಸ್ಥಳೀಯ ಮಟ್ಟಕ್ಕೆ ನಿಧಾನವಾಗಿ ರೂಪಾಂತರವಾಗುತ್ತಿದೆ. ಈ ಪ್ರಕ್ರಿಯೆಯಿಂದ ಸಾಂಪ್ರದಾಯಕ ದೃಷ್ಟಿಕೋನದಲ್ಲಿ ವ್ಯಾಪಕ ಬದಲಾವಣೆಯಾಗಿರುವುದನ್ನು ಗುರುತಿಸಬಹುದು. ಆದರೆ ಇಂತಹ ಬದಲಾವಣೆಗಳನ್ನು ಆಚರಣೆಗೆ ತರುವುದು ಹೇಗೆ? ಇದಕ್ಕೆ ಸ್ಥಳೀಯ ಮಟ್ಟದ ಆಡಳಿತ ಪ್ರಕ್ರಿಯೆಯಲ್ಲಿ ಭಾಗವಹಿಸುವ ಎಲ್ಲಾ ಪಾಲುದಾರರಿಗೆ ಬೇಕಾಗುವ ಹೊಸ ಬಗೆಯ ಕುಶಲತೆ ಮತ್ತು ಮನೋಭಾವನೆಯನ್ನು ಹುಟ್ಟು ಹಾಕುವುದು ಒಂದು ದೊಡ್ಡ ಸವಾಲಾಗಿದೆ. ವಿಶೇಷವಾಗಿ ಸಾಂಪ್ರಾದಾಯಿಕ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಕೆಲಸ ಮಾಡುತ್ತಿರುವ ಶಾಲೆಗಳ ಮುಖ್ಯ ಶಿಕ್ಷಕರು, ಸಹ ಶಿಕ್ಷಕರು ಮತ್ತು ಸಮುದಾಯ ಹೊಂದಿರುವ ಸಲಕರಣೆಗಳು ಮತ್ತು ಕುಶಲತೆ ಇಂತಹ ಸವಾಲುಗಳನ್ನು ಸಮರ್ಥವಾಗಿ ಎದುರಿಸಬಲ್ಲವೇ? ಅದೇನೇ ಇದ್ದರೂ, ಸ್ಥಳೀಯ ಮಟ್ಟದಲ್ಲಿ ಶಿಕ್ಷಣ ಆಡಳಿತವು ಹೊಸ ಬಗೆಯ ಸವಾಲುಗಳನ್ನು ನಮ್ಮ ಮುಂದೆ ಇಡುತ್ತವೆ. ನಿರ್ದಿಷ್ಟವಾಗಿ ಸ್ಥಳೀಯ ಸಮುದಾಯದ ಸದಸ್ಯರಿಗೆ ಸಾಮಾರ್ಥ್ಯ ರೂಪಿಸುವ ತರಬೇತಿ ಅಗತ್ಯವಿದೆಯೇ? ಇಂತಹ ತರಬೇತಿಗಳನ್ನು ಸಂಘಟಿಸುವುದು ಹೇಗೆ? ಈಗಾಗಲೇ ಅಸ್ತಿತ್ವದಲ್ಲಿ ಇರುವ ಸಾಂಸ್ಥಿಕ ರಚನೆಗೆ ಎಲ್ಲರನ್ನೂ ತಲುಪುವ ಸಾಮಾರ್ಥ್ಯ ಇದೆಯೇ? ಸಾಮಾರ್ಥ್ಯ ರೂಪಿಸುವ ತರಬೇತಿ ಕಾರ್ಯಾಗಾರದಲ್ಲಿ ಶಾಲೆಗಳಿಂದ, ಸಮುದಾಯದಿಂದ ಮತ್ತು ಶಿಕ್ಷಣ ಇಲಾಖೆ ಭಾಗವಹಿಸುವ ವಿವಿಧ ಗುಂಪುಗಳ ಪಾಲುದಾರರಿಗೆ ಪರಿಣಾಮಕಾರಿಯಾಗಬಹುದಾದ ಒಳನೋಟಗಳನ್ನು ನೀಡುವುದು ಯಾವ ಸ್ವರೂಪದ್ದಾಗಿರಬೇಕು? ಇಂತಹ ಕೆಲವು ಪ್ರಮುಖ ಪ್ರಶ್ನೆಗಳಿಗೆ ಶಾಲಾ ಶಿಕ್ಷಣದ ಪ್ರಕ್ರಿಯೆಯಲ್ಲಿ ಭಾಗವಹಿಸುವ ಸ್ಥಳೀಯ ಪಾಲುದಾರ ಸಮುದಾಯದ ಪೋಷಕರ ಜೊತೆಗೆ ಚರ್ಚೆ ನಡೆಸುವ ಮೂಲಕ ಉತ್ತರವನ್ನು ಕಂಡುಕೊಳ್ಳಲು ಪ್ರಸ್ತುತ ಅಧ್ಯಯನದಲ್ಲಿ ಪ್ರಯತ್ನಿಸಲಾಗುವುದು.

ಶಾಲಾ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯು ಗುರಿಯ ದೃಷ್ಟಿಯಿಂದಾಗಲಿ ಅಥವಾ ತಲುಪಬೇಕಾದ ಜನ ಸಮುದಾಯದ ದೃಷ್ಟಿಯಿಂದಾಗಲಿ ಸ್ಪಷ್ಟತೆಯಿಂದ ಕೂಡಿದೆಯೇ? ಕೂಡಿದ್ದೆ ಆದರೆ ಅನುಷ್ಠಾನ ಪ್ರಕ್ರಿಯೆ ಅದೇ ಮಾರ್ಗದಲ್ಲಿ ಸಾಗುತ್ತಿದೆಯೇ? ಶಾಲಾ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆ ಸಮುದಾಯಕ್ಕೆ ಎಷ್ಟರ ಮಟ್ಟಿಗೆ

ಅರ್ಥವಾಗಿದೆ?ರಾಜಕೀಯ ಇಚ್ಛಾಶಕ್ತಿಯನ್ನು ನೀತಿ-ನಿರೂಪಣೆಯಲ್ಲಿ ಪ್ರಕಟಿಸಿರುವ ಸರ್ವಶಿಕ್ಷಣ ಅಭಿಯಾನವು ಈ ಸಮಾಜದಲ್ಲಿ ಸಾವಿರಾರು ವರ್ಷಗಳಿಂದ ನಿರಂತರವಾಗಿ ಶಿಕ್ಷಣದಿಂದ ವಂಚಿತರಾಗಿರುವ ಜನ ಸಮುದಾಯದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವ ಯೋಜನೆಯಾಗಿದೆಯೇ? ಪ್ರತಿಷ್ಠಿತ ಖಾಸಗಿ ಶಾಲೆಗಳನ್ನೊಳಗೊಂಡಂತೆ ಇತರೆ ಖಾಸಗಿ ಶಾಲೆಗಳಲ್ಲಿ ಸಿಗಬಹುದಾದ ಗುಣಮಟ್ಟದ ಶಿಕ್ಷಣ ಈ ಮಕ್ಕಳಿಗೂ ಸಿಗುತ್ತಿದೆಯೇ? ಸಿಗುತ್ತಿಲ್ಲ ಎನ್ನುವುದಾದರೆ ಇದೆಲ್ಲಾ ಸಾಧ್ಯವಾಗಬೇಕಾದರೆ ಸರ್ಕಾರಿ ಶಾಲೆಗಳಲ್ಲಿ ಕಾರ್ಯ ನಿರ್ವಹಿಸುತ್ತಿರುವ ನಮ್ಮ ಶಿಕ್ಷಕ ಸಮುದಾಯ ಸಮರ್ಪಣ ಮನೋಭಾವವನ್ನು ಬೆಳೆಸಿಕೊಳ್ಳಲು ಏನು ಮಾಡಬೇಕು? ಎಲ್ಲಕ್ಕಿಂತ ಮೊದಲು ಬದ್ಧತೆ, ಹೊಣೆಗಾರಿಕೆ ಮತ್ತು ಶಾಲಾ ಶಿಕ್ಷಣ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಬರಬೇಕಾದರೆ ಏನು ಮಾಡಬೇಕು? ಶಿಕ್ಷಣ ವಂಚಿತ ಮತ್ತುತುಳಿತಕ್ಕೊಳಗಾದ ಮಕ್ಕಳ ಬದುಕಿನಲ್ಲಿ ಹೊಸ ಭರವಸೆಯನ್ನು ಮೂಡಿಸುವುದು ಹೇಗೆ?

ಶಾಲಾ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯನ್ನು ಯಶಸ್ವಿಯಾಗಿ ಈಡೇರಿಸಲು ಅಗತ್ಯವಾದ ರಾಜಕೀಯ ಇಚ್ಛಾಶಕ್ತಿಯನ್ನು ಸಂಘಟಿಸಲು ಆಗಿದೆಯೇ? ಆಗಿದ್ದರೆ ಹೇಗೆ? ಆಗಿಲ್ಲದಿದ್ದರೆ ಅದನ್ನು ಸಂಘಟಿಸುವ ಬಗೆ ಹೇಗೆ? ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಅಡಿಯಲ್ಲಿ ರಾಜ್ಯ ಸರ್ಕಾರವು ಅಪಾರ ಅನುದಾನವನ್ನು ಪಡೆಯುತ್ತಿದ್ದು, ಜಿಲ್ಲಾ ಮತ್ತು ಬ್ಲಾಕ್ ಹಂತದಲ್ಲಿ ಯೋಜನೆಯ ಅನುಷ್ಠಾನಕ್ಕಾಗಿ ರಚಿಸಲ್ಪಟ್ಟಿರುವ ಅನುಷ್ಠಾನ ಸಮಿತಿಗಳ ಕೆಲಸಗಳೇನು? ಜಿಲ್ಲಾ ಮತ್ತು ಬ್ಲಾಕ್ ಮಟ್ಟದಲ್ಲಿ ತಯಾರಾಗುವ ಯೋಜನೆಗಳನ್ನು ಹೇಗೆ ಅನುಮೋದಿಸಿ ಜಾರಿಗೊಳಿಸಲಾಗುತ್ತಿದೆ? ಈ ಎಲ್ಲಾ ಯೋಜನೆಗಳು ಸೂಕ್ತ ರೀತಿಯಲ್ಲಿ ಅನುಮೋದನೆಗೊಂಡು ಜಾರಿಯಾಗುತ್ತಿದಿಯೇ? ಅನುಷ್ಠಾನದ ಸಂದರ್ಭದಲ್ಲಿ ಶಾಸಕಾಂಗ ಮತ್ತು ಕಾರ್ಯಾಂಗ ಪರಸ್ಪರ ಒಮ್ಮತದಿಂದ ಕೆಲಸ ನಿರ್ವಹಿಸುತ್ತಿವೆಯೇ? ಶಾಸಕಾಂಗವು ಆದಷ್ಟು ದೈನಂದಿನ ಕಾರ್ಯಾಂಗದ ಅನುಷ್ಠಾನದ ಚಟುವಟಿಕೆಗಳಿಂದ ದೂರವಿದ್ದು ನೈತಿಕ ಬೆಂಬಲ ಮಾತ್ರ ನೀಡುತ್ತಿವೆಯೇ? ಅಥವಾ ಅಭಿವೃದ್ಧಿ ಯೋಜನೆಗಳ ಅನುಷ್ಠಾನದಲ್ಲಿ ಪಕ್ಷ ರಾಜಕೀಯವನ್ನು ಬೆರೆಸುವ ಮತ್ತು ರಾಜಕೀಯ ಹಸ್ತಕ್ಷೇಪ ಮಾಡುವ ಪರಿಪಾಠವಾಗುತ್ತಿದೆಯೇ?. ಇಂತಹ ಪರಿಪಾಟ ನಿಲ್ಲಬೇಕಾದರೆ ಅಗತ್ಯ ರಾಜಕೀಯ ಇಚ್ಛಾಶಕ್ತಿ ಯಾವ ಮಟ್ಟದಲ್ಲಿ ಪ್ರಕಟವಾಗಬೇಕು?ಈ ಎಲ್ಲಾ ಪ್ರಶ್ನೆಗಳನ್ನು ವಿವರವಾಗಿ ಚರ್ಚಿಸುವ ಪ್ರಯತ್ನಮಾಡಲಾಗಿದೆ.

ಶಾಲಾ ಶಿಕ್ಷಣದ ಸಾರ್ವತ್ರೀಕರಣ ಬೇಡಿಕೆ ಸಾಕಾರಗೊಳ್ಳಬೇಕಾದರೆ ಸಮುದಾಯ ಅದರಲ್ಲೂ ವಿಶೇಷವಾಗಿ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ-ತಾಯಿ ಶಾಲಾ ಚಟುವಟಿಕೆಗಳಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿಲ್ಲ ಏಕೆ? ಭಾಗವಹಿಸುವಂತಾಗಲು ಕಂಡುಕೊಳ್ಳಬೇಕಾದ ಕಾರ್ಯತಂತ್ರಗಳೇನು? ಶಾಲಾ ಅಭಿವೃದ್ಧಿಯ ಹಂತಗಳಾದ ಯೋಜನೆ, ಸಂಪನ್ಮೂಲಗಳ ಕ್ರೋಢೀಕರಣ, ಅನುಷ್ಠಾನ, ಅನುಪಾಲನೆ ಮತ್ತು ಮೌಲ್ಯಮಾಪನ ಪ್ರಕ್ರಿಯೆಗಳಲ್ಲಿ ಸಮುದಾಯ ಸಕ್ರೀಯವಾಗಿ ಪಾಲ್ಗೊಳ್ಳುವಂತಾಗಲು ಏನು ಮಾಡಬೇಕು? ಸಮುದಾಯದ ಸಕ್ರಿಯ ಸಹಭಾಗಿತ್ವದಿಂದ ಮಾತ್ರ ಶಾಲಾ ಶಿಕ್ಷಣದ ಸಾರ್ವತ್ರೀಕರಣ ಯಶಸ್ವಿಯಾಗಲು ಸಾಧ್ಯವೇ? ಸಮುದಾಯದ ಭಾಗವಹಿಸುವಿಕೆಯು ಸರ್ವಶಿಕ್ಷಣ ಅಭಿಯಾನದ ಕೇಂದ್ರ ಬಿಂದು ಏಕೆ ಆಗಿದೆ?ಸಮುದಾಯ ಭಾಗವಹಿಸುವಿಕೆಯಂತಹ ಪ್ರಯತ್ನಗಳು ಎಲ್ಲಿ ನಡೆದಿವೆ? ಇದರಿಂದ ಕಣ್ಣಿಗೆ ಕಾಣಬಹುದಾದ ಯಶಸ್ವಿ ಫಲಿತಾಂಶಗಳೇನು? ಶಾಲಾ ಶಿಕ್ಷಣದ ಸಾರ್ವತ್ರೀಕರಣವನ್ನು ಯಶಸ್ವಿಯಾಗಿ ಈಡೇರಿಸಬೇಕಾದರೆ, ರಾಷ್ಟ್ರೀಯ ಮಟ್ಟದಲ್ಲಿ ಸರ್ವ ಶಿಕ್ಷಣ ಅಭಿಯಾನ ಯೋಜನೆಯ ಮೂಲಕ ಅಭಿವ್ಯಕ್ತಗೊಂಡಿರುವ ರಾಜಕೀಯ ಇಚ್ಛಾಶಕ್ತಿ ಕೆಳಸ್ತರಗಳವರೆಗೆ ಮುಟ್ಟಿದೆಯೇ? ಇದು ನಿಜವಾದ ಅರ್ಥದಲ್ಲಿ ಸಾಕಾರಗೊಳ್ಳಬೇಕಾದರೆ ಏನಾಗಬೇಕಿದೆ? ಇದಕ್ಕಾಗಿ ನಮ್ಮ ರಾಜ್ಯದಲ್ಲೂ ಕೂಡ ಶಾಲಾ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಗೆ ಅಗತ್ಯವಾದ ರಾಜಕೀಯ ಇಚ್ಛಾಶಕ್ತಿ ಪ್ರಕಟವಾಗಿದೆಯೇ? ಪೂರಕವಾಗಿ ಕಾರ್ಯನಿರ್ವಹಿಸುವಂತಾಗಬೇಕಾದರೆ ಯಾವ ರೀತಿ ಎಂಬುದನ್ನು ಚರ್ಚಿಸುವುದರ ಜೊತೆಗೆ, ಎಲ್ಲರ ಪ್ರತಿ ಚಿಂತನೆ

ಮತ್ತು ಕ್ರಿಯೆಯಲ್ಲಿ ಮಕ್ಕಳ ಅಭಿವೃದ್ಧಿ ಮೊದಲ ವಿಷಯವಾಗಬೇಕಾದರೆ ಹೇಗಿರಬೇಕು? ಎಂಬುದನ್ನು ಕಂಡುಕೊಳ್ಳುವ ಆಶಯವನ್ನು ಈ ಅಧ್ಯಯನ ಹೊಂದಿದೆ.

ಸಮುದಾಯದ ಸದಸ್ಯರಿಗೆ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ-ತಾಯಂದಿರಿಗೆ ಹೊಸದಾಗಿ ಜಾರಿಯಾಗಿರುವ ಉಪವಿಧಿ ಮತ್ತು ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಇರುವ ಎಲ್ಲಾ ಕಾರ್ಯಕ್ರಮಗಳ ಬಗ್ಗೆ ಸೂಕ್ತ ಮಾಹಿತಿ ಇದಿಯೇ? ಇಲ್ಲದಿದ್ದರೆ ಇದಕ್ಕಿರುವ ಅಡೆತಡೆಗಳೇನು? ಮಾಹಿತಿಗಳನ್ನು ಸಮರ್ಪಕವಾಗಿ ಸಮುದಾಯಕ್ಕೆ ತಲುಪದಿರಲು ಕಾರಣಗಳು? ಹಾಗೂ ಸಮುದಾಯದ ಪಾಲ್ಗೊಳ್ಳವಿಕೆ ಏಕೆ ಆಗುತ್ತಿಲ್ಲ?. ಮಾಹಿತಿಯನ್ನು ತಲುಪಿಸುತ್ತಿರುವ ಮೂಲಗಳು ಯಾವುವು? ಈ ಮೂಲಗಳು ಸರಿ ಇದಿಯೇ?ಇಲ್ಲದಿದ್ದಲ್ಲಿ ಮಾಹಿತಿಯನ್ನು ಒದಗಿಸುವರು ಯಾರು?. ಈ ಕ್ಷೇತ್ರದಲ್ಲಿ ಈವರೆಗೆ ನಡೆದಿರುವ ಪ್ರಯತ್ನಗಳೇನು? ಮಾಹಿತಿಯು ಸಮರ್ಪಕವಾಗಿ ಸಮುದಾಯಕ್ಕೆ ತಲುಪದಿರುವುದು ಸಮುದಾಯದ ಪಾಲ್ಗೊಳ್ಳುವಿಕೆಗೆ ಒಂದು ಹಿನ್ನಡೆಯಾಗಿದೆಯೇ? ಜನರ ಸಬಲೀಕರಣದ ಪ್ರಮುಖ ಅಸ್ತ್ರವಾಗಿರುವ ಮಾಹಿತಿ ಜನ ಸಮುದಾಯವನ್ನು ತಲುಪದ ಹೊರತು ಜನರು ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿಪಾಲ್ಗೊಳ್ಳುವಂತೆ ನಿರೀಕ್ಷಿಸುವುದು ತಪ್ಪಾಗುತ್ತದೆ ಏಕೆ? ಸಮುದಾಯಕ್ಕೆ ಅಗತ್ಯ ಮಾಹಿತಿ ನೀಡಲು ಮುಂದಾಗುತ್ತಿಲ್ಲ ಏಕೆ? ಮುಂದಾದರೂ ಅಪೂರ್ಣ ಮಾಹಿತಿಯನ್ನು ನೀಡುತ್ತಿರುವ ಅಂಶಗಳು ಯಾವುವು ಎನ್ನುವುದನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗುವುದು.

ಎಸ್.ಡಿ.ಎಂ.ಸಿ.ಗಳ ರಚನೆ ಮತ್ತು ದೈನಂದಿನ ಕಾರ್ಯ ನಿರ್ವಹಣೆಗೆ ಅಡ್ಡಿಯನ್ನುಂಟುಮಾಡುತ್ತಿವೆಯೇ? ರಾಜಕೀಯ ಹಸ್ತಕ್ಷೇಪ ಏನಾದರೂ ಆಗುತ್ತಿದೆಯೇ? ಆಗುತ್ತಿದ್ದರೆ ಇಂತಹ ಹಸ್ತಕ್ಷೇಪಗಳನ್ನು ತಡೆಗಟ್ಟ ಎಸ್.ಡಿ.ಎಂ.ಸಿಗಳ ಸ್ವಾಯತ್ತತೆಯನ್ನು ಕಾಪಾಡಬಹುದೆ? ಎಸ್.ಡಿ.ಎಂ.ಸಿಗಳ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆ ಇದೆಯೇ? ಎಂಬುದನ್ನು ಚರ್ಚಿಸಲಾಗುವುದು. ಎಸ್.ಡಿ.ಎಂ.ಸಿಗಳ ರಚನೆಯಲ್ಲಿ ಆಗಾಗ್ಗೆ ಉಂಟಾಗಿರುವ ಗೊಂದಲ ಮತ್ತು ದ್ವಂದ್ವಗಳು ಏಕೆ ಉಂಟಾದವು? ಇದರ ಹಿಂದಿರುವ ಕಾರಣಗಳೇನು? ಹೆಚ್ಚಿನ ವಿಕೇಂದ್ರೀಕರಣವನ್ನು ತರಬಹುದೇ? ತರಬಹುದಾಗಿದ್ದರೆ ಎಸ್.ಡಿ.ಎಂ.ಸಿಯೊಳಗೆ ಉಪ ಸಮಿತಿಗಳನ್ನು ರಚಿಸಬಹುದೇ? ರಚಿಸಿದ್ದೇ ಆದರೆ ಅವರ ಪಾತ್ರ ಮತ್ತು ಜವಾಬ್ದಾರಿಗಳನ್ನು ಮತ್ತು ರೂಪರೇಷೆಗಳ ಬಗ್ಗೆ ಪ್ರಸ್ತುತ ಅಧ್ಯಯನದಲ್ಲಿ ನೋಡಲಾಗುವುದು.

ಶಾಲಾ ಕೆಲಸ ಕಾರ್ಯಗಳು ಸುಸೂತ್ರವಾಗಿ ನಡೆಯುತ್ತಿರುವುದನ್ನು ಖಾತ್ರಿಪಡಿಸಿಕೊಳ್ಳಲು ಶಾಲೆಗೆ ಭೇಟಿ ನೀಡುತ್ತಿದ್ದಾರೆಯೇ? ನೀಡುತ್ತಿದ್ದರೆ ಹೇಗೆ? ನೀಡುತ್ತಿಲ್ಲವಾದರೆ ಏಕೆ? ಇದರಿಂದ ಶಾಲೆಯ ಪ್ರಕ್ರಿಯೆಯ ಮೇಲೆ ಯಾವ ರೀತಿಯ ಪರಿಣಾಮ ಉಂಟಾಗುತ್ತಿದೆ? ಎಸ್.ಡಿ.ಎಂ.ಸಿ. ಸದಸ್ಯರು ಶಾಲಾ ಕಾಮಗಾರಿಗಳಲ್ಲಿ ಮಾತ್ರ ತೊಡಗಿಸಿಕೊಳ್ಳಬೇಕೆ? ಶೈಕ್ಷಣಿಕ ಪ್ರಗತಿ ಮತ್ತು ಶೈಕ್ಷಣಿಕ ಚಟುವಟಿಕೆಗಳಲ್ಲಿ ಹೇಗೆ ಪಾಲ್ಗೊಳ್ಳುತ್ತಿದ್ದಾರೆ? ಇಂತಹ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಬೇಕಾಗಿರುವ ಅವಶ್ಯಕತೆಗಳೇನು? ಶಾಲೆಯ ಮೇಲುಸ್ತುವಾರಿಯನ್ನು ಸಮರ್ಥವಾಗಿ ನಿರ್ವಹಿಸುತ್ತಿದ್ದಾರೆಯೇ? ಇಲ್ಲದಿದ್ದರೆ ಹೇಗೆ ನಿರ್ವಹಿಸಬಹುದು ಎಂಬುದರ ಬಗ್ಗೆ ಅಧ್ಯಯನದಲ್ಲಿ ಗಮನಿಸಲಾಗುವುದು.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಲ್ಲಿರುವ ಎಲ್ಲಾ ಸದಸ್ಯರಿಗೆ ಪರಿಣಾಮಕಾರಿಯಾದ ತರಬೇತಿ ಸಿಗುತ್ತಿದೆಯೇ? ಸಿಗುತ್ತಿಲ್ಲವಾದರೆ ಏಕೆ? ಇಂತಹ ತರಬೇತಿಗಳು ಸಿಗುವಂತಾಗಲು ಏನು ಮಾಡಬೇಕು? ಇದರಿಂದ ಅವರುಗಳ ಸಾಮರ್ಥ್ಯ ಅಭಿವೃದ್ಧಿಯಾಗಿದೆಯೇ? ನಿರ್ದಿಷ್ಟವಾಗಿ ಇಂತಹ ಸದಸ್ಯರಿಗೆ ಸಾಮಾರ್ಥ್ಯ ರೂಪಿಸುವ ತರಬೇತಿ ಅಗತ್ಯವಿದಿಯೇ? ಸಾಮಾರ್ಥ್ಯ ಅಭಿವೃದ್ಧಿಯಿಂದ ಮಾತ್ರ ಸಮುದಾಯದ ಸಬಲೀಕರಣ ಸಾಧ್ಯವಾಗುವುದು ಹೇಗೆ? ಇದರಿಂದ ಎಸ್.ಡಿ.ಎಂ.ಸಿಗಳು ಸಬಲೀಕರಣವಾಗಿವೆಯೇ? ತರಬೇತಿಗಳು ನಡೆಯುತ್ತಿದ್ದರು ನಿಜವಾದ ಅರ್ಥದಲ್ಲಿ ಅವು ಎಷ್ಟರ ಮಟ್ಟಿಗೆ ಸಫಲತೆ

ಹೊಂದಿವೆ?ಯಾಂತ್ರಿಕವಾದ ಮತ್ತು ತೋರಿಕೆಗಾಗಿ ತರಬೇತಿಗಳಾಗಿವೆಯೇ?ನಿಜವಾದ ಅರ್ಥದಲ್ಲಿ ನಡೆಯುವಂತಾಗಬೇಕಾದರೆ ಏನು ಮಾಡಬೇಕು? ಸಕಾಲದಲ್ಲಿ ತರಬೇತಿಗಳು ದೊರೆಕುತ್ತಿವೆಯೇ? ಸಂಬಂಧಪಟ್ಟವರು ಇದರ ಪ್ರಯೋಜನ ಪಡೆಯುತ್ತಿದ್ದಾರೆಯೇ? ತರಬೇತಿ ನೀಡುವ ತರಬೇತಿದಾರರು ಮತ್ತು ಶಿಭಿರಾರ್ಥಿಗಳನ್ನು ಸಬಲೀಕರಿಸುವುದು ಹೇಗೆ ಎಂಬುದರಮೂಲಕ ಕೆಳಹಂತದಲ್ಲಿ ಶಿಕ್ಷಣದ ಕಾರ್ಯಕ್ರಮಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಏನು ಮಾಡಬೇಕು ಎಂಬುದನ್ನು ಈ ಅಧ್ಯಯನದಲ್ಲಿ ನೋಡಲಾಗುವುದು.

ಸಮುದಾಯ ಅದರಲ್ಲೂ ವಿಶೇಷವಾಗಿ ಬಡ ಮಕ್ಕಳ ತಂದೆ-ತಾಯಂದಿರ ಬಗ್ಗೆ ಎಲ್ಲರಿಗಿರುವ ಮನೋಧೋರಣೆ ಏನು?ನೀತಿಯ ಭಾಗವಾಗಿ ಮತ್ತು ಕಾನೂನು ಬದ್ಧವಾಗಿ ಸಮುದಾಯದ ಭಾಗವಹಿಸುವಿಕೆಗೆ ರಾಜ್ಯದಲ್ಲಿ ನಿರ್ದಿಷ್ಟ ನೀತಿ ಜಾರಿಯಲ್ಲಿದೆಯೇ? ಅದನ್ನು ಜಾರಿಗೊಳಿಸಬೇಕಾದ ಅಧಿಕಾರಿವರ್ಗ, ಕೆಳಹಂತದ ಸಿಬ್ಬಂದಿ ಸಮುದಾಯದ ಬಗ್ಗೆ ಮನೋಧೋರಣೆ ಏನು? ತಾತ್ಸಾರ ಮತ್ತು ಇವರೇನು ಮಾಡಬಲ್ಲರೆಂಬ ಧೋರಣೆ ಇದಿಯೇ? ಇದು ಬದಲಾಗಲು ಏನು ಮಾಡಬೇಕು? ಸಮುದಾಯದಲ್ಲಿ ನಂಬಿಕೆ ಬಲಗೊಳ್ಳಲು ಏನು ಮಾಡಬೇಕು?ಇದು ಪ್ರಜಾಪ್ರಭುತ್ವ ವ್ಯವಸ್ಥೆಗೆ ಹೇಗೆ ಅಗತ್ಯ? ಸರ್ಕಾರಿ ಶಾಲೆಗಳಲ್ಲಿ ಕಲಿಯುತ್ತಿರುವ ಕಡುಬಡವ, ಅವಿದ್ಯಾವಂತ, ಅರೆವಿದ್ಯಾವಂತ, ಕೂಲಿಕಾರರು ಇಂತಹವರ ಮಕ್ಕಳ ಜೊತೆ ಹೊಂದಿಕೊಳ್ಳುತ್ತಿದ್ದಾರೆಯೇ? ಹೊಂದಿಕೊಳ್ಳಲು ಏನು ಮಾಡಬೇಕು? ಅವರನ್ನು ನಮ್ಮ ಜೊತೆಯಲ್ಲಿ ಕೊಂಡೊಯ್ಯಲು ಏನು ಮಾಡಬೇಕು? ಎಸ್.ಡಿ.ಎಂ.ಸಿ ಚುನಾಯಿತ ಪ್ರತಿನಿಧಿಗಳು ಗೌರವಿಸುವುದರ ಮೂಲಕ ಅವರ ಸಾರ್ವಭೌಮತೆಯನ್ನು ಎತ್ತಿಹಿಡಿಯಬೇಕಾಗಿದೆ. ಇದು ಆಗುತ್ತಿದೆಯೇ? ಅವರನ್ನು ಗಣನಗೆ ತೆಗೆದುಕೊಳ್ಳುತ್ತಿದ್ದಾರೆಯೇ? ಸಮುದಾಯ ಮತ್ತು ಶಿಕ್ಷಕರ ಮಧ್ಯೆ ಪರಸ್ಪರ ನಂಬಿಕೆ ಮತ್ತು ಗೌರವಗಳಿವೆಯೇ? ಶಿಕ್ಷಕರು ಸಮುದಾಯದ ಹಿತಚಿಂತಕರಾಗಿ ಮಾರ್ಗದರ್ಶಿಗಳಾಗಿ ಮತ್ತು ಅಭಿವೃದ್ಧಿಯ ರುವಾರಿಗಳಾಗಿ ಕೆಲಸ ಮಾಡುತ್ತಿದ್ದಾರೆಯೇ? ಶಿಕ್ಷಕರು ಸ್ಥಳೀಯ ಸಮುದಾಯಕ್ಕೆ ಹೊಂದಿಕೊಂಡು ಅವರನ್ನು ತಮ್ಮೊಂದಿಗೆ ಕೊಂಡ್ಯೊಯುವ ಕೆಲಸ ಮಾಡುತ್ತಿದ್ದಾರೆಯೇ ಎಂಬುದನ್ನು ಈ ಅಧ್ಯಯನದಲ್ಲಿ ಚರ್ಚಿಸಲಾಗುವುದು.

ಶಿಕ್ಷಕ ವೃತ್ತಿಯಲ್ಲಿ ಪಾರದರ್ಶಕತೆ ಮತ್ತು ಜವಾಬ್ದಾರಿ ಸಂಸ್ಕೃತಿಯಾಗಿದೆಯೇ? ಶಿಕ್ಷಕರು ಪರಿಣಾಮಕಾರಿಯಾಗಿ ಮತ್ತು ಪ್ರಾಮಾಣಿಕವಾಗಿ ಕೆಲಸ ನಿರ್ವಹಿಸುವುದರ ಮೂಲಕ ನಿರ್ದಿಷ್ಟ ಫಲಿತಾಂಶಗಳನ್ನು ಪಡೆದುಕೊಳ್ಳುತ್ತಿದ್ದಾರೆಯೇ? ಸಮುದಾಯವನ್ನು ಇದಕ್ಕಾಗಿ ಬೆಂಬಲವಾಗಿ ನಿಲ್ಲುವಂತೆ ಮಾಡಿಕೊಂಡಿದ್ದಾರೆಯೇ? ಸ್ವ-ಯೋಜನೆ, ಸ್ವ-ಅನುಷ್ಠಾನ, ಸ್ವ-ಪಾಲನೆ, ಸ್ವ-ಮೌಲ್ಯಾಂಕನ ಮತ್ತು ಸ್ವ-ಕಲಿಕೆಯ ಕೆಲಸಗಳು ನಡೆಯುತ್ತಿವಿಯೇ? ಈ ಎಲ್ಲಾ ಹಂತಗಳಲ್ಲಿ ಸಮುದಾಯದ ಸಕ್ರಿಯ ಪಾಲ್ಗೊಳ್ಳುವಿಕೆ ಆಗುತ್ತಿದೆಯೇ? ಒಟ್ಟಿನಲ್ಲಿ ಶಾಲಾಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಸಮುದಾಯದ ಪಾತ್ರವನ್ನು ಅರಿತುಕೊಂಡಿದ್ದಾರೆಯೇ ಎಂಬುದನ್ನು ನೋಡಲಾಗುವುದು?

ಶಾಲಾ ಸೌಕರ್ಯಗಳನ್ನು ಒದಗಿಸುವ ವಿಷಯದಲ್ಲಿ, ಪ್ರಾಥಮಿಕ ಶಿಕ್ಷಣವು ಕಳೆದ ಹಲವು ವರ್ಷಗಳಲ್ಲಿ ಏನನ್ನು ಮಾಡಿದೆ? ಪ್ರಾಥಮಿಕ ಶಿಕ್ಷಣದ ಯೋಜನೆಗಳ ಯಶಸ್ಸು ಕೇವಲ ಸಂಪನ್ಮೂಲಗಳ ಒದಗಿಸುವಿಕೆಯ ಮೇಲೆ ಅವಲಂಬಿತವಾಗಿದೆಯೇ? ಗ್ರಾಮದಲ್ಲಿ ಎಷ್ಟೇ ಶಾಲಾ ಕಟ್ಟಡಗಳು, ಶಿಕ್ಷಕರೂ ಇದ್ದರೂ, ಗ್ರಾಮೀಣ ಶಾಲೆಗಳಲ್ಲಿಸಮುದಾಯದ ಒಡೆತನದ ಭಾವನೆಗಳಿಲ್ಲದಿದ್ದರೆ ಏನಾಗಬಹುದು?ಅವು ಮಕ್ಕಳ ಪಾಲ್ಗೊಳ್ಳುವಿಕೆ ಮತ್ತು ಅದರ ಫಲಗಳ ಮೇಲೆ ಯಾವ ರೀತಿಯ ಪರಿಣಾಮಗಳನ್ನು ಬೀರುತ್ತದೆ? ಸಮುದಾಯವು ತನ್ನ ಶಾಲೆಯ ಜವಾಬ್ದಾರಿಯನ್ನು ತಾನೇ ನಿರ್ವಹಿಸಿಕೊಂಡರೆ, ಶಿಕ್ಷಕರಿಗೆ ಆಗುವ ಪ್ರಯೋಜನಗಳೇನು?ಇದರಿಂದ ಶಿಕ್ಷಕರಿಗೆ ಶಾಲೆಯಲ್ಲಿ ಮಗುವಿಗೆ ಒಂದು ಒಳ್ಳೆಯ ಕಲಿಕಾ ವಾತವರಣವನ್ನು ಸೃಷ್ಟಿಸಿಕೊಡುವುದು ಸಾಧ್ಯವೇ?ಅಲ್ಲದೆ ಪಾರದರ್ಶಕ ವಿಕೇಂದ್ರಿಕರಣ ಆಡಳಿತದ ಮೂಲಕ ಸೋರಿಕೆಯನ್ನು ಹೇಗೆ ತಡೆಗಟ್ಟಬಹುದು?

ಶಿಕ್ಷಕರಿಗೆ ಸಮುದಾಯ ಬೆಂಬಲ ಹೇಗಿರಬೇಕು? ಪರಿಣಾಮಕಾರಿ ಶಾಲಾ ವ್ಯವಸ್ಥೆಗೆ ಎಸ್.ಡಿ.ಎಂ.ಸಿ, ಗ್ರಾಮಪಂಚಾಯಿತಿಗಳು ಹೇಗೆ ಕೆಲಸ ಮಾಡಬೇಕು? ಸ್ತ್ರೀ ಶಕ್ತಿ ಗುಂಪುಗಳು ಮಹಿಳಾ ಮತ್ತು ಯುವಕ ಮಂಡಲಗಳು ಪರಿಣಾಮಕಾರಿ ಶಾಲಾ ಪ್ರಕ್ರಿಯೆಗೆ ಹೇಗೆ ಬೆಂಬಲಿಸಬೇಕು? ಆ ಶಾಲೆ ನೆಲೆಗೊಂಡಿರುವ ಅಂಗನವಾಡಿ, ಆರೋಗ್ಯ ಕೇಂದ್ರಗಳು ಶಾಲಾ ಪ್ರಕ್ರಿಯೆಗೆ ಹೇಗೆ ಕೆಲಸ ಮಾಡಬಹುದು? ಮುಂತಾದ ಪ್ರಶ್ನೆಗಳಿಗೆ ಉತ್ತರಗಳನ್ನು ಕಂಡುಕೊಳ್ಳುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದಲ್ಲಿ ಮಾಡಲಾಗುತ್ತದೆ.

ಶಾಲಾ ಅವಕಾಶ ಮತ್ತು ಕಾರ್ಯಾಚರಣೆಯನ್ನು ಬೆಂಬಲಿಸಲು (ವಿದ್ಯಾರ್ಥಿ, ದಾಖಲಾತಿ, ಹಾಜರಾತಿ, ಶಿಕ್ಷಕರ ಅಗತ್ಯಗಳು, ಹೆಣ್ಣುಮಕ್ಕಳ ಶಿಕ್ಷಣ, ತರಗತಿಗಳ ಮೇಲುಸ್ತುವಾರಿ) ಇವುಗಳನ್ನು ಸೇರಿದಂತೆ ಉತ್ತರಗಳಿಗಾಗಿ ಇಲ್ಲಿ ಅಧ್ಯಯನ ಮಾಡಲಾಗುತ್ತದೆ. ಬೋಧನೆ ಮತ್ತು ಕಲಿಕಾ ಸಾಮಗ್ರಿಗಳ ತಯಾರಿಕೆ ಮತ್ತು ಶಾಲಾ ಮೂಲಭೂತ ಸೌಕರ್ಯಗಳನ್ನು ಸಮುದಾಯವು ಹೇಗೆ ಒದಗಿಸಬಹುದು ಎಂಬುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗುವುದು.

ಪ್ರಸ್ತುತ ಮಕ್ಕಳು ಶಾಲೆಗೆ ಹೋಗುತ್ತಿದ್ದರೆ ಅಥವಾ ಶಾಲೆಗೆ ಹೋಗುತ್ತಿರುವ ಮಕ್ಕಳ ಪೋಷಕರು ಮತ್ತು ಬಂಧು ಬಾಂಧವರಿದ್ದರೆ ತರಗತಿಯಲ್ಲಿ ಏನು ಮಾಡುತ್ತಿದ್ದಾರೆ ಎಂಬುದರ ಬಗ್ಗೆ ಚಿಂತನೆ ನಡೆಸುತ್ತಾರೆಯೇ? ಒಮ್ಮೆ ಶಾಲೆಗೆ ತೆರಳಿದ ನಂತರ ತಮ್ಮ ಮಕ್ಕಳು ತಮ್ಮ ಅಮೂಲ್ಯವಾದ ಸಮಯವನ್ನು ವ್ಯರ್ಥಗೊಳಿಸುತ್ತಿಲ್ಲವೆಂದೂ, ತಾವು ಹೆಮ್ಮೆ ಪಡುವ ರೀತಿಯಲ್ಲಿ ಮತ್ತು ವಿಶ್ವಾಸವಿಡುವ ರೀತಿಯಲ್ಲಿ ಅವರಿಗೆ ಉತ್ತಮ ಮಟ್ಟದ ಶಿಕ್ಷಣ ಲಭಿಸುತ್ತಿದೆಯೆಂಬುದನ್ನು ಖಚಿತಪಡಿಸಿಕೊಳ್ಳಬಹುದೇ? ಪೋಷಕರು ಮತ್ತು ಇತರ ಸಮುದಾಯ ಸದಸ್ಯರು ಬಹಳಷ್ಟು ಇದಕ್ಕಾಗಿ ಸಹಾಯ ಮಾಡಬಹುದೆ? ಎಲ್ಲಾ ಮಕ್ಕಳು ಶಾಲೆಗೆ ಹೋಗುತ್ತಿದ್ದರೆ ಪ್ರತಿದಿನವೂ ಶಿಕ್ಷಕರು ಶಾಲೆಯಲ್ಲಿರುವುದನ್ನು ಖಚಿತಪಡಿಸಿಕೊಳ್ಳುವುದರ ಬಗ್ಗೆ ಯೋಚಿಸುತ್ತಾರೆಯೇ? ಶಿಕ್ಷಕ/ಶಿಕ್ಷಕಿಯರು, ಪೋಷಕರು ಮತ್ತು ಗ್ರಾಮದ ಸಮುದಾಯದ ಇತರ ಜನರ ಬಗ್ಗೆ ತಿಳಿದುಕೊಂಡಿದ್ದಾರೆಯೇ? ಅವರು ಶಿಕ್ಷಕರು ಹೆಣ್ಣು ಮಕ್ಕಳು ಮತ್ತು ಗಂಡು ಮಕ್ಕಳನ್ನು ಒಂದೆ ರೀತಿಯಲ್ಲಿ ನಡೆಸಿಕೊಳ್ಳುತ್ತಿದ್ದಾರೆಯೇ? ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ಬಗ್ಗೆ ಕಾಳಜಿಯುಳ್ಳವರಾಗಿಯೂ ಅವರು ಕಲಿಯಲು ಮತ್ತು ಸಾಧಿಸಲು ಉತ್ತೇಜನ ನೀಡುತ್ತಿದ್ದಾರೆಯೇ? ಪೋಷಕರು ಮತ್ತು ಇತರ ಸಮುದಾಯ ಸದಸ್ಯರು ಕೇವಲ ಶಾಲೆಗಳನ್ನು ಸಂದರ್ಶಿಸಿ ಶಿಕ್ಷಕರೊಡನೆ ಮಾತನಾಡುವುದರ ಮೂಲಕ ಅಥವಾ ಸುಮ್ಮನೆ ತರಗತಿಗಳನ್ನು ವೀಕ್ಷಿಸುವುದರ ಮೂಲಕ ಶಾಲಾ ಆಡಳಿತ ಮಂಡಳಿಯವರೊಡನೆ ಸಹಕರಿಸಿ, ಶಾಲೆಯ ವಾತಾವರಣವು ಕಲಿಕೆಗೆ ಪೂರಕವಾಗಿಯೂ ಪ್ರೋತ್ಸಾಹದಾಯಕವಾಗಿಯೂ ಇರುವಂತೆ ಮಾಡಬಹುದೆ? ಎಂಬುದನ್ನುಅರ್ಥಮಾಡಿಕೊಳ್ಳಲು ಇಲ್ಲಿ ಪ್ರಯತ್ನ ಮಾಡಲಾಗುವುದು.

ಕರ್ನಾಟಕದಲ್ಲಿ ಇತ್ತೀಚಗೆ ಆಚರಣೆಗೆ ಬಂದಿರುವ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಕಾರ್ಯಕ್ರಮವನ್ನು ಕುರಿತಂತೆ ಜನರಲ್ಲಿ ವಿವಿಧ ಬಗೆಯ ಅಭಿಪ್ರಾಯಗಳಿವೆ. ಆದರೆ ಈ ರೀತಿಯ ಅಭಿಪ್ರಾಯಗಳು ಎಸ್.ಡಿ.ಎಂ.ಸಿ. ಕಾರ್ಯಕ್ರಮದಿಂದ ಉಂಟಾಗಿರುವ ಸಾಧಕ - ಬಾಧಕಗಳನ್ನು ವಸ್ತು ನಿಷ್ಟವಾಗಿ ತಿಳಿಸುವುದಿಲ್ಲ. ಈ ಹಿನ್ನಲೆಯಲ್ಲಿ ಶಾಲಾ ಅಭಿವೃದ್ಧಿಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯ ಪರಿಕಲ್ಪನೆ ಗ್ರಾಮ ಶಿಕ್ಷಣ ಸಮಿತಿ ಅಥವಾ ಶಾಲಾ ಅಭಿವೃದ್ಧಿ ಮತ್ತು ಮೇಲ್ವಿಚಾರಣೆ ಸಮಿತಿಯ ಭಾಗವಹಿಸುವಿಕೆಯಲ್ಲಿ ಮಾತ್ರ ಇದೆಯೇ? ಅಥವಾ ಇದನ್ನು ಮೀರಿ ಇದೆಯೇ? ಈ ಸಮಿತಿಗಳು ಶಾಲಾ ಆಡಳಿತದ ಸುತ್ತ ಸಮುದಾಯದ ಕ್ರಿಯೆಯನ್ನು ಸಂಘಟಿಸಲು ಎಷ್ಟು ಪರಿಣಾಮಕಾರಿಯಾಗಿವೆ? ಶಾಲೆಯನ್ನು ಮತ್ತಷ್ಟು ಉತ್ತಮಗೊಳಿಸಲು, ಸಾಮಾನ್ಯ ಸಮುದಾಯ ಸದಸ್ಯರು ಮತ್ತು ಶಾಲಾ ಮಕ್ಕಳ ಪೋಷಕರು ತೊಡಗಿಕೊಳ್ಳಬಹುದಾದ ಕ್ರಿಯಾಶೀಲವಾದ ಮಾರ್ಗಗಳನ್ನು ಕಂಡುಕೊಂಡಿದ್ದಾರೆಯೇ? ಸಮುದಾಯ ಸದಸ್ಯರು ಮತ್ತು ಪೋಷಕರಿಗೆ ಶಾಲಾ ಭೇಟಿಗೆ ಮುಕ್ತ ಅವಕಾಶಗಳಿವಿಯೇ? ಅವಕಾಶಗಳಿದ್ದರೆ ಸಮುದಾಯ ಮತ್ತು

ಶಾಲೆಯ ನಡುವೆ ಯಾವ ರೀತಿಯ ಸಂಬಂಧವೇರ್ಪಟ್ಟಿದೆ? ಉತ್ತಮ ಸಂಬಂಧವಿಲ್ಲದಿದ್ದರೆ ಸೌಹಾರ್ದಯುತವಾದ ಮತ್ತು ಪರಿಣಾಮಕಾರಿಯಾದ ಸಮನ್ವಯತೆಯನ್ನು ಹೇಗೆ ಏರ್ಪಡಿಸಬಹುದು? ಶಾಲೆಗಳಲ್ಲಿಯೇ ಅಲ್ಲದೆ ಗಂಡು ಮತ್ತು ಹೆಣ್ಣು ಮಕ್ಕಳು ಒಂದೇ ರೀತಿಯಾಗಿ ಮನೆಯಲ್ಲಿ ಓದುವುದಕ್ಕೆ ಸಮಯ ನೀಡುತ್ತಾರೆಯೇ? ಮಕ್ಕಳ ಕಲಿಕೆ ಮತ್ತು ಶಿಕ್ಷಕರ ಬೋಧನೆಗೆ ಹಾಗೂ ಶಾಲಾ ಪ್ರಾಜೆಕ್ಟ್‌ಗಳಲ್ಲಿ ಶಿಕ್ಷಕರಿಗೆ ಸ್ಥಳೀಯ ಸಂಪನ್ಮೂಲಗಳನ್ನು ಸಂಗ್ರಹಿಸಿ ಕೊಡುವುದರಲ್ಲಿ ಇವರು ತೊಡಗಿಸಿಕೊಂಡಿದ್ದಾರೆಯೇ? ಹೌದಾದರೆ ಹೇಗೆ? ಇಲ್ಲದಿದ್ದರೆ ಏಕೆ? ಈ ರೀತಿಯಲ್ಲಿ ತೊಡಗಿಸಿಕೊಳ್ಳಲು ಯಾವ ರೀತಿಯ ತಂತ್ರಗಳನ್ನು ಅನುಸರಿಸಬೇಕು? ಸಮುದಾಯ ಸದಸ್ಯರು ಕಲಿಕೆಯ ಇತರ ಮಾರ್ಗಗಳನ್ನು ಉತ್ತೇಜಿಸಲು ಏನು ಮಾಡಬೇಕು ಎಂಬುದನ್ನು ಅಧ್ಯಯನದಲ್ಲಿ ನೋಡಲಾಗುವುದು. ಇದರ ಜೊತೆಗೆ, ಶಿಕ್ಷಕರೂ, ಪೋಷಕರೊಂದಿಗೆ ಕೆಲಸ ನಿರ್ವಹಿಸುವುದರ ಮೂಲಕ ಸಾಮುದಾಯಿಕ ಸಂಪನ್ಮೂಲಗಳನ್ನು ಉತ್ತಮವಾಗಿ ಬಳಸಿಕೊಳ್ಳಬಹುದೇ?ಇದರಿಂದ ಮಕ್ಕಳಿಗೆ ಒಂದು ಕ್ರಿಯಾತ್ಮಕ ಕಲಿಕಾ ಅವಕಾಶಗಳನ್ನು ಕಲ್ಪಿಸಿಕೊಡಬಹುದೇ? ಶಾಲೆಯ ಕಾರ್ಯಕಲಾಪಗಳಲ್ಲಿ ಸ್ಥಳೀಯರನ್ನು ತೊಡಗಿಕೊಳ್ಳುವಂತೆ ಮಾಡಲು, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಒಂದು ಸಾಂಸ್ಥಿಕ ವ್ಯವಸ್ಥೆಯಾಗಿ ಏನು ಮಾಡಬಹುದು? ಸಮುದಾಯದ ಸದಸ್ಯರು ಮತ್ತು ಪೋಷಕರು ಶಾಲೆಗೆ ಭೇಟಿ ನೀಡುವುದರಿಂದ ಪರಸ್ಪರ ಯಾವ ಪ್ರತಿಕ್ರಿಯೆ ಏರ್ಪಡುತ್ತದೆ? ಇದರಿಂದ ಸಮುದಾಯ ಮತ್ತು ಶಾಲೆಯ ನಡುವೆ ನೈತಿಕ ಬೆಂಬಲವನ್ನು ಒದಗಿಸುತ್ತದೆಯೇ? ಆದ್ದರಿಂದ, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಚೌಕಟ್ಟಿನಿಂದಾಚೆ ಶಾಲೆಯ ಅಭಿವೃದ್ಧಿಯ ಅನೇಕ ವಿಭಾಗಗಳಲ್ಲಿ ಪೋಷಕರು ಮತ್ತು ಸಾಮಾನ್ಯ ಸಮುದಾಯ ಸದಸ್ಯರು ಮತ್ತು ಶಾಲಾ ಮಕ್ಕಳ ಪೋಷಕರು ಕ್ರಿಯಾಶೀಲವಾಗಿ ತೊಡಗಿಕೊಳ್ಳಬೇಕಾದ ಅಗತ್ಯ ಇದೆಯೇ ಎಂಬುದನ್ನು ಕಂಡುಕೊಳ್ಳುವುದು ಈ ಅಧ್ಯಯನದ ಆಶಯವಾಗಿದೆ. ಹೀಗೆ ಇನ್ನೂ ಅನೇಕ ಪ್ರಶ್ನೆಗಳನ್ನು ನಾವು ಗುರುತು ಮಾಡಬಹುದು. ಆದರೆ ನಾವು ಕೇಳಿಕೊಳ್ಳಬಹುದಾದ ಎಲ್ಲಾ ಪ್ರಶ್ನೆಗಳಿಗೆ ಉತ್ತರವನ್ನು ಕಂಡುಕೊಳ್ಳಲು ಕಷ್ಟಸಾಧ್ಯ. ಹೀಗಾಗಿ ಪ್ರಸ್ತುತ ಅಧ್ಯಯನವು ಈ ಕೆಳಗಿನ ನಿರ್ದಿಷ್ಟ ಉದ್ದೇಶಗಳನ್ನು ಹೊಂದಿದೆ.

೧.೪ ಅಧ್ಯಯನದ ನಿರ್ದಿಷ್ಟ ಉದ್ದೇಶಗಳು

೧. ಶಾಲಾ ಶಿಕ್ಷಣದ ಅಭಿವೃದ್ಧಿಗೆ ಅಗತ್ಯವಾದ ಭೌತಿಕ, ಬೌದ್ಧಿಕ ಪರಿಸರವನ್ನು ಅಭಿವೃದ್ಧಿಪಡಿಸುವಲ್ಲಿ ಎಸ್.ಡಿ.ಎಂ.ಸಿ. ಪಾತ್ರವನ್ನು ಗುರುತಿಸುವುದು.

೨. ಎಸ್.ಡಿ.ಎಂ.ಸಿ. – ಶಿಕ್ಷಕರು – ಮಕ್ಕಳ ಗುಣಾತ್ಮಕ ಕಲಿಕೆಗೆ ಇರುವಸಂಬಂಧವನ್ನು ಅರ್ಥಮಾಡಿಕೊಳ್ಳುವುದು.

೩. ಎಸ್.ಡಿ.ಎಂ.ಸಿ. – ಪಂಚಾಯತ್ ರಾಜ್ ಸಂಸ್ಥೆಗಳು – ಸ್ತ್ರೀ ಶಕ್ತಿ ಗುಂಪುಗಳು–ಸ್ಥಳೀಯ ಯುವಕ/ತಿ ಮಂಡಳಿಗಳಸದಸ್ಯರ ಕಾರ್ಯಕ್ಷಮತೆ ಹಾಗೂ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು

೪. ಎಸ್.ಡಿ.ಎಂ.ಸಿ.ಗೂಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗೆ ಇರುವ ಸಂಬಂಧವನ್ನು ಗುರುತಿಸುವುದು

೫. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಯಶೋಗಾಥೆಗಳನ್ನು ಹೇಳಿಕೊಳ್ಳಲು ಒಂದು ವ್ಯವಸ್ಥೆಯು (ಫೇಡರೇಷನ್) ಹೇಗಿರಬೇಕು ಎಂಬುದನ್ನು ಕಂಡುಕೊಳ್ಳುವುದು

೧.೫ ಅಧ್ಯಯನದ ವಿಧಾನ

ಅಧ್ಯಯನಕ್ಕಾಗಿ ನಿಗದಿಪಡಿಸಿರುವ ವಿಧಾನದಲ್ಲಿ ಗುಣಾತ್ಮಕ ಹಾಗೂ ಪ್ರಮಾಣಾತ್ಮಕ ಅಂಶಗಳು ಮಿಶ್ರಣವಾಗಿವೆ. ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಮೂಲವಾರಸುದಾರರು ಪಾಲ್ಗೊಳ್ಳುವಿಕೆಗೆ ಹೆಚ್ಚಿನ ಪ್ರಾಮುಖ್ಯತೆ ನೀಡಿ, ಶಿಕ್ಷಣ ಮೂಲಭೂತ ಹಕ್ಕಾಗಬೇಕಾದರೆ ಅದರಲ್ಲೂ ಶಾಲೆಗೆ ಹೋಗುತ್ತಿರುವ ಮಕ್ಕಳ ತಂದೆ ತಾಯಿಗಳು ಪಾಲ್ಗೊಳ್ಳುವುದು ಪ್ರಮುಖ ಎಂಬ ವಿಷಯಕ್ಕೆ ಸಂಬಂಧಿಸಿದ ಮಾಹಿತಿಗೆ ಹೆಚ್ಚಿನ ಆಧ್ಯತೆ ನೀಡಲಾಗಿದೆ. ಹೀಗೆ ಮಾಡುವಾಗ ಗುಣಾತ್ಮಕ ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯ ಮತ್ತು ಎಸ್.ಡಿ.ಎಂ.ಸಿ.ಗಳ ಪಾತ್ರಗಳನ್ನು ನೋಡುವುದಲ್ಲದೆ, ಅವುಗಳನ್ನು ಬಲಪಡಿಸುವ ದೃಷ್ಟಿಯಿಂದಲೂ ಈ ಸಂಶೋಧನಾ ವಿಧಾನವನ್ನು ವಿನ್ಯಾಸ ಮಾಡಿಕೊಳ್ಳಲಾಗಿದೆ.ಪ್ರಸ್ತುತ ಸಂಶೋಧನಾ ಪ್ರಬಂಧವು ಎಂಪಿರಿಕಲ್ ಮಾದರಿಯ ಅಧ್ಯಯನವಾಗಿರುವುದರಿಂದ, ಪ್ರತಿಯೊಂದು ಉದ್ದೇಶಕ್ಕೆ ಸಂಬಂಧಿಸಿದ ಪ್ರಾಥಮಿಕ ಮತ್ತು ಅನುಷಂಗಿಕ ಮೂಲಗಳಿಂದ ಮಾಹಿತಿಯನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಜಿಲ್ಲೆ, ತಾಲ್ಲೂಕು, ಗ್ರಾಮಗಳಿಂದ ಮತ್ತು ಶಾಲೆಗಳಿಂದ ಸಂಗ್ರಹಿಸಲಾಯಿತು. ಪ್ರಥಮವಾಗಿ ಅನುಷಂಗಿಕ ಮಾಹಿತಿಯನ್ನು ಮತ್ತು ಅಂಕಿ ಸಂಖ್ಯೆಗಳನ್ನು ಶಾಲೆಗಳ ವರದಿ ದಾಖಲೆಗಳು/ಕಡತಗಳು, ಸಾರ್ವಜನಿಕ ಶಿಕ್ಷಣ ಇಲಾಖೆ ಅಥವಾ ಅಧಿಕಾರಿಗಳ ದಾಖಲೆಗಳು ಅಂದರೆ ಎಸ್.ಡಿ.ಎಂ.ಸಿಯ ಸುತ್ತೋಲೆಗಳು ಹಾಗೂ ಕಾಲ ಕಾಲಕ್ಕೆ ರಾಜ್ಯ ಸರ್ಕಾರ ಹೊರಡಿಸಿದ ಸುತ್ತೋಲೆ ಮತ್ತು ದಾಖಲೆಗಳು, ಶಿಕ್ಷಣ ಆಯೋಗದ ವರದಿಗಳು, ಜನಗಣತಿ ವರದಿ, ಮಾನವ ಅಭಿವೃದ್ಧಿ ವರದಿಗಳು, ಕರ್ನಾಟಕ ಸರ್ಕಾರದ ಆರ್ಥಿಕ ಸಾಂಖ್ಯಿಕ ನಿರ್ದೇಶನಾಲಯದ ವರದಿಗಳು, ಯೋಜನಾ ಇಲಾಖೆಯ ವರದಿಗಳು ಮತ್ತು ಜಿಲ್ಲಾ ಸಾಂಖ್ಯಿಕ ಅಧಿಕಾರಿಗಳಿಂದ ಪ್ರಕಟಿಸಲ್ಪಟ್ಟ ಲೇಖನಗಳಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ. ವಿವಿಧ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲ್ಪಟ್ಟ ಸಂಪ್ರಬಂಧಗಳು, ಸಮಾಜ ಸಂಶೋಧನಾ ಪತ್ರಿಕೆಗಳು ಇತ್ಯಾದಿಗಳಿಂದಲೂ ವಿಷಯಗಳನ್ನು ಕ್ರೋಢೀಕರಿಸಲಾಯಿತು. ವಿಷಯ ಪರಿಣಿತರೊಂದಿಗೆ ಮತ್ತು ಶಿಕ್ಷಣ ತಜ್ಞರ ಜೊತೆಗೆ ನಡೆಸಿದ ಚರ್ಚೆ ಸಂವಾದ, ವಿಚಾರ ಸಂಕಿರಣ ಮತ್ತು ಕಾರ್ಯಗಾರ, ಸಮಾವೇಶಗಳಲ್ಲಿ ಮಾಡಿದ ಪತ್ರಿಕೆ/ಲೇಖನಗಳಿಂದ ಸಂಗ್ರಹಿಸಲಾಗಿದೆ. ಸರ್ಕಾರಿ ದಾಖಲೆಗಳು, ವಾರ್ಷಿಕ ವರದಿ, ಸರ್ಕಾರಪ್ರಕಟಿಸಿದ ಪಬ್ಲಿಕೇಷನ್‌ಗಳು, ವಿವಿಧ ಸಮಿತಿಗಳ ವರದಿಗಳು ಅಂದರೆ ಶಿಕ್ಷಣಕ್ಕೆ ಸಂಬಂದಿಸಿದ ಟಾಸ್ಕ್ ಪೋರ್ಸ್ ಸಮಿತಿಯ ವರದಿ, ಪ್ರಾದೇಶಿಕ ಅಸಮತೋಲನದ ಉನ್ನತ ಅಧಿಕಾರದ ಸಮಿತಿಗಳ ವರದಿ, ಎಸ್.ಡಿ.ಎಂ.ಸಿ.ಗೆ ಸಂಬಂಧಿಸಿದಂತೆ ಕರ್ನಾಟಕ ರಾಜ್ಯದ ಸದನ ಸಮಿತಿ ವರದಿ ಇವುಗಳಿಂದ ಮಾಹಿತಿಗಳನ್ನು ಸಂಗ್ರಹಿಸಲಾಗಿದೆ.

ಪ್ರಸ್ತುತ ಅಧ್ಯಯನಕ್ಕೆ ಬೇಕಾದ ಪ್ರಾಥಮಿಕ ಮಾಹಿತಿ ಹಾಗೂ ಅಂಕಿ ಅಂಶವನ್ನು ಶಾಲೆಗಳಿಂದ ಸಂದರ್ಶನದ ಮೂಲಕ ಸ್ಟ್ರಕ್ಚರ್ ಶೆಡ್ಯೂಲ್‌ಗಳಿಂದ ಸಂಗ್ರಹಿಸಲಾಯಿತು. ಸ್ಥಳೀಯ ಜನರು ನಿರ್ಧಿಷ್ಟವಾಗಿ ಶಾಲೆಯಲ್ಲಿ ಇರುವ ಮಕ್ಕಳ ಪೋಷಕರು, ಎಸ್.ಡಿ.ಎಂ.ಸಿ. ಸದಸ್ಯರು, ಶಿಕ್ಷಕರು, ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಇತರೆ ಸಂಘ ಸಂಸ್ಥೆಗಳ ಸದಸ್ಯರು ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳು ಹಾಗೂ ಸಂಬಂಧಿಸಿದ ಇತರ ಅಧಿಕಾರಿಗಳ ಜೊತೆ ಸಂದರ್ಶನ ನಡೆಸಿ ಪಡೆಯಲಾಗಿದೆ. ಹಾಗೂ ಎಲ್ಲಾ ಭಾಗಿದಾರರಗಳೊಟ್ಟಿಗೂ ಸಭೆ, ತರಬೇತಿ, ಕಾರ್ಯಗಾರಗಳನ್ನು ಏರ್ಪಡಿಸಿ ಅದರ ಮೂಲಕ ಅವರ ಅನುಭವ, ಅನಿಸಿಕೆ, ಭಾವನೆಗಳು ಮತ್ತು ಜ್ಞಾನಗಳನ್ನು ಕ್ರೋಢಿಕರಿಸಲಾಗಿದೆ. ಎಸ್.ಡಿ.ಎಂ.ಸಿ. ಸಭೆಗಳು ನಡೆಯುವ ದಿನಗಳಲ್ಲಿ ಶಾಲೆಗಳಿಗೆ ಭೇಟಿ ನೀಡಿ ಸಭೆಯ ಚಟುವಟಿಕೆಗಳನ್ನು ದಾಖಲಿಸಲಾಗಿದೆ. ಇದರ ಜೊತೆಗೆ ಸದಸ್ಯರು, ಶಿಕ್ಷಕರು ಹಾಗೂ ಸಾರ್ವಜನಿಕರೊಂದಿಗೆ ಸಂವಾದ ಗುಂಪು ಚರ್ಚೆ ಮೂಲಕ ಮಾಹಿತಿಯನ್ನು ಸಂಗ್ರಹಿಸಲಾಯಿತು. ಒಟ್ಟಾರೆ ಪ್ರಾಥಮಿಕ ಹಂತದ ಮಾಹಿತಿಯ ಮೂಲವೆಂದರೆ ಸರ್ವೆ/ಸಮೀಕ್ಷೆ, ಸಂದರ್ಶನ, ಸಂಬಂಧಿಸಿದವರ ಜೊತೆ ಗುಂಪು ಚರ್ಚೆ, ಸಭೆ, ತರಬೇತಿ, ಕಾರ್ಯಾಗಾರ, ಕ್ಷೇತ್ರ ಕಾರ್ಯದ ಟಿಪ್ಪಣಿಗಳನ್ನು ಬಳಸಿಕೊಳ್ಳಲಾಗಿದೆ.

ಸಂಖ್ಯಾತ್ಮಕ ಮತ್ತು ಗುಣಾತ್ಮಕ ವಿಷಯಗಳನ್ನು ವಿನ್ಯಾಸಗಳ ಮೂಲಕ ನೋಡಲಾಗಿದೆ ಮತ್ತು ಪ್ರತಿಯೊಂದು ಪ್ರಾಥಮಿಕ ಹಂತದ ಮಾಹಿತಿ ಹಾಗೂ ಅಂಕಿ-ಅಂಶಗಳನ್ನು ಶಾಲೆಗಳಿಂದ ಸಂದರ್ಶನದ ಮೂಲಕ ಸಂಗ್ರಹಿಸಲಾಯಿತು. ಇನ್ನುಳಿದ ಅಗತ್ಯ ಮಾಹಿತಿಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳ ಜೊತೆ ಸಂದರ್ಶಿಸಿ ಪಡೆಯಲಾಗಿದೆ ಮತ್ತು ಎಲ್ಲಾ ಪಾಲುದಾರರೊಟ್ಟಿಗೆ ಸಭೆ ತರಬೇತಿ, ಕಾರ್ಯಗಾರಗಳನ್ನು ಏರ್ಪಡಿಸಿ ಅದರ ಮೂಲಕ ಅವರ ಅನುಭವ, ಅನಿಸಿಕೆ, ಭಾವನೆಗಳು ಮತ್ತು ಜ್ಞಾನಗಳನ್ನು ಕ್ರೂಢೀಕರಿಸಲಾಗಿದೆ.

ಈ ಸಂಶೋಧನಾ ಕಾರ್ಯತಂತ್ರವು ಈ ಕೆಳಕಂಡ ಮೂಲಗಳನ್ನೊಳಗೊಂಡ ಸೂಕ್ತ ಮಾಹಿತಿ ಸಾಧನ ಪ್ರಕ್ರಿಯೆಯನ್ನು ಗುರಿಯಾಗಿಸಿಕೊಂಡಿತ್ತು. ಅಧ್ಯಯನಕ್ಕಾಗಿ ನಿಗಧಿಪಡಿಸಿರುವ ವಿಧಾನದಲ್ಲಿ ಗುಣಾತ್ಮಕ ಹಾಗೂ ಪ್ರಮಾಣತ್ಮಕ ಅಂಶಗಳು ಮಿಶ್ರಣವಾಗಿವೆ. ಎಲ್ಲ ಪಾಲುದಾರರಿಂದ ಸಂದರ್ಶನದ ಮೂಲಕ ಪ್ರಥಮ ಮಾಹಿತಿಯನ್ನು ಸಂಗ್ರಹಿಸಲಾಯಿತು. ಜನರ ಅನುಭವ, ಅಭಿಪ್ರಾಯ, ಜ್ಞಾನಗಳ ಬಗೆಗಿನ ಹೇಳಿಕೆಯನ್ನು ಸರ್ಕಾರಿ ಅಧಿಕಾರಿಗಳ ಮೂಲಕ ನೇರವಾಗಿ ತಿಳಿದುಕೊಂಡು ಅಗತ್ಯ ಮಾಹಿತಿ ಸಂಗ್ರಹಿಸಲಾಯಿತು. ಅನುಷಂಗಿಕ ಮಾಹಿತಿಗಳನ್ನು (ಸೆಕಂಡರಿ ಸೋರ್ಸ್) ಶಾಲಾ ದಾಖಲೆ ಪರಿವೀಕ್ಷಣೆ, ಶಿಕ್ಷಣದ ಪಾಲುದಾರರೊಂದಿಗೆ ಗುಂಪು ಚರ್ಚೆ ಹಾಗೂ ಸಂಘಟನಾತ್ಮಕ ಪ್ರಕ್ರಿಯೆಯ ಮೂಲಕ ಸಂಗ್ರಹಿಸಲಾಯಿತು. ಇದರೊಟ್ಟಿಗೆ ಈ ಅಧ್ಯಯನದ ಗುರಿಯನ್ನು ಸರಿಯಾದ ಅಂಕಿಅಂಶಗಳನ್ನು ಸಂಗ್ರಹಿಸಲು ಸಂಶೋಧನಾ ವಿನ್ಯಾಸಗಳನ್ನು ಬಳಸಿಕೊಳ್ಳಲಾಯಿತು.

ಅವುಗಳೆಂದರೆ, **ಪ್ರಾಥಮಿಕ ಮೂಲಗಳು;** ಸಮೀಕ್ಷೆಗಳು, ಸಂದರ್ಶನಗಳು, ಕ್ಷೇತ್ರ ಕಾರ್ಯಕರ್ತರೊಡನೆ ಚರ್ಚೆ, ಕ್ಷೇತ್ರ ಮಾಹಿತಿ. **ಅನುಷಂಗಿಕ ಮೂಲಗಳು;** ಎಸ್.ಡಿ.ಎಂ.ಸಿಯ ಸುತ್ತೋಲೆ, ಶಾಲೆಯ ದಾಖಲೆಗಳು, ಪ್ರಾಥಮಿಕ ಶಿಕ್ಷಣದ ಕುರಿತು ಎಲ್ಲಾ ಸುತ್ತೋಲೆಗಳಂಥ ಅಧಿಕೃತ ದಾಖಲೆಗಳು, ಶಾಲೆಯ ಕಡತಗಳು, ವರದಿ ಹಾಗೂ ದಾಖಲೆಗಳು ಮತ್ತು ಕಾಲಕಾಲಕ್ಕೆ ರಾಜ್ಯ ಸರ್ಕಾರ ಹೊರಡಿಸಿದ ಸುತ್ತೋಲೆ ಹಾಗೂ ದಾಖಲೆಗಳು, ಸರ್ಕಾರಿ ದಾಖಲೆಗಳು, ವಾರ್ಷಿಕ ವರದಿ, ಶೈಕ್ಷಣಿಕ ನಿರ್ವಹಣಾ ಮಾಹಿತಿ ವ್ಯವಸ್ಥೆ (ಇ.ಎಂ.ಐ.ಎಸ್) ಹಾಗೂ ಸರ್ಕಾರಿ ಪ್ರಕಟಣೆಗಳಂತಹ ಸರ್ಕಾರಿ ದಾಖಲೆಗಳು, ವಾರ್ಷಿಕ ವರದಿ, ಶಿಕ್ಷಣದ ಬಗ್ಗೆ ಕಾರ್ಯಪಡೆ ಸಮಿತಿಯ ವರದಿ, ಪ್ರಾದೇಶಿಕ ಅಸಮತೋಲನದ ಕುರಿತಾದ ಉನ್ನತಾಧಿಕಾರ ಸಮಿತಿ, ಆಡಳಿತಾತ್ಮಕ ಸುಧಾರಣಾ ಸಮಿತಿ ಮತ್ತಿತರ ಸಮಿತಿಗಳ ವರದಿಗಳನ್ನು ಈ ಅಧ್ಯಯನದಲ್ಲಿ ಉಪಯೋಗಿಸಿಕೊಳ್ಳಲಾಗಿದೆ.

೧.೫.೧ಅಧ್ಯಯನಕ್ಕಾಗಿ ಶಾಲೆ (ಎಸ್.ಡಿ.ಎಂ.ಸಿ.)ಗಳ ಆಯ್ಕೆ (ಸ್ಯಾಂಪ್ಲಿಂಗ್)

ಆಯ್ಕೆಯನ್ನು ಉದ್ದೇಶಿತ ಸ್ಥೂಲಪದರ ಆಯ್ಕೆ (ಸ್ಟ್ರಾಟಿಫೈಡ್ ಪರ್ಪಸಿವ್ ಸ್ಯಾಂಪ್ಲಿಂಗ್) ವಿಧಾನದಲ್ಲಿ ಮಾಡಲಾಗಿದೆ. ಸ್ಯಾಂಪಲಿಂಗ್ ವಿಧಾನದ ಮೂಲಕ ಸ್ಯಾಂಪಲಿಂಗ್ ಆಯ್ಕೆ ಮಾಡಲು ಬಳಸಿಕೊಳ್ಳಲಾಗಿದೆ. ಇದನ್ನು ಆಯಾ ಜಿಲ್ಲೆಗಳಲ್ಲಿ ಹಿಂದುಳಿದಿರುವ ಪ್ರದೇಶಗಳ ಆಧಾರದ ಮೇಲೆ ಹಾಗೂ ಮಕ್ಕಳ ಗಣತಿ ೨೦೦೭ರ ಫಲಿತತೆ ಆಧಾರದ ಮೇಲೆತೆಗೆದುಕೊಳ್ಳಲಾಗಿದೆ. ಮತ್ತು ಈ ರೀತಿ ಆಯ್ಕೆ ಮಾಡಿಕೊಳ್ಳಲು ಅಳವಡಿಸಿಕೊಂಡಿರುವ ಲಕ್ಷಣಗಳೆಂದರೆ ಶಾಲೆಬಿಟ್ಟಿರುವ ಅತಿ ಹೆಚ್ಚು ಮಕ್ಕಳಿರುವ ತಾಲ್ಲೂಕು ಹಾಗೂ ಅತಿ ಕಡಿಮೆ ಶೇಕಡವಾರು ಪ್ರಮಾಣದ ಶಾಲೆಗಳು ಎಲ್ಲಾ ಪಂಚಾಯಿತಿಗಳಿಂದ ಶಾಲೆಗಳನ್ನು ಪಟ್ಟಿ ಮಾಡಲಾಗಿದ್ದು, ಎಲ್ಲಾ ಏಳು ತಾಲ್ಲೂಕುಗಳಲ್ಲಿ ರ್‍ಯಾಂಡಮ್ ಆಗಿ ಆಯ್ಕೆ ಮಾಡಲಾಗಿದೆ. ೨೨೪ ಗ್ರಾಮ ಪಂಚಾಯಿತಿಗಳಿಂದ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳನ್ನು ಅಧ್ಯಯನಕ್ಕೆ ಆಯ್ಕೆ ಮಾಡಿಕೊಳ್ಳಲಾಗಿದೆ.

ಕರ್ನಾಟಕ ರಾಜ್ಯವು ೩೦ ಜಿಲ್ಲೆಗಳು ೧೭೬ ಕಂದಾಯ ಮತ್ತು ೨೦೨ ಶೈಕ್ಷಣಿಕ ತಾಲ್ಲೂಕುಗಳನ್ನು ಹೊಂದಿದ್ದು, ಇದರಲ್ಲಿ ೨೭೫೭೫ ಜನವಸತಿ ಪ್ರದೇಶವಿದೆ. ಇದರಲ್ಲಿ ೪ ವಿಭಾಗಗಳನ್ನಾಗಿ ಮಾಡಿಕೊಂಡಿದ್ದು. ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಗುಲ್ಬರ್ಗಗಳಾಗಿವೆ. ಈ ವಿಭಾಗಗಳ ಅಡಿಯಲ್ಲಿ ೩೦ ಕಂದಾಯ ಜಿಲ್ಲೆ ಹಾಗೂ ೩೩ ಶೈಕ್ಷಣಿಕ ಜಿಲ್ಲೆಗಳನ್ನುತರಲಾಗಿದ್ದು. ಆಡಳಿತವು ಉತ್ತಮವಾಗಿ ನಡೆಯಲು ಸಹಾಯಕಾರಿಯಾಗಿವೆ, ಇವುಗಳಡಿಯಲ್ಲಿ ಇವುಗಳು ಕೆಲಸ ನಿರ್ವಹಿಸುತ್ತಿವೆ.

೨೦೦೮-೨೦೦೯ನೆಯ ವಾರ್ಷಿಕ ವರದಿಯ ಪ್ರಕಾರ ಕರ್ನಾಟಕದಲ್ಲಿ ೫೫೦೦೦ ಸರ್ಕಾರಿ ಪ್ರಾಥಮಿಕ ಶಾಲೆಗಳಿದ್ದು, ಒಟ್ಟು ೩೫೦ಶಾಲೆಗಳನ್ನು ಈ ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡಿದ್ದು, ಇವುಗಳನ್ನು ಬಾಂಬೆ-ಕನಾಟಕ ಪ್ರದೇಶ ಹಾಗೂ ಹೈದರಬಾದ್-ಕರ್ನಾಟಕದ ೪ ಜಿಲ್ಲೆಗಳಲ್ಲಿ ಒಟ್ಟು ೩೫೦ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ೩೫೦ ಶಾಲೆಗಳು ೭ ತಾಲ್ಲೂಕುಗಳಲ್ಲಿ ಹರಡಿಕೊಂಡಿವೆ. ಇವುಗಳನ್ನು ರ್‍ಯಾಂಡಮ್ ಆಗಿ ಒಟ್ಟು ೨೨೪ ಗ್ರಾಮ ಪಂಚಾಯಿತಿಗಳಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಎಲ್ಲಾ ಒಟ್ಟು ಸ್ಯಾಂಪಲ್‌ಗಳಲ್ಲಿ ೨೨೪ ಗ್ರಾಮ ಪಂಚಾಯಿತಿಗಳಿಂದ ಆಯ್ಕೆ ಮಾಡಲಾಗಿದ್ದು, ಎಲ್ಲವೂ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಾಗಿವೆ.

೧.೫.೧ ಆಯ್ಕೆಯ ನಕ್ಷೆ

ಬಳ್ಳಾರಿ ಜಿಲ್ಲೆ		ರಾಯಚೂರು ಜಿಲ್ಲೆ	ಬಿಜಾಪುರ ಜಿಲ್ಲೆ		ಬಾಗಲಕೋಟೆ ಜಿಲ್ಲೆ	
ಬಳ್ಳಾರಿ ಶೈಕ್ಷಣಿಕ ಬ್ಲಾಕ್	ಹಗರಿಬೊಮ್ಮನಹಳ್ಳಿ ಶೈಕ್ಷಣಿಕ ಬ್ಲಾಕ್	ದೇವದುರ್ಗ ಶೈಕ್ಷಣಿಕ ಬ್ಲಾಕ್	ಬಿಜಾಪುರ ಶೈಕ್ಷಣಿಕ ಬ್ಲಾಕ್	ಬಸವನ ಬಾಗೇವಾಡಿ ಶೈಕ್ಷಣಿಕ ಬ್ಲಾಕ್	ಜಮಖಂಡಿ ಶೈಕ್ಷಣಿಕ ಬ್ಲಾಕ್	ಬದಾಮಿ ಶೈಕ್ಷಣಿಕ ಬ್ಲಾಕ್

೧.೫.೨ ಅಧ್ಯಯನಕ್ಕೊಳಪಡುವ ಗುಂಪು

ಎಸ್.ಡಿ.ಎಂ.ಸಿ ಸದಸ್ಯರು				ಎಸ್.ಡಿ ಎಂ.ಸಿ ಸದಸ್ಯರಲ್ಲದವರು	ಸರ್ಕಾರಿ ಅಧಿಕಾರಿಗಳು
೧	ಅಧ್ಯಕ್ಷರು	ಪದನಿಮಿತ್ತ ಸದಸ್ಯರು	ನಾಮ ನಿರ್ದೇಶಿತ ಸದಸ್ಯರು	ಶಿಕ್ಷಕರು	ಕ್ಷೇತ್ರ ಶಿಕ್ಷಣಾಧಿಕಾರಿಗಳು
೨	ಉಪಾಧ್ಯಕ್ಷರು	ಮುಖ್ಯ ಶಿಕ್ಷಕರು	ದಾನಿಗಳು	ಪಾಲಕರು/ ತಂದೆ ೨	ಕ್ಷೇತ್ರ ಸಮನ್ವಯಾಧಿಕಾರಿಗಳು
೩	ಮಹಿಳಾ ಸದಸ್ಯರು	ಅಂಗನವಾಡಿ ಕಾರ್ಯಕರ್ತೆಯರು	ಶಾಲೆಯ ಹಿರಿಯ ತರಗತಿಯ ಬಾಲಕ ಬಾಲಕಿ	ತಾಯಿ ೨	ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು
೪	ಪುರುಷ ಸದಸ್ಯರು /ಎಸ್.ಸಿ, ಎಸ್.ಟಿ	ಆರೋಗ್ಯ ಕಾರ್ಯಕರ್ತೆಯರು	ಮಹಿಳಾ ಸ್ವ ಸ್ವಹಾಯ ಸಂಘ/ ಯುವಕ ಯುವತಿ ಸಂಘದ ಪ್ರತಿನಿಧಿಗಳು		ಶಿಕ್ಷಣಸಂಯೋಜಕರು
					ಗುಚ್ಛ ಸಂಪನ್ಮೂಲ ವ್ಯಕ್ತಿಗಳು

೧.೫..೩ ಅಧ್ಯಯನ ಸಾಧನಗಳ ಸಿದ್ದತೆ

ಈ ಅಧ್ಯಯನದ ಉದ್ದೇಶವನ್ನು ದೃಷ್ಟಿಯಲ್ಲಿಟ್ಟುಕೊಂಡು ಅಧ್ಯಯನ ಸಾಧನಗಳನ್ನು ತಯಾರು ಮಾಡಲಾಗಿದೆ. ಈ ಸಾಧನಗಳ ಮೌಲ್ಯವನ್ನು ಶಿಕ್ಷಣ ತಜ್ಞರು, ಸಂಶೋಧಕರು ಹಾಗೂ ಸರ್ಕಾರಿ ಅಧಿಕಾರಿಗಳು ಸ್ಥಿರೀಕರಿಸಿದ್ದಾರೆ. ಸಾಮುದಾಯಿಕ ಸಂಪರ್ಕ, ಎಸ್.ಡಿ.ಎಂ.ಸಿ ಸದಸ್ಯರ ಸಾಮಾಜಿಕ, ಆರ್ಥಿಕ ಸ್ಥಾನಮಾನ, ತಿಳುವಳಿಕೆ, ಪಾಲ್ಗೊಳ್ಳುವಿಕೆ ಹಾಗೂ ಅಧಿಕಾರದ ಬಗ್ಗೆ ಗುಣಾತ್ಮಕ ಹಾಗೂ ಪ್ರಮಾಣಾತ್ಮಕ ಮಾಹಿತಿಯನ್ನು ಸಂಗ್ರಹಿಸಲು ಈ ಸಾಧನಗಳನ್ನು ರೂಪಿಸಲಾಗಿದೆ. ನಾಲ್ಕು ಜಿಲ್ಲೆಯ ಏಳು ತಾಲ್ಲೂಕುಗಳಲ್ಲಿ ಆಯ್ದ ಶಾಲೆಗಳಲ್ಲಿನ ಎಸ್.ಡಿ.ಎಂ.ಸಿ.ಗಳನ್ನು ಅಧ್ಯಯನಕ್ಕೊಳಪಡಿಸಿಕೊಳ್ಳಬೇಕೆಂದಿರುವ ಸದಸ್ಯರಿಗೆ ಸಾಧನಗಳನ್ನು ನೀಡಿ, ಸಾಧನಗಳ ಅಳವಡಿಸುವಿಕೆಯ ಬಗ್ಗೆ ಪ್ರಾಯೋಗಿಕ ಪರೀಕ್ಷೆಯನ್ನು ಕೈಗೊಳ್ಳಲಾಯಿತು. ಸಾಧನಗಳ ಅಳವಡಿಕೆಯ ಸಾಧ್ಯ ಸಾಧ್ಯತೆಗಳನ್ನು ತಿಳಿಯಲು ಗುಂಪು ಚರ್ಚೆ ನಡೆಸಲಾಗಿತ್ತು. ಕೆಲವು ಸೂಕ್ತ ಮಾರ್ಪಾಡಿನೊಂದಿಗೆ ಸಾಧನಗಳನ್ನು ಅಂತಿಮಗೊಳಿಸಲಾಯಿತು. ಶಾಲೆಯ ಎಸ್.ಡಿ.ಎಂ.ಸಿಗಳ ವಿವಿಧ ದೃಷ್ಟಿಕೋನದ ಮಾಹಿತಿ ಸಂಗ್ರಹಕ್ಕೆ ಒಟ್ಟು ೧೦ ಸಾಧನಗಳನ್ನು ತಯಾರಿಸಲಾಗಿದ್ದು, ಇವೆಲ್ಲವೂ ಶಾಲಾ ಶಿಕ್ಷಣದ ಅಭಿವೃದ್ಧಿಯಲ್ಲಿ ಸಮುದಾಯದ ಸಹಭಾಗಿತ್ವ (ಎಸ್.ಡಿ.ಎಂ.ಸಿ.ಯನ್ನು ಅನುಲಕ್ಷಿಸಿ) ಎಂಬ ಶೀರ್ಷಿಕೆಯಡಿಯಲ್ಲಿಸಾಮೂದಾಯಿಕ ಸಂಪರ್ಕದ ಚೌಕಟ್ಟಿನೊಳಗೆ ಇವೆ.

ಕೋಷ್ಟಕ ೧ ಸಾಧನ ಒಳಗೊಂಡಿರುವ ಸವಿವರ

ಸಾಧನ	ವಿವರಣೆ
೧	ಶಾಲೆಯ ವಿವರ, ಶಾಲೆ ಇರುವ ಸಾಮಾನ್ಯ ಮಾಹಿತಿ ಹಾಗೂ ಎಲ್ಲಿದೆ ಎಂಬ ವಿವರ

೨	ಮೊದಲಿಗೆ ಶಾಲೆ ಹಾಗೂ ಸಮುದಾಯ ನಡುವೆ ಸಂಬಂಧ ಹೇಗಿದೆ ಎಂಬ ಮಾಹಿತಿಗಾಗಿ ಹಾಗೂ ಮನೆಯಲ್ಲಿ ಕಲಿಕಾ ವಾತಾವರಣ, ಪಾಲಕರು ಮಕ್ಕಳಿಗೆ ನೀಡಿರುವ ಅವಕಾಶ ಮತ್ತು ಆದರ್ಶ ಶಾಲೆ, ಶಿಕ್ಷಕ ಮತ್ತು ವಿದ್ಯಾರ್ಥಿಗಳ ಬಗ್ಗೆ ಪರಿಕಲ್ಪನೆ ಪಾಲಕರಲ್ಲಿ ಹೇಗಿದೆ, ಅಲ್ಲದೆ ಶಾಲೆ ಮತ್ತು ಪೋಷಕರ ನಡುವೆ ಸಂಬಂಧ ಬಗ್ಗೆ ಅಭಿಪ್ರಾಯ ಸಂಗ್ರಹ ಹಾಗೂ ಪಾಲಕರು ಎಸ್.ಡಿ.ಎಂ.ಸಿ ಸದಸ್ಯರಲ್ಲದಿದ್ದರು ಎಸ್.ಡಿ.ಎಂ.ಸಿ ಪ್ರತಿನಿಧಿಗಳನ್ನು ಅವರೆ ಆಯ್ಕೆ ಮಾಡಿರುವುದರಿಂದ, ಎಸ್.ಡಿ.ಎಂ.ಸಿಯ ಬಗ್ಗೆ ಹಾಗೂ ಎಸ್.ಡಿ.ಎಂ.ಸಿ ನಡೆಸುತ್ತಿರುವ ಕಾರ್ಯಚಟುವಟಿಕೆ ಮತ್ತು ಜವಾಬ್ದಾರಿಯ ಬಗ್ಗೆ ಅವರ ಮನೋಭಾವ
೩	ಈ ಸಾಧನವನ್ನು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರುಗಳಿಗೆ ಎಸ್.ಡಿ.ಎಂ.ಸಿ ಬಗ್ಗೆ ಅರಿವು, ಭಾಗವಹಿಸುವಿಕೆ ಮತ್ತು ಸಬಲೀಕರಣಗಳಿಂದ ಯಾವ ಹಂತದಲ್ಲಿದ್ದಾರೆ. ಅಧ್ಯಕ್ಷರು ಎಸ್.ಡಿ.ಎಂ.ಸಿ ಪರಿಶಿಷ್ಟ ಜಾತಿ/ ವರ್ಗದ ಪ್ರತಿನಿಧಿಗಳು, ನಾಮನಿರ್ದೇಶಿತ ಸದಸ್ಯರು (ಮಹಿಳಾ ಪ್ರತಿನಿಧಿಗಳು, ದಾನಿಗಳು) ಪದನಿಮಿತ್ತ ಸದಸ್ಯರು (ಅಂಗನವಾಡಿ ಹಾಗೂ ಆರೋಗ್ಯ ಕಾರ್ಯಕರ್ತೆಯರು) ಮತ್ತು ಇತರೆ ಇಲಾಖೆಗಳ ಕಾರ್ಯ ವೈಖರಿಯ ಬಗ್ಗೆ ಮಾಹಿತಿ ಸಂಗ್ರಹ
೪	ಪಂಚಾಯಿತಿ ಸದಸ್ಯರಿಗೆ ಪ್ರಶ್ನಾವಳಿಯ ಮೂಲಕ ನಾಗರೀಕ ಸೌಲಭ್ಯ ಸಮಿತಿಯ ಸದಸ್ಯರಾಗಿ ಪಾತ್ರ ಹಾಗೂ ಕರ್ತವ್ಯ ಮತ್ತು ಎಸ್.ಡಿ.ಎಂ.ಸಿ ಬಗ್ಗೆ ಅರಿವು, ಭಾಗವಹಿಸುವಿಕೆ ಮತ್ತು ಸಬಲೀಕರಣದ ಯಾವ ಹಂತದಲ್ಲಿದ್ದಾರೆ ಮತ್ತು ಸಹಭಾಗಿತ್ವ, ಸಮನ್ವಯತೆಯಲ್ಲಿ ಅವರ ಮನೋಭಾವ.
೫	ಯುವಕ/ಯುವತಿ ಸಂಘದ ಪ್ರತಿ ನಿಧಿಗಳು ಎಸ್.ಡಿ.ಎಂ.ಸಿ ಸಮಿತಿಯಲ್ಲಿ ನಾಮ ನಿರ್ದೇಶಿತ ಸದಸ್ಯರಾಗಿದ್ದು, ಎಸ್.ಡಿ.ಎಂ.ಸಿ ಯ ಬಗ್ಗೆ ಅರಿವು, ಜಾಗೃತಿ ಇದರಲ್ಲಿ ಯುವ ಸಂಘಟನೆಗಳ ಜವಾಬ್ದಾರಿ ಹಾಗೂ ಪಾತ್ರ, ಇವರುಗಳನ್ನು ಎಸ್.ಡಿ.ಎಂ.ಸಿಯನ್ನು ಉತ್ತಮವಾಗಿ ಹೇಗೆ ಬಲಪಡಿಸಬಹುದು ಎಂಬ ಕಾರಣಕ್ಕಾಗಿ ತೆಗೆದುಕೊಳ್ಳಲಾಯಿತು.
೬	ಸ್ತ್ರೀ ಶಕ್ತಿ ಸ್ವ ಸಹಾಯ ಸಂಘದ ಪ್ರತಿ ನಿಧಿಗಳಿಗೆ ಸದಸ್ಯರು ಎಸ್.ಡಿ.ಎಂ.ಸಿ ಬಗ್ಗೆ ಹೊಂದಿರುವ ಮನೋಭಾವ, ಅರಿವು, ಅದರಲ್ಲಿ ಸಂಘದ ಪಾತ್ರದ ಬಗ್ಗೆ ತಿಳಿದುಕೊಳ್ಳಲು ಹಾಗೂ ಎಸ್.ಡಿ.ಎಂ.ಸಿ ಸಮಿತಿಯು ಇವರುಗಳಿಂದ ಏನನ್ನು ಬಯಸುತ್ತಾರೆ ಎಂಬ ಅಭಿಪ್ರಾಯಕ್ಕಾಗಿ
೭	ಮುಖ್ಯ ಶಿಕ್ಷಕರು ಇವರು ಎಸ್.ಡಿ.ಎಂ.ಸಿಯ ಪದನಿಮಿತ್ತ ಕಾರ್ಯದರ್ಶಿಯೂ ಕೂಡಾ ಆಗಿದ್ದಾರೆ. ಇವರು ಎಸ್.ಡಿಎಂ.ಸಿಯ ಕಾರ್ಯಚಟುವಟಿಕೆ ಹಾಗೂ ಎಸ್.ಡಿ.ಎಂ.ಸಿಯಿಂದ ಯಾವುದಾದರೂ ಸಮಸ್ಯೆಗಳಿವೆಯೇ, ಇದನ್ನು ನೀವು ಎದುರಿಸುತ್ತಿದ್ದೀರಾ ಎಂಬ ವಿವರಗಳನ್ನು ಎಸ್.ಡಿ.ಎಂ.ಸಿಯನ್ನು ಬಲಪಡಿಸುವ ಉದ್ದೇಶದಿಂದ ತೆಗದುಕೊಳ್ಳಲಾಯಿತು.
೮	ವಿದ್ಯಾರ್ಥಿಗಳ ಪ್ರತಿನಿಧಿಗಳು ಎಸ್.ಡಿ.ಎಂ.ಸಿಯ ಬಗ್ಗೆ ಹೊಂದಿರುವ ಮನೋಭಾವ ಹಾಗೂ ಅದರ ಬಗ್ಗೆ ಜಾಗೃತಿ ಮತ್ತು ಭಾಗವಹಿಸುವಿಕೆಯ ಬಗ್ಗೆ
೯	ಶಾಲಾ ಶಿಕ್ಷಕರು ಶಾಲಾಭಿವೃದ್ಧಿಗಾಗಿ ಎಸ್.ಡಿ.ಎಂ.ಸಿ ಮತ್ತು ಶಿಕ್ಷಕರ ನಡುವೆ ಯಾವ ರೀತಿ ಸಮನ್ವಯತೆ ಇರಬೇಕು ಹಾಗೂ ಎಸ್.ಡಿ.ಎಂ.ಸಿ ಬಗ್ಗೆ ಶಿಕ್ಷಕರು ಹೊಂದಿರುವ ಮನೋಭಾವ ಮತ್ತು ಎಸ್.ಡಿ.ಎಂ.ಸಿಯು ಉತ್ತಮವಾಗಿ ಕೆಲಸ ನಿರ್ವಹಿಸಲು ಅವರಲ್ಲಿರುವ ಹೊಸ ಹೊಸ ಯೋಜನೆಯ ಬಗ್ಗೆ
೧೦	ಈ ಸಾಧನವನ್ನು ಎಸ್.ಡಿ.ಎಂ.ಸಿಯ ಕಾರ್ಯಚಟುವಟಿಕೆಯ ಬಗ್ಗೆ ಇಲಾಖೆಯ ಅಧಿಕಾರಿಗಳು ಹೊಂದಿರುವ ಮನೋಭಾವವನ್ನು ಪರಿಗಣಿಸುವ ಉದ್ದೇಶದಿಂದ ಮಾಡಲಾಯಿತು. ಇವರು ನೀಡಿರುವ ಸಲಹೆಗಳನ್ನು ಮುಂದಿನ ಎಸ್.ಡಿ.ಎಂ.ಸಿಯ ಉನ್ನತೀಕರಣಕ್ಕೆ ಬಳಸಲಾಗುವುದು. ಇವುಗಳಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು ಹಾಗೂ ಶಿಕ್ಷಣ ಸಂಯೋಜಕರು ಮತ್ತು ಗುಚ್ಛ ಸಂಪನ್ಮೂಲ ವ್ಯಕ್ತಿಗಳಿಗೆ ಬೇರೆ ಬೇರೆ ಸಾಧನವನ್ನುತಯಾರು ಮಾಡಿ ಬಳಸಿಕೊಳ್ಳಲಾಯಿತು.
೧೧	ಈ ಸಾಧನವನ್ನು ಸಮುದಾಯವನ್ನು ಪ್ರತಿನಿಧಿಸುವ ವ್ಯಕ್ತಿಗಳು ಎಸ್.ಡಿ.ಎಂ.ಸಿಯ ಬಗ್ಗೆ ಹೊಂದಿರುವ ಮನೋಭಾವವನ್ನು ಸಮುದಾಯದ ವಿಶಾಲ ದೃಷ್ಟಿಯಿಂದ ನೋಡುವ ಕಾರಣದಿಂದ ಬಳಸಿಕೊಳ್ಳಲಾಯಿತು.

ಸರ್ಕಾರಿ ಹಾಗೂ ಸಮುದಾಯ ಮಟ್ಟದಲ್ಲಿರುವ ಕ್ಷೇತ್ರ ಅಧಿಕಾರಿಗಳು ಸೇರಿದಂತೆ ವಿವಿಧ ವ್ಯಕ್ತಿಗಳ ಅಭಿಪ್ರಾಯ ಸಂಗ್ರಹಣೆಗಾಗಿ ಈ ಸಾಧನಗಳನ್ನು ಬಳಸಿಕೊಳ್ಳಲಾಯಿತು. ಈ ಅಧ್ಯಯನವು

ರಾಜ್ಯದ ೪ ಜಿಲ್ಲೆಗಳ ೭ ತಾಲ್ಲೂಕುಗಳ ಒಟ್ಟು ೩೫೦ ಶಾಲೆಗಳು ಈ ಅಧ್ಯಯನ ವ್ಯಾಪ್ತಿಗೆ ಸೇರಿದೆ. ವಿವಿಧ ಸೂತ್ರಗಳ ಮೂಲಕ ಅಧ್ಯಯನಕ್ಕೊಳಪಟ್ಟವರ ಅಭಿಪ್ರಾಯ ಸಂಗ್ರಹಿಸಿದ ಸಂಖ್ಯೆ ಈ ಕೆಳಕಂಡಂತಿದೆ.

ಕೋಷ್ಟಕ ೨ ಅಧ್ಯಯನಕ್ಕೆ ಒಳಪಟ್ಟವರ ಸಂಖ್ಯೆ

ವಿವರ	ಸಂಖ್ಯೆ	ಶೇಕಡವಾರು ಅಧ್ಯಯನ	ಅಧ್ಯಯನ ನಡೆಸಲಾಗದ್ದಕ್ಕೆ ಕಾರಣ
ಎಸ್.ಡಿ.ಎಂ.ಸಿ ಅಧ್ಯಕ್ಷರು	೩೪೬	೯೯	ಅಲಭ್ಯ, ಆಯ್ಕೆ/ ನಾಮನಿರ್ದೇಶನ ಆಗಿಲ್ಲ, ವಲಸೆ, ವೃತ್ತಿ ಮೇಲೆ ಹೊರ ಊರಿನಲ್ಲಿ, ಅಸ್ವಸ್ಥ, ಮುಖ್ಯ ಶಿಕ್ಷಕರ ಆಹ್ವಾನವಿದ್ದರೂ ಬರಲಿಲ್ಲ.
ಎಸ್.ಡಿ.ಎಂ.ಸಿ ಉಪಾಧ್ಯಕ್ಷರು	೩೨೦	೯೧	ಆಯ್ಕೆ ಆಗಿಲ್ಲ,ಅಲಭ್ಯ,ವಲಸೆ ಹೋಗಿದ್ದಾರೆ, ಆರೋಗ್ಯ ಸರಿ ಇಲ್ಲ, ದೇವಸ್ಥಾನಕ್ಕೆ ಮತ್ತು ಮದುವೆಗೆ ಹೋಗಿದ್ದಾರೆ, ಮಾಹಿತಿ ನೀಡಲು ನಿರಾಕರಣೆ
ಎಸ್.ಡಿ.ಎಂ.ಸಿ ಎಸ್.ಸಿ ಸದಸ್ಯರು	೨೮೮	೮೨	ಕೆಲವು ಶಾಲೆಗಳಲ್ಲಿ ಪರಿಶಿಷ್ಟ ಜಾತಿ ಸದಸ್ಯರು ಇಲ್ಲ, ಕೆಲವರು ಸಿಗಲಿಲ್ಲ
ಎಸ್.ಡಿ.ಎಂ.ಸಿ ಎಸ್.ಸಿ/ ಎಸ್.ಟಿ ಸದಸ್ಯರು	೨೩೪	೬೭	ಕೆಲವು ಶಾಲೆಗಳಲ್ಲಿ ಪರಿಶಿಷ್ಟ ಪಂಗಡಸದಸ್ಯರು ಇಲ್ಲ, ಕೆಲವರು ಸಿಗಲಿಲ್ಲ
ಎಸ್.ಡಿ.ಎಂ.ಸಿ ಅಲ್ಪ ಸಂಖ್ಯಾತರು	೧೨೧	೩೫	ಅಲ್ಪ ಸಂಖ್ಯಾತರು ಶಾಲೆಗಳಲ್ಲಿ ಇಲ್ಲ.
ಎಸ್.ಡಿ.ಎಂ.ಸಿ ಯಲ್ಲಿ ಇತರೆ ಸದಸ್ಯರು	೩೪೪	೯೮	ಕೆಲಸದ ನಿಮಿತ್ತ ಹೊರಗೆ ಹೋಗಿದ್ದಾರೆ.
ಧಾನಿಗಳು	೨೨೦	೬೩	ಅನೇಕ ಕಡೆ ದಾನಿಗಳು ಆಯ್ಕೆ ಮಾಡಿಲ್ಲ, ಮಾಹಿತಿ ನೀಡಲು ನಿರಾಕರಣೆ
ಎಸ್.ಡಿ.ಎಂ.ಸಿಯ ನಾಮನಿರ್ದೇಶಿತ ಸದಸ್ಯರಾದ ಯುವಕ/ಯುವತಿ ಸಂಘದ ಸದಸ್ಯರು	೧೦೬	೩೦	ಯುವಕ/ಯುವತಿ ಮಂಡಳಿಯಿಂದ ಆಯ್ಕೆ ಮಾಡಿಲ್ಲ, ಯುವಕ ಸಂಘಗಳು ಇಲ್ಲ. ಯುವಕ/ತಿ ಮಂಡಳದ ಪ್ರತಿನಿಧಿಗಳು ಸಿಗಲಿಲ್ಲ.
ಎಸ್.ಡಿ.ಎಂ.ಸಿಯ ನಾಮನಿರ್ದೇಶಿತ ಸದಸ್ಯರಾದ ಮಹಿಳಾ ಸ್ವ ಸಹಾಯ ಸಂಘದ ಸದಸ್ಯರು	೨೦೦	೫೭	ಆಯ್ಕೆ ಮಾಡಿಲ್ಲ, ಕೂಲಿಗೆ ಹೋಗಿದ್ದಾರೆ, ವಲಸೆ ಹೋಗಿದ್ದಾರೆ, ಕಾರ್ಯದ ನಿಮಿತ್ತ ಬೇರೆ ಊರಿಗೆ ಹೋಗಿದ್ದಾರೆ.
ಅಂಗನವಾಡಿ ಕಾರ್ಯಕರ್ತೆಯರು	೩೪೨	೯೮	ಅಂಗನವಾಡಿ ಕಾರ್ಯಕರ್ತೆಯರು ಸಿಗಲಿಲ್ಲ, ರಜೆಯ ಮೇಲೆ ಹೋಗಿದ್ದಾರೆ.
ಆರೋಗ್ಯ ಕಾರ್ಯಕರ್ತೆಯರು	೬೭	೧೯	ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇಲ್ಲ, ಆರೋಗ್ಯ ಕಾರ್ಯಕರ್ತೆಯರು ಕ್ಷೇತ್ರ ಕಾರ್ಯದ ಮೇಲೆ ಬೇರೆ ಊರಿಗೆ ಹೋಗಿದ್ದಾರೆ.
ಎಸ್.ಡಿ.ಎಂ.ಸಿಯಲ್ಲಿರುವ ಮಕ್ಕಳ ಪ್ರತಿನಿಧಿಗಳು	೩೪೪	೯೮	ಮಗು ಶಾಲೆಗೆ ಹಾಜರಾಗಿಲ್ಲ, ಗೊತ್ತಿಲ್ಲ. ಹಿಂದೆ ಇದ್ದ ಮಗು ತೇರ್ಗಡೆಯಾಗಿ ಹೋದ ನಂತರ ಪುನಃ ಬೇರೆಯವರನ್ನು ಆಯ್ಕೆ ಮಾಡಿಲ್ಲ.

ಮುಖ್ಯ ಶಿಕ್ಷಕರು	೩೪೧	೯೭	ಸಿಗಲಿಲ್ಲ, ರಜೆಯ ಮೇಲೆ ಹೋಗಿದ್ದಾರೆ, ಕಛೇರಿಯ ಕೆಲಸದ ಮೇಲೆ ಹೊರಗೆ ಹೋಗಿದ್ದಾರೆ, ಮುಖ್ಯ ಶಿಕ್ಷಕರ ಹುದ್ದೆ ಖಾಲಿ ಇದೆ.
ಶಿಕ್ಷಕರು	೩೪೪	೯೮	ಮಾಹಿತಿ ನೀಡಲು ನಿರಾಕರಣೆ, ಎಸ್.ಡಿ.ಎಂ.ಸಿ ಸರಿಯಾಗಿಲ್ಲಾ ಎಂಬ ಭಾವನೆ
ತಾಯಂದಿರು (ಶಾಲೆಗೆ ಇಬ್ಬರಂತೆ)	೬೭೯	೯೭	ಸಿಗಲಿಲ್ಲ, ಹೊಲಕ್ಕೆ ಹೋಗಿದ್ದಾರೆ, ಕೆಲಸಕ್ಕೆ ಹೋಗಿದ್ದಾರೆ, ಅವರಿಲ್ಲಾ ಎಂಬ ಮಾಹಿತಿ.
ತಂದೆಯಂದಿರು	೬೮೪	೯೮	ಸಿಗಲಿಲ್ಲ, ವಲಸೆ,ಹೊಲಕ್ಕೆ ಹೋಗಿದ್ದಾರೆ, ಕೆಲಸಕ್ಕೆ ಹೋಗಿದ್ದಾರೆ, ಅವರಿಲ್ಲಾ ಎಂಬ ಮಾಹಿತಿ
ಸಮುದಾಯ ಪ್ರತಿನಿಧಿಗಳು	೨೮೬	೮೨	ಕಛೇರಿಯ ಕೆಲಸದ ಮೇಲೆ ತಾಲ್ಲೂಕು, ಜಿಲ್ಲಾ ಕೇಂದ್ರಕ್ಕೆ ಹೋಗಿದ್ದಾರೆ, ಅವರಿಲ್ಲಾ ಎಂಬ ಮಾಹಿತಿ
ಕ್ಷೇತ್ರ ಶಿಕ್ಷಣಾಧಿಕಾರಿಗಳು	೭	೧೦೦	
ಕ್ಷೇತ್ರ ಸಮನ್ವಯಾಧಿಕಾರಿಗಳು	೭	೧೦೦	
ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು	೧೪	೧೦೦	
ಶಿಕ್ಷಣ ಸಂಯೋಜಕರು	೧೪	೧೦೦	
ಗುಚ್ಚ ಸಂಪನ್ಮೂಲ ವ್ಯಕ್ತಿಗಳು	೨೮	೧೦೦	

೧.೫.೪ ಕ್ಷೇತ್ರ ಸಿಬ್ಬಂದಿ – ಕ್ಷೇತ್ರ ಅಧ್ಯಯನಕಾರರ ಆಯ್ಕೆ

ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನಲ್ಲಿ ಅಧ್ಯಯನ ನಡೆಸಲು ೬ ಕ್ಷೇತ್ರ ಅಧ್ಯಯನಕಾರರನ್ನು ನೇಮಿಸಲಾಯಿತು. ಇವರೆಲ್ಲರು ಸರ್ಕಾರಿ ಶಾಲೆಗಳೊಟ್ಟಿಗೆ ಕೆಲಸ ನಿರ್ವಹಿಸುತ್ತಿರುವ ಸರ್ಕಾರೇತರ ಸಂಘಟನೆಯಾದ ಸೇವಾ ಶಿಕ್ಷಣವಾಹಿನಿಯ ಸಮುದಾಯ ಮಾರ್ಗದರ್ಶಿಗಳಾಗಿದ್ದು ಇವರನ್ನು ನೇಮಿಸಿಕೊಳ್ಳಲಾಯಿತು. ಒಬ್ಬರಿಗೆ ೧೦ ಶಾಲೆಗಳಂತೆ ಒಟ್ಟು ೫೦ ಶಾಲೆಗಳು ಹಾಗೂ ಇವರ ಸಮನ್ವಯತೆ ಹಾಗೂ ಮೇಲ್ವಿಚಾರಣೆಗಾಗಿ ಒಬ್ಬರನ್ನು ಮೇಲ್ವಿಚಾರಕರನ್ನು ನೇಮಿಸಿಕೊಳ್ಳಲಾಯಿತು.

ಮೇಲಿನ ನಿಯಮದಂತೆ ಕ್ರಮವಾಗಿ ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನಲ್ಲಿ ಸರ್ಕಾರಿ ಶಾಲೆಯ ಅಭಿವೃದ್ಧಿ ಹಾಗೂ ಎಸ್.ಡಿ.ಎಂ.ಸಿಯೊಟ್ಟಿಗೆ ಕೆಲಸ ನಿರ್ವಹಿಸುತ್ತಿರುವ ರೀಡ್ಸ್ ಸಂಸ್ಥೆಯ ೬ ಸಿಬ್ಬಂಧಿಗಳನ್ನು ನೇಮಿಸಿ ೫೦ ಶಾಲೆಗಳನ್ನು, ಬಳ್ಳಾರಿ ಜಿಲ್ಲೆಯ ಮತ್ತೊಂದು ತಾಲ್ಲೂಕು ಹಗರಿಬೊಮ್ಮನಹಳ್ಳಿಯಲ್ಲಿ ಸರ್ಕಾರಿ ಶಾಲೆಗಳೊಟ್ಟಿಗೆ ಕೆಲಸ ನಿರ್ವಹಿಸುತ್ತಿರುವ ಸ್ನೇಹ ಸಂಸ್ಥೆಯ ೬ ಜನ ಸಿಬ್ಬಂಧಿ ಮತ್ತು ೫೦ ಶಾಲೆಗಳನ್ನು, ಬಿಜಾಪುರ ಜಿಲ್ಲೆಯ ಕ್ಷೇತ್ರ ಕಾರ್ಯ ಹಾಗೂ ಸಮೀಕ್ಷೆಗಾಗಿ

ಬಿಜಾಪುರ ತಾಲ್ಲೂಕಿನಲ್ಲಿ ಕೆಲಸ ನಿರ್ವಹಿಸುತ್ತಿರುವ ವಿಶಾಲ ಸಂಸ್ಥೆಯ ೬ ಜನ ಸಿಬ್ಬಂಧಿ ವರ್ಗದವರನ್ನು, ಬಿಜಾಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕಿನಲ್ಲಿ ಪಾವರ್ ಸಂಸ್ಥೆಯ ೬ ಜನ ಸಿಬ್ಬಂಧಿ ವರ್ಗದವರನ್ನು, ಬಾಗಲಕೋಟೆ ಜಿಲ್ಲೆಯ ಬಾದಮಿ ತಾಲ್ಲೂಕಿನಲ್ಲಿ ಶಿಕ್ಷಣದ ಅಭಿವೃದ್ಧಿಗಾಗಿ ದುಡಿಯುತ್ತಿರುವ ಬರ್ಡ್ಸ್ ಸಂಸ್ಥೆಯ ೬ ಜನ ಸಿಬ್ಬಂಧಿಗಳನ್ನು ಈ ಕಾರ್ಯಕ್ಕೆ ನೇಮಿಸಿಕೊಳ್ಳಲಾಯಿತು. ಇದೇ ಜಿಲ್ಲೆಯ ಜಮಖಂಡಿ ತಾಲ್ಲೂಕಿನಲ್ಲಿ ಮಕ್ಕಳ ಏಳಿಗೆಗಾಗಿ ದುಡಿಯುತ್ತಿರುವ ಅಭಿವೃದ್ಧಿ ಸಂಸ್ಥೆಯ ೬ ಜನ ಸಿಬ್ಬಂಧಿಗಳನ್ನು ನೇಮಿಸಿಕೊಳ್ಳಲಾಯಿತು. ಒಟ್ಟು ೩೫೦ ಶಾಲೆಗಳ ಸಮೀಕ್ಷೆಗಾಗಿ ೩೫ ಕ್ಷೇತ್ರ ಅಧ್ಯಯನಕಾರರನ್ನು ನೇಮಿಸಲಾಗಿತ್ತು. ಪ್ರತಿಯೊಂದು ತಾಲ್ಲೂಕಿನ ೫೦ ಶಾಲೆಗಳ ಕ್ಷೇತ್ರಕಾರ್ಯಕ್ಕಾಗಿ ೫ ಜನರ ತಂಡವನ್ನು ರಚಿಸಲಾಯಿತು. ಪ್ರತಿಯೊಬ್ಬರಿಗೂ ೧೦ ಶಾಲೆಗಳಂತೆ ಅಧ್ಯಯನಕ್ಕಾಗಿ ನಿಗದಿಪಡಿಸಲಾಗಿತ್ತು. ಪ್ರತಿಯೊಂದು ತಾಲ್ಲೂಕಿನ ಪ್ರತಿ ತಂಡದಲ್ಲಿ ಸಮನ್ವಯತೆ ಹಾಗೂ ಮೇಲ್ವೀಚಾರಣೆಗಾಗಿ ಒಬ್ಬರನ್ನು ಮೇಲ್ವಿಚಾರಕರನ್ನು ನೇಮಿಸಿಕೊಳ್ಳಲಾಯಿತು. ಏಳು ತಾಲ್ಲೂಕಿನಿಂದ ಒಬ್ಬರಂತೆ ೭ ಜನರನ್ನು ನೆಮಿಸಿಕೊಳ್ಳಲಾಯಿತು. ಒಂದು ಶಾಲೆಯ ಅಧ್ಯಯನಕ್ಕಾಗಿ ೩ ಮಾನವ ದಿನಗಳನ್ನು ವ್ಯಯಿಸಲಾಯಿತು.

೧.೫.೫ ಮಾಹಿತಿ ಸಂಗ್ರಹಣೆ

ನಿರ್ಧರಿಸಿದ ಯೋಜನೆಯಂತೆ ಸಂದರ್ಶನದ ಮೂಲಕ ೩ ದಿನಗಳಲ್ಲಿ ಎಲ್ಲಾ ಮಾಹಿತಿ ಸಂಗ್ರಹಿಸಲು ನಿರ್ಧರಿಸಲಾಗಿತ್ತು.

ಕೋಷ್ಟಕ ೩

ದಿನ೧	ಒಬ್ಬ ಅಧ್ಯಯನಕಾರನಿಂದ ಬೆಳಗ್ಗಿನ ಸಮಯದಲ್ಲಿ ಶಾಲೆಯ ಸಾಮಾನ್ಯ ಮಾಹಿತಿ, ಎಸ್.ಡಿ.ಎಂ.ಸಿಯ ವಿವರ, ಹಾಗೂ ತಂದೆ ತಾಯಿ ಪರಿಷತ್ತಿನ ಸದಸ್ಯರು, ಸಮುದಾಯ ಸದಸ್ಯರು, ಸಂಘದ ಸದಸ್ಯರು, ದಾನಿಗಳು, ಮಕ್ಕಳ ಪ್ರತಿನಿಧಿಗಳ ಸಂದರ್ಶನವನ್ನು ಮಾಡಲಾಗುತ್ತಿತ್ತು.
ದಿನ ೨	ಮುಖ್ಯ ಶಿಕ್ಷಕರು, ಎಸ್.ಡಿ.ಎಂ.ಸಿ ಅಧ್ಯಕ್ಷರು, ಉಪಾಧ್ಯಕ್ಷರು, ಪರಿಶಿಷ್ಟ ಜಾತಿ/ ಪಂಗಡದ ಸದಸ್ಯರು, ಅಲ್ಪ ಸಂಖ್ಯಾತ ಸದಸ್ಯರು (ಪ್ರತಿಯೊಬ್ಬರಿಗೂ ೧ ಗಂಟೆ ಸಂದರ್ಶನ)
ದಿನ ೩	ಉಳಿದ ಎಲ್ಲಾ ಸಂದರ್ಶನಗಳನ್ನು ಮುಗಿಸಿ ಅಪೂರ್ಣ ಮಾಹಿತಿಯನ್ನು ಸಂಗ್ರಹಿಸಲು ಬಳಸಲಾಗಿತ್ತು. ಶಾಲಾ ಮಾಹಿತಿ ಹಾಗೂ ಇನ್ನಾವುದೇ ಅಪೂರ್ಣ ಮಾಹಿತಿ ಇದ್ದಲ್ಲಿ ಅವುಗಳನ್ನು ಪೂರ್ಣಗೊಳಿಸಿರುತ್ತಾರೆ.

ಕ್ಷೇತ್ರ ಅಧ್ಯಯನಕಾರರಿಗೆ ಸೂಚನೆ

- ಸಂದರ್ಶಿಸಲ್ಪಡುವವರ ಜತೆಗೆ ಅನೌಪಚಾರಿಕ ಮಾತುಕತೆಯ ಮೂಲಕ ಸಂದರ್ಶನ ಆರಂಭಿಸುವುದು
- ಸಂದರ್ಶಿಸಲ್ಪಡುವವರ ಜತೆ ಸ್ನೇಹಮಯಿ ಹಾಗೂ ಧನಾತ್ಮಕ ಧೋರಣೆ ಇರಿಸುವುದು
- ನಿರೀಕ್ಷಿತ ಉತ್ತರ ಸಿಗದಿದ್ದರೂ ಬೇರೊಂದು ವಿಧದಲ್ಲಿ ಪ್ರಶ್ನೆ ಕೇಳಿ ಸಂದರ್ಶಿಲ್ಪಡುವವರಿಗೆ ಅರ್ಥ ಮಾಡಿಸುವುದು

ಮೇಲ್ವಿಚಾರಕರು

ಏಳು ಕ್ಷೇತ್ರಗಳಲ್ಲಿ ಮೇಲ್ವಿಚಾರಣೆ ನಡೆಸಲು ಏಳು ಮೇಲ್ವಿಚಾರಕರನ್ನು ನೇಮಿಸಲಾಯಿತು. ಅವರಿಗೆ ವಹಿಸಲಾದ ಕೆಲಸಗಳೆಂದರೆ, ಕಾರ್ಯಕ್ಷೇತ್ರ ಭೇಟಿ, ಸಾಧನಗಳ ಪರಿಶೀಲನೆ, ಮರುಶೀಲನೆ, ಹಿಂದಿನ ಪ್ರಶ್ನಾವಳಿಗಳ ಪರಿಶೀಲನೆ, ಗೊತ್ತಾಗದಿದ್ದರೆವಿವರಣೆಯನ್ನು ನೀಡುವುದು ಮತ್ತು ಸಹಾಯ

ನೀಡುವುದು, ಪೂರ್ಣಗೊಂಡ ಸಮಗ್ರ ಸಾಧನಗಳನ್ನು ಸಂಗ್ರಹಿಸಿ ಕಳುಹಿಸಿಕೊಡುವುದು. ನಿರ್ಧರಿತ ಗುಂಪು ಚರ್ಚೆಯನ್ನು ಸಂಯೋಜಿಸುವುದು ಮತ್ತು ಮಾರ್ಗದರ್ಶನ ನೀಡುವುದು ಹಾಗೂ ಎಲ್ಲ ಸಂದರ್ಶನಗಳನ್ನು ಪೂರ್ಣಗೊಳಿಸಿ ನಿಗದಿತ ಸಮಯದೊಳಗೆ ಮಾಹಿತಿ ರವಾನೆ ಇವರಾದಾಗಿತ್ತು. ಅಧ್ಯಯನಕ್ಕೆ ಆಯ್ದುಕೊಂಡ ಕ್ಷೇತ್ರ ಮೇಲ್ವಿಚಾರಕರಿಗೆ ಶಿಕ್ಷಣ ಕ್ಷೇತ್ರದಲ್ಲಿ ಈ ಹಿಂದೆ ಕೈಗೊಳ್ಳಲಾಗಿದ್ದ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಮೇಲ್ವಿಚಾರಕರಾಗಿ ಕಾರ್ಯನಿರ್ವಹಿಸಿದ ಅನುಭವ ಇರುವುದರಿಂದ ಇವರನ್ನು ನೇಮಿಸಿಕೊಳ್ಳಲಾಗಿತ್ತು.

೧.೫.೬ ಮಾಹಿತಿವಿನ್ಯಾಸ

ಈ ಮುಂದಿನ ಕೋಷ್ಟಕವು ಮಾಹಿತಿ ಸಂಗ್ರಹದ ಬಗ್ಗೆ ಸ್ಪಷ್ಟ ಚಿತ್ರಣ ನೀಡುತ್ತದೆ. ಮಾಹಿತಿ ಸಂಗ್ರಹಣೆಯನ್ನು ವಿಶ್ಲೇಷಣೆ, ಅಧ್ಯಯನದ ಉದ್ದೇಶಗಳನ್ನು ಆಧರಿಸಿ ನಡೆಸಲಾಗಿದೆ. ಈ ಪ್ರಕ್ರಿಯೆಯು ಸಂಗ್ರಹಿಸಿದ ಮಾಹಿತಿ, ಅದರ ವಿಶ್ಲೇಷಣೆ, ಮೌಲ್ಯಮಾಪನ ಹಾಗೂ ನಂತರದಲ್ಲಿ ಕಂಡುಬಂದಿರುವ ಅಧ್ಯಯನ ಶಿಫಾರಸ್ಸುಗಳಿಗೆ ಹೊಂದಾಣಿಕೆಯನ್ನು ಕಲ್ಪಿಸಿತು.

ಕೋಷ್ಟಕ –೫

ಕ್ರಮ ಸಂಖ್ಯೆ	ಅಧ್ಯಯನದ ಉದ್ದೇಶ	ಮಾಹಿತಿ ಸಂಗ್ರಹಣೆ	ಮಾಹಿತಿಯ ಮೂಲ/ಮಾಹಿತಿಯ ಪ್ರಕಾರ	ಮಾಹಿತಿಯ ಅಂಶ	ವಿಧಾನ	ಮಾರ್ಗ	ಅಧ್ಯಯನಕ್ಕೆ ಬಳಸಿದ ಸಾಧನ
ಉದ್ದೇಶ–1	ಶಾಲಾ ಶಿಕ್ಷಣದ ಅಭಿವೃದ್ಧಿಯಲ್ಲಿ ಭೌತಿಕ, ಬೌದ್ಧಿಕ, ಶಾಲಾಪರಿಸರ, ಮಕ್ಕಳ ದಾಖಲಾತಿ ಹಾಗೂ ಸೌಲಭ್ಯಗಳನ್ನು ಬಳಸಿಕೊಳ್ಳುವಲ್ಲಿ ಹಾಗೂ ಅವುಗಳನ್ನು ಅಭಿವೃದ್ಧಿಪಡಿಸುವಲ್ಲಿ ಎಸ್.ಡಿ.ಎಂ.ಸಿ ಪಾತ್ರವನ್ನು ಗುರುತಿಸುವುದು.						
1.1	ಶಾಲೆಯಲ್ಲಿರುವ ಅಗತ್ಯ ಸೌಲಭ್ಯಗಳನ್ನು ಗುರುತಿಸುವುದು	ಪ್ರಸ್ತುತ ಶಾಲೆಯಲ್ಲಿರುವ ಸಾಮಾನ್ಯ ಸೌಕರ್ಯ ಗಳು, ಪ್ರಸ್ತುತ ಗ್ರಾಮದ ಒಳಗಿರುವ ಸಮುದಾಯದ ಶೈಕ್ಷಣಿಕ ಜಂಟಿ ಸಹಭಾಗಿತ್ವ	ಮುಖ್ಯ ಶಿಕ್ಷಕರ ಮೂಲಕ ದತ್ತಾಂಶ ಸಂಗ್ರಹ	ಸಂಖ್ಯಾತ್ಮಕವಾಗಿ ಮತ್ತು ಕೇಸ್ ಸ್ಟಡಿ ಮೂಲಕ	ಸಮೀಕ್ಷೆ	ಪ್ರಶ್ನಾವಳಿ, ಚರ್ಚೆ ಮತ್ತು ಅವಲೋಕನ	ಸಾಧನ 1 ಶಾಲೆಯ ವಿವರ
1.2	ಶಾಲೆಯಲ್ಲಿರುವ ಅಗತ್ಯ ಸೌಲಭ್ಯಗಳನ್ನು ಗುರುತಿಸುವುದು	ಪ್ರಸ್ತುತ ಇರುವ ಶೈಕ್ಷಣಿಕ ಸೌಕರ್ಯ ಅಥವಾ ಸಲಕರಣೆಗಳು, ಪ್ರಸ್ತುತ ಇರುವ ಮೂಲಭೂತ ಸೌಕರ್ಯಗಳು, ಬಳಕೆಯಲ್ಲಿರುವ ಸೌಲಭ್ಯಗಳು	ಮುಖ್ಯ ಶಿಕ್ಷಕರ ಮೂಲಕ ದತ್ತಾಂಶ ಸಂಗ್ರಹ	ಸಂಖ್ಯಾತ್ಮಕವಾಗಿ ಮತ್ತು ಕೇಸ್ ಸ್ಟಡಿ ಮೂಲಕ	ಸಮೀಕ್ಷೆ	ಪ್ರಶ್ನಾವಳಿ, ಚರ್ಚೆ ಮತ್ತು ಅವಲೋಕನ	ಟೂಲ್ಸ್ 1, ಶಾಲೆಯ ವಿವರ
1.3	ಶಾಲೆಯಲ್ಲಿ	ಎಸ್.ಡಿ.ಎಂ.ಸಿಯ ಬಗ್ಗೆ	ಶಾಲೆಯ ಹಂತದಲ್ಲಿ	ಸಂಖ್ಯಾತ್ಮಕವಾಗಿ	ಸಮೀಕ್ಷೆ	ಪ್ರಶ್ನಾವಳಿ,	ಟೂಲ್ಸ್ 1, ಶಾಲೆಯ

	ಎಸ್.ಡಿ.ಎಂ.ಸಿ ರಚನೆ ಯಾಗುವುದಕ್ಕೂ ಮೊದಲು ಇದ್ದಂತಹ ಮಾಹಿತಿ ಮತ್ತು ಎಸ್.ಡಿ.ಎಂ.ಸಿಯ ಸಾಮಾನ್ಯ ಮಾಹಿತಿ	ಪೂರಕ ಮಾಹಿತಿ	ಮುಖ್ಯ ಶಿಕ್ಷಕರ ಮೂಲಕ ದತ್ತಾಂಶ ಸಂಗ್ರಹ			ಚರ್ಚೆ ಮತ್ತು ಅವಲೋಕನ	ವಿವರ
1.4	ಎಸ್.ಡಿ.ಎಂ.ಸಿ ರಚನೆ ಯಾವಾಗ ಮತ್ತು ಹೇಗೆ ಎಂಬುದರ ಬಗ್ಗೆ	ಎಸ್.ಡಿ.ಎಂ.ಸಿ ರಚನೆಯ ಬಗ್ಗೆ ಮಾಹಿತಿ ಎಸ್.ಡಿ.ಎಂ.ಸಿಯಲ್ಲಿ ಯಾರು ಯಾರು ಇದ್ದಾರೆ ಎಂಬ ಮಾಹಿತಿ	ಎಸ್.ಡಿ.ಎಂ.ಸಿ ಸದಸ್ಯರ ಮೂಲಕ ಶಾಲೆಯ ಹಂತದಲ್ಲಿ ಪ್ರಾಥಮಿಕ ಹಂತದಲ್ಲಿಮಾಹಿತಿಯ ಸಂಗ್ರಹ	ಸಂಖ್ಯಾತ್ಮಕ/ಗುಣಾತ್ಮಕ ವಾಗಿ ಹಾಗೂ ಕೇಸ್ ಸ್ಟಡಿ	ಸಮೀಕ್ಷೆ	ಪ್ರಶ್ನಾವಳಿ ಹಾಗೂ ಚರ್ಚೆ	ಟೂಲ್ಸ್ 2 ಎಸ್.ಡಿ.ಎಂ.ಸಿ ಸದಸ್ಯರು
1.5	ಎಸ್.ಡಿ.ಎಂ.ಸಿ ಸದಸ್ಯರ ಸಮೋಜೋ ಆರ್ಥಿಕ ಪರಿಸ್ಥಿತಿ, ಶಿಕ್ಷಣ, ಉದ್ಯೋಗ, ಜಾತಿ ವಿವರಗಳನ್ನೊಳಗೊಂಡಂತೆ	ಲಿಂಗ ವಿವರ ಶೈಕ್ಷಣಿಕ ವಿವರ ಉದ್ಯೋಗದ ವಿವರ ಜಾತಿಯ ವಿವರ	ಶಾಲೆಯ ಹಂತದಲ್ಲಿ ಎಸ್.ಡಿ.ಎಂ.ಸಿ ಸದಸ್ಯರ ಮೂಲಕ ಪ್ರಾಥಮಿಕ ಹಂತದ ಮಾಹಿತಿ	ಸಂಖ್ಯಾತ್ಮಕ/ ಗುಣಾತ್ಮಕ	ಸಮೀಕ್ಷೆ	ಪ್ರಶ್ನಾವಳಿ ಹಾಗೂ ಚರ್ಚೆ	ಟೂಲ್ಸ್ 2 ರಿಂದ7 ಎಸ್.ಡಿ.ಎಂ.ಸಿ ಸದಸ್ಯರು

1.6	ಎಸ್.ಡಿ.ಎಂ.ಸಿ ರಚನೆ, ರಚನೆಯು ಒಳಗೊಂಡಿರಬೇಕಾದ ಮಾಹಿತಿಯ ಬಗ್ಗೆ ಎಸ್.ಡಿ.ಎಂ.ಸಿ ಸದಸ್ಯರು ಹೊಂದಿರುವ ಜಾಗೃತಿಯ ಬಗ್ಗೆ ಅಳೆಯುವುದು.	ಎಸ್.ಡಿ.ಎಂ.ಸಿ ರಚನೆ, ಒಳಗೊಂಡಿರುವ ನಿಯಮ, ಪ್ರಕ್ರಿಯೆ, ನಿಯಮಗಳ ಅಳವಡಿಕೆ, ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಆಯ್ಕೆ, ನಾಮ ನಿರ್ದೇಶಿತ ಮತ್ತು ಪದ ನಿಮಿತ್ತ ಸದಸ್ಯರ ಆಯ್ಕೆ, ಎಸ್.ಡಿ.ಎಂ.ಸಿಯಲ್ಲಿ ಇರಬೇಕಾದ ಮಕ್ಕಳ ಪ್ರತಿನಿಧಿಗಳ ಆಯ್ಕೆಯ ಬಗ್ಗೆ ಎಸ್.ಡಿ.ಎಂ.ಸಿ ಸದಸ್ಯರಲ್ಲಿ ಇರುವ ಜಾಗೃತಿ	ಶಾಲೆಯ ಹಂತದಲ್ಲಿ ಎಸ್.ಡಿ.ಎಂ.ಸಿ ಸದಸ್ಯರ ಮೂಲಕ ಪ್ರಾಥಮಿಕ ಹಂತದ ಮಾಹಿತಿ	ಸಂಖ್ಯಾತ್ಮಕ/ ಗುಣಾತ್ಮಕ	ಸಮೀಕ್ಷೆ	ಪ್ರಶ್ನಾವಳಿ ಹಾಗೂ ಚರ್ಚೆ	ಟೂಲ್ಸ್ 2 ರಿಂದ7 ಎಸ್.ಡಿ.ಎಂ.ಸಿ ಸದಸ್ಯರು
1.7	ಎಸ್.ಡಿ.ಎಂ.ಸಿಂ ಯ ಉದ್ದೇಶ, ಅಧಿಕಾರ, ಕರ್ತವ್ಯದ ಬಗ್ಗೆ ಎಸ್.ಡಿ.ಎಂ.ಸಿ ಸದಸ್ಯರಿಗೆ ಇರುವ ಜಾಗೃತಿ	ಎಸ್.ಡಿ.ಎಂ.ಸಿ.ಯ ಉದ್ದೇಶದ ಬಗ್ಗೆ ಜಾಗೃತಿ ಎಸ್.ಡಿ.ಎಂ.ಸಿ ಅಧಿಕಾರದ ಬಗ್ಗೆ ಎಸ್.ಡಿ.ಎಂ.ಸಿ ಕರ್ತವ್ಯ	ಶಾಲೆಯ ಹಂತದಲ್ಲಿ ಎಸ್.ಡಿ.ಎಂ.ಸಿ ಸದಸ್ಯರ ಮೂಲಕ ಪ್ರಾಥಮಿಕ ಹಂತದ ಮಾಹಿತಿ	ಸಂಖ್ಯಾತ್ಮಕ/ ಗುಣಾತ್ಮಕ	ಸಮೀಕ್ಷೆ	ಪ್ರಶ್ನಾವಳಿ ಹಾಗೂ ಚರ್ಚೆ	ಟೂಲ್ಸ್ 2 ರಿಂದ7 ಎಸ್.ಡಿ.ಎಂ.ಸಿ ಸದಸ್ಯರು

1.8	ಎಸ್.ಡಿ.ಎಂ.ಸಿ ಸಮಿತಿ ಸದಸ್ಯರ ಭಾಗವಹಿಸುವಿಕೆ ಎಷ್ಟಿದೆ	ಎಸ್.ಡಿ.ಎಂ.ಸಿ ಸದಸ್ಯರ ಭಾಗವಹಿಸುವಿಕೆ ಎಸ್.ಡಿ.ಎಂ.ಸಿ ಯಲ್ಲಿ ಮಕ್ಕಳ ಪ್ರತಿನಿಧಿಗಳ ಭಾಗವಹಿಸುವಿಕೆ	ಶಾಲೆಯ ಹಂತದಲ್ಲಿ ಎಸ್.ಡಿ.ಎಂ.ಸಿ ಸದಸ್ಯರ ಮೂಲಕ ಪ್ರಾಥಮಿಕ ಹಂತದ ಮಾಹಿತಿ	ಸಂಖ್ಯಾತ್ಮಕ/ ಗುಣಾತ್ಮಕ ಹಾಗೂ ಕೇಸ್ ಸ್ಟಡಿ	ಸಮೀಕ್ಷೆ	ಪ್ರಶ್ನಾವಳಿ ಹಾಗೂ ಚರ್ಚೆ	ಟೂಲ್ಸ್ 2 –7 ಎಸ್.ಡಿ.ಎಂ.ಸಿ ಸದಸ್ಯರು
1.9	ಎಸ್.ಡಿ.ಎಂ.ಸಿ ಕಾರ್ಯ ವೈಖರಿಯ ಬಗ್ಗೆ ಸರ್ಕಾರಿ ನೌಕರರ ಮನೋಭಾವ	ಸಂವಿಧಾನಾತ್ಮಕ ರಚನೆಯ ಬಗ್ಗೆ ಮನೋಭಾವ ಎಸ್.ಡಿ.ಎಂ.ಸಿಯನ್ನು ಬಲಪಡಿಸುವಲ್ಲಿ ಸಲಹೆಗಳು	ತಾಲ್ಲೂಕು ಹಂತದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು, ಶಿಕ್ಷಣ ಸಂಯೋಜಕರು, ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು, ಗುಚ್ಛ ಸಂಪನ್ಮೂಲ ವ್ಯಕ್ತಿಗಳು	ಸಂಖ್ಯಾತ್ಮಕ/ ಗುಣಾತ್ಮಕ ಹಾಗೂ ಕೇಸ್ ಸ್ಟಡಿ	ಸಮೀಕ್ಷೆ	ಪ್ರಶ್ನಾವಳಿ ಹಾಗೂ ನಿರ್ದರಿತ ಗುಂಪಿನೊಡನೆ ಚರ್ಚೆ	ಟೂಲ್ಸ್ 13–17
1.10	ಎಸ್.ಡಿ.ಎಂ.ಸಿ ವ್ಯಾಪ್ತಿಯ ಬಗ್ಗೆ ಸದಸ್ಯರ ಮನೋಭಾವ	ಎಸ್.ಡಿ.ಎಂ.ಸಿ ಸದಸ್ಯರ ಮನೋಭಾವ	ಶಾಲೆಯ ಹಂತದಲ್ಲಿ ಎಸ್.ಡಿ.ಎಂ.ಸಿ ಸದಸ್ಯರ ಮೂಲಕ ಪ್ರಾಥಮಿಕ ಹಂತದ ಮಾಹಿತಿ	ಸಂಖ್ಯಾತ್ಮಕ/ ಗುಣಾತ್ಮಕ	ಸಮೀಕ್ಷೆ	ಪ್ರಶ್ನಾವಳಿ ಹಾಗೂ ಚರ್ಚೆ	ಟೂಲ್ಸ್ 2 –7 ಎಸ್.ಡಿ.ಎಂ.ಸಿ ಸದಸ್ಯರು
1.11	ಎಸ್.ಡಿ.ಎಂ.ಸಿ.ಯಲ್ಲಿ ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರ	ಎಸ್.ಡಿ.ಎಂ.ಸಿ.ಯಲ್ಲಿ ಮುಖ್ಯ ಶಿಕ್ಷಕರು ಭಾಗವಹಿಸುವಿಕೆ ಹಾಗೂ ಮನೋಭಾವದ ಬಗ್ಗೆ	ಶಾಲೆಯ ಹಂತದಲ್ಲಿ ಮುಖ್ಯ ಶಿಕ್ಷಕರು ಹಾಗೂ ಶಿಕ್ಷಕರ ಮೂಲಕ	ಸಂಖ್ಯಾತ್ಮಕ/ ಗುಣಾತ್ಮಕ ಹಾಗೂ ಕೇಸ್ ಸ್ಟಡಿ	ಸಮೀಕ್ಷೆ	ಪ್ರಶ್ನಾವಳಿ ಹಾಗೂ ಚರ್ಚೆ	ಟೂಲ್ಸ್ 8 ಮುಖ್ಯ ಶಿಕ್ಷಕರು ಟೂಲ್ 13 ಶಿಕ್ಷಕರು

	ಭಾಗವಹಿಸುವಿಕೆ ಹಾಗೂ ಮನೋಭಾವದ ಬಗ್ಗೆ	ಎಸ್.ಡಿ.ಎಂ.ಸಿಯಲ್ಲಿ ಶಿಕ್ಷಕರು ಭಾಗವಹಿಸುವಿಕೆ ಹಾಗೂ ಮನೋಭಾವದ ಬಗ್ಗೆ	ಪ್ರಾಥಮಿಕ ಹಂತದ ಮಾಹಿತಿ				
1.12	ಎಸ್.ಡಿ.ಎಂ.ಸಿಯ ಕಾರ್ಯಚಟುವಟಿಕೆಯ ಬಗ್ಗೆ ಸಮುದಾಯ, ಪಾಲಕರು, ಮಕ್ಕಳ (ಎಸ್.ಡಿ.ಎಂ.ಸಿ ಸಮಿತಿಯಲ್ಲಿ ಇಲ್ಲದವರು) ಅನಿಸಿಕೆ ಹಾಗೂ ಮನೋಭಾವ	ಎಸ್.ಡಿ.ಎಂ.ಸಿ ರಚನೆ, ಎಸ್.ಡಿ.ಎಂ.ಸಿಯ ಕಾರ್ಯ ಚಟುವಟಿಕೆ, ಶಾಲಾಭಿವೃದ್ಧಿಯಲ್ಲಿ ಎಸ್.ಡಿ.ಎಂ.ಸಿ ಯಿಂದಾಗಿರುವ ಪರಿಣಾಮ	ಶಾಲೆ ಹಾಗೂ ಗ್ರಾಮದ ಹಂತದಲ್ಲಿ ಪಾಲಕರು, ವಿದ್ಯಾರ್ಥಿಗಳು, ಸಮುದಾಯದ ಮುಖ್ಯಸ್ಥರಿಂದ ಪ್ರಾಥಮಿಕ ಹಂತದ ಮಾಹಿತಿ	ಸಂಖ್ಯಾತ್ಮಕ/ ಗುಣಾತ್ಮಕ ಹಾಗೂ ಕೇಸ್ ಸ್ಟಡಿ	ಸಮೀಕ್ಷೆ	ಪ್ರಶ್ನಾವಳಿ ಹಾಗೂ ಚರ್ಚೆ	ಟೂಲ್ಸ್ 14 ಸಮುದಾಯದ ಪ್ರತಿನಿಧಿಗಳು ಟೂಲ್ 18ಪಾಲಕರು ಟೂಲ್ 19 ಮಕ್ಕಳು

೧.೬ ಅಧ್ಯಯನದ ಕ್ಷೇತ್ರ ಆಯ್ಕೆ

ಪ್ರಾದೇಶಿಕ ಅಸಮಾನತೆಯ ಉನ್ನತಾಧಿಕಾರ ಸಮಿತಿಯು ಆರ್ಥಿಕ ಮತ್ತು ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರದ ಮುವತ್ನಾಲ್ಕು ಸೂಚ್ಯಾಂಕಗಳನ್ನು ಬಳಸಿ ರಾಜ್ಯದ ತಾಲ್ಲೂಕುಗಳನ್ನು ಸಾಪೇಕ್ಷವಾಗಿ ಅಭಿವೃದ್ಧಿ ಹೊಂದಿದ, ಹಿಂದುಳಿದ ಮತ್ತು ಅತ್ಯಂತ ಹಿಂದುಳಿದ ತಾಲ್ಲೂಕುಗಳೆಂದು ಗುರುತಿಸಿದೆ. ಮೂಲಸೌಲಭ್ಯದ ಸೂಚ್ಯಾಂಕದ ಪ್ರಕಾರ ಉತ್ತರ ಕರ್ನಾಟಕದ ಐವತ್ತೈದು ತಾಲ್ಲೂಕುಗಳು ಮತ್ತು ದಕ್ಷಿಣ ಕರ್ನಾಟಕದ ತೊಂಬತ್ತು ತಾಲ್ಲೂಕುಗಳು ಸಾಪೇಕ್ಷವಾಗಿ ಮುಂದುವರೆದಿದೆ. ಉತ್ತರ ಕರ್ನಾಟಕದಲ್ಲಿ ಎಂಟು ಮತ್ತು ದಕ್ಷಿಣ ಕರ್ನಾಟಕದಲ್ಲಿನ ಮೂರು ತಾಲ್ಲೂಕುಗಳು ಹಿಂದುಳಿದಿದ್ದರೆ, ಉತ್ತರ ಕರ್ನಾಟಕದ ಒಂಬತ್ತು ಮತ್ತು ದಕ್ಷಿಣ ಕರ್ನಾಟಕದ ಮೂರು ತಾಲ್ಲೂಕುಗಳು ಸ್ವಲ್ಪ ಹಿಂದುಳಿದಿವೆ. ಅತ್ಯಂತ ಹಿಂದುಳಿದ ತಾಲ್ಲೂಕುಗಳು ಉತ್ತರ ಕರ್ನಾಟಕದಲ್ಲಿ ಮಾತ್ರ ಹತ್ತು ಇದ್ದು, ದಕ್ಷಿಣ ಕರ್ನಾಟಕದಲ್ಲಿ ಇರುವುದಿಲ್ಲ.

ಜನಗಣತಿ ೨೦೦೧ ರ ಪ್ರಕಾರ ಬಿಜಾಪುರ ಜಿಲ್ಲೆಯ ಮಹಿಳಾ ಸಾಕ್ಷರತೆಯು ೪೬.೧೯ ರಷ್ಟಿದ್ದು. ಪುರುಷ ಸಾಕ್ಷರತೆಯು ೬೮.೧೦ ರಷ್ಟಿದೆ. ಬಾಗಲಕೋಟೆ ಜಿಲ್ಲೆಯಲ್ಲಿ ಮಹಿಳಾ ಸಾಕ್ಷರತೆಯು ೪೪.೧೦ ರಷ್ಟಿದ್ದು. ಪುರುಷ ಸಾಕ್ಷರತೆಯು ೭೧.೩೧ ರಷ್ಟಿದೆ. ಬಳ್ಳಾರಿ ಜಿಲ್ಲೆಯಲ್ಲಿ ಮಹಿಳಾ ಸಾಕ್ಷರತೆಯು ೪೬.೧೬ರಷ್ಟಿದ್ದು. ಪುರುಷ ಸಾಕ್ಷರತೆಯು ೬೯.೫೯ರಷ್ಟಿದೆ.ರಾಯಚೂರು ಜಿಲ್ಲೆಯಲ್ಲಿ ಮಹಿಳಾ ಸಾಕ್ಷರತೆಯು ೩೬.೮೪ ರಷ್ಟಿದ್ದು. ಪುರುಷ ಸಾಕ್ಷರತೆಯು ೬೨.೦೨ ರಷ್ಟಿದೆ. ಅತ್ಯಂತ ಕಡಿಮೆ ಸಾಕ್ಷರತೆ ಹೊಂದಿರುವ ಜಿಲ್ಲೆಗಳಲ್ಲಿ ಮೊದಲಿಗೆ ರಾಯಚೂರು ಜಿಲ್ಲೆ, ೨ನೆ ಸ್ಥಾನದಲ್ಲಿಗುಲ್ಬರ್ಗ ಜಿಲ್ಲೆ, ೩ನೆ ಸ್ಥಾನದಲ್ಲಿ ಕೊಪ್ಪಳ ಜಿಲ್ಲೆ, ೪ನೆ ಸ್ಥಾನದಲ್ಲಿ ಚಾಮರಾಜನಗರ ೫ನೆ ಸ್ಥಾನದಲ್ಲಿ ಬಳ್ಳಾರಿ ಜಿಲ್ಲೆ ೬ನೆ ಸ್ಥಾನದಲ್ಲಿ ಬಾಗಲಕೋಟೆ ಜಿಲ್ಲೆ, ೭ನೆ ಸ್ಥಾನದಲ್ಲಿ ಬಿಜಾಪುರ ಜಿಲ್ಲೆಗಳನ್ನು ನೋಡಬಹುದಾಗಿದೆ.

ಪ್ರಾದೇಶಿಕ ಅಸಮತೋಲನ ಉನ್ನತ ಸಮಿತಿಯು ವರದಿ ೨೦೦೨ರ ಪ್ರಕಾರ ಬಿಜಾಪುರ, ಬಾಗಲಕೋಟೆ, ಬಳ್ಳಾರಿ, ರಾಯಚೂರು, ಬೀದರ್, ಗುಲ್ಬರ್ಗ ಮತ್ತು ಕೊಪ್ಪಳ ಈ ಏಳು ಜಿಲ್ಲೆಗಳನ್ನು ಹಿಂದುಳಿದ ಜಿಲ್ಲೆಗಳೆಂದು ಗುರುತಿಸಲಾಗಿದೆ. ಇದನ್ನು ಮಾನವ ಅಭಿವೃದ್ಧಿ ವರದಿ ೨೦೦೫ ಮತ್ತು ಜನಗಣತಿ ೨೦೦೧ ವರದಿ ಸ್ಪಷ್ಟಪಡಿಸಿದೆ. ವರಮಾನ ಮತ್ತು ಸಾಕ್ಷರತೆಯನೆಲೆಯಿಂದ ನೋಡಿದರೆ ಸದರಿ ಏಳು ಜಿಲ್ಲೆಗಳ ಸಾಕ್ಷರತೆಸಾಪೇಕ್ಷಿತ ಸ್ಥಾನಮಾನ ಉಳಿದ ಜಿಲ್ಲೆಗಳ ಸ್ಥಾನಮಾನಕ್ಕಿಂತ ಕೆಳಮಟ್ಟದಲ್ಲಿರುವುದು ಸ್ಪಷ್ಟಪಡಿಸಲಾಗಿದೆ. ಶಾಲೆಗೆ ಸೇರಿದ ಮಕ್ಕಳ ಪ್ರಮಾಣದ ಪ್ರಾದೇಶಿಕ ಸ್ವರೂಪವು ರಾಜ್ಯದ ಒಟ್ಟು ೬-೧೪ ವಯೋಮಾನದ ಮಕ್ಕಳಲ್ಲಿ ಏಳು ಹಿಂದುಳಿದ ಜಿಲ್ಲೆಗಳ ಪಾಲು ಶೇಕಡ ೨೮.೯.ರಾಜ್ಯದ ಒಟ್ಟು ೬-೧೪ ವಯೋಮಾನದ ಮಕ್ಕಳಲ್ಲಿ ಏಳು ಹಿಂದುಳಿದ ಜಿಲ್ಲೆಗಳ ಪಾಲು ಶೇಕಡ ೫೫.೬೭ ರಾಜ್ಯದಲ್ಲಿನ ಒಟ್ಟು ಶಾಲೆಗೆ ಸೇರಿದ ಮಕ್ಕಳಲ್ಲಿ ಅರ್ಧಕ್ಕಿಂತ ಅಧಿಕ ಮಕ್ಕಳು ಹಿಂದುಳಿದ ಏಳು ಜಿಲ್ಲೆಗಳಲ್ಲಿ ಮಡುಗಟ್ಟಿಕೊಂಡಿರುವುದು ತಿಳಿದು ಬರುತ್ತದೆ.ಕರ್ನಾಟಕವನ್ನು ಆಡಳಿತಾತ್ಮಕವಾಗಿ ಉತ್ತರ ಕರ್ನಾಟಕ ಮತ್ತು ದಕ್ಷಿಣ ಕರ್ನಾಟಕ ೨ ವಲಯಗಳನ್ನಾಗಿ ಮಾಡಿಕೊಂಡಿದ್ದು, ಈ ಎರಡು ವಲಯಗಳಿಂದ ೪ ವಿಭಾಗಗಳನ್ನಾಗಿ ವಿಂಗಡಿಸಲಾಗಿದೆ. ಅವುಗಳೆಂದರೆ ಬೆಂಗಳೂರು ವಿಭಾಗ, ಮೈಸೂರು ವಿಭಾಗ, ಬೆಳಗಾಂ ವಿಭಾಗ, ಗುಲ್ಬರ್ಗ ವಿಭಾಗ, ಬೆಂಗಳೂರು ಮತ್ತು ಮೈಸೂರು ವಿಭಾಗವು ದಕ್ಷಿಣ ಕರ್ನಾಟಕದ ಭಾಗವಾಗಿದ್ದು, ಬೆಳಗಾಂ ಮತ್ತು ಗುಲ್ಬರ್ಗ ವಿಭಾಗವು ಉತ್ತರ ಕರ್ನಾಟಕದ ಭಾಗವಾಗಿದೆ.ಕರ್ನಾಟಕ ರಾಜ್ಯವು ೩೦ ಕಂದಾಯ ಜಿಲ್ಲೆಗಳು ಮತ್ತು ೩೩ ಶೈಕ್ಷಣಿಕ ಜಿಲ್ಲೆಗಳನ್ನು ಹೊಂದಿದ್ದು. ಈ ಜಿಲ್ಲೆಗಳಲ್ಲಿ ಒಟ್ಟು೧೭೬ ಕಂದಾಯ ಮತ್ತು ೨೦೨ ಶೈಕ್ಷಣಿಕ ತಾಲ್ಲೂಕುಗಳನ್ನು ಹೊಂದಿದ್ದು, ಇದರಲ್ಲಿ ೨೭೫೭೫ ಜನವಸತಿ ಪ್ರದೇಶವಿದೆ. ಇದರಿಂದ ಆಡಳಿತವು ಉತ್ತಮವಾಗಿ

ನಡೆಯಲು ಸಹಾಯಕಾರಿಯಾಗಿವೆ. ಇವುಗಳಡಿಯಲ್ಲಿ ಇವುಗಳು ಕೆಲಸ ನಿರ್ವಹಿಸುತ್ತಿವೆ. ಕರ್ನಾಟಕದ ೩೦ ಜಿಲ್ಲೆಗಳು ಈ ಮೇಲ್ಕಂಡ ವಿಭಾಗಗಳಿಡಿಯಲ್ಲಿ ಬರಲಿವೆ. ಬೆಂಗಳೂರು ವಿಭಾಗಕ್ಕೆ ೯ ಜಿಲ್ಲೆಗಳು ಬರಲಿದ್ದು ಅವುಗಳೆಂದರೆ (ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ದಾವಣೆಗೆರೆ, ಕೋಲಾರ, ಶಿವಮೊಗ್ಗ, ತುಮಕೂರು, ಚಿಕ್ಕಬಳ್ಳಾಪುರ ಮತ್ತು ರಾಮನಗರ ಜಿಲ್ಲೆಗಳಾಗಿವೆ.) ಮೈಸೂರು ವಿಭಾಗಕ್ಕೆ ೮ ಜಿಲ್ಲೆಗಳು ಬರಲಿದ್ದು ಅವುಗಳೆಂದರೆ(ಚಾಮರಾಜನಗರ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಹಾಸನ, ಕೊಡಗು, ಮಂಡ್ಯ, ಮೈಸೂರು ಮತ್ತು ಉಡುಪಿ) ಬೆಳಗಾಂ ವಿಭಾಗಕ್ಕೆ ೭ ಜಿಲ್ಲೆಗಳು ಬರಲಿದ್ದು (ಬಾಗಲಕೋಟೆ, ಬೆಳಗಾಂ, ಬಿಜಾಪುರ, ಧಾರವಾಡ, ಗದಗ, ಹಾವೇರಿ ಮತ್ತು ಉತ್ತರಕನ್ನಡ.) ಗುಲ್ಬರ್ಗ ವಿಭಾಗಕ್ಕೆ ೬ ಜಿಲ್ಲೆಗಳು ಬರಲಿದ್ದು (ಬಳ್ಳಾರಿ, ಬೀದರ್, ಗುಲ್ಬರ್ಗ, ಕೊಪ್ಪಳ, ರಾಯಚೂರು ಮತ್ತು ಯಾದಗೀರ್ ಇದು ಹೊಸ ಜಿಲ್ಲೆಯಾಗಿದೆ.) ಉತ್ತರ ಕರ್ನಾಟಕ ವಲಯದ (ಬೆಳಗಾಂ ವಿಭಾಗ ಮತ್ತು ಗುಲ್ಬರ್ಗ ವಿಭಾಗವು) ದಕ್ಷಿಣ ಕರ್ನಾಟಕ ವಲಯಕ್ಕಿಂತ (ಬೆಂಗಳೂರು ವಿಭಾಗ ಮತ್ತು ಮೈಸೂರು ವಿಭಾಗ) ಕ್ಕಿಂತ ಬಹಳ ಹಿಂದುಳಿದಿದ್ದು, ಅದರಲ್ಲೂ ಇಡೀ ಕರ್ನಾಟಕದಲ್ಲಿಉತ್ತರ ಕರ್ನಾಟಕ ವಲಯದ ಗುಲ್ಬರ್ಗ ವಿಭಾಗವು ಅತ್ಯಂತ ಹಿಂದುಳಿದ ಪ್ರದೇಶವಾಗಿದೆ.

೨೦೦೬ – ೨೦೦೭ನೆ ವಾರ್ಷಿಕ ವರದಿಯ ಪ್ರಕಾರ ಕರ್ನಾಟಕದಲ್ಲಿ ೫೫೦೦೦ ಸರ್ಕಾರಿ ಪ್ರಾಥಮಿಕ ಶಾಲೆಗಳಿದ್ದು, ಅಧ್ಯಯನಕ್ಕೆ ಒಟ್ಟು ೩೫೦ ಶಾಲೆಗಳನ್ನು ಆಯ್ಕೆ ಮಾಡಿಕೊಂಡಿದ್ದು, ಇವುಗಳನ್ನು ಬಾಂಬೆ ಕನಾಟಕ ಪ್ರದೇಶ ಹಾಗೂ ಹೈದರಬಾದ್ ಕರ್ನಾಟಕದ ೪ ಜಿಲ್ಲೆಗಳಲ್ಲಿ ಒಟ್ಟು ೩೫೦ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಈ ೩೫೦ ಶಾಲೆಗಳು ೭ ತಾಲ್ಲೂಕುಗಳಲ್ಲಿ ಹರಡಿಕೊಂಡಿವೆ. ಇವುಗಳನ್ನು ರ್‍ಯಾಂಡಮ್ ಆಗಿ ಒಟ್ಟು ೨೨೪ ಗ್ರಾಮ ಪಂಚಾಯಿತಿಗಳಲ್ಲಿ ಆಯ್ಕೆ ಮಾಡಿಕೊಳ್ಳಲಾಗಿದೆ. ಎಲ್ಲಾ ಒಟ್ಟು ಸ್ಯಾಂಪಲ್‌ಗಳಲ್ಲಿ ೨೨೪ ಗ್ರಾಮ ಪಂಚಾಯಿತಿಗಳಿಂದ ಆಯ್ಕೆ ಮಾಡಲಾಗಿದ್ದು, ಎಲ್ಲವೂಗಳು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಾಗಿವೆ.

ಉದ್ದೇಶಿತ ಸ್ಯಾಂಪಲಿಂಗ್ ವಿಧಾನದ ಮೂಲಕ ಸ್ಯಾಂಪಲಿಂಗ್ ಆಯ್ಕೆ ಮಾಡಲು ಬಳಸಿಕೊಳ್ಳಲಾಗಿದೆ. ಇದನ್ನು ಆಯಾ ಜಿಲ್ಲೆಗಳಲ್ಲಿ ಹಿಂದುಳಿದಿರುವ ಪ್ರದೇಶಗಳ ಆಧಾರದ ಮೇಲೆ ಹಾಗೂ ಮಕ್ಕಳ ಗಣತಿ ೨೦೦೬ ರ ಫಲಿತತೆ ಆಧಾರದ ಮೇಲೆತೆಗೆದುಕೊಳ್ಳಲಾಗಿದೆ. ಶಾಲೆಬಿಟ್ಟಿರುವ ಅತಿ ಹೆಚ್ಚು ಮಕ್ಕಳಿರುವ ತಾಲ್ಲೂಕು ಹಾಗೂ ಅತಿ ಕಡಿಮೆ ಶೇಕಡವಾರು ಪ್ರಮಾಣದ ಶಾಲೆಗಳು ಹಾಗೂ ೨೨೪ ಗ್ರಾಮ ಪಂಚಾಯಿತಿಗಳಿಂದ ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳನ್ನು ಆಯ್ಕೆ ಮಾಡಿಕೊಳ್ಳಲಾಗಿದೆ.

ಈ ಮೇಲಿನ ಕಾರಣಗಳಿಂದ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕು, ಬಳ್ಳಾರಿ ಜಿಲ್ಲೆಯಬಳ್ಳಾರಿ ಹಾಗೂ ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳು.ಬಿಜಾಪುರ ಜಿಲ್ಲೆಯ ಬಿಜಾಪುರ ·ಗ್ರಾಮಾಂತರ ಮತ್ತುಬಸವನ ಬಾಗೇವಾಡಿ ತಾಲ್ಲೂಕು, ಬಾಗಲಕೋಟೆ ಜಿಲ್ಲೆಯ ಬದಾಮಿ ಮತ್ತು ಜಮಖಂಡಿ ತಾಲ್ಲೂಕುಗಳು ಹೀಗೆ ೪ ಜಿಲ್ಲೆಯ ೭ ತಾಲ್ಲೂಕುಗಳಿಂದ ಪ್ರತಿ ತಾಲ್ಲೂಕಿನಿಂದ ೫೦ ಶಾಲೆಗಳಂತೆ ಒಟ್ಟು ೩೫೦ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳನ್ನು ಅಧ್ಯಯಕ್ಕೆ ಒಳಪಡಿಸಲಾಗಿದೆ. ನಾವು ಅಧ್ಯಯನಕ್ಕೆ ಒಳಪಡಿಸಿದ ಜಿಲ್ಲೆಗಳ ತಾಲ್ಲೂಕುವಾರು ಶಾಲೆಗಳ ವಿವರವನ್ನು ಕೋಷ್ಟಕದಲ್ಲಿ ನೀಡಲಾಗಿದ್ದು.

ಕೋಷ್ಟಕ-೬

ತಾಲ್ಲೂಕುವಾರು/ ಆಡಳಿತವಾರು ಶಾಲೆಗಳ ಸಂಖ್ಯೆ

ಸರ್ಕಾರಿ						
ಕ್ರಸಂ	ಜಿಲ್ಲೆ	ತಾಲ್ಲೂಕು	ಶಿಕ್ಷಣ ಇಲಾಖೆ	ಸಮಾಜ ಕಲ್ಯಾಣ ಇಲಾಖೆ	ಸ್ಥಳೀಯಸಂಸ್ಥೆ	ಒಟ್ಟು
೧	ಬಾಗಲಕೋಟೆ	ಬಾದಾಮಿ	೧೫೯	೨	೨	೧೬೩
೨		ಜಮಖಂಡಿ	೧೨೫	೨	೨	೧೨೯
೩	ಬಿಜಾಪುರ	ಬಸವನ ಬಾಗೇವಾಡಿ	೧೫೯	೧	೨	೧೬೨
೪		ಬಿಜಾಪುರ ಗ್ರಾ	೧೮೪			೧೮೪
೫	ರಾಯಚೂರು	ದೇವದುರ್ಗ	೬೩	೧		೬೪
೬	ಬಳ್ಳಾರಿ	ಬಳ್ಳಾರಿ ಪೂರ್ವ	೯೦		೨	೯೨
೭		ಬಳ್ಳಾರಿ ಪಶ್ಚಿಮ	೬೩	೨	೧	೬೬
೮		ಹಗರಿಬೊಮ್ಮನಹಳ್ಳಿ				

ಸಮಗ್ರ ಅಂಕಿ-ಅಂಶ ಸಾರ್ವಜನಿಕ ಶಿಕ್ಷಣ ಇಲಾಖೆ, ಸರ್ವ ಶಿಕ್ಷಾ ಅಭಿಯಾನ (೩೦.೦೯.೨೦೦೫ ರಲ್ಲಿದ್ದಂತೆ)

೧.೭ ಅಧ್ಯಯನದ ಮಿತಿ

ಪ್ರಸ್ತುತ ಅಧ್ಯಯನಕ್ಕೆ ಕೆಲವು ಮಿತಿಗಳಿವೆ. ಪ್ರಾಥಮಿಕ ಶಿಕ್ಷಣಕ್ಕೆ ಮಾತ್ರ ಸೀಮಿತಗೊಂಡಿರುವುದು ಪ್ರಸ್ತುತ ಅಧ್ಯಯನದ ಮಿತಿಯಾಗಿದೆ. ಅಧ್ಯಯನದ ಅಂಕಿ-ಅಂಶಗಳು ಮತ್ತು ಮಾಹಿತಿ ಸಂಗ್ರಹಣೆಯ ಮೂಲಕ ಫಲಿತಗಳನ್ನು ಕಂಡುಕೊಳ್ಳಬೇಕಾಗಿದೆ. ಅಂಕಿ ಅಂಶಗಳನ್ನು ೨೦೦೬ ರಿಂದ೨೦೦೭ ರವರೆಗೆ ನಡೆದ ಎಸ್.ಡಿ.ಎಂ.ಸಿ ನಡಾವಳಿ ಪುಸ್ತಕದಿಂದಲೂ ಸಂಗ್ರಹಿಸಲಾಯಿತು. ಅಲ್ಲದೆ ಶಾಲೆಗಳಲ್ಲಿ ಲಭ್ಯವಿರುವ ಮಾಹಿತಿಗಳನ್ನು ಅವಲಂಬಿಸಬೇಕಾಗಿ ಬಂದಿದ್ದರಿಂದ ಮಾಹಿತಿಯ ಕೊರತೆಯು ಎದುರಾಯಿತು. ೪ ಜಿಲ್ಲೆಯ ೭ ತಾಲ್ಲೂಕುಗಳ ವ್ಯಾಪ್ತಿಯಲ್ಲಿನ ಪ್ರಾಥಮಿಕ ಶಾಲೆಗಳನ್ನು ಅಧ್ಯಯನಕ್ಕೆ ಒಳಪಡಿಸಿರುವುದು ಮತ್ತೊಂದು ಮಿತಿಯಾಗಿದೆ.

೧.೮ ಅಧ್ಯಯನ ಮಹತ್ವ

ಪ್ರಸ್ತುತ ಅಧ್ಯಯನವು ಎಂಪಿರಿಕಲ್ ಮತ್ತು ಕನ್‌ಕರೆಂಟ್ ಮಾದರಿಯ ಮೌಲ್ಯಮಾಪನ ಅಧ್ಯಯನವಾಗಿದೆ. ಈ ಅಧ್ಯಯನದಿಂದ ಕಂಡುಕೊಂಡ ಫಲಿತಗಳ ಆಧಾರದ ಮೇಲೆ ಎಸ್.ಡಿ.ಎಂ.ಸಿ ಕಾರ್ಯಕ್ರಮವನ್ನು ಹೆಚ್ಚು ಸುಧಾರಿಸಬಹುದಾಗಿದೆ. ಅಲ್ಲದೇ ಈ ಕಾರ್ಯಕ್ರಮದಿಂದ ಉಂಟಾಗುತ್ತಿರುವ ಉತ್ತಮ ಪರಿಣಾಮಗಳನ್ನು ಈ ಅಧ್ಯಯನವು ಎತ್ತಿ ತೋರಿಸುತ್ತದೆ.

ಪ್ರಸ್ತುತ ಅಧ್ಯಯನ ಸರ್ಕಾರಕ್ಕೆ ವಿಶೇಷವಾಗಿ ಶಿಕ್ಷಣ ಇಲಾಖೆಗೆ ತುಂಬಾ ಉಪಯುಕ್ತವಾಗಿದೆ. ಶಿಕ್ಷಣ ಇಲಾಖೆಯು ಸದರಿ ಅಧ್ಯಯನದ ಆಧಾರದ ಮೇಲೆ ಅನೇಕ ಸುಧಾರಣಾ ಕ್ರಮಗಳನ್ನು ಅಳವಡಿಸಿಕೊಳ್ಳಬಹುದು. ಜೊತೆಗೆ ಗ್ರಾಮ ಪಂಚಾಯಿತಿ, ಗ್ರಾಮ ಹಾಗೂ ಶಾಲಾ ಮಟ್ಟದಲ್ಲಿ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಕ್ಕೆ ಇರುವ ಸ್ಥಳೀಯ ಮಟ್ಟದ ತೊಡಕುಗಳನ್ನು ಗುರುತಿಸುವುದರಿಂದ ಅಂತಹ ತೊಡಕುಗಳಿಗೆ ಪರಿಹಾರವನ್ನು ಸ್ಥಳೀಯವಾಗಿಯೇ ಕಂಡುಕೊಳ್ಳಬಹುದಾಗಿದೆ.

ಎಸ್.ಡಿ.ಎಂ.ಸಿ ಕಾರ್ಯಕ್ರಮದ ಸಾಧಕ-ಬಾಧಕಗಳನ್ನು ಸ್ಥಳೀಯ ಜನರೊಂದಿಗೆ ಚರ್ಚಿಸುವ ಮೂಲಕ ಪರಿಹಾರಗಳನ್ನು ಕಂಡುಕೊಳ್ಳಲು ಪ್ರಯತ್ನಸಲಾಗುವುದರಿಂದ ಪ್ರಸ್ತುತ ಅಧ್ಯಯನವು ಶಾಲಾ ಶಿಕ್ಷಣದ ಅಭಿವೃದ್ಧಿಗೆ ತನ್ನದೇ ಆದ ಕಾಣಿಕೆಯನ್ನು ನೀಡುವುದರಲ್ಲಿ ಸಂದೇಹವಿಲ್ಲ.

೧.೯ ಅಧ್ಯಯನದ ವಿನ್ಯಾಸ

ಪ್ರಸ್ತುತ ಮಹಾಪ್ರಬಂಧದಲ್ಲಿ ಒಟ್ಟು ಆರು ಅಧ್ಯಾಯಗಳಿವೆ. ಪ್ರಥಮ ಅಧ್ಯಾಯದಲ್ಲಿ ಅಧ್ಯಯನದ ವಿಷಯದ ಪ್ರಸ್ತಾವನೆ, ಅಧ್ಯಯನದ ಸಮಸ್ಯೆ, ಇದುವರೆವಿಗೂ ಮಾಡಲಾಗಿರುವ ಅಧ್ಯಯನಗಳ ಸಮೀಕ್ಷೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮಹತ್ವ, ಅಧ್ಯಯನದ ಮಿತಿ ಮತ್ತು ಕ್ಷೇತ್ರ ಕಾರ್ಯದ ಅನುಭವಗಳನ್ನು ವಿವರಿಸಲಾಗಿದೆ.

ಎರಡನೇ ಅಧ್ಯಾಯದಲ್ಲಿ ಅಧ್ಯಯನದಲ್ಲಿ ಶಾಲಾ ಶಿಕ್ಷಣದ ಸಾರ್ವತ್ರಿಕರಣ ಮತ್ತು ಸಮುದಾಯದ ಸಹಭಾಗಿತ್ವ ನಡೆದು ಬಂದ ದಾರಿ, ಶಾಲಾ ಶಿಕ್ಷಣದ ಸಾರ್ವತ್ರಿಕರಣಕ್ಕೆ ಅಂತರಾಷ್ಟ್ರೀಯ ಪ್ರಯತ್ನಗಳು, ಶಾಲಾ ಶಿಕ್ಷಣಸಾರ್ವತ್ರಿಕರಣಕ್ಕೆ ಭಾರತದ ಪ್ರಯತ್ನಗಳು, ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ ಕರ್ನಾಟಕದ ಅನುಭವಗಳು, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಜಾರಿಗೆ ಬಂದ ನಂತರದ ಪ್ರಯತ್ನಗಳು/ಬೆಳವಣಿಗೆಗಳು, ವಿಕೇಂದ್ರೀಕರಣ ಪ್ರಕ್ರಿಯೆಗೆ ಒತ್ತು, ಎಸ್.ಡಿ.ಎಂ.ಸಿ.ಗಳನ್ನು ಪಂಚಾಯಿತಿಗಳ ಜೊತೆಬೆಸೆಯುವ ಪ್ರಯತ್ನ, ಶಾಲಾ ಶಿಕ್ಷಣದಲ್ಲಿ ವಿಕೇಂದ್ರೀಕರಣ ವ್ಯವಸ್ಥೆಅಥವಾ ಶಾಲಾ ಶಿಕ್ಷಣದ ಅಭಿವೃದ್ಧಿಯಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರಗಳನ್ನು ತಿಳಿಸಲಾಗಿದೆ.

ಮೂರನೇ ಅಧ್ಯಾಯದಲ್ಲಿ ಅಧ್ಯಯನ ಕ್ಷೇತ್ರದ ಪರಿಚಯವನ್ನು, ಜಿಲ್ಲೆಗಳ ಚಾರಿತ್ರಿಕ ಹಿನ್ನಲೆ, ಭೌಗೋಳಿಕ ಅಂಶಗಳು ಮತ್ತು ಹವಾಮಾನ, ಜನಸಂಖ್ಯೆ ಮತ್ತು ಜನಸಾಂದ್ರತೆ, ಆಡಳಿತ ವ್ಯವಸ್ಥೆ, ಆರ್ಥಿಕ ಸ್ಥಿತಿ, ಸಾಮಾಜಿಕ ಸ್ಥಿತಿ, ರಾಜಕೀಯ ಸ್ಥಿತಿ ಹಾಗೂ ಶೈಕ್ಷಣಿಕ ಸ್ಥಿತಿಗಳನ್ನು ತಿಳಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಈ ಅಧ್ಯಾಯವು ಸಮೀಕ್ಷೆಯಿಂದ ಸಂಗ್ರಹಿಸಲಾದ ಮಾಹಿತಿಗಳ ವಿಶ್ಲೇಷಣೆ, ಗುಂಪು ಚರ್ಚೆ ಹಾಗೂ ಪ್ರಕರಣ ಅಧ್ಯಯನ(ಕೇಸ್ ಸ್ಟಡಿ)ಗಳಿಗೆ ಆದ್ಯತೆ ನೀಡುತ್ತದೆ. ಈ ಅಧ್ಯಾಯದಲ್ಲಿ ಶಾಲೆಗಳಲ್ಲಿನ ಮಾಹಿತಿ, ಕ್ಷೇತ್ರಗಳಲ್ಲಿ ಅಧಿಕಾರಿಗಳ ಜತೆ ಚರ್ಚೆ ಹಾಗೂ ಪ್ರಕರಣಗಳ ಅಧ್ಯಯನ/ ಕ್ಷೇತ್ರ ಅಧ್ಯಯನದಿಂದ ಗಮನಿಸಲಾದ ಅಂಶಗಳನ್ನು ವಿವರವಾಗಿ ವಿಶ್ಲೇಷಿಸಲಾಗಿದೆ.ಈ ಎಲ್ಲಾ ಅಂಶಗಳನ್ನು ನೋಡಲು ಅಧ್ಯಯನದ ಅನುಕೂಲಕ್ಕಾಗಿ ಅಧ್ಯಾಯವನ್ನು ಐದು ಭಾಗವಾಗಿ ವಿಂಗಡಿಸಲಾಗಿದೆ. ಭಾಗ-1ರಲ್ಲಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳತಂದೆ ತಾಯಿಗಳಿಗೆ ಶಾಲೆಯಲ್ಲಿ ನಡೆದಿರುವ ಕಾರ್ಯಕ್ರಮಗಳ ಬಗ್ಗೆ ಅರಿವು, ಮನೆಯಲ್ಲಿ ಕಲಿಕಾ ವಾತಾವರಣ, ಆದರ್ಶ ಶಾಲೆ, ಶಿಕ್ಷಕ ಮತ್ತು ವಿದ್ಯಾರ್ಥಿಗಳ ಬಗ್ಗೆ ಪರಿಕಲ್ಪನೆ, ಶಾಲೆ ಮತ್ತು ಪೋಷಕರ ನಡುವೆ ಸಂಬಂಧದ ಬಗ್ಗೆ ಪಾಲಕರ ದೃಷ್ಟಿಕೋನವನ್ನು ವಿಶ್ಲೇಷಣೆ ಮಾಡಲಾಗಿದೆ, ಭಾಗ-2ರಲ್ಲಿ, ಎಸ್.ಡಿ.ಎಂ.ಸಿಯ ರಚನೆ, ಎಸ್.ಡಿ.ಎಂ.ಸಿ ಬಗೆಗಿನ ಅರಿವು, ಸದಸ್ಯರ ಪಾಲ್ಗೊಳ್ಳುವಿಕೆ ಹಾಗೂ ಇದೆಲ್ಲದರಿಂದ ಉಂಟಾಗುವ ಸಶಕ್ತತೆಯ ಮಾಹಿತಿ ಜೊತೆಗೆ ಎಲ್ಲ ಪಾಲುದಾರರ ಮಾಹಿತಿ ಮತ್ತು ಅಭಿಪ್ರಾಯಗಳ ಕುರಿತು ಸಮಗ್ರ ಮಾಹಿತಿಯನ್ನು ಅಧ್ಯಯನ ಒಳಗೊಂಡಿದೆ.ಭಾಗ-3ರಲ್ಲಿ ನಾಮನಿರ್ದೇಶಿತ ಸದಸ್ಯರು ಯುವಕ/ಯುವತಿ ಸಂಘದ ಪ್ರತಿ ನಿಧಿಗಳು ಹಾಗೂ ಸ್ವಸಹಾಯ ಸಂಘದ ಪ್ರತಿನಿಧಿಗಳು ಎಸ್.ಡಿ.ಎಂ.ಸಿ ಆಯ್ಕೆಯ ಪ್ರಕ್ರಿಯೆ, ಎಸ್.ಡಿ.ಎಂ.ಸಿ ಸಮಿತಿಯಲ್ಲಿ ಅವರ ಜವಬ್ದಾರಿಗಳು ಮತ್ತು ಶಾಲಾಭಿವೃದ್ಧಿಗೆ ಅವರ ಸಲಹೆ ಹಾಗೂ

ಅವರು ಮಾಡಿರುವ ಕೆಲಸಗಳ ಬಗ್ಗೆ ಅವರು ಹೊಂದಿರುವ ಮನೋಭಾವ ಏನು ಎಂಬ ದೃಷ್ಟಿಕೋನವನ್ನು ಇಲ್ಲಿ ಚರ್ಚಿಸಲಾಗಿದೆ. ಭಾಗ – 4 ರಲ್ಲಿಪದ ನಿಮಿತ್ತ ಸದಸ್ಯರಾದ ಸಮುದಾಯವನ್ನು ಶಾಲಾಭಿವೃದ್ಧಿಗೆ ತೊಡಗಿಸಿಕೊಳ್ಳುವಲ್ಲಿ ಮುಖ್ಯ ಶಿಕ್ಷಕರ ಪ್ರಯತ್ನಗಳು, ಪಾಲಕರು ಹಾಗೂ ಎಸ್.ಡಿ.ಎಂ.ಸಿ ಮತ್ತು ಸಮುದಾಯದೊಡನೆ ಯಾವ ಸಂಬಂಧವನ್ನು ಹೊಂದಿದ್ದಾರೆ ಎಂಬುದರ ಬಗ್ಗೆ ಈ ಭಾಗದಲ್ಲಿ ವಿಶ್ಲೇಷಲಾಗಿದೆ. ಭಾಗ–5ರಲ್ಲಿ ಗ್ರಾಮ ಪಂಚಾಯತಿಯ ನಾಗರೀಕ ಸೌಲಭ್ಯ ಸಮಿತಿಯ ಸದಸ್ಯರಾಗಿ ಪಾತ್ರ ಹಾಗೂ ಕರ್ತವ್ಯ, ಪಂಚಾಯತಿಯ ಭಾಗದಲ್ಲಿ ಶಿಕ್ಷಣದ ಬಗ್ಗೆ ಅವರು ಹೊಂದಿರುವ ಮಾಹಿತಿ, ಇದರ ಬಗ್ಗೆ ಅವರ ಸ್ಪಂದನೆ, ಇತರೆ ಅಧಿಕಾರಿಗಳ ಸ್ಪಂದನೆ, ಮುಂತಾದ ವಿಚಾರಗಳ ಬಗ್ಗೆ ಇವರ ದೃಷ್ಠಿಕೋನ ಏನು ಎಂಬುದನ್ನು ಕುರಿತು ಚರ್ಚಿಸಲಾಗಿದೆ.

ಅಧ್ಯಾಯ 5 ರಲ್ಲಿ ತಿಳಿಸಿರುವ ವಿಧಾನಗಳಿಂದ ವ್ಯಾಪಕವಾಗಿ ಮತ್ತು ವಸ್ತು ನಿಷ್ಠವಾಗಿ ಸಂಗ್ರಹಿಸಲಾದ ಅಭಿಪ್ರಾಯಗಳನ್ನು ಮತ್ತು ದತ್ತಾಂಶಗಳನ್ನು ವಿಶ್ಲೇಷಣೆಯ ಮೂಲಕ ಕೂಲಂಕುಶವಾಗಿ ಪರಿಶೀಲಿಸಿ ಕೆಲವು ತೀರ್ಮಾನ ಮತ್ತು ಫಲಿತಗಳನ್ನು ತಿಳಿಸಲಾಗಿದೆ.

ಅಧ್ಯಾಯ 6ರಲ್ಲಿ ಹಿಂದಿನ ಅಧ್ಯಾಯದಲ್ಲಿ ಪ್ರಸ್ತಾಪಿಸಿದ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದಲ್ಲಿ ಎಸ್.ಡಿ.ಎಂ.ಸಿಗಳನ್ನು ಮತ್ತಷ್ಟು ಸಬಲೀಕರಣಗೊಳಿಸುವುದರ ಮೂಲಕ ರಾಜ್ಯದ ಪ್ರತಿಯೊಂದು ಮಗುವಿಗೂ ಅದರಲ್ಲೂ ವಿಶೇಷವಾಗಿ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ಎಲ್ಲಾ ವರ್ಗದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ಕೆಲವು ಶಿಪಾರಸ್ಸುಗಳನ್ನು ಮಾಡುವುದರ ಮೂಲಕ ಅಧ್ಯಯನದ ಸಮಾರೂಪ ಮಾಡಲಾಗಿದೆ.

ಉಪ ಸಂಹಾರ

ಈ ಅಧ್ಯಾಯದಲ್ಲಿ ಅಧ್ಯಯನದ ವಿಷಯದ ಪ್ರಸ್ತಾವನೆ, ಅಧ್ಯಯನದ ಸಮಸ್ಯೆ, ಇದುವರೆವಿಗೂ ಮಾಡಲಾಗಿರುವ ಅಧ್ಯಯನಗಳ ಸಮೀಕ್ಷೆ, ಅಧ್ಯಯನದ ಉದ್ದೇಶ, ವ್ಯಾಪ್ತಿ, ವಿಧಾನ ಮಹತ್ವ, ಅಧ್ಯಯನದ ಮಿತಿ ಮತ್ತು ಕ್ಷೇತ್ರ ಕಾರ್ಯದ ಅನುಭವಗಳನ್ನು ವಿವರಿಸಲಾಗಿದೆ.

ಮುಂದುವರಿದು ಎರಡನೇ ಅಧ್ಯಾಯದಲ್ಲಿ ಅಧ್ಯಯನದಲ್ಲಿ ಶಾಲಾ ಶಿಕ್ಷಣದ ಸಾರ್ವತ್ರೀಕರಣ ಮತ್ತು ಸಮುದಾಯದ ಸಹಭಾಗಿತ್ವ ನಡೆದು ಬಂದ ದಾರಿ, ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕೆ ಅಂತರಾಷ್ಟ್ರೀಯ ಪ್ರಯತ್ನಗಳು, ಶಾಲಾ ಶಿಕ್ಷಣಸಾರ್ವತ್ರೀಕರಣಕ್ಕೆ ಭಾರತದ ಪ್ರಯತ್ನಗಳು, ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ ಕರ್ನಾಟಕದ ಅನುಭವಗಳು, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಜಾರಿಗೆ ಬಂದ ನಂತರದ ಪ್ರಯತ್ನಗಳು/ಬೆಳವಣಿಗೆಗಳು, ವಿಕೇಂದ್ರೀಕರಣ ಪ್ರಕ್ರಿಯೆಗೆ ಒತ್ತು, ಎಸ್.ಡಿ.ಎಂ.ಸಿ.ಗಳನ್ನು ಪಂಚಾಯಿತಿಗಳ ಜೊತೆಬೆಸೆಯುವ ಪ್ರಯತ್ನ, ಶಾಲಾ ಶಿಕ್ಷಣದಲ್ಲಿ ವಿಕೇಂದ್ರೀಕರಣ ವ್ಯವಸ್ಥೆಅಥವಾ ಶಾಲಾ ಶಿಕ್ಷಣದ ಅಭಿವೃದ್ಧಿಯಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರಗಳನ್ನು ವಸ್ತುನಿಷ್ಠವಾಗಿ ವಿಶ್ಲೇಷಿಸಲಾಗಿದೆ.

***

ಅಧ್ಯಾಯ ಎರಡು

ಶಾಲಾ ಶಿಕ್ಷಣದ ಸಾರ್ವತ್ರೀಕರಣ ಮತ್ತು ಸಮುದಾಯದ ಸಹಭಾಗಿತ್ವ ನಡೆದು ಬಂದ ದಾರಿ

೨.೧ ಶಾಲಾ ಶಿಕ್ಷಣದ ಸಾರ್ವತ್ರಿಕರಣಕ್ಕೆ ಅಂತರಾಷ್ಟ್ರೀಯ ಪ್ರಯತ್ನಗಳು

೨.೨ ಶಾಲಾ ಶಿಕ್ಷಣ ಸಮುದಾಯದ ಸಾರ್ವತ್ರಿಕ ಬೇಡಿಕೆಯಾಗಿ ಭಾರತದಲ್ಲಿನ ಪ್ರಯತ್ನಗಳು

೨.೩ ಸ್ವಾತಂತ್ರ್ಯ ನಂತರದ ಶಾಲಾ ಶಿಕ್ಷಣ ಸಾರ್ವತ್ರೀಕರಣ

೨.೪ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ ಕರ್ನಾಟಕದ ಅನುಭವಗಳು

೨.೫ ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ

೨.೬ ವಿಕೇಂದ್ರೀಕರಣ ಪ್ರಕ್ರಿಯೆಗೆ ಒತ್ತು – ಎಸ್.ಡಿ.ಎಂ.ಸಿ.ಗಳನ್ನು ಪಂಚಾಯಿತಿಗಳ ಜೊತೆ ಬೆಸೆಯುವ ಪ್ರಯತ್ನ

೨.೭ ಪಂಚಾಯತಿಯೊಂದಿಗೆ ಶಾಲೆಯ ಸಂಬಂಧ

೨.೮ ಶಾಲೆ, ಎಸ್.ಡಿ.ಎಂ.ಸಿ ಮತ್ತು ನಾಗರೀಕ ಸೌಕರ್ಯ ಸಮಿತಿ ಒಟ್ಟಾಗಿ ಕೆಲಸ ನಿರ್ವಹಿಸಲು ತಂದ ಕಾರ್ಯಕ್ರಮಗಳು

ಈ ಅಧ್ಯಾಯದಲ್ಲಿ ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕೆ ನಡೆದಿರುವ ಪ್ರಯತ್ನಗಳನ್ನು ವಿಶ್ಲೇಷಿಸಲು ಪ್ರಯತ್ನಿಸಲಾಗಿದೆ. ಮೊದಲಿಗೆ ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕೆ ಅಂತರಾಷ್ಟ್ರೀಯ ಪ್ರಯತ್ನಗಳು, ಶಾಲಾ ಶಿಕ್ಷಣ ಸಾರ್ವತ್ರೀಕರಣಕ್ಕೆ- ಭಾರತದ ಪ್ರಯತ್ನಗಳು ಚರ್ಚಿಸಲಾಗಿದೆ. ನಂತರ ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ ಕರ್ನಾಟಕದ ಅನುಭವಗಳ ಜೊತೆಗೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಜಾರಿಗೆ ಬಂದ ನಂತರದ ಪ್ರಯತ್ನಗಳು/ಬೆಳವಣಿಗೆಗಳು, ವಿಕೇಂದ್ರೀಕರಣ ಪ್ರಕ್ರಿಯೆಗೆ ಒತ್ತುನೀಡಿ ಎಸ್.ಡಿ.ಎಂ.ಸಿ.ಗಳನ್ನು ಪಂಚಾಯಿತ್ ರಾಜ್ ಸಂಸ್ಥೆಗಳ ಜೊತೆಗೆ ಬೆಸೆಯುವ ಪ್ರಯತ್ನವನ್ನು ವಿವರವಾಗಿ ದಾಖಲಿಸಲು ಪ್ರಯತ್ನಮಾಡಲಾಗಿದೆ. ಶಾಲಾ ಶಿಕ್ಷಣದಲ್ಲಿ ವಿಕೇಂದ್ರೀಕರಣ ವ್ಯವಸ್ಥೆ ಅಥವಾ ಶಾಲಾ ಶಿಕ್ಷಣದ ಅಭಿವೃದ್ಧಿಯಲ್ಲಿ ಗ್ರಾಮ ಪಂಚಾಯಿತಿಗಳ ಪಾತ್ರಗಳನ್ನು ಮತ್ತು ಅವುಗಳ ಸಾಧಕ ಬಾಧಕಗಳನ್ನು ವಸ್ತುನಿಷ್ಠವಾಗಿ ಹಿಡಿದಿಡಲು ಪ್ರಯತ್ನ ಮಾಡಲಾಗಿದೆ.

ಬಹಳ ಹಿಂದಿನಿಂದಲೂ ಶಿಕ್ಷಣ ಮತ್ತು ಸಮಾಜ ಪ್ರತ್ಯೇಕವಾಗಿರಲಿಲ್ಲ. ಶಿಕ್ಷಣವು ಸಮಾಜಕ್ಕೆ ಸೇರಿಕೊಂಡಂತೆ ಸಾಮೂದಾಯಿಕ ಗುಂಪುಗಳ ಮತ್ತು ವ್ಯಕ್ತಿಗಳ ಸಾಮಾಜಿಕ ಅಗತ್ಯಗಳನ್ನು ಪೂರೈಸುತಿತ್ತು.ಬಹುತೇಕ ಸಂದರ್ಭದಲ್ಲಿ ಸಾಮುದಾಯಿಕ ಜೀವನದ ಅನುಭವಗಳೆ ಶಿಕ್ಷಣವಾಗಿತ್ತು. ಆದರೆ ಸಮಾಜ ವಿಕಾಸಗೊಂಡಂತೆ ಅದರ ಸಾಮಾಜಿಕ ಸಂಸ್ಥೆ ಮತ್ತು ವ್ಯವಸ್ಥೆ ಹೆಚ್ಚು ಹೆಚ್ಚು ಸಂಕೀರ್ಣವಾಗತೊಡಗಿತು.ಹೊಸ ಹೊಸ ಜ್ಞಾನ ಶಾಖೆಗಳು, ತಾಂತ್ರಿಕತೆ ಮತ್ತು ಯಾಂತ್ರಿಕತೆಯ ಅವಿಷ್ಕಾರಗಳನ್ನು ಹುಟ್ಟುಹಾಕಿತ್ತು. ಇದರಿಂದ ಮನುಷ್ಯ ಜೀವನ ರಕ್ಷಣೆ ಮತ್ತು ನಾಗರೀಕ ಬದುಕನ್ನು ಕಂಡುಕೊಳ್ಳುವ ಪ್ರಕೃತಿ ಜೊತೆಗಿನ ಸಂಘರ್ಷದ ಪ್ರಕ್ರಿಯೆಯಲ್ಲಿ ಜ್ಞಾನ ಕೌಶಲ್ಯಕ್ಕಾಗಿ ಅನೌಪಚಾರಿಕ ಶಿಕ್ಷಣ ರೂಪಗೊಂಡಿತು.ಈ ಹಂತದಲ್ಲಿ 'ಸಮಾಜ ಮತ್ತು ಸಮುದಾಯ ಶಿಕ್ಷಣ' ಇವು ಪರಸ್ಪರ ಪೂರಕವಾಗಿದ್ದವು.ಇಂತಹ ಜ್ಞಾನ ಮತ್ತು ಕೌಶಲ್ಯಗಳಿಂದ ಪ್ರಾಚೀನ ಸಮಾಜದಲ್ಲಿ ಉತ್ಪಾದನಾ ಸಲಕರಣೆ ಮತ್ತು ವಿಧಾನ ಬದಲಾಗಿ ಜೀವನದ ಅಗತ್ಯಕ್ಕಿಂತ ಹೆಚ್ಚು ಉತ್ಪಾದನೆಯನ್ನು ರೂಪಿಸಿತ್ತು. ಮುಂದುವರಿದು ಆದಾಯ, ಆಸ್ತಿ, ಆಸ್ತಿಯ ಹಕ್ಕುಗಳನ್ನು ಇದು ಹುಟ್ಟುಹಾಕಿತು. ಈ ಹೊಸ ಬೆಳವಣಿಗೆಗಳಿಂದ ಸಮಾಜದಲ್ಲಿ ವಿವಿಧ ವೃತ್ತಿವರ್ಗಗಳನ್ನು ಹುಟ್ಟುಹಾಕಿತು.

ವೃತ್ತಿ ವರ್ಗ ರೂಪಿಸಿದ ರಾಜಕೀಯವು ಸಮಾಜದಲ್ಲಿ ಶ್ರೇಣೀಕೃತ ವ್ಯವಸ್ಥೆಯನ್ನು ಹುಟ್ಟು ಹಾಕಿತ್ತು. ಒಂದು ವರ್ಗ ಶಿಕ್ಷಣ ಪಡೆದುಕೊಳ್ಳುವ ಔಪಚಾರಿಕ ವ್ಯವಸ್ಥೆಗಳನ್ನು ಹುಟ್ಟುಹಾಕಿ ಉಳಿದ ವರ್ಗದ ಜನರನ್ನು ಅದರಲ್ಲೂ ತಳಮಟ್ಟದ ಜಾತಿಗೆ ಸೇರಿದ ಜನರನ್ನು ಶಿಕ್ಷಣದಿಂದ ದೂರವಿಟ್ಟರು. ಶಿಕ್ಷಣ ಆರ್ಥಿಕವಾಗಿ ಹಾಗೂ ಮೇಲ್ವರ್ಗದ ಕೆಲವರಿಗೆ ಮಾತ್ರ ಸೀಮಿತವಾಗಿತ್ತು. ಬ್ರಾಹ್ಮಣರು ಮಾತ್ರ ಗುರು ಸ್ಥಾನ ಪಡೆಯಲು ಅವಕಾಶವಿತ್ತು. ಬೌದ್ಧಿಕವಾಗಿ ಶ್ರಮ ಪಡುತ್ತಿದ್ದವರನ್ನು ಶ್ರೇಷ್ಠರೆಂದು, ದೈಹಿಕ ಕೆಲಸ ಮಾಡುತ್ತಿದ್ದವರನ್ನು ಬಹಳ ಕೀಳಾಗಿ ಕಾಣಲಾಯಿತು. ಸ್ತ್ರೀ ಶಿಕ್ಷಣ ಮತ್ತು ಸಾರ್ವಜನಿಕ ಶಿಕ್ಷಣಕ್ಕೆ ಹೆಚ್ಚಿನ ಮಹತ್ವವಿರಲಿಲ್ಲ. ಸಮಾಜದ ಬಹುಪಾಲು ಜನರು ಶಿಕ್ಷಣದಿಂದ ವಂಚಿತರಾದರು. ಶೂದ್ರರನ್ನಂತೂ ಬಹಳ ಕೀಳಾಗಿ ಕಂಡು ಅಲಕ್ಷಿಸಲಾಯಿತು. ಇಂತಹ ಒಂದು ಅಮಾನವೀಯ ಶೋಷಣೆ ಹಲವಾರು ಶತಮಾನಗಳೇ ಮುಂದುವರಿಯಿತು. ಸಮಾಜದಲ್ಲಿ ಬದುಕಿನ ಭಾಗವಾಗಿದ್ದ ಶಿಕ್ಷಣ ಕ್ರಮೇಣವಾಗಿ ಒಂದು ವರ್ಗದ ಸ್ವತ್ತು ಸವಲತ್ತಾಯಿತು. ಮುಂದುವರಿದು ಭಾರತದ ಮಟ್ಟಿಗೆ ಹೇಳಬೇಕೆಂದರೆ ೧೮ನೇ ಶತಮಾನದ ಕೊನೆಯಲ್ಲಿ 'ಭಾರತೀಯ ಸಮಾಜವು ಶ್ರೇಣೀಕೃತ ಮತ್ತು ಅಸಮಾನತೆಯಿಂದ ಕೂಡಿದ್ದು, ಔಪಚಾರಿಕ ಶಿಕ್ಷಣಕ್ಕೆ ಪ್ರವೇಶವು ಹುಟ್ಟಿನಿಂದ ನಿರ್ಧಾರವಾಗುತ್ತಿತ್ತು.

ಮೇಲ್ಜಾತಿಯ ಪುರೋಹಿತಶಾಹಿ, ಪಂಡಿತ ವರ್ಗ, ಶ್ರೀಮಂತ ಜಮೀನ್ದಾರರು ಮತ್ತು ಸ್ವಲ್ಪ ಮಟ್ಟಿಗೆ ಲೇವಾದೇವಿ ವರ್ಗಕ್ಕೆ ಹಾಗೂ ವ್ಯಾಪಾರಸ್ಥ ವರ್ಗಕ್ಕೆ ಸೇರಿದವರಿಗೆ ಮಾತ್ರ ಶಿಕ್ಷಣ ಸೀಮಿತವಾಗಿತ್ತು. ಸಮಾಜದ ಬಹುಪಾಲು ಜನರು ಕಡುಬಡವರಾಗಿದ್ದು, ಶ್ರೇಣಿಕೃತ ಸಮಾಜದ ಕೆಳಸ್ತರವಾದ ಶೂದ್ರ ಜನಾಂಗದ ಶೇಕಡಾ ೯೦ ಕ್ಕೂ ಹೆಚ್ಚಿನ ಜನರು ಶಿಕ್ಷಣದಿಂದ ವಂಚಿತರಾಗಿದ್ದರು.'

ಈ ಹಿನ್ನಲೆಯಲ್ಲಿ ವಿಶ್ಲೇಷಿಸುವುದಾದರೆ ಸಾಮಾಜಿಕ, ರಾಜಕೀಯ, ಸಾಂಸ್ಕೃತಿಕ ಕಾರಣಗಳಿಂದ ಆಳುವ ವರ್ಗ ಸಮಾಜದ ಬಹುಸಂಖ್ಯಾತ ಜನರನ್ನು ಶಿಕ್ಷಣದಿಂದ ಹೊರಗಿಡುವ ಉದ್ದೇಶಿತ ಪ್ರಕ್ರಿಯೆ ಆ ಜನರನ್ನು ಶಿಕ್ಷಣದಿಂದ ವಿಮುಖಗೊಳಿಸಿದ್ದಲ್ಲದೆ ಶಿಕ್ಷಣ ವ್ಯವಸ್ಥೆಯೊಂದಿಗೆ ಸಂಬಂಧಗಳನ್ನು ಬೆಳೆಸಿಕೊಳ್ಳುವ ಅವಕಾಶಗಳನ್ನೇ ಕಸಿದುಕೊಂಡಿತು.ಹೀಗಾಗಿ ಸಮುದಾಯಗಳು ಇಂದು ಶಿಕ್ಷಣ ಮತ್ತು ಶೈಕ್ಷಣಿಕ ವ್ಯವಸ್ಥೆಯಿಂದ ದೂರ ಉಳಿದಿದ್ದರೆ ಅದಕ್ಕೆ ಕಾರಣ ಖಂಡಿತ ವಂಚಿತ ಸಮುದಾಯದ್ದಲ್ಲ. ಆದರೆ ಆಯಾ ಕಾಲ ಘಟ್ಟದಲ್ಲಿ ಆಳ್ವಿಕೆ ನಡೆಸಿದ ಆಳುವ ವರ್ಗದ ಹಿತಾಶಕ್ತಿ ಮತ್ತು ಹುನ್ನಾರಗಳೇ ಕಾರಣವಾಗಿವೆ.

೨.೧ ಶಾಲಾ ಶಿಕ್ಷಣದ ಸಾರ್ವತ್ರಿಕರಣಕ್ಕೆ ಅಂತರಾಷ್ಟ್ರೀಯ ಪ್ರಯತ್ನಗಳು

ಅಂತರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣ ಸಾರ್ವತ್ರಿಕ ವಿಷಯವಾಗಿ ಆಧುನಿಕ ಜಾತ್ಯಾತೀತ ರಾಷ್ಟ್ರದ ಸಮಾಜದ ಕಲ್ಪನೆಯ ಭಾಗವಾಗಿ ರೂಪಗೊಂಡಿತ್ತು. ಇದರ ನಡುವೆ ಫ್ರೆಂಚ್ ಮತ್ತು ಅಮೇರಿಕಾದ ಕ್ರಾಂತಿಗಳು ಶಿಕ್ಷಣವನ್ನು ಪ್ರಜಾಪ್ರಭುತ್ವೀಕರಣಗೊಳಿಸುವ ಪ್ರಕ್ರಿಯೆಗೆ ಮತ್ತಷ್ಟು ಇಂಬು ನೀಡುವುದರ ಮೂಲಕ ಶಿಕ್ಷಣ ಸಮಾಜದ ಒಂದು ವರ್ಗದ ಸ್ವತ್ತು ಎಂಬ ಸಂಕುಚಿತ ಕಲ್ಪನೆಯಿಂದ ಶಿಕ್ಷಣವನ್ನು ಹೊರತರುವ ಪ್ರಕ್ರಿಯೆ ಪ್ರಾರಂಭಿಸಿದವು.ಹೀಗೆ ಪ್ರಾರಂಭವಾದ ಸಾರ್ವತ್ರಿಕ ಶಿಕ್ಷಣ ಮೇಲಿನ ಕ್ರಾಂತಿಗಳಿಗೆ ಮೂಲ ಕಾರಣವಾದ ಸಮಾನತೆಯ ಆದರ್ಶಗಳನ್ನು ಸಾಕಾರಗೊಳಿಸಬಹುದಾದ ಒಂದು ಸಾಧನವೆಂದು ಪರಿಭಾವಿಸಲಾಯಿತು. ಹೀಗಿದ್ದರೂ, ಶಾಸ್ತ್ರೀಯ ನಾಗರೀಕ ಸ್ವಾತಂತ್ರ್ಯದ ಸಾಧನಗಳಾದ ೧೬೮೯ರ ಹಕ್ಕುಗಳ ಮಸೂದೆ (ಬ್ರಿಟನ್), ೧೭೭೬ರಅಮೇರಿಕನ್ನರ ಸ್ವಾತಂತ್ರ್ಯ ಘೋಷಣೆ (ಅಮೇರಿಕ), ೧೭೮೯ರ ಮಾನವ ಹಕ್ಕು ಘೋಷಣೆ(ಫ್ರಾನ್ಸ್)ಗಳಲ್ಲಿ ನಿರ್ದಿಷ್ಟವಾಗಿ ಮತ್ತು ಸ್ಪಷ್ಟವಾಗಿ ಸಾರ್ವತ್ರಿಕ ಶಿಕ್ಷಣದ ಬಗ್ಗೆ ಉಲ್ಲೇಖಗಳಿರಲಿಲ್ಲ. ಆದರೆ ಮಾನವ ಹಕ್ಕುಗಳಾದ 'ಸಮಾನತೆ, ಗೌರವ ಮತ್ತು ಉತ್ತಮ ಶಿಕ್ಷಣದ ಒಳವು ಮತ್ತು ಬೇಡಿಕೆಗಳನ್ನು ಒಳಗೊಂಡಿದ್ದವೆಂಬುದು ಗಮನಿಸಬೇಕಾದ ಪ್ರಮುಖ ಅಂಶ. ೧೯ನೇ ಶತಮಾನದ ಮಧ್ಯಭಾಗದಲ್ಲಿ ತಲೆ ಎತ್ತಿದ ಸಮಾಜವಾದ ಮತ್ತು ಉದಾರವಾದ ರಾಷ್ಟ್ರಗಳು ಶಿಕ್ಷಣ ಪ್ರತಿಯೊಬ್ಬ ನಾಗರೀಕನ ಹಕ್ಕು ಎಂದು ಗುರುತಿಸುವಂತೆ ಮತ್ತು ಸಂವಿಧಾನಗಳಲ್ಲಿ ಸೇರಿಸುವಂತೆ ಮಾಡಿತು. ಈ ರೀತಿಯಲ್ಲಿ ಸಂವಿಧಾನದಲ್ಲಿ ಸೇರಿಸಿದ ರಾಷ್ಟ್ರಗಳೆಂದರೆ ಜರ್ಮನ್ ಸಂವಿಧಾನ೧೮೪೯, ಇಂಗ್ಲೆಂಡಿನ ಕಡ್ಡಾಯ ಶಿಕ್ಷಣ ಮಸೂದೆ ೧೮೭೦, ವಾರ್ಸೈಲ್ ಒಪ್ಪಂದ ೧೯೧೯ (ಅಂತರಾಷ್ಟ್ರೀಯ ಮಟ್ಟದಲ್ಲಿ ಶಿಕ್ಷಣವನ್ನು ಒಂದು ಹಕ್ಕನ್ನಾಗಿಸುವ ಮೊದಲ ಪ್ರಯತ್ನ ಇದನ್ನು ಪೋಲಿಸ್ ಅಲ್ಪಸಂಖ್ಯಾತರಿಗೆ ಕಲ್ಪಿಸಲಾಯಿತು), ಸಂಯುಕ್ತ ರಾಷ್ಟ್ರಗಳ ಒಕ್ಕೂಟ ೧೯೨೧ರ ಜಿನೇವಾ ಘೋಷಣೆಯಲ್ಲಿ ಮಾಡಲಾಯಿತು.

ಅಂತರಾಷ್ಟ್ರೀಯ ಮಟ್ಟದಲ್ಲಿ ಶಾಲಾ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಮತ್ತು ಮಕ್ಕಳ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಮನವರಿಕೆ ಮಾಡಿಕೊಡುವ ಪ್ರಯತ್ನಗಳನ್ನು ವಿಶ್ವಸಂಸ್ಥೆಯು ಪ್ರಾರಂಭದಿಂದಲೂ ಮಾಡುತ್ತಾ

ಬಂದಿದೆ.ವಿಶ್ವಸಂಸ್ಥೆಯು ೧೯೪೮ರ ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯಲ್ಲಿ ಶಾಲಾ ಶಿಕ್ಷಣವು ಉಚಿತ ಮತ್ತು ಕಡ್ಡಾಯವಾಗಿರಬೇಕೆಂಬ ಅಂಶವನ್ನು ಸ್ಪಷ್ಟಪಡಿಸಿದೆ. ಈ ಎಲ್ಲಾ ಪ್ರಯತ್ನಗಳಿಗೆ ಅಂತಿಮ ರೂಪ ನೀಡುವ ನಿಟ್ಟಿನಲ್ಲಿ ೧೯೮೯ರಲ್ಲಿ ಮಕ್ಕಳ ಹಕ್ಕುಗಳ ಒಡಬಂಡಿಕೆ ಎಂಬ ಮಹತ್ವದ ದಾಖಲೆಯನ್ನು ಸಿದ್ಧಪಡಿಸಿದ ವಿಶ್ವ ಸಂಸ್ಥೆಯು ವಿಶ್ವದ ಎಲ್ಲಾ ರಾಷ್ಟ್ರಗಳ ಒಪ್ಪಿಗೆಗಾಗಿ ತೆರೆದಿಡುವುದರ ಮೂಲಕ ಮಕ್ಕಳ ಭವಿಷ್ಯ ನಿರ್ಮಾಣಕ್ಕೆ ಒಂದು ಹೊಸ ತಿರುವು ನೀಡಿತು. ಇಂದು ಜಗತ್ತಿನ ಬಹುತೇಕ ರಾಷ್ಟ್ರಗಳು ಮಕ್ಕಳ ಹಕ್ಕುಗಳ ಒಡಂಬಡಿಕೆಯನ್ನು ತಾತ್ವಿಕವಾಗಿ ಒಪ್ಪಿ ಜಾರಿಗೊಳಿಸಲು ಬದ್ಧವಾಗಿವೆ. ನಮ್ಮ ಭಾರತ ದೇಶವು ಈ ಒಡಂಬಡಿಕೆಯನ್ನು ೧೯೯೨ರಲ್ಲಿ ಒಪ್ಪಿದೆ. ಇದು ನಿರ್ದಿಷ್ಟವಾಗಿ ಮತ್ತು ಸ್ಪಷ್ಟವಾಗಿ ಮಕ್ಕಳ ಶಿಕ್ಷಣದ ಹಕ್ಕಿನ ಬಗ್ಗೆ ಅವಕಾಶ ಕಲ್ಪಿಸಿದವು. ಈ ಎಲ್ಲಾ ಬೆಳವಣಿಗೆಗಳು ಮೂಲ ಶಿಕ್ಷಣ ಒಂದು ಹಂತದವರೆಗೆ ಎಲ್ಲಾ ನಾಗರೀಕರ ಹಕ್ಕು ಮತ್ತು ಅದು ಎಲ್ಲರಿಗೂ ಕಡ್ಡಾಯವಾಗಿ ಸಿಗಲೆಬೇಕೆಂಬ ಕೂಗು ಬಲಗೊಳ್ಳುತ್ತಾ ಬಂದಿತು.

೨.೨ ಶಾಲಾ ಶಿಕ್ಷಣ ಸಮುದಾಯದ ಸಾರ್ವತ್ರಿಕ ಬೇಡಿಕೆಯಾಗಿ ಭಾರತದಲ್ಲಿನ ಪ್ರಯತ್ನಗಳು

ಭಾರತದ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಅರ್ಥಮಾಡಿಕೊಳ್ಳಬೇಕಾದರೆ, ಸ್ವಾತಂತ್ರ್ಯ ಚಳುವಳಿಯ ಸಂದರ್ಭದಲ್ಲಿ ಶಾಲಾ ಶಿಕ್ಷಣಕ್ಕೆ ವಿವಿಧ ಕಾಲಘಟ್ಟದಲ್ಲಿ ನಡೆಸಿದ ಪ್ರಯತ್ನಗಳನ್ನು ಅರ್ಥಮಾಡಿಕೊಳ್ಳಬೇಕು. ಈಗಾಗಿ ಸಾರ್ವತ್ರಿಕ ಶಿಕ್ಷಣದ ಬೇಡಿಕೆ ಸ್ವಾತಂತ್ರ್ಯ ಚಳುವಳಿಯ ಒಂದು ಪ್ರಮುಖ ಬೇಡಿಕೆಯಾಗಿತ್ತು. ಸ್ವಾತಂತ್ರ್ಯ ಪೂರ್ವದಿಂದಲೂ ಶಾಲಾ ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಪ್ರಯತ್ನಗಳು ನಿರಂತರವಾಗಿ ನಡೆಯುತ್ತಾ ಬಂದಿವೆ. ಈಸ್ಟ್ ಇಂಡಿಯಾ ಕಂಪನಿಯು ಭಾರತಕ್ಕೆ ವ್ಯಾಪಾರಕ್ಕಾಗಿ ಬಂದರೂ ಸಹಿತ ಭಾರತದಲ್ಲಿ ತನ್ನದೇ ಆದ ಸಾಮ್ರಾಜ್ಯವನ್ನು ಸ್ಥಾಪಿಸಬೇಕೆಂದು ಆಲೋಚಿಸಿತು. ಈ ಗುರಿ ಸಾಧನೆಗಾಗಿ ಇಂಗ್ಲೀಷರು ಪ್ರಭಾವಿ ಹಿಂದೂ ಮತ್ತು ಮುಸ್ಲಿಂಮರ ಬೆಂಬಲ ಮತ್ತು ಸಹಾನುಭೂತಿಯನ್ನು ಬಯಸಿ ಅದಕ್ಕಾಗಿ ಅವರು ಅವಕಾಶವನ್ನು ಕಾಯುತ್ತಿದ್ದರು. ಕ್ರಿ.ಶ.೧೭೮೦ ರ ಅಕ್ಟೋಬರ್‌ನಲ್ಲಿ ಕಲ್ಕತ್ತಾದಲ್ಲಿ ಉಚ್ಚ ಶಿಕ್ಷಣಕ್ಕಾಗಿ ಮದರಸಾದ ಅಡಿಗಲ್ಲನ್ನು ವಾರನ್ ಹೆಸ್ಟಿಂಗ್ಸ್ ಇರಿಸಿದನು. ಇದೆ ರೀತಿ ಬ್ರಿಟಿಷರು ಹಿಂದೂಗಳ ಬೆಂಬಲವನ್ನು ಪಡೆಯುವ ಸಲುವಾಗಿ ಬನಾರಸ್‌ದಲ್ಲಿ ಕ್ರಿ.ಶ.೧೭೯೧ ರಲ್ಲಿ ಸಂಸ್ಕೃತ ಮಹಾವಿದ್ಯಾಲಯವನ್ನು ಸ್ಥಾಪಿಸಿದರು. ಚಾರ್ಲ್ಸ್ ಗ್ರ್ಯಾಂಟ್‌ನು ಭಾರತಕ್ಕೆ ೧೭೭೩ ರಲ್ಲಿ ಬಂದನು. ಅವನು ಈ ಅವಧಿಯಲ್ಲಿ ಶಿಕ್ಷಣದಲ್ಲಿ ಮಹತ್ವದ ಪಾತ್ರವನ್ನು ವಹಿಸಿದನು. ಅವನು ಭಾರತದಲ್ಲಿನ ಶಿಕ್ಷಣದ ಸಮಸ್ಯೆಗಳನ್ನು ಅಭ್ಯಸಿಸಿದನು. ಅವನು ಇಂಗ್ಲೆಂಡಿಗೆ ಮರಳಿದ ನಂತರ ೧೭೯೭ ರಲ್ಲಿ ನಿರೀಕ್ಷಣೆ ಎನ್ನುವ ಪುಸ್ತಕವನ್ನು ಪ್ರಕಟಿಸಿದನು. ಭಾರತೀಯರು ಸುಧಾರಣೆಯಾಗಬೇಕಾದರೆ ಅವರ ಅಜ್ಞಾನವು ಮಾಯವಾಗಬೇಕು. ಅದಕ್ಕಾಗಿ ಪಾಶ್ಚಾತ್ಯ ಸಾಹಿತ್ಯ ಮತ್ತು ವಿಜ್ಞಾನವನ್ನು ಭಾರತೀಯರಿಗೆ ಕಲಿಸುವುದರಿಂದ ಅವರು ಇಂಗ್ಲೀಷ್ ಶಾಲೆಗಳಿಗೆ ದೌಡಾಯಿಸಿ ಸಾವಕಾಶವಾಗಿಕ್ರೈಸ್ತ ಧರ್ಮವನ್ನು ಸ್ವೀಕರಿಸುವರು. ಇದರಲ್ಲಿ ಯಾವುದೇ ರಾಜಕೀಯ ಗಂಡಾಂತರವಿಲ್ಲವೆಂದು ಆ ಪುಸ್ತಕದಲ್ಲಿ ಅಭಿಪ್ರಾಯಪಟ್ಟಿದ್ದಾನೆ. ಈ ಅಭಿಪ್ರಾಯದಂತೆ ಬ್ರಿಟೀಷ್ ಆಳ್ವಿಕೆಯ ಮೊದಲ ೨೦೦ ವರ್ಷ ಜನಸಾಮಾನ್ಯರ ಶಿಕ್ಷಣಕ್ಕೆ ಯಾವುದೇ ಆಧ್ಯತೆಯನ್ನು ನೀಡಿದಿದ್ದ ಈಸ್ಟ್ ಇಂಡಿಯಾ ಕಂಪನಿಯು ಪೌರಾತ್ಯ ಶಿಕ್ಷಣ ನೀಡಲು ಮನಸ್ಸು ಮಾಡಿತು. ಇದೆ ಸಂದರ್ಭದಲ್ಲಿ ಕಂಪನಿಯ ನೌಕರರು ಪೌರಾತ್ಯ ಶಿಕ್ಷಣಕ್ಕೆ ಇನ್ನೂ ಹೆಚ್ಚಿನ ಸಹಾಯ ದೊರೆಯಬೇಕೆಂದು ಹೇಳತೊಡಗಿದರು ಈಗಾಗಿ ಲಾರ್ಡ್ ಮಿಂಟೊ (೧೮೧೧) ಭಾರತೀಯರಿಗೆ ಪಾಶ್ಚ್ಯಾತ್ಯ ಶಿಕ್ಷಣ ಯೋಗ್ಯವಾಗಿದೆ. ಆದ್ದರಿಂದ ಅದಕ್ಕೆ ಯೋಗ್ಯವಾದ ಸಹಾಯವನ್ನು ನೀಡಬೇಕೆಂದು ಪ್ರತಿಪಾದಿಸಿದನು. ಇವನ ವರದಿಯು ೧೮೧೩ರ ಚಾರ್ಟರ್ ಆಕ್ಟ್ ಮೇಲೆ ಪ್ರಭಾವ ಬೀರಿತು. ಈ

ಚಾರ್ಟರ್ ಆಕ್ಟ್ ಮುಖ್ಯವಾಗಿ ಭಾರತೀಯರ ಶಿಕ್ಷಣದ ಸಲುವಾಗಿ ಈಸ್ಟ್ ಇಂಡಿಯಾ ಕಂಪನಿ ಪ್ರತಿ ವರ್ಷ ಒಂದು ಲಕ್ಷ ರೂ.ಗಳನ್ನು ವೆಚ್ಚ ಮಾಡಬೇಕು ಎಂಬ ನಿರ್ಣಯವನ್ನು ಕೈಗೊಂಡು ಭಾರತದಲ್ಲಿ ಸರಕಾರಿ ಶಿಕ್ಷಣ ಪದ್ಧತಿಗೆ ಹಾಗೂ ಆಧುನಿಕ ಶಿಕ್ಷಣ ಪದ್ಧತಿಗೆ ಬುನಾದಿಯನ್ನು ಹಾಕಿತು.

ಈ ಮಧ್ಯೆ ೧೮೧೭ ರಲ್ಲಿ ಟ್ರಾವನ್ ಕೋರ್ ಪ್ರಾಂತ್ಯದ (ಈಗಿನ ಕೇರಳ ರಾಜ್ಯ) ಮಹಾರಾಣಿಯವರು ಅಡಳಿತದಲ್ಲಿ ಪ್ರಜೆಗಳು ಸಕ್ರಿಯವಾಗಿ ಪಾಲ್ಗೊಳ್ಳಬೇಕಾದರೆ ಶಿಕ್ಷಣ ಅತ್ಯವಶ್ಯಕವೆಂದು ಮನಗಂಡು ತಮ್ಮ ಪ್ರಾಂತ್ಯದ ಎಲ್ಲಾ ಪ್ರಜೆಗಳಿಗೆ ಶಿಕ್ಷಣ ನೀಡುವ ಘೋಷಣೆಯೊಂದನ್ನು ಹೊರಡಿಸಿದರು. ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಇದೊಂದು ಪ್ರಥಮ ದೇಶಿಯ ಹೆಜ್ಜೆ ಎನ್ನಬಹುದು. ಈ ನಡುವೆ ಲಾರ್ಡ್ ವಿಲಿಯಂ ಬೆಂಟಿಕನು ೧೮೩೪ ರಲ್ಲಿ ಭಾರತಕ್ಕೆ ಬಂದ ಲಾರ್ಡ್ ಮೆಕಾಲೆಯವರನ್ನು ಸಾರ್ವಜನಿಕ ಶಿಕ್ಷಣದ ಸಾಮಾನ್ಯ ಸಮಿತಿಯ ಅಧ್ಯಕ್ಷರನ್ನಾಗಿ ೧೮೩೪ ರ ಜೂನ್ ೧೦ ರಂದು ನೇಮಿಸಿದನು. ಇವರು ೧೮೧೩ರ ರಾಜಶಾಸನದ ಪ್ರಕಾರ ದೊರೆಯಲು ಸಿದ್ಧವಾದ ಒಂದು ಲಕ್ಷ ರೂಗಳನ್ನು ಭಾರತೀಯ ಶಿಕ್ಷಣ ಪದ್ಧತಿಯ ಮೇಲೆ ಇಲ್ಲವೇ ಪಾಶ್ಚಾತ್ಯ ಶಿಕ್ಷಣ ಪದ್ಧತಿಯ ಮೇಲೆ ವೆಚ್ಚ ಮಾಡಬೇಕೆಂಬ ವಿವಾದವನ್ನು ಕುರಿತು ವರದಿ ಸಲ್ಲಿಸಲು ನೇಮಕವಾದರು. ಭಾರತದ ಶಿಕ್ಷಣ ಇತಿಹಾಸದಲ್ಲಿ ಇದು ಒಂದು ಪ್ರಮುಖ ಮೈಲಿಗಲ್ಲು. ಅವರು ತಮ್ಮ ೧೮೩೫ ರ ಫೆಬ್ರವರಿಯ ವರದಿಯಲ್ಲಿ ಬೋಧನಾ ಮಾಧ್ಯಮ ಇಂಗ್ಲೀಷ್ ಇರಬೇಕೆಂದು ತನ್ನ ವರದಿಯಲ್ಲಿ ತಿಳಿಸಿದನು.

ಮುಂದುವರಿದು ಜುಲೈ ೧೯, ೧೮೫೪ ರಂದು ಚಾರ್ಲ್ಸ್ ವುಡ್‌ರವರ ನೇತೃತ್ವದ ಶಿಕ್ಷಣ ನಿರ್ದೇಶಕರ ಸಮಿತಿಯು ಶಿಕ್ಷಣದ ವರದಿಯನ್ನು ಸಲ್ಲಿಸಿತು. ಈ ವರದಿಯು ಭಾರತದಲ್ಲಿ ಶಿಕ್ಷಣಕ್ಕೆ ಹೊಸ ನಿರ್ದೇಶನವನ್ನು ನೀಡಿತು. ಅದರ ನಿರ್ದೇಶನದ ಸ್ಪಷ್ಟ ಪ್ರಭಾವವನ್ನು ದೇಶದಲ್ಲಿಯ ಇಂದಿನ ಶಿಕ್ಷಣದಲ್ಲಿ ಕಾಣಬಹುದು. ಕ್ರಿಶ ೧೮೫೩ ರಲ್ಲಿ ಕಂಪನಿಗೆ ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕವಾದ ಸುಧಾರಣೆ, ಬದಲಾವಣೆ ಅಗತ್ಯವೆನಿಸಿತ್ತು, ಇದರಂತೆ ಹಲವಾರು ನಿರ್ವಹಣಾ ಪದ್ಧತಿಗಳು, ನೀತಿಗಳು ಮತ್ತು ಅನೇಕ ಪ್ರಯೋಗಗಳು ನಡೆದವು. ಆದರೆ ಇವುಗಳಲ್ಲಿ ಒಂದು ಸ್ಪಷ್ಟವಾದ ನೀತಿ ನಿರೂಪಣೆ ಇರಲಿಲ್ಲವಾದ್ದರಿಂದ ಪಾರ್ಲಿಮೆಂಟರಿ ಸಮಿತಿಯನ್ನು ನೇಮಿಸಲಾಯಿತು. ಈ ಸಮಿತಿಯ ವರದಿಯ ಆಧಾರದ ಮೇಲೆ ಬೋರ್ಡ್ ಆಫ್ ಕಂಟ್ರೋಲದ ಅಧ್ಯಕ್ಷನಾದ ಸರ್ ಚಾರ್ಲ್‌ಸ್‌ವುಡ್‌ನು ತನ್ನ ವರದಿಯನ್ನು ಸಾದರಪಡಿಸಿದನು. ಇದರಲ್ಲಿ ಎಲ್ಲರಿಗೂ ಶಿಕ್ಷಣ ದೊರಕುವ ಹಾಗೆ ಶಿಪಾರಸ್ಸು ಮಾಡಿತು. ವುಡ್‌ನ ವರದಿಯ ಪೂರ್ವದಲ್ಲಿ ಕಂಪನಿಯು ಮೇಲ್ವರ್ಗದ ಜನರಿಗೆ ಮಾತ್ರ ಶಿಕ್ಷಣ ಕೊಡಬೇಕೆಂದು ಯೋಚಿಸಿತ್ತು. ರಾಜಕೀಯ ಪ್ರೇರಣೆ ಮತ್ತು ಬಡ ಹಣಕಾಸಿನ ಸ್ಥಿತಿಯು ಕಂಪನಿ ಸರ್ಕಾರದ ಈ ನೀತಿಗೆ ನೆಲೆಯಾಗಿತ್ತು. ಕಂಪನಿಯ ಅಧಿಕಾರಿಗಳು ಅಧೋಮುಖ ಶಿಕ್ಷಣ ಸಿದ್ಧಾಂತದ ಮೂಲಕ ಶಿಕ್ಷಣವನ್ನು ಪ್ರಸಾರ ಮಾಡಬೇಕೆಂದು ಬಯಸಿದ್ದರು. ವುಡ್‌ನ ವರದಿಯು ಈ ಸಿದ್ಧಾಂತವನ್ನು ಸಂಕುಚಿತ ಮನೋಭಾವನೆ ಉಳ್ಳದ್ದೆಂದು ಬಲವಾಗಿ ಟೀಕಿಸಿತು. ಆದ್ದರಿಂದ ಈ ಎಲ್ಲಾ ದಿಶೆಗಳಲ್ಲಿ ಭಾರತೀಯ ಜನತೆಗೆ ಶಿಕ್ಷಣ ಕೊಡಬೇಕೆಂದು ಶಿಫಾರಸ್ಸನ್ನು ಮಾಡಿತು. ವುಡ್‌ನ ವರದಿಯ ನಿಯೋಜಕರು ಸಾರ್ವಜನಿಕ ಭಾವನೆಗಳಿಗೆ ಸ್ಪಂದಿಸಿದರು. ಅವರು ಸಾರ್ವತ್ರಿಕ ಶಿಕ್ಷಣಕ್ಕೆ ಶಿಫಾರಸ್ಸನ್ನು ಮಾಡಿದರು. ಇದರಂತೆ ಶೈಕ್ಷಣಿಕ ಉದ್ದೇಶಗಳಿಗಾಗಿ ಹಣಕಾಸಿನ ಅಗತ್ಯತೆ ಇದೆ ಎಂಬುದನ್ನು ವರದಿಯು ಮನಗಂಡಿತ್ತು. ಆದ್ದರಿಂದ ಅದು ಶಿಕ್ಷಣ ಪ್ರಸಾರಕ್ಕೆ ಸಹಾಯಧನ ಯೋಜನೆಯನ್ನು ಶಿಫಾರಸ್ಸು ಮಾಡಿತು. ಸರಕಾರವು ಹಣಕಾಸಿನ ವ್ಯವಸ್ಥೆಯನ್ನು ಏಕಾಂಗಿಯಾಗಿ ಪರಿಹರಿಸಲಾರದು. ಅದು ಸಾರ್ವಜನಿಕರ ಸಹಕಾರದಿಂದ ಮಾತ್ರ ಸಾಧ್ಯ ಈಗಾಗಿ ವರದಿಯು ಪ್ರಾಂತೀಯ ಸರಕಾರಗಳಿಗೆ

ಸಹಾಯಧನ ಯೋಜನೆಯ ಕುರಿತು ತನ್ನದೇ ಆದ ನಿಯಮಗಳನ್ನು ರೂಪಿಸಲು ತಿಳಿಸಲಾಯಿತು. ಇದರಂತೆ ನಿಯಮಗಳನ್ನು ರೂಪಿಸಿಕೊಳ್ಳಲಾಯಿತು. ನಂತರ ಲಾರ್ಡ್ ರಿಪ್ಪನ್‌ರವರು ಭಾರತಕ್ಕೆ ಬಂದ ನಂತರ ಸರ್.ವಿಲಿಯಂ ಹಂಟ್ ರವರ ಅಧ್ಯಕ್ಷತೆಯಲ್ಲಿ ೧೮೮೨ರ ಫೆಬ್ರವರಿ ೩ರಂದು ಪ್ರಪ್ರಥಮ ಭಾರತೀಯ ಶಿಕ್ಷಣ ಆಯೋಗವನ್ನು ನೇಮಕ ಮಾಡಿದರು. ಈ ಆಯೋಗವನ್ನು "ಹಂಟರ್ ಆಯೋಗ" ಎಂದು ಕರೆಯಲಾಗುತ್ತದೆ. ದಾದಾಬಾಯಿ ನವರೋಜಿಯವರು ಈ ಆಯೋಗದ ಮುಂದೆ ಸಾರ್ವತ್ರಿಕ ಶಿಕ್ಷಣದ ಬೇಡಿಕೆಯನ್ನು ಮಂಡಿಸಿದರು. ಈ ಆಯೋಗವು ಭಾರತೀಯ ಶಿಕ್ಷಣದ ದಿಶೆಯನ್ನು ಬದಲಿಸುವಲ್ಲಿ ಪ್ರಯತ್ನ ಮಾಡಿತು. ಈ ಹಂಟರ್ ಆಯೋಗದ ಸಲಹೆ ಮೇರೆಗೆ ಪ್ರಾಥಮಿಕ ಶಿಕ್ಷಣವನ್ನು ಸ್ಥಳೀಯ ಸಂಸ್ಥೆಗಳಿಗೆ ವಹಿಸಲಾಯಿತು.

೧೮೯೩ರಲ್ಲಿ ಬರೋಡಾದ ಮಹಾರಾಜ ಗಾಯಕ್‌ವಾಡ್‌ರವರು ತಮ್ಮ ರಾಜ್ಯದ ವ್ಯಾಪ್ತಿಗೆ ಒಳಪಡುವ ಸಣ್ಣ ಪ್ರಾಂತ್ಯ ಅಮರಾಯಿಲಿಯಲ್ಲಿ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸಿದರು. ಈ ಪ್ರಯತ್ನದಲ್ಲಿ ಅಪಾರ ಯಶಸ್ಸು ಮತ್ತು ಜನಬೆಂಬಲವನ್ನು ಕಂಡುಕೊಂಡ ಮಹಾರಾಜರು ೧೯೦೬ರಲ್ಲಿ ಈ ಸೌಲಭ್ಯವನ್ನು ಬರೋಡ ಪ್ರಾಂತ್ಯದ ಉದ್ದಗಲಕ್ಕೂ ವಿಸ್ತರಿಸಿದರು. ಇದೇ ಸಂದರ್ಭದಲ್ಲಿ ಸ್ವದೇಶಿ ಚಳುವಳಿಯಿಂದ ಉದ್ಭವಿಸಿದ ರಾಜಕೀಯ ಪ್ರಜ್ಞೆಯು ಜನ ಸಾಮಾನ್ಯರಿಗೆ ಓದು ಬರಹದಲ್ಲಿ ಆಸಕ್ತಿಯನ್ನು ಹುಟ್ಟಿಸಿತ್ತು. ಲಾರ್ಡ್ ಕರ್ಝನ್ ನೇತೃತ್ವದ ೧೯೦೪ರ ಸರ್ಕಾರದ ಶೈಕ್ಷಣಿಕ ನೀತಿಯ ಫಲವಾಗಿ ಪ್ರಾಥಮಿಕ ಶಿಕ್ಷಣ ವಿಸ್ತರಿಸುತ್ತಿದ್ದರೂ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದ ಜನಸಂಖ್ಯೆಗೆ ಅದು ಸಾಲದಾಗಿತ್ತು. ಆಗ ದೇಶದಲ್ಲಿ ಅಕ್ಷರಸ್ಥರ ಪ್ರಮಾಣ ಕೇವಲ ಶೇಕಡಾ ೬ ಮಾತ್ರ ಇತ್ತು. ಶಾಲಾ ವಯಸ್ಸಿನ ಮಕ್ಕಳಲ್ಲಿ ಶೇಕಡಾ ೨೩.೮ ರಷ್ಟು ಬಾಲಕರು, ಶೇಕಡಾ ೨.೭ರಷ್ಟು ಬಾಲಕಿಯರು ಪ್ರಾಥಮಿಕ ಶಾಲೆಗೆ ಸೇರಿದ್ದರು. ಹೀಗಿರುವಾಗ ಗೋಪಾಲಕೃಷ್ಣ ಗೋಖಲೆಯವರು ರಾಷ್ಟ್ರದಲ್ಲಿ ತಾಂಡವವಾಡುತ್ತಿದ್ದ ಅನಕ್ಷರಸ್ಥ ಸಮಸ್ಯೆಯನ್ನು ಸರ್ಕಾರಕ್ಕೆ ಮನಗಾಣಿಸುವಂತೆ ಮಾಡಿ ಜಾರಿಗೆ ತರಬೇಕೆಂದು ಮಾರ್ಚ್ ೧೯, ೧೯೧೦ರಲ್ಲಿ ಕೇಂದ್ರ ಶಾಸನ ಸಭೆಯಲ್ಲಿ ಸದಸ್ಯರಾಗಿ ಗೊತ್ತುವಳಿಯನ್ನು ಮಂಡಿಸಿ ಶಿಕ್ಷಣದ ಸಾರ್ವತ್ರೀಕರಣಕ್ಕೆ ಸರ್ಕಾರ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು ಹಾಗೂ ಅವಿದ್ಯಾವಂತರಿರುವವರೆಗೂ ದೇಶ ಇತರ ದೇಶಗಳೊಡನೆ ನಾಗರಿಕತೆಯ ಮುನ್ನಡೆಯಲ್ಲಿ ಸ್ಪರ್ಧಿಸಲಾರದೆಂದು ಸೂಚಿಸುತ್ತಾ ಜನಸಾಮಾನ್ಯರ ಶಿಕ್ಷಣವನ್ನು ಪ್ರಧಾನ ಸಮಸ್ಯೆ ಎಂದು ಭಾವಿಸಿ ಪರಿಹರಿಸಬೇಕೆಂದು ಪ್ರಚಾರ ಮಾಡಿದರು. ಮುಂದುವರಿದು ದೇಶಾದ್ಯಂತ ಪ್ರಾಥಮಿಕ ಶಿಕ್ಷಣ ಉಚಿತ ಹಾಗೂ ಕಡ್ಡಾಯ ಆಗುವ ಮಾರ್ಗದಲ್ಲಿ ಆರಂಭಿಕ ಯತ್ನವೊಂದನ್ನು ಮಾಡಬೇಕೆಂದು ಆ ಬಗ್ಗೆ ಖಚಿತವಾದ ಸಲಹೆಗಳನ್ನು ರೂಪಿಸಲು ಖಾಸಗಿಯವರನ್ನು ಸರಕಾರದ ಅಧಿಕಾರಿಗಳನ್ನು ಒಳಗೊಂಡ ಆಯೋಗವೊಂದನ್ನು ರಚಿಸಬೇಕೆಂದು ನಿರ್ಣಯವನ್ನು ಮಂಡಿಸಿದರು. ಈ ಠರಾವಿನಲ್ಲಿ ನಿರ್ಣಯಗಳು ಮುಂದಿನಂತಿದ್ದವು ಅವುಗಳೆಂದರೆ ಮೊದಲನೆಯದಾಗಿ ಈಗಾಗಲೇ ಆರರಿಂದ ಹತ್ತು ವರ್ಷದವರಲ್ಲಿ ಶೇಕಡಾ ೩೩ರಷ್ಟು ಹುಡುಗರು ಶಿಕ್ಷಣ ಪಡೆಯುತ್ತಿರುವ ಭಾಗಗಳಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಬೇಕು. ಎರಡನೆಯದಾಗಿ ಇದಕ್ಕೆ ತಗಲುವ ವೆಚ್ಚವನ್ನು ಸ್ಥಳೀಯ ಸಂಸ್ಥೆಗಳು ಹಾಗೂ ಸರಕಾರವು ೧:೨ ಪ್ರಮಾಣದಲ್ಲಿ ವಹಿಸಿಕೊಳ್ಳಬೇಕು. ಮೂರನೆಯದಾಗಿ ಕೇಂದ್ರದಲ್ಲಿ ಶಿಕ್ಷಣದ ಕಾರ್ಯದರ್ಶಿ ಹುದ್ದೆಯನ್ನು ಕಲ್ಪಿಸಬೇಕು. ನಾಲ್ಕನೆಯದಾಗಿ ಅಯವ್ಯಯದ ಅಂದಾಜು ಪಟ್ಟಿಯೊಡನೆ ಶಿಕ್ಷಣದ ಪ್ರಗತಿಯ ವರದಿಯನ್ನು ಶಾಸನ ಸಭೆಯ ಮುಂದೆ ಇಡಬೇಕು ಎಂಬ ನಿರ್ಣಯಗಳನ್ನು ಮಂಡಿಸಿದರು. ಆದರೆ ಸರಕಾರ ಆ ಬಗ್ಗೆ ಎಚ್ಚರಿಕೆಯಿಂದ ಪರಿಶೀಲಿಸುವುದಾಗಿ ನೀಡಿದ ಭರವಸೆಯ ಮೇಲೆ ಆ ನಿರ್ಣಯವನ್ನು ಹಿಂದಕ್ಕೆ ತೆಗೆದುಕೊಳ್ಳಲಾಯಿತು. ಸರಕಾರವು ಗೋಖಲೆಯವರ ಕೊನೆಯ ಮೂರು ಸೂಚನೆಗಳನ್ನು ಕಾರ್ಯಗತಗೊಳಿಸಿತು. ಹಾಗೂ ಮೊದಲನೆಯ ಎರಡು ಸೂಚನೆಗಳನ್ನು

ತಿರಸ್ಕರಿಸಿತು ಸರಕಾರ ಜನತೆ ಆಶಿಸಿದಷ್ಟು ತೀವ್ರಗತಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ವಿಸ್ತರಿಸಲಾರದದನ್ನು ಕಂಡ ಗೋಖಲೆಯವರು ಮತ್ತೆ ೧೯೧೧ರ ಮಾರ್ಚ್ ೧೬ ರಂದು ತಮ್ಮ ಖಾಸಗಿ ರೀತಿಯ ಮಸೂದೆಯನ್ನು ಶಾಸನ ಸಭೆಯಲ್ಲಿ ಮಂಡಿಸಿದರು. ಕ್ರಮವಾಗಿ ಪ್ರಾಥಮಿಕ ಕ್ಷೇತ್ರದಲ್ಲಿ ಕಡ್ಡಾಯ ಶಿಕ್ಷಣ ಆಚರಣೆಗೆ ಬರುವಂತೆ ಮಾಡುವುದು ಅವರ ಉದ್ದೇಶವಾಗಿತ್ತು. ಆದರೆ ಕಡ್ಡಾಯ ಶಿಕ್ಷಣ ಯೋಜನೆಗೆ ರಾಷ್ಟ್ರ ಸಿದ್ಧವಾಗಿಲ್ಲವೆಂದು ಮಸೂದೆಗೆ ಶಾಸನ ಸಭೆಯ ಅಂಗೀಕಾರವನ್ನು ಪಡೆಯಲಾಗಲಿಲ್ಲ. ಮಸೂದೆ ಬಿದ್ದುಹೋದರೂ ಸರಕಾರದ ಮೇಲೆ ಅದು ನಿರ್ದಿಷ್ಟ ಪರಿಣಾಮ ಮೂಡಿಸಿತ್ತು. ವಿದ್ಯಾವಂತ ಭಾರತೀಯರು ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಮಹತ್ವ ಅರಿತುಕೊಂಡರು. ಪ್ರಾಥಮಿಕ ಶಿಕ್ಷಣದ ಚಳುವಳಿ ದೇಶಾದ್ಯಂತ ಹರಡಿತು. ೧೯೧೨ರಲ್ಲಿ ವಾಯುವ್ಯ ಪ್ರಾಂತ್ಯದಲ್ಲಿ ಪ್ರಾಥಮಿಕ ಶಿಕ್ಷಣವನ್ನು ಉಚಿತ ಮಾಡಲಾಯಿತು. ಸಂಯುಕ್ತ ಪ್ರಾಂತ್ಯಗಳಾದ ಪಂಜಾಬ್, ಅಸ್ಸಾಂ ಮತ್ತು ಮಧ್ಯ ಪ್ರಾಂತ್ಯಗಳಲ್ಲೂ ಶಿಕ್ಷಣವನ್ನು ಉಚಿತವಾಗಿ ನೀಡುವ ಪ್ರಯತ್ನ ಜಾರಿಗೆ ಬಂದಿತು.

ಮೈಸೂರು ಪ್ರಾಂತ್ಯದಲ್ಲಿಯೂ ಇದೇ ರೀತಿಯ ಪ್ರಯತ್ನಗಳು ಸ್ವಾತಂತ್ರ್ಯ ಪೂರ್ವದಲ್ಲಿ ನಡೆದಿವೆ. ಮೈಸೂರಿನ ಮಹಾರಾಜರು ಶಿಕ್ಷಣದ ಸಾರ್ವತ್ರೀಕರಣಕ್ಕೆ ಇಂತಹದೇ ಪ್ರಯತ್ನಗಳನ್ನು ನಡೆಸಿದ್ದರೆಂಬುದು ಗಮನಾರ್ಹ. ೧೮೫೪ರ ವುಡ್ಸ್ ಆಯೋಗದ ವರದಿಯನ್ನು ಆಧರಿಸಿ ರಾಜ್ಯಕ್ಕೆ ಒಂದು ಶಿಕ್ಷಣ ಯೋಜನೆಯನ್ನು ಅಂದಿನ ನ್ಯಾಯಾಂಗ ಆಯುಕ್ತರು ಸಿದ್ಧಪಡಿಸಿ ೧೮೫೭ರಲ್ಲಿ ಭಾರತ ಸರ್ಕಾರದ ಅನುಮೋದನೆ ಪಡೆದರು. ೧೮೬೬ರಲ್ಲಿ ಶಿಕ್ಷಣ ಇಲಾಖೆಯನ್ನು ಬೇರ್ಪಡಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ವ್ಯಾಪ್ತಿಗೆ ತರುವುದರ ಮೂಲಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಚಾಲನೆ ನೀಡಲಾಯಿತು. ಇಲ್ಲಿ ನಾವು ಪರಿಗಣಿಸಲೇಬೇಕಾದ ವಿಶೇಷ ಅಂಶವೆಂದರೆ ೧೯೧೧ ರಲ್ಲಿ ಪ್ರಾಥಮಿಕ ಶಿಕ್ಷಣ ಉಚಿತವೆಂದು ಸಾರುವ ಒಂದು ರಾಜಾಜ್ಞೆಯನ್ನು ಹೊರಡಿಸಿರುವುದನ್ನು ನಾವು ಗಮನಿಸಬಹುದಾಗಿದೆ. ಮುಂದುವರಿದು ೧೯೩೪ರಲ್ಲಿ ಶಿಕ್ಷಣವನ್ನು ಕಡ್ಡಾಯಗೊಳಿಸುವ ಕಾಯಿದೆಯನ್ನು ಜಾರಿಗೊಳಿಸಲಾಯಿತು.

ದೇಶದಲ್ಲಿ ಶಿಕ್ಷಣ ಸೌಲಭ್ಯದ ವಿಸ್ತರಣೆಗಾಗಿ ಎಲ್ಲ ಕಡೆಯಿಂದಲೂ ಬೇಡಿಕೆಗಳು ಬರುತ್ತಿರುವಾಗ ಸರಕಾರ ತನ್ನ ನೀತಿಯನ್ನು ಪುನರ್ ಪರಿಶೀಲಿಸುವ ಅಗತ್ಯವನ್ನು ಕಂಡುಕೊಂಡಿತು. ಗೋಖಲೆಯವರ ಮಸೂದೆಯನ್ನು ತಿರಸ್ಕರಿದ್ದರೂ ಸಾರ್ವತ್ರಿಕ ಶಿಕ್ಷಣಕ್ಕಾಗಿ ದೇಶದಲ್ಲಿ ಕೇಳಿಬರುತ್ತಿದ್ದ ಕೂಗನ್ನು ಕಡೆಗಣಿಸುವಂತಿರಲಿಲ್ಲ. ಆದ್ದರಿಂದ ಯಾವುದಾದರೂ ಕ್ರಮ ಕೈಗೊಳ್ಳಬೇಕಾಗಿತ್ತು. ಅದಕ್ಕೊಂದು ಸಂದರ್ಭ ಒದಗಿತು ೧೯೧೨ರಲ್ಲಿ ಚಕ್ರವರ್ತಿ ೫ನೆಯ ಜಾರ್ಜ್ ದೊರೆ ಭಾರತಕ್ಕೆ ಸಂದರ್ಶನವಿತ್ತನು. ದೆಹಲಿಯಲ್ಲಿ ದರ್ಬಾರು ನಡೆಸಿದ ಮೇಲೆ ದೆಹಲಿಯಲ್ಲಿ ಹಲವು ಪ್ರಮುಖ ಎನ್ನಬಹುದಾದ ಆಡಳಿತದ ಬದಲಾವಣೆಗಳಾದವು. ಜನತಾ ಶಿಕ್ಷಣಕ್ಕಾಗಿ ೫೦ ಲಕ್ಷ ರೂಪಾಯಿ ಆವರ್ತ ಧನವನ್ನಾಗಿ ಮೀಸಲಿಟ್ಟಿತು. ಆ ಸಂದರ್ಭದಲ್ಲಿ ೧೯೧೩ ರ ಫೆಬ್ರವರಿ ೨೧ ರಂದು ಶಿಕ್ಷಣದ ಬಗ್ಗೆ ತನ್ನ ನೀತಿಯನ್ನು ಸ್ಪಷ್ಟಪಡಿಸುವ ನಿರ್ಣಯವನ್ನು ಪ್ರಕಟಿಸಿತು. ಅದರಲ್ಲಿ ಪ್ರಾಥಮಿಕ ಶಿಕ್ಷಣದ ವಿಸ್ತೀರ್ಣಕ್ಕೂ, ಗುಣವರ್ಧನಕ್ಕೂ ನೆರವಾಗುವಂತಹ ತತ್ವಗಳನ್ನು ಅನುಸರಿಸುವುದಾಗಿ ಪ್ರಕಟಿಸಿತು. ಅವುಗಳೆಂದರೆ ಕಿರಿಯ ಪ್ರಾಥಮಿಕ ಶಿಕ್ಷಣಕ್ಕೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಬೇಕು. ಮಕ್ಕಳಿಗೆ ಓದು, ಬರಹ, ಅಂಕಗಣಿತಗಳ ಜೊತೆಗೆ ಚಿತ್ರಲೇಖನ, ಗ್ರಾಮದ ನಕ್ಷೆ, ಪ್ರಕೃತಿ ಪಾಠ, ಅಂಗ ಸಾಧನೆ ಕಲಿಸಬೇಕು. ಹಿರಿಯ ಪ್ರಾಥಮಿಕ ಶಾಲೆಗಳನ್ನು ಸೂಕ್ತವಾದಡೆಗಳಲ್ಲಿ ಆರಂಭಿಸಬೇಕು. ಅಗತ್ಯವಾದಡೆಗಳಲ್ಲಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಮೇಲ್ದರ್ಜೆಗೆ ಏರಿಸಬೇಕು. ಖಾಸಗೀ ಶಾಲೆಗಳ ಸ್ಥಳದಲ್ಲಿ ಸ್ಥಳೀಯ ಸಂಸ್ಥೆಗಳ ಶಾಲೆಗಳನ್ನು ಆರಂಭಿಸಬೇಕು. ಮಕ್ತಾಬ್ ಮತ್ತು ಪಾಠಶಾಲೆಗಳಿಗೆ ಸೂಕ್ತ ಅನುದಾನವನ್ನು ನೀಡಬೇಕು.

ಖಾಸಗೀ ಶಾಲೆಗಳ ಪರೀಕ್ಷೆ ಮತ್ತು ಕಾರ್ಯ ನಿರ್ವಹಣೆ ಹೆಚ್ಚು ದಕ್ಷತೆಯಿಂದ ನಡೆಯಬೇಕು. ನಗರ ಮತ್ತು ಗ್ರಾಮಾಂತರ ಪ್ರದೇಶಗಳ ಶಾಲೆಗಳ ಪಠ್ಯಕ್ರಮದಲ್ಲಿ ವ್ಯತ್ಯಾಸ ಕಲ್ಪಿಸುವುದು ಭಾರತದಲ್ಲಿ ಕಾರ್ಯತಹ ಸಫಲವಾಗುವುದಿಲ್ಲ ಆದರೆ ಗ್ರಾಮಾಂತರ ಪ್ರದೇಶದ ಶಾಲೆಗಳಲ್ಲಿ ಭೂ ವಿವರಣೆ, ಪ್ರವಾಸ ಇತ್ಯಾದಿ ಪಾಠಗಳಿಗೆ ಹೆಚ್ಚಿನ ಅವಕಾಶ ಕಲ್ಪಿಸಬಹುದು. ಈ ನೀತಿಯ ಪ್ರಕಟಣೆಯಿಂದ ಪ್ರಾಥಮಿಕ ಶಿಕ್ಷಣದಲ್ಲಿ ಬದಲಾವಣೆಯನ್ನು ಕಾಣಲು ಸಹಕಾರಿಯಾಯಿತು.

೧೯೧೭ ರಲ್ಲಿ ಸ್ಯಾಂಡ್ಲರ್ ಆಯೋಗವು ಘೋಷಾ ಹುಡಗಿಯರ ಸಲುವಾಗಿ ಶಾಲೆಗಳನ್ನು ವ್ಯವಸ್ಥೆ ಮಾಡಬೇಕೆಂದು ಶಿಫಾರಸ್ಸು ಮಾಡಿತು. ೧೯೧೮ರ ನಂತರ ಅನೇಕ ಪ್ರಾಂತೀಯ ಸರಕಾರಗಳು ಜಾರಿಗೆ ತಂದ ಕಾನೂನುಗಳ ಪರಿಣಾಮವಾಗಿ ಪ್ರಾಥಮಿಕ ಶಿಕ್ಷಣ ಪ್ರಗತಿಯತ್ತ ಸಾಗಿತು. ಈ ಅವಧಿಯಲ್ಲಿ ಪ್ರಾಥಮಿಕ ಶಾಲೆಗಳ ಸಂಖ್ಯೆ ಹಾಗೂ ವಿದ್ಯಾರ್ಥಿಗಳ ಸಂಖ್ಯೆ ತೀವ್ರಗತಿಯಲ್ಲಿ ಬೆಳೆಯಿತು.

೧೯೨೭ರಲ್ಲಿ ಸೈಮನ್ ಕಮಿಶನ್‌ಗೆ ದೇಶದ ಶಿಕ್ಷಣದ ವರದಿಯನ್ನು ತಯಾರಿಸುವಲ್ಲಿ ಸಹಾಯ ಮಾಡಲು ಒಂದು ಸಮಿತಿಯನ್ನು ರಚಿಸಿ ಇದಕ್ಕೆ ಫಿಲಿಫ್ ಹಾರ್ಟಾಗ್‌ರವರನ್ನು ಅಧ್ಯಕ್ಷರನ್ನಾಗಿ ನೇಮಿಸಿತು.ಸಮಿತಿಯು ಶಿಕ್ಷಣದ ವಿವಿಧ ಅಂಶಗಳನ್ನು ಅಭ್ಯಸಿಸಿ ೧೯೨೯ ರ ಸೆಪ್ಟಂಬರ್‌ನಲ್ಲಿ ತನ್ನ ವರದಿಯನ್ನು ಸಲ್ಲಿಸಿತು. ಸಮಿತಿಯು ತನ್ನ ವರದಿಯಲ್ಲಿ ೧೯೧೭ರಿಂದ ೨೭ರ ದಶಮಾನದಲ್ಲಾದ ಶಿಕ್ಷಣದ ಪ್ರಗತಿಯ ಚಿತ್ರಣವನ್ನು ಕೊಟ್ಟಿತು. ಈ ಅವಧಿಯಲ್ಲಿ ಶಿಕ್ಷಣ ಗುಣದಲ್ಲೂ ಮತ್ತು ಪ್ರಮಾಣದಲ್ಲೂ ವರ್ಧಿಸಿರುವುದೆಂದು ಒಪ್ಪಿಕೊಂಡು, ರಾಷ್ಟ್ರ ನಿರ್ಮಾಣದ ಬಹು ಕಠಿಣ ಕಾರ್ಯದಲ್ಲಿ ಶಿಕ್ಷಣ ರಾಷ್ಟ್ರೀಯ ಆದ್ಯತೆಯ ಪ್ರಮುಖ ಅಂಶ ಎಂಬುದನ್ನು ಅರಿತುಕೊಂಡಿರುವುದನ್ನು ಉಲ್ಲೇಖಿಸಿದೆ. ಶ್ರೀಮಂತರು ಶಿಕ್ಷಣ ಪಡೆಯುವುದರ ಜೊತೆಗೆ ಬಡವರು, ಮುಸ್ಲೀಮರು, ಮಹಿಳೆಯರು, ಹರಿಜನ, ಗಿರಿಜನರು ಅದರ ಸೌಲಭ್ಯವನ್ನು ಪಡೆದುಕೊಳ್ಳುತ್ತಿರುವ ಅಂಶವನ್ನು ಎತ್ತಿ ತೋರಿಸಿತು ಹಾಗೂ ಪ್ರಾಥಮಿಕ ಶಿಕ್ಷಣದ ಆತುರತೆಯನ್ನು ವಿರೋಧಿಸಿತ್ತಾದರೂ ಕಡ್ಡಾಯ ಶಿಕ್ಷಣವನ್ನು ಮುಂದೆ ಎಂದಾದರೂ ಜಾರಿಗೆ ತರಲು ಭೂಮಿಕೆಯನ್ನು ಸಿದ್ಧಗೊಳಿಸಬೇಕೆಂದು ಸಲಹೆ ಮಾಡಿತು. ಪ್ರಾಥಮಿಕ ಹಂತದಲ್ಲಿ ಅಪವ್ಯಯ ಮತ್ತು ನಿಲುಗಡೆ ಆಗದಂತೆ ನೋಡಿಕೊಳ್ಳಬೇಕೆಂದು ಒತ್ತಾಯಿಸಿತು.

ನಂತರ ೧೯೨೧ ರಿಂದ ಜಾರಿಯಲ್ಲಿದ್ದ ದ್ವಿದಳ ಸರಕಾರ ಪದ್ಧತಿ ೧೯೩೫ರ ಭಾರತ ಸರಕಾರದ ಶಾಸನದಿಂದ ಕೊನೆಗೊಂಡಿತು. ಈ ಅವಧಿಯಲ್ಲಿ ಅಂದರೆ ೧೯೨೧ ರಿಂದ ೧೯೩೬ ರ ಅವಧಿಯಲ್ಲಿ ಬ್ರಿಟಿಷ್ ಇಂಡಿಯಾದ ಅನೇಕ ಪ್ರಾಂತ್ಯಗಳಲ್ಲಿ ಕಡ್ಡಾಯ ಶಿಕ್ಷಣ ಜಾರಿಗೆ ಬಂದು ಶಾಲೆಗಳ ಮತ್ತು ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿತು. ಪಟ್ಟಣಗಳಲ್ಲಿ ಪ್ರಗತಿ ಹೆಚ್ಚಾಗಿ ಕಂಡು ಬಂದಿತು. ಪಂಜಾಬ್‌ನಲ್ಲಿ ಮಾತ್ರ ಹಳ್ಳಿಗಳಲ್ಲಿಯೂ ಕಡ್ಡಾಯ ಶಿಕ್ಷಣ ಯೋಜನೆ ಯಶಸ್ವಿಯಾಯಿತು. ೧೯೩೭ರಲ್ಲಿ ಪ್ರಾಂತೀಯ ಸ್ವಯಂ ಆಡಳಿತ ಜಾರಿಗೆ ಬಂದಾಗ ಅನೇಕ ರಾಜ್ಯಗಳಲ್ಲಿ ಗದ್ದುಗೆಯನ್ನೇರಿದ ಕಾಂಗ್ರೇಸ್ ಮುಖಂಡರು ತಮ್ಮ ತಮ್ಮ ಪ್ರಾಂತಗಳಲ್ಲಿ ಕಡ್ಡಾಯ ಪ್ರಾಥಮಿಕಶಿಕ್ಷಣವನ್ನು ಜಾರಿಗೆ ತರಲು ಪ್ರಯತ್ನಿಸಿದರು. ಆದರೆ ಹಣದ ಕೊರತೆಯಿಂದ ಅವರ ಆಸೆಗೆ ಅಡ್ಡಿಯುಂಟಾಯಿತು. ಈ ಸಮಸ್ಯೆಗೆ ಪರಿಹಾರ ಕಂಡುಹಿಡಿಯದ ಹೊರತು ರಾಷ್ಟ್ರ ಪುನರ್ ನಿರ್ಮಾಣಕ್ಕೆ ಅವಶ್ಯಕವಾದ ಕಡ್ಡಾಯ ಪ್ರಾಥಮಿಕ ಶಿಕ್ಷಣವನ್ನು ನೀಡುವುದು ಅಸಾಧ್ಯವೆಂದು ಗಾಂಧೀಜಿಯವರು ಭಾವಿಸಿದರು. ಆ ದಿಸೆಯಲ್ಲಿ ಅವರು ಮಾಡಿದ ಪ್ರಯತ್ನದ ಫಲಶೃತಿಯೇ ವರ್ಧಾ ಯೋಜನೆ ಎಂಬುದಾಗಿ ಪ್ರಖ್ಯಾತಿ ಹೊಂದಿರುವ ೧೯೩೭ರಲ್ಲಿ ಮೂಲ ಶಿಕ್ಷಣದ ಉದಯವಾಯಿತು. ಮಹಾತ್ಮ ಗಾಂಧೀಜಿಯವರು ಈ ಮೂಲ ಶಿಕ್ಷಣ ಯೋಜನೆಯ ಪರಿಣಾಮಗಳನ್ನು ಪರಿಶೀಲಿಸುವುದಕ್ಕಾಗಿ ೧೯೩೭ರ ಅಕ್ಟೋಬರ್ ೨೨ ಮತ್ತು ೨೩ರಂದು ವರ್ಧಾದಲ್ಲಿ

ಸಮ್ಮೇಳನವನ್ನು ಕರೆದಿದ್ದರು. ಈ ಯೋಜನೆಯನ್ನು ಸಮ್ಮೇಳನದಲ್ಲಿ ಅಂಗೀಕರಿಸಿತು. ಡಾ, ಝಕೀರ ಹುಸೇಬರವರ ಅಧ್ಯಕ್ಷತೆಯಲ್ಲಿ ಅದರ ವಿವರಗಳ ವರದಿಯನ್ನು ಸಲ್ಲಿಸುವುದಕ್ಕಾಗಿ ಒಂದು ಸಮಿತಿಯನ್ನು ನೇಮಿಸಿತು. ಎರಡು ತಿಂಗಳ ಅವಧಿಯಲ್ಲಿ ಈ ಸಮಿತಿಯು ವರದಿಯನ್ನು ಸಲ್ಲಿಸಿತು. ದೇಶದ ಅನೇಕ ಪ್ರಾಂತ್ಯಗಳಲ್ಲಿ ಈ ಯೋಜನೆಯನ್ನು ಅನುಷ್ಠಾನಕ್ಕೆ ತರಲಾಯಿತು. ೧೯೩೯ ಸೆಪ್ಟಂಬರ್‌ನಲ್ಲಿ ಕಾಂಗ್ರೆಸ್ ಮಂತ್ರಿಗಳು ವಿವಿಧ ಪ್ರಾಂತ್ಯಗಳಲ್ಲಿ ರಾಜಿನಾಮೆಯನ್ನು ಸಲ್ಲಿಸಿದರು. ಇದರಿಂದಾಗಿ ಯೋಜನೆಯ ಅನುಷ್ಠಾನ ನಿಂತಿತು. ೧೯೪೬ರಲ್ಲಿ ಜವಾಹರಲಾಲ ನೆಹರುರವರ ಅಧ್ಯಕ್ಷತೆಯಲ್ಲಿ ಮಧ್ಯಾವಧಿ ಯೋಜನೆಯನ್ನು ಸರ್ಕಾರವು ರೂಪಿಸಿತು. ಬಿಹಾರ ರಾಜ್ಯದ ಚಂಪಾರಣ್ಯ ಜಿಲ್ಲೆಯಲ್ಲಿ ಮಾತ್ರ ಈ ಯೋಜನೆಯು ನಿರಂತರವಾಗಿ ನಡೆಯಿತು.

ದೀರ್ಘ ಮತ್ತು ನಿರಂತರ ಹೋರಾಟದ ಫಲವಾಗಿ ೧೯೪೪ರಲ್ಲಿ ಬ್ರಿಟಿಷ್ ಸರ್ಕಾರವು ಅಂತಿಮವಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಲು ತಾತ್ವಿಕ ಒಪ್ಪಿಗೆಯನ್ನು ನೀಡಿತು. ೧೯೪೪ರಲ್ಲಿ ಎರಡನೇ ಜಾಗತಿಕ ಯುದ್ಧದ ನಂತರ ರೂಪಿಸಲಾದ ಶೈಕ್ಷಣಿಕ ಅಭಿವೃದ್ಧಿ ಯೋಜನೆಯಲ್ಲಿ ಕೇಂದ್ರ ಸರಕಾರದ ಶೈಕ್ಷಣಿಕ ಸಲಹೆಗಾರರಾಗಿದ್ದ ಸರ್. ಜಾನ್ ಸಾರ್ಜೆಂಟ್ ಅವರು ೮ ನೇ ತರಗತಿಯವರೆಗೆ ಎಲ್ಲಾ ಮಕ್ಕಳಿಗೂ ೩೫ ವರ್ಷದ ಅವಧಿಯಲ್ಲಿ ಅಂದರೆ ೧೯೮೪ರ ವೇಳೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಈಡೇರಿಸುವುದಾಗಿ ತಿಳಿಸಿತು. ಆದರೆ ಸುದೀರ್ಘ ಮತ್ತು ನಿರಂತರ ಹೋರಾಟದ ಫಲವಾಗಿ ಈಡೇರಿದ ಈ ಬೇಡಿಕೆಯನ್ನು ಪೂರ್ಣಗೊಳಿಸಲು ೪೦ ವರ್ಷಗಳ ಅವಧಿಯ ಈ ಪ್ರಸ್ತಾವನೆಯನ್ನು ರಾಷ್ಟ್ರೀಯವಾದಿಗಳು ತಿರಸ್ಕರಿಸಿದರು. ನಂತರ ರಚನೆಯಾದ ಬಿ.ಜಿ.ಖೇರ್ ಸಮಿತಿಯು ತನ್ನ ವರದಿಯಲ್ಲಿ ಮುಂದಿನ ಹದಿನಾರು ವರ್ಷಗಳ ಒಳಗಾಗಿ ಅಂದರೆ ೧೯೬೦ರ ವೇಳೆಗೆ ಈ ಕೆಲಸವು ಪೂರ್ಣಗೊಳ್ಳಬೇಕೆಂಬ ಪ್ರಸ್ತಾವನೆಯನ್ನು ಮುಂದಿಟ್ಟಿತು. ಸ್ವಾತಂತ್ರ್ಯ ನಂತರ ಸಂವಿಧಾನ ರಚನಾ ಸಂದರ್ಭದಲ್ಲಿ ಕಾಲಮಿತಿಯನ್ನು ನಿರ್ಧರಿಸುವಾಗ ಈ ಶಿಫಾರಸ್ಸನ್ನು ಮುಖ್ಯವಾಗಿ ಪರಿಗಣಿಸಲಾಯಿತು.

"ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂಬ ಬೇಡಿಕೆಯ ಸ್ವಾತಂತ್ರ್ಯ ಚಳುವಳಿಯ ಒಂದು ಪ್ರಮುಖ ಬೇಡಿಕೆಯಾಗಿ ರೂಪಗೊಂಡಿದ್ದು, ಈ ಕಾಲಘಟ್ಟದಲ್ಲಿ ಗಮನಿಸಬೇಕಾದ ಒಂದು ಪ್ರಮುಖ ಅಂಶವಾಗಿದೆ. ಭಾರತೀಯ ಸಮಾಜದಲ್ಲಿದ್ದ ಅಸಮಾನತೆ ಮತ್ತು ಅಸ್ಪೃಶ್ಯತೆ ಅದರಲ್ಲೂ ವಿಶೇಷವಾಗಿ ಬಹುಸಂಖ್ಯಾತ ಜನರನ್ನು ಶಿಕ್ಷಣದಿಂದ ಹೊರಗಿಡುವ ಹುನ್ನಾರವು ಒಂದು ವರ್ಗ ರಾಜಕೀಯ, ಸಾಮಾಜಿಕ ಮತ್ತು ಸಾಂಸ್ಕೃತಿಕ ಒಡೆತನವನ್ನು ಸ್ಥಾಪಿಸುವ ಉದ್ದೇಶ ಹೊಂದಿತ್ತೆಂಬುದನ್ನು ನಾವು ಮನಗಾಣಬೇಕು. ನಂತರ ಇದನ್ನೇ ಮುಂದುವರೆಸಿದ ಬ್ರಿಟಿಷ್ ಆಡಳಿತವು ಶಿಕ್ಷಣದ ಮೂಲಕ ರಾಜಕೀಯ ಆಳ್ವಿಕೆಯನ್ನು ಗಟ್ಟಿಗೊಳಿಸುವುದರ ಜೊತೆಗೆ ನಿರಂತರವಾಗಿ ಮುಂದುವರಿಸಿಕೊಂಡು ಹೋಗುವ ಉದ್ದೇಶದಿಂದ ಉಪಯೋಗಿಸಿಕೊಂಡಿತೆಂಬುದನ್ನು ನಾವು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕು.ಕ್ರಮೇಣ ಬಲಿಷ್ಠ ರಾಷ್ಟ್ರೀಯ ನೇತಾರರ ಕಳಕಳಿ ಮತ್ತು ಭಿನ್ನ ನಿಲುವಿನ ಪರಿಣಾಮವಾಗಿ ೧೪ ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂಬ ಬೇಡಿಕೆಯು ರಾಷ್ಟ್ರಮಟ್ಟದಲ್ಲಿ ಸರ್ವಸಮ್ಮತ ಬೇಡಿಕೆಯಾಗಿ ಹೊರಹೊಮ್ಮಿತು. ಸ್ವತಂತ್ರ ಭಾರತದಲ್ಲಿ ಇದೊಂದು ಕಾಲಮಿತಿಯ ಗುರಿಯಾಗಬೇಕೆಂಬುದು, ಸ್ವತಂತ್ರ ಚಳುವಳಿಯ ಪ್ರಮುಖ ಆಶಯವಾಗಿತ್ತೆಂಬುದನ್ನು ನಾವೆಲ್ಲರೂ ಅರಿತು ಕರಗತಮಾಡಿಕೊಳ್ಳಬೇಕು. ತ್ಯಾಗ ಬಲಿದಾನಗಳ ಮತ್ತು ಸತತ ಹೋರಾಟದ ಫಲವಾಗಿ ಸಂವಿಧಾನದಲ್ಲಿ ಸೇರ್ಪಡೆಯಾದ ಈ ಗುರಿಯನ್ನು ಈಡೇರಿಸಲು ನಾವೆಲ್ಲರೂ ಕಂಕಣ ಬದ್ಧರಾಗಬೇಕು.

೨.೩ ಸ್ವಾತಂತ್ರ್ಯ ನಂತರದ ಶಾಲಾ ಶಿಕ್ಷಣ ಸಾರ್ವತ್ರೀಕರಣ

ಈ ಭಾಗದಲ್ಲಿ ಸಂವಿಧಾನ ರಚನಾ ಕಾಲದಿಂದ ಇಲ್ಲಿಯವರೆಗೆ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯು ಬೆಳೆದು ಬಂದ ದಾರಿಯನ್ನು ಇಲ್ಲಿ ಸಂಕ್ಷಿಪ್ತವಾಗಿ ಚಿತ್ರಿಸಲಾಗಿದೆ. ಉಚಿತ ಮತ್ತು ಕಡ್ಡಾಯ ಶಿಕ್ಷಣದ ಗುರಿಯ ಜೊತೆಗೆ ಹತ್ತು ಹಲವು ಆಶಯಗಳನ್ನು ಹೊಂದಿದ್ದ ಸ್ವತಂತ್ರ ಭಾರತವು ತನ್ನದೇ ಆದ ಸಂವಿಧಾನವನ್ನು ರಚಿಸಿಕೊಳ್ಳುವ ಪ್ರಕ್ರಿಯೆ ಮೂಲಕ ಸಮಾಜವಾದಿ ಮತ್ತು ಜಾತ್ಯಾತೀತ ಭಾರತವನ್ನು ನಿರ್ಮಾಣ ಮಾಡುವ ಕೆಲಸವನ್ನು ಪ್ರಾರಂಭಿಸಿತು. ಸಂವಿಧಾನ ರಚನಾ ಸಮಿತಿಯಲ್ಲಿ ಸ್ವತಂತ್ರ ಭಾರತವು ಸಾಧಿಸಬೇಕಾದ ಗುರಿ ಮತ್ತು ಸಾಗಬೇಕಾದ ದಾರಿಯ ಬಗ್ಗೆ ಸುದೀರ್ಘವಾದ ಚರ್ಚೆಗಳು ಅಂತಿಮ ಗುರಿಗಳನ್ನು ಸಂಕ್ಷಿಪ್ತವಾಗಿ ಸಂವಿಧಾನದ ಪೀಠಿಕೆಯಲ್ಲಿ ಸೇರಿಸಿರುವುದರ ಮೂಲಕ ಭಾರತವು ಸಾರ್ವಭೌಮ, ಸಮಾಜವಾದಿ ಮತ್ತು ಜಾತ್ಯಾತೀತ ಗಣರಾಜ್ಯವಾಗಿ ಹೊರಹೊಮ್ಮಬೇಕೆಂಬ ವಿಶಾಲವಾದ ತಳಹದಿಯ ಮೇಲೆ ರಚನೆಯಾಯಿತು. ಸಂವಿಧಾನ ರಚನಾ ಸಭೆಯಲ್ಲಿ ಮೂಲಭೂತ ಹಕ್ಕುಗಳಿಗೆ ಸಂಬಂಧಿಸಿದಂತೆ ರಚನೆಯಾಗಿದ್ದ ಉಪಸಮಿತಿಯು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಮೂಲಭೂತ ಹಕ್ಕುಗಳ ಪಟ್ಟಿಯಲ್ಲಿ ಸೇರಿಸಿತು. ಅದರಂತೆ ಖಂಡ ೨೩ರ ಅನ್ವಯ 'ಪ್ರತಿಯೊಬ್ಬ ನಾಗರಿಕನು ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯುವ ಹಕ್ಕನ್ನು ಹೊಂದಿದ್ದು ಇದನ್ನು ನೀಡುವ ಜವಾಬ್ದಾರಿಯು ರಾಜ್ಯದ್ದಾಗಿರುತ್ತದೆ. ಸಂವಿಧಾನ ಜಾರಿಯಾದ ೧೦ ವರ್ಷದ ಒಳಗಾಗಿ ೧೪ ವರ್ಷದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಲಾಗುವುದು' ಎಂದು ತಿಳಿಸಿತ್ತು. ಶಿಕ್ಷಣ ಒಂದು ಮೂಲಭೂತ ಹಕ್ಕಾಗಬೇಕೆಂಬ ಈ ಮೂಲಭೂತ ಹಕ್ಕುಗಳ ಉಪಸಮಿತಿಯ ಬೇಡಿಕೆಯನ್ನು ಸಂವಿಧಾನ ರಚನಾ ಸಲಹಾ ಸಮಿತಿಯು ತಿರಸ್ಕರಿಸಿತು. ನಂತರ ಖಂಡ ೨೩ನ್ನು ನ್ಯಾಯಾಲಯದ ಮೂಲಕ ಜಾರಿಗೊಳಿಸಲಾಗದ ಮೂಲಭೂತ ಹಕ್ಕುಗಳ (ನಂತರ ನಿರ್ದೇಶಕ ತತ್ವಗಳೆಂದು ಕರೆಯಲಾಯಿತು) ಪಟ್ಟಿಗೆ ವರ್ಗೀಕರಿಸಲಾಯಿತು. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಸಂಬಂಧಿಸಿದ ಕರಡು ಅನುಚ್ಛೇದ ೩೬ರ (ಸಂವಿಧಾನವು ಅಂತಿಮವಾಗಿ ರೂಪಗೊಂಡ ಸಂದರ್ಭದಲ್ಲಿ ಅನುಚ್ಛೇದದ ಸಂಖ್ಯೆ ೩೬ ಕ್ರಮವಾಗಿ ಅನುಚ್ಛೇದ ೪೫ ಆಗಿರುತ್ತದೆ) ಬಗ್ಗೆ ಸಂವಿಧಾನ ರಚನಾ ಸಮಿತಿಯಲ್ಲಿ ಚರ್ಚೆಯಾಗುತ್ತಿದ್ದ ಸಂದರ್ಭದಲ್ಲಿ ಪ್ರಮುಖವಾಗಿ ಎರಡು ತಿದ್ದುಪಡಿಗಳು ಪ್ರಸ್ತಾಪವಾದವು. ಅವುಗಳೆಂದರೆ, ಮೊದಲನೆಯದಾಗಿ ಅನುಚ್ಛೇದ ೩೬ರಲ್ಲಿ 'ಪ್ರತಿಯೊಬ್ಬ ನಾಗರೀಕನೂ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕನ್ನು ಹೊಂದಿದ್ದಾನೆ' ಎಂಬ ಭಾಗವನ್ನು ತೆಗೆದು ಹಾಕಬೇಕೆಂಬುದು, ಎರಡನೆಯದಾಗಿ ಶಿಕ್ಷಣ ಎಂಬ ಪದಕ್ಕೆ ಬದಲಾಗಿ ಪ್ರಾಥಮಿಕ ಶಿಕ್ಷಣ ಎಂಬ ಪದವನ್ನು ಸೇರಿಸುವುದು. ಈ ಎರಡು ತಿದ್ದುಪಡಿಗಳ ಬಗ್ಗೆ ನಡೆದ ಚರ್ಚೆಯ ಕೊನೆಯಲ್ಲಿ ಸಂವಿಧಾನ ರಚನಾ ಸಮಿತಿಯ ಅಧ್ಯಕ್ಷರಾದ ಡಾ. ಅಂಬೇಡ್ಕರ್‌ರವರು ಈ ಕೆಳಕಂಡಂತೆ ಉತ್ತರಿಸಿ "ನನ್ನ ಸ್ನೇಹಿತರಾದ ಮಿತ್ರಾರವರು ಪ್ರಸ್ತಾಪಿಸಿದ ತಿದ್ದುಪಡಿಯನ್ನು ನಾನು ಅಂಗೀಕರಿಸುತ್ತೇನೆ. ಅಂದರೆ ಈ ಪರಿಚ್ಛೇದದಲ್ಲಿ 'ಪ್ರತಿಯೊಬ್ಬ ನಾಗರೀಕನು ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕನ್ನು ಹೊಂದಿದ್ದಾನೆಂಬುದನ್ನು ತೆಗೆದುಹಾಕಲು ಸಮ್ಮತಿಸುತ್ತೇನೆ". ಆದರೆ, ಸ್ನೇಹಿತ ನಜರುದ್ದೀನ್ ಅಹಮದ್‌ರವರ ಪ್ರಸ್ತಾವನೆಯನ್ನು ಅಂಗೀಕರಿಸಲು ತಯಾರಿಲ್ಲ, ಅನುಚ್ಛೇದ ೩೬ರ ಉಳಿದ ಭಾಗದ ಉದ್ದೇಶ ಪ್ರಾಥಮಿಕ ಶಿಕ್ಷಣಕ್ಕೆ ಸೀಮಿತವಾಗಿದೆಯೆಂದು ಅವರು ಭಾವಿಸಿದಂತಿದೆ. ಆದರೆ ಅದು ಹಾಗಲ್ಲ. ಮೊದಲನೆಯ ತಿದ್ದುಪಡಿಯ ನಂತರ ೩೬ನೇಯ ಪರಿಚ್ಛೇದದ ಉದ್ದೇಶವೆಂದರೆ ಪ್ರತಿಯೊಂದು ಮಗುವು ೧೪ ವರ್ಷದವರೆಗೆ ಯಾವುದಾದರೂಂದು ಶೈಕ್ಷಣಿಕ ಸಂಸ್ಥೆಯಲ್ಲಿ ಕಲಿಯುತ್ತಿರಬೇಕೆಂಬುದನ್ನು ಸೂಚಿಸುತ್ತದೆ. ಅಲ್ಲಿ ೧೪ ವರ್ಷದ ಒಳಗಿನ ಮಕ್ಕಳನ್ನು ಕೆಲಸಕ್ಕೆ ನೇಮಿಸಿಕೊಂಡು ದುಡಿಸಿಕೊಳ್ಳುವುದನ್ನು ಪರಿಚ್ಛೇದ ೧೮ ನಿಷೇಧಿಸುತ್ತದೆ. ಸ್ಪಷ್ಟವಾಗಿ ಹೇಳಬೇಕೆಂದರೆ,

೧೪ ವರ್ಷದೊಳಗಿನ ಮಗು ಕೆಲಸ ಮಾಡುವುದು ನಿಷಿದ್ಧವೆಂದರೆ ಅಂತಹ ಮಗು ಯಾವುದಾದರೊಂದು ಶೈಕ್ಷಣಿಕ ಸಂಸ್ಥೆಯಲ್ಲಿ ಕಲಿಕೆಯಲ್ಲಿ ತೊಡಗಿರಬೇಕು. ಪರಿಚ್ಛೇದ ೩೬ರ ಉದ್ದೇಶ ಇದಾಗಿದೆ. ಆದ್ದರಿಂದ ನಾನು ಈ ತಿದ್ದುಪಡಿಯನ್ನು ತಿರಸ್ಕರಿಸುತ್ತೇನೆ." ಸಂವಿಧಾನ ರಚನಾ ಸಮಿತಿಯಲ್ಲಿನ ಚರ್ಚಾ ನಂತರ ಮೂಡಿದ ಒಮ್ಮತದ ಅಭಿಪ್ರಾಯವು ಪ್ರಜಾಪ್ರಭುತ್ವ ವ್ಯವಸ್ಥೆಯ ಬಲವರ್ಧನೆಗೆ ಶಾಲಾ ಶಿಕ್ಷಣದ ಅವಶ್ಯಕತೆ ಮತ್ತು ಮಹತ್ವವನ್ನು ಮನಗಂಡ ಸಂವಿಧಾನದ ರಚನಾಕಾರರು ೧೪ ವರ್ಷ ಒಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವ ಆಶಯದೊಂದಿಗೆ ಸಂವಿಧಾನದ ೪ನೇ ಅಧ್ಯಾಯದ ರಾಜ್ಯ ನಿರ್ದೇಶಕ ತತ್ವಗಳ ಅಡಿಯಲ್ಲಿ ೪೫ನೇ ವಿಧಿಯನ್ನು ಸೇರಿಸುವುದರ ಮೂಲಕ ಎಲ್ಲಾ ಮಕ್ಕಳಿಗೆ ಸಂವಿಧಾನ ಜಾರಿಯಾದ ೧೦ ವರ್ಷದ ಒಳಗಾಗಿ ಉಚಿತ ಮತ್ತು ಕಡ್ಡಾಯ ಸಂವಿಧಾನ ರಚನಾ ಪ್ರಕ್ರಿಯೆಯ ಸಂದರ್ಭದಲ್ಲಿ ಶಿಕ್ಷಣವನ್ನು ನೀಡುವ ವಾಗ್ದಾನವನ್ನು ಅಂಬೇಡ್ಕರ್ ಜನತೆಗೆ ನೀಡಿದ್ದರು. ೧೯೫೦ರಲ್ಲಿ ಸಂವಿಧಾನವನ್ನು ಅಂಗೀಕರಿಸಿದ ನಂತರ ೧೪ ವರ್ಷದ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡುವ ನಿಟ್ಟಿನಲ್ಲಿ ಅನೇಕ ಹೊಸ ಪ್ರಯತ್ನಗಳು ಪ್ರಾರಂಭವಾದವು. ಸಂವಿಧಾನದಲ್ಲಿನ ಇದೊಂದೆ ಕಾಲಮಿತಿಯ ಕಾರ್ಯಕ್ರಮ ಈ ಎಲ್ಲ ಹೋರಾಟದ ಒತ್ತಾಯದ ಫಲವಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಬೇಡಿಕೆಗೆ ಅಂತಿಮವಾಗಿ ಪುರಸ್ಕಾರ ದೊರೆತು ಅಂಗೀಕಾರವಾಯಿತು. ಆದರೆ, ಕಾಲ ಮಿತಿಯ ಬಗ್ಗೆ ತಕರಾರು ಉಂಟಾಗಿ ೧೯೮೪ರ ಬದಲು ೧೯೬೦ರ ಒಳಗೆ ಎಲ್ಲರಿಗೂ ಶಿಕ್ಷಣ ಸಿಗಬೇಕೆಂಬ ಪ್ರಸ್ತಾಪವನ್ನು ಮಾಡಲಾಯಿತು.೧೪ ವರ್ಷದ ಎಲ್ಲಾ ಮಕ್ಕಳಿಗೆ ಗುಣಾತ್ಮಕ ಉಚಿತ ಮತ್ತು ಕಡ್ಡಾಯ ಶಿಕ್ಷಣ ಸ್ವತಂತ್ರ ಚಳುವಳಿಯ ಭಾಗವಾಗಿ ಬೆಳೆದ ಜನರ ಒಂದು ಪ್ರಮುಖ ಆಶೋತ್ತರವಾಗಿತ್ತು. ಈ ಕೆಲಸ ೧೯೬೦ಕ್ಕೆ ಮುಗಿಯಬೇಕಿತ್ತು.ಆದರೆ ಬೇಡಿಕೆ ಈಡೇರಲಿಲ್ಲವಾದ್ದರಿಂದ ಸಂವಿಧಾನದ ಆಶಯ ಪೂರ್ಣಗೊಳ್ಳಲಿಲ್ಲ. ಸಂವಿಧಾನದ ಗುರಿಯನ್ನು ಈಡೇರಿಸಲು ವಿಫಲವಾದ ಈ ೧೦ ವರ್ಷಗಳ ಕಾಲಾವಧಿ ಅಂದರೆ ೧೯೫೧ ರಿಂದ ೧೯೬೧ರವರೆಗಿನ ಆಯವ್ಯಯ ಭಾಷಣಗಳನ್ನು ವಿಶ್ಲೇಷಿಸುತ್ತಾ ಹಿರಿಯ ಗಾಂಧೀವಾದಿ ಎಲ್.ಸಿ. ಜೈನ್‌ರವರು ಹೀಗೆನ್ನುತ್ತಾರೆ. "೧೦ ವರ್ಷಗಳ ಈ ಅವಧಿಯಲ್ಲಿ ಸಂವಿಧಾನದ ಪರಿಚ್ಛೇದ ೪೫ರ ಬಗ್ಗೆ ಪ್ರಸ್ತಾಪಿಸುವುದು ಆಗಿರಲಿ, ಕನಿಷ್ಠ ಸೌಜನ್ಯಕ್ಕಾದರೂ ಶಿಕ್ಷಣದ ಬಗ್ಗೆ ಉಲ್ಲೇಖವಾಗಿರುವುದು ಭಾಷಣಗಳಲ್ಲಿ ಎಲ್ಲಿಯೂ ಕಾಣುವುದಿಲ್ಲ. (ಸಂವಿಧಾನದ ಪ್ರಕಾರ ಶಿಕ್ಷಣ ಅತ್ಯಂತ ಮಹತ್ವದ ವಿಷಯವಾಗಿದ್ದರೂ ಸಂವಿಧಾನದಲ್ಲಿರುವ ಏಕೈಕ ಕಾಲಮಿತಿ ಕಾರ್ಯಕ್ರಮವೆಂದರೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಾತ್ರ) ನಮ್ಮ ಆಯವ್ಯಯಗಳು ಶಿಕ್ಷಣವನ್ನು ಪ್ರಮುಖ ವಿಷಯವನ್ನಾಗಿ ಪರಿಗಣಿಸಲೇ ಇಲ್ಲ. ಆಯವ್ಯಯಗಳ ದೃಷ್ಟಿಯಲ್ಲಿ ಶಿಕ್ಷಣ ಕೇವಲ ಕಾಕತಾಳೀಯ".

ಹೀಗಾಗಿ ಪ್ರಾಥಮಿಕ ಶಿಕ್ಷಣವನ್ನು ಒಳಗೊಂಡಂತೆ ಭಾರತದಲ್ಲಿ ನಮ್ಮ ಶಿಕ್ಷಣ ಪದ್ಧತಿ ಹೇಗಿರಬೇಕು ಮತ್ತು ಇಂದಿನ ಶಿಕ್ಷಣ ವ್ಯವಸ್ಥೆಯಲ್ಲಿನ ಲೋಪದೋಷಗಳೇನೆಂಬುದನ್ನು ತಿಳಿಯಲು ಶಿಕ್ಷಣ ವ್ಯವಸ್ಥೆಯ ಸಮಗ್ರ ಅಧ್ಯಯನಕ್ಕಾಗಿ ಜುಲೈ ೧೪, ೧೯೬೪ರಲ್ಲಿ ಭಾರತ ಸರ್ಕಾರವು ಶಿಕ್ಷಣ ಆಯೋಗವನ್ನು ರಚಿಸಿತು. ಡಾ. ಕೋಥಾರಿಯವರ ಅಧ್ಯಕ್ಷತೆಯಲ್ಲಿ ನೇಮಕಗೊಂಡ ಈ ಆಯೋಗವು ಕಾನೂನು ಮತ್ತು ವೈದ್ಯಕೀಯ ಶಿಕ್ಷಣವನ್ನು ಹೊರತುಪಡಿಸಿ ಉಳಿದೆಲ್ಲ ಹಂತಗಳ ಸಮಗ್ರ ಅಧ್ಯಯನ ನಡೆಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿತು. ಶಿಕ್ಷಣದ ಎಲ್ಲಾ ವಿಚಾರಗಳನ್ನು ಸಮಗ್ರವಾಗಿ ಅಧ್ಯಯನ ಮಾಡಿದ ಆಯೋಗವು ೧೪ ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ನೀಡಬೇಕೆಂಬ ಸಂವಿಧಾನದ ಗುರಿಯನ್ನು ಈಡೇರಿಸಬೇಕೆಂಬ ವಿಷಯವನ್ನು ಪುನರುಚ್ಚರಿಸಿತು ಜೊತೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕೇವಲ ಪರಿಣಾತ್ಮಕವಲ್ಲದೆ ಗುಣಾತ್ಮಕವಾಗಿಯೂ ಇರಬೇಕೆಂದು ಸೂಚಿಸಿತು. ಸಾರ್ವತ್ರೀಕರಣದ ಗುರಿಯು ಮುಂದಿನ ೨೦ ವರ್ಷಗಳಲ್ಲಿ ಪೂರ್ಣಗೊಳ್ಳಬೇಕೆಂಬ

ಆಶಯವನ್ನು ವ್ಯಕ್ತಪಡಿಸಿದ ಆಯೋಗವು ೧೯೭೬ರ ವೇಳೆಗೆ ೫ ವರ್ಷಗಳ ಗುಣಾತ್ಮಕ ಹಾಗೂ ಪರಿಣಾಮಕಾರಿ ಪ್ರಾಥಮಿಕ ಶಿಕ್ಷಣವನ್ನು ೧೯೮೬ರ ವೇಳೆಗೆ ಎಲ್ಲಾ ಮಕ್ಕಳಿಗೆ ೭ ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ನೀಡುವ ಕೆಲಸ ಪೂರ್ಣಗೊಳ್ಳಬೇಕೆಂದು ಶಿಫಾರಸ್ಸು ಮಾಡಿತು. ಈ ವರದಿಯನ್ನು ಆಧರಿಸಿ ೧೯೬೮ರಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಿ ಜಾರಿಗೊಳಿಸಲಾಯಿತು. ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು ಪುನರುಚ್ಚರಿಸುತ್ತಲ್ಲದೆ, ಗುರಿಯನ್ನು ಈಡೇರಿಸಲು ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ಸೂಚಿಸಿತು. ಈ ಗುರಿಸಾಧನೆಗಾಗಿ ಸಮಾನ ಶೈಕ್ಷಣಿಕ ಅವಕಾಶ, ಪ್ರಾದೇಶಿಕ ಅಸಮಾನತೆಗಳನ್ನು ತೊಡೆದುಹಾಕಲು ಕ್ರಮ, ಸಾರ್ವತ್ರಿಕ ಅವಕಾಶ ಮತ್ತು ಕನಿಷ್ಟ ಶೈಕ್ಷಣಿಕ ಸೌಲಭ್ಯಗಳನ್ನು ಅದರಲ್ಲೂ ವಿಶೇಷವಾಗಿ ಗ್ರಾಮೀಣ ಪ್ರದೇಶಗಳಲ್ಲಿ ಒದಗಿಸಲು ತುರ್ತು ಕ್ರಮಗಳ ಬಗ್ಗೆ ಪ್ರಸ್ತಾಪಿಸಲಾಯಿತು. ಶಿಕ್ಷಣ ನೀತಿಯು ಹೆಣ್ಣು ಮಕ್ಕಳ ಮತ್ತು ಹಿಂದುಳಿದ ವರ್ಗಗಳ ಶಿಕ್ಷಣಕ್ಕೆ ಶಾಲೆಯಲ್ಲಿಯೇ ಉಳಿಸಿಕೊಂಡು ನಿಗದಿತ ಶಿಕ್ಷಣದ ಹಂತವನ್ನು ಯಶಸ್ವಿಯಾಗಿ ಪೂರೈಸುವ, ಅಪವ್ಯಯ ಮತ್ತು ಕೊಳೆಯುವಿಕೆಯನ್ನು ತಡೆಗಟ್ಟಲು ಕೂಡಲೇ ಕಾರ್ಯಕ್ರಮಗಳನ್ನು ರೂಪಿಸಲು ಶಿಕ್ಷಣ ನೀತಿಯು ಒತ್ತು ನೀಡಿತು.

೧೯೭೨ರಲ್ಲಿ ಅತ್ಯಂತ ಹಿಂದುಳಿದ ಮತ್ತು ಅವಕಾಶ ವಂಚಿತ ಮಕ್ಕಳಿಗೆ ಶಿಕ್ಷಣ ನೀಡುವ ಸಲುವಾಗಿ ಕೇಂದ್ರ ಶಿಕ್ಷಣ ಸಲಹಾ ಮಂಡಳಿಯು (CABE) ಅರೆಕಾಲಿಕ ಅನೌಪಚಾರಿಕ ಶಿಕ್ಷಣವನ್ನು ನೀಡಬೇಕೆಂಬ ಶಿಫಾರಸ್ಸು ಮಾಡಿತು. ನಂತರ ೧೯೭೬ರಲ್ಲಿ ಸಂವಿಧಾನಕ್ಕೆ ೪೨ನೇ ತಿದ್ದುಪಡಿಯ ಮೂಲಕ ಶಿಕ್ಷಣವನ್ನು ಸಮವರ್ತಿಪಟ್ಟಿಗೆ ಸೇರಿಸಲಾಯಿತು. ಇದರಂತೆ ಶಿಕ್ಷಣ ನೀತಿಗಳನ್ನು ಪರಸ್ಪರ ಹೊಂದಾಣಿಕೆ ಮತ್ತು ಸಹಭಾಗಿತ್ವದಲ್ಲಿ ನಿರ್ವಹಿಸಬೇಕು. ೧೯೭೮ರಲ್ಲಿ ಶಿಕ್ಷಣ ಮಂತ್ರಾಲಯವು ರಚಿಸಿದ್ದ ಪ್ರಾಥಮಿಕ ಶಿಕ್ಷಣ ಸಾರ್ವತ್ರೀಕರಣದ ಕಾರ್ಯನಿರತ ಗುಂಪು ಶಿಕ್ಷಣದ ಸಾರ್ವತ್ರೀಕರಣಕ್ಕೆ ಸಂಬಂಧಿಸಿದಂತೆ ಒಂದು ಹೊಸ ಸೂತ್ರವನ್ನು ಶಿಫಾರಸ್ಸು ಮಾಡಿತು. ಅದರಂತೆ ೬ರಿಂದ ೧೪ ವಯಸ್ಸಿನ ಪ್ರತಿಯೊಂದು ಮಗುವು ಸಾಧ್ಯವಾದಷ್ಟು ಪೂರ್ಣಕಾಲ ಶಾಲೆಯಲ್ಲಿದ್ದು ಕಲಿಯಬೇಕು ಅಥವಾ ಸಾಧ್ಯವೇ ಇಲ್ಲ ಎಂಬ ಪರಿಸ್ಥಿತಿಯಿದ್ದಾಗ ಮಾತ್ರ ಅರೆಕಾಲಿಕ ಶಿಕ್ಷಣದ ವ್ಯವಸ್ಥೆ ಮಾಡಬೇಕು. ಅಂತಹ ವ್ಯವಸ್ಥೆಯಲ್ಲಿಯೂ ಕೂಡ ಎಲ್ಲಾ ಮಕ್ಕಳು ಕನಿಷ್ಠ ಮೂಲ ಜ್ಞಾನವಾದ ಸಾಕ್ಷರತೆ, ಗಣಿತ, ಸಾಮಾಜಿಕ ಮತ್ತು ಪೌರತ್ವ ಮೌಲ್ಯಗಳನ್ನು ಕಲಿಯಲು ನೀಡುವ ವಿಷಯದಲ್ಲಿ ಯಾವುದೇ ರಾಜಿ ಇಲ್ಲ. ಕಲಿಸುವ ವಿಷಯವು ಅರ್ಥಪೂರ್ಣವಾಗಿದ್ದು ಸಾಮಾಜಿಕ ಮತ್ತು ಆರ್ಥಿಕ ಅಗತ್ಯಗಳಿಗೆ ಸ್ಪಂದಿಸುವಂತಿರಬೇಕು. ಯಾವುದೇ ಕಾರಣಕ್ಕೂ ಮೇಲ್ಮುಖ ಚಲನೆಯ ಅವಕಾಶಗಳನ್ನು ಕಸಿದುಕೊಳ್ಳುವಂತಾಗಬಾರದು ಎಂಬ ಮಹತ್ತರವಾದ ಶಿಫಾರಸ್ಸುಗಳನ್ನು ಶಿಕ್ಷಣ ಇಲಾಖೆಗೆ ಸಲ್ಲಿಸಿತು.

ಜನರ ಆಶೋತ್ತರ ಹಾಗೂ ದೇಶದ ಅಭಿವೃದ್ಧಿಗಾಗಿ ಭದ್ರ ಬುನಾದಿಯ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆ ಈ ೧೦ ವರ್ಷಗಳಲ್ಲಿ ರೂಪಗೊಳ್ಳಬೇಕಿತ್ತು. ಇದರಂತೆಇಲ್ಲಿ ಗಮನಿಸಬೇಕಾದ ಮುಖ್ಯ ಅಂಶವೆಂದರೆ ೧೯೪೭ ರಿಂದ ೧೯೬೮ರ ವರೆಗೆ ರಾಷ್ಟ್ರದ ಶಿಕ್ಷಣ ವ್ಯವಸ್ಥೆಯ ಪುನರ್ ರಚನೆಗೆ ಸಂಬಂಧಿಸಿದಂತೆ ಒಂದು ಸ್ಪಷ್ಟ ಶಿಕ್ಷಣ ನೀತಿ ಇರಲಿಲ್ಲ. ನಂತರ ೧೯೮೬ ರಲ್ಲಿ ೬೮ರ ಶಿಕ್ಷಣ ನೀತಿಯನ್ನು ಪರಿಷ್ಕರಿಸಿದ ಸರ್ಕಾರ ಕೆಲವು ಹೊಸ ಆಯಾಮಗಳೊಂದಿಗೆ ೧೯೮೬ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ರೂಪಿಸಿತು. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಂತೆ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಹೊಸ ಕಾಲಮಿತಿಯ ಗುರಿಯನ್ನು ನಿಗಧಿಗೊಳಿಸಬೇಕೆಂಬ ಶಿಫಾರಸ್ಸನ್ನು ಮುಂದಿಟ್ಟಿತು. ಜತೆಗೆ ಪ್ರಾಥಮಿಕ ಶಿಕ್ಷಣದ ಹಂತದಲ್ಲಿ ಕನಿಷ್ಠ ಸೌಲಭ್ಯಗಳನ್ನು ಒದಗಿಸುವ ಸಲುವಾಗಿ ಕಪ್ಪು ಹಲಗೆ ಯೋಜನೆ ಮತ್ತು ಗುಣಮಟ್ಟದ ಶಿಕ್ಷಣಕ್ಕಾಗಿ ಶಿಶುಕೇಂದ್ರಿತ ಬೋಧನಾ ವಿಧಾನ ಮತ್ತು ಜಿಲ್ಲಾ ಮಟ್ಟದಲ್ಲಿ ಶೈಕ್ಷಣಿಕ

ನಾಯಕತ್ವ ನೀಡುವುದರ ಮೂಲಕ ಗುಣಮಟ್ಟದ ಶಿಕ್ಷಣವನ್ನು ನೀಡಲು ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್)ಗಳನ್ನು ಸ್ಥಾಪಿಸಲು ಅವಕಾಶ ಕಲ್ಪಿಸಿತು. ಸಂಸ್ಥೆಗಳು ಸೇವಾ ಪೂರ್ವ ಮತ್ತು ಸೇವಾ ನಿರತ ಶಿಕ್ಷಕರಿಗೆ ಎಲ್ಲಾ ಅಗತ್ಯ ಸಂಪನ್ಮೂಲಗಳನ್ನು ಒದಗಿಸುವ ಗುಣಮಟ್ಟದ ಕೇಂದ್ರಗಳಾಗಬೇಕೆಂಬ ದೂರದೃಷ್ಟಿಯನ್ನು ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಹೊಂದಿತು.

೧೯೮೯ರಲ್ಲಿ ಎಲ್ಲಾ ಮಕ್ಕಳಿಗೆ ಗುಣಮಟ್ಟದ ಶಿಕ್ಷಣವನ್ನು ನೀಡುವ ಚಿಂತನೆ ರಾಷ್ಟ್ರೀಯ ಮಟ್ಟದಲ್ಲಿ ನಡೆಯುತ್ತಿದ್ದ ಈ ಸಂದರ್ಭದಲ್ಲಿ, ಅಂತರಾಷ್ಟ್ರೀಯ ಮಟ್ಟದಲ್ಲಿ ಬದುಕು ಹಸನಾಗಬೇಕಾದರೆ ಎಲ್ಲ ಮಕ್ಕಳಿಗೂ ಕೆಲವು ಮೂಲಭೂತ ಅಗತ್ಯಗಳು ದೊರೆಯುವಂತಾಗಬೇಕೆಂಬ ಉನ್ನತ ಮಟ್ಟದ ಚರ್ಚೆಗಳು ನಡೆಯುತ್ತಿದ್ದವು. ಈ ಎಲ್ಲಾ ಚರ್ಚೆಗಳ ಕ್ರೋಢೀಕರಣಗೊಂಡು ಅಂತಿಮವಾಗಿ ಮಕ್ಕಳ ಹಕ್ಕುಗಳ ಒಡಂಬಡಿಕೆಗೆ ೧೯೮೯ರಲ್ಲಿ ಮಗುವಿನ ಶಿಕ್ಷಣ ಒಂದು ಮೂಲಭೂತ ಹಕ್ಕೆಂದು ಗುರುತಿಸಿದ ಒಡಂಬಡಿಕೆಯು, ರಾಜ್ಯಗಳು ಈ ಹಕ್ಕನ್ನು ಗೌರವಿಸಿ, ಸಮಾನ ಅವಕಾಶಗಳನ್ನು ಕಲ್ಪಿಸುವುದರ ಮೂಲಕ ಜಾರಿಗೊಳಿಸಬೇಕೆಂದು ಹೇಳಿತು. ಅದರಲ್ಲೂ ವಿಶೇಷವಾಗಿ ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯಗೊಳಿಸಿ ಎಲ್ಲರಿಗೂ ಸಿಗುವಂತೆ ಕ್ರಮ ಕೈಗೊಳ್ಳಬೇಕೆಂದು ಸೂಚಿಸಿತು. (ಮಕ್ಕಳ ಹಕ್ಕುಗಳ ಒಡಂಬಡಿಕೆ ಪರಿಚ್ಛೇದ ೨೮)

೧೯೮೬ರಲ್ಲಿ ರೂಪಗೊಂಡ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯನ್ನು ಪುನರ್ ಪರಿಶೀಲಿಸುವ ಸಲುವಾಗಿ ಆಚಾರ್ಯ ರಾಮಮೂರ್ತಿಯವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಯಿತು. ಈ ಸಮಿತಿಯು ಮಕ್ಕಳ ಶಿಕ್ಷಣದ ಹಕ್ಕನ್ನು ಕುರಿತಂತೆ ಹೀಗೆ ಹೇಳಿತು. "ಶಿಕ್ಷಣದ ಹಕ್ಕನ್ನು ಒಂದು ಮೂಲಭೂತ ಹಕ್ಕಾನ್ನಾಗಿಸುವ ಕಾಲ ಸನ್ನಿಹಿತವಾಗಿದೆ. ಇದಕ್ಕಾಗಿ ಭಾರತದ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿಯನ್ನು ಮಾಡುವುದು ಅಗತ್ಯ ಮತ್ತು ಈ ಹಕ್ಕು ಎಲ್ಲಾ ಮಕ್ಕಳಿಗೆ ಸಿಗುವಂತಹ ವಾತಾವರಣವನ್ನು ಸಮಾಜದಲ್ಲಿ ನಿರ್ಮಾಣ ಮಾಡಬೇಕಾಗಿದೆ".ಇದೇ ವರ್ಷದಲ್ಲಿ ಭಾರತವು ಥೈಲ್ಯಾಂಡಿನ ಜಾಮ್‌ಟಿಯೆನ್ ನಗರದಲ್ಲಿ ನಡೆದ ಎಲ್ಲರಿಗೂ ಶಿಕ್ಷಣ ಎಂಬ ಜಾಗತಿಕ ಸಮ್ಮೇಳನದಲ್ಲಿ ಭಾಗವಹಿಸಿ ೨೦೦೦ದ ವೇಳೆಗೆ ಎಲ್ಲರಿಗೂ ಶಿಕ್ಷಣ ನೀಡುವ ಗುರಿಯನ್ನು ಈಡೇರಿಸುವುದಾಗಿ ಒಪ್ಪಿಕೊಂಡಿತು. ೧೯೯೨ರಲ್ಲಿ ಆಚಾರ್ಯ ರಾಮಮೂರ್ತಿಯವರ ನೇತೃತ್ವದಲ್ಲಿ ಪುನರ್ ಪರಿಷ್ಕೃತಗೊಂಡ ಈ ರಾಷ್ಟ್ರೀಯ ಶಿಕ್ಷಣ ನೀತಿಯು ಸಂಸತ್ತಿನ ಅಂಗೀಕಾರವನ್ನು ಪಡೆಯಿತು. ಆದರೆ ಪ್ರಾಥಮಿಕ ಶಿಕ್ಷಣ ಆದ್ಯತೆಯ ವಿಷಯವಾಗಿ ಹೊರಹೊಮ್ಮಲಿಲ್ಲಾ ಹಾಗೂ ಸಂಸತ್ತಿನ ಆದ್ಯತೆ ಆಗಲೇ ಇಲ್ಲ. (ಎಲ್.ಸಿ. ಜೈನ್ ರವರ ಸಂಶೋಧನೆ) ಹಾಗೂ ಸಮಾನತೆ,ಸಾಮಾಜಿಕ ನ್ಯಾಯದ ಆಧಾರದ ಮೇಲೆ, ಸಮಾನ ಶಾಲಾ ಶಿಕ್ಷಣ ವ್ಯವಸ್ಥೆ ರೂಪಗೊಳ್ಳಲೇ ಇಲ್ಲ (ಆದರೂ ಪುನಃ ಶಿಕ್ಷಣ ಆಯೋಗ ಶಿಫಾರಸ್ಸು ಮಾಡಿದ್ದನ್ನು ಸ್ಮರಿಸಬಹುದು) ಸಮಗ್ರ ಶಿಕ್ಷಣ ನೀತಿ ರೂಪಿಸಲಿಲ್ಲ.

೧೯೯೨ರಲ್ಲಿ ಸರ್ವೋಚ್ಚ ನ್ಯಾಯಾಲಯದ ಮುಂದೆ ಬಂದ ಮೋಹಿನ್ ಜೈನ್ ಮತ್ತು ಕರ್ನಾಟಕ ರಾಜ್ಯ ಸರ್ಕಾರದ ವಿರುದ್ಧದ ಮೊಕದ್ದಮೆಯೊಂದರಲ್ಲಿ ಸರ್ವೋಚ್ಚ ನ್ಯಾಯಾಲಯವು ಶಿಕ್ಷಣ ಒಂದು ಹಕ್ಕು ಇದಕ್ಕಾಗಿ ರಾಜ್ಯ ಸರ್ಕಾರವು ಎಲ್ಲಾ ಹಂತಗಳಲ್ಲಿ ನಾಗರೀಕರ ಹಿತಕ್ಕಾಗಿ ಶೈಕ್ಷಣಿಕ ಸಂಸ್ಥೆಗಳನ್ನು ಒದಗಿಸಬೇಕೆಂದು ತಿಳಿಸಿತು. ಶಿಕ್ಷಣ ಪಡೆಯುವ ಅವಕಾಶ ಕೇವಲ ಶ್ರೀಮಂತ ವರ್ಗಕ್ಕೆ ಮಾತ್ರ ಸೀಮಿತವಾಗಿರಲು ಸಾಧ್ಯವಿಲ್ಲವೆಂದು ನ್ಯಾಯಾಲಯ ಅಭಿಪ್ರಾಯಪಟ್ಟಿತು. ಸಂವಿಧಾನದ ೭೩ ಮತ್ತು ೭೪ನೆಯ ತಿದ್ದುಪಡಿ ಮಸೂದೆ ಅನ್ವಯ ಆಡಳಿತ ವಿಕೇಂದ್ರೀಕರಣ ದೃಷ್ಟಿಯಿಂದ ಪ್ರಾಥಮಿಕ ಶಿಕ್ಷಣವನ್ನೊಳಗೊಂಡಂತೆ ಪ್ರೌಢ, ವಯಸ್ಕರ ಮತ್ತು ಅನೌಪಚಾರಿಕ ಶಿಕ್ಷಣ ನೀಡುವ ಜವಾಬ್ದಾರಿಯನ್ನು

ಪಂಚಾಯತ್ ಸಂಸ್ಥೆಗಳಿಗೆ ನೀಡಲು ಕ್ರಮ ಕೈಗೊಳ್ಳುವಂತೆ ಎಲ್ಲಾ ರಾಜ್ಯ ಸರ್ಕಾರಗಳಿಗೆ ಸೂಚಿಸಲಾಯಿತು,

೧೯೯೩ರಲ್ಲಿ ಮತ್ತೊಂದು ಮಹತ್ವದ ಪ್ರಕರಣವು ಸರ್ವೋಚ್ಚ ನ್ಯಾಯಾಲಯದ ಮುಂದೆ ವಿಚಾರಣೆಗಾಗಿ ಬಂತು. ಆಂಧ್ರ ಪ್ರದೇಶ ಸರ್ಕಾರ ಮತ್ತು ಜೆ.ಪಿ.ಉನ್ನಿಕೃಷ್ಣನ್ ರವರಿಗೆ ಸಂಬಂಧಿಸಿದ ಈ ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯವು ಶಿಕ್ಷಣ ಕ್ಷೇತ್ರದ ದಿಕ್ಕನ್ನೇ ಬದಲಾಯಿಸುವ ಐತಿಹಾಸಿಕ ತೀರ್ಪೊಂದನ್ನು ನೀಡಿತು. ಈ ಐತಿಹಾಸಿಕ ತೀರ್ಪು ಭಾರತದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಮೂಲಭೂತ ಹಕ್ಕಿನ ಸ್ಥಾನಮಾನವನ್ನು ನೀಡಿತು. ಈ ತೀರ್ಪಿನ ಪ್ರಕಾರ ದೇಶದ ಪ್ರತಿಯೊಬ್ಬ ಪ್ರಜೆಯೂ ಶಿಕ್ಷಣ ಪಡೆಯುವ ಮೂಲಭೂತ ಹಕ್ಕನ್ನು ಹೊಂದಿರುತ್ತಾನೆ. ಈ ಹಕ್ಕು ಈಗಾಗಲೇ ಇರುವ ಜೀವಿಸುವ ಹಕ್ಕಿನ ಭಾಗವಾಗಿರುತ್ತದೆ ಎಂಬ ಮಹತ್ವದ ತೀರ್ಪನ್ನು ನ್ಯಾಯಾಲಯವು ನೀಡಿತು. ಈ ಎಲ್ಲಾ ಬೆಳವಣಿಗೆಗಳು ಶಿಕ್ಷಣಕ್ಕೆ ಮೂಲಭೂತ ಹಕ್ಕಿನ ಸ್ಥಾನವನ್ನು ಕಲ್ಪಿಸುವುದರ ಮೂಲಕ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಸರಬರಾಜು ಆಧಾರಿತ ವಿಧಾನದ ಬದಲು ಬೇಡಿಕೆ ಆಧಾರಿತ ಗುಣಾತ್ಮಕ ಶಿಕ್ಷಣ ಪ್ರತಿಯೊಂದು ಮಗುವಿಗೂ ಸಿಗಬೇಕೆಂಬ ಅಂಶವನ್ನು ಎತ್ತಿಹಿಡಿದವು. ನಂತರ ಅನೇಕ ಸಂಘ-ಸಂಸ್ಥೆಗಳು ರಾಷ್ಟ್ರೀಯ ಮಟ್ಟದಲ್ಲಿ ಚಳುವಳಿಯನ್ನು ರೂಪಿಸಿ ಸಂವಿಧಾನಕ್ಕೆ ಸೂಕ್ತ ತಿದ್ದುಪಡಿ ಮಾಡುವುದರ ಮೂಲಕ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿ ಮಾಡಬೇಕೆಂದು ಒತ್ತಾಯಿಸಲು ಪ್ರಾರಂಭಿಸಿದರು.

ಈ ತೀರ್ಪನ್ನು ಆಧರಿಸಿ ೧೯೯೪ರಲ್ಲಿ ಕೇಂದ್ರದಲ್ಲಿದ್ದ ಸಂಯುಕ್ತ ಸರ್ಕಾರವು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿಸಲು ತೀರ್ಮಾನಿಸಿತು. ಈ ಪ್ರಸ್ತಾವನೆಯನ್ನು ಪರಿಶೀಲಿಸಲು ಒಂದು ಸಮಿತಿಯನ್ನು ರಚಿಸಿತು. ಎಲ್ಲರಿಗೂ ಶಿಕ್ಷಣ ನೀಡುವ ಮಹತ್ವದ ಯೋಜನೆಗಳಲ್ಲೊಂದಾದ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆ ಪ್ರಾರಂಭಿಕವಾಗಿ ೭ ರಾಜ್ಯಗಳ ೪೨ ಜಿಲ್ಲೆಗಳಲ್ಲಿ ಪ್ರಾರಂಭವಾಯಿತು. ೧೯೯೫ರಲ್ಲಿ ೧೯೮೬ರ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯಲ್ಲಿ ನಿಗದಿಪಡಿಸಿದಂತೆ ಎಲ್ಲಾ ಮಕ್ಕಳು ೮ ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ಪಡೆಯುವಗುರಿಯನ್ನು ಈಡೇರಿಸಲು ಸಾಧ್ಯವಾಗಲಿಲ್ಲ. ೧೯೯೭ ರಲ್ಲಿ ಮಹಿ ರಾಮ್ ಸೈಕಿಯಾರವರ ಅಧ್ಯಕ್ಷತೆಯಲ್ಲಿ ನೇಮಕಗೊಂಡಿದ್ದ ರಾಜ್ಯ ಶಿಕ್ಷಣ ಮಂತ್ರಿಗಳ ಸಮಿತಿಯು ತನ್ನ ವರದಿಯನ್ನು ನೀಡಿತು. ವರದಿಯು ೧೪ ವರ್ಷದೊಳಗಿನ ಮಕ್ಕಳಿಗೆ ಶಿಕ್ಷಣ ನೀಡುವ ಅವಕಾಶವನ್ನು ಕಲ್ಪಿಸುವುದು ನಾಗರೀಕನಾಗಿರುವ ಪ್ರತಿಯೊಬ್ಬ ಪಾಲಕನ ಕರ್ತವ್ಯ ಎಂಬ ಸ್ಪಷ್ಟ ಉಪಬಂಧವನ್ನು ಸೇರಿಸಬೇಕೆಂದು ಸಮಿತಿಯು ಅಭಿಪ್ರಾಯಪಟ್ಟಿತು. ಈ ವರದಿಯ ಆಧಾರದ ಮೇಲೆ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿಸುವ ಸಂವಿಧಾನದ ೮೩ನೇಯ ತಿದ್ದುಪಡಿ ಮಸೂದೆಯನ್ನು ಸಂಸತ್ತಿನಲ್ಲಿ ಮಂಡಿಸಲಾಯಿತು. ಈ ಹಿನ್ನಲೆಯಲ್ಲಿ ಪುನಃ ಸೆನೆಗಲ್‌ನ ಡಾಕರ್‌ನಲ್ಲಿ ಸಭೆ ಸೇರಿದ ಅನೇಕ ರಾಷ್ಟ್ರಗಳು ೨೦೧೫ರ ವೇಳೆಗಾದರೂ ಈ ಗುರಿಯನ್ನು ತಲುಪಲೇಬೇಕೆಂದು ನಿರ್ಧರಿಸಿದವು. ೨೦೦೧ರಲ್ಲಿ ಈ ಹಿಂದೆ ಸಂಸತ್ತಿನಲ್ಲಿ ಮಂಡಿಸಿದ್ದ ಸಂವಿಧಾನದ ೮೩ನೇ ತಿದ್ದುಪಡಿಯನ್ನು ಮಾರ್ಪಡಿಸಿ ಸಂವಿಧಾನಕ್ಕೆ ೯೩ನೇ ತಿದ್ದುಪಡಿ ಮಾಡವುದರ ಮೂಲಕ ಶಿಕ್ಷಣವನ್ನು ಮೂಲಭೂತ ಹಕ್ಕನ್ನಾಗಿ ಪರಿಗಣಿಸಲಾಯಿತು. ಅಕ್ಟೋಬರ್ ೨೦೦೩ ರಲ್ಲಿ " ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಸೂದೆ-೨೦೦೩' ಎಂಬ ಕರಡು ಪ್ರತಿಯನ್ನು ಸಿದ್ದಪಡಿಸಲಾಯಿತು. ಅದನ್ನು ವೆಬ್‌ಸೈಟ್‌ನಲ್ಲಿ ಪ್ರಕಟಿಸಿ, ಸಾರ್ವಜನಿಕರಿಂದ ಅಭಿಪ್ರಾಯ ಪಡೆಯಲಾಯಿತು. ನಂತರ ಅದನ್ನು ಪರಿಷ್ಕರಿಸಿ ೨೦೦೪ ರಲ್ಲಿ ಮತ್ತೆ ಸಾರ್ವಜನಿಕರ ಗಮನಕ್ಕೆ ತರಲಾಯಿತು. ಜೂನ್ ೨೦೦೫ರಲ್ಲಿ ಸಿ.ಎ.ಬಿ.ಇ(ಸೆಂಟ್ರಲ್ ಅಡ್ವೈಸರಿ ಬೋರ್ಡ್ ಆಫ್ ಎಜುಕೇಷನ್)

ಶಿಕ್ಷಣ ಹಕ್ಕು ಮಸೂದೆಯನ್ನು ಕೇಂದ್ರ ಮಾನವ ಸಂಪನ್ಮೂಲ ಸಚಿವರಿಗೆ ನೀಡಿತು. ಆ ಸಚಿವಾಲಯವು ರಾಷ್ಟ್ರೀಯ ಸಲಹಾ ಸಮಿತಿಗೆ ಕಳುಹಿಸಿತು. ಆ ಸಮಿತಿಯು ಪ್ರಧಾನ ಮಂತ್ರಿಗಳ ಪರಾಮರ್ಶೆಗೆ ಕಳುಹಿಸಿತು. ಜುಲೈ ೧೪, ೨೦೦೬ ರಂದು ರಾಷ್ಟ್ರೀಯ ಯೋಜನಾ ಮತ್ತು ಹಣಕಾಸು ಸಮಿತಿ ಆರ್ಥಿಕ ಸೌಲಭ್ಯಗಳಿಲ್ಲದ ಕಾರಣ ಮಸೂದೆಯನ್ನು ತಿರಸ್ಕರಿಸಿತು. ಆ ಸಮಿತಿ ಎಲ್ಲಾ ರಾಜ್ಯಗಳಿಗೆ ಕಳುಹಿಸಿ ಮೂಲ ಅವಶ್ಯಕತೆಗಳ ಬಗ್ಗೆ ಮಾಹಿತಿ ಕೊಡಲು ತಿಳಿಸಿತು.

ಆಗಸ್ಟ್ ೨೯, ೨೦೦೬ ರಲ್ಲಿ ಮಸೂದೆಯನ್ನು ಚಿಕ್ಕ ಪುಟ್ಟ ಬದಲಾವಣೆ ಮಾಡಿ ಮತ್ತೆ ಜೀವ ತುಂಬಲಾಯಿತು. ಅಂದಿನ ಕೇಂದ್ರ ಮಾನವ ಅಭಿವೃದ್ಧಿ ಸಚಿವರಾದ ಅರ್ಜುನ್‌ಸಿಂಗ್ ಇದರ ಬಗ್ಗೆಹೆಚ್ಚು ಆಸಕ್ತಿ ತೋರಿಸಿದರು. ಅದರಿಂದಾಗಿ ಮತ್ತೆ ಕೆಲ ಬದಲಾವಣೆಗಳೊಂದಿಗೆ ನವಂಬರ್ ೧, ೨೦೦೮ರಲ್ಲಿ ಕರಡನ್ನು ಕೇಂದ್ರ ಮಂತ್ರಿ ಮಂಡಲಕ್ಕೆ ಸಲ್ಲಿಸಲಾಯಿತು. ಅಷ್ಟರಲ್ಲೇ ಕೇಂದ್ರಕ್ಕೆ ಚುನಾವಣೆ ಬಂದು ಮತ್ತೆ ಯು.ಪಿ.ಎ ಸರ್ಕಾರ ಅಧಿಕಾರಕ್ಕೆ ಬಂದಿತು. ಹೊಸ ಸರ್ಕಾರದಲ್ಲಿ ಕಪಿಲ್ ಸಿಬಲ್ ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವರಾದರು. ಅವರ ಮಂತ್ರಿ ಮಂಡಲ ಈ ಮಸೂದೆಗೆ ಒಪ್ಪಿಗೆ ನೀಡಿತು. ಅದನ್ನು ರಾಜ್ಯಸಭೆಯು ಜುಲೈ ೨೦, ೨೦೦೯ರಂದು ಅಂಗೀಕಾರ ನೀಡಿತು. ಲೋಕಸಭೆಯು ಆಗಸ್ಟ್ ೪, ೨೦೦೯ ರಂದು ಧ್ವನಿಮತದ ಮೂಲಕ ಇದನ್ನು ಅಂಗೀಕರಿಸಿದೆ. ರಾಷ್ಟ್ರಪತಿಗಳು ಆಗಸ್ಟ್ ೨೭, ೨೦೦೯ ರಂದು ತಮ್ಮ ಮುದ್ರೆ ಒತ್ತಿ ಮಸೂದೆ "ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಸೂದೆ ೨೦೦೯" ಹಕ್ಕಾಗುವಂತೆ ಮಾಡಿದರು. ಈ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನಲ್ಲಿ ಒಟ್ಟು ಏಳು ಪರಿಚ್ಛೇದಗಳು ಇದ್ದು. ಮೊದಲ ಪರಿಚ್ಛೇದದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕಿನಲ್ಲಿ ಬರುವ ಪದಗಳ ಬಗ್ಗೆ ಸ್ಪಷ್ಟ ವಿವರಣೆಯನ್ನು ನೀಡಲಾಗಿದೆ. ಶಾಲೆಯನ್ನು ನಿಯಂತ್ರಿಸುವ ಸರ್ಕಾರಗಳು, ಕ್ಯಾಪಿಟೇಷನ್ ಫೀ, ಮಗು, ವಿಶೇಷ ವರ್ಗದ ಮಕ್ಕಳು, ಪ್ರಾಥಮಿಕ ಶಿಕ್ಷಣ, ಪಾಲಕ, ಸ್ಥಳೀಯ ಉಸ್ತುವಾರಿ, ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ಶಾಲೆ, ಪ್ರವೇಶ ಪರೀಕ್ಷೆ ಸೇರಿದಂತೆ ಮಸೂದೆಯಲ್ಲಿ ಬರುವ ಪದಗಳ ಸ್ಪಷ್ಟ ಅರ್ಥವನ್ನು ವಿಶ್ಲೇಷಣೆ ಮಾಡಲಾಗಿದೆ. ಎರಡನೆ ಪರಿಚ್ಛೇದವು ೬ ರಿಂದ ೧೪ ವಯೋಮಾನದ ಮಕ್ಕಳು, ಫೀ ವಿನಾಯಿತಿ, ಕ್ಯಾಪಿಟೇಷನ್ ನಿಷೇಧ, ಶಾಲೆಗೆ ಸೇರದ-ಬಿಟ್ಟ ಮಗುವಿಗೆ ವಿಶೇಷ ತರಬೇತಿ ನೀಡಿ ಶಾಲೆಗೆ ಸೇರ್ಪಡೆ, ಮಗುವಿಗೆ ಅನುಕೂಲವಾಗುವಂತೆ ವರ್ಗಾವಣೆ ಪತ್ರ ನೀಡಿಕೆ, ಪ್ರವೇಶ ನಿರಾಕರಿಸದಿರುವುದು, ಉಲ್ಲಂಘನೆಯಾದಲ್ಲಿ ಶಿಕ್ಷಕರ ಮೇಲಿನ ಶಿಸ್ತುಕ್ರಮಗಳ ಕುರಿತ ಮಾಹಿತಿಗಳನ್ನು ಕಾಣುತ್ತೇವೆ. ಮೂರನೇ ಅಧ್ಯಾಯದಲ್ಲಿ ಕೇಂದ್ರ, ರಾಜ್ಯಗಳ ಕರ್ತವ್ಯಗಳು, ಮೂಲಭೂತ ಸೌಲಭ್ಯ ಒದಗಿಸುವಿಕೆ, ಪಠ್ಯಕ್ರಮ, ಶಿಕ್ಷಕರ ತರಬೇತಿ, ಪಾಲಕರ ಜವಬ್ದಾರಿಗಳಿವೆ. ಹಣಕಾಸಿನ ವಿಷಯದಲ್ಲಿ ಉಭಯ ಸರ್ಕಾರಗಳ ಜವಬ್ದಾರಿಯಿದೆ. ವಿಶೇಷ ವಿಭಾಗದ ಮಕ್ಕಳಿಗೆ ಅವಕಾಶ ನೀಡುವುದು. ಕಟ್ಟಡ, ಸಿಬ್ಬಂದಿ, ಕಲಿಕಾ ಸಾಮಾಗ್ರಿ ಪೂರೈಸುವುದು. ಶಿಕ್ಷಕರ ಪುನರ್ಬಲನ. ಗುಣಮಟ್ಟದ ಶಿಕ್ಷಣ ನೀಡುವುದು ಮತ್ತು ಸರ್ಕಾರಗಳ ಜವಬ್ದಾರಿಯನ್ನು ವಿವರಿಸುತ್ತದೆ. ನಾಲ್ಕನೇ ಪರಿಚ್ಛೇದ ಅತ್ಯಂತ ದೊಡ್ಡದಾಗಿದ್ದು ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಶಾಲೆಯ ಜವಬ್ದಾರಿಗಳೇನು, ಜನನ ಪ್ರಮಾಣದ ಅವಶ್ಯಕತೆ, ಮಗುವಿಗೆ ಶಿಕ್ಷೆ ನಿಷೇಧ, ಅನುಮತಿ ಇಲ್ಲದೇ ಶಾಲೆ ಪ್ರಾರಂಭಿಸುವಂತಿಲ್ಲ. ಇವುಗಳನ್ನು ಮೀರಿದಲ್ಲಿ ದಂಡಗಳ ಪ್ರಮಾಣವನ್ನು ಇಲ್ಲಿ ನಮೂದಿಸಲಾಗಿದೆ. ಶಾಲೆಯ ಉಸ್ತುವಾರಿ ವ್ಯವಸ್ಥೆ. ಶಾಲಾ ನಿರ್ವಹಣಾ ಸಮಿತಿಯ ರಚನೆ, ಅಭಿವೃದ್ಧಿ ಯೋಜನೆ, ಸೌಲಭ್ಯಗಳ ಸದುಪಯೋಗ, ಮಕ್ಕಳ ಬೆಳವಣಿಗೆಗೆ ಪೂರಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಬಗ್ಗೆ ತಿಳಿಸಲಾಗಿದೆ. ಶಿಕ್ಷಕರು ಹಾಗೂ ಅವರ ಕರ್ತವ್ಯಗಳು, ೧:೪೦ ರಂತೆ ಮಕ್ಕಳು ಮತ್ತು ಶಿಕ್ಷಕರ ಅನುಪಾತ, ಶಿಕ್ಷಕರ ಪ್ರಮುಖ ಜವಬ್ದಾರಿಗಳು, ಶಿಕ್ಷಕರ ಮನೆ ಪಾಠ ನಿಷೇಧ, ಶಿಸ್ತುಕ್ರಮಗಳು, ಶೈಕ್ಷಣಿಕ ಅವಧಿ ಕುರಿತಂತೆ ಮಹತ್ವದ ಅಂಶಗಳನ್ನು ಈ ಅಧ್ಯಾಯ ಒಳಗೊಂಡಿದೆ. ಐದನೇ

ಅಧ್ಯಾಯವುಮಗುವಿನ ಜ್ಞಾನ, ಕೌಶಲ, ಬುದ್ಧಿಯನ್ನು ಸರ್ವಾಂಗೀಣವಾಗಿ ಬೆಳಸುವ ಪಠ್ಯಕ್ರಮದ ಬಗ್ಗೆ ತಿಳಿಸುತ್ತದೆ. ಮಕ್ಕಳ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಬಗ್ಗೆ ಹೇಳುತ್ತದೆ. ಕಲಿಕಾ ವಿಧಾನಗಳು ಚಟುವಟಿಕೆಯಿಂದ, ಹೊಸತನದಿಂದ ಮಕ್ಕಳ ಸ್ನೇಹಿಯಾಗಿರಬೇಕು. ಮೌಲ್ಯಮಾಪನಗಳು ಭಯರಹಿತ, ಒತ್ತಡರಹಿತವಾಗಿರಬೇಕು, ಪ್ರಾಥಮಿಕ ಶಿಕ್ಷಣ ಮುಗಿಯುವರೆಗೂ ಯಾವುದೇ ಪಬ್ಲಿಕ್ ಪರೀಕ್ಷೆ ನಡೆಸುವಂತಿಲ್ಲ. ಆ ಶಿಕ್ಷಣ ಮುಗಿದ ಮೇಲೆ. ಪ್ರಮಾಣ ಪತ್ರ ನೀಡಬೇಕು ಎಂಬ ಅಂಶಗಳನ್ನು ಈ ಅಧ್ಯಾಯದಲ್ಲಿ ಕಾಣುತ್ತೇವೆ.ಆರನೇ ಅಧ್ಯಾಯವು ಮಕ್ಕಳ ಹಕ್ಕು ರಕ್ಷಣೆಯ ಹೊಣೆಗಾರಿಕೆಯನ್ನು ರಾಷ್ಟ್ರಮಟ್ಟದಲ್ಲಿ ಕೇಂದ್ರ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗ, ರಾಜ್ಯದಲ್ಲಿ ರಾಜ್ಯ ಆಯೋಗ, ಹಾಗೂ ಸ್ಥಳೀಯ ಮಟ್ಟದಲ್ಲಿ ಸ್ಥಳೀಯ ಪ್ರಾಧೀಕಾರಗಳು ನೋಡಿಕೊಳ್ಳುವ ಬಗ್ಗೆ ಮಾಹಿತಿಗಳಿವೆ.ಕೊನೆಯ ಅಧ್ಯಯವುಹಕ್ಕಿಗೆ ಪೂರಕವಾದ ಇತರೆ ಎಲ್ಲಾ ಅಂಶಗಳನ್ನು ಒಳಗೊಂಡಿದೆ.೮೬ನೇ ಸಂವಿಧಾನ ತಿದ್ದುಪಡಿ ಕಾಯಿದೆಯ ಪರಿಚ್ಚೇದ ೨೧ರ ನಂತರ ೨೧ಎ ಯನ್ನು ಸೇರಿಸುವುದರ ಮೂಲಕ ಶಾಲಾ ಶಿಕ್ಷಣಕ್ಕೆ ಮೂಲಭೂತ ಹಕ್ಕಿನ ಸ್ಥಾನ ಕಲ್ಪಿಸಿದೆ. ಈ ಕಾಯಿದೆಯಂತೆ ೬ ರಿಂದ ೧೪ ವರ್ಷ ವಯಸ್ಸಿನ ಮಕ್ಕಳುಉಚಿತ ಮತ್ತು ಕಡ್ಡಾಯ ಗುಣಾತ್ಮಕ ಶಿಕ್ಷಣ ಪಡೆಯುವ ಮೂಲಭೂತ ಹಕ್ಕನ್ನು ಹೊಂದಿದ್ದಾರೆ. ಜೊತೆಗೆ ಪರಿಚ್ಛೇದ ೪೫ರ ಪ್ರಕಾರ ಹುಟ್ಟಿನಿಂದ ೬ ವರ್ಷ ವಯಸ್ಸಿನ ಮಕ್ಕಳ ಬಾಲ್ಯಪೂರ್ವ ಆರೈಕೆ ಮತ್ತು ಶಿಕ್ಷಣ ಪಡೆಯುವ ಅವಕಾಶವನ್ನು ಹೊಂದಿದ್ದಾರೆ. ಕೆಲವೊಂದು ಲೋಪದೋಷಗಳಿಂದ ಕೂಡಿರುವ ಈ ಕಾಯಿದೆಯು ಸದ್ಯದ ಪರಿಸ್ಥಿತಿಯಲ್ಲಿ ೬ ರಿಂದ ೧೪ ವರ್ಷದೊಳಗಿನ ಮಕ್ಕಳಿಗಾದರೂ ಶಿಕ್ಷಣ ನೀಡಲು ಸಹಾಯವಾಗಬಹುದೆಂಬ ಒಂದೇ ಆಶಯದೊಂದಿಗೆ ಸ್ವಾಗತಿಸಬಹುದಾದ ಕಾಯಿದೆಯಾಗಿದೆ.

ಈ ಎಲ್ಲಾ ಬೆಳವಣಿಗೆಗಳ ನಡುವೆಯೂ ಸಂವಿಧಾನದ ಆಶಯದಂತೆ ೧೯೬೦ರಲ್ಲಿ ಪೂರ್ಣಗೊಳ್ಳಬೇಕಾಗಿದ್ದ ಶಿಕ್ಷಣ ಸಾರ್ವತ್ರೀಕರಣದ ಈ ಕೆಲಸವು ಅನೇಕ ಬಾರಿ ಮುಂದೂಡಲ್ಪಟ್ಟಿತು. ರಾಷ್ಟ್ರಿಯ ಶಿಕ್ಷಣ ನೀತಿ ೧೯೬೮, ಹೊಸ ರಾಷ್ಟ್ರೀಯ ಶಿಕ್ಷಣ ನೀತಿ ೧೯೮೬, ನಂತರ ೧೯೭೬, ೧೯೮೬, ಶೈಕ್ಷಣಿಕ ಜಾಗತಿಕ ಸಮ್ಮೇಳನ ೧೯೯೦, ಡಿ.ಪಿ.ಇ.ಪಿ ಯೋಜನೆ ೧೯೯೪ ಮತ್ತು ಸರ್ವ ಶಿಕ್ಷಣ ಅಭಿಯಾನ ೨೦೦೦ ಜಾರಿಗೊಂಡರೂ ನಿರೀಕ್ಷಿತ ಫಲಿತಾಂಶಗಳು ಇನ್ನೂ ಸಿಕ್ಕಿಲ್ಲ. ಈಗ ಸರ್ವ ಶಿಕ್ಷಣ ಅಭಿಯಾನದ ಅಡಿಯಲ್ಲಿ ರಾಜ್ಯಗಳ ಮತ್ತು ಸಮುದಾಯದ ಸಹಭಾಗಿತ್ವದೊಂದಿಗೆ ೨೦೧೦ರ ವೇಳೆಗೆ ಎಲ್ಲರಿಗೂ ೮ ವರ್ಷಗಳ ಗುಣಾತ್ಮಕ ಶಾಲಾ ಶಿಕ್ಷಣವನ್ನು ನೀಡುವ ಬದ್ಧತೆಯನ್ನು ಕೇಂದ್ರ ಸರ್ಕಾರ ನೀಡಿದೆ. ಹೀಗಾಗಿ ಸ್ವಾತಂತ್ರ್ಯ ಚಳುವಳಿಯ ಭಾಗವಾಗಿ ಬೆಳೆದುಬಂದ ಪ್ರಮುಖ ಬೇಡಿಕೆಯೊಂದು ಸ್ವಾತಂತ್ರ್ಯ ಬಂದು ೬೦ ವರ್ಷಗಳು ಕಳೆದರೂ ಈಡೇರದಿರವುದು ನಮ್ಮನ್ನು ಚಿಂತಿಸುವಂತೆ ಮಾಡಿದೆ. ಈ ವೈಫಲ್ಯಕ್ಕೆ ಅನೇಕ ಕಾರಣಗಳನ್ನು ನಾವು ನೋಡಬಹುದು ಅವುಗಳೆಂದರೆ, ರಾಜಕೀಯ ಇಚ್ಛಾಶಕ್ತಿಯ ಕೊರತೆ, ಶಿಕ್ಷಣವನ್ನು ಒಂದು ಆದ್ಯತಾ ಕ್ಷೇತ್ರವನ್ನಾಗಿ ಪರಿಗಣಿಸದಿರುವುದು (ಶಿಕ್ಷಣ ಆಯೋಗ-೬% ಜಿ.ಎನ್.ಪಿ)ಶಿಕ್ಷಣ ಸಾಮಾಜಿಕ ನ್ಯಾಯ ಸಮಾನತೆ ಮತ್ತು ಸಂವಿಧಾನಿಕ ಮೌಲ್ಯಗಳನ್ನು ಎತ್ತಿಹಿಡಿಯುವ ಸಮಾನ ಶಿಕ್ಷಣ ವ್ಯವಸ್ಥೆ ರೂಪುಗೊಳ್ಳದಿರುವುದು. ಹಾಗೂ ಸಾರ್ವತ್ರೀಕರಣ ಪ್ರಕ್ರಿಯೆ ವಿವಿಧ ಹಂತಗಳಲ್ಲಿ ಯೋಜನೆ, ಅನುಷ್ಠಾನ, ಮೇಲುಸ್ತುವಾರಿ, ಮೌಲ್ಯಮಾಪನ, ನೀತಿ ನಿರೂಪಣೆಯಲ್ಲಿ ಸಮುದಾಯವನ್ನು ಸಕ್ರಿಯವಾಗಿ ತೊಡಗಿಸಿಕೊಳ್ಳದಿರುವುದು. ಸ್ಥಳೀಯ ಸಮುದಾಯಗಳನ್ನು ಸೂಕ್ತ ಸಾಂಸ್ಥಿಕ ಚೌಕಟ್ಟಿನ ಮೂಲಕ ಶಾಲಾ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುವಂತೆ ಮಾಡಲಾಗದಿರುವುದು (ಪ್ಯಾರ ೧೦.೮ – ರಾಷ್ಟ್ರೀಯ ಶಿಕ್ಷಣ ನೀತಿ– ೧೯೮೬)

೨.೪ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಭಾಗಿತ್ವ ಕರ್ನಾಟಕದ ಅನುಭವಗಳು

ಶಿಕ್ಷಣದ ಸಾರ್ವತ್ರೀಕರಣಕ್ಕೆ ಕರ್ನಾಟಕದಲ್ಲಿ ಮೊದಲು ಮಠಗಳು, ಅಗ್ರಹಾರಗಳು, ಬ್ರಹ್ಮಪುರಿ ಮುಂತಾದವುಗಳು ಸಾಂಪ್ರಾದಾಯಕ ಬೋಧನಾ ಪದ್ಧತಿಗಳನ್ನು ಅನುಸರಿಸಿ ಶಿಕ್ಷಣ ನೀಡುತ್ತಿದ್ದವು. ಆದರೆ ಇಂದಿನ ಕಾಲದಲ್ಲಿ ಶಿಕ್ಷಣ ಮಹತ್ವ ಹೆಚ್ಚಿದಂತೆ ಸಮುದಾಯವು ಹೆಚ್ಚು ಹೆಚ್ಚು ಪ್ರಯತ್ನಗಳು ನಡೆಯಲು ಪ್ರಾರಂಭಿಸಲಾಯಿತು. ಇಂತಹ ಪ್ರಯತ್ನಗಳಲ್ಲಿ ಈ ಕೆಳಕಾಣಿಸಿದ ಕೆಲವು ಶಾಲೆಗಳ ಸ್ಥಾಪನೆಯೊಂದಿಗೆ ಪ್ರಾರಂಭವಾಯಿತು. ಅಂತಹ ಕೆಲವು ಪ್ರಮುಖ ಶಾಲೆಗಳೆಂದರೆ. ೧೮೨೬ ರಲ್ಲಿ ಬಾಂಬೆ ನೇಟಿವ್ ಸ್ಕೂಲ್, ಧಾರವಾಡದಲ್ಲಿ ಸ್ಕೂಲ್ ಬುಕ್ ಸೊಸೈಟಿ, ಹುಬ್ಬಳ್ಳಿಯಲ್ಲಿ ಸ್ಥಾಪನೆಗೊಂಡ ೨ ಮರಾಠಿ ಪ್ರಾದೇಶಿಕ ಶಾಲೆಗಳು, (ಬೆಳಗಾಂ ಪ್ರದೇಶಕ್ಕೆ), ೧೮೩೩ರಲ್ಲಿ ಫ್ರೀ ಇಂಗ್ಲೀಷ್ ಸ್ಕೂಲ್ ಎಂಬ ಶಾಲೆಯನ್ನು ಹಳೆ ಮೈಸೂರು ಪ್ರದೇಶಕ್ಕಾಗಿ ಮೈಸೂರು ಅರಮನೆಯಿಂದ ಸ್ಥಾಪಿಸಲಾಯಿತು. ೧೮೩೮ ರಲ್ಲಿ ಸ್ಥಾಪನೆಗೊಂಡ ಮಂಗಳೂರು, ಉಡುಪಿ, ಬಳ್ಳಾರಿಗಳಲ್ಲಿನ ಶಾಲೆಗಳು (ಮದ್ರಾಸ್ ಕರ್ನಾಟಕ ಪ್ರದೇಶಕ್ಕಾಗಿ), ೧೮೫೩ ರಲ್ಲಿ ಸರ್ ಸಾಲಾರ್ ಜಂಗ್ ರವರು ಸ್ಥಾಪಿಸಿದ "ದಾರುಲ್ ಉಲೂಮ್" ಶಾಲೆ (ಗುಲ್ಬರ್ಗಾ ಪ್ರದೇಶಕ್ಕಾಗಿ), ೧೮೩೪ ರಲ್ಲಿ ಕೊಡಗು ಪ್ರದೇಶಕ್ಕಾಗಿ ಮಡಿಕೇರಿ ಮತ್ತು ವಿರಾಜಪೇಟೆಗಳಲ್ಲಿ ಶಾಲೆಗಳ ಪ್ರಾರಂಭ ಪೊನ್ನಂಪೇಟೆಯಲ್ಲಿ ಸರ್ಕಾರ ಸ್ಥಾಪಿಸಿದ ಒಂದು ಶಾಲೆ ಮಾದರಿಯಾಯಿತು.

ಆ ಕಾಲದಲ್ಲಿ ಆಂಗ್ಲ ಮಾಧ್ಯಮದಲ್ಲಿ ಹೊಸ ಹೊಸ ಶಾಲೆಗಳನ್ನು ಸ್ಥಾಪಿಸಿ ಶಿಕ್ಷಣ ನೀಡುವ ಕಾರ್ಯದಲ್ಲಿ ಕ್ರೈಸ್ತ ಮಿಷನರಿಗಳು ಪ್ರಮುಖ ಪಾತ್ರ ವಹಿಸುತ್ತಿದ್ದವು. ಅಲ್ಲದೆ ಇದೇ ಅವಧಿಯಲ್ಲಿ 'ಶಿಕ್ಷಣ ಸಮನ್ವಯ ಸಲಹಾ ಸಮಿತಿ' ಯು ಪ್ರಾಥಮಿಕ ಶಿಕ್ಷಣ ೭ ವರ್ಷಾದ್ದಾಗಿರಬೇಕೆಂದು ಶಿಫಾರಸ್ಸು ಮಾಡಿತು. ತದ ನಂತರದಲ್ಲಿ ಪ್ರಾಥಮಿಕ ಶಿಕ್ಷಣ ೪ ವರ್ಷ ಮಾಧ್ಯಮಿಕ ಶಿಕ್ಷಣ ೪ ವರ್ಷ ಒಟ್ಟು ೮ ವರ್ಷದ ಸಮಗ್ರ ಕೋರ್ಸ್ ಆಗಿ ರೂಪಿತವಾಯಿತು.

ಸ್ವಾತಂತ್ರ್ಯ ಪೂರ್ವದಲ್ಲಿ ಮೈಸೂರು ಪ್ರಾಂತ್ಯದಲ್ಲಿಯೂ ಇದೇ ರೀತಿಯ ಪ್ರಯತ್ನದಲ್ಲಿ ಅಪಾರ ಯಶಸ್ಸು ಮತ್ತು ಜನಬೆಂಬಲವನ್ನು ಕಂಡುಕೊಂಡ ಮಹಾರಾಜರು ಶಿಕ್ಷಣದ ಸಾರ್ವತ್ರೀಕರಣಕ್ಕೆ ಇಂತಹುದೇ ಪ್ರಯತ್ನಗಳನ್ನು ನಡೆಸಿದ್ದರೆಂಬುದು ಗಮನಾರ್ಹ. ೧೮೫೪ರ ವುಡ್ಸ್ ಆಯೋಗದ ವರದಿಯನ್ನು ಆಧರಿಸಿ ರಾಜ್ಯಕ್ಕೆ ಒಂದು ಶಿಕ್ಷಣ ಯೋಜನೆಯನ್ನು ಅಂದಿನ ನ್ಯಾಯಾಂಗ ಆಯುಕ್ತರು ಸಿದ್ಧಪಡಿಸಿ ೧೮೫೭ರಲ್ಲಿ ಭಾರತ ಸರ್ಕಾರದ ಅನುಮೋದನೆ ಪಡೆದಿದ್ದರು. ೧೮೬೬ ರಲ್ಲಿ ಶಿಕ್ಷಣ ಇಲಾಖೆಯನ್ನು ಬೇರ್ಪಡಿಸಿ ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರ ವ್ಯಾಪ್ತಿಗೆ ತರುವುದರ ಮೂಲಕ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕೆ ಹೊಸ ಚಾಲನೆ ನೀಡಲಾಯಿತು. ನಾವು ಗಮನಹರಿಸಬೇಕಾದ ವಿಶೇಷ ಅಂಶವೆಂದರೆ ೧೯೧೧ರಲ್ಲಿ ಪ್ರಾಥಮಿಕ ಶಿಕ್ಷಣ ಉಚಿತವೆಂದು ಸಾರುವ ಒಂದು ರಾಜಾಜ್ಞೆಯನ್ನು ಹೊರಡಿಸಲಾಯಿತು. ಮುಂದುವರಿದು ೧೯೩೪ರಲ್ಲಿ ಶಿಕ್ಷಣವನ್ನು ಕಡ್ಡಾಯಗೊಳಿಸುವ ಕಾಯಿದೆಯನ್ನು ಜಾರಿಗೊಳಿಸಲಾಯಿತು.

ಕರ್ನಾಟಕದಲ್ಲಿ ಸ್ವಾತಂತ್ರ್ಯಾ ನಂತರ ಪ್ರಾಥಮಿಕ ಶಾಲೆಗಳು ಮತ್ತು ಪ್ರಾಥಮಿಕ ಶಿಕ್ಷಣದ ಮಹತ್ವ ಅರಿತು ೧೯೬೧ರಲ್ಲಿ ಕಡ್ಡಾಯವಾಗಿ ಪ್ರಾಥಮಿಕ ಶಿಕ್ಷಣ ಜಾರಿಗೆ ತರಲಾಯಿತು. ಇದನ್ನು ನಾವು ೧೯೬೧ರ ಕರ್ನಾಟಕದ ಶಿಕ್ಷಣದ ಕಾಯಿದೆ ಎನ್ನುತ್ತೇವೆ. ೧೯೫೦ರಲ್ಲಿ ಜಾರಿಗೆ ಬಂದ ನಮ್ಮ ಸಂವಿಧಾನ ೧೯೬೦ರ ಒಳಗಾಗಿ ಎಲ್ಲ ಮಕ್ಕಳಿಗೆ ಕಡ್ಡಾಯ ಶಿಕ್ಷಣವನ್ನು ಜಾರಿಗೆ ತರಬೇಕೆಂದು ಕೇಂದ್ರ

ಸರ್ಕಾರ ಆದೇಶ ನೀಡಿತ್ತು. ಈ ಆದೇಶದಂತೆ ಕರ್ನಾಟಕ ರಾಜ್ಯ ಈ ನೀತಿಯನ್ನು ಒಪ್ಪಿ ೧೯೬೧ರ ಆಗಸ್ಟ್ ಒಂದರಿಂದ ಜಾರಿಗೆ ಬರುವಂತೆ ಈ ಕಾಯಿದೆಯನ್ನು ಅನುಮೋದಿಸಿತು. ಈ ಕಾಯಿದೆಯನ್ನು ಗ್ರಾಮೀಣ ಪ್ರದೇಶದಲ್ಲಿ ಸಮುದಾಯದವರಿಗೆ ಶಿಕ್ಷಣದಲ್ಲಿ ಪಾಲ್ಗೊಳ್ಳಲು ಅವಕಾಶ ಕಲ್ಪಿಸುವ ಉದ್ದೇಶದಿಂದ ಜಾರಿಗೆ ತರಲಾಯಿತು. ಈ ಕಾಯಿದೆಯ ಪ್ರಕಾರ ೬-೧೦ ವರ್ಷದ ಒಳಗಿನ ಎಲ್ಲ ಮಕ್ಕಳನ್ನು ಶಾಲೆಗೆ ಬರುವಂತೆ ಬಲಪಡಿಸುವುದು. ಈ ಹಂತದ ಮಕ್ಕಳನ್ನು ಶಾಲೆಗೆ ಕಳುಹಿಸದ ಪಾಲಕರನ್ನು ಕಠಿಣ ಶಿಕ್ಷೆಗೆ ಒಳಪಡಿಸಬಹುದು. ಅಲ್ಲದೆ ಇಂತಹ ಮಕ್ಕಳನ್ನು ದುಡಿಸಿಕೊಳ್ಳುವ ಮಾಲೀಕರಿಗೆ ಶಿಕ್ಷೆಯೊಂದಿಗೆ ದಂಡವನ್ನು ವಿಧಿಸಬಹುದೆಂದು ಈ ಕಾಯಿದೆಯು ವಿವರಿಸುತ್ತದೆ. ಈ ಕಾಯಿದೆಯನ್ನು ಮೈಸೂರು ಕಡ್ಡಾಯ ಪ್ರಾಥಮಿಕ ಶಿಕ್ಷಣ ಕಾಯಿದೆ' ಎಂದು ಕರೆಯುತ್ತಾರೆ.

ಕರ್ನಾಟಕದಲ್ಲಿ ಮೊದಲು ಮಠಗಳು, ಅಗ್ರಹಾರಗಳು, ಬ್ರಹ್ಮಪುರಿಗಳು ಮುಂತಾದವುಗಳು ಸಾಂಪ್ರದಾಯಕ ಬೋಧನಾ ಪದ್ಧತಿಗಳನ್ನು ಅನುಸರಿಸಿ ಶಿಕ್ಷಣ ನೀಡುತ್ತಿದ್ದವು. ಆದರೆ ಇಂದಿನ ಕಾಲದಲ್ಲಿ ಶಿಕ್ಷಣದ ಮಹತ್ವ ಹೆಚ್ಚಿದಂತೆ ಹೊಸ ಯೋಜನೆಗಳು ಬರುತ್ತಿವೆ. ಆದರಲ್ಲೂ ಪ್ರಾಥಮಿಕ ಶಿಕ್ಷಣಕ್ಕೆ ಹೆಚ್ಚು ಮಹತ್ವ ಕೊಡುತ್ತಿದ್ದೇವೆ. ಈ ಹಿನ್ನಲೆಯಲ್ಲಿ ಕರ್ನಾಟಕದಲ್ಲಿ ಗುಣಾತ್ಮಕ ಶಿಕ್ಷಣ ನೀಡಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಅವುಗಳ ಮಹತ್ವ, ವ್ಯವಸ್ಥೆ ಹಾಗೂ ಪರಿಸ್ಥಿತಿಯನ್ನು ತಿಳಿಯೋಣ.

ಕನಾಟಕದಲ್ಲಿ ಆಧುನಿಕ ಶಿಕ್ಷಣ ಈ ಕೆಳಕಾಣಿಸಿದ ಕೆಲವು ಶಾಲೆಗಳ ಸ್ಥಾಪನೆಯೊಂದಿಗೆ ಪ್ರಾರಂಭವಾಯಿತು. ಅಂತಹ ಕೆಲವು ಪ್ರಮುಖ ಶಾಲೆಗಳೆಂದರೆ ೧೯೮೩ರಲ್ಲಿ ಫ್ರಿ ಇಂಗ್ಲೀಷ್ ಸ್ಕೂಲ್ ಎಂಬ ಶಾಲೆಯನ್ನು ಹಳೆ ಮೈಸೂರು ಪ್ರದೇಶಕ್ಕಾಗಿ ಮೈಸೂರು ಅರಮನೆಯಿಂದ ಸ್ಥಾಪಿಸಲಾಯಿತು. ೧೮೨೬ರಲ್ಲಿ ಬಾಂಬೆ ನ್ಯಾಟಿವ್ ಶಾಲೆ, ಧಾರವಾಡದಲ್ಲಿ ಸ್ಕೂಲ್ ಬುಕ್ ಸೊಸೈಟಿ, ಹುಬ್ಬಳ್ಳಿಯಲ್ಲಿ ಸ್ಥಾಪನೆಗೊಂಡ ೨ ಮರಾಠಿ ಪ್ರಾದೇಶಿಕ ಭಾಷಾ ಶಾಲೆಗಳು ಇವುಗಳು (ಬೆಳಗಾಂ ಪ್ರದೇಶಕ್ಕಾಗಿ) ಹಾಗೆಯೇ ೧೮೮೩ರಲ್ಲಿ ಸ್ಥಾಪನೆಗೊಂಡ ಮಂಗಳೂರು, ಉಡುಪಿ, ಬಳ್ಳಾರಿಗಳಲ್ಲಿನ ಶಾಲೆಗಳು (ಮದ್ರಾಸ್ ಕರ್ನಾಟಕ ಪ್ರದೇಶಕ್ಕಾಗಿ) ೧೮೫೩ರಲ್ಲಿ ಸರ್ ಸಾಲಾರ್ ಜಂಗ್ ರವರು ಸ್ಥಾಪಿಸಿದ "ದಾರುಲ್ ಉಲೂಮ್" ಶಾಲೆ (ಗುಲ್ಬರ್ಗಾ ಪ್ರದೇಶಕ್ಕಾಗಿ) ೧೮೩೪ರಲ್ಲಿ ಕೊಡಗು ಪ್ರದೇಶಕ್ಕಾಗಿ ಮಡಿಕೇರಿ ಮತ್ತು ವಿರಾಜಪೇಟೆಗಳಲ್ಲಿ ಶಾಲೆಗಳ ಪ್ರಾರಂಭ ಮತ್ತು ಪೊನ್ನಂಪೇಟೆಯಲ್ಲಿ ಸರ್ಕಾರ ಸ್ಥಾಪಿಸಿದ ಒಂದು ಶಾಲೆ, ಆ ಕಾಲದಲ್ಲಿ ಆಂಗ್ಲ ಮಾಧ್ಯಮದಲ್ಲಿ ಹೊಸಹೊಸ ಶಾಲೆಗಳನ್ನು ಸ್ಥಾಪಿಸಿ ಶಿಕ್ಷಣ ನೀಡುವ ಕಾರ್ಯದಲ್ಲಿ ಕ್ರೈಸ್ತಮಿಷನರಿಗಳು ಪ್ರಮುಖ ಪಾತ್ರ ವಹಿಸುತ್ತಿದ್ದವು. ಅಲ್ಲದೆ ಇದೇ ಅವಧಿಯಲ್ಲಿ 'ಶಿಕ್ಷಣ ಸಮನ್ವಯ ಸಲಹಾ ಸಮಿತಿ'ಯು ಪ್ರಾಥಮಿಕ ಶಿಕ್ಷಣ ೭ ವರ್ಷದ್ದಾಗಿರಬೇಕೆಂದು ಶಿಫಾರಸ್ಸು ಮಾಡಿತು. ತದನಂತರದಲ್ಲಿ ಪ್ರಾಥಮಿಕ ೪ವರ್ಷ ಮಾಧ್ಯಮಿಕ ೪ ವರ್ಷ ಒಟ್ಟು ೮ ವರ್ಷದ ಸಮಗ್ರ ಕೋರ್ಸ್ ಆಗಿ ರೂಪಿಸಲಾಯಿತು. ಅಲ್ಲದೆ ಒಂದು ಸಾಮಾನ್ಯ ಪಠ್ಯವನ್ನು ಸಹ ಜಾರಿಗೊಳಿಸಿದ್ದರಿಂದ ೧೯೫೯-೬೦ ರಿಂದ ಪ್ರಾರಂಭವಾಗಿ ೧೯೬೨-೬೩ರ ಹೊತ್ತಿಗೆ ರಾಜ್ಯದ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿ ಏಕರೂಪದ ಪಠ್ಯಕ್ರಮ ಅಳವಡಿಸಲಾಯಿತು, ೩ ಭಾಷೆಗಳನ್ನೊಳಗೊಂಡಂತೆ 'ತ್ರಿಭಾಷಾಸೂತ್ರ' ಜಾರಿಗೆ ತರಲಾಯಿತು. ೩ ರಿಂದ ೬ ನೇ ತರಗತಿಯವರೆಗೆ ಕನ್ನಡೇತರ ವಿದ್ಯಾರ್ಥಿಗಳಿಗಾಗಿ ಕನ್ನಡ ಭಾಷಾ ಅಧ್ಯಯನವನ್ನು ಕಡ್ಡಾಯಗೊಳಿಸಲಾಯಿತು. ಆರೋಗ್ಯ ಶಿಕ್ಷಣ, ವಿಜ್ಞಾನ, ನೀತಿ ಶಿಕ್ಷಣ, ದೈಹಿಕ ಶಿಕ್ಷಣಕ್ಕೆ ಪಠ್ಯವಸ್ತುವಿನ ಪ್ರಮುಖ ಸ್ಥಾನ ದೊರಕಿಸಲಾಯಿತು. ಈ ರೀತಿಯಾದ ಪಠ್ಯಕ್ರಮ ೧೯೭೪-೭೫ ರಿಂದ ಜಾರಿಗೊಂಡಿತು.

ಈ ನಡುವೆಯೇ ಸಮುದಾಯವನ್ನು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಚಿಂತನೆ ಸಾಕ್ಷರತಾ ಕಾರ್ಯಕ್ರಮಗಳಿಂದ ಪ್ರಾರಂಭವಾಯಿತು. ಇದನ್ನು ೧೯೬೮ರ ನೀತಿಯ ಭಾಗವಾಗಿ ಸಾಮಾಜಿಕ ಶಿಕ್ಷಣದಲ್ಲಿ ಈ ಪ್ರಕ್ರಿಯೆ ಆರಂಭವಾಯಿತು. ಇದರಲ್ಲಿ ವಯಸ್ಕರ ಶಿಕ್ಷಣ, ಗ್ರಾಮೀಣ ಸಾಕ್ಷರತಾ ಕಾರ್ಯಕ್ರಮ (RFLP), ರೈತರ ಕ್ರಿಯಾತ್ಮಕ ಸಾಕ್ಷರತಾ ಕ್ರಮ (FFLP), ನಂತರ ಸಂಪೂರ್ಣ ಸಾಕ್ಷರತಾ ಕಾರ್ಯಕ್ರಮ, ಇದು ಆ ಕಾಲದಲ್ಲಿ ಬಹಳ ಯಶಸ್ವಿಯಾಯಿತು. ಆದರೆ ಇದು ಶಾಲಾ ಶಿಕ್ಷಣದಲ್ಲಿ ಕಾಣಲಿಲ್ಲ. ಈಗಾಗಲು ಕಾರಣ ಶಿಕ್ಷಣವು ಸಾಮಾಜಿಕವಾಗಿ ಬದುಕಿನ ಭಾಗವಾಗಿತ್ತು. ಹೀಗಾಗಿ ಸಮುದಾಯಕ್ಕೆ ಹತ್ತಿರವಾಗಿತ್ತು. ಆದರೆ ಔಪಚಾರಿಕ ಶಿಕ್ಷಣ ಒಂದು ಸರ್ಕಾರಿ ಕಾರ್ಯಕ್ರಮವಾಗಿದ್ದು, ಇದು ಕೇವಲ ಸರ್ಕಾರದ ಮತ್ತು ಶಿಕ್ಷಕರ ಕೆಲಸ ಎಂಬ ಭಾವನೆ ಬಲವಾಗಿತ್ತು.

೨.೫ ಶಾಲಾ ಶಿಕ್ಷಣದಲ್ಲಿ ಸಮುದಾಯದ ಸಹಭಾಗಿತ್ವ

ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಹಾಗೂ ಗುಣಮಟ್ಟವನ್ನು ಉತ್ತಮಪಡಿಸುವ ನಿಟ್ಟಿನಲ್ಲಿ ಸಮುದಾಯವನ್ನು ಕ್ರಿಯಾತ್ಮಕವಾಗಿ ಪಾಲ್ಗೊಳ್ಳುವಂತೆ ಮಾಡಲು ಬಹಳ ಹಿಂದಿನಿಂದಲೂ ಪ್ರಯತ್ನಗಳು ನಡೆದಿವೆ. ೧೯೬೪ರ ಕೊಠಾರಿ ಆಯೋಗದಿಂದ ಪ್ರಾರಂಭಿಸಿ ೧೯೮೬ರ ವರೆಗಿನ ರಾಷ್ಟ್ರೀಯ ಶಿಕ್ಷಣ ನೀತಿಯವರೆಗೆ ಎಲ್ಲಾ ಆಯೋಗಗಳ ವರದಿಯಲ್ಲೂ ಶಾಲಾ ಶಿಕ್ಷಣದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯ ಮಹತ್ವದ ಬಗ್ಗೆ ಉಲ್ಲೇಖವಿದೆ. ಆದರೂ ೧೯೯೪ ರವರೆಗೂ ಶಾಲಾ ಶಿಕ್ಷಣದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆ ಪೂರ್ಣ ಪ್ರಮಾಣದಲ್ಲಿ ಯಶಸ್ವಿಯಾಗಿರಲಿಲ್ಲ. ಶಿಕ್ಷಣದ ಸಾರ್ವತ್ರೀಕರಣಕ್ಕೆ ಸಂಬಂಧಿಸಿದಂತೆ ಹಲವಾರು ಸವಾಲುಗಳು ನಮ್ಮ ಮುಂದಿವೆ. ರಾಜ್ಯ ಸರ್ಕಾರವು ಶಾಲಾ ಶಿಕ್ಷಣ ಸಾರ್ವತ್ರೀಕರಣದಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳುವ ಹಲವಾರು ಪ್ರಯತ್ನಗಳನ್ನು ಮಾಡುತ್ತಾ ಬಂದಿದೆ.

೧೯೮೬ರ ಪೂರ್ವದಲ್ಲಿ ಶಾಲಾಭಿವೃದ್ಧಿ ಸಮಿತಿಗಳ ರಚನೆಯನ್ನು ಮಾಡಲಾಯಿತು. ಈ ಸಮಿತಿಯಲ್ಲಿ ಅಂದು ಜಾರಿಯಲ್ಲಿದ್ದ ಮಂಡಲ ಪಂಚಾಯಿತಿ ಸದಸ್ಯರು ಮಾತ್ರವೇ ಇರುತ್ತಿದ್ದರು. ಉಲ್ಲೇಖ;- ನಿರ್ದೇಶಕರು, ಪತ್ರ ಸಂಖ್ಯೆ: ಇ೧೨:ಶಿ೧:೮೭.೮೮, ದಿನಾಂಕ: ೭-೧೧-೧೯೮೭ ವಿಷಯ:- ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳ ಶಾಲಾಭಿವೃದ್ಧಿ ಸಮಿತಿಗಳ ಪುನರ್ ರಚಿಸುವ ಕುರಿತು ಮತ್ತು ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಗನುಗುಣವಾಗಿ ಶಾಲಾಭಿವೃದ್ಧಿ ಸಮಿತಿಗಳ ಪುನರ್ ನಾಮಕರಣ ಸರ್ಕಾರದ ಆದೇಶ ಕುರಿತು, ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ತಮ್ಮ ಪ್ರಸ್ತಾವನೆ ದಿನಾಂಕ ೭-೧೧-೮೭ರಲ್ಲಿ ರಾಜ್ಯದಲ್ಲಿ ಪ್ರಸ್ತುತ ಜಿಲ್ಲಾ ಪರಿಷತ್ತುಗಳು ಹಾಗೂ ಮಂಡಲ ಪಂಚಾಯಿತಿಗಳು ಅಸ್ತಿತ್ವದಲ್ಲಿರುವುದರಿಂದಲೂ, ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಗನುಗುಣವಾಗಿ ಪ್ರಾಥಮಿಕ ಶಾಲೆಗಳ ಶಾಲಾಭಿವೃದ್ಧಿ ಸಮಿತಿಗಳ ಪುನರ್ ರಚನೆ ಹಾಗೂ ಶಾಲಾಭಿವೃದ್ಧಿ ಸಮಿತಿಗಳನ್ನು 'ಶೈಕ್ಷಣಿಕ ಸಮಿತಿ'ಗಳೆಂದು ಪುನರ್ ನಾಮಕರಣ ಮಾಡುವ ಕುರಿತಂತೆ ಹಾಗೂ ಪದಾಧಿಕಾರಿಗಳ ರಚನೆ ಮತ್ತು ಶಾಲಾ ಶೈಕ್ಷಣಿಕ ಸಮಿತಿಯ ಕಾರ್ಯಭಾರವನ್ನೊಳಗೊಂಡಂತೆ ಸರ್ಕಾರದ ಆದೇಶ ಸಂಖ್ಯೆ; ಇಡಿ;೧೬೦;ಪಿ.ಎಂ.ಎಸ್;೮೭. ಸರ್ಕಾರದ ಆದೇಶಕ್ಕಾಗಿ ಕೋರಿರುತ್ತಾರೆ.

ನಂತರ ಸಮುದಾಯವನ್ನು ಶಿಕ್ಷಣದ ಸಾರ್ವತ್ರೀಕರಣಕ್ಕೆ ಒಳಮಾಡಿಕೊಳ್ಳುವ ಮೊದಲ ಪ್ರಯತ್ನವಾಗಿ ದಿನಾಂಕ ೨೭.೦೨.೧೯೮೮ ರಲ್ಲಿ ಸರ್ಕಾರವು ಅದೇಶವೊಂದನ್ನು ಹೊರಡಿಸಿತು. ಈ

ಆದೇಶದ ಅನ್ವಯ ರಾಜ್ಯದಲ್ಲಿ ಅಂದು ಜಾರಿಯಲ್ಲಿದ್ದ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳನ್ನು ಮತ್ತು ಕೇಂದ್ರ ಸರ್ಕಾರದ ಹೊಸ ಶಿಕ್ಷಣ ನೀತಿಯನ್ನು ಗಮನದಲ್ಲಿಟ್ಟುಕೊಂಡು ಪ್ರಾಥಮಿಕ ಶಾಲೆಗಳಲ್ಲಿ ಹಿಂದೆ ಅಸ್ತಿತ್ವದಲ್ಲಿದ್ದ 'ಶಾಲಾಭಿವೃದ್ಧಿ ಸಮಿತಿ'ಗಳನ್ನು 'ಶೈಕ್ಷಣಿಕ ಸಮಿತಿ'ಗಳೆಂದು ಪುನರ್ ನಾಮಕರಣ ಮಾಡುವ ತೀರ್ಮಾನ ಕೈಗೊಳ್ಳಲಾಯಿತು. ಈ ಆದೇಶದಲ್ಲಿನ ಒಂದು ಮುಖ್ಯ ನ್ಯೂನ್ಯತೆಯೆಂದರೆ ಶಾಲೆಯಲ್ಲಿ ಕಲಿಯುತ್ತಿದ್ದ ಮಕ್ಕಳ ಪಾಲಕರಿಗೆ ಯಾವುದೇ ಅವಕಾಶವಿಲ್ಲದಿದ್ದು ಈ ಸಮಿತಿಯಲ್ಲಿ ಜನಪ್ರತಿನಿಧಿಗಳು ಮತ್ತು ಊರಿನ ಗಣ್ಯವ್ಯಕ್ತಿಗಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು.

ಮುಂದುವರಿದು ಸರ್ಕಾರಿ ಆದೇಶ ಸಂಖ್ಯೆ: ಇಡಿ ೧೬೨ ಎಂ.ಸಿಡಿ ೯೪ ಬೆಂಗಳೂರು, ದಿನಾಂಕ ೧ನೆ ಆಗಸ್ಟ್ ೨೫. ಈ ಆದೇಶದಲ್ಲಿ ಗ್ರಾಮ ಹಂತದಲ್ಲಿ ಶೈಕ್ಷಣಿಕ ಚಡುವಟಿಕೆಗಳ ಉಸ್ತುವಾರಿ ನೋಡಿಕೊಳ್ಳಲು ಗ್ರಾಮ ಶಿಕ್ಷಣ ಸಮಿತಿಗಳನ್ನು ರಚಿಸಲು ಕುರಿತು ಆದೇಶ ಹೊರಡಿಸಲಾಗಿದೆ. ಇದಾದ ನಂತರ ಜುಲೈ ೧೯೯೫ರಲ್ಲಿ ಪ್ರಾಥಮಿಕ ಶಿಕ್ಷಣದ ನಿರ್ದೇಶಕರು ರಾಜ್ಯದ ಎಲ್ಲಾ ಉಪನಿರ್ದೇಶಕರಿಗೆ ಬರೆದ ಪತ್ರದಲ್ಲಿ ರಾಜ್ಯದ ಎಲ್ಲಾ ಶಾಲೆಗಳಲ್ಲಿ ೯ ರಿಂದ ೧೧ ಜನರನ್ನೊಳಗೊಂಡ 'ಶಾಲಾಭಿವೃದ್ಧಿ ಸಮಿತಿ' ರಚಿಸುವಂತೆ ಸೂಚನೆ ನಿಡಿದ್ದರು. ಈ ಪತ್ರದ ಅನ್ವಯ ಸಮಿತಿಯಲ್ಲಿ ಮೊದಲ ಬಾರಿಗೆ ಒಬ್ಬ ಪೋಷಕ ಪ್ರತಿನಿಧಿಗೆ ಅವಕಾಶ ಕಲ್ಪಿಸಲಾಗಿತ್ತು. ಆಗಸ್ಟ್ ೧೯೯೫ ರಲ್ಲಿ ಪ್ರತಿಯೊಂದು ಗ್ರಾಮದಲ್ಲಿ ಶೈಕ್ಷಣಿಕ ಚಟುವಟಿಕೆಗಳ ಉಸ್ತುವಾರಿ ನೋಡಿಕೊಳ್ಳಲು ಗ್ರಾಮ ಶಿಕ್ಷಣ ಸಮಿತಿಗಳನ್ನು ರಚಿಸುವಂತೆ ಸರ್ಕಾರ ಆದೇಶಿಸಿತು. ಈ ಸಮಿತಿಯಲ್ಲಿ ಕನಿಷ್ಟ ೭ ರಿಂದ ೧೫ ಸದಸ್ಯರಿದ್ದು, ಪೋಷಕ ಪ್ರತಿನಿಧಿಯೊಬ್ಬರಿಗೆ ಅವಕಾಶ ಕಲ್ಪಿಸಲಾಗಿತ್ತು.

ಪ್ರಥಮವಾಗಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಜಾರಿಯಲ್ಲಿದ್ದ ಜಿಲ್ಲೆಗಳಲ್ಲಿ ಮಾತ್ರ ಗ್ರಾಮ ಶಿಕ್ಷಣ ಸಮಿತಿಗಳು ಅಸ್ತಿತ್ವಕ್ಕೆ ಬಂದವು. ಒಟ್ಟಾರೆ ಸರ್ವ ಶಿಕ್ಷಣ ಅಭಿಯಾನದ ಪೂರ್ವದಲ್ಲಿದ್ದ ಶಾಲಾಭಿವೃದ್ಧಿ/ಶಿಕ್ಷಣ ಸಮಿತಿ/ಗ್ರಾಮ ಶಿಕ್ಷಣ ಸಮಿತಿಗಳ ಮೂಲಕ ಶಾಲಾ ಶಿಕ್ಷಣದಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳಲು ಹಲವು ಪ್ರಯತ್ನಗಳಾಗಿದ್ದು ಈ ಎಲ್ಲಾ ಪ್ರಯತ್ನಗಳು ಮೂಲ ವಾರಸುದಾರರಾದ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ-ತಾಯಿಗಿಂತಲೂ ಜನಪ್ರತಿನಿಧಿ ಮತ್ತು ಊರಿನ ಗಣ್ಯ ವ್ಯಕ್ತಿಗಳಿಗೆ ಹೆಚ್ಚಿನ ಆದ್ಯತೆ ನೀಡುವ ಪ್ರಯತ್ನಗಳಾಗಿದ್ದವು. ಸಮುದಾಯವನ್ನು ಅದರಲ್ಲೂ ವಿಶೇಷವಾಗಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ-ತಾಯಂದಿರನ್ನು ಶಾಲಾ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವ ಪ್ರಾಮಾಣಿಕ ಮತ್ತು ಮಹತ್ವದ ಬೆಳವಣಿಗೆಗಳು ತೀರಾ ಇತ್ತೀಚಿನವು.ಸಮುದಾಯವನ್ನು ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳುವ ಕೆಲಸ ಪ್ರಾರಂಭವಾದರೂ ಸಮಾಜದ ಮೇಲ್ವರ್ಗದ ಸ್ಥರಕ್ಕೆ ಮಾತ್ರ ಸೀಮಿತವಾಗಿತ್ತು. ಮೂಲ ವಾರಸುದಾರರಿಗೆ ಹೆಚ್ಚಿನ ಅವಕಾಶಗಳಿರಲಿಲ್ಲ. ಒಟ್ಟಾರೆ ಸರ್ವ ಶಿಕ್ಷಣ ಅಭಿಯಾನದ ಪೂರ್ವದಲ್ಲಿದ್ದ ಶಾಲಾಭಿವೃದ್ಧಿ/ಶಿಕ್ಷಣ ಸಮಿತಿ/ಗ್ರಾಮ ಶಿಕ್ಷಣ ಸಮಿತಿಗಳ ಮೂಲಕ ಶಾಲಾ ಶಿಕ್ಷಣದಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳಲು ಹಲವು ಪ್ರಯತ್ನಗಳಾಗಿದ್ದು, ಇವುಗಳಲ್ಲಿ ಜನಪ್ರತಿನಿಧಿ ಮತ್ತು ಊರಿನ ಗಣ್ಯ ವ್ಯಕ್ತಿಗಳಿಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು.

ಯಾವುದೇ ಒಂದು ಕಾರ್ಯಕ್ರಮದ ಯಶಸ್ಸು ಸಮುದಾಯದ ಸಕ್ರಿಯ ಭಾಗವಹಿಸುವಿಕೆಯಲ್ಲಿ ಅಡಗಿದೆ. ಈ ಮಾತು ಶಿಕ್ಷಣ ಕ್ಷೇತ್ರಕ್ಕೂ ಅನ್ವಯಿಸುತ್ತದೆ. ಕರ್ನಾಟಕ ಸರ್ಕಾರವು ರಾಜ್ಯದ ಪ್ರಾಥಮಿಕ ಶಿಕ್ಷಣದ ಸುಧಾರಣೆಯ ಬಗೆಗೆ ಅಧ್ಯಯನ ನಡೆಸಲು ಈ ಮಧ್ಯೆ ೧೯೯೯ರಲ್ಲಿ ಖ್ಯಾತಶಿಕ್ಷಣ ತಜ್ಞರಾದ ಡಾ. ರಾಜಾರಾಮಣ್ಣ ಅವರ ಅಧ್ಯಕ್ಷತೆ ಹಾಗೂ ಪ್ರೊ. ಆರ್. ಗೋವಿಂದ, ಪ್ರೊ, ರಾಧಿಕಾ

ಹರ್ಡಬರ್ಗರ, ಪ್ರೊ. ಎಂ.ಐ. ಸವದತ್ತಿ, ಪ್ರೊ. ವಿ.ಎಸ್.ಸೀತಾರಾಮು, ಶ್ರೀ ಕೆ.ಪಿ. ಸುರೇಂದ್ರನಾಥ್, ಡಾ.ಟಿ.ಕೆ. ಜಯಲಕ್ಷ್ಮೀ, ಶ್ರೀ ನಂಜುಂಡಯ್ಯ ಮತ್ತು ಶ್ರೀ ಆರ್.ಎನ್.ಶಾಸ್ತ್ರಿ ಮುಂತಾದ ೯ ಜನ ಸದಸ್ಯರ ಸಮಿತಿಯನ್ನು ರಚಿಸಿದ್ದು, ಅದು ತನ್ನ ಮಧ್ಯಂತರ ವರದಿಯನ್ನು ನೀಡಿದೆ. ಈ ವರದಿಯು ೨೦೦೦ನೇ ಇಸವಿಯ ಜನವರಿ ತಿಂಗಳಲ್ಲಿ ಅಂತಿಮ ವರದಿಯು ಪ್ರಕಟಗೊಂಡಿತು. ಡಾ. ರಾಜಾರಾಮಣ್ಣ ಅವರ ನೇತೃತ್ವದ ಸಮಿತಿಯ ಶಿಫಾರಸ್ಸಿನ ಫಲಶೃತಿಯಂತೆ ಕರ್ನಾಟಕ ಶಿಕ್ಷಣ ಅಧಿನಿಯಮ ೧೯೮೩ರ ತಿದ್ದುಪಡಿ ಕಾಯ್ದಿರಿಸಿ ಕಾರ್ಯಕಾರಿ ಆದೇಶದ ಮುಖಾಂತರ ಸಂಖ್ಯೆ- ನಿ(ಅ.ಸಂ)ಆ.ಶಾ/ಕ.ಶಿ.ಕಾ.ತಿ-೧/೨೦೦೦-೦೧, ದಿನಾಂಕ-೩೦-೩-೨೦೦೧ ಇದರಲ್ಲಿ ಕರ್ನಾಟಕ ರಾಜ್ಯದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ಶಾಲಾಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ(ಎಸ್.ಡಿ.ಎಂ.ಸಿ)ಗಳನ್ನು ರಚಿಸುವ ಬಗ್ಗೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರ ಮೇರೆಗೆ ಈ ಆದೇಶ ಹೊರಡಿಸಲಾಗಿದೆ. ಮುಂದುವರಿದು ಸರ್ಕಾರಿ ಆದೇಶ ಸಂಖ್ಯೆಇಡಿ-೧ಪಿ.ಜಿಎಸ್-೨೦೦೧ ದಿನಾಂಕ ೨೮ - ೦೪-೨೦೦೧ ಆದೇಶದ ಮೂಲಕ ಹಿಂದಿನ ಶಾಲಾಭಿವೃದ್ಧಿ ಸಮಿತಿ ರದ್ದುಗೊಳಿಸಿ ರಾಜ್ಯದ ಎಲ್ಲಾ ಸರಕಾರಿ ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ೨೦೦೧-೨೦೦೨ ರ ಶೈಕ್ಷಣಿಕ ವರ್ಷದಿಂದ ಅಸ್ತಿತ್ವಕ್ಕೆ ಬಂದಿತು. ಇದರಲ್ಲಿ ಒಟ್ಟು ೧೯ ಜನರಿರುವಂತೆ ತಿಳಿಸಿತ್ತು. ಇದರಲ್ಲಿ ಶಾಲೆಯಲ್ಲಿ ಓದುತ್ತಿರುವ ಪೋಷಕರಿಂದ ಆಯ್ಕೆಯಾದ ೯ ಜನರು, ೪ ಜನ ಪದನಿಮಿತ್ತ ಸದಸ್ಯರು ೬ ಜನ ನಾಮನಿರ್ದೇಶಿತ ಸದಸ್ಯರು. ಇದರಲ್ಲಿ ೩ ವರ್ಷ ಈ ಸಮಿತಿಯ ಕಾಲಾವಧಿಯನ್ನು ಸೂಚಿಸಲಾಯಿತು. ಈ ಸರ್ಕಾರಿ ಆದೇಶವು ರಾಜ್ಯಾದ್ಯಂತ ಹೆಚ್ಚು ಉತ್ಸಾಹ ಮತ್ತು ಪರಿಣಾಮಕಾರಿ ಜಾರಿಗೊಂಡ ಕಾರಣ ಎಲ್ಲಾ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ರಚನೆಗೊಂಡವು. ೨೦೦೧ ರ ಆಗಸ್ಟ್ ಅಂತ್ಯಕ್ಕೆ ಶೇಕಡ ೭೦ ರಿಂದ ೮೦ ಶಾಲೆಗಳಲ್ಲಿ ಎಸ್.ಡಿ.ಎಂ.ಸಿಗಳು ರಚನೆಗೊಂಡು ಕೆಲಸ ನಿರ್ವಹಿಸಲು ಪ್ರಾರಂಭಿಸಿದವು. ಈ ಆದೇಶದ ಕಂಡಿಕೆ ೨ ರ ಪ್ರಕಾರ ಎಸ್.ಡಿ.ಎಂ.ಸಿಯ ಕಾಲಾವಧಿ ೩ ವರ್ಷಗಳು ಈ ನಡುವೆ ವಿಧಾನ ಸಭಾ ಸದಸ್ಯರಿಂದ ಮತ್ತು ಜನ ಪ್ರತಿನಿಧಿಗಳಿಂದ ಎಸ್.ಡಿ.ಎಂ.ಸಿ.ಗಳ ಬಗ್ಗೆ ವಿರೋಧವನ್ನು ಸೂಚಿಸಿ ೪.೦೮.೨೦೦೧ ರ ಆದೇಶದಲ್ಲಿ ಅಧ್ಯಕ್ಷರನ್ನು ಆಯ್ಕೆಯನ್ನು ಮಾಡುವ ಅಧಿಕಾರವನ್ನು ಆ ಕ್ಷೇತ್ರದ ಶಾಸಕರಿಗೆ ನೀಡಿದರು. ನಂತರ ಇದು ಸಾಲದು ಎಂಬಂತೆ ದಿನಾಂಕ ೧೬.೦೮.೨೦೦೧ ರ ಸರ್ಕಾರಿ ಆದೇಶದಲ್ಲಿ ಎಸ್.ಡಿ.ಎಂ.ಸಿ ಸದಸ್ಯರನ್ನು ನಾಮನಿರ್ದೇಶನ ಮಾಡುವ ಅಧಿಕಾರವನ್ನು ವಿಧನಾಸಭಾ ಸದಸ್ಯರಿಗೆ ನೀಡಲಾಯಿತು. ಇದು ಪ್ರಜಾಪ್ರಭುತ್ವ ಮಾದರಿಗೆ ವಿರೋಧಿ ನೀತಿಯಾಗಿದ್ದರಿಂದ ಮತ್ತು ಶಾಲೆಗಳಲ್ಲಿ ಪಕ್ಷ ರಾಜಕೀಯಕ್ಕೆ ಎಡೆಮಾಡಿಕೊಡುತ್ತದೆ ಮತ್ತು ಎಸ್.ಡಿ.ಎಂ.ಸಿ ಪ್ರಾರಂಭವಾಗಿ ಕೆಲವೆ ತಿಂಗಳಾಗಿದ್ದರಿಂದ ಅನೇಕ ಎಸ್.ಡಿ.ಎಂ.ಸಿ ಸದಸ್ಯರುಮಾರ್ಪಡಿಸಿದ ಸುತ್ತೋಲೆಗಳ ಬಗ್ಗೆ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಲಾಯಿತು. ಈ ನಡುವೆ ಮೇಲೆ ಹೇಳಿದ ಎರಡು ಸರ್ಕಾರಿ ಆದೇಶಗಳ ಮಧ್ಯ ರಚನೆಯಾದ ಎಸ್.ಡಿ.ಎಂ.ಸಿಗಳಲ್ಲಿ ವಿಧಾನ ಸಭಾ ಸದಸ್ಯರು ಯಾವುದೇ ಬದಲಾವಣೆ ಮಾಡದಿದ್ದಲ್ಲಿ ಅಂತಹ ಸಮಿತಿಗಳು ಸರ್ಕಾರದ ಮುಂದಿನ ಆದೇಶದವರೆಗೆ ಮುಂದುವರಿಯುತ್ತವೆ. ಎಂದು ದಿನಾಂಕ ೧.೦೧.೨೦೦೨ರ ಸರ್ಕಾರಿ ಆದೇಶದಲ್ಲಿ ಹೇಳಲಾಗಿದೆ. ಅಂದರೆ ಅಂತಹ ಎಸ್.ಡಿ.ಎಂ.ಸಿಗಳ ಕಾರ್ಯಾವದಿ ಮಿತಿ ಇಲ್ಲದ ಕಾರ್ಯಾವದಿಯಾಯಿತು.

ನಂತರ ದಿನಾಂಕ ೧೬.೦೮.೨೦೦೧ರ ಸರ್ಕಾರಿ ಆದೇಶದನ್ವಯ ಎಸ್.ಡಿ.ಎಂ.ಸಿಯ ವ್ಯವಸ್ಥೆಯ ಬಗ್ಗೆ ಸೂಕ್ತ ನಿರ್ಣಯ ತೆಗೆದುಕೊಳ್ಳುವ ಸಂಬಂಧದಲ್ಲಿ ಸಮಿತಿಗಳ ಕಾರ್ಯನಿರ್ವಹಣೆಯನ್ನು ಫೆಬ್ರವರಿ ೨೦೦೨ರಲ್ಲಿ ಪರಿಶೀಲಿಸಿ ಸರ್ಕಾರಕ್ಕೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರು ವರದಿಯನ್ನು ಸಲ್ಲಿಸಬೇಕಾಗಿತ್ತು. ಅಂತಹ ವರದಿಯನ್ನು ಯಾರು ಸಲ್ಲಿಸದಿರುವುದು ಕಂಡು ಬರುತ್ತದೆ. ಇಂತಹ ಸಂದರ್ಭಗಳಲ್ಲಿ ಹಿಂದಿನ ೨ ಆದೇಶಗಳನ್ನು ಹಿಂತೆಗೆದುಕೊಳ್ಳುವುದು ಸೂಕ್ತವೆಂಬ

ಅಭಿಪ್ರಾಯದೊಂದಿಗೆ ಆಯುಕ್ತರಿಂದ ಕಾರ್ಯದರ್ಶಿಯವರಿಗೆ ೫.೧೦.೨೦೦೨ ರಂದು ಪತ್ರ ಬರೆಯಲಾಯಿತು. ಇಂತಹ ಸಂದರ್ಭಗಳಲ್ಲಿ ಎಸ್.ಡಿ.ಎಂ.ಸಿ ವ್ಯವಸ್ಥೆ ಮುಂದುವರಿಸಬಹುದು ಬಗ್ಗೆ ಸರ್ಕಾರ ತೆಗೆದುಕೊಳ್ಳುವ ಅಂತಹ ನಿರ್ಣಯಕ್ಕೆ ಒಳಪಟ್ಟು ಸಧ್ಯಕ್ಕೆ ಈ ಮುಂದಿನಂತೆ ಕ್ರಮ ಕೈಗೊಳ್ಳಬಹುದು. ಅವುಗಳೆಂದರೆ ವರ್ಷಗಳ ಕಾಲಾವದಿ ಪೂರೈಸಿರುವ ಎಲ್ಲಾ ಸಮಿತಿಗಳನ್ನು ಸಂಬಂಧ ಪಟ್ಟ ವಿಧಾನ ಸಭಾ ಸದಸ್ಯರು ಪುನರ್‌ರಚನೆ ಮಾಡಬಹುದು, ೧.೦೧.೨೦೦೨ರ ಸರ್ಕಾರಿ ಆದೇಶದ ಪ್ರಕಾರ ಸರ್ಕಾರದ ಮುಂದಿನ ಆದೇಶದವರೆಗೂ ಮುಂದುವರಿಸಿರುವ ಸಮಿತಿಗಳು ಅಸ್ಥಿತ್ವಕ್ಕೆ ಬಂದು ೩ ವರ್ಷಗಳ ಅವಧಿಯನ್ನು ಪೂರೈಸಿದ್ದಲ್ಲಿ ಅಂತಹ ಸಮಿತಿಗಳನ್ನು ಸಹ ವಿಧಾನಸಭಾ ಸದಸ್ಯರು ಪುನರ್ ರಚಿಸಬಹುದು, ಆದರೆ ೩ ವರ್ಷಗಳ ಕಾರ್ಯಾವಧಿಯನ್ನುಪೂರೈಸದೇ ಇರುವ ಎಸ್.ಡಿ.ಎಂ.ಸಿಗಳನ್ನು ವಿಧಾನಸಭಾ ಸದಸ್ಯರು ಪುನರ್ ರಚಿಸುವಂತಿಲ್ಲ, ಆದರೆ ವಿಧಾನಸಭಾ ಸದಸ್ಯರು ಅಧ್ಯಕ್ಷರಾಗಿರುವಂತಹ ಸಮಿತಿಗಳಿಗೆ, ಅಂತಹ ಸಮಿತಿಗಳು ೩ ವರ್ಷಗಳ ಕಾಲಾವದಿ ಮುಗಿಸಿರಲಿ ಅಥವಾ ಮುಗಿಸದೇ ಇರಲಿ ಹಾಲಿ ವಿಧಾನಸಭಾ ಸದಸ್ಯರು ಅಧ್ಯಕ್ಷರಾಗಿರುತ್ತಾರೆ. ಉಳಿದಂತೆ ಅಂತಹ ಸಮಿತಿಗಳು ರಚನೆಯಾದ ೩ ವರ್ಷಗಳ ಕಾಲಾವದಿಯಾಗಿರುವವರೆಗೂ ಯಾವುದೇ ಬದಲಾವಣೆಯಾಗತಕ್ಕದ್ದಲ್ಲ ಎಂಬುದನ್ನು ಈ ಪತ್ರದಲ್ಲಿ ಉಲ್ಲೇಖಮಾಡಿದ್ದರು.

ಈ ಮಧ್ಯೆ ಕರ್ನಾಟಕದಲ್ಲಿ ವಿಧಾನಸಬೆಗೆ ಹೊಸದಾಗಿ ಚುನಾವಣೆ ನಡೆದು ಹೊಸ ವಿಧಾನಸಭಾ ಸದಸ್ಯರು ಆಯ್ಕೆಯಾಗಿ ಬಂದಿರುವುದರಿಂದ ಈ ಬಗ್ಗೆ ಸಾರ್ವಜನಿಕ ಶಿಕ್ಷಣ ಆಯುಕ್ತರು ಸರ್ಕಾರದ ಮಾರ್ಗದರ್ಶನ ಕೋರಿ ದಿನಾಂಕ ೨.೦೬.೨೦೦೪ರ ತಮ್ಮ ಪತ್ರ ಬರೆಯುತ್ತಾರೆ. ಸಂಖ್ಯೆ:- ಇಡಿ೧೨೨ ಪಿ.ಬಿ.ಎಸ್. ೨೦೦೪ ದಿನಾಂಕ- ೦೭-೦೮-೨೦೦೪. ಈ ಆದೇಶದಲ್ಲಿ ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢಶಾಲೆಗಳಲ್ಲಿ ಎಸ್.ಡಿ.ಎಮ್.ಸಿ. ಸಮಿತಿಗಳ ಪುನರ್ ರಚನೆಯ ಬಗ್ಗೆ ತಿಳಿಸಲಾಗಿದೆ. ನಂತರ ಸಂಖ್ಯೆ –ಇಡಿ೧೨೨ ಪಿಬಿಎಸ್ ೨೦೦೪ ದಿನಾಂಕ ೩೧ ೦೫ ೨೦೦೫ ರ ಸುತ್ತೋಲೆಯಲ್ಲಿ ನಿಗಧಿತ ಅವಧಿ ಪೂರ್ಣಗೊಂಡು ಹೊಸ ಎಸ್.ಡಿ.ಎಂ.ಸಿ ಸಮಿತಿ ರಚನೆ ಆಗದಿರುವ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ಸಮಿತಿಗಳ ನಿಧಿ ನಿರ್ವಹಣೆಗೆ ಸಂಬಂಧಿಸಿದ ಶಾಲೆಗಳ ಮುಖ್ಯ ಶಿಕ್ಷಕರು ಹಾಗೂ ಅತ್ಯಂತ ಹಿರಿಯ ಶಿಕ್ಷಕರ ಸಹಾಯದಿಂದ ಜವಾಬ್ದಾರಿ ನಿರ್ವಹಿಸಬೇಕು. ಆದರೆ ಅವರು ಸಮಿತಿಗೆ ಸಂಬಂಧಿಸಿದಂತೆ ಯಾವುದೇ ಅಂತಿಮ ನಿರ್ಧಾರ ಕೈಗೊಳ್ಳುವ ಪೂರ್ವದಲ್ಲಿ ಅಂತಹ ಕರಾವಿನಬಗ್ಗೆ ಹಳೆಯ ಸಮಿತಿಯ ಪೋಷಕ ಸದಸ್ಯರುಗಳ ಪೂರ್ವಭಾವಿ ಅನುಮತಿ ಪಡೆಯಬೇಕು.ತಮ್ಮ ಮಗು/ಮಕ್ಕಳು ಸದರಿ ಶಾಲೆಯ ವಿದ್ಯಾರ್ಥಿ ಆಗದಿದ್ದರೂ ಸಹ ತಮ್ಮ ಸಂಬಂಧಿಗಳ ಮಕ್ಕಳು ಆ ಶಾಲೆಯಲ್ಲಿ ಕಲಿಯುತ್ತಿದ್ದಾರೆ ಎಂಬ ಕಾರಣದಿಂದ ತಾವೂ ಪೋಷಕರು ಎಂದು ತಿಳಿದುಕೊಂಡು ಸಮಿತಿಗಳಲ್ಲಿ ಸದಸ್ಯರಾಗುವುದನ್ನು ನಿಷೇಧಿಸಲಾಗಿದೆ ಎಂಬುದನ್ನು ಸ್ಪಷ್ಟವಾಗಿ ತಿಳಿಸಲಾಯಿತು.

೨೦೦೧ರಲ್ಲಿ ರಚನೆಯಾದ ಎಸ್.ಡಿ.ಎಂ.ಸಿಗಳ ಕಾರ್ಯವೈಖರಿಯನ್ನು ಕುರಿತು ಭಾರತೀಯ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಕಾನೂನು ಶಾಲೆಯ ಮಗು ಮತ್ತು ಕಾನೂನು ಕೇಂದ್ರ ಮತ್ತು ಅಜೀಂ ಪ್ರೇಂಜೀ ಪ್ರತಿಷ್ಠಾನದ ಸಹಯೋಗದಲ್ಲಿ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಯ ನೀತಿ ನಿರೂಪಣ ಘಟಕವು ಆಳವಾದ ಅಧ್ಯಯನ ನಡೆಸಿ ವರದಿಯನ್ನು ಜುಲೈ ೨೦೦೪ರಲ್ಲಿ ಸರ್ಕಾರಕ್ಕೆ ಸಲ್ಲಿಸಿತು. ಈ ಅಧ್ಯಯನದ ಆಧಾರದ ಮೇಲೆ ರಾಜ್ಯ ಸರ್ಕಾರವು ಎಸ್.ಡಿ.ಎಂ.ಸಿಗಳ ಕಾರ್ಯನಿರ್ವಹಣೆಯನ್ನು ಮತ್ತಷ್ಟು ಸುಧಾರಿಸಲು ಸವಿಸ್ತಾರವಾದ ಉಪವಿಧಿಗಳನ್ನು ರಚಿಸುವ ತೀರ್ಮಾನ ಮತ್ತು ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕೆ ಒತ್ತಾಸೆಯಾಗಿ ಸಮುದಾಯದ ಸಹಭಾಗಿತ್ವವನ್ನು ಸಾಂಸ್ಥಿಕರಣಗೊಳಿಸಲು

ಶಾಲಾಭಿವೃದ್ಧಿ ಮೇಲುಸ್ತುವಾರಿ ಸಮಿತಿಗಳನ್ನು ಗ್ರಾಮ ಪಂಚಾಯತಿಯ ಭಾಗವಾಗಿ ಬೆಸೆಯಲು ಸಹಾಯಕವಾಗುವ ಉಪವಿಧಿಗಳನ್ನು ರಚಿಸುವ ತೀರ್ಮಾನ ಮಾಡಿತ್ತು.

ಸರ್ಕಾರದ ಆಶಯದಂತೆ ಎಸ್.ಡಿ.ಎಂ.ಸಿಗಳನ್ನು ಪಂಚಾಯತಿಯ ಭಾಗವಾಗಿ ಬೆಸೆಯಲು ಅಗತ್ಯವಾದ ಕಾನೂನಿನ ಚೌಕಟ್ಟನ್ನು ಸುದೀರ್ಘವಾಗಿ ಅಧ್ಯಯನ ಮಾಡಿದ ಮಗು ಮತ್ತು ಕಾನೂನು ಕೇಂದ್ರವು ಮಾದರಿ ಉಪವಿಧಿಗಳನ್ನು ಕುರಿತಾದ ಮೊದಲ ಕರಡು ಪ್ರತಿಯನ್ನು ರಾಜ್ಯಸರ್ಕಾರಕ್ಕೆ ಜನವರಿ೨೦೦೫ರಂದು ಸಲ್ಲಿಸಿತು. ಶಿಕ್ಷಣ ಇಲಾಖೆಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣದ ಕಾರ್ಯದರ್ಶಿಯವರ ನೇತೃತ್ವದಲ್ಲಿ ಶಿಕ್ಷಣ ಇಲಾಖೆಯು ತನ್ನ ಎಲ್ಲಾ ಅಧಿಕಾರಿಗಳು ಮತ್ತು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಧಿಕಾರಿಗಳ ಜೊತೆ ಕರಡು ಮಾದರಿ ಉಪವಿಧಗಳ ಬಗ್ಗೆ ಕೂಲಂಕುಶವಾಗಿ ಚರ್ಚಿಸಿ ಕೆಲವು ಮಾರ್ಪಾಡು ಮತ್ತು ತಿದ್ದುಪಡಿಗಳ ಮೂಲಕ ಪುನರ್ ಮಂಡಿಸುವಂತೆ ತಿಳಿಸಲಾಯಿತು. ರಾಜ್ಯ ಸರ್ಕಾರ ಸೂಚಿಸಿದ ಎಲ್ಲಾ ಅಂಶಗಳನ್ನು ಪುನರ್ ಪರಿಶೀಲಿಸಿ ಮಾದರಿ ಉಪವಿಧಗಳ ೨ನೆ ಪರಿಷ್ಕೃತ ಕರಡು ಪ್ರತಿಯನ್ನು ಸರ್ಕಾರದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ಕಾರ್ಯದರ್ಶಿಯವರಿಗೆ ಏಪ್ರಿಲ್ ೨೦೦೫ರಂದು ಸಲ್ಲಿಸಿತು. ಈ ಪರಿಷ್ಕೃತ ಕರಡು ಮಾದರಿ ಉಪವಿಧಿಗಳ ಬಗ್ಗೆ ಸುಮಾರು ಒಂದು ವರ್ಷಗಳ ಕಾಲ ನಿರಂತರವಾಗಿ ಮತ್ತು ಸುದೀರ್ಘವಾಗಿ ವಿವಿಧ ಹಂತದಲ್ಲಿ ಚರ್ಚೆಗಳು ನಡೆದವು. ಈ ಚರ್ಚೆಗಳ ಸಂದರ್ಭದಲ್ಲಿ ಹಲವಾರು ಬಾರಿ ಮಾದರಿ ಉಪವಿಧಿಗಳ ಪಠ್ಯವಸ್ತು, ವ್ಯಾಪ್ತಿ ಮತ್ತು ಇತಿಮಿತಿಗಳ ಬಗ್ಗೆ ವ್ಯಾಪಕವಾಗಿ ಚರ್ಚಿಸಲಾಯಿತು. ಈ ಎಲ್ಲಾ ಚರ್ಚೆಗಳ ಹಿನ್ನಲೆಯಲ್ಲಿ ಮೂಡಿಬಂದ ಸಲಹೆ ಸೂಚನೆಗಳನ್ನು ಪರಿಸೀಲಿಸಿ ಮಾದರಿ ಉಪವಿಧಿಗಳಿಗೆ ಅಗತ್ಯವಾದ ಮಾರ್ಪಡುಗಳನ್ನು ಮಾಡಿ ಅಂತಿಮವಾಗಿ ಕರ್ನಾಟಕ ಗ್ರಾಮ ಪಂಚಾಯತಿಗಳ(ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಉಪಸಮಿತಿಗಳು) (ಮಾದರಿ ಉಪವಿಧಿಗಳ) ೨೦೦೫ ಅಂತಿಮ ಪರಿಷ್ಕೃತ ಪ್ರತಿಯನ್ನು ಡಿಸೆಂಬರ್ ೨೦೦೫ರಲ್ಲಿ ಸೂಚಿಸಿತು. ಈ ಉಪವಿಧಿಗಳನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಮಾದರಿ ಉಪವಿಧಿಗಳ ಕರಡು ಪ್ರತಿಯನ್ನು ಅದರಿಂದ ಭಾದಿತರಾಗಬಹುದಾದ ವ್ಯಕ್ತಿಗಳ ಮತ್ತು ಸಂಸ್ಥೆಗಳ ಮಾಹಿತಿಗಾಗಿ ಪ್ರಕಟಿಸಿ ಸದರಿ ಕರಡಿಗೆ ಸಂಬಂಧಿಸಿದಂತೆ ಯಾವುದೇ ವ್ಯಕ್ತಿ/ಸಂಸ್ಥೆಯು ಆಕ್ಷೇಪಣೆ ಮತ್ತು ಸಲಹೆಗಳನ್ನು ರಾಜ್ಯ ಸರ್ಕಾರವು ಪರಿಶೀಲಿಸುವುದಾಗಿ ತಿಳಿಸಿತ್ತು. ವ್ಯಕ್ತಿ/ಸಂಸ್ಥೆಗಳು ಕರಡನ್ನು ಪ್ರಕಟಿಸಿದ ದಿನಾಂಕದಿಂದ ೩೦ ದಿನಗಳ ಒಳಗಾಗಿ ಸಲಹೆ-ಸೂಚನೆಗಳನ್ನು ಸರ್ಕಾರದ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿ ಕಟ್ಟಡ, ಇವರಿಗೆ ಕಳುಹಿಸುವಂತೆ ಸೂಚಿಸಿತ್ತು. ಈ ಸಂದರ್ಭದಲ್ಲಿ ಬಂದ ಎಲ್ಲಾ ಸಲಹೆ-ಸೂಚನೆ ಮತ್ತು ಆಕ್ಷೇಪಣೆಗಳನ್ನು ಪರಿಶೀಲಿಸಿದ ಸರ್ಕಾರವು ಅಂತಿಮವಾಗಿ ಭಾರತೀಯ ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಕಾನೂನು ಶಾಲೆಯ ಮಗು ಮತ್ತು ಕಾನೂನು ಕೇಂದ್ರದ ಸಹಯೋಗದೊಂದಿಗೆ ಕರ್ನಾಟಕ ಗ್ರಾಮ ಪಂಚಾಯತಿಗಳ (ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪವಿಧಿ ೨೦೦೬ನ್ನು ಅಂತಿಮಗೊಳಿಸಲಾಯಿತು.

ಈ ರೀತಿ ಅತ್ಯಂತ ಪಾರದರ್ಶಕತೆ ಮತ್ತು ಎಲ್ಲಾ ಮೂಲವಾರಸುದಾರರ ಪಾಲ್ಗೊಳ್ಳುವಿಕೆಯ ಮೂಲಕ ಸಂಶೋಧನಾತ್ಮಕವಾಗಿ ಕರ್ನಾಟಕ ರಾಜ್ಯವು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ೧೯೯೩ರ ಅಡಿಯಲ್ಲಿ ಒಂದು ಶಾಸನಬದ್ಧ ಸಮಿತಿಯಾಗಿದ್ದು, ನಾಗರೀಕ ಸೌಕರ್ಯಗಳ ಸಮಿತಿಗಳಡಿಯಲ್ಲಿ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ಮಾದರಿ ಉಪವಿಧಿಗಳನ್ನು ರಚಿಸಲಾಗಿದೆ. ಕರ್ನಾಟಕ ಸರ್ಕಾರವು ತನ್ನ ಅಧಿಕೃತ ರಾಜ್ಯಪತ್ರದಲ್ಲಿ ದಿನಾಂಕ ೧೪.೦೬.೨೦೦೬ರಂದು ಅಧಿಸೂಚನೆ ಹೊರಡಿಸುವುದರ ಮೂಲಕ

ರಾಜ್ಯದ ಎಲ್ಲಾ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಪ್ರೌಢಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸುವಂತೆ ಆದೇಶಿಸಿದೆ. ಇದು ಪಂಚಾಯತಿ ಹಂತದಲ್ಲಿ ಅಧಿಕಾರ ವಿಕೇಂದ್ರೀಕರಣದ ಪ್ರಕ್ರಿಯೆಯಲ್ಲಿ ಹೊಸ ಇತಿಹಾಸವನ್ನು ಸೃಷ್ಟಿಸಿದೆ. ಇದು ಕರ್ನಾಟಕ ರಾಜ್ಯದ ಶೈಕ್ಷಣಿಕ ಇತಿಹಾಸದಲ್ಲಿ ಒಂದು ಹೊಸ ಮೈಲಿಗಲ್ಲಾಗಿದೆ.

ಮುಂದುವರಿದು ಉಲ್ಲೇಖ ಸಂಖ್ಯೆ ಇಡಿ ೧೨೨ ಪಿಬಿಎಸ್ ೨೦೦೪ ದಿನಾಂಕ ೧೪.೦೬.೨೦೦೬ರಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಪ್ರಾಥಮಿಕ ಹಾಗೂ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ದಿನಾಂಕ ೧೪.೦೬.೨೦೦೬ರಂತೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ) ರಚನೆಯಾಗಿಲ್ಲವೋ, ಅಂತಹ ಶಾಲೆಗಳಲ್ಲಿ ಈಗಿನ ಸರ್ಕಾರಿ ಆದೇಶದಂತೆ ಅಂದರೆ ಅಧ್ಯಾಯ ೨ರಲ್ಲಿ ತಿಳಿಸಿರುವಂತೆ ಎಸ್.ಡಿ.ಎಂ.ಸಿ ಸಮಿತಿ ರಚಿಸಬೇಕು. ಯಾವ ಪ್ರಾಥಮಿಕ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ಸಮಿತಿಗಳು ಪೂರ್ಣ ಮೂರು ವರ್ಷ ಅವಧಿ ಪೂರೈಸಿದೆಯೋ ಅಂತಹ ಶಾಲೆಗಳಲ್ಲಿ ಈಗಿನ ಸರ್ಕಾರಿ ಆದೇಶದಂತೆ, ಅಂದರೆ ಅಧ್ಯಾಯ ೨ರಲ್ಲಿ ತಿಳಿಸಿರುವಂತೆ ಎಸ್.ಡಿ.ಎಂ.ಸಿ ಸಮಿತಿ ರಚಿಸಬೇಕು. ಯಾವ ಪ್ರಾಥಮಿಕ ಶಾಲೆಗಳ ಎಸ್.ಡಿ.ಎಂ.ಸಿ ಸಮಿತಿಗಳು ಪೂರ್ಣ ಮೂರು ವರ್ಷ ಅವಧಿ ಪೂರೈಸಿರುವುದಿಲ್ಲವೋ ಅಂತಹ ಶಾಲೆಗಳಲ್ಲಿ ಈಗ ಇರುವ ಎಸ್.ಡಿ.ಎಂ.ಸಿ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರು ಅವರ ಮೂರು ವರ್ಷದ ಅವಧಿ ರದ್ದಾಗುವವರೆಗೆ ಮುಂದುವರಿಯಬೇಕು ಆದರೆ ಉಳಿದ ಎಲ್ಲಾ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಹೊಸ ಆದೇಶದಂತೆ ನಿರ್ವಹಿಸಬೇಕು.

ಈ ಹಿನ್ನಲೆಯಲ್ಲಿ ಪ್ರತಿ ಜಿಲ್ಲೆಯ ಉಪನಿರ್ದೇಶಕರು(ಆಡಳಿತ) ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಾಧಿಕಾರಿಗಳು, ಕ್ಷೇತ್ರ ಹಾಗೂ ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ಮತ್ತು ಶಿಕ್ಷಣ ಸಂಯೋಜಕರು ತಮ್ಮ ವ್ಯಾಪ್ತಿಗೆ ಬರುವ ಶಾಲೆಗಳಲ್ಲಿ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳೊಂದಿಗೆ ಸಂಪರ್ಕವಿರಿಸಿಕೊಂಡು ದಿನಾಂಕ ೧೪.೦೬.೨೦೦೬ರ ಅಧಿಸೂಚನೆಯನ್ನು ಜಾರಿಗೊಳಿಸಬೇಕೆಂದು ತಿಳಿಸಲಾಗಿದೆ. ಅಲ್ಲದೆ ರಾಜ್ಯ ಸರ್ಕಾರದ ಆದೇಶ ರಾಜ್ಯಾದ್ಯಂತ ಸೆಪ್ಟಂಬರ್.೧೪.೨೦೦೬ ರೊಳಗಾಗಿ ಕಡ್ಡಾಯವಾಗಿ ಜಾರಿಗೆ ಬರಬೇಕಾಗಿರುವುದರಿಂದ ಶಿಕ್ಷಣ ಇಲಾಖೆ ಹಾಗೂ ಪಂಚಾಯತ್ ರಾಜ್ ಸದಸ್ಯರುಗಳು ಹೆಚ್ಚು ಕಾಳಜವಹಿಸಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸರ್ಕಾರಿ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಈಗಿರುವ ಎಸ್.ಡಿ.ಎಂ.ಸಿಗಳು ರದ್ದುಗೊಂಡಿದ್ದು ಹೊಸ ಎಸ್.ಡಿ.ಎಂ.ಸಿಗಳನ್ನು ಪ್ರತಿಯೊಂದು ಶಾಲೆಯ ಮಕ್ಕಳ ತಂದೆ-ತಾಯಿಯರ ಪರಿಷತ್ತಿನ ಮೂಲಕ ಆಯ್ಕೆ ಮಾಡಿ ರಚಿಸಬೇಕಾಗಿದೆ. ಈ ಮಧ್ಯೆ ಮಾದರಿ ಉಪವಿಧಿಗಳನ್ನು ಪ್ರಶ್ನಿಸಿ ಕೆಲವು ಎಸ್.ಡಿ.ಎಂ.ಸಿ ಅಧ್ಯಕ್ಷರು/ಸದಸ್ಯರು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ದಾವೆಯನ್ನು ಹೂಡಿದರು. ಸದರಿ ದಾವೆ ಅರ್ಜಿಯಲ್ಲಿ ಕರ್ನಾಟಕ ಪಂಚಾಯತಿಗಳ (ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪವಿಧಿ ೨೦೦೬ರ ಸಿಂಧುತ್ವವನ್ನು ಸಹ ಪ್ರಶ್ನಿಸಲಾಗಿತ್ತು.

ಎಸ್.ಡಿ.ಎಂ.ಸಿಗಳಿಗೆ ಸಂಬಂಧಿಸಿದ ಎಲ್ಲಾ ಮೊಕದ್ದಮೆಗಳನ್ನು ಪರಿಶೀಲಿಸಿ ಅಂತಿಮವಾಗಿ ದಿನಾಂಕ ೧೯.೧೨.೨೦೦೬ರಂದು ತೀರ್ಪು ನೀಡಿದ ಘನ ನ್ಯಾಯಾಲಯವು ಸರ್ಕಾರದ ಮಾದರಿ ಉಪವಿಧಗಳ ಅಧಿಕೃತ ಪ್ರಕಟಣೆಯನ್ನು ಎತ್ತಿಹಿಡಿದು ನ್ಯಾಯಾಲಯದಲ್ಲಿಮಾದರಿ ಉಪವಿಧಿಗಳ ಅಧಿಕೃತ ಪ್ರಕಟಣೆಯನ್ನು ಎತ್ತಿಹಿಡಿದು ನ್ಯಾಯಾಲಯದಲ್ಲಿ ಮಾದರಿ ಉಪವಿಧಿಗಳ ಸಿಂಧುತ್ವವನ್ನು ಪ್ರಶ್ನಿಸಿದ್ದ ಎಲ್ಲಾ ಅರ್ಜಿಗಳನ್ನು ಅನೂರ್ಜಿತಗೊಳಿಸಿತು. ಸಂಖ್ಯೆ ಇಡಿ ೨೦೪ ಪಿಬಿಎಸ್ ೨೦೦೬, ಬೆಂಗಳೂರು, ದಿನಾಂಕ.೧೦.೦೧.೨೦೦೭ ರಲ್ಲಿ ಕರ್ನಾಟಕ ಗ್ರಾಮ ಪಂಚಾಯತಿಗಳ(ಎಸ್.ಡಿ.ಎಂ.ಸಿ)

ಮಾದರಿ ಉಪವಿಧಿಗಳು ೨೦೦೬, ಈ ಉಪವಿಧಿಗಳನ್ನು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ ೧೨೨ ಪಿಬಿಎಸ್ ೨೦೦೪, ದಿನಾಂಕ ೧೪.೦೬.೨೦೦೬ ರಲ್ಲಿ ಸರ್ಕಾರದ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ ಜಾರಿಗೆ ಬರುವಂತೆ ಆದೇಶ ಹೊರಡಿಸಲಾಗಿತ್ತು. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩ರ ೩೧೬ನೇ ಪ್ರಕರಣದ ಉಪಪ್ರಕರಣ ೩ರಂತೆ ಗ್ರಾಮ ಪಂಚಾಯತಿಗಳು ಮೇಲ್ಕಂಡ ಉಪವಿಧಿಗಳನ್ನು ಅಳವಡಿಸಿಕೊಳ್ಳುವಂತೆ ಘೋಷಿಸಲು ಸರ್ಕಾರಕ್ಕೆ ಅಧಿಕಾರವು ಪ್ರದತ್ತವಾಗಿದ್ದು, ಇಂತಹ ಆದೇಶಗಳನ್ನು ಸರ್ಕಾರವು ಗ್ರಾಮಪಂಚಾಯತಿಗಳು ಸದರಿ ಉಪವಿಧಿಗಳನ್ನು ಸ್ವೀಕರಿಸಿದ ಮೂರು ತಿಂಗಳ ನಂತರ ಘೋಷಿಸಬಹುದಾಗಿರುತ್ತದೆ. ಈಗ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩ರ ೩೧೬ನೇ ೪ನೇ ಉಪಪ್ರಕರಣದಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಅಧಿಸೂಚನೆ ಸಂಖ್ಯೆ ಇಡಿ ೧೨೨ ಪಿಬಿಎಸ್ ೨೦೦೪, ದಿನಾಂಕ ೧೪.೦೬.೨೦೦೬ ರನ್ವಯ ಹೊರಡಿಸಲಾದ ಕರ್ನಾಟಕ ಗ್ರಾಮ ಪಂಚಾಯತಿಗಳ (ಎಸ್.ಡಿ.ಎಂ.ಸಿ) ಮಾದರಿ ಉಪವಿಧಿಗಳು ೨೦೦೬, ಈ ಉಪವಿಧಿಗಳನ್ನು ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳು ತಕ್ಷಣ ಜಾರಿಗೆ ಬರುವಂತೆ ಕಡ್ಡಾಯವಾಗಿ ಅಳವಡಿಸಿಕೊಳ್ಳಬೇಕೆಂದು ಈ ಆದೇಶದ ಮೂಲಕ ಹೊರಡಿಸಲಾಗಿದೆ.

ರಾಜ್ಯಾದ್ಯಂತ ಗ್ರಾಮೀಣ ಪ್ರದೇಶದ ಎಲ್ಲಾ ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಮಾದರಿ ಉಪವಿಧಿಗಳು ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಖಾತರಿಗೊಳಿಸುವ ಆಶಯದೊಂದಿಗೆ ಜಾರಿಯಾಗುತ್ತಿದ್ದ ಈ ಸಂದರ್ಭದಲ್ಲಿ ಗದಗ ಜಿಲ್ಲೆಯ ಮುಂಡರಗಿ ತಾಲ್ಲೂಕಿನ ವೆಂಕಟಾಪುರ ಗ್ರಾಮದಲ್ಲಿನ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಪ್ರಭಾರ ಮುಖ್ಯ ಶಿಕ್ಷಕಿಯಾಗಿ ಕೆಲಸ ನಿರ್ವಹಿಸುತ್ತಿದ್ದ ಶ್ರೀಮತಿ.ಟಿ.ಪ್ರೇಮರವರು ಎಸ್.ಡಿ.ಎಂ.ಸಿ ಸದಸ್ಯರೊಬ್ಬರ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡ ಪ್ರಕರಣವು ವರದಿಯಾಯಿತು. ಈ ವಿಷಯವನ್ನು ಸುದ್ದಿಮಾಧ್ಯಮಗಳು ವರದಿ ಮಾಡಿದವು.

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣರವರು ಈ ಪ್ರಕರಣದ ಬಗ್ಗೆ ನಿಯಮ ೩೩೦(ಎ)ರ ಅಡಿಯಲ್ಲಿ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ ಪ್ರಸ್ತಾಪಿಸಿ ಸಮಿತಿಯ ಸದಸ್ಯರಿಂದ ರಾಜ್ಯಾದಾದ್ಯಂತ ಶಿಕ್ಷಕಿಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಸದನದ ಗಮನಕ್ಕೆ ತಂದು, ಪ್ರಸ್ತುತ ಜಾರಿಯಲ್ಲಿರುವ ಎಸ್.ಡಿ.ಎಂ.ಸಿಗಳನ್ನು ರದ್ದುಪಡಿಸಬೇಕೆಂಬ ಅಭಿಪ್ರಾಯ ವ್ಯಕ್ತಪಡಿಸಿದರು. ಈ ಬಗ್ಗೆ ಸದನದಲ್ಲಿ ವ್ಯಾಪಕವಾದ ಚರ್ಚೆ ನಡೆದಿರುತ್ತದೆ. ಈ ಹಿನ್ನಲೆಯಲ್ಲಿ ದಿನಾಂಕ ೧೪.೪.೨೦೦೭ ರಂದು ರಾಜ್ಯದಲ್ಲಿನ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ (ಎಸ್.ಡಿ.ಎಂ.ಸಿ) ಬಗ್ಗೆ ಅಧ್ಯಯನವನ್ನು ನಡೆಸಲು ವಿಶೇಷ ಸದನ ಸಮಿತಿಯನ್ನು ಮಾನ್ಯ ಸಭಾಪತಿಯವರು ವಿಧಾನ ಪರಿಷತ್ತಿನ ಸದಸ್ಯರುಗಳಾದ ಡಾ: ಎಲ್ ಹನುಮಂತಯ್ಯರವರ ಅಧ್ಯಕ್ಷತೆಯಲ್ಲಿ ಡಾ.ಮಲ್ಲನಗೌಡ ನಾಡಗೌಡ, ಶ್ರೀಮತಿ ವಿಮಲಾಗೌಡ, ಮರಿತಿಬ್ಬೇಗೌಡ, ಹೆಸ್.ಎಸ್.ಶಿವಶಂಕರ್, ಶೋಭ ಕರಂದ್ಲಾಜೆ, ಶ್ರೀಯುತ ಎಸ್.ಎಂ ಆನಂದರವರ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಎಸ್.ಡಿ.ಎಂ.ಸಿಗಳ ಸಾಧಕ–ಬಾಧಕಗಳ ಬಗ್ಗೆ ಪರಿಶೀಲಿಸಿ ಒಂದು ತಿಂಗಳೊಳಗಾಗಿ ವರದಿಯನ್ನು ಸಲ್ಲಿಸಬೇಕಾಗಿ ಸೂಚಿಸಿದರು.

ಸಮಿತಿಯು ದಿನಾಂಕ ೨೫.೦೪.೨೦೦೭ ರಂದು ಪ್ರಾರಂಭಿಕ ಸಭೆ ನಡೆಸಿ, ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಭೇಟಿ ನೀಡುವ ಇಚ್ಛೆ ವ್ಯಕ್ತಪಡಿಸಿತು. ಸಮಯಾಭಾವದಿಂದ ನಾಲ್ಕು ಕಂದಾಯ

ವಿಭಾಗಗಳಲ್ಲಿನ ಕೆಲವು ಜಿಲ್ಲೆಗಳಲ್ಲಾದರೂ ಕುದ್ದು ಸಭೆ ನಡೆಸಲು ತೀರ್ಮಾನಿಸಿತು. ಅದರಂತೆ ದಿನಾಂಕ ೭.೦೫.೨೦೦೭ ಮತ್ತು ೮.೫.೨೦೦೭ರಂದು ಮೈಸೂರು, ಚಾಮರಾಜನಗರ, ಮಂಡ್ಯ ಜಿಲ್ಲೆಗಳಲ್ಲಿ ಸಭೆ ನಡೆಸಲಾಯಿತು. ಮೇ ೨೨.೨೩, ೨೦೦೭ ರಂದು ಬೀದರ್ ಮತ್ತು ಗುಲ್ಬರ್ಗಾ ಜಿಲ್ಲೆಗಳಲ್ಲಿ, ಜೂನ್ ೪ ರಿಂದ ೭. ೨೦೦೭ರವರೆಗೆ ಚಿತ್ರದುರ್ಗ, ದಾವಣೆಗೆರೆ, ಹಾವೇರಿ, ಗದಗ, ಧಾರವಾಡ, ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ಸಭೆ ನಡೆಸಿತು. ಇದಲ್ಲದೆ ೨೮.೦೫.೨೦೦೭ ರಂದು ಬೆಂಗಳೂರಿನ ವಿಧಾನ ಸೌಧದ ಸಮ್ಮೇಳನ ಸಭಾಂಗಣದಲ್ಲಿ ರಾಜ್ಯದ ಆಯ್ದ ಜಿಲ್ಲೆಗಳ ಪ್ರತಿನಿಧಿಗಳ ಸಭೆಯನ್ನು ನಡೆಸಿ ಶಿಕ್ಷಕರು, ಶಿಕ್ಷಕ ಪ್ರತಿನಿಧಿಗಳು, ಎಸ್.ಡಿ.ಎಂ.ಸಿ ಅಧ್ಯಕ್ಷರು, ಸದಸ್ಯರು, ಸ್ವಯಂಸೇವಾ ಸಂಸ್ಥೆಗಳು ಮತ್ತು ಶಿಕ್ಷಣ ತಜ್ಞರು ಹಾಗೂ ಸಾರ್ವಜನಿಕರ ಅಭಿಪ್ರಾಯಗಳನ್ನು ಪಡೆದು ವರದಿಯನ್ನು ಅಂತಿಮಗೊಳಿಸಿ ೧೨ ಶಿಫಾರಸ್ಸುಗಳೊಂದಿಗೆ ವರದಿಯನ್ನು ದಿನಾಂಕ ೧.೦೮.೨೦೦೭ರಂದು ಸಲ್ಲಿಸಿದ್ದಾರೆ. ರಾಜ್ಯದ ಕಾನೂನೊಂದು ಹೀಗೆ ಸಾರ್ವಜನಿಕರ ಸಂಬಂಧಿಸಿದವರ ಜೊತೆ ವ್ಯಾಪಕ ಚರ್ಚೆಗೊಳೊಗಾದದ್ದು ಬಹುಶಃ ಪ್ರಥಮವೆನ್ನಬಹುದು ಅಥವಾ ಅಪರೂಪವೆನ್ನಬಹುದು.

ಸಂಖ್ಯೆ-ಸ.ಶಿ-ಅ/ಶ್ವೆ-ತ/೨೦೦೭-೦೮ ದಿನಾಂಕ ೨೮.೧೨.೨೦೦೭ರಲ್ಲಿ ಆದೇಶಹೊರಡಿಸಿ, ೨೦೦೭-೦೮ನೇ ಸಾಲಿನಲ್ಲಿ ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಗಳಿಗೆ ಶೈಕ್ಷಣಿಕ ಸಮಾಲೋಚನಾ ಕಾರ್ಯಗಾರಗಳನ್ನು ಆಯೋಜಿಸುವುದರ ಮೂಲಕ ಶೈಕ್ಷಣಿಕ ಅಭಿವೃದ್ಧಿಯ ದಿಕ್ಕಿನಲ್ಲಿ ಗ್ರಾಮ ಪಂಚಾಯತಿಯ ನಾಗರೀಕ ಸೌಲಭ್ಯ ಸಮಿತಿ ಹಾಗೂ ಎಸ್.ಡಿ.ಎಂ.ಸಿ ಒಗ್ಗೂಡಿ ಕಾರ್ಯ ನಿರ್ವಹಿಸುವ ಪ್ರಕ್ರಿಯೆಯನ್ನು ಬಲವರ್ಧನೆಗೊಳಿಸುವುದು ಇದರ ಮೂಲ ಉದ್ದೇಶವಾಗಿದೆ. ಸಂಖ್ಯೆ-ಸ ಶಿ ಅ/ಶ್ವೆ ತ/ಸಜಾ/ಶೈ ಸ ಕಾ/೩೦/೨೦೦೭-೦೮. ದಿನಾಂಕ ೦೩.೦೧.೨೦೦೮ ರಲ್ಲಿ ೨೦೦೭-೦೮ನೇ ಸಾಲಿನ ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಸಮಾಲೋಚನಾ ಕಾರ್ಯಗಾರವನ್ನು ಎನ್.ಜಿ.ಓಗಳ ಸಹಯೋಗದೊಂದಿಗೆ ನಡೆಸಬೇಕು ಎಂದು ಈ ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಸಂಖ್ಯೆ:ಸ.ಶಿ.ಅ/ಸಜಾ/ಎಸ್.ಡಿ.ಎಂ.ಸಿ-ಸಿ.ಎ.ಸಿ ಕಾ/ಮಾ.ಸೂ/೨೦೦೮-೦೯ ದಿನಾಂಕ ೨೯.೦೮.೨೦೦೮ ಇದರಲ್ಲಿ ೨೦೦೮-೦೯ ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಕಾರ್ಯಗಾರ ಹಾಗೂ ಸಮುದಾಯ ಜಾಗೃತಿ ಮೂಢಿಸುವ ಕಾರ್ಯಕ್ರಮಗಳ ಬಗ್ಗೆ ಕೈಗೊಳ್ಳಬೇಕಾದ ಕ್ರಮಗಳ ಮಾರ್ಗಸೂಚಿಗಳನ್ನು ತಿಳಿಸಲಾಗಿದೆ. ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ ೨೦೦೯ ಜಾರಿಯಾಗಿದ್ದು, ಕಾಯ್ದೆಯ ಅಡಿಯಲ್ಲಿ ಶಾಲಾನಿರ್ವಹಣಾ ಸಮಿತಿಗಳು/ಎಸ್.ಡಿ.ಎಂ.ಸಿಗಳಿಗೆ ವಿಶೇಷ ಕಾನೂನಾತ್ಮಕ ಅವಕಾಶವನ್ನು ಕಲ್ಪಿಸಿದ್ದು, ಇದು ಎಸ್.ಡಿ.ಎಂ.ಸಿಗಳಿಗೆ ಮತ್ತಷ್ಟು ಕಾನೂನಿನ ಬಲವನ್ನು ತಂದುಕೊಟ್ಟಿದೆ. ಈ ಎಲ್ಲಾ ಹಿನ್ನಲೆಯಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ರಾಜ್ಯಾದ್ಯಾಂತ ಕ್ರಿಯಾತ್ಮಕವಾಗಿ ಕೆಲಸ ನಿರ್ವಹಿಸುವ ಮೂಲಕ ಶಾಲಾಭಿವೃದ್ಧಿಗೆ ಭೌತಿಕ ಮತ್ತು ಬೌದ್ಧಿಕವಾಗಿ ಅಪಾರ ಕೊಡುಗೆ ನೀಡಿವೆ. ಎಸ್.ಡಿ.ಎಂ.ಸಿಗಳ ಈ ಕೊಡುಗೆಯನ್ನು ವಿಶ್ವವಿದ್ಯಾಲಯ ಮತ್ತು ಸರ್ಕಾರೇತರ ಸಂಘಟನೆಗಳು ಕೈಗೊಂಡ ಹತ್ತು ಹಲವು ಅಧ್ಯಯನಗಳು ದೃಢೀಕರಿಸಿವೆ. ಎಸ್.ಡಿ.ಎಂ.ಸಿ ಯ ಕಾರ್ಯವೈಖರಿಯ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ರಚಿತವಾದ ವಿಶೇಷ ವಿಧಾನ ಪರಿಷತ್ತಿನ ಸದನ ಸಮಿತಿಯು ಎಸ್.ಡಿ.ಎಂ.ಸಿಯ ಕಾರ್ಯ ವೈಖರಿಯ ಬಗ್ಗೆ ಅಪಾರವಾದ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಲ್ಲದೆ, ಎಸ್.ಡಿ.ಎಂ.ಸಿ ಗಳನ್ನು ಸರ್ಕಾರಿ ಶಾಲೆಗಳಲ್ಲಿ ಮಾತ್ರವಲ್ಲದೆ ಸರ್ಕಾರಿ ಅನುದಾನಿತ ಮತ್ತು ಅನುದಾನ ರಹಿತ ಶಾಲೆಗಳಿಗೂ ವಿಸ್ತರಿಸುವಂತೆ ಶಿಪಾರಸ್ಸು ಕೂಡ ಮಾಡಿದೆ. ಈ ಎಲ್ಲಾ ಬೆಳವಣಿಗೆಗಳ ಹಿನ್ನಲೆಯಲ್ಲಿ ಎಸ್.ಡಿ.ಎಂ.ಸಿ ಗಳನ್ನು ಮತ್ತಷ್ಟು ಬಲಗೊಳಿಸಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಕೆಲಸದಲ್ಲಿ ನಾವೆಲ್ಲರೂ ಸಕ್ರಿಯವಾಗಿ ತೊಡಗಿಸಕೊಳ್ಳಬೇಕಾಗಿದೆ. ಜೊತೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ ೨೦೦೯ ಜಾರಿಯಾಗಿದ್ದು, ಕಾಯ್ದೆಯ ಅಡಿಯ

ಪ್ರಕರಣ ೨೧ ಮತ್ತು ೨೨ರ ಅಡಿಯಲ್ಲಿ ಶಾಲಾನಿರ್ವಹಣಾ ಸಮಿತಿಗಳು/ಎಸ್.ಡಿ.ಎಂ.ಸಿಗಳಿಗೆ ವಿಶೇಷ ಕಾನೂನಾತ್ಮಕ ಅವಕಾಶವನ್ನು ಕಲ್ಪಿಸಿದ್ದು, ಇದು ಎಸ್.ಡಿ.ಎಂ.ಸಿಗಳಿಗೆ ಮತ್ತಷ್ಟು ಕಾನೂನಿನ ಬಲವನ್ನು ತಂದುಕೊಟ್ಟದೆ. ಈಗ ಎಸ್.ಡಿ.ಎಂ.ಸಿಗಳು ಕರ್ನಾಟಕ ರಾಜ್ಯ ಪಂಚಾಯತಿ ಅಧಿನಿಯಮ ೧೯೯೩ರ ಅಡಿಯಲ್ಲಿ ಮಾತ್ರ ಕೆಲಸ ನಿರ್ವಹಿಸಿಸದೆಕೇಂದ್ರ ಸರ್ಕಾರದ ಶಿಕ್ಷಣ ಹಕ್ಕು ಕಾಯ್ದೆ ೨೦೦೯ರ ಅನ್ವಯವು ಕಾನೂನಾತ್ಮಕ ಸಮಿತಿಯಾಗಿದೆ..

೨.೬ ವಿಕೇಂದ್ರೀಕರಣ ಪ್ರಕ್ರಿಯೆಗೆ ಒತ್ತು – ಎಸ್.ಡಿ.ಎಂ.ಸಿ.ಗಳನ್ನು ಪಂಚಾಯಿತಿಗಳ ಜೊತೆ ಬೆಸೆಯುವ ಪ್ರಯತ್ನ

ಭಾರತವು ಗ್ರಾಮ ಪ್ರಧಾನ ದೇಶವಾಗಿರುವುದರಿಂದ ಹಳ್ಳಿಗಳ ಉದ್ದಾರವಾಗದ ಹೊರತು ದೇಶದ ಪ್ರಗತಿ ಸಾಧ್ಯವಿಲ್ಲ ಇದನ್ನು ಮನಗಂಡೆ ಸ್ವಾಮಿ ವಿವೇಕಾನಂದರು ನೈಜ ಭಾರತ ಹಳ್ಳಿಗಳಲ್ಲಿದೆ. ಬುಡಕಟ್ಟು ಮತ್ತು ಹಿಂದುಳಿದ ವರ್ಗದ ಜನರ ಉದ್ದಾರವಾಗದಿದ್ದಲ್ಲಿ ಭಾರತವು ಕರಾಳ ಭವಿಷ್ಯವನ್ನು ಎದುರಿಸಬೇಕಾಗುತ್ತದೆ ಎಂದು ಸಾಕಷ್ಟು ಹಿಂದೆಯೇ ಗ್ರಾಮಗಳ ಮತ್ತು ದೀನ ದಲಿತರ ಅಭಿವೃದ್ಧಿಯ ಅಗತ್ಯವನ್ನು ಒತ್ತಿ ಹೇಳಿದ್ದರು. ದೇಹಕ್ಕೆ ಜೀವ ಕೋಶಗಳಿದ್ದಂತೆ ದೇಶಕ್ಕೆ ಹಳ್ಳಿಗಳು, ಪ್ರತಿ ಜೀವ ಕೋಶ ಆರೋಗ್ಯದಿಂದ ಇದ್ದರೆ, ದೇಹವೂ ಆರೋಗ್ಯ ಹಾಗೆಯೇ ಹಳ್ಳಿಗಳ ಉದ್ದಾರವೇ ದೇಶದ ಉದ್ದಾನ ಎಂದು ಹಳ್ಳಿಗಳ ಅಭಿವೃದ್ಧಿಯ ಅಗತ್ಯ ಮತ್ತು ಮಹತ್ವಗಳನ್ನು ಶ್ರೀ ಅರವಿಂದೊ ಅವರ ಮಾತುಗಳಲ್ಲಿ ಕಾಣಬಹುದು. ಸ್ವಾತಂತ್ರ್ಯವು ತಳಹದಿಯಿಂದ ಪ್ರಾರಂಭವಾಗಬೇಕು. ಪ್ರತಿ ಹಳ್ಳಿಯೂ ಒಂದು ಪಂಚಾಯಿತಿಯನ್ನು ಹೊಂದಿರಬೇಕು ಮತ್ತು ಅದು ಸ್ವತಂತ್ರ ಸಾರ್ವಭೌಮ ಗಣರಾಜ್ಯವಾಗಿರಬೇಕು. ಅದಕ್ಕೆ ಹೆಚ್ಚಿನ ಅಧಿಕಾರ ನೀಡಿದರೆ. ಜನರಿಗೆ ಹೆಚ್ಚಿನ ಅಧಿಕಾರ ನೀಡಿದರೆ ಜನರಿಗೆ ಹೆಚ್ಚಿನ ಅಧಿಕಾರ ನೀಡಿದಂತೆ" ಎಂಬುದು ಗಾಂಧೀಜಿಯವರ ಸ್ಪಷ್ಟ ಅಭಿಪ್ರಾಯವಾಗಿತ್ತು. ಸ್ವಾತಂತ್ರ್ಯಾನಂತರ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಗ್ರಾಮೀಣ ಅಭಿವೃದ್ಧಿಗೆ ವಿಶೇಷ ಗಮನ ಕೊಡುತ್ತಾ ಬಂದಿವೆ. ಗ್ರಾಮೀಣ ಪ್ರದೇಶದಲ್ಲಿ ಸಾಮಾಜಿಕ ಮತ್ತು ಆರ್ಥಿಕ ರಂಗಗಳಲ್ಲಿ ಪ್ರಗತಿಸಾಧಿಸಲು ಸಾಕಷ್ಟು ಕ್ರಮಗಳನ್ನೂ ಕೈಗೊಂಡಿದ್ದರೂ ಸಹ ಸಾಧನೆ ಸಾಕಾಗಿಲ್ಲ. ಎಲ್ಲವನ್ನೂ ಸರ್ಕಾರವೇ ಮಾಡಬೇಕು ಎಂಬ ಪ್ರವೃತ್ತಿಯನ್ನು ಬದಲಿಸುವ ಉದ್ದೇಶದಿಂದ ಗ್ರಾಮದ ಜನರಿಗೆ ಅಧಿಕಾರಗಳನ್ನು ನೀಡಿ ಅವರಿಗೆ ಬೇಕಾದ ಅಭಿವೃದ್ಧಿ ಕಾರ್ಯಗಳನ್ನು ಅವರೇ ಜಾರಿಗೊಳಿಸಿಕೊಳ್ಳಬೇಕು ಎಂಬ ಆಶಯದೊಂದಿಗೆ ಪಂಚಾಯತ್ ರಾಜ್ ವ್ಯವಸ್ಥೆಗೆ ಹೆಚ್ಚಿನ ಮಹತ್ವ ನೀಡಲಾಗಿದೆ. ಭಾರತದಲ್ಲಿ ಪಂಚಾಯತ್ ರಾಜ್ ವ್ಯವಸ್ಥೆ ಸುಮಾರು ೪೦೦೦ ವರ್ಷಗಳಿಂದ ರೂಢಿಯಲ್ಲಿ ಇದ್ದುದಾಗಿ ದಾಖಲೆಗಳಿಂದ ತಿಳಿದು ಬರುತ್ತದೆ. ವೇದಗಳಲ್ಲಿ ಬೌದ್ಧರ ಜಾತಕ ಕಥೆಗಳಲ್ಲಿ ಮನು ಸ್ಮೃತಿಯಲ್ಲಿ ಮತ್ತು ಶುಕ್ರ ನೀತಿಯಲ್ಲಿ ಈ ಬಗ್ಗೆ ಉಲ್ಲೇಖಗಳಿವೆ. ಈ ಸ್ಥಳೀಯ ಸಂಸ್ಥೆಗಳು ಸ್ವಯಂಸ್ಫೂರ್ತಿ ಯಿಂದ ಮೂಡಿ ಬಂದವುಗಳಾಗಿದ್ದು ಅವು ತಮ್ಮದೆ ಆದ ನೀತಿ ನಿರೂಪಣೆ ಕಾರ್ಯ ವಿಧಾನಗಳನ್ನು ಹೊಂದಿ ಗ್ರಾಮ ಜೀವನದ ಸಾಮಾಜಿಕ ಧಾರ್ಮಿಕ ಮತ್ತು ಸಾಂಸ್ಕೃತಿಕ ಬದುಕಿನ ಅವಶ್ಯಕತೆಗಳನ್ನು ಪೂರೈಸಿಕೊಳ್ಳುವಲ್ಲಿ ಬಹು ಮುಖ್ಯ ಪಾತ್ರ ವಹಿಸುತ್ತಿದ್ದವು.

ಇಂದಿನ ಪಂಚಾಯತ್ ರಾಜ್ ವ್ಯವಸ್ಥೆಯು ಬ್ರಿಟೀಷರ ಬಳುವಳಿ ಎಂದು ಹೇಳಬಹುದು. ಈ ವ್ಯವಸ್ಥೆಗೆ ಸುಮಾರು ೧೨೦ ವರ್ಷಗಳ ಇತಿಹಾಸವಿದೆ. ಬ್ರಿಟೀಷ್ ಆಡಳಿತದಲ್ಲಿ ೧೮೮೩-೮೫ರಲ್ಲಿ ಎರಡು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಜಾರಿಗೆ ತರಲಾಯಿತು. ಆದರೆ ಗ್ರಾಮ ಮಟ್ಟದಲ್ಲಿ ಅತ್ಯಂತ ಪ್ರಮುಖವಾದ ಮತ್ತು ಜನರೊಂದಿಗೆ ನಿಕಟ ಸಂಬಂಧ ಹೊಂದಿದ ಗ್ರಾಮ ಪಂಚಾಯಿತಿ ವ್ಯವಸ್ಥೆಯು ೧೯೧೮ರ ಭಾರತದ ಸರ್ಕಾರದ ಗೊತ್ತುವಳಿಯ ನಂತರ ಜಾರಿಯಲ್ಲಿ

ಬಂದಿತು. ಅದರನ್ವಯ ಮುಂಬೈ ಮತ್ತು ಮದ್ರಾಸ್ ಪ್ರಾಂತ್ಯಗಳಲ್ಲಿ ೧೯೨೦ರಲ್ಲಿ, ಮೈಸೂರು ಪ್ರಾಂತ್ಯದಲ್ಲಿ ೧೯೨೬ರಲ್ಲಿ ಮತ್ತು ಹೈದರಾಬಾದ್ ಕರ್ನಾಟದಲ್ಲಿ ೧೯೪೦ರಲ್ಲಿ ಗ್ರಾಮ ಪಂಚಾಯಿತಿಗಳು ಕಾನೂನು ರೀತಿಯಲ್ಲಿ ರಚನೆಗೊಂಡವು.

೧೯೫೭ರಲ್ಲಿ ಬಲವಂತರಾಯ್ ಮೆಹ್ತಾ ಸಮಿತಿಯು ಪ್ರಜಾಸತ್ತಾತ್ಮಕ ವಿಕೇಂದ್ರೀಕರಣ ಸಿದ್ಧಾಂತವನ್ನು ಆಧಾರವಾಗಿಟ್ಟುಕೊಂಡು ೩ ಹಂತದ ವ್ಯವಸ್ಥೆಯನ್ನು ಶಿಫಾರಸ್ಸು ಮಾಡಿ ಮೂರು ಹಂತಗಳಲ್ಲಿ ಸಾಕಷ್ಟು ಸಂಪನ್ಮೂಲಗಳನ್ನು ಒದಗಿಸಿ ಅವುಗಳ ಮುಖಾಂತರ ಅಭಿವೃದ್ಧಿ ಕಾರ್ಯಗಳ ಅನುಷ್ಠಾನ ನಡೆಯಬೇಕೆಂದು ತಿಳಿಸಿತು. ಇದರಿಂದ ಜನರು ಅಬಿವೃದ್ಧಿ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲು ಅವಕಾಶ ನೀಡಲಾಯಿತು. ಸಮಗ್ರ ಕರ್ನಾಟಕ ರಚನೆಯ ನಂತರ ಮೈಸೂರು ಗ್ರಾಮಪಂಚಾಯಿತಿ, ತಾಲ್ಲೂಕು ಅಭಿವೃದ್ಧಿ ಮಂಡಳಿ ಮತ್ತು ಜಿಲ್ಲಾ ಮಂಡಳಿಗಳ ಅಧಿ ನಿಯಮ ೧೯೫೯ ಎಂಬಪ್ರಥಮ ಕಾನೂನು ೧೯೬೦ರಲ್ಲಿ ಜಾರಿಗೆ ಬಂದಿತು. ಇದು ಎರುಡು ಹಂತದ ಪಂಚಾಯತ್‌ರಾಜ್ ಸಂಸ್ಥೆಗಳನ್ನು ಮಾತ್ರ ಹೊಂದಿತ್ತು. ಈ ವ್ಯವಸ್ಥೆಯಲ್ಲಿ ತಾಲ್ಲೂಕು ಅಭಿವೃದ್ಧಿ ಮಂಡಳಿಗಳು ಉತ್ತಮ ಸಾಧನೆ ಮಾಡಿದ ಹೆಗ್ಗಳಿಕೆಗೆ ಪಾತ್ರವಾದವು. ಈ ಕಾನೂನು ೧೯೮೫ರವರೆಗೆ ಜಾರಿಯಲ್ಲಿತ್ತು. ಆದರೆ ಆಗಲೂ ಸಹ ಪಂಚಾಯಿತಿ ರಾಜ್ ವ್ಯವಸ್ಥೆಯನ್ನು ಪುನರ್ರಚಿಸುವ ನಿಟ್ಟಿನಲ್ಲಿ ೧೯೭೮ರಲ್ಲಿ ಅಶೋಕ ಮೆಹ್ತಾ ವರದಿಯು ಜಿಲ್ಲೆ ಮತ್ತು ಮಂಡಲ ಎಂಬ ಎರಡು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಪ್ರತಿಪಾದಿಸಿತು. ಗ್ರಾಮೀಣ ಸಮುದಾಯವು ತನ್ನದೇ ಆದ ಪ್ರಜಾತಂತ್ರ ವ್ಯವಸ್ಥೆಯನ್ನು ಹೊಂದಿರಬೇಕು. ಅದು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸಬೇಕಾದರೆ ಅಧಿಕಾರದ ವಿಕೇಂದ್ರೀಕರಣ ಅತೀ ಅವಶ್ಯವೆಂದು ಆ ಸಮಿತಿಯು ಪ್ರತಿಪಾದಿಸಿತು. ಈ ರೀತಿಯಲ್ಲಿ ಬಲವಂತರಾಯ್ ಮೆಹ್ತಾ ವರದಿ ಮತ್ತು ಅಶೋಕ ಮೆಹ್ತಾ ವರದಿಗಳ ಶಿಫಾರಸ್ಸುಗಳು ಸಾಮಾಜಿಕ ಪ್ರಜಾಪ್ರಭುತ್ವದ ತಳಹದಿಯ ಮೇಲೆ ಹೊಸ ವ್ಯವಸ್ಥೆಯ ಸೃಷ್ಟಿಗೆ ಚಾಲನೆ ನೀಡಿದವು. ಮತ್ತು ಅದಕ್ಕೆ ಅಗತ್ಯವಾದ ಮೂಲ ಭೂಮಿಕೆಯನ್ನು ನಿರ್ಮಿಸಿದವು.

"ನಿಜವಾದ ಪ್ರಜಾಸತ್ತೆಯು ಹಳ್ಳಿಯ ಜನರಿಂದ ಕಾರ್ಯರೂಪದಲ್ಲಿ ಬರಬೇಕು ಹಾಗೂ ಗ್ರಾಮೀಣ ವ್ಯಕ್ತಿಯೇ ತನ್ನ ಸರ್ಕಾರದ ನಿಜವಾದ ಶಿಲ್ಪಿಯಾಗಿರಬೇಕು" ಎಂಬ ಗಾಂಧೀಜಿಯವರ ಕನಸನ್ನು ಸ್ವಲ್ಪ ಮಟ್ಟಿಗಾದರೂ ನನಸು ಮಾಡಲು ಶ್ರಮಿಸಿದ ರಾಜ್ಯಗಳಲ್ಲಿ ಕರ್ನಾಟಕವೂ ಒಂದಾಗಿದೆ. ೧೯೮೭ರಲ್ಲಿ ಮೊಟ್ಟ ಮೊದಲು ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ, ಮಂಡಲ ಪಂಚಾಯಿತಿ ಮತ್ತು ನ್ಯಾಯ ಪಂಚಾಯಿತಿ ಅಧಿನಿಯಮ ೧೯೮೭ ಎಂಬ ಹೊಸ ಕಾಯಿದೆಯನ್ನು ಜಾರಿಗೆ ತಂದು ಜಿಲ್ಲಾ ಮತ್ತು ಮಂಡಲ ಪಂಚಾಯಿತಿ ಎಂಬ ಎರಡು ಹಂತದ ಪಂಚಾಯತ್ ರಾಜ್ ವ್ಯವಸ್ಥೆಗೆ ನಾಂದಿ ಹಾಡಲಾಯಿತು. ಅಧಿಕಾರ ವಿಕೇಂದ್ರೀಕರಣದ ಹಾದಿಯಲ್ಲಿ ಇದೊಂದು ಮೈಲಿಗಲ್ಲು ಎಂದು ಹೇಳಿದರೆ ಅತಿಶಯೋಕ್ತಿಯಾಗದು. ನಂತರ ೧೯೯೨ರಲ್ಲಿ ಬಂದಿದ್ದು ಸಂವಿಧಾನದ ೭೩ನೇ ತಿದ್ದುಪಡಿ. ಗ್ರಾಮೀಣ ಪುನರ್‌ನಿರ್ಮಾಣ ಕಾರ್ಯದಲ್ಲಿ ಜನತೆಯ ಭಾಗೀದಾರಿಕೆಯನ್ನು ಪ್ರೋತ್ಸಾಹಿಸಲು ಮೂರು ಶ್ರೇಣಿಗಳನ್ನೊಳಗೊಂಡ ಪಂಚಾಯಿತಿ ರಾಜ್ ಸಂಸ್ಥೆಗಳಿಗೆ ಸಂವಿಧಾನಿಕ ದರ್ಜೆಯನ್ನು ನೀಡಲು ಸಂವಿಧಾನದ ೭೩ ನೇ ತಿದ್ದುಪಡಿ ಮಸೂದೆಯನ್ನು ಜಾರಿಗೆ ತಂದ ಏಪ್ರಿಲ್ ೨೪, ೧೯೯೩ನ್ನು ಭಾರತದ ಪಂಚಾಯಿತಿ ರಾಜ್ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆದಿಡಬೇಕಾದ ದಿನ ಎಂದು ನಿಸ್ಸಂಶಯವಾಗಿ ಹೇಳಬಹುದು.

ಸಂವಿಧಾನದ ೭೩ ನೇ ತಿದ್ದುಪಡಿ ಜಾರಿಗೆ ಬಂದ ಕೆಲವೇ ದಿನಗಳಲ್ಲಿ ಅದರಲ್ಲಿಯ ಎಲ್ಲ ಪ್ರಮುಖ ಅಂಶಗಳನ್ನು ಅಳವಡಿಸಿ ೧೦ ನೇ ಮೇ, ೧೯೯೩ ರಂದು ಕರ್ನಾಟಕ ಸರ್ಕಾರವು 'ಕರ್ನಾಟಕ ಪಂಚಾಯತಿ ರಾಜ್ ಅಧಿನಿಯಮ ೧೯೯೩' ಎಂಬ ಶಾಸನವನ್ನು ಜಾರಿಗೆ ತಂದಿತು. ಸಂವಿಧಾನದ ೭೩ನೇ ತಿದ್ದುಪಡಿಯಲ್ಲಿ ಪಟ್ಟಿ ಮಾಡಿದ ಪಂಚಾಯಿತಿ ರಾಜ್ ಸಂಸ್ಥೆಗಳಿಗೆ ವರ್ಗಾಹಿಸಬೇಕಾದ ಎಲ್ಲ ೨೯ ವಿಷಯಗಳಿಗೆ ಸಂಬಂಧಿಸಿದಂತೆ ಹಣಕಾಸು, ಪ್ರಕಾರ್ಯಗಳು ಮತ್ತು ಅಧಿಕಾರವನ್ನು ವರ್ಗಾಹಿಸಿ ಅನುಷ್ಠಾನಕ್ಕೆ ತಂದಂಥ ರಾಜ್ಯಗಳಲ್ಲಿ ಸಿಕ್ಕಿಂ ರಾಜ್ಯದೊಂದಿಗೆ ಕರ್ನಾಟಕವೂ ಸೇರಿದೆ. ಮತ್ತು ಕರ್ನಾಟಕ ರಾಜ್ಯದ ಈ ಕ್ರಮವನ್ನು ಭಾರತ ಸರ್ಕಾರವು ಪ್ರಶಂಸಿದೆ. ಈ ಪ್ರಚಲಿತ ಕಾನೂನು ಕೆಳಗೆ ವಿವರಿಸಿದಂತೆ ೩ ಶ್ರೇಣಿಗಳಲ್ಲಿ ಪಂಚಾಯಿತಿ ರಾಜ್ ಸಂಸ್ಥೆಗಳನ್ನು ಒಳಗೊಂಡಿದ್ದು, ಅಧಿಕಾರ ವಿಕೇಂದ್ರೀಕರಣದೊಂದಿಗೆ ಎಲ್ಲ ಹಂತಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಮತ್ತು ಮಹಿಳೆಯರಿಗಷ್ಟೇ ಅಲ್ಲದೇ ಹಿಂದುಳಿದ ವರ್ಗದವರಿಗೂ ಸಹ ಸಾಮಾಜಿಕ ನ್ಯಾಯ ಒದಗಿಸಿದೆ.

ಕೆಳಮಟ್ಟದಲ್ಲಿ, ಗ್ರಾಮ ಪಂಚಾಯಿತಿ, ಮಧ್ಯದಲ್ಲಿ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಪಂಚಾಯಿತಿಗಳಲ್ಲಿ ಹಿಂದುಳಿದ ವರ್ಗದವರಿಗೆ ಮೀಸಲಾತಿ ನೀಡಬೇಕೆಂದು ಸಂವಿಧಾನದ ೭೩ ನೇ ತಿದ್ದುಪಡಿಯಲ್ಲಿ ಹೇಳಿಲ್ಲವಾದರೂ ಆ ವರ್ಗದವರಿಗೆ ಸಾಮಾಜಿಕ ನ್ಯಾಯ ಒದಗಿಸಲು ಕರ್ನಾಟಕ ಸರ್ಕಾರವು ಈ ಅವಕಾಶವನ್ನು ಒದಗಿಸಿದೆ ಎಂಬುದು ಪ್ರಮುಖ ಅಂಶವಾಗಿದೆ.

ಸ್ಥಾಯಿ ಸಮಿತಿಗಳು

ಪ್ರತಿ ಪಂಚಾಯಿತಿಯು ತನ್ನ ಸಾಮಾನ್ಯ / ವಿಶೇಷ ಸಭೆಯಲ್ಲಿ ಎಲ್ಲ ವಿಷಯಗಳನ್ನು ಕೂಲಕಂಷವಾಗಿ ಚರ್ಚಿಸಿ ಅವುಗಳ ಸಾಧಕ – ಬಾಧಕಗಳನ್ನು ಪರಿಗಣಿಸಿ ಸೂಕ್ತ ನಿರ್ಣಯಗಳನ್ನು ಕೈಗೊಳ್ಳಲು ಸಾದ್ಯವಾಗುವುದಿಲ್ಲ. ಕಾರಣ ಆಯಾ ಪಂಚಾಯಿತಿಗೆ ವಹಿಸಿಕೊಟ್ಟಿರುವ ಪ್ರಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸುವ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವ ಉದ್ದೇಶದಿಂದ ಮೂರು ಹಂತಗಳಲ್ಲಿ ವಿವಿಧ ಸ್ಥಾಯಿ ಸಮಿತಿಗಳನ್ನು ರಚಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಚುನಾಯಿತ ಸದಸ್ಯರ ಅನುಭವ ಮತ್ತು ಪರಿಣಿತಿಯನ್ನವಲಂಬಿಸಿ ಆಯಾ ಸ್ಥಾಯಿ ಸಮಿತಿಗಳ ಸಭೆಗಳನ್ನು ರಚಿಸಿಕೊಳ್ಳಲು ಅವಕಾಶ ನೀಡಲಾಗಿದೆ. ಚುನಾಯಿತ ಸದಸ್ಯರ ಅನುಭವ ಮತ್ತು ಆಯಾ ವಿಷಯಗಳನ್ನು ವಿವರವಾಗಿ ಚರ್ಚಿಸಿ ಗುಣಾವಗುಣಗಳನ್ನು ವಿಮರ್ಶಿಸಿ ಸೂಕ್ತ ನಿರ್ಣಯ ಕೈಗೊಂಡು ಜನಪರ ಯೋಜನೆಗಳನ್ನು ಕಾರ್ಯಗತಗೊಳಿಸಲು ಸಾಧ್ಯವಾಗುತ್ತದೆ. ಸಾಮಾನ್ಯವಾಗಿ ಸ್ಥಾಯೀ ಸಮಿತಿಗಳ ಸಭೆಗಳನ್ನು ಆಯಾ ಪಂಚಾಯಿತಿಯ ಕೇಂದ್ರ ಸ್ಥಾನದಲ್ಲಿ ನಡೆಸತಕ್ಕದ್ದು.

ಪ್ರಕರಣ ೫೮ರ ಅಡಿಯಲ್ಲಿ ಗ್ರಾಮ ಪಂಚಾಯಿತಿಯ ಅನುಸೂಚಿ ೧ರಲ್ಲಿ ಪಟ್ಟಿ ಮಾಡಿರುವ ಕಾರ್ಯಗಳನ್ನು ನೆರವೇರಿಸಲು ಅವಶ್ಯಕ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ. ಅನುಸೂಚಿಯಲ್ಲಿರುವ ಹಲವಾರು ಪಟ್ಟಿಗಳ ಪೈಕಿ, ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳು ಸೇರಿದಂತೆ ಶಿಕ್ಷಣ, ವಯಸ್ಕರ ಶಿಕ್ಷಣ ಮತ್ತು ಅನೌಪಚಾರಿಕ ಶಿಕ್ಷಣ, ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿ ಕೆಲಸ ಇವುಗಳು ಗ್ರಾಮ ಪಂಚಾಯಿತಿ ನಿರ್ವಹಿಸಬೇಕಾದ ಪ್ರಮುಖ ಕೆಲಸಗಳಾಗಿರುತ್ತವೆ. ಈ ಎಲ್ಲಾ ಕೆಲಸಗಳ ಜೊತೆಗೆ ಪ್ರಕರಣ ೫೮ (೧ಎ) ಅಡಿಯಲ್ಲಿ ಅನುಸೂಚಿಯಲ್ಲಿರುವ ಪಟ್ಟಿಯ ಜೊತೆಗೆ ಪಂಚಾಯಿತಿಯು ಕಡ್ಡಾಯವಾಗಿ ಕಲ್ಪಿಸಲೇಬೇಕಾದ ಸೌಲಭ್ಯಗಳ ಬಗ್ಗೆ ಸೂಚಿಸಲಾಗಿದೆ. ಈ ಪಟ್ಟಿಯಲ್ಲಿ ಪ್ರಾಥಮಿಕ

ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿಯನ್ನು ಖಚಿತಪಡಿಸಿಕೊಳ್ಳುವುದು ಪಂಚಾಯಿತಿಯ ಕಡ್ಡಾಯ ಜವಾಬ್ಧಾರಿಯಾಗಿರುತ್ತದೆ.

ಗ್ರಾಮ ಪಂಚಾಯಿತಿಯು ತನಗೆ ವಹಿಸಿರುವ ಅವಶ್ಯಕವಾದ ಮತ್ತು ಪ್ರಾಸಂಗಿಕವಾದ ಎಲ್ಲಾ ಕಾರ್ಯಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಪ್ರಕರಣ ೬೧ರ ಅಡಿ ವಿವಿಧ ಸ್ಥಾಯಿ ಸಮಿತಿಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಿ, ಪ್ರಕರಣ ೬೧ರ ಅಡಿ ವಿವಿಧ ಸ್ಥಾಯಿ ಸಮಿತಿಗಳನ್ನು ಚುನಾವಣೆಯ ಮೂಲಕ ರಚಿಸಿಕೊಳ್ಳಬಹುದಾಗಿದೆ.

ಈ ಸ್ಥಾಯಿ ಸಮಿತಿಗಳೆಂದರೆ ಉತ್ಪಾದನ ಸಮಿತಿ :– ಕೃಷಿ ಉತ್ಪಾದನೆ, ಪಶು ಸಂಗೋಪನೆ ಮತ್ತು ಗ್ರಾಮಾಂತರ ಕೈಗಾರಿಕೆಗಳು ಮತ್ತು ಬಡತನ ನಿವಾರಣ ಕಾರ್ಯಕ್ರಮಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು, **ಸಾಮಾಜಿಕ ನ್ಯಾಯ ಸಮಿತಿ :–** ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳ ಶೈಕ್ಷಣಿಕ, ಆರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಮತ್ತು ಇತರೆ ಕಲ್ಯಾಣ ಕಾರ್ಯಕ್ರಮಗಳಿಗೆ ಉತ್ತೇಜನ ನೀಡಲು ಸಾಮಾಜಿಕ ಅಧ್ಯಯನ ಮತ್ತು ಯಾವುದೇ ರೀತಿಯ ಶೋಷಣೆಗಳಿಂದ ಮೇಲೆ ತಿಳಿಸಿದ ವರ್ಗಗಳಿಗೆ ರಕ್ಷಣೆ ಕೊಡಲು– ಮಹಿಳಾ ಮತ್ತು ಮಕ್ಕಳ ಕಲ್ಯಾಣಗಳಿಗೆ ಸಂಬಂಧಿಸಿದ ಕಾರ್ಯಗಳನ್ನು ನೆರವೇರಿಸಲು.

ನಾಗರಿಕ ಸೌಕರ್ಯ ಸಮಿತಿ :– ಶಿಕ್ಷಣ, ಆರೋಗ್ಯ, ಲೋಕೋಪಯೋಗಿ ಕಾಮಗಾರಿಗಳಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಮತ್ತು ಗ್ರಾಮ ಪಂಚಾಯಿತಿಯ ಇತರೆ ಕಾರ್ಯಗಳನ್ನು ನಿರ್ವಹಿಸಲು.

ಮೇಲೆ ತಿಳಿಸಿದಂತೆ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಶಿಕ್ಷಣಕ್ಕೆ ಸಂಬಂಧಿಸಿದ ಕೆಲಸಗಳನ್ನು ನಿರ್ವಹಿಸಿ ಪಂಚಾಯಿತಿ ವ್ಯಾಪ್ತಿಯಲ್ಲಿನ ಎಲ್ಲಾ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವುದು, ಪಂಚಾಯಿತಿ ಅರ್ಥಾತ್ ನಾಗರೀಕ ಸೌಕರ್ಯ ಸಮಿತಿಯ ಜವಾಬ್ದಾರಿಯಾಗಿರುತ್ತದೆ.

ನಾಗರಿಕ ಸೌಲಭ್ಯಗಳ ಸಮಿತಿ (ಸಿಎಸಿ)

ನಾಗರೀಕ ಸೌಕರ್ಯ ಸಮಿತಿಯು ಸಂದರ್ಭಾನುಸಾರ ಪಂಚಾಯಿತಿ ಅಧ್ಯಕ್ಷರನ್ನು ಸಮಿತಿಯು ಪದನಿಮಿತ್ತ ಸದಸ್ಯ ಮತ್ತು ಸಭಾಧ್ಯಕ್ಷರನ್ನಾಗಿ ಹೊಂದಿರುತ್ತದೆ. ಪಂಚಾಯಿತಿ ಅಧ್ಯಕ್ಷರನ್ನು ಒಳಗೊಂಡಂತೆ ೩ ರಿಂದ ೫ ಸದಸ್ಯರನ್ನು ಸಮಿತಿಯಲ್ಲಿ ಹೊಂದಿರಬಹುದಾಗಿದೆ. ಎಸ್.ಡಿ.ಎಂ.ಸಿಯ ಉಪವಿಧಿಯ ಸಂಬಂಧಿಸಿದಂತೆ ಪ್ರತಿಯೊಂದು ಪಂಚಾಯಿತಿ ವ್ಯಾಪ್ತಿಯಲ್ಲಿನ ಪ್ರಾಥಮಿಕ ಮತ್ತು ಹಿರಿಯ ಪ್ರಾಥಮಿಕ ಶಿಕ್ಷಣದ ಜವಾಬ್ಧಾರಿ ನಾಗರಿಕ ಸೌಕರ್ಯ ಸಮಿತಿಯದ್ದಾಗಿದೆ. ನಾಗರೀಕ ಸೌಕರ್ಯ ಸಮಿತಿಯ ಅಡಿಯಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸುವುದರ ಮೂಲಕ ಎಸ್.ಡಿ.ಎಂ.ಸಿ.ಗಳಿಗೆ ಶಾಸನಬದ್ಧ ಸ್ಥಾನವನ್ನು ಕಲ್ಪಿಸಲಾಗಿದೆ. ಈ ಹಿನ್ನಲೆಯಲ್ಲಿ ನಾಗರೀಕ ಸೌಕರ್ಯ ಸಮಿತಿಯು (ಸಿಎಸಿ) ಶಿಕ್ಷಣಕ್ಕೆ ಸಂಬಂಧಿಸಿದ ಕಾರ್ಯಗಳನ್ನು ಎಸ್.ಡಿ.ಎಂ.ಸಿ ಮತ್ತು ಗ್ರಾಮಪಂಚಾಯಿತಿಯ ನಡುವೆ ಕೊಂಡಿಯಂತೆ ಕಾರ್ಯನಿರ್ವಹಿಸುವುದೆ ಅಲ್ಲದೆ ನಿಯಮ ೬೧–ಎ(೧)ರ ಪ್ರಕಾರ ಗ್ರಾಮ ಪಂಚಾಯಿತಿ ಉದ್ದೇಶಗಳನ್ನು ಈಡೇರಿಸುವ ಸಲುವಾಗಿ ಉಪ ಸಮಿತಿಗಳನ್ನು

ರಚಿಸಿಕೊಳ್ಳಬಹುದಾಗಿದೆ. ಇದಕ್ಕೆ ಅನುಗುಣವಾಗಿ ದಿನಾಂಕ ೧೪-೬-೨೦೦೬ರ ಆದೇಶವನ್ನು ಹೊರಡಿಸಿ ಎಸ್‌ಡಿಎಂಸಿ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು.

ಸಿಎಸಿಯ ಜವಾಬ್ದಾರಿಗಳು

ರಚನೆ: ಸಿಎಸಿಯು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲ ಶಾಲೆಗಳಲ್ಲಿ ಎಸ್.ಡಿ.ಎಂ.ಸಿಗಳನ್ನು ರಚಿಸತಕ್ಕದ್ದು. ಇದನ್ನು ಆಯಾ ಶಾಲೆಯ ಮುಖ್ಯ ಶಿಕ್ಷಕರ ಮೂಲಕ ರಚಿಸುವುದು.

ಮಾಹಿತಿ ವಿನಿಮಯ ಮತ್ತು ಸಮನ್ವಯತೆ: ಮೇಲಿನ ಉದ್ದೇಶಕ್ಕಾಗಿ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಪಕ್ಷ ಪ್ರತಿ ಮೂರು ತಿಂಗಳಿಗೊಮ್ಮೆ ಪಂಚಾಯಿತಿ ಪ್ರದೇಶದ ವ್ಯಾಪ್ತಿಯಲ್ಲಿರುವ ಎಲ್ಲ ಶಾಲೆಗಳ ಎಸ್.ಡಿ.ಎಂ.ಸಿ ಪದಾಧಿಕಾರಿಗಳ ಜಂಟಿ ಸಭೆಯನ್ನು ನಡೆಸತಕ್ಕದ್ದು.

ಮೇಲ್ವಿಚಾರಣೆ : ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಕೈಗೊಂಡ ಕ್ರಮಗಳನ್ನು ಪರಿಶೀಲನೆ ಮಾಡತಕ್ಕದ್ದು. ಶಾಲೆಗಳ ವಾರ್ಷಿಕ ಕಾಮಗಾರಿ ಯೋಜನೆಗಳ ಅನುಷ್ಠಾನವನ್ನು ನಿಯತವಾಗಿ ಪರಿಶೀಲನೆ ಮಾಡತಕ್ಕದ್ದು ಮತ್ತು ಸಾಧ್ಯವಿರುವ ಕಡೆಗಳಲ್ಲಿ ಅವುಗಳ ಅನುಷ್ಠಾನಕ್ಕೆ ಅಗತ್ಯ ನೆರವು ನೀಡತಕ್ಕದ್ದು, ಶಾಲೆಗಳ ಲೆಕ್ಕಕ್ಕೆ ಹೆಚ್ಚುವರಿ ನಿಧಿಗಳನ್ನು ವರ್ಗಾಯಿಸಬಹುದು.

ಶಿಸ್ತುಕ್ರಮ : ಈ ಕೆಳಕಂಡ ಸಂಗತಿಗಳಿಗೆ ಬಾಲ ಕಾರ್ಮಿಕರನ್ನಾಗಿ ಬಳಸಿಕೊಳ್ಳುವುದು, ಶಾಲೆಯಲ್ಲಿ ದೈಹಿಕವಾಗಿ ನಿಂದಿಸುವುದು, ಶಾಲೆಯಲ್ಲಿ ಲೈಂಗಿಕ ಕಿರುಕುಳ ನೀಡುವುದು ಅಥವಾ ನಿಂದಿಸುವುದು. ಯಾವುದೇ ರೂಪದಲ್ಲಿ ಮಗುವಿಗೆ ಅಪಮಾನ ಮಾಡುವುದು ಅಥವಾ ತಾರತಮ್ಯ ತೋರುವುದು. ಶಾಲೆಯಲ್ಲಿ ಸಿಬ್ಬಂದಿ ಸದಸ್ಯರಿಗೆ ಯಾವುದೇ ರೂಪದಲ್ಲಿ ಅಪಮಾನ ಮಾಡುವುದು ಅಥವಾ ತಾರತಮ್ಯ ತೋರುವುದು. ಕರ್ತವ್ಯ ಲೋಪ, ನಿಧಿಗಳ ಮತ್ತು ಸೌಲಭ್ಯಗಳ ದುರುಪಯೋಗ, ಎಸ್.ಡಿ.ಎಂ.ಸಿಯ ಸಮಗ್ರ ಕಾರ್ಯನಿರ್ವಹಣೆ ಕುರಿತು, ಎಸ್.ಡಿ.ಎ.ಂಸಿ ಅಧ್ಯಕ್ಷರು ದೂರುಗಳನ್ನು ಸ್ವೀಕರಿಸಿದ ಒಂದು ವಾರದೊಳಗೆ ಸಿಎಸಿ ಸಮಿತಿಗೆ ಕಳುಹಿಸುವುದು. ಈ ರೀತಿಯ ದೂರುಗಳನ್ನು ಹಾಗೂ ಶಿಕ್ಷಕರು, ಬೋಧಕೇತರ ಸಿಬ್ಬಂಧಿ ಅಥವಾ ಸಮಿತಿಯ ಸದಸ್ಯರ ಉದಾಸೀನತೆ, ಕರ್ತವ್ಯ ಲೋಪ, ದುರ್ವರ್ತನೆ, ದುರ್ನಡತೆ ಅಥವಾ ಅಸಭ್ಯ ವರ್ತನೆ, ತಪ್ಪು ನಿರ್ವಹಣೆ, ನಿಧಿಗಳ ಮತ್ತು ಸೌಲಭ್ಯಗಳ ದುರುಪಯೋಗ, ಸಮಿತಿಯ ಒಟ್ಟು ಕಾರ್ಯನಿರ್ವಹಣೆ ದೂರುಗಳು ಬಂದಲ್ಲಿ ನಾಗರಿಕ ಸೌಲಭ್ಯಗಳ ಸಮಿತಿಯು ಈ ಮುಂದಿನ ಕಾರ್ಯವಿಧಾನ ಅನುಸರಿಸತಕ್ಕದ್ದು.

ಈ ವಿಚಾರವಾಗಿ ವಿಚಾರಣಾ ತಂಡವನ್ನು ರಚಿಸುವುದು, ೧೭ (ಇ) ಅನುಸಾರ ದೂರನ್ನು ಸ್ವೀಕರಿಸಿದ ೭ ದಿನಗಳೊಳಗೆ ದ್ವಿ ಸದಸ್ಯ ವಿಚಾರಣಾ ತಂಡವನ್ನು ರಚಿಸತಕ್ಕದ್ದು. **ತಂಡವನ್ನು** ರಚಿಸದಿದ್ದರೆ, ದೂರು ನೀಡಿರುವವರು ನೇರವಾಗಿ ಗ್ರಾಮ ಪಂಚಾಯತಿ ಅಥವಾ cluster level ಶಿಕ್ಷಣಾಧಿಕಾರಿಗಳನ್ನು ಸಂಪರ್ಕಿಸಬಹುದು., ವಿಚಾರಣಾ ತಂಡವು ನಾಗರಿಕ ಸೌಲಭ್ಯಗಳ ಸಮಿತಿಯಿಂದ ಒಬ್ಬರು, ಎಸ್.ಡಿ.ಎ.ಂಸಿ ಯಿಂದ ಒಬ್ಬರನ್ನು ಒಳಗೊಂಡಿರತಕ್ಕದ್ದು (ದೂರಿನಲ್ಲಿ ಇವರಿಬ್ಬರ ಹೆಸರು ಪ್ರತ್ಯೇಕವಾಗಿ ಅಥವಾ ಪರೋಕ್ಷವಾಗಿ ಇರಬಾರದು). ವಿಚಾರಣಾ ತಂಡವು ೧೫ ದಿನಗಳೊಳಗೆ

ವಿಚಾರಣೆಯನ್ನು ಪೂರ್ಣಗೊಳಿಸಬೇಕು ಮತ್ತು ತನ್ನ ತೀರ್ಮಾನಗಳನ್ನು ಶಿಫಾರಸ್ಸುಗಳೊಂದಿಗೆ ನಾಗರೀಕ ಸೌಲಭ್ಯಗಳ ಸಮಿತಿಗೆ ಕಳುಹಿಸಬೇಕು. ನಾಗರಿಕ ಸೌಲಭ್ಯಗಳ ಸಮಿತಿಯು ವಿಚಾರಣಾ ತಂಡದ ವರದಿ ಮತ್ತು ಶಿಫಾರಸ್ಸುಗಳ ಆಧಾರದ ಮೇಲೆ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು.

ದೈಹಿಕವಾಗಿ/ಲೈಂಗಿಕವಾಗಿ ದುರುಪಯೋಗಕ್ಕೆ ಸಂಬಂಧಪಟ್ಟ ದೂರುಗಳಿದ್ದಲ್ಲಿ: ಸಮಿತಿಯು ಕೂಡಲೇ ಮುಖ್ಯೋಪಾಧ್ಯಾಯರಿಗೆ ಮಗುವನ್ನು ಬಾಲ ನ್ಯಾಯ (ಪಾಲನೆ ಮತ್ತು ರಕ್ಷಣೆ) ಅಧಿಯಿಯಮ ೨೦೦೦ ಅಡಿಯಲ್ಲಿ ರಚಿಸಿದ ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಲು ನಿರ್ದೇಶಿಸಬೇಕು ಹಾಗೂ ಮುಂದಿನ ಕ್ರಮಕ್ಕೆ ಪೋಲೀಸರಿಗೆ ವಿಷಯವನ್ನು ಕಳುಹಿಸುವುದು, ಸಮಿತಿಯು ೨ ಮಹಿಳೆಯರನ್ನು ಒಳಗೊಂಡಂತೆ ಮೂವರು ಸದಸ್ಯರ ತಂಡವನ್ನು ರಚಿಸತಕ್ಕದ್ದು, ವಿಚಾರಣಾ ತಂಡದ ಸದಸ್ಯರಲ್ಲಿ ಒಬ್ಬರು ಶಾಲೆಯೊಂದಿಗೆ ಕಾರ್ಯನಿರತವಾಗಿಲ್ಲದಿರುವ ಒಂದು ಸರ್ಕಾರೇತರ ಸಂಸ್ಥೆಯಿಂದ ಬಂದಿರುವವರು ಆಗಿರಬೇಕು. ತಂಡವು ೧೫ ದಿನಗಳೊಳಗೆ ವರದಿಯನ್ನು ಸಲ್ಲಿಸಬೇಕು, ಸಮಿತಿಯು ವಿಚಾರಣಾ ತಂಡದ ವರದಿ ಹಾಗೂ ಶಿಫಾರಸ್ಸುಗಳ ಆಧಾರದ ಮೇಲೆ ಕ್ರಮವನ್ನು ಕೈಗೊಳ್ಳತಕ್ಕದ್ದು.

ಎಸ್‌ಡಿಎಂಸಿ ಸರಿಯಾಗಿ ಕೆಲಸ ನಿರ್ವಹಿಸುತ್ತಿಲ್ಲವಾದರೆ : ದೂರು ಸ್ವೀಕರಿಸಿದ ೧೦ ದಿನಗಳೊಳಗೆ ೨ ಸದಸ್ಯರಿರುವ ನಾಗರಿಕ ಸೌಲಭ್ಯಗಳ ಸಮಿತಿಯ ತಂಡವನ್ನು ರಚಿಸುವುದು. ತಂಡವು ಸರಿಪಡಿಸುವ ವಿಧಾನಗಳನ್ನು ಸೂಚಿಸಿ ೧೦ ದಿನಗಳೊಳಗೆ ಸಿ.ಎ.ಸಿಗೆ ವರದಿ ಸಲ್ಲಿಸಬೇಕು. ಸಿ.ಎ.ಸಿ ವರದಿ ಆಧಾರದ ಮೇಲೆ ಕಾರಣ ಕೇಳುವ ನೋಟಿಸ್ ಕಳುಹಿಸಿ ಅವ್ಯವಹಾರಗಳನ್ನು ಸರಿಪಡಿಸಲು ೧೦ ದಿನಗಳ ಕಾಲಾವಕಾಶ ನೀಡಬೇಕು. ಎಸ್.ಡಿ.ಎಂ.ಸಿಯು ೧೫ ದಿನಗಳೊಳಗೆ ಸಿಎಸಿಗೆ ಅನುಪಾಲನಾ ವರದಿಯನ್ನು ಸಲ್ಲಿಸಬೇಕು. ಇದರ ಬಗ್ಗೆ ಸಿಎಸಿ ಸಮಸ್ಯೆಗಳನ್ನು ಸರಿಪಡಿಸಿದ ಬಗ್ಗೆ ಖುದ್ದಾಗಿ ಪರೀಶೀಲಿಸಬೇಕು. ಈ ಅವಧಿಯಲ್ಲಿ ತೆಗೆದುಕೊಂಡ ಕ್ರಮಗಳು ತೃಪ್ತಿಕರವಾಗಿಲ್ಲದಿದ್ದಲ್ಲಿ ಎಸ್‌ಡಿಎಂಸಿ ಯನ್ನು ರದ್ದುಪಡಿಸತಕ್ಕದ್ದು. ಹಾಗೆ ರದ್ದುಗೊಂಡ ಒಂದು ತಿಂಗಳೊಳಗಾಗಿ ಶಾಲಾ ಪ್ರಾಧಿಕಾರಗಳು ಎಸ್‌ಡಿಎಂಸಿ ಸಮಿತಿಯ ಮರುರಚನೆ ಮಾಡಿದ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಸಮಿತಿಯು ರಚನೆಯಾಗುವವರೆಗೂ ಅದರ ಕಾರ್ಯಗಳನ್ನು ನಾಗರಿಕ ಸೌಲಭ್ಯಗಳ ಸಮಿತಿಯು ನಿರ್ವಹಿಸಬೇಕು.

೨.೭ ಪಂಚಾಯತಿಯೊಂದಿಗೆ ಶಾಲೆಯ ಸಂಬಂಧ

ಗ್ರಾಮ ಸಭೆಗಳಿಗೆ ಗ್ರಾಮದ ಶಾಲೆಗಳ ಎಸ್.ಡಿ.ಎಂ.ಸಿ ಅಧ್ಯಕ್ಷಕರು/ಉಪಾಧ್ಯಕ್ಷರು ಖಾಯಂ ಆಮಂತ್ರಿತ ಸದಸ್ಯರಾಗಿರುವುದರಿಂದ ಅವರಿಗೆ ಅಲ್ಲಿ ಶಾಲೆಯ ಪ್ರಗತಿ ಹಾಗೂ ಶೈಕ್ಷಣಿಕ ಸಮಸ್ಯೆಗಳಿಗೆ ಚರ್ಚಿಸಲು ಅವರುಗಳಿಗೆ ಸೂಕ್ತ ಕಾಲಾವಕಾಶ ನೀಡುವುದು. ಪ್ರಕರಣ ೫೮(೧ಎ) ಅಡಿಯಲ್ಲಿ ಪ್ರಾಥಮಿಕ, ಪ್ರೌಢ ಶಾಲೆಗೆ ಮಕ್ಕಳ ಸಾರ್ವತ್ರಿಕ ದಾಖಲಾತಿ ಶಿಕ್ಷಣದ ಜವಾಬ್ದಾರಿ ಪಂಚಾಯತಿಯದ್ದಾಗಿದೆ. ಈಗಾಗಿ ಗ್ರಾಮ ಪಂಚಾಯತಿ ಕೇಂದ್ರದಲ್ಲಿರುವ ಶಾಲೆಯ ಎಸ್.ಡಿ.ಎಂ.ಸಿ ಅಧ್ಯಕ್ಷರು/ಉಪಾಧ್ಯಕ್ಷರು ಗ್ರಾ.ಪಂ. ಸಭೆಗೆ ವಿಶೇಷ ಆಹ್ವಾನಿತರು. ಇದರಿಂದ ಶಾಲೆ ಹಾಗೂ ಶೈಕ್ಷಣಿಕ ವಿಚಾರಗಳನ್ನು ಗ್ರಾ.ಪಂ. ಮಟ್ಟದಲ್ಲಿ ಚರ್ಚಿಸಲು ಅವಕಾಶ ಸಿಕ್ಕಾಂತಾಗುತ್ತದೆ. ಉಳಿದ ಶಾಲೆಗಳ ಸಮಸ್ಯೆ ಹಾಗೂ ಪ್ರಗತಿ ಬಗ್ಗೆ ಗ್ರಾ.ಪಂ. ಕೇಂದ್ರದ ಎಸ್.ಡಿ.ಎಂ.ಸಿ ಅಧ್ಯಕ್ಷರ ಮೂಲಕ ಗ್ರಾ.ಪಂ. ಗಮನಕ್ಕೆ ತರಬಹುದು. ಮಾದರಿ ಉಪವಿಧಿಗಳನ್ನು ದಿನಾಂಕ ೧೭-೦೩-೦೬ ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಕೃತವಾಗಿ ಪ್ರಕಟಿಸಿ ಸಾರ್ವಜನಿಕ ಚರ್ಚೆ ಹಾಗೂ ಸಲಹೆಗಾಗಿ ಒಂದು ತಿಂಗಳು ಕಾಲಾವಕಾಶ

ನೀಡಿತು. ರಾಜ್ಯದ ಶೈಕ್ಷಣಿಕ ಇತಿಹಾಸದಲ್ಲಿ ಒಂದು ಮೈಲಿಗಲ್ಲು ೧೪-೦೬-೦೬ ಸಾರ್ವಜನಿಕರಿಂದ ಬಂದ ಸಲಹೆ ಸೂಚನೆಗಳನ್ನು ಅಗತ್ಯ ತಿದ್ದುಪಡಿಯನ್ನು ಮಾಡಿ ಈ ಉಪವಿಧಿಗಳನ್ನು ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸಿತು. ಸಿ.ಎ.ಸಿ. ತನ್ನ ವ್ಯಾಪ್ತಿಯಲ್ಲಿ ಬರುವ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಗುಣಾತ್ಮಕ ಶಾಲಾ ಶಿಕ್ಷಣವನ್ನು ಖಚಿತ ಪಡಿಸುವ ನಿಟ್ಟಿನಲ್ಲಿ ಎಸ್.ಡಿ.ಎಂ.ಸಿ ಗಳಿಗೆ ಸಿ.ಎ.ಸಿ ಬೆಂಬಲ, ಸಹಕಾರ ಮತ್ತು ಉತ್ತೇಜನ ನೀಡಬೇಕು. ಎಸ್.ಡಿ.ಎಂ.ಸಿ. ರಚಿಸಿರುವ ಶಾಲಾಭಿವೃದ್ಧಿ ಕ್ರಿಯಾಯೋಜನೆಗಳನ್ನು ಸಿ.ಎ.ಸಿ. ಅನುಮೋದನೆಯೊಂದಿಗೆ ಜಾರಿಗೊಳಿಸಬೇಕು. ಪ್ರತಿ ೩ ತಿಂಗಳಿಗೊಮ್ಮೆ ಸಿ.ಎ.ಸಿ. ಸಭೆ ಮಾಡಬೇಕು. ಈ ಸಭೆಗೆ ಎಸ್.ಡಿ.ಎಂ.ಸಿ. ಅಧ್ಯಕ್ಷರು /ಉಪಾಧ್ಯಕ್ಷರು ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು ಕಡ್ಡಾಯವಾಗಿ ಹಾಜರಿರಬೇಕು. ತಮ್ಮ ತಮ್ಮ ಶಾಲೆಗಳ ಅಭಿವೃದ್ಧಿಗಾಗಿ ಸಿ.ಎ.ಸಿ. ಸಭೆಯಲ್ಲಿ ಚರ್ಚಿಸಿ, ಪರಿಹಾರ ಕಂಡುಕೊಳ್ಳಬೇಕು. ಸಿ.ಎ.ಸಿ. ಪಂಚಾಯತಿ ಸಭೆಯಲ್ಲಿ ಶಾಲೆಯ ಅಗತ್ಯತೆಗಳನ್ನು ನಿರ್ಧರಿಸಿ ಪೂರೈಸಬೇಕು. ಸಿ.ಎ.ಸಿ. ಶಾಲೆಗಳಲ್ಲಿ ಗುಣಾತ್ಮಕ ಶಾಲಾ ಶಿಕ್ಷಣ ಸಿಗುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಈ ಹಿನ್ನಲೆಯಲ್ಲಿ ಎಸ್.ಡಿ.ಎಂ.ಸಿ. ಮತ್ತು ಸಿ.ಎ.ಸಿ. ಪರಸ್ಪರ ಅನ್ಯೋನ್ಯತೆ ಮತ್ತು ಸಹಕಾರದಿಂದ ಕೆಲಸ ನಿರ್ವಹಿಸಬೇಕಾಗಿದೆ. ಇದಕ್ಕೆ ಪೂರಕವಾಗಿ ಅನೇಕ ಕಾರ್ಯಕ್ರಮಗಳನ್ನು ನಿರಂತರವಾಗಿ ಜಾರಿಗೆ ತರಲಾಯಿತು.

೨.೮ ಶಾಲೆ, ಎಸ್.ಡಿ.ಎಂ.ಸಿ ಮತ್ತು ನಾಗರೀಕ ಸೌಕರ್ಯ ಸಮಿತಿ ಒಟ್ಟಾಗಿ ಕೆಲಸ ನಿರ್ವಹಿಸಲು ತಂದ ಕಾರ್ಯಕ್ರಮಗಳು

ಜನಶಾಲಾ ಕಾರ್ಯಕ್ರಮ : ಸರ್ವರಿಗೂ ಶಿಕ್ಷಣ ನೀಡುವ ಉದ್ದೇಶದಿಂದ ಕರ್ನಾಟಕ ಸರಕಾರ ಪ್ರಾರಂಭಿಸಿದ ಒಂದು ಕಾರ್ಯಕ್ರಮ ಇದಾಗಿದೆ. ಇದು ೧೯೯೮ ರ ಅಕ್ಟೋಬರ್‌ನಲ್ಲಿ ಜಾರಿಗೆ ಬಂದಿತು. ಮೊದಲಿಗೆ ಬ್ಲಾಕ್‌ಗಳನ್ನು ಗುರುತಿಸಲಾಯಿತು. ಒಂದು ಬ್ಲಾಕ್‌ನಲ್ಲಿ ಹಲವು ಕ್ಲಸ್ಟರ್‌ಗಳಿದ್ದು, ಪ್ರತಿ ಸಮೂಹದಲ್ಲಿ ಹತ್ತಿರದ ಹಳ್ಳಿಗಳಲ್ಲಿರುವ ೧೨-೧೫ ಶಾಲೆಗಳಿವೆ. ಬ್ಲಾಕ್‌ಗಳಲ್ಲಿ ಕ್ಷೇತ್ರ ಸಂಪನ್ಮೂಲ ಸಂಯೋಜಿತರನ್ನು (ಬಿ.ಆರ್.ಸಿ) ಆಯ್ಕೆ ಮಾಡಿ, ಗ್ರಾಮ ಶಿಕ್ಷಣ ಸಮಿತಿಗಳನ್ನು ರಚಿಸಲಾಯಿತು. ಒಬ್ಬ ಕ್ಷೇತ್ರ ಸಂಪನ್ಮೂಲ ಸಂಯೋಜಕರು ಮತ್ತು ಮೂರು ಜನ ಸಂಪನ್ಮೂಲ ವ್ಯಕ್ತಿಗಳನ್ನು ಕ್ಷೇತ್ರ ಸಂಪನ್ಮೂಲ ಕೇಂದ್ರ (ಬಿ.ಆರ್.ಸಿ) ಗಳನ್ನು ಸ್ಥಾಪಿಸಿ ನಿರಂತರವಾಗಿ ಸೇವಾ ನಿರತ ತರಬೇತಿ ನೀಡುವಂತೆ ಮಾಡಲಾಯಿತು. ೫೦-೬೦ ಶಿಕ್ಷಕರನ್ನೊಳಗೊಂಡಂತೆ ಸಮೂಹ ಸಂಪನ್ಮೂಲ ಕೇಂದ್ರ (ಸಿ.ಆರ್.ಸಿ) ಗಳನ್ನು ರಚಿಸಲಾಯಿತು. ಇದು ಶಿಕ್ಷಕರಿಗೆ ದೈನಂದಿನವಾಗಿ ತಾಂತ್ರಿಕ ಸಂಪನ್ಮೂಲ ಬೆಂಬಲ ಒದಗಿಸುವುದು, ತಾಲ್ಲೂಕು ಮಟ್ಟದಲ್ಲಿ ಕೊಡುವ ಸೇವಾ ನಿರತ ಶಿಕ್ಷಣವನ್ನು ಪುನರ್ಬಲನಗೊಳಿಸುವುದು ಸಿ.ಆರ್.ಸಿಗಳ ಕಾರ್ಯವಾಯಿತು. ಜನಶಾಲಾ ಕಾರ್ಯಕ್ರಮ ವಿವಿಧ ಚಟುವಟಿಕೆಗಳಿಂದ ಕೂಡಿತ್ತು. ಅಂತಹ ಚಟುವಟಿಕೆಗಳೆಂದರೆ, ಕಲಾಜಾಥಾಗಳು, ಕನಾಟಕದ ಪ್ರಮುಖ ನಾಟಕ ಸಮೂಹಗಳು ಕಲಾ ಜಾಥಗಳ ಪ್ರೇರಕಗಳಾಗಿವೆ. ಜನರಲ್ಲಿ ಅರಿವು ಮೂಡಿಸಲು ಸಾಂಸ್ಕೃತಿಕ ಕಾರ್ಯಕ್ರಮಗಳೂ ಸೇರಿದಂತೆ ಬೀದಿ ನಾಟಕಗಳನ್ನು ಮಾಡುವುದು. ಸಮುದಾಯದ ಸಹಕಾರ ಪಡೆಯುವುದು ಇದರ ಮುಖ್ಯ ಉದ್ದೇಶವಾಗಿದೆ. ಇಂತಹ ಕಲಾಜಾಥಗಳು ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡುವುದಲ್ಲದೆ ಮೂಲ ಸೌಕರ್ಯಗಳು ಲಭ್ಯವಾಗುವಂತೆ ಮಾಡಲು ಕಾರಣವಾಗಿವೆ. ಇದಕ್ಕಾಗಿ ತಾಲ್ಲೂಕು ಮಟ್ಟದಲ್ಲಿ ಕೋರ್ ತಂಡಗಳನ್ನು ರಚಿಸಲಾಗಿದ್ದು ಇವರು ಡಯಟ್‌ಗಳ ಉಪನ್ಯಾಸಕರೊಂದಿಗೆ ಸಂಪರ್ಕ ಹೊಂದಿರುತ್ತಾರೆ. ಅಲ್ಲದೆ ಡಯಟ್‌ನ ಪ್ರಾಂಶುಪಾಲರು, ಉಪನ್ಯಾಸಕ ತರಬೇತಿದಾರರು ನೋಡಲ್ ಅಧಿಕಾರಿಗಳಾಗಿರುವವರು, ಕ್ಷೇತ್ರ ಸಂಪನ್ಮೂಲ ಸಂಯೋಜಕರು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಸಂಪನ್ಮೂಲ ವ್ಯಕ್ತಿಗಳು ಸದಸ್ಯರಾಗಿರುತ್ತಾರೆ.

ನಂತರದ ಕಾರ್ಯಕ್ರಮವೆ ದಾಖಲಾತಿ ಆಂದೋಲನ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಸಾರ್ವತ್ರಿಕ ದಾಖಲಾತಿಯಾಗುವಂತೆ ಜನಾಂದೋಲನವನ್ನು ಬ್ಲಾಕ್ ಮಟ್ಟದಲ್ಲಿ ನಡೆಸಲಾಯಿತು. ಗ್ರಾಮದ ಮುಖ್ಯಸ್ಥರು ಬಿ.ಇ.ಓಗಳು, ಶಾಲಾ ಶಿಕ್ಷಕರು ವಿವಿಧ ಇಲಾಖೆಯ ಮುಖ್ಯಸ್ಥರು ಇದರಲ್ಲಿ ಭಾಗವಹಿಸುತ್ತಾರೆ. ನಂತರ ಮೈಕ್ರೊ – ಯೋಜನೆಯನ್ನು ಗ್ರಾಮ ಮಟ್ಟದಲ್ಲಿ ಜಾರಿಗೆ ತರಲಾಯಿತು. ಈ ಕಾರ್ಯಕ್ರಮವನ್ನು ಗ್ರಾಮಗಳ ಸಮೀಕ್ಷೆಯನ್ನು ಶಿಕ್ಷಕರ ಸಹಾಯದಿಂದ ಮಾಡಲಾಗುವುದು, ನಕ್ಷೆ ತಯಾರಿಕೆಯ ಕಾರ್ಯದಲ್ಲಿ ಸಾಮಾಜಿಕ ಮತ್ತು ಸಂಪನ್ಮೂಲ ನಕ್ಷೆ ಎರಡನ್ನೂ ಮಾಡಲಾಗುವುದು. ಮೈಕ್ರೊ–ಪ್ಲಾನಿಂಗ್ ಚರ್ಚೆಯಲ್ಲಿ ಪೋಷಕರು, ಸಮುದಾಯ, ಮಕ್ಕಳು ಭಾಗವಹಿಸುವರು. ಇದು ನಾಲ್ಕು ದಿನಗಳ ಪ್ರಕ್ರಿಯೆಯಾಗಿದ್ದು, ಶಿಕ್ಷಕರ ತಂಡವೊಂದು ಒಂದು ಸಂದೇಶದೊಂದಿಗೆ ಹಳ್ಳಿಯಲ್ಲಿ ಸಂಚರಿಸುವುದು, ನಂತರ ಗ್ರಾಮ ಮಟ್ಟದ ಯೋಜನೆಯನ್ನು ತಯಾರಿಸುವುದು ಇದರ ಉದ್ದೇಶವಾಗಿತ್ತು. ನಂತರ ಗ್ರಾಮದಲ್ಲಿ ಮಹಿಳೆಯರ ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸಲು **ನೆರೆ ಹೊರೆಯ ಮಹಿಳಾ ನಾಯಕಿಯರು** ಎಂಬ ಕಾರ್ಯಕ್ರಮವನ್ನು ಜಾರಿಗೆ ತಂದು ಈ ಮೂಲಕ ಮಹಿಳಾ ನಾಯಕಿಯರನ್ನು ಗ್ರಾಮ ಸಭೆ ಪ್ರಜಾಸತ್ತಾತ್ಮಕವಾಗಿ ಚುನಾಯಿಸುತ್ತದೆ. ಸಮುದಾಯ ಮತ್ತು ಇಲಾಖೆಗಳೊಂದಿಗೆ ಸಹಕಾರ ಏರ್ಪಡಿಸುವುದು ಇದರ ಮುಖ್ಯ ಉದ್ದೇಶ. ಈ ಮಹಿಳಾ ನಾಯಕಿಯರು ತಿಂಗಳಿಗೆ ಎರಡು ಬಾರಿ ಸಭೆ ಸೇರುವುದು. ಐದು ವರ್ಷಕ್ಕಿಂತ ಕಿರಿಯ ಮಕ್ಕಳ ವಿಷಯದಲ್ಲಿ ಮಹಿಳಾ ಮತ್ತು ಮಕ್ಕಳ ಇಲಾಖೆಯೊಂದಿಗೆ ಸಂಪರ್ಕ ಏರ್ಪಡಿಸುವರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ನಡೆಸುವ ಆರೋಗ್ಯ ಶಿಬಿರಗಳಲ್ಲಿಯೂ ಇವರು ಭಾಗವಹಿಸುವರು. ನಂತರ **ವಿಕೇಂದ್ರೀಕೃತ ಆಡಳಿತ**ದ ನಿರ್ವಹಣೆಯನ್ನು ಜನಶಾಲಾ ಕಾರ್ಯಕ್ರಮ ಆಧರಿಸಿದೆ. ಅದಕ್ಕಾಗಿ ತಾಲ್ಲೂಕು (ಬ್ಲಾಕ್) ಮಟ್ಟದಲ್ಲಿ ತಾಲ್ಲೂಕು ಅನುಷ್ಠಾನ ಸಮಿತಿಗಳನ್ನು ರಚಿಸಲಾಗಿದೆ. ನಮ್ಮ ಸಂವಿಧಾನದ ೭೩ ನೇ ಮತ್ತು ೭೪ನೇ ತಿದ್ದುಪಡಿಗಳು ಶಿಕ್ಷಣ ಯೋಜನೆಗಳನ್ನು ವಿಕೇಂದ್ರೀಕೃತವಾಗಲು ಶಾಸನಬದ್ಧತೆಯನ್ನು ಒದಗಿಸಿದೆ. ವಿಕೇಂದ್ರೀಕೃತ ಆಡಳಿತದ ಮುಂದುವರಿದ ಭಾಗವಾಗಿ**ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ**ಗಳನ್ನು ಕರ್ನಾಟಕ ಸರಕಾರ ರಚಿಸಿದೆ. ಶಾಲಾ ಕಾರ್ಯಕ್ರಮಗಳಲ್ಲಿ ಪೋಷಕರ ಸಹಬಾಗಿತ್ವ ಪಡೆಯುವುದು ಇದರ ಉದ್ದೇಶ. ಈ ಸಮಿತಿಯಲ್ಲಿ ತಂದೆ– ತಾಯಿಯರ ಪರಿಷತ್ತು ತಮ್ಮಲ್ಲಿ ೯ ಜನ ಪ್ರತಿನಿಧಿಗಳನ್ನು ಎಸ್.ಡಿ.ಎಂ.ಸಿ ಆಯ್ಕೆ ಮಾಡಬೇಕು. ಇವರಲ್ಲಿ ಕನಿಷ್ಠ ೩ ಜನ ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ತಲಾ ಒಬ್ಬರು ಮತ್ತು ಅಲ್ಪ ಸಂಖ್ಯಾತ ಸಮುದಾಯದಿಂದ ಒಬ್ಬರು ಪ್ರತಿನಿಧಿಗಳು ಇರುತ್ತಾರೆ. ಮುಖ್ಯೋಪಾಧ್ಯಾಯರು, ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಅಧಿಕಾರಿಗಳು ಪದನಿಮಿತ್ತ ಸದಸ್ಯರಾಗಿರುತ್ತಾರೆ, ಅಲ್ಲದೆ ಉನ್ನತ ತರಗತಿಯಿಂದ ಆಯ್ದ ಇಬ್ಬರು ವಿದ್ಯಾರ್ಥಿಗಳು ಪ್ರತಿನಿಧಿಗಳಾಗಿರುತ್ತಾರೆ. ಮತ್ತು ನಾಮಕನಿರ್ದೇಶಿತ ಸದಸ್ಯರಾಗಿ ೧೦೦೦೦ ರೂ ಗಳಿಗಿಂತ ಹೆಚ್ಚು ದಾನ ಮಾಡಿದ ದಾನಿ, ಯುವಕ/ಯುವತಿ ಅಥವಾ ಮಹಿಳಾ ಸಂಘದ ಪ್ರತಿನಿಧಿ, ಶಿಕ್ಷಣ ಆಸಕ್ತ ಮತ್ತು ಶಿಕ್ಷಣ ತಜ್ಞ ಇವರು ಇರುತ್ತಾರೆ, ಈ ರೀತಿ ರಚನೆಯಾದ ಸಮಿತಿಗೆ ಗ್ರಾಮದ ಶಾಲೆಯ ಎಲ್ಲ ಆಗು ಹೋಗುಗಳನ್ನು ನಿಯಂತ್ರಿಸುವ ಅಧಿಕಾರ ನೀಡಲಾಗಿದೆ. ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಇತರೆ ಸದಸ್ಯರ ಗರಿಷ್ಠ ಅವಧಿ ೩ ವರ್ಷ.**ಶಾಲೆಗಳೊಂದಿಗೆ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕೆ ಪೂರಕವಾಗಿ ಕೆಲಸ ನಿರ್ವಹಿಸುತ್ತಿರುವ** ಇತರೆ ಇಲಾಖೆಗಳೊಂದಿಗೆ ಸಹಯೋಗ ಎರಡು ರೀತಿಯಲ್ಲಿ ನಡೆಯುತ್ತದೆ. **ಮೊದಲನೆಯದು** ಶಿಕ್ಷಣ ಇಲಾಖೆಯಲ್ಲಿ ಪ್ರಸಕ್ತ ಇರುವ ವಿವಿಧ ಯೋಜನೆಗಳೊಂದಿಗೆ ಸಹಯೋಗ, **ಎರಡನೆಯದು** ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಕಾರ್ಮಿಕ ಕಲ್ಯಾಣ ಇಲಾಖೆ ಇತ್ಯಾದಿ ಘಟಕಗಳೊಂದಿಗೆ ಸಹಯೋಗ, **ಮಕ್ಕಳ ಶಿಕ್ಷಣದ** ಗುಣ ಮಟ್ಟ ಸುಧಾರಣೆಗಾಗಿ ಬಹುವರ್ಗ ಬೋಧನೆ,

ಬಹುಹಂತ ಬೋಧನೆ ಸನ್ನಿವೇಶಗಳಿಗೆ ಅಗತ್ಯವಾದ ಬೋಧನಾ ತಂತ್ರಗಳ ಅಭಿವೃದ್ಧಿ ಮಾಡುವುದು ಹಾಗೂ ಚಟುವಟಿಕೆ ಆಧಾರಿತ ಶಿಶುಕೇಂದ್ರಿತ ಶಿಕ್ಷಣದಲ್ಲಿ ಶಿಕ್ಷಕರಿಗೆ ತರಬೇತಿ ನೀಡುವುದರ ಮೂಲಕ ಮಾಡಲಾಗುತ್ತಿದೆ. ನಂತರ ಶಿಕ್ಷಕ ತರಬೇತಿ ಮತ್ತು ಬೋಧನಾ ತಂತ್ರಗಳಲ್ಲಿ ಪರಿಣಾಮಾತ್ಮಕತೆಯನ್ನು ತರಲು ಕರ್ನಾಟಕದಲ್ಲಿ ಮುಖ್ಯವಾಗಿ ಎರಡು ವಿಧದ ಬೋಧನಾ ಪದ್ಧತಿಗಳಿಗೆ ಸಂಬಂಧಿಸಿದಂತೆ ತರಬೇತಿಗಳು ರೂಢಿಯಲ್ಲಿವೆ ಅವುಗಳೆಂದರೆ ನಲಿ ಕಲಿ, ಚೈತನ್ಯ, ಈ ಎರಡು ಪದ್ಧತಿಗಳು, ನಲಿಕಲಿ ಎಂಬ ಪರಿಕಲ್ಪನೆ ಹೊರಹೊಮ್ಮಿದ್ದು ಹೆಗ್ಗಡದೇವನ ಕೋಟೆಯಿಂದ ಶಿಕ್ಷಕರ ತಂಡವೊಂದು ಆಂಧ್ರದ ಋಷಿವ್ಯಾಲಿಯಲ್ಲಿರುವ 'ಸ್ಕ್ಯಾಟ್ ಲೈಟ್' ಶಾಲೆಗಳಿಗೆ ಬೇಟಿ ನೀಡಿದಾಗ ನಂತರ ಈ ತಂಡ ೧೯೯೫ರಲ್ಲಿ ತನ್ನದೆ ಆದ ಸಾಮಾಗ್ರಿಗಳನ್ನು ಕನ್ನಡದಲ್ಲಿ ಅಭಿವೃದ್ಧಿ ಪಡಿಸುವುದರ ಮೂಲಕ ಅದನ್ನು ನಲಿಕಲಿ ಎಂದು ಕರೆಯಿತು. ಮಕ್ಕಳನ್ನು ಗುಂಪುಗಳನ್ನಾಗಿ ರಚಿಸಿ ಒಂದು ಸಾಮಾರ್ಥ್ಯಗಳಿಸಿದ ನಂತರ ಮುಂದಿನ ಸಾಮಾರ್ಥ್ಯಗಳಿಸಲು ಚಲಿಸುತ್ತದೆ. ಇಲ್ಲಿ ಮಕ್ಕಳು ತಮ್ಮದೇ ಆದ ವೇಗದಲ್ಲಿ ಕಲಿಯುವ ಅವಕಾಶವಿರುವುದರಿಂದ ಒಂದು ಸಾಮಾರ್ಥ್ಯದಿಂದ ಇನ್ನೊಂದು ಸಾಮಾರ್ಥ್ಯಕ್ಕೆ ಚಲಿಸುವುದು ಇಡೀ ಗುಂಪಿನ ಕಲಿಕೆಯನ್ನು ಆಧರಿಸಿರುವುದಿಲ್ಲ. ಈ ಪದ್ಧತಿಯನ್ನು ಪುಸ್ತಕಗಳ ಬಳಕೆ ಇಲ್ಲದಿದ್ದರೂ ಕಲಿಕಾ ಸಾಮಾಗ್ರಿಗಳಿಂದ ನಿಜವಾದ ಶಿಕ್ಷಣ ದೊರೆಯುತ್ತದೆ ಎಂಬ ನಂಬಿಕೆ. ಇಲ್ಲಿ ಬಳಸುವ ಸಾಧನಗಳೆಂದರೆ, ಸಾಮಾರ್ಥ್ಯದ ಕಾರ್ಡುಗಳು, ಮೌಲ್ಯಮಾಪನದ ಏಣಿಗಳು, ಕಲಿಕಾ ಪ್ರಕ್ರಿಯೆಯ ಹಾಡು, ಕಥೆ, ಶೈಕ್ಷಣಿಕ ಆಟಿಕೆಗಳ ಬಳಕೆ ಇತ್ಯಾದಿ, ೧೯೯೯ರ ಜೂನ್ ನಿಂದಲೇ ಕೆಲವು ತಾಲ್ಲೂಕುಗಳಲ್ಲಿ ಈ ಪದ್ಧತಿಯನ್ನು ಜಾರಿಗೆ ತರಲು ಬಯಸಿ, ಶಿಕ್ಷಕರಿಗೆ ೧೨ ದಿನಗಳ ತರಬೇತಿಯನ್ನು ನೀಡಲಾಯಿತು. ೨೦೦೬–೦೭ರಲ್ಲಿ ೧ ನೇ ತರಗತಿಯಿಂದ ೪ ನೇ ತರಗತಿಯಲ್ಲಿ ಒಟ್ಟು ದಾಖಲಾತಿ ೩೦ಕ್ಕಿಂತ ಕಡಿಮೆ ವಿದ್ಯಾರ್ಥಿಗಳಿರುವ ಸುಮಾರು ೭೦೦೯ ಶಾಲೆಗಳಲ್ಲಿ ಕಲಿನಲಿ ಕಾರ್ಯಕ್ರಮಗಳನ್ನು ಅಳವಡಿಸಲಾಯಿತು. ಈ ಪೈಕಿ ಬೆಂಗಳೂರಿನಲ್ಲಿಯೇ ೧೬೩ ಶಾಲೆಗಳಿವೆ. ಈ ಕಾರ್ಯಕ್ರಮ ಜನಶಾಲಾ ಕಾರ್ಯಕ್ರಮದ ಭಾರತ ಸರ್ಕಾರ ಮತ್ತು ಯೂನಿಸೆಫ್ ಸಹಯೋಗದೊಂದಿಗೆ ನಡೆಯುತ್ತಿದೆ. ಈ ವಿಧಾನದಲ್ಲಿ ಪಠ್ಯಪುಸ್ತಕಗಳಿಲ್ಲ, ಪರೀಕ್ಷೆಗಳಿಲ್ಲ. (ಆದರೆ ದೈನಂದಿನ ಮೌಲ್ಯಮಾಪನ ಇರುತ್ತದೆ) ವಿಧ್ಯಾರ್ಥಿಗಳಿಗೆ ದರ್ಜೆ, ಶ್ರೇಣಿ ನೀಡಿ ಪಾಸು ಮಾಡುವ ವಿಧಾನಗಳಿಲ್ಲ. ಶಿಕ್ಷಕರು ಪಾಠ, ಟಿಪ್ಪಣಿ, ಬರೆಯುವ ಅಗತ್ಯವಿಲ್ಲ. ಆಂಧ್ರದಲ್ಲಿ ಯಶಸ್ವಿಯಾದುದನ್ನು ಕಂಡು ಕರ್ನಾಟಕದ ಮೈಸೂರು ಜಿಲ್ಲೆಯ ಹೆಚ್.ಡಿ.,ಕೋಟೆ ಬ್ಲಾಕ್‌ನಲ್ಲಿ ೧ ರಿಂದ ೩ ನೇ ತರಗತಿಯವರೆಗೆ ಕನಿಷ್ಠ ಕಲಿಕಾ ಮಟ್ಟ ಸಾಮಾರ್ಥ್ಯಗಳನ್ನು ಕಲಿಸುವ ಸೂಕ್ತ ಚಟುವಟಿಕೆಗಳನ್ನು ಸಂಶೋಧನೆ ಮಾಡಿ ಅಳವಡಿಸಿ ಅದ್ಭುತ ಯಶಸ್ಸು ಪಡೆಯಲಾಯಿತು. ನಂತರ ಕರ್ನಾಟಕ ಸರಕಾರ ೧೦ ಬ್ಲಾಕ್‌ಗಳಲ್ಲಿ ಅಂದರೆ ಶಿರಾ, ಮಧುಗಿರಿ, ಪಾವಗಡ, ಕೊಪ್ಪ, ಅರಕಲಗೂಡು, ಹೊಳೆನರಸೀಪುರ, ಹೊನ್ನಾಳಿ, ಹಳಿಯಾಳ, ಚಳ್ಳಕೆರೆ ಮತ್ತು ಹಿರಿಯೂರುಗಳಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿತು. ಇಲ್ಲಿಯೂ ಉತ್ತಮವೆಂದು ಕಂಡು ಬಂದದ್ದರಿಂದ ಈಗ ರಾಜ್ಯದ ಎಲ್ಲಾ ಶಾಲೆಗಳಲ್ಲಿ ಜಾರಿಯಲ್ಲಿದೆ. ಈ ಬೋಧನಾ ವಿಧಾನದಲ್ಲಿ ಸ್ವಂತ ಸಮಯ ಕಲಿಕೆಗೆ ಒತ್ತು ನೀಡಲಾಗಿದೆ. ಇಲ್ಲಿ ಘಟಕವನ್ನು ಅಂದರೆ ಸಾಮಾರ್ಥ್ಯವನ್ನು ಮೈಲಿಗಲ್ಲು ಚಟುವಟಿಕೆಯನ್ನು ಮೆಟ್ಟಿಲು ಎಂದು ಕರೆಯುವರು, ಎಲ್ಲ ಮೈಲಿಗಲ್ಲು ಸೇರಿ ಏಣಿ ಎಂದು ಕರೆಯಲಾಗುವುದು. ಈ ವಿಧಾನದಲ್ಲಿ ತಟ್ಟೆಗಳು ಎಂಬ ಹೊಸ ಕಾನ್ಸೆಪ್ಟ್ ಅಡಕವಾಗಿದೆ. ಅಂದರೆ ಪ್ರತಿ ವಿಧ್ಯಾರ್ಥಿಯು ಕಲಿಕೆಯ ಮಟ್ಟ ಹಾಗೂ ಕಲಿಕೆಯ ವೇಗವನ್ನು ಆಧರಿಸಿ ೫ ಬಗೆಯ ಗುಂಪುಗಳಾಗಿ ವಿಂಗಡಿಸಲಾಗುತ್ತದೆ. ಒಟ್ಟು ೧ ರಿಂದ ೫ನೇ ಘಟ್ಟದವರೆಗೆ ವಿದ್ಯಾರ್ಥಿ ಮುಂದುವರೆಯಬೇಕಾಗುತ್ತದೆ. ಜೊತೆಗೆ ಗುಂಪಿನಲ್ಲಿ ಕಲಿಯಬೇಕಾಗುತ್ತದೆ. ಇಲ್ಲಿ ಪುಸ್ತಕಗಳಿಲ್ಲದಿದ್ದರೂ ಸಾಮರ್ಥ್ಯಾಧಾರಿತ ಕಾರ್ಡ್ ಬಳಸುತ್ತಾರೆ. ೧ ನೇ ತರಗತಿಗೆ ೧೨೦೦ ಕಾರ್ಡ್‌ಗಳ ಬಳಕೆ ಇದೆ. ನಿರಂತರ ಮೌಲ್ಯಮಾಪನ ಕಾರ್ಯ ನಡೆಯುತ್ತಿದೆ. ಮೌಲ್ಯಮಾಪನ ಮಾಡಲು ಚೈಲ್ಡ್ ಪೋರ್ಟ್ ಪೋಲಿಯೋ ಹಾಳೆಗಳನ್ನು

ಬಳಸಲಾಗುತ್ತಿದೆ. ಒಟ್ಟಿನಲ್ಲಿ ನಲಿಕಲಿ ಬೋಧನಾ ವಿಧಾನ ಶಿಕ್ಷಕರ ಮತ್ತು ಪೋಷಕರ ಪ್ರೀತಿಗೆ ಪಾತ್ರವಾಗಿದೆ.

ಚೈತನ್ಯ ಕಾರ್ಯಕ್ರಮ ಡಿ.ಎಸ್.ಇ.ಆರ್.ಟಿ ನಿರ್ದೇಶಕರು ವಿನ್ಯಾಸಗೊಳಿಸಿದ ಚಟುವಟಿಕೆ ಆಧಾರಿತ ತರಬೇತಿ ಕಾರ್ಯಕ್ರಮವೇ ಚೈತನ್ಯ, ನಲಿಕಲಿ ಯೋಜನೆಯ ಸಿಬ್ಬಂದಿಗೆ ೩ ದಿನಗಳ ಕಾಲ ಕಾರ್ಯಾಗಾರ ನಡೆಸಿ ಭಾಷೆ, ಗಣಿತ, ಪರಿಸರ ಅಧ್ಯಯನ ವಿಷಯಗಳ ಬೋಧನೆ ಮತ್ತು ಕಲಿಕೆಯಲ್ಲಿ ರಂಗಕಲೆ ಬಳಕೆಯ ಬಗೆಗೆ ತರಬೇತಿ ನೀಡಲಾಯಿತು. ಇದೊಂದು ಪಠ್ಯಪುಸ್ತಕ ಹೊಂದಿರುವ ಆದರೆ ಮಗುವಿಗೆ ಮಹತ್ವ ನೀಡುವ ವಿಧಾನವಾಗಿದೆ,

ಮುಖ್ಯ ಶಿಕ್ಷಕರಿಗೆ ತರಬೇತಿ ತರಬೇತಿಯ ಪ್ರಾಮುಖ್ಯತೆಯನ್ನು ಅರಿತ ಬೆಂಗಳೂರಿನಲ್ಲಿರುವ ಜಾಗೃತಿ ಎಂಬ ಸರ್ಕಾರೇತರ ಸಂಸ್ಥೆ ತರಬೇತಿ ಸಂಚಿಕೆಯನ್ನು ತಯಾರಿಸಿದೆ. ಇದರಂತೆ ತರಬೇತಿಗಳು ನಡೆಸುತ್ತಿವೆ.

ಬೋಧನೆ – ಕಲಿಕೆ ಸಾಮಾಗ್ರಿ (ಟಿ.ಎಂ.ಎಲ್) ಗಳಿಗಾಗಿ ಶಿಕ್ಷಕರಿಗೆ ಅನುದಾನ ಈಗ ಶಿಕ್ಷಕರಿಗೆ ಬೋಧನೆ – ಕಲಿಕೆ ಸಾಮಾಗ್ರಿ ತಯಾರಿಸಲು ಪ್ರತಿಯೊಬ್ಬ ಶಿಕ್ಷಕರಿಗೆ ೫೦೦ ರೂಗಳನ್ನು ನೀಡಲಾಗುತ್ತಿದೆ.

ಅಂತರಾಜ್ಯ ಶಿಕ್ಷಕರ ಪರಸ್ಪರ ಬದಲಾವಣೆ ಕಾರ್ಯಕ್ರಮ ಸೆಪ್ಟಂಬರ್ ೧೯೯೯ ರಲ್ಲಿ ಮೊಟ್ಟ ಮೊದಲಿಗೆ ಅಂತರಾಜ್ಯ ಶಿಕ್ಷಕರ ಪರಸ್ಪರ ಬದಲಾವಣೆ ಕಾರ್ಯಕ್ರಮ ನಡೆಯಿತು. ರಾಜಸ್ಥಾನ–ಹರಿಯಾಣ–ಮಹಾರಾಷ್ಟ್ರ–ಮಧ್ಯ ಪ್ರದೇಶ, ಒರಿಸ್ಸಾ – ಬಿಹಾರ, ಆಂದ್ರಪ್ರದೇಶ ಅತಿಥಿ ಶಿಕ್ಷಕರು ಕರ್ನಾಟಕ ರಾಜ್ಯಕ್ಕೆ ಬಂದರು. ಬಹು ವರ್ಗ ಶಾಲೆಗಳಿಗೆ ಭೇಟಿ ಆಯೋಜಿಸಲಾಗಿತ್ತು.

ತರಗತಿ ಪ್ರಕ್ರಿಯೆಗಳ ಬಾಹ್ಯ ಮೌಲ್ಯಮಾಪನ ಬೋಧ ಶಿಕ್ಷಾ ಸಮಿತಿಎಂಬ ಸರ್ಕಾರೇತರ ಸಂಸ್ಥೆ ದಾವಣಗೆರೆಯ ಹಿರಿಯೂರು ಬ್ಲಾಕ್‌ನಲ್ಲಿರುವ ಆ ಶಾಲೆಗಳಿಗೆ ಭೇಟಿ ನೀಡಿ ಉತ್ತಮ ಕಲಿಕೆ ಎಂದು ವರದಿ ನೀಡಿತ್ತು. **ನವೀನತೆ** ನಮ್ಮ ಪ್ರಾಥಮಿಕ ಶಾಲೆಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ ಗಿಳಿಪಾಠ ಮತ್ತು ಶಿಕ್ಷಕರ ಅತಿಯಾದ ಮಾತು ಇವು ಮಕ್ಕಳ ಬೌದ್ಧಿಕ ಅಗತ್ಯಕ್ಕೆ ವಿರುದ್ಧವಾದವೆಂದು ತಿಳಿದು, ಚಟುವಟಿಕೆ ಆಧಾರಿತವಾದ ಪಠ್ಯಪುಸ್ತಕ ಹೊರತಾದ ವಿದ್ಯಾರ್ಥಿ ಸಮುದಾಯದ ಸಬಲೀಕರಣಕ್ಕಾಗಿ ಕೆಲವು ತೀವ್ರತರ ಚಟುವಟಿಕೆಗಳನ್ನು ಹಮ್ಮಿಕೊಂಡಿದೆ. ಉದಾಹರಣೆಗೆ ಶಾಲಾ ಪಾರ್ಲಿಮೆಂಟ್, ಸ್ವಯಂ ಹಾಜರಿ ಇತ್ಯಾದಿ

ಶಾಲಾ ಪಾರ್ಲಿಮೆಂಟ್ ೧೯೯೮ ರಲ್ಲಿ ಶಾಲಾ ಪಾರ್ಲಿಮೆಂಟ್‌ನ ಆಲೋಚನೆ ಹುಟ್ಟಿತು. ವಿದ್ಯಾರ್ಥಿ ಸರಕಾರ ಇರುತ್ತದೆ. ಚುನಾಯಿತನಾದ ವಿದ್ಯಾರ್ಥಿ ಮುಖ್ಯಮಂತ್ರಿಯಾಗಿರುತ್ತಾನೆ, ಮಂತ್ರಿ ಮಂಡಲದಲ್ಲಿ ೧೦ ಮಂದಿ ಇದ್ದು ೩ ಹೆಣ್ಣು ಮಕ್ಕಳಿರುತ್ತಾರೆ. ಅಲ್ಲದೆ ೩ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದವರಿರುತ್ತಾರೆ.

ಚಿಣ್ಣರ ಅಂಗಳ ೬ ರಿಂದ ೧೪ ವರ್ಷದ ದಾಖಲಾಗದೆ ಉಳಿದ ಮಕ್ಕಳನ್ನು ಶಾಲೆಗೆ ದಾಖಲಾಗುವಂತೆ ಮಾಡುವುದೇ ಇದರ ಉದ್ದೇಶ. ಇದು ಬೇಸಿಗೆ ರಜೆಯಲ್ಲಿ ನಡೆಯುತ್ತದೆ. ಈ ಕಾರ್ಯಕ್ರಮ ೬೦ ದಿನಗಳದ್ದಾಗಿರುತ್ತದೆ. ನಂತರ ಇದನ್ನು ಎಲ್ಲ ಮಕ್ಕಳು ಶಾಲೆಗೆ ದಾಖಲಾಗುವವರೆಗೆ ವಿಸ್ತರಿಸಲಾಯಿತು. ಆಯ್ಕೆ ಮಾಡಲ್ಪಟ್ಟ ೧೦ ತಾಲ್ಲೂಕುಗಳಲ್ಲಿ ೩೨೬೫ ಮಕ್ಕಳನ್ನು ಈ ಕಾರ್ಯಕ್ರಮಕ್ಕೆ ಒಳಪಡಿಸುವ ಗುರಿ ಇದ್ದು, ಅವರಲ್ಲಿ ೩೧೦೦ ಮಕ್ಕಳನ್ನು ಶಾಲೆಗೆ ದಾಖಲು ಮಾಡಲಾಯಿತು. ಇವರಲ್ಲಿ ೨೬೩೩ ಮಕ್ಕಳನ್ನು ಔಪಚಾರಿಕ ಶಾಲೆಗಳಿಗೆ ಸೇರಿಸಿ ಮುಖ್ಯವಾಹಿನಿಗೆ ತರಲಾಯಿತು. ಇತ್ತೀಚೆಗೆ ಇದರ ವ್ಯಾಪ್ತಿ ವಿಸ್ತಾರಗೊಂಡಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಮಕ್ಕಳಿಗೆ ಮಧ್ಯಾಹ್ನದ ಉಪಾಹಾರ ಕಲಿಕಾ ಸಾಮಾಗ್ರಿ ಕೊಳ್ಳುವ ಹಣದ ಸಹಾಯ ಸರಕಾರ ಮಾಡುತ್ತದೆ.

ಬಾ ಮರಳಿ ಶಾಲೆಗೆ ೨೦೦೨ರಲ್ಲಿ ಶೈಕ್ಷಣಿಕ ವರ್ಷದ ಮದ್ಯಾಹ್ನದಲ್ಲಿಶಾಲೆ ಬಿಟ್ಟ ದೀರ್ಘಕಾಲ ಗೈರು ಹಾಜರಾದ ಮಕ್ಕಳನ್ನು ಶಾಲೆಗೆ ಬರುವಂತೆ ಮಾಡಲು 'ಬಾ ಮರಳಿ ಶಾಲೆಗೆ' ಎಂಬ ಕಾರ್ಯಕ್ರಮವನ್ನು ಪ್ರಾರಂಭಿಸಲಾಯಿತು. ಪ್ರತಿ ಸೋಮುವಾರ ಎಸ್.ಡಿ.ಎಂ.ಸಿ ಸದಸ್ಯರು, ಶಿಕ್ಷಕರು, ಶಾಲೆ ಬಿಟ್ಟ ಮಕ್ಕಳ ಮನೆಗೆ ಹೋಗಿ ಪಾಲಕರ ಮನ ಒಲಿಸಿ ಮಕ್ಕಳು ಶಾಲೆಗೆ ಬರುವಂತೆ ಮಾಡುತ್ತಾರೆ.

ಕೂಲಿಯಿಂದ ಶಾಲೆಗೆ ಹೆಸರೆ ಸೂಚಿಸುವಂತೆ ಬಾಲ ಕಾರ್ಮಿಕ ಪದ್ಧತಿಯ ವಿರುದ್ಧ ಈ ಕಾರ್ಯಕ್ರಮವಿದೆ. ಏಕೆಂದರೆ ಸಂವಿಧಾನದ ೨೪ನೇ ವಿಧಿ ಬಾಲಕಾರ್ಮಿಕತೆಯನ್ನು ನಿಷೇದಿಸಿದೆ. ಸಾರ್ವಜನಿಕ ಶಿಕ್ಷಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಹಯೋಗದೊಂದಿಗೆ ಈ ಕಾರ್ಯಕ್ರಮ ನಡೆಯುತ್ತಿದೆ.

ವಿದ್ಯಾಚೇತನ ಚಿಣ್ಣರ ಅಂಗಳ ಕಾರ್ಯಕ್ರಮವಾದ ನಂತರವೂ ಶಾಲೆಗೆ ದಾಖಲಾಗದವರು, ಶಾಲೆ ಸೇರಿ ಬಿಟ್ಟವರಿಗಾಗಿ ವಿದ್ಯಾಚೇತನ ಕಾರ್ಯಕ್ರಮವಿದೆ. ಚಿಣ್ಣರ ಅಂಗಳ ಕಾರ್ಯಕ್ರಮಕ್ಕೆ ತಯಾರಿಸಿದ ಪುಸ್ತಕಗಳನ್ನೆ ಬಳಸಲಾಗುತ್ತದೆ. ದುಡಿಯುವ ಮಕ್ಕಳು, ತಂಗಿ, ತಮ್ಮಂದಿರನ್ನು ನೋಡಿಕೊಳ್ಳಬೇಕಾಗಿರುವ ಹೆಣ್ಣು ಮಕ್ಕಳು, ಅವಕಾಶ ವಂಚಿತರು ಮುಂತಾದವರು ಈ ಕಾರ್ಯಕ್ರಮದಡಿ ಬರುತ್ತಾರೆ.

ಸಮನ್ವಯ ಶಿಕ್ಷಣ ಊನಶಕ್ತಿ ಮಕ್ಕಳನ್ನು ಸಾಮಾನ್ಯ ಶಾಲೆಗೆ ದಾಖಲು ಮಾಡಿ, ಶೈಕ್ಷಣಿಕ ನೆರವು ಒದಗಿಸುವ ಉದ್ದೇಶ ಹೊಂದಿ ೨೦೦೦-೨೦೦೧ರಲ್ಲಿ ಈ ಕಾರ್ಯಕ್ರಮ ಜಾರಿಗೆ ಬಂದಿತು. ಊನಶಕ್ತರಿಗೆ ಶಿಕ್ಷಣ ನೀಡುವ ಬಗೆ ಹೇಗೆ ಎಂಬುದರ ಕುರಿತಾಗಿ ಸೇವಾ ಇನ್ ಆಕ್ಷನ್ ಎಂಬ ಸರ್ಕಾರೇತರ ಸಂಸ್ಥೆ ಗುಚ್ಚ ಸಂಪನ್ಮೂಲ ವ್ಯಕ್ತಿಗಳಿಗೆ ತರಬೇತಿ ನೀಡುವ ಕಾರ್ಯ ಪ್ರಾರಂಭಿಸಿತು. ಹೀಗೆ ಹಂತ ಹಂತವಾಗಿ ೭ ವಾರಗಳ ವರೆಗೆ ತರಬೇತಿ ನೀಡಿತು. ಸಮುದಾಯದಲ್ಲಿ ಸಮನ್ವಯ ಶಿಕ್ಷಣದ ಬಗ್ಗೆ ಅರಿವು ಉಂಟುಮಾಡಲು ಗ್ರಾಮದ ಬೀದಿಗಳಲ್ಲಿ ಬೀದಿ ನಾಟಕಗಳನ್ನು ಪ್ರದರ್ಶಿಸಿದರು.

***

ಅಧ್ಯಾಯ ಮೂರು

ಅಧ್ಯಯನ ಕ್ಷೇತ್ರದಲ್ಲಿ ಶೈಕ್ಷಣಿಕ ಪರಿಸರದ ಸ್ಥಿತಿ-ಗತಿ

೩.೧ ಜಿಲ್ಲೆಗಳ ಐತಿಹಾಸಿಕ ಹಿನ್ನಲೆ, ಭೌಗೋಳಿಕ ಅಂಶಗಳು,ಜನಸಂಖ್ಯೆ

೩.೨ ರಾಜ್ಯ ಸಾಕ್ಷರತೆಯ ಪ್ರತಿಯಾಗಿ ಅಧ್ಯಯನ ಕ್ಷೇತ್ರಗಳಲ್ಲಿನ ಸಾಕ್ಷರತೆ

೩.೩ ಅಧ್ಯಯನ ಕ್ಷೇತ್ರದಲ್ಲಿ ಸಾಕ್ಷರತೆ

೩.೪ ಅಧ್ಯಯನ ಕ್ಷೇತ್ರದಲ್ಲಿ ಜಿಲ್ಲಾವಾರು ಶಾಲೆ ಬಿಟ್ಟ ಮಕ್ಕಳು

ಅಧ್ಯಾಯ ಮೂರರಲ್ಲಿ ಸಾಕ್ಷರತೆ, ಶಾಲಾ-ದಾಖಲಾತಿ, ಶಾಲಾ ದಾಖಲಾತಿಯ ಸಾಧನೆ, ಶಾಲೆ ಬಿಟ್ಟ ಮಕ್ಕಳು, ಇತ್ಯಾದಿ ಅಂಶಗಳನ್ನು ರಾಜ್ಯ, ಜಿಲ್ಲೆ ಮತ್ತು ಅಧ್ಯಯನಕ್ಕೆ ಒಳಪಡಿಸಿದ ಆಯಾ ತಾಲ್ಲೂಕುಗಳ ಶೈಕ್ಷಣಿಕ ಸ್ಥಿತಿ-ಗತಿಯನ್ನು ಗುರುತಿಸಲು ಪ್ರಯತ್ನ ಮಾಡಲಾಗಿದೆ.

ಪ್ರಸ್ತುತ ಅಧ್ಯಯನವು ಬಳ್ಳಾರಿ, ರಾಯಚೂರು, ಬಿಜಾಪುರ ಹಾಗೂ ಬಾಗಲಕೋಟೆ ಜಿಲ್ಲೆಗಳ ೭ ತಾಲ್ಲೂಕುಗಳ ಅಧ್ಯಯನ ಕ್ಷೇತ್ರವನ್ನಾಗಿರಿಸಿಕೊಂಡಿದೆ. ಈ ಪ್ರದೇಶಗಳ ಒಂದು ಸ್ಥೂಲ ಪರಿಚಯ ಮಾಡುವ ಪ್ರಯತ್ನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ. ಪ್ರಸ್ತುತ ಅಧ್ಯಯನ ಕ್ಷೇತ್ರದ ಬಹುಮುಖ್ಯ ಉದ್ದೇಶವೆಂದರೆ ಶೈಕ್ಷಣಿಕ ಅಭಿವೃದ್ಧಿಯ ಸ್ವರೂಪವನ್ನು ಗುರುತಿಸುವ ಸಲುವಾಗಿ ಈ ಪ್ರದೇಶದ ಭೌಗೋಳಿಕ, ಸಾಂಸ್ಕೃತಿಕ ಹಾಗೂ ಸಾಮಾಜಿಕ ಕ್ಷೇತ್ರದ ಪರಿಚಯ ಅವಶ್ಯ. ಹೀಗಾಗಿ ಅಧ್ಯಯನ ಜಿಲ್ಲೆಗಳ ಐತಿಹಾಸಿಕ ಹಿನ್ನಲೆ, ಭೌಗೋಳಿಕ ಅಂಶಗಳು, ಜನಸಂಖ್ಯೆ, ಶಿಕ್ಷಣ ಇತ್ಯಾದಿ ವಿಷಯಗಳ ಸೂಕ್ಷ್ಮ ಚಿತ್ರಣವನ್ನು ಇಲ್ಲಿ ನೀಡಲಾಗಿದೆ.

೩.೧ ಜಿಲ್ಲೆಗಳ ಐತಿಹಾಸಿಕ ಹಿನ್ನಲೆ, ಭೌಗೋಳಿಕ ಅಂಶಗಳು,ಜನಸಂಖ್ಯೆ

೩.೧.೧ ಬಿಜಾಪುರ ಜಿಲ್ಲೆಯ ಕಿರು ಪರಿಚಯ



ಇತಿಹಾಸ, ಸಾಹಿತ್ಯ, ಕಲೆ ಹಾಗೂ ಸಂಸ್ಕೃತಿಗಳನ್ನು ಅವಲೋಕಿಸಿದಾಗ ವಿಜಾಪುರ ಜಿಲ್ಲೆಯು ಜಗತ್ತಿನ ನಕಾಸೆಯಲ್ಲಿ ಸ್ಥಾನಗಳಿಸಿದ್ದು ತಿಳಿದು ಬರುತ್ತವೆ. ಇಲ್ಲಿ ಜಗತ್ಪ್ರಸಿದ್ಧವಾದ ಗೋಲಗುಮ್ಮಟ, ಹಿಂದೂ ಆರೇಬಿಕ್ ಶೈಲಿಯ ವಾಸ್ತುಶಿಲ್ಪದ ಕಟ್ಟಡಗಳಿವೆ. ಭಾರತದ ಮೊದಲ ಕ್ರಾಂತಿಕಾರಕ ವಿಚಾರವಾದಿಯೆಂದು ಗುರುತಿಸಲ್ಪಟ್ಟ ಬಸವೇಶ್ವರರ ಜನ್ಮ ಭೂಮಿ ಜಿಲ್ಲೆಯಲ್ಲಿದೆ. ವಿಜಾಪುರ ಜಿಲ್ಲೆಯನ್ನು ಚಾಲುಕ್ಯರು, ರಾಷ್ಟ್ರಕೂಟರು, ಆದಿಲ್‌ಶಾಹಿ ಮುಂತಾದ ರಾಜ ಮನೆತನಗಳು ಆಳಿವೆ.

ವಿಜಾಪುರ ಜಿಲ್ಲೆಯು ಕೃಷ್ಣಾ ಹಾಗೂ ಭೀಮಾ ನದಿಗಳ ನಡುವೆ ನೆಲೆಗೊಂಡಿದೆ. ಮಧ್ಯದಲ್ಲಿ ಡೋಣಿ ನದಿ ಹರಿದಿದೆ ಇಲ್ಲಿನ ಫಲವತ್ತಾದ ಕಪ್ಪು ಮಣ್ಣಿನಲ್ಲಿ ಜೋಳ, ಗೋಧಿ, ಕುಸುಬಿ, ಸೂರ್ಯಕಾಂತಿ ಬೆಳೆಗಳನ್ನು ಬೆಳೆಯಲಾಗುತ್ತದೆ. ಮರಡಿ ನೆಲದಲ್ಲಿ ಬೆಳೆಯುವ ಮಧುರವಾದ ದ್ರಾಕ್ಷಿ, ದಾಳಿಂಬೆ ಹಾಗೂ ಬಾರೆಹಣ್ಣು ಪರದೇಶಗಳಿಗೆ ರಫ್ತಾಗುತ್ತವೆ. ೧೧-೧೨ನೇ ಶತಮಾನದಲ್ಲಿ ಇದು ವಿಜಾಪುರವೆಂದು ಉಲ್ಲೇಖಿತವಾಗಿದೆ. ವಿಜಾಪುರವು ಕಲ್ಯಾಣಿ ಚಾಲುಕ್ಯರ ಮತ್ತು ಸೇವಣರ ಪ್ರಾದೇಶಿಕ ರಾಜಧಾನಿಯಾಗಿತ್ತು. ಮುಂದೆ ಆದಿಲ್ ಶಾಹಿ ಸುಲ್ತಾನರ ರಾಜಧಾನಿಯಾಯ್ತು. ಆಗ ಅದನ್ನು ಬಿಜ್ಜಪುರ, ವಿದ್ಯಾಪುರ, ಬದ್ಯಾಪುರ, ಮಹಮ್ಮದೀಪುರ ವಿವಿಧ ಹೆಸರುಗಳಿಂದ ಕರೆಯಲಾಯ್ತು. ಇಷ್ಟಾದರೂ ಪ್ರಸ್ತುತ ಅದು ವಿಜಾಪುರವೆಂದು ಹೆಸರು ಪಡೆದಿದೆ.

ವಿಜಾಪುರ ಜಿಲ್ಲೆಯಲ್ಲಿ ಬಸವನಬಾಗೇವಾಡಿ (೧೯೭೪ ಚ.ಕಿ.ಮೀ, ವಿಸ್ತೀರ್ಣ) ಸಿಂದಗಿ (೨೧೭೬ ಚ.ಕಿ.ಮೀ ವಿಸ್ತೀರ್ಣ) ಇಂಡಿ (೨೨೨೫ ಚ.ಕಿ.ಮೀ ವಿಸ್ತೀರ್ಣ) ವಿಜಾಪುರ (೨೬೫೯



ಚ.ಕಿ.ಮೀ ವಿಸ್ತೀರ್ಣ) ಮುದ್ದೇಬಿಹಾಳ (೧೫೦೨ ಚ.ಕಿ.ಮೀ ವಿಸ್ತೀರ್ಣ) ಹೀಗೆ ಒಟ್ಟು ಐದು ತಾಲ್ಲೂಕುಗಳಿವೆ. ಮತ್ತು ಅವುಗಳ ಒಟ್ಟು ವಿಸ್ತೀರ್ಣ ೧೦೫೩೬ ಚ.ಕಿ.ಮೀ ಇರುತ್ತದೆ. ಜಿಲ್ಲೆಯಲ್ಲಿ ಒಟ್ಟು ೬೪೮ ಹಳ್ಳಿಗಳಿವೆ.

ವಿಜಾಪುರ ಜಿಲ್ಲೆಯನ್ನು ಭೌಗೋಳಿಕವಾಗಿ ಭೀಮಾ ಕಣಿವೆ, ಮಧ್ಯದ ಪ್ರಸ್ಥಭೂಮಿ, ಡೋಣಿ ಕಣಿವೆ, ವಿಜಾಪುರ ನಗರ ಪ್ರದೇಶ ಮತ್ತು ಕೃಷ್ಣಾ ನದಿ ಪ್ರದೇಶವೆಂದು ವಿಂಗಡಿಸಬಹುದು. ಕೃಷ್ಣಾ ನದಿಗೆ ಆಲಮಟ್ಟಿಯಲ್ಲಿ ನಿರ್ಮಿಸಿದ ಅಣೆಕಟ್ಟೆಯಿಂದ ವಿಜಾಪುರ, ರಾಯಚೂರ ಮತ್ತು ಕಲಬುರ್ಗಿ ಜಿಲ್ಲೆಯ ಲಕ್ಷಾಂತರ ಎಕರೆ ಭೂಮಿಗೆ ನೀರಾವರಿ ಸೌಲಭ್ಯವುಂಟಾಗಿದೆ. ಜಿಲ್ಲೆಯ ಪ್ರಸ್ಥಭೂಮಿಯು ಜ್ವಾಲಮುಖಿಯ ಲಾವರಸದಿಂದ ಉಂಟಾಗಿದೆ. ಇಲ್ಲಿ ಪದರ ಕಲ್ಲುಗಳು ದೊರೆಯುತ್ತವೆ. ಅವೆಲ್ಲವೂ ಸುಣ್ಣದಂಶದಿಂದ ಕೂಡಿವೆ. ತಾಳಿಕೋಟೆಯ ಸುತ್ತಲಿನ ಪ್ರದೇಶದಲ್ಲಿ ೨೯೬ ದಶಲಕ್ಷ ಟನ್ನುಗಳಷ್ಟು ಸಿಮೆಂಟು ದರ್ಜೆಯ ಸುಣ್ಣದ ಪದರು ಶಿಲೆಗಳ ಗಣಿಗಾರಿಕೆ ಇದೆ.

೩.೧.೨ ಬಾಗಲಕೋಟೆ ಇತಿಹಾಸ

ಹಿಂದೆ ಶಾಸನಗಳಲ್ಲಿ ಬಾಗಡೆ ದೇಶ ಅಥವಾ ಬಾಗಡಗೆ ನಾಡು ಎಂದು ಕರೆಸಿಕೊಂಡಿದ್ದ ಇಂದಿನ ಬಾಗಲಕೋಟೆ ಜಿಲ್ಲೆಯು ಹಲವಾರು ವೈಶಿಷ್ಟತೆಗಳ ಆಗರವಾಗಿದೆ. ಬಾದಾಮಿ ಚಾಲುಕ್ಯರ ರಾಜ ಮನೆತನದ ತವರು ಈ ಜಿಲ್ಲೆ ಭಾರತೀಯ ವಾಸ್ತುಶಿಲ್ಪದ ತೊಟ್ಟಿಲು ಎಂಬ ಹೆಗ್ಗಳಿಕೆಯ ಐಹೊಳೆ, ವಿಶ್ವ ಪರಂಪರೆ ಯೋಜನೆಗೆ ಒಳಪಟ್ಟಿರುವ ಪಟ್ಟದಕಲ್ಲು, ಸುಂದರ ಗುಹಾಲಯಗಳಿರುವ ಬಾದಾಮಿ ಮೊದಲಾದ ತಾಣಗಳು ಬಾಗಲಕೋಟೆ ಜಿಲ್ಲೆಯನ್ನು ದೇಶ ವಿದೇಶಗಳಲ್ಲೂ ಪರಿಚಯಿಸಿವೆ. ಮಹಾಕೂಟ, ಬನಶಂಕರಿ, ಶಿವಯೋಗ ಮಂದಿರ ಹಾಗೂ ಕೂಡಲ ಸಂಗಮಗಳಂಥ ಪವಿತ್ರ ಕ್ಷೇತ್ರಗಳು ಈ ಜಿಲ್ಲೆಯ ಕೀರ್ತಿ ಹೆಚ್ಚಿಸಿವೆ.



ಸುಮಾರು ೫ ಲಕ್ಷ ವರ್ಷದ ಹಿಂದಿನ ಆದಿ ಹಳೆ ಶಿಲಾಯುಗದ ಮಾನವನಿಂದ ಹಿಡಿದು ಏಕೀಕೃತ ಕರ್ನಾಟಕ (೧೯೫೬) ರೂಪುಗೊಳ್ಳುವವರೆಗೆ ಜಿಲ್ಲೆಯ ಇತಿಹಾಸ ರೋಚಕವಾಗಿದೆ. ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ಕಳಚೂರಿಗಳು, ಹೊಯ್ಸಳರು, ವಿಜಯನಗರ ಅರಸರು, ಬಹುಮನಿಗಳು, ಆದಿಲ್ ಶಾಹಿಗಳು, ಮರಾಠ ಪೇಶ್ವೆಗಳು, ಹೈದರ್, ಟಿಪ್ಪು ಹಾಗೂ ಬ್ರಿಟೀಷರು ಈ ಜಿಲ್ಲೆಯನ್ನು ಆಳಿದ್ದಾರೆ.

ಭಾರತದ ಸ್ವಾತಂತ್ರ್ಯದ ೫೦ನೇ ಸುವರ್ಣ ವರ್ಷಾಚರಣೆಯ ಸವಿನೆನಪಿಗಾಗಿ ಹೊಸ ಬಾಗಲಕೋಟೆ ಜಿಲ್ಲೆಯು ೧೫-೦೮-೧೯೯೭ರಂದು ಅಸ್ತಿತ್ವಕ್ಕೆ ಬಂದಿದೆ. ಜಿಲ್ಲೆಯ ಒಟ್ಟು ವಿಸ್ತೀರ್ಣ ೬,೫೭೫ ಚದರ ಕಿ.ಮೀ ಬಾಗಲಕೋಟೆ ಜಿಲ್ಲೆಯ ಉತ್ತರಕ್ಕೆ ಬಿಜಾಪುರ, ದಕ್ಷಿಣಕ್ಕೆ ಗದಗ, ಪೂರ್ವಕ್ಕೆ ರಾಯಚೂರು ಹಾಗೂ ಪಶ್ಚಿಮಕ್ಕೆ ಕೊಪ್ಪಳ, ಬೆಳಗಾವಿ ಜಿಲ್ಲೆಗಳು ಹರಡಿವೆ. ೨೦೦೧ರ ಜನಗಣತಿ

ಪ್ರಕಾರ ಜಿಲ್ಲೆ ಜನಸಂಖ್ಯೆ ೧೬,೫೧,೮೯೨. ಇದರಲ್ಲಿ ೮,೩೪,೨೪೭ ಪುರುಷರು ಹಾಗೂ ೮,೧೭,೬೪೫ ಮಹಿಳೆಯರು. ಜಿಲ್ಲೆಯ ಸಾಕ್ಷರತಾ ಪ್ರಮಾಣ ಶೇ ೬೬.೬ ಇದರಲ್ಲಿ ಪುರುಷರ ಸಾಕ್ಷರತಾ ಪ್ರಮಾಣ ಶೇ.೭೬.೧ ಹಾಗೂ ಮಹಿಳೆಯರ ಸಾಕ್ಷರತಾ ಪ್ರಮಾಣ ಶೇ.೫೬.೯ ಜಿಲ್ಲೆಯು ಒಟ್ಟು ೬೨೭ ಹಳ್ಳಿಗಳನ್ನು ಹಾಗೂ ೧೨ ಪಟ್ಟಣಗಳನ್ನು ಹೊಂದಿದೆ.

೩.೧.೩ ರಾಯಚೂರು ಇತಿಹಾಸ

ಕನ್ನಡ ಸಂಸ್ಕೃತಿ ಮತ್ತು ನಾಗರೀಕತೆಯನ್ನು ಹೊತ್ತು ನಿಂತ ಹಲವು ಜಿಲ್ಲೆಗಳಲ್ಲಿ ರಾಯಚೂರು ಜಿಲ್ಲೆಯು ಒಂದು. ಹಿಂದಿನ ಕಾಲದಲ್ಲಿ ಎಡದೊರೆನಾಡು ಮಿರ್ಚ್ಯಾಸಿರ, ಮಧ್ಯಕಾಲದಲ್ಲಿ ರಾಯಚೂರು ದೋ ಆಬ್ ಎಂಬುದಾಗಿ ಗುರುತಿಸಲ್ಪಟ್ಟು ಇತಿಹಾಸ ಪುಟಗಳಲ್ಲಿ ರಾರಾಜಿಸಿದ ಚರಿತ್ರೆ ಈ ಜಿಲ್ಲೆಗಿದೆ.



ಕೃಷ್ಣಾ ಮತ್ತು ತುಂಗಭದ್ರ ನದಿಗಳ ನಡುವೆ ಈ ಜಿಲ್ಲೆ ೫ ತಾಲ್ಲೂಕುಗಳನ್ನು ಹೊಂದಿದೆ. (ರಾಯಚೂರು, ಲಿಂಗಸ್ಗೂರು, ಸಿಂಧನೂರು, ಮಾನ್ವಿ, ದೇವದುರ್ಗ) ಈ ಜಿಲ್ಲೆಯ ಜನಜೀವನ ಹಾಗೂ ಚರಿತ್ರೆಯನ್ನು ನಿರೂಪಿಸುವಲ್ಲಿ ಪ್ರಾಕೃತಿಕ ಪರಿಸರವೂ ಪ್ರಮುಖವಾದ ಪಾತ್ರವನ್ನು ವಹಿಸಿದೆ. ಇಲ್ಲಿ ಫಲವತ್ತಾದ ಭೂಮಿ ಮತ್ತು ಖನಿಜ ಸಂಪತ್ತು ರಾಜ ಮಹರಾಜರನ್ನು ತನ್ನಡೆಗೆ ಆಕರ್ಷಿಸಿದೆ. ಇಲ್ಲಿಯ ಬೆಟ್ಟಗುಡ್ಡಗಳಲ್ಲಿ ಕೋಟೆ ಕೊತ್ತಲುಗಳು ನಿರ್ಮಾಣವಾಗಿವೆ. ಕಲಾ ಸಂಪತ್ತಿನಿಂದಾಗಿ ನಯನಮನೋಹರ ದೇವಾಲಯಗಳು ಮೈದಾಳಿವೆ.

ರಾಯಚೂರು ಜಿಲ್ಲೆಯು ಕರ್ನಾಟಕ ಉತ್ತರ ಈಶಾನ್ಯ ಭಾಗದ ಮೈದಾನ ಪ್ರದೇಶದಲ್ಲಿ ವ್ಯಾಪಿಸಿದೆ. ಜಿಲ್ಲೆಯ ವಿಸ್ತೀರ್ಣ ೮೩೮೩ ಚ.ಕಿ.ಮೀ ಗಳಾಗಿದ್ದು ಪ್ರತಿ ಚ.ಕಿ.ಮೀಗೆ ಜನಸಾಂದ್ರತೆ ೧೯೯ ಇರುತ್ತದೆ. ಜಿಲ್ಲೆಯ ೨೦೦೧ರ ಜನಗಣತಿ ಪ್ರಕಾರ ೮೩೦ ಜನವಸತಿ ಇರುವ ಹಾಗೂ ೫೩ ಜನವಸತಿ ಇಲ್ಲದ ಗ್ರಾಮಗಳಿವೆ. ಜಿಲ್ಲೆಯಲ್ಲಿ ೧೬.೭೦ ಲಕ್ಷ ಜನಸಂಖ್ಯೆ ಇದೆ ಇದರಲ್ಲಿ ೮.೪೨ ಸಾವಿರ ಮಹಿಳೆಯರು. ೧೨.೪೯ ಲಕ್ಷ ಗ್ರಾಮೀಣ ಜನ ಸಂಖ್ಯೆ ಮತ್ತು ೪.೨೧ ಲಕ್ಷ ನಗರವಾಸಿಗಳಾಗಿರುತ್ತಾರೆ.

ಭೌಗೋಳಿಕ ಲಕ್ಷಣಗಳು

ಜಿಲ್ಲೆಯು ಭೌಗೋಳಿಕವಾಗಿ ಬಯಲು ಪ್ರದೇಶವಾಗಿದ್ದು ಯಾಮಿನಿ ಶ್ರೇಣಿಗೆ ಸೇರಿದ ಬೆಟ್ಟಗುಡ್ಡಗಳಿವೆ ೨ ಮಹತ್ವದ ನದಿಗಳಾದ ಕೃಷ್ಣಾ ತುಂಗಭದ್ರಗಳಿಂದ ಆವೃತಗೊಂಡಿದೆ. ಹವಾಗುಣ ಬೇಸಿಗೆಯಲ್ಲಿ ರಾಜ್ಯದಲ್ಲಿಯೇ ಅತಿ ಹೆಚ್ಚು ಉಷ್ಣತೆಯನ್ನು ಹೊಂದಿರುತ್ತದೆ. ಮೇ ತಿಂಗಳಿನಲ್ಲಿ ೪೫ ಡಿಗ್ರಿ ಸೆಂ.ಗ್ರೇ ವರೆಗೂ ಉಷ್ಣತೆ ಇರುತ್ತದೆ. ಜಿಲ್ಲೆಯ ವಾಡಿಕೆ ಮಳೆ ೬೨೧ ಮಿ.ಮೀಗಳಾಗಿದೆ.



ನೈಸರ್ಗಿಕ ಸಂಪನ್ಮೂಲಗಳು

ಕೃಷ್ಣಾ, ತುಂಗಭದ್ರ ನದಿಗಳಿಂದ ನೀರಾವರಿ ಮತ್ತು ಕುಡಿಯುವ ನೀರಿನ ಸೌಲಭ್ಯವನ್ನು ಪೂರೈಸುತ್ತಿವೆ. ಜಿಲ್ಲೆಗೆ ಹೆಮ್ಮೆ ಎನಿಸಿರುವ ಚಿನ್ನ ಉತ್ಪಾದನಾ ಕೇಂದ್ರವು ಲಿಂಗಸ್ಗೂರಿನ ಹಟ್ಟಿ ಗ್ರಾಮದಲ್ಲಿ ಸ್ಥಾಪನೆಗೊಂಡಿದೆ. ಮಸ್ಕಿ ಹಟ್ಟಿ ಮತ್ತು ವಂದಲಿಯ ಸುತ್ತಮುತ್ತಲು ಪ್ರದೇಶದಲ್ಲಿ ಪುರಾತನ ಚಿನ್ನದ ಗಣಿಗಳಿದ್ದವೆಂದು ತಿಳಿದುಬರುತ್ತದೆ. ಮಾನ್ವಿ ತಾಲ್ಲೂಕಿನ ವಟಗಲ್ಲಿನಲ್ಲಿ ಇತ್ತೀಚಿಗೆ ನಡೆದ ಆದಿ ಮಾನವ ಸ್ಥಳದ ಉತ್ಖನನದಲ್ಲಿ ತಾಮ್ರದ ವಸ್ತುಗಳು ಸಿಕ್ಕಿರುವುದು ತಾಮ್ರದ ಗಣಿಗಾರಿಕೆ ಈ ಜಿಲ್ಲೆಯಲ್ಲಿ ಚಿನ್ನದ ಗಣಿಗಾರಿಕೆಯಷ್ಟೇ ಪುರಾತನದ್ದು. ಮಾನ್ವಿ ತಾಲ್ಲೂಕಿನ ಕಲ್ಲೂರಿನಲ್ಲಿ ತಾಮ್ರದ ನಿಕ್ಷೇಪವನ್ನು ಸಂಶೋಧಿಸಲಾಗಿದೆ.

೩.೧.೪ ಬಳ್ಳಾರಿ ಜಿಲ್ಲೆಯ ಇತಿಹಾಸ



ಕರ್ನಾಟಕದ ಎಂಟನೆಯ ದೊಡ್ಡ ಜಿಲ್ಲೆ ಬಳ್ಳಾರಿ. ಬಳ್ಳಾರಿ, ಹೊಸಪೇಟೆ, ಕೂಡ್ಲಿಗಿ, ಸಂಡೂರು, ಹಗರಿ ಬೊಮ್ಮನಹಳ್ಳಿ, ಹಡಗಲಿ, ಸಿರಗುಪ್ಪ ತಾಲ್ಲೂಕುಗಳನ್ನು ಒಳಗೊಂಡಂತೆ ೮೪೧೯ ಚ.ಕಿಮೀ ವಿಶಾಲ ವ್ಯಾಪ್ತಿಯನ್ನು ಹೊಂದಿದೆ. ಬಳ್ಳದಲ್ಲಿ ಶಿವ ಪ್ರತ್ಯಕ್ಷನಾದ ಸ್ಥಳ ಬಳ್ಳಾರಿ. ಬಳನೆಂಬ ರಾಕ್ಷಸನನ್ನು ಇಂದ್ರ ಕೊಂದ ಸ್ಥಳವಾದ್ದರಿಂದ ಬಳಹರಿಯು ಬಳ್ಳಾರಿಯಾಗಿದೆಯೆಂದು ಬಳ್ಳಾರಿಯ ಪ್ರಾಚೀನತೆ ಯುಗದವರೆಗೆ ಇಲ್ಲಿ ನೆಲೆಯಾಗಿದ್ದಿತೆಂದು ಹಳೆ ಶಿಲಾ ಯುಗದಿಂದ ಕಬ್ಬಿಣದ ಯುಗದವರಗೆ ಇಲ್ಲಿ ಜನವಿದ್ದಿತೆಂದು ಪ್ರಾಗೈತಿಹಾಸಿಕ ಸಂಶೋಧನೆಗಳಿಂದ ತಿಳಿದುಬರುತ್ತದೆ.

ತೆಕ್ಕಲಕೋಟೆಯ ನಿಟ್ಟೂರಿನಲ್ಲಿ ದೊರೆತ ಎರಡು ಶಾಸನಗಳಿಂದ ಈ ಪ್ರಾಂತ್ಯ ಮೌರ್ಯರ ಆಳ್ವಿಕೆಗೆ ಒಳಪಟ್ಟಿದ್ದು ನಂತರ ಶಾತವಾಹನ, ಬನವಾಸಿಯ ಕದಂಬ, ಬಾದಾಮಿ ಚಾಲುಕ್ಯ, ರಾಷ್ಟ್ರ ಕೂಟ, ನೊಳಂಬ, ಗಂಗ, ಉಚ್ಚಂಗಿ, ಪಾಂಡ್ಯ, ಕಂಪಲಿಯ ಕಂಪಿಲರಾಯ, ಶಾಹೀ ಸುಲ್ತಾನರ ಪಾಳೇಗಾರರ ಮರಾಠ ಮೊಘಲರ ಆಳ್ವಿಕೆಗೆ ಒಳಪಟ್ಟಿತ್ತು. ಮೈಸೂರಿನ ಹೈದರ್ ಅಲಿ ಮತ್ತು ಟಿಪ್ಪು ಸುಲ್ತಾನ ಈ ಜಿಲ್ಲೆಯನ್ನು ತಮ್ಮ ಅಧೀನಕ್ಕೊಳಪಡಿಸಿಕೊಂಡಿದ್ದರು. ೧೯೭೨ರ ಒಪ್ಪಂದದಂತೆ ಟಿಪ್ಪು ಜಿಲ್ಲೆಯ ಕೆಲಭಾಗಗಳನ್ನು ನಿಜಾಮನಿಗೆ ಬಿಟ್ಟುಕೊಟ್ಟನು. ೧೮೦೦ ಸುಮಾರಿಗೆ ಶ್ರೀರಂಗಪಟ್ಟಣ ಪತನಾನಂತರ ಬಳ್ಳಾರಿ ಜಿಲ್ಲೆ ಬ್ರಿಟೀಷರಿಗೆ ಸೇರಿ ಮದರಾಸು ಪ್ರಾಂತ್ಯದ ಭಾಗವಾಯಿತು. ೧೯೫೬ ರಲ್ಲಿ ಭಾಷವಾರು ಪ್ರಾಂತ್ಯ ರಚನೆಯಾಗಿ ಅಂದಿನ ಬಳ್ಳಾರಿ ಜಿಲ್ಲೆಯ ಅದವಾನಿ, ಆಲೂರು, ರಾಯದುರ್ಗ ತಾಲ್ಲೂಕು ಹೊರತುಪಡಿಸಿ ಉಳಿದ ಭಾಗ ಮೈಸೂರು ಸಂಸ್ಥಾನಕ್ಕೆ ಸೇರಿ ಬಳ್ಳಾರಿ ಜಿಲ್ಲೆಯಾಯಿತು. ೧೯೯೭ರ ಹೊಸ ಜಿಲ್ಲಾ ರಚನೆಯಲ್ಲಿ ಈ ಜಿಲ್ಲೆಯಲ್ಲಿ ಇದ್ದ ಹರಪನಹಳ್ಳಿ ತಾಲೂಕು ಕಳಚಿಕೊಂಡು ದಾವಣೆಗೆರೆ ಜಿಲ್ಲೆಗೆ ಸೇರಿತು.



ಈ ಜಿಲ್ಲೆಯು ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಕ್ಷೇತ್ರಗಳ ಶ್ರೀಮಂತಿಕೆಯಿಂದ ಮೆರೆದಿದೆ. ಕಬ್ಬಿಣ, ಮ್ಯಾಂಗನೀಸ್ ಅದಿರಿನ ನಿಕ್ಷೇಪಗಳಿಂದ, ಸಿದ್ದ ಉಡುಪುಗಳ ತಯಾರಿಕೆಯಿಂದ ದಕ್ಷಿಣ ಭಾರತದಲ್ಲಿಯೇ ಆರ್ಥಿಕ ವಹಿವಾಟಿನಲ್ಲಿ ಮುಂದಿದೆ.

೩.೨ ರಾಜ್ಯ ಸಾಕ್ಷರತೆಯ ಪ್ರತಿಯಾಗಿ ಅಧ್ಯಯನ ಕ್ಷೇತ್ರಗಳಲ್ಲಿನ ಸಾಕ್ಷರತೆ

೨೦೦೧ರ ಜನಗಣತಿ ಪ್ರಕಾರ ಕರ್ನಾಟಕದ ಒಟ್ಟು ಸಾಕ್ಷರತೆಯ ಪ್ರಮಾಣ ಶೇಕಡ ೬೭.೦೪ರಷ್ಟಿದೆ. ಇದರಲ್ಲಿ ಪುರುಷ ಸಾಕ್ಷರತೆ ಶೇಕಡ ೭೬.೨೯ರಷ್ಟು ಮತ್ತು ಮಹಿಳಾ ಸಾಕ್ಷರತೆ ಶೇಕಡ ೫೭.೪೫ರಷ್ಟಿದೆ. ಇದು ರಾಷ್ಟ್ರದ ಸರಾಸರಿ ಮಹಿಳಾ ಸಾಕ್ಷರತೆಗಿಂತಲೂ ಕಡಿಮೆ. ಮಹಿಳೆಯರ ಅತ್ಯಧಿಕ ಸಾಕ್ಷರತೆ ಶೇಕಡ ೮೨.೨೪ ರಷ್ಟಿದ್ದರೆ, ಪುರುಷರ ಅತ್ಯಧಿಕ ಸಾಕ್ಷರತೆಯ ಪ್ರಮಾಣ ಶೇಕಡ ೯೨.೫೪ರಷ್ಟಾಗಿರುತ್ತದೆ. ಒಟ್ಟಿನಲ್ಲಿ ಶೇಕಡ ೧೦.೦೨ರಷ್ಟು ಸಾಕ್ಷರತೆಯ ಲಿಂಗ ತಾರತಮ್ಯ ಕಂಡುಬರುತ್ತದೆ. ಒಟ್ಟಾರೆ ಪುರುಷರ ಸಾಕ್ಷರತೆ ಪ್ರಮಾಣ ಗ್ರಾಮ-ನಗರವಾರು ಮಹಿಳೆಯರ ಸಾಕ್ಷರತೆಗಿಂತ ಅಧಿಕವಾಗಿದೆ (ಸೆನ್ಸಸ್, ೨೦೦೧). ಇಲ್ಲಿ ನಮಗೆ ಎದುರಾಗುವ ಪ್ರಶ್ನೆ ಎಂದರೆ ಜನರ ಸಾಕ್ಷರತಾ ಪ್ರಗತಿಗೆ ಏನು ಪ್ರಯತ್ನಗಳು ನಡೆದಿಲ್ಲವೆ? ಎನ್ನುವಷ್ಟರ ಮಟ್ಟಿಗೆ ಕೆಲವು ಪ್ರದೇಶದ ಜನಸಮುದಾಯಗಳ ಶೈಕ್ಷಣಿಕ ಅಭಿವೃದ್ಧಿ ಹಿಂದುಳಿದಿರುವುದು ತಿಳಿಯುತ್ತದೆ. ಇದರ ಅರ್ಥ ಶೈಕ್ಷಣಿಕ ಅಭಿವೃದ್ಧಿಯ ಏನೆಲ್ಲಾ ಪ್ರಯತ್ನಗಳು ನಡೆದಿಲ್ಲ ಎಂದಲ್ಲ. ಅವು ಯಾರನ್ನು ತಲುಪಬೇಕಿತ್ತೋ ಅವರನ್ನು ತಲುಪದಿರುವುದು ನಿಜವಾಗಿಯೂ ಒಂದು ಬಗೆಯ ಸವಾಲಾಗಿದೆ. ಸಾಕ್ಷರತೆ ಮತ್ತು ಶಿಕ್ಷಣದ ಪ್ರಗತಿಯು ಯಾವುದೇ ಸಮಾಜದಲ್ಲಿಯಾದರೂ ಸಾಮಾಜಿಕ ವಾಗಿರುತ್ತದೆಯೇ ಹೊರತು ಜೈವಿಕವಾದುದಲ್ಲ.

ಕರ್ನಾಟಕದಲ್ಲಿರುವ ಮಹಿಳೆಯರ ಕೆಳಮಟ್ಟದ ಸಾಕ್ಷರತೆ ದರವು ಶಿಕ್ಷಣವು ಮಹಿಳೆಯರಿಗೆ ಸಹಜವಾದ ಹಕ್ಕು ಎಂಬುದನ್ನು ಮಾನ್ಯತೆ ಮಾಡಲು ಸಿದ್ಧವಿಲ್ಲದಿರುವುದನ್ನು ಮತ್ತು ಇದು ಲಿಂಗ ಸಂಬಂಧಿ ಪಕ್ಷಪಾತವೆಂದು ಪ್ರತ್ಯಕ್ಷವಾಗಿ ರುಜುವಾತುಪಡಿಸುತ್ತದೆ. ಜಾತಿ, ಅಂತಸ್ತು ಮತ್ತು ಭೌಗೋಳಿಕ ಅಂಶಗಳು ಸಮಾನತೆಯ ಇತರೆ ಮೂಲಗಳಾಗಿದ್ದು, ಇದು ಮಹಿಳಾ ಸಾಕ್ಷರತಾ ಮಟ್ಟ ವನ್ನು ರೂಪುಗೊಳಿಸುತ್ತದೆ. ಇದು ಅಂತರ ಜಿಲ್ಲಾ ಮಹಿಳಾ ಸಾಕ್ಷರತೆಯ ನಿರ್ವಹಣೆಯನ್ನು ವಿಶ್ಲೇಷಿಸಿದಾಗ ಸ್ಪಷ್ಟವಾಗುತ್ತದೆ. ಬೆಂಗಳೂರು ನಗರದಲ್ಲಿ (ಶೇ ೭೭.೪೮) ಹಾಗೂ ಅತಿ ಕಡಿಮೆ ರಾಯಚೂರಿನಲ್ಲಿ (ಶೇ ೩೫.೯೩), ಗುಲ್ಬರ್ಗಾ (ಶೇ ೩೭.೯೦) ಮತ್ತು ಕೊಪ್ಪಳ (ಶೇ ೩೯.೬೧) ಆಗಿರುತ್ತದೆ. ಭೌಗೋಳಿಕವಾಗಿ ಗುಲ್ಬರ್ಗಾ, ರಾಯಚೂರು ಮತ್ತು ಕೊಪ್ಪಳ ಜಿಲ್ಲೆಗಳು ಸಮೀಪವಾಗಿದ್ದು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಕೆಳಮಟ್ಟದ ಅಭಿವೃದ್ಧಿ ಹೊಂದಿದ ಗುಣಲಕ್ಷಣಗಳನ್ನು ಹಂಚಿಕೊಂಡಿವೆ (ಎಚ್.ಡಿ. ಪ್ರಶಾಂತ್, ೨೦೦೭).

ಕೋಷ್ಟಕ ೩
ಸಾಮಾಜಿಕ ಗುಂಪುವಾರು ಸಾಕ್ಷರತಾ ದರದಲ್ಲಿನ ಗುಣಸಂಖ್ಯಾ ವ್ಯತ್ಯಾಸಗಳು (ಶೇಕಡವಾರು)

ಲಿಂಗ	ಒಟ್ಟು		ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ	
	೧೯೯೧	೨೦೦೧	೧೯೯೧	೨೦೦೧	೧೯೯೧	೨೦೦೧
ದಕ್ಷಿಣ ಕರ್ನಾಟಕ						
ಪುರುಷ	೧೨.೭	೧೦.೪	೧೬.೨	೯.೧	೨೨.೬	೧೫.೧
ಸ್ತ್ರೀ	೨೪.೩	೧೭.೨	೩೨.೩	೧೬.೭	೩೬.೯	೨೨.೫
ಒಟ್ಟು	೧೭.೨	೧೩.೨	೨೧.೫	೧೨.೦	೨೭.೧	೧೭.೯
ಉತ್ತರ ಕರ್ನಾಟಕ						
ಪುರುಷ	೧೫.೨	೯.೯	೨೨.೪	೧೩.೫	೨೭.೮	೧೭.೨
ಸ್ತ್ರೀ	೩೧.೫	೨೦.೪	೪೧.೨	೨೭.೧	೪೭.೫	೩೧.೮
ಒಟ್ಟು	೨೦.೯	೧೪.೦	೨೮.೫	೧೮.೪	೩೩.೪	೨೨.೨
ಎಲ್ಲಾ ಜಿಲ್ಲೆಗಳು						
ಪುರುಷ	೧೪.೦	೧೦.೬	೧೯.೦	೧೧.೮	೨೪.೭	೧೬.೫
ಸ್ತ್ರೀ	೨೯.೬	೨೧.೩	೩೭.೫	೨೫.೦	೪೪.೬	೩೦.೪
ಒಟ್ಟು	೧೯.೮	೧೪.೮	೨೪.೮	೧೬.೭	೩೦.೫	೨೧.೫

ಮೂಲ: ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾ, ಪ್ರಾಥಮಿಕ ಜನಗಣತಿ, ಭಾರತದ ಜನಗಣತಿ ೨೦೦೧ರ ಮಾಹಿತಿ.

ಉತ್ತರ ಕರ್ನಾಟಕದಲ್ಲಿ ಸಾಕ್ಷರತೆಯಲ್ಲಿನ ಲಿಂಗ ಆಧಾರಿತ ತಾರತಮ್ಯವು ದಕ್ಷಿಣ ಕರ್ನಾಟಕಕ್ಕಿಂತ ಹೆಚ್ಚಾಗಿದ್ದು, ಇದರಿಂದ ದಕ್ಷಿಣ ಕರ್ನಾಟಕದಲ್ಲಿನ ಲಿಂಗತಾರತಮ್ಯವು ಕನಿಷ್ಠ ಮಟ್ಟದ್ದಾಗಿದೆ ಎಂದು ಸುಲಭವಾಗಿ ಹೇಳಿಬಿಡಬಹುದು. ಕಳೆದ ದಶಕದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿ ಮಹಿಳಾ ಸಾಕ್ಷರತಾ ದರದಲ್ಲಿ ಸುಧಾರಣೆಯಾಗಿರಬಹುದಾದರೂ, ಇದು ನಗರ ಕೇಂದ್ರದ ಪಕ್ಕದಲ್ಲಿರುವಂತಹ ಅನುಕೂಲ ಹೊಂದಿರುವ ಜಿಲ್ಲೆಗೆ ಬಹಳ ಕಡಿಮೆಯೇ ಆಗಿರುತ್ತದೆ. ದಕ್ಷಿಣ ಕರ್ನಾಟಕ ಪ್ರದೇಶದ ಜಿಲ್ಲೆಗಳಲ್ಲಿ ತಾರತಮ್ಯದ ತೀಕ್ಷ್ಣತೆಯು ಕಡಿಮೆ ಇದ್ದರೂ ಸಹ ಇಲ್ಲಿಯೂ ತಾರತಮ್ಯವಿದೆ. ಇದು ಮಹಿಳೆಯರ ಆರೋಗ್ಯ ಮತ್ತು ಬಡತನದ ಮೇಲೆ ಗಂಭೀರ ಪರಿಣಾಮವನ್ನು ಉಂಟುಮಾಡುತ್ತದೆ. ಒಟ್ಟಾರೆ ಸಾಕ್ಷರತೆಯಲ್ಲಿ ಲಿಂಗಾಧಾರಿತ ತಾರತಮ್ಯವು ಕಡಿಮೆಯಾಗುತ್ತಿದ್ದು, ಇದು ಕಡಿಮೆ ಅಭಿವೃದ್ಧಿ ಹೊಂದಿದ ಜಿಲ್ಲೆಗಳಲ್ಲಿ ವೇಗವಾಗಿರುವುದು ಧೈರ್ಯ ನೀಡುವಂತದ್ದಾಗಿದ್ದರೂ, ಸಹಸ್ರಮಾನದ ಗುರಿಗಳನ್ನು ಸಾಧಿಸಿಕೊಳ್ಳಲು ಕರ್ನಾಟಕದಲ್ಲಿ ಹೆಚ್ಚು ಶೈಕ್ಷಣಿಕ ನೀತಿ ಮತ್ತು ಕಾರ್ಯಕ್ರಮಗಳ ಮಧ್ಯಸ್ಥಿಕೆಯ ಅವಶ್ಯಕತೆ ಇದೆ. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳಿಗೆ ಸೇರಿದವರಲ್ಲಿ ಕೆಳಮಟ್ಟದ ಸಾಕ್ಷರತಾ ಪ್ರಮಾಣವಿದ್ದು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನಸಂಖ್ಯೆ ಹೆಚ್ಚಾಗಿರುವ ಜಿಲ್ಲೆಗಳಲ್ಲಿ ಸಾಕ್ಷರತಾ ದರವು ಕೆಳಮಟ್ಟದಲ್ಲಿರುವುದು ಸ್ಪಷ್ಟವಾಗಿ ಕಂಡುಬರುತ್ತದೆ (ಎಚ್.ಡಿ. ಪ್ರಶಾಂತ್, ೨೦೦೭).

ಸಾಕ್ಷರತೆಯು ಸಮಾಜದ ಸ್ಥಿತಿಗತಿಯನ್ನು ಅಭಿವ್ಯಕ್ತಪಡಿಸುವ ಒಂದು ಸೂಚಿಯಾಗಿದೆ. ಇದನ್ನು ಸಮಾಜದ ಚೌಕಟ್ಟಿನಿಂದ ಪ್ರತ್ಯೇಕ ಮಾಡಿ ನೋಡುವುದು ಅಥವಾ ಪರಿಭಾವಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ. ಸಾಕ್ಷರತೆ ಮತ್ತು ಶಿಕ್ಷಣಗಳು ಮೌಲ್ಯ ನಿರಪೇಕ್ಷವಾದವುಗಳಲ್ಲ. ಆದ್ದರಿಂದಲೇ ಅಭಿವೃದ್ಧಿ ಕುರಿತ ಚರ್ಚೆಯಲ್ಲಿ ಸಾಕ್ಷರತೆಯ ಬಗ್ಗೆ ಒಂದು ನಿರ್ದಿಷ್ಟವಾದ ನಿಲುವು ತಳೆಯುವುದು

ತುಂಬಾ ಅವಶ್ಯಕವಾಗಿದೆ. ಸಾಕ್ಷರತೆ ಯಾರಿಗೆ ಸಿಗಬೇಕು? ಯಾರಿಗೆ ಸಿಗಬಾರದು? ಮತ್ತು ಯಾರಿಗೆ ಎಷ್ಟು ಸಿಗಬೇಕು? ಎಂಬ ಸಂಗತಿಗಳನ್ನೆಲ್ಲಾ ನಮ್ಮ ಸಾಮಾಜಿಕ ವ್ಯವಸ್ಥೆಯು ನಿರ್ಧರಿಸುತ್ತಿರುತ್ತದೆ. ಈ ಕಾರಣದಿಂದಲೇ ನಮ್ಮ ಸಮಾಜದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ ಜಾತಿಭೇದ, ವರ್ಗಭೇದ, ಮತ/ಲಿಂಗ ಭೇದಗಳು ತೀವ್ರವಾಗಿರುವುದನ್ನು ನೋಡಬಹುದಾಗಿದೆ. ಮಹಿಳೆಯರ ಸಾಕ್ಷರತಾ ಪ್ರಮಾಣ, ಪುರುಷರ ಸಾಕ್ಷರತೆಗಿಂತ ಕಡಿಮೆಯಾಗಿರುವುದು ಕೇವಲ ಜೈವಿಕ ಸ್ವರೂಪದ ಫಲವಾಗಿರದೆ ಸಾಮಾಜಿಕ ಸ್ವರೂಪದ ಅಂಶವೂ ಆಗಿರುತ್ತದೆ. ಸಾಕ್ಷರತೆಗೆ ಸಂಬಂಧಿಸಿದ ಸಾಧನೆ ಮತ್ತು ವೈಫಲ್ಯಗಳನ್ನು ವ್ಯಕ್ತಿಗತ ಅಥವಾ ಜೈವಿಕ-ನೈಸರ್ಗಿಕ-ಪ್ರಾಕೃತಿಕ ನೆಲೆಗಳಲ್ಲಿ ಪರಿಭಾವಿಸುವುದು ಸಾಧ್ಯವಾಗುವುದಿಲ್ಲ. ಇವೆಲ್ಲಾ ಸಾಮಾಜಿಕ ವ್ಯವಸ್ಥೆಯು ರೂಪಿಸಿದ ಒಂದು ಸಂಗತಿಯಾಗಿರುತ್ತದೆ (ಚಂದ್ರಶೇಖರ್ ಟಿ.ಆರ್, ೨೦೦೦). ಈ ಹಿನ್ನೆಲೆಯಲ್ಲಿ ದಲಿತರ ಶೈಕ್ಷಣಿಕ ಪರಿಸರ ಮತ್ತು ಪರಿಸ್ಥಿತಿಯನ್ನು ಗುರುತಿಸುವುದು ಪ್ರಸ್ತುತ ಅಧ್ಯಯನದ ಮೂಲ ಆಶಯವಾಗಿರುತ್ತದೆ.

ನಮ್ಮ ಸಂವಿಧಾನವು ಸಮಾನತೆಯನ್ನು ನೀಡಿ ಲಿಂಗಭೇದವನ್ನು ನಿಷೇಧಿಸಿತ್ತಾದರೂ ವಾಸ್ತವದಲ್ಲಿ ಮಹಿಳಾ ಶಿಕ್ಷಣದಲ್ಲಿ ನಾವೆಣಿಸಿದಷ್ಟು ಪ್ರಗತಿ ಕಂಡಿಲ್ಲ. ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು ಸರಿ ಸುಮಾರು ಅರ್ಧದಷ್ಟು ಇದ್ದಾರೆ. ಮಹಿಳೆ ಮತ್ತು ಪುರುಷರ ಶಿಕ್ಷಣದ ನಡುವೆ ಸಾಕಷ್ಟು ಅಂತರವಿದೆ. ಮಹಿಳಾ ಸಾಕ್ಷರತೆಯ ಪ್ರಮಾಣ ೧೯೫೧ರಲ್ಲಿ ಶೇಕಡ ೮.೮೬ರಷ್ಟಿದ್ದರೆ, ಅದು ೨೦೦೧ರಲ್ಲಿ ಶೇಕಡ ೫೪.೧೬ರಷ್ಟಿದ್ದು ಕಂಡುಬರುತ್ತದೆ.

ಆದರೆ ಪುರುಷರ ಸಾಕ್ಷರತೆಯ ಪ್ರಮಾಣವು ೧೯೫೧ರಲ್ಲಿ ೨೭.೧೬ರಷ್ಟಿದ್ದರೂ ಅದು ೨೦೦೧ರಲ್ಲಿ ಶೇಕಡಾ ೭೫.೮೫ರ ಪ್ರಮಾಣದಲ್ಲಿ ಏರಿರುವುದು ಕಂಡುಬರುತ್ತದೆ. ಇದನ್ನು ನೋಡಿದರೆ ಈ ಸಮಾಜದಲ್ಲಿ ಶಿಕ್ಷಣದ ಅವಕಾಶದ ಬಳಕೆಯಲ್ಲಿ ಲಿಂಗ ತಾರತಮ್ಯವು ಎಷ್ಟರಮಟ್ಟಿಗೆ ಇದೆ ಎಂಬುದು ಮನದಟ್ಟಾಗುತ್ತದೆ.

ಕೋಷ್ಟಕ-೩.೨

ಭಾರತದಲ್ಲಿ ಮಹಿಳೆಯರ ಮತ್ತು ಪುರುಷರ ಶೇಕಡವಾರು ಸಾಕ್ಷರತೆ ಪಮಾಣ

ವರ್ಷ	ಪುರುಷರು	ಮಹಿಳೆಯರು	ದೇಶದ ಒಟ್ಟು ಸಾಕ್ಷರತಾ ಪ್ರಮಾಣ
೧೯೫೧	೨೭.೧೬	೮.೮೬	೧೮.೩೩
೧೯೬೧	೪೦.೪೦	೧೫.೩೪	೨೮.೩೦
೧೯೭೧	೪೫.೯೫	೨೧.೯೭	೩೪.೪೫
೧೯೮೧	೫೩.೪೫	೨೮.೪೬೩	೪.೪೭
೧೯೯೧	೬೪.೧೩	೩೯.೨೯	೫೨.೨೧
೨೦೦೧	೭೫.೮೫	೫೪.೧೬	೬೫.೩೮
ಗ್ರಾಮೀಣ			
೨೦೦೧	೭೧.೪೦	೪೬.೭೦	೫೯.೪೦
ನಗರ			
೨೦೦೧	೮೬.೭೦	೭೩.೨೦	೮೦.೩೦

ಮೂಲ : ೨೦೦೧ರ ಜನಗಣತಿ ವರದಿ.

ಮಹಿಳೆ ಮತ್ತು ಪುರುಷರ ಸಾಕ್ಷರತೆಯ ಪ್ರಮಾಣದಲ್ಲಿ ವ್ಯತ್ಯಾಸವಿರುವುದಷ್ಟೇ ಅಲ್ಲ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲೂ ಸಾಕ್ಷರತೆಯ ಪ್ರಮಾಣದಲ್ಲಿ ಅಗಾಧವಾದ ವ್ಯತ್ಯಾಸಗಳಿ ರುವುದು ಕಂಡುಬರುತ್ತದೆ. ನಗರ ಪ್ರದೇಶದಲ್ಲಿ ಮಹಿಳಾ ಸಾಕ್ಷರತೆಯ ಪ್ರಮಾಣ ಶೇಕಡ ೭೩.೨೦ ರಷ್ಟಿದ್ದರೆ ಅದು ಗ್ರಾಮೀಣ ಪ್ರದೇಶದಲ್ಲಿ ಈ ಪ್ರಮಾಣವು ಶೇಕಡ ೪೬.೭೦ರಷ್ಟು ಮಾತ್ರವಿದೆ.

೨೦೦೧ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಸಾಕ್ಷರತೆ ಪ್ರಮಾಣ ಶೇಕಡ ೬೫.೩೮ರಷ್ಟು ಇದೆ. ಇದರಲ್ಲಿ ಪುರುಷರ ಸಾಕ್ಷರತೆ ಪ್ರಮಾಣ ಶೇಕಡ ೭೫.೮೫ರಷ್ಟಿದ್ದರೆ, ಮಹಿಳೆಯರ ಸಾಕ್ಷರತಾ ಪ್ರಮಾಣ ಶೇಕಡ ೫೪.೧೬ರಷ್ಟು ಇದೆ. ಸ್ವಾತಂತ್ರ್ಯನಂತರ ಪ್ರತಿ ವರ್ಷವು ಸ್ವಲ್ಪಮಟ್ಟಿಗೆ ಮಹಿಳಾ ಸಾಕ್ಷರತೆಯಲ್ಲಿ ಏರಿಕೆಯಾಗುತ್ತಾ ಬಂದಿದೆ. ಆದರೂ ಸಹ ಎಲ್ಲರಿಗೂ ಸಾರ್ವತ್ರಿಕವಾಗಿ ಶಿಕ್ಷಣ ತಲುಪಿಸುವಲ್ಲಿ ಸರ್ಕಾರ ಮಂದಗತಿಯತ್ತ ಸಾಗುತ್ತಿದೆ ಎಂದು ಹೇಳಬಹುದು. ಕರ್ನಾಟಕ ರಾಜ್ಯವು ಬೇರೆಲ್ಲಾ ರಾಜ್ಯಗಳಿಗೆ ಹೋಲಿಸಿದಾಗ ಶಿಕ್ಷಣ ಮಟ್ಟದಲ್ಲಿ ಅತ್ತ ಹಿಂದುಳಿಯದೆ ಇತ್ತ ಮುಂದೆಯೂ ಸಾಗದೇ ಮಧ್ಯಮಗತಿಯಲ್ಲಿ ಸಾಗುತ್ತಿದೆ ಎನ್ನಬಹುದು. ದೇಶದಲ್ಲಿ ಕೇರಳ ಮತ್ತು ಹಿಮಾಚಲ ಪ್ರದೇಶ ರಾಜ್ಯಗಳು ಅತ್ಯಂತ ಹೆಚ್ಚು ಸಾಕ್ಷರತೆಯನ್ನು ಹೊಂದಿದ ರಾಜ್ಯಗಳಾಗಿವೆ. ಹಾಗೆಯೇ ಕೇರಳ ರಾಜ್ಯದಲ್ಲಿ ಅತಿಹೆಚ್ಚು ಮಹಿಳಾ ಸಾಕ್ಷರತೆಯಿದ್ದು ಬಿಹಾರ ರಾಜ್ಯದಲ್ಲಿ ಅತ್ಯಂತ ಕಡಿಮೆ (೩೩.೫೭) ಮಟ್ಟದ ಮಹಿಳಾ ಸಾಕ್ಷರತೆಯನ್ನು ನಾವು ಕಾಣಬಹುದು.

ಕೋಷ್ಟಕ-೩.೩

ಕರ್ನಾಟಕದಲ್ಲಿ ಮಹಿಳೆ ಮತ್ತು ಪುರುಷರ ಸಾಕ್ಷರತಾ ಪ್ರಮಾಣದಲ್ಲಿನ ವ್ಯತ್ಯಾಸಗಳು

ವರ್ಷ	ಒಟ್ಟು	ಸಾಕ್ಷರತಾ ಪ್ರಮಾಣ ವ್ಯತ್ಯಾಸಗಳು	ಪುರುಷ	ಮಹಿಳೆ
೧೯೬೧	೨೯.೮೦	೪೨.೨೯	೧೬.೭೦	೨೫.೫೯
೧೯೭೧	೩೬.೮೩	೪೮.೫೧	೨೪.೫೫	೨೩.೯೬
೧೯೮೧	೪೬.೨೧	೫೮.೭೩	೩೩.೧೭	೨೫.೫೬
೧೯೯೧	೫೬.೦೪	೬೭.೨೬	೪೪.೩೪	೨೨.೯೨
೨೦೦೧	೬೭.೪	೭೬.೨೯	೫೭.೪೫	೧೮.೮೪

ಮೂಲ : ಜನಗಣತಿ ವರದಿಗಳು.

ಸಾಕ್ಷರತಾ ಪ್ರಮಾಣವು ೧೯೬೧ರಲ್ಲಿ ಒಟ್ಟು ಶೇಕಡ ೨೯.೮೦ರಷ್ಟು ಇದ್ದು ಇದರಲ್ಲಿ ಮಹಿಳೆಯ ಸಾಕ್ಷರತಾ ಪ್ರಮಾಣ ಶೇಕಡ ೧೬.೭೦ರಷ್ಟಿದೆ. ರಾಜ್ಯದಲ್ಲಿ ೧೯೬೧ ರಿಂದ ೨೦೦೧ರ ವರೆಗೆ ಪುರುಷರ ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣದಲ್ಲಿ ಶೇಕಡ ೧೮.೮೪ರಷ್ಟು ವ್ಯತ್ಯಾಸವಿರುವುದನ್ನು ಕಾಣಬಹುದು. ಮಹಿಳೆಯರ ಸಾಕ್ಷರತೆಯೂ ವರ್ಷದಿಂದ ವರ್ಷಕ್ಕೆ ಏರಿಕೆಯಾಗಿ ರುವುದು ತಿಳಿಯುತ್ತದೆ.

ಕೋಷ್ಟಕ-೩.೪

ವಿಭಾಗ ಮತ್ತು ಪ್ರದೇಶವಾರು ಸಾಕ್ಷರತೆಯ ಪ್ರಮಾಣ (ಕರ್ನಾಟಕದಲ್ಲಿ)

ಕ್ರಸಂ.	ವಿಭಾಗ / ಪ್ರದೇಶ	ಒಟ್ಟು	ಸಾಕ್ಷರತೆ	
			ಪುರುಷರು	ಮಹಿಳೆಯರು
೦೧	ಬೆಂಗಳೂರು ವಿಭಾಗ	೭೨.೯೧	೮೦.೫೬	೬೪.೭೮

೦೨	ಬೆಳಗಾವಿ ವಿಭಾಗ	೬೫.೪೦	೭೬.೩೦	೫೪.೦೬
೦೩	ಗುಲಬರ್ಗಾ ವಿಭಾಗ	೫೪.೪೦	೬೬.೫೧	೪೧.೯೨
೦೪	ಮೈಸೂರು ವಿಭಾಗ	೬೯.೩೦	೭೭.೦೨	೬೧.೬೪
೦೫	ಉತ್ತರ ಕರ್ನಾಟಕ	೬೦.೮೨	೭೨.೨೪	೪೮.೯೯
೦೬	ದಕ್ಷಿಣ ಕರ್ನಾಟಕ	೭೦.೫೦	೬೯.೨೦	೬೩.೫೨
೦೭	ಕರ್ನಾಟಕ	೬೭.೦೪	೭೬.೨೬	೫೭.೪೫

ಮೂಲ : ಜನಗಣತಿ ವರದಿ ೨೦೦೧, ಅಭಿವೃದ್ಧಿ ಅಧ್ಯಯನ, ೨೦೦೩

ಸಾಕ್ಷರತಾ ಪ್ರಮಾಣವನ್ನು ನಾವು ವಿಭಾಗವಾರು ನೋಡಿದಾಗ ಅನೇಕ ಭಿನ್ನತೆಗಳು ಕಾಣುತ್ತವೆ. ಬೆಂಗಳೂರು ವಿಭಾಗದ ಒಟ್ಟು ಸಾಕ್ಷರತಾ ಪ್ರಮಾಣ ಶೇಕಡ ೭೨.೯೧ರಷ್ಟಿದೆ. ಪುರುಷರ ಸಾಕ್ಷರತೆ ಶೇಕಡ ೮೦.೫೬ ಮತ್ತು ಮಹಿಳೆಯರ ಸಾಕ್ಷರತೆ ಶೇಕಡ ೬೪.೭೮ರಷ್ಟಿದೆ. ಇದು ಇತರ ಮೂರು ವಿಭಾಗಗಳಿಗಿಂತ ಹೆಚ್ಚಾಗಿದೆ. ಬೆಳಗಾವಿ ಕಂದಾಯ ವಿಭಾಗದ ಒಟ್ಟು ಸಾಕ್ಷರತೆ ಶೇಕಡ ೬೫.೪೦ರಷ್ಟು, ಈ ವಿಭಾಗದಲ್ಲಿ ಪುರುಷರ ಸಾಕ್ಷರತೆ ಶೇಕಡ ೭೬.೩೦ರಷ್ಟು ಮತ್ತು ಮಹಿಳಾ ಸಾಕ್ಷರತೆ ಶೇಕಡ ೫೪.೦೬ ರಷ್ಟಿದೆ. ಗುಲ್ಬರ್ಗಾ ವಿಭಾಗದ ಒಟ್ಟು ಸಾಕ್ಷರತೆ ಶೇಕಡ ೫೪.೪೦ರಷ್ಟಿದೆ. ಪುರುಷರ ಸಾಕ್ಷರತೆ ಶೇಕಡ ೬೬.೫೧ರಷ್ಟು ಮತ್ತು ಮಹಿಳಾ ಸಾಕ್ಷರತೆ ಪ್ರಮಾಣ ಶೇಕಡ ೪೧.೯೨ರಷ್ಟಿದೆ. ಇಲ್ಲಿ ರಾಜ್ಯದ ಒಟ್ಟು ಪುರುಷರ ಮತ್ತು ಮಹಿಳೆಯರ ಸಾಕ್ಷರತೆ ಗಿಂತ ಗುಲ್ಬರ್ಗಾ ವಿಭಾಗ ಪುರುಷರ ಮತ್ತು ಮಹಿಳೆಯರ ಸಾಕ್ಷರತೆಯಲ್ಲಿ ಕ್ರಮವಾಗಿ ಶೇಕಡ ೯.೭೫ ಅಂಶಗಳಷ್ಟು ಮತ್ತು ೧೫.೫೩ ಅಂಶಗಳಷ್ಟು ಅಂತರವಿದೆ. ಮೈಸೂರು ವಿಭಾಗವು ಸಾಕ್ಷರತೆಯ ದೃಷ್ಟಿಯಿಂದ ಎರಡನೆಯ ಸ್ಥಾನ ಪಡೆದಿದೆ. ಈ ವಿಭಾಗದ ಒಟ್ಟು ಸಾಕ್ಷರತೆ ೬೯.೩೦ ರಷ್ಟಿದ್ದರೆ, ಪುರುಷರ ಸಾಕ್ಷರತಾ ಪ್ರಮಾಣ ಶೇಕಡ ೭೭.೦೨ರಷ್ಟು ಮತ್ತು ಮಹಿಳೆಯರ ಸಾಕ್ಷರತಾ ಪ್ರಮಾಣ ಶೇಕಡ ೬೧.೬೪ರಷ್ಟಿದೆ. ಈ ವಿಭಾಗದ ಸಾಕ್ಷರತೆಯೂ ಎಲ್ಲಾ ದೃಷ್ಟಿಯಿಂದ ರಾಜ್ಯದ ಒಟ್ಟು ಸರಾಸರಿಗಿಂತ ಸ್ವಲ್ಪ ಹೆಚ್ಚಿನ ಪ್ರಮಾಣದ್ದಾಗಿದೆ. ಉತ್ತರ ಕರ್ನಾಟಕ ಪ್ರದೇಶದ ಒಟ್ಟು ಸಾಕ್ಷರತೆಯೂ ೬೦.೮೨ರಷ್ಟಿದೆ. ಉತ್ತರ ಕರ್ನಾಟಕ ಪ್ರದೇಶ ಮಹಿಳೆಯರ ಸಾಕ್ಷರತೆ ಶೇಕಡ ೪೮.೯೯ರಷ್ಟು ಮತ್ತು ರಾಜ್ಯದ ಮಹಿಳೆಯ ಸಾಕ್ಷರತೆ ಶೇಕಡ ೫೭.೪೫ರಷ್ಟು ಇಲ್ಲಿ ಈ ಎರಡರ ನಡುವಿನ ಅಂತರ ಶೇಕಡ ೮.೪೬ ಅಂಶಗಳಷ್ಟು. ದಕ್ಷಿಣ ಕರ್ನಾಟಕ ಪ್ರದೇಶದ ಮಹಿಳಾ ಸಾಕ್ಷರತೆಯು ಉತ್ತರ ಕರ್ನಾಟಕ ಪ್ರದೇಶದ ಮಹಿಳೆಯರ ಸಾಕ್ಷರತೆಗಿಂತ ಶೇಕಡ ೧೪.೫೩ ಅಂಶಗಳಷ್ಟು ಮತ್ತು ಕರ್ನಾಟಕ ಒಟ್ಟು ಮಹಿಳೆಯರ ಸಾಕ್ಷರತೆಗಿಂತ ಶೇಕಡ ೬.೦೭ ಅಂಶಗಳಷ್ಟು ಹೆಚ್ಚಾಗಿದೆ. ಒಟ್ಟಾರೆಯಾಗಿ ಮಹಿಳಾ ಸಾಕ್ಷರತೆಯಲ್ಲಿ ಗುಲ್ಬರ್ಗ ವಿಭಾಗವು ಹಿಂದುಳಿದಿದೆ ಎಂದು ಹೇಳಬಹುದು.

ಮಾನವ ಅಭಿವೃದ್ಧಿ ವಿಚಾರ ಪ್ರಣಾಳಿಕೆಯಲ್ಲಿ ಸಾಕ್ಷರತೆಯು ೨ನೇ ಸ್ಥಾನವನ್ನು ಪಡೆದಿದೆ. ಮಾನವ ಅಭಿವೃದ್ಧಿ ಅತ್ಯಾವಶ್ಯಕವಾಗಿರುವ ಧಾರಣಶಕ್ತಿಯನ್ನು ಒದಗಿಸುವ ಗುಣ ಸಾಕ್ಷರತೆಗೆ ಇದೆ. ಸಾಕ್ಷರತೆಯೇ ಅಭಿವೃದ್ಧಿ. ಸಾಕ್ಷರತೆಯ ವೈಫಲ್ಯವು ಅಭಿವೃದ್ಧಿಯ ಹಿನ್ನೆಡೆಗೆ ಕಾರಣವಾಗುತ್ತದೆ.

ಸಾಕ್ಷರತೆಯು ಸಮಾಜದಲ್ಲಿಯ ಪರಿಸ್ಥಿತಿಯನ್ನು ಪ್ರಚುರಪಡಿಸುವ ಒಂದು ಸೂಚಿಯಾಗಿದೆ. ಸಾಕ್ಷರತೆಯಲ್ಲಿಯ ಲಿಂಗ ಅಸಮಾನತೆಯು, ಸಮಾಜದಲ್ಲಿ ಮಹಿಳೆಯನ್ನು ನಿರ್ಲಕ್ಷಿಸಲಾಗುತ್ತಿದೆ ಎಂಬುವುದರ ಪ್ರತಿಬಿಂಬವಾಗಿದೆ. "ಮಹಿಳೆಯರ ಸಾಕ್ಷರತೆ ಪುರುಷರ ಸಾಕ್ಷರತೆಗಿಂತ ಕಡಿಮೆ ಇದ್ದರೆ ಅದು ಆಕೆಯ ಜೈವಿಕ ಸ್ವರೂಪದ ಫಲವಲ್ಲ. ಅದು ಸಮಾಜವು ಕಟ್ಟಿರುವ ಒಂದು ನಿರ್ಬಂಧ. ಸಾಮಾನ್ಯ ಜನಸಂಖ್ಯೆಯ ಸಾಕ್ಷರತೆ ಪ್ರಮಾಣವು ಪರಿಶಿಷ್ಟ ಜನಸಂಖ್ಯೆಯ ಸಾಕ್ಷರತೆ ಪ್ರಮಾಣಕ್ಕಿಂತ ಅಧಿಕವಾಗಿದ್ದರೆ ಅದು ಸಾಮಾಜಿಕ ವ್ಯವಸ್ಥೆಯ ಒಂದು ಪರಿಣಾಮವಾಗಿದೆ. ಸಾಕ್ಷರತೆಗೆ ಸಂಬಂಧಿಸಿದ ಸಿದ್ಧ ಸಾಧನೆಗಳನ್ನು, ವೈಫಲ್ಯಗಳನ್ನು ವ್ಯಕ್ತಿಗತ ನೆಲೆಯಲ್ಲಿ ಅಥವಾ ಜೈವಿಕ-ನೈಸರ್ಗಿಕ ನೆಲೆಯಲ್ಲಿ ಪರಿಭಾವಿಸುವುದು ಸಾಧ್ಯವಿಲ್ಲ. ಇವೆಲ್ಲವೂ ಸಾಮಾಜಿಕ ವ್ಯವಸ್ಥೆಯೊಂದು ರೂಪಿಸಿದ ಸಂಗತಿಯಾಗಿದೆ" (ಚಂದ್ರಶೇಖರ್, ೧೯೯೯).

೩.೩ ಅಧ್ಯಯನ ಕ್ಷೇತ್ರದಲ್ಲಿ ಸಾಕ್ಷರತೆ

ಕರ್ನಾಟಕದ ಅಕ್ಷರಸ್ಥರ ಪ್ರಮಾಣ ಪುರುಷರು ೭೬.೨೯, ಮಹಿಳೆಯರದ್ದು ೫೭.೪೫, ಒಟ್ಟು ೬೭.೦೪ರಷ್ಟು ಇದೆ. ಬಿಜಾಪುರ ಜಿಲ್ಲೆಯದ್ದು ಪುರುಷರ ಅಕ್ಷರಸ್ಥರ ಪ್ರಮಾಣ ೬೯.೯೦ ಮತ್ತು ಮಹಿಳೆಯರದ್ದು ೪೩.೫೦ ಒಟ್ಟು ೫೭.೪೦. ಹಾಗೆಯೇ ರಾಯಚೂರು ಜಿಲ್ಲೆಯ ಅಕ್ಷರಸ್ಥರ ಪ್ರಮಾಣ ಪುರುಷರು ೬೧.೫ ಮಹಿಳೆಯರದ್ದು ೩೫.೯, ಒಟ್ಟು ೪೮.೮ರಷ್ಟು ಹಾಗೆಯೇ ಬಾಗಲಕೋಟೆ ಜಿಲ್ಲೆಯ ಅಕ್ಷರಸ್ಥರ ಪ್ರಮಾಣ ಪುರುಷರು ೬೯.೮ ಮಹಿಳೆಯರದ್ದು ೪೫.೭ ಒಟ್ಟು ೫೭.೩೨ರಷ್ಟು, ಹಾಗೆಯೇ ಬಳ್ಳಾರಿ ಜಿಲ್ಲೆಯ ಅಕ್ಷರಸ್ಥರ ಪ್ರಮಾಣ ಪುರುಷರು ೬೮.೭ ಮಹಿಳೆಯರದ್ದು ೪೫.೦೧, ಒಟ್ಟು ೫೭.೦೪ರಷ್ಟು ಪ್ರಮಾಣ ಇದೆ (ಜನಗಣತಿ ೨೦೦೧).

ಕೋಷ್ಟಕ - ೩.೫

೨೦೦೧ ನೇ ಸಾಲಿನ ಜನಗಣತಿಯ ಪ್ರಕಾರ ಅಧ್ಯಯನ ಕ್ಷೇತ್ರದ ಜಿಲ್ಲಾವಾರು ಜನಸಂಖ್ಯೆ ಹಾಗೂ ಸಾಕ್ಷರತೆ ಪ್ರಮಾಣ

ಜಿಲ್ಲೆಯ ಹೆಸರು	ಎಲ್ಲಾ ಸಮುದಾಯದ ಒಟ್ಟು ಜನಸಂಖ್ಯೆ			ಜನಸಾಂದ್ರತೆ	ಲಿಂಗಾನುಪಾತ	ಸಾಕ್ಷರತೆಯ ಪ್ರಮಾಣ		
	ಪುರುಷರು	ಮಹಿಳೆಯರು	ಒಟ್ಟು			ಪುರುಷರು	ಮಹಿಳೆಯರು	ಒಟ್ಟು
ಬಾಗಲಕೋಟೆ	೮೩೪೨೪೭	೮೧೭೬೪೫	೧೬೫೧೮೯೨	೨೫೧	೯೮೦	೬೯.೮೪	೪೫.೭೨	೫೭.೩೨
ಬಳ್ಳಾರಿ	೧೦೨೯೭೧೪	೯೯೭೪೨೬	೨೦೨೭೧೪೦	೨೪೦	೯೬೯	೬೮.೭೬	೪೫.೦೧	೫೭.೦೪
ಬಿಜಾಪುರ	೯೨೬೪೨೪	೮೮೦೪೯೪	೧೮೦೬೯೧೮	೧೭೨	೯೪೮	೬೯.೯೦	೪೩.೫೦	೫೭.೪೦
ರಾಯಚೂರು	೮೪೧೮೪೦	೮೨೭೯೨೨	೧೬೬೯೭೬೨	೨೪೫	೯೮೦	೬೧.೫೦	೩೫.೯೦	೪೮.೮೦

ಜನಗಣತಿ ೨೦೦೧

ಕೋಷ್ಟಕ - ೩.೬

೨೦೦೧ ನೇ ಸಾಲಿನ ತಾಲ್ಲೂಕು ಸಾಕ್ಷರತಾ ಪ್ರಮಾಣ

೨೦೦೧ ನೇ ಸಾಲಿನ ಜನಗಣತಿಯ ಪ್ರಕಾರ ಅಧ್ಯಯನ ಕ್ಷೇತ್ರದ ತಾಲ್ಲೂಕುವಾರು ಜನಸಂಖ್ಯೆ ಹಾಗೂ ಸಾಕ್ಷರತೆ ಪ್ರಮಾಣ

ಜಿಲ್ಲೆಗಳು	ತಾಲ್ಲೂಕಿನ ಹೆಸರು	ಎಲ್ಲಾ ಸಮುದಾಯದ ಒಟ್ಟು ಜನಸಂಖ್ಯೆ			ಜನಸಾಂದ್ರತೆ	ಲಿಂಗಾನುಪಾತ	ಸಾಕ್ಷರತೆಯ ಪ್ರಮಾಣ		
		ಪುರುಷರು	ಮಹಿಳೆಯರು	ಒಟ್ಟು			ಪುರುಷರು	ಮಹಿಳೆಯರು	ಒಟ್ಟು
ಬಾಗಲಕೋಟೆ	ಬದಾಮಿ	೧೪೬೪೨೪	೧೪೫೫೦೦	೨೯೧೯೨೪	೧೮೪	೯೯೧	೭೨.೧೪	೪೧.೬	೫೬.೮೮
	ಜಮಖಂಡಿ	೨೦೭೯೦೪	೨೦೦೫೩೭	೪೦೮೪೪೧	೨೯೦	೯೬೨	೬೭.೭೨	೪೫.೨೮	೫೬.೬೮
ಬಳ್ಳಾರಿ	ಬಳ್ಳಾರಿ	೩೧೯೦೦೮	೩೦೬೪೮೬	೬೨೫೪೯೪	೩೭೦	೯೬೧	೭೦.೮	೪೮.೨	೫೯.೭
	ಹಗರಿ ಬೊಮ್ಮನಹಳ್ಳಿ	೮೦೭೭೦	೭೯೧೧೬	೧೫೯೮೮೬	೧೬೪	೯೮೦	೭೦.೮	೪೫.೨	೫೮.೧
ಬಿಜಾಪುರ	ಬಿಜಾಪುರ	೨೯೨೬೮೭	೨೭೬೬೬೧	೫೬೯೩೪೮	೨೧೪	೯೪೩	೭೪.೧೮	೫೨.೪೪	೬೩.೭೦
	ಬಸವನ ಬಾಗೇವಾಡಿ	೧೫೪೭೬೬	೧೪೮೫೨೪	೩೦೩೨೯೦	೧೫೩	೯೫೭	೬೮.೭೧	೪೦.೪೪	೫೪.೮೬
ರಾಯಚೂರು	ದೇವದುರ್ಗ	೧೧೨೨೪೫	೧೧೦೨೧೨	೨೨೨೪೫೭	೧೪೮	೯೮೨	೪೫.೧೦	೨೮.೫೯	೩೭.೩೮

ಮೂಲ:ಜನಗಣತಿ ೨೦೦೧

ಈ ಕೋಷ್ಟಕದಲ್ಲಿ ಬಾಗಲಕೋಟೆ ಜಿಲ್ಲೆಯ ಬದಾಮಿ ಮತ್ತು ಜಮಖಂಡಿ ತಾಲ್ಲೂಕುಗಳು ಬಳ್ಳಾರಿ ಜಿಲ್ಲೆಯ ಬಳ್ಳಾರಿ ಮತ್ತು ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳು, ಬಿಜಾಪುರ ಜಿಲ್ಲೆಯ ಬಿಜಾಪುರ ಮತ್ತು ಬಸವಬಾಗೇವಾಡಿ ತಾಲ್ಲೂಕುಗಳು ಹಾಗೂ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಸಾಕ್ಷರತೆ ಪ್ರಮಾಣವನ್ನು ತೋರಿಸಲಾಗಿದೆ. ಈ ಎಲ್ಲಾ ತಾಲ್ಲೂಕುಗಳ ಸಾಕ್ಷರತೆ ಪ್ರಮಾಣವನ್ನು ತಿಳಿಸುವುದರ ಜೊತೆಗೆ ಮಹಿಳೆ ಮತ್ತು ಪುರುಷ ಸಾಕ್ಷರತೆ ಪ್ರಮಾಣವನ್ನು ತಿಳಿಸಲಾಗಿದೆ.

ಮೇಲ್ಕಂಡ ಕೋಷ್ಟಕದ ಅನ್ವಯ ಬಾಗಲಕೋಟೆ ಜಿಲ್ಲೆಯ ಬದಾಮಿ ತಾಲ್ಲೂಕಿನ ಒಟ್ಟು ಸಾಕ್ಷರತೆ ಶೇಕಡ ೫೬.೮೮ ರಷ್ಟಿದ್ದರೆ ಇದರಲ್ಲಿ ಪುರುಷರ ಸಾಕ್ಷರತೆ ಶೇಕಡ ೭೨.೧೪, ಮಹಿಳೆಯರ ಸಾಕ್ಷರತೆ ಶೇಕಡ ೪೧.೧೪ರಷ್ಟು, ಇವೆರಡರ ನಡುವಿನ ಅಂತರ ೩೦.೫೪ ರಷ್ಟು.ಇದೆ. ಜಮಖಂಡಿ ತಾಲ್ಲೂಕಿನ ಒಟ್ಟು ಸಾಕ್ಷರತೆ ಶೇಕಡ ೫೬.೬೮ ರಷ್ಟಿದ್ದರೆ. ಇದರಲ್ಲಿ ಪುರುಷರ ಸಾಕ್ಷರತೆ ಶೇಕಡ ೬೭.೭೨, ಮಹಿಳೆಯರ ಸಾಕ್ಷರತೆ ಶೇಕಡ ೪೫.೨೮ರಷ್ಟು, ಇವೆರಡರ ನಡುವಿನ ಅಂತರ ೨೨.೪೪ ರಷ್ಟು.ಇದೆ.

ಬಳ್ಳಾರಿ ಜಿಲ್ಲೆಯ ಬಳ್ಳಾರಿ ತಾಲ್ಲೂಕಿನ ಒಟ್ಟು ಸಾಕ್ಷರತೆ ಶೇಕಡ ೫೯.೭ ರಷ್ಟಿದ್ದರೆ ಇದರಲ್ಲಿ ಪುರುಷರ ಸಾಕ್ಷರತೆ ಶೇಕಡ ೭೦.೮, ಮಹಿಳೆಯರ ಸಾಕ್ಷರತೆ ಶೇಕಡ ೪೮.೨ರಷ್ಟು, ಇವೆರಡರ ನಡುವಿನ ಅಂತರ ೨೨.೬ ರಷ್ಟು.ಇದೆ. ಹಾಗೆಯೇ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಒಟ್ಟು ಸಾಕ್ಷರತೆ ಶೇಕಡ ೫೮.೧ ರಷ್ಟಿದ್ದರೆ ಇದರಲ್ಲಿ ಪುರುಷರ ಸಾಕ್ಷರತೆ ಶೇಕಡ ೭೦.೮, ಮಹಿಳೆಯರ ಸಾಕ್ಷರತೆ ಶೇಕಡ ೪೫.೨ರಷ್ಟು, ಇವೆರಡರ ನಡುವಿನ ಅಂತರ ೨೫.೬ ರಷ್ಟು.ಇದೆ.

ಬಿಜಾಪುರ ಜಿಲ್ಲೆಯ ಬಿಜಾಪುರ ತಾಲ್ಲೂಕಿನ ಒಟ್ಟು ಸಾಕ್ಷರತೆ ಶೇಕಡ ೬೩.೭೦ ರಷ್ಟಿದ್ದರೆ ಇದರಲ್ಲಿ ಪುರುಷರ ಸಾಕ್ಷರತೆ ಶೇಕಡ ೭೪.೧೮, ಮಹಿಳೆಯರ ಸಾಕ್ಷರತೆ ಶೇಕಡ ೬೮.೭೧ರಷ್ಟು, ಇವೆರಡರ ನಡುವಿನ ಅಂತರ ೨೧.೭೪ ರಷ್ಟು.ಇದೆ. ಹಾಗೆಯೇ ಬಸವನಬಾಗೇವಾಡಿ ತಾಲ್ಲೂಕಿನ ಒಟ್ಟು ಸಾಕ್ಷರತೆ ಶೇಕಡ ೫೪.೮೬ ರಷ್ಟಿದ್ದರೆ ಇದರಲ್ಲಿ ಪುರುಷರ ಸಾಕ್ಷರತೆ ಶೇಕಡ ೬೮.೭೧, ಮಹಿಳೆಯರ ಸಾಕ್ಷರತೆ ಶೇಕಡ ೪೦.೪೪ರಷ್ಟು. ಇವೆರಡರ ನಡುವಿನ ಅಂತರ ೨೮.೨೭ ರಷ್ಟು.ಇದೆ.

ಬಿಜಾಪುರ ಜಿಲ್ಲೆಯ ಬಿಜಾಪುರ ತಾಲ್ಲೂಕಿನ ಒಟ್ಟು ಸಾಕ್ಷರತೆ ಶೇಕಡ ೩೭.೩೮ ರಷ್ಟಿದ್ದರೆ ಇದರಲ್ಲಿ ಪುರುಷರ ಸಾಕ್ಷರತೆ ಶೇಕಡ ೪೫.೧೦, ಮಹಿಳೆಯರ ಸಾಕ್ಷರತೆ ಶೇಕಡ ೨೮.೫೯ರಷ್ಟು, ಇವೆರಡರ ನಡುವಿನ ಅಂತರ ೧೬.೫೧ ರಷ್ಟು.ಇದೆ.

೩.೪ ಅಧ್ಯಯನ ಕ್ಷೇತ್ರದಲ್ಲಿ ಜಿಲ್ಲಾವಾರು ಶಾಲೆ ಬಿಟ್ಟ ಮಕ್ಕಳು

ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ನಾವು ಎದುರಿಸುತ್ತಿರುವ ಸಮಸ್ಯೆಯೆಂದರೆ ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವ ಸಂಗತಿಯಾಗಿದೆ. ಪ್ರತಿಯೊಂದು ಮಗುವಿಗೆ ೧೦ ವರ್ಷಗಳ ಶಾಲಾ ಶಿಕ್ಷಣವನ್ನು ಕಡ್ಡಾಯವಾಗಿ ಮತ್ತು ಉಚಿತವಾಗಿ ಒದಗಿಸುವ ಜವಾಬ್ದಾರಿಗೆ ಸಮಾಜವು ಬದ್ಧವಾಗಿದೆ. ಆದರೆ ೧೦ ವರ್ಷಗಳ ಶಾಲಾ ಶಿಕ್ಷಣವನ್ನು ಪಡೆಯುವ ಅವಕಾಶ ಅನೇಕ ಮಕ್ಕಳಿಗಿರುವುದಿಲ್ಲ. ಇದಕ್ಕೆ ಬಡತನವನ್ನು ಮುಖ್ಯ ಕಾರಣವನ್ನಾಗಿ ನೀಡುತ್ತಾ ಬರಲಾಗಿದೆ. ಆದರೆ ಮಕ್ಕಳು ಶಾಲೆಯನ್ನು ಬಿಡಲು ಅನೇಕ ಕಾರಣಗಳು ಸಾಧ್ಯ. ಅದಕ್ಕೆ ಬಡತನವನ್ನು ಮಾತ್ರವೇ ಕಾರಣ ಮಾಡುವುದು ಸೂಕ್ತವೆನಿಸುವುದಿಲ್ಲ.

ಅನೇಕ ಸಾಮಾಜಿಕ-ರಾಜಕೀಯ-ಚಾರಿತ್ರಿಕ ಕಾರಣಗಳು ಇದರ ಹಿಂದಿರಲು ಸಾಧ್ಯ. ಮೊದಲ ತಲೆಮಾರಿನ ಅಕ್ಷರಸ್ಥ ಮಕ್ಕಳ ಸಮಸ್ಯೆ ಒಂದು ಬಗೆಯದ್ದಾದರೆ, ವಲಸೆ ಹೋಗುವ ಕುಟುಂಬಗಳಲ್ಲಿನ ಮಕ್ಕಳ ಸಮಸ್ಯೆ ಇದಕ್ಕಿಂತ ಭಿನ್ನವಾಗಿದೆ. ಇತ್ತೀಚಿನ ಅಧ್ಯಯನಗಳು ತೋರಿಸಿರುವಂತೆ ಶಾಲೆಯೊಳಗಿನ ವಾತಾವರಣವೂ ಬಹಳ ಮುಖ್ಯ. ಮಕ್ಕಳಿಗೆ ಶಾಲೆ-ಪಾಠ ಆಕರ್ಷಣೀಯವಾಗುವಂತೆ ಮಾಡುವುದು, ಉಚಿತ ಊಟ, ಪಠ್ಯಪುಸ್ತಕ, ಪಠ್ಯಕ್ರಮ, ಸಮವಸ್ತ್ರ ಮುಂತಾದವುಗಳನ್ನು ಒದಗಿಸುವುದು ಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವುದನ್ನು ಕಡಿಮೆ ಮಾಡಬಲ್ಲವು (ಪ್ರಶಾಂತ ಹೆಚ್.ಡಿ., ೨೦೦೫; ೨೦೦೬). ಆವರ್ತನ ರೀತಿಯ ವಲಸೆಯು ವ್ಯಾಪಕವಾಗಿರುವ ಪ್ರದೇಶಗಳಲ್ಲಿ ಉದ್ಯೋಗ ಭದ್ರತೆಯ ಪಾತ್ರ ತುಂಬಾ ಮುಖ್ಯವಾಗುತ್ತದೆ. ಈ ಸಮಸ್ಯೆಯು ದಲಿತ ಮಕ್ಕಳಲ್ಲಿ ಅಧಿಕವಾಗಿರುವುದು ಅಚ್ಚರಿಯ ಸಂಗತಿಯೇನಲ್ಲ. ಹಾಗೆಯೇ ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳಲ್ಲಿ ಅಧಿಕವಾಗಿರುವುದು ಅಚ್ಚರಿಯ ಸಂಗತಿಯೇನಲ್ಲ. ಹಾಗೆಯೇ, ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳು ಶಾಲೆಯನ್ನು ಮಧ್ಯದಲ್ಲಿ ಬಿಡುವುದು ಅಧಿಕ. ಹೀಗೆ ಶಾಲೆಯನ್ನು ಮಧ್ಯದಲ್ಲಿ ಬಿಡುವ ಮಕ್ಕಳಿಗೆ ಸಂಬಂಧಿಸಿದ ಸಮಸ್ಯೆಗೆ ಅನೇಕ ಮುಖಗಳಿವೆ. ಇದಕ್ಕೆ ಸ್ಥಳೀಯ ಕಾರಣ, ಬೋಧನಾ ವಿಧಾನ, ಪಠ್ಯಕ್ರಮದಲ್ಲಿ ಸ್ಥಳೀಯ ಪರಿಸರದ ಅಂಶಗಳ ಕೊರತೆ, ಇದಕ್ಕೆ ಮೇಲಿನಿಂದ ಕೆಳಕ್ಕೆ ಹರಿದು ಬರುವ ಶೈಕ್ಷಣಿಕ ಅಭಿವೃದ್ಧಿ ಕಾರ್ಯಕ್ರಮಗಳು ಕೂಡ ಕಾರಣವಾಗಿವೆ (ಪ್ರೋಬ್, ೧೯೯೮; ವಿಮಲಾ ರಾಮಚಂದ್ರನ್, ೨೦೦೩; ಪ್ರಶಾಂತ್ ಹೆಚ್.ಡಿ. ೨೦೦೬).

ಬಾಗಲ ಕೋಟೆ ಜಿಲ್ಲೆಯ ಬದಾಮಿ ಮತ್ತು ಜಮಖಂಡಿ ತಾಲ್ಲೂಕುಗಳು ಬಳ್ಳಾರಿ ಜಿಲ್ಲೆಯ ಬಳ್ಳಾರಿ ಮತ್ತು ಹಗರಿಬೊಮ್ಮನಹಳ್ಳಿ ತಾಲ್ಲೂಕುಗಳು, ಬಿಜಾಪುರ ಜಿಲ್ಲೆಯ ಬಿಜಾಪುರ ಮತ್ತು ಬಸವ ಬಾಗೇವಾಡಿ ತಾಲ್ಲೂಕುಗಳು ಹಾಗೂ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕುಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಆದರೆ ಈ ಕೋಷ್ಟಕಗಳಲ್ಲಿ ಎಲ್ಲಾ ಆಡಳಿತ ಶಾಲೆಗಳಿಂದ ಜಿಲ್ಲಾವಾರು ಶಾಲೆ ಬಿಟ್ಟ ಮಕ್ಕಳ ಪ್ರಮಾಣಗಳನ್ನು ಅಧ್ಯಯನಕ್ಕೆ ಒಳಪಡಿಸಲಾಗಿದೆ. ಇದನ್ನು ಈ ಕೆಳಗಿನ ಕೋಷ್ಟಕದಲ್ಲಿ ನೋಡಬಹುದು.

ಕೋಷ್ಟಕ-೩.೭

ಎಲ್ಲಾ ಆದಳಿತ ಶಾಲೆಗಳಿಂದ ಜಿಲ್ಲಾವಾರು ಶಾಲೆ ಬಿಟ್ಟ ಮಕ್ಕಳ ಪ್ರಮಾಣ

ಶಾಲೆ ಬಿಡುವವರ ದರ					ಪ್ರಾಥಮಿಕದಲ್ಲಿ ಶಾಲೆ ಬಿಡುವವರ ದರ (ಇಳಿಕೆಯ ಕ್ರಮದಲ್ಲಿ)		
ಕ್ರಸಂ	ಜಿಲ್ಲೆ	ಪ್ರಾಥಮಿಕ ಹಂತ			ಕ್ರಸಂ	ಜಿಲ್ಲೆ	ಇಳಿಕೆಯ ಕ್ರಮದಲ್ಲಿ
		ಗಂಡು	ಹೆಣ್ಣು	ಒಟ್ಟು			
೧	ಬಾಗಲಕೋಟೆ	೭.೩೧	೬.೬೩	೬.೯೯	೧	ರಾಯಚೂರು	೧೩.೧೮
೨	ಬಳ್ಳಾರಿ	೭.೧೨	೧೦.೫೫	೮.೫೬	೨	ಬಳ್ಳಾರಿ	೮.೫೬
೩	ಬಿಜಾಪುರ	೪.೨೫	೪.೭೩	೪.೪೮	೩	ಭಾಗಲಕೋಟೆ	೬.೯೯
೪	ರಾಯಚೂರು	೧೧.೫೮	೧೪.೮೯	೧೩.೧೮	೪	ಬಿಜಾಪುರ	೪.೪೮

ಮೂಲ: ವಾರ್ಷಿಕ ವರ್ಕ್ ಪ್ಲಾನ್, ಎಸ್.ಎಸ್.ಎ, ೨೦೧೦-೧೧

ಅಧ್ಯಯನ ಮಾಡಿದ ಕ್ಷೇತ್ರಗಳಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಪ್ರಾಥಮಿಕ ಹಂತದಲ್ಲಿ ಶೇಕಡ ೭.೩೧ ಗಂಡುಮಕ್ಕಳು ಮತ್ತು ಶೇಕಡ ೬.೬೨ ಹೆಣ್ಣು ಒಟ್ಟು ಶೇಕಡ ೬.೯೯ ಮಕ್ಕಳು ಶಾಲೆ ಬಿಟ್ಟಿದ್ದಾರೆ.

ಬಳ್ಳಾರಿ ಜಿಲ್ಲೆಯಲ್ಲಿ ಶೇಕಡ ೭.೧೨ ಗಂಡು ಮಕ್ಕಳು ಶೇಕಡ ೧೦.೫೫ ಹೆಣ್ಣು ಮಕ್ಕಳು ಒಟ್ಟು ಶೇಕಡ ೮.೫೬ ಮಕ್ಕಳು ಶಾಲೆ ಬಿಟ್ಟಿದ್ದಾರೆ. ಬಿಜಾಪುರ ಜಿಲ್ಲೆಯಲ್ಲಿ ಶೇಕಡ ೪.೨೫ ಗಂಡು ಮಕ್ಕಳು ಮತ್ತು ಶೇಕಡ ೪.೭೩ ಹೆಣ್ಣು ಮಕ್ಕಳು ಒಟ್ಟು ಶೇಕಡ ೪.೪೮ ರಷ್ಟು ಮಕ್ಕಳು ಶಾಲೆಬಿಟ್ಟಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಶೇಕಡ ೧೧.೫೮ ಗಂಡು ಮಕ್ಕಳು ಮತ್ತು ಶೇಕಡ ೧೪.೮೬ ಹೆಣ್ಣು ಮಕ್ಕಳು ಒಟ್ಟು ೧೩.೧೮ ರಷ್ಟು ಮಕ್ಕಳು ಶಾಲೆಯನ್ನು ಬಿಟ್ಟಿರುವುದನ್ನು ಕಾಣಬಹುದಾಗಿದೆ.

ಕೋಷ್ಟಕ–೩.೭

ಜಿಲ್ಲಾವಾರು ಶಾಲೆಬಿಡುವವರ ದರ

ಕ್ರಸಂ	ಜಿಲ್ಲೆ / ಮುನಿಪಪಲ್	ಶಾಲೆ ಬಿಟ್ಟ ಮಕ್ಕಳ ಸಂಖ್ಯೆ ಮನೆ ಮನೆ ಸಮೀಕ್ಷೆಯಲ್ಲಿದ್ದಂತೆ (ಇಳಿಕೆಯ ಕ್ರಮದಲ್ಲಿ)
೧	ರಾಯಚೂರು	೯೧೧೯
೨	ಬಿಜಾಪುರ	೮೫೬೦
೭	ಬಾಗಲಕೋಟೆ	೬೦೦೮
೧೩	ಬಳ್ಳಾರಿ	೩೪೫೩

(ಸೂಚನೆ: ಕ್ರಸಂ. ಯಲ್ಲಿ ಸೂಚಿಸಿರುವ ಅಂಕಿಗಳು ರಾಜ್ಯದ ಶಾಲೆ ಬಿಟ್ಟ ಮಕ್ಕಳ ಇಳಿಕೆ ಕ್ರಮವಾಗಿರುತ್ತದೆ.)

ಮೂಲ: ವಾರ್ಷಿಕ ವರ್ಕ್ ಪ್ಲಾನ್, ಎಸ್.ಎಸ್.ಎ, ೨೦೧೦–೧೧

ಒಟ್ಟಾರೆಯಾಗಿ ಅಧ್ಯಯನ ಮಾಡಿದ ಕ್ಷೇತ್ರಗಳಲ್ಲಿ ನಾಲ್ಕು ಜಿಲ್ಲೆಯನ್ನು ತುಲನಾತ್ಮಕವಾಗಿ ನೋಡಿದಾಗ ಅತಿ ಹೆಚ್ಚು ಹೆಣ್ಣು ಮತ್ತು ಗಂಡು ಮಕ್ಕಳು ಒಟ್ಟು ೯೧೧೯ ರಾಯಚೂರುಜಿಲ್ಲೆಯಲ್ಲಿ ಪ್ರಾಥಮಿಕ ಹಂತದಲ್ಲಿ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ನಂತರದ ಸ್ಥಾನ ಬಿಜಾಪುರ ಜಿಲ್ಲೆಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳು ಒಟ್ಟು ಸೇರಿ ೮೫೬೦ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ನಂತರದ ಸ್ಥಾನದಲ್ಲಿ ಬಾಗಲಕೋಟೆ ಜಿಲ್ಲೆಯಲ್ಲಿ ಹೆಣ್ಣು ಮತ್ತು ಗಂಡು ಸೇರಿ ಒಟ್ಟು ೬೦೦೮ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ನಂತರದ ಸ್ಥಾನ ಬಳ್ಳಾರಿ ಜಿಲ್ಲೆಯಲ್ಲಿ ಹೆಣ್ಣು ಮತ್ತು ಗಂಡು ಮಕ್ಕಳು ಸೇರಿ ಒಟ್ಟು ೩೪೫೨ ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. ಇಲ್ಲಿ ಗಮನಿಸುವ ಅಂಶವೆಂದರೆ ಅಧ್ಯಯನ ಕ್ಷೇತ್ರದ ಜಿಲ್ಲೆಗಳಲ್ಲಿ ರಾಯಚೂರು ಜಿಲ್ಲೆಯು ಶಾಲೆಬಿಡುವವರ ಪ್ರಮಾಣದಲ್ಲಿ ಮೊದಲ ಸ್ಥಾನದಲ್ಲಿದ್ದು. ಕೊನೆಯ ಸ್ಥಾನದಲ್ಲಿ ಬಳ್ಳಾರಿ ಜಿಲ್ಲೆಯನ್ನು ನೋಡಬಹುದು.

ಪ್ರಾಥಮಿಕ ಹಂತದಲ್ಲಿ ರಾಜ್ಯವು ದಾಖಲಾತಿಯಲ್ಲಿ ಗಣನೀಯ ಸಾಧನೆ ಮಾಡಿದೆ. ಆದರೆ ದಾಖಲಾಗಿ ಶಿಕ್ಷಣವನ್ನು ಮುಗಿಸುವ ಮಧ್ಯದಲ್ಲೇ ಶಾಲೆ ಬಿಡುವ ಮಕ್ಕಳ ಸಂಖ್ಯೆಯು ಗಣನೀಯವಾಗಿದೆ. ಈ ವಿಷಯವನ್ನು ಅಂಕಿ ಅಂಶಗಳು ಸರಿ ತಪ್ಪುಗಳ ಬಗ್ಗೆ ಗುದ್ದಾಡುವ ಬದಲು ಮಗುವಿನ ಶಾಲೆಯ ನೆರೆಹೊರೆ ವ್ಯಾಪ್ತಿಯಲ್ಲಿ ಬರುವ ಅರ್ಹ ವಯಸ್ಸಿನ ಪ್ರತಿಯೊಂದು ಮಗುವು ಶಾಲೆಗಳಿಗೆ ಕಡ್ಡಾಯವಾಗಿ ದಾಖಲಾಗಬೇಕು ಮತ್ತು ನಿಗದಿತ ಸಮಯದ ನಂತರ ಮುಂದಿನ ಹಂತಗಳಿಗೆ ಯಾವುದೇ ಅಡಚಣೆಯಿಲ್ಲದೆ ಹೋಗುವಂತಾಗಬೇಕು. ಈ ನಿಟ್ಟಿನಲ್ಲಿ ಸರ್ಕಾರವು ಶಾಲಾ ಸೌಲಭ್ಯಗಳನ್ನು ಅಧಿಕಗೊಳಿಸುವುದರ ಮತ್ತು ಅದನ್ನು ಉತ್ತಮಪಡಿಸುವುದರ ಮೂಲಕ ಸಮಸ್ಯೆಯನ್ನು ತಡೆಗಟ್ಟಬಹುದೆಂದು ತಿಳಿದಿರುವಂತಿದೆ. ಆದರೆ ಅವಕಾಶಗಳನ್ನು ಒಂದು ಕಡೆ ವಿಸ್ತರಿಸಿದಂತೆ ಇನ್ನೊಂದು ಕಡೆ ಅವುಗಳನ್ನು ಧಾರಣೆ ಮಾಡಿಕೊಳ್ಳಲು ಅವಶ್ಯಕವಾದ ಜನರ ಸಾಮರ್ಥ್ಯವನ್ನು ಉತ್ತಮಪಡಿಸಬೇಕಾಗುತ್ತದೆ. ದಲಿತರು ಹಾಗೂ ಹಿಂದುಳಿದ ವರ್ಗಗಳ ವಿಷಯದಲ್ಲಿ ಇದು ಬಹಳ ಮುಖ್ಯವಾಗಿದೆ. ಈ ಕುರಿತು ಹೆಚ್ಚಿನ ಚರ್ಚೆ ಹಾಗೂ ಹೆಚ್ಚು ಗಂಭೀರವಾದ ಸಂಶೋಧನೆಗಳನ್ನು ನಡೆಸಲು ಕ್ರಮ ಕೈಗೊಳ್ಳಬೇಕಾಗಿದೆ.

ಅಧ್ಯಾಯ ನಾಲ್ಕು

ಭಾಗೀದಾರರ ಮನೋಪ್ರವೃತ್ತಿ

೪.೧ ತಂದೆ – ತಾಯಿ ಪರಿಷತ್ತಿನ ಸದಸ್ಯರ ಅರಿವು

೪..೨ ಎಸ್.ಡಿ.ಎಂ.ಸಿಯ ಸಮಿತಿಯ ಬಗ್ಗೆ ಸದಸ್ಯರ ಮನೋಪ್ರವೃತ್ತಿ

೪.೩ ಯುವಕ/ಯುವತಿ ಸಂಘದ ಪ್ರತಿ ನಿಧಿಗಳು ಮತ್ತು ಸ್ತ್ರೀ ಶಕ್ತಿ ಸ್ವ ಸಹಾಯ ಸಂಘದ ಎಸ್.ಡಿ.ಎಂ.ಸಿ ಪ್ರತಿ ನಿಧಿಗಳು ಎಸ್.ಡಿ.ಎಂ.ಸಿ.ಯ ಬಗ್ಗೆ ಹೊಂದಿರುವ ಮನೋಭಾವನೆ

೪.೪ ಶಿಕ್ಷಕರ ಅಭಿಪ್ರಾಯ

೪.೫ ಪಂಚಾಯಿತಿ ಸದಸ್ಯರ ಅಭಿಪ್ರಾಯ

ಶಾಲಾ ಶಿಕ್ಷಣದ ಅಭಿವೃದ್ಧಿಗೆ ಅಗತ್ಯವಾದ ಭೌತಿಕ, ಬೌದ್ಧಿಕ ಪರಿಸರವನ್ನು ಅಭಿವೃದ್ಧಿಪಡಿಸುವಲ್ಲಿ ಎಸ್.ಡಿ.ಎಂ.ಸಿ. ಪಾತ್ರವನ್ನು ಗುರುತಿಸುವ, ಎಸ್.ಡಿ.ಎಂ.ಸಿ., ಶಿಕ್ಷಕರು ಹಾಗೂ ಮಕ್ಕಳ ಗುಣಾತ್ಮಕ ಕಲಿಕೆಗೆ ಇರುವ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು, ಎಸ್.ಡಿ.ಎಂ.ಸಿ ಪಂಚಾಯತ್ ರಾಜ್ ಸಂಸ್ಥೆಗಳು, ಸ್ತ್ರೀ ಶಕ್ತಿ ಗುಂಪುಗಳು-ಸ್ಥಳೀಯ ಯುವಕ/ತಿ ಮಂಡಳಿಗಳ ಸದಸ್ಯರ ಕಾರ್ಯಕ್ಷಮತೆ ಹಾಗೂ ಸಂಬಂಧವನ್ನು ಅರ್ಥಮಾಡಿಕೊಳ್ಳುವುದು ಮತ್ತು ಎಸ್.ಡಿ.ಎಂ.ಸಿ.ಗೂಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಇರುವ ಸಂಬಂಧವನ್ನು ಗುರುತಿಸುವ ಹಾಗೂ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಯಶೋಗಾಥೆಗಳನ್ನು ಹೇಳಿಕೊಳ್ಳಲು ಒಂದು ವ್ಯವಸ್ಥೆಯು (ಫೇಡರೇಷನ್) ಹೇಗಿರಬೇಕು ಎಂಬುದನ್ನು ಕಂಡುಕೊಳ್ಳುವ ಬಗ್ಗೆ ತಂದೆ - ತಾಯಿ ಪರಿಷತ್ತಿನ ಸದಸ್ಯರು, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಶಿಕ್ಷಕರು ನಡುವೆ ಇರುವ ಸಂಬಂಧಗಳ ಬಗ್ಗೆ ವಿವಿಧ ಭಾಗೀದಾರರ ದೃಷ್ಟಿಕೋನಗಳ ಬಗ್ಗೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಈ ಅಧ್ಯಾಯವು ಸಮೀಕ್ಷೆಯಿಂದ ಸಂಗ್ರಹಿಸಲಾದ ಮಾಹಿತಿಗಳ ವಿಶ್ಲೇಷಣೆ, ಗುಂಪು ಚರ್ಚೆ ಹಾಗೂ ಪ್ರಕರಣ ಅಧ್ಯಯನ(ಕೇಸ್ ಸ್ಟಡಿ)ಗಳಿಗೆ ಆದ್ಯತೆ ನೀಡುತ್ತದೆ. ಈ ಅಧ್ಯಾಯದಲ್ಲಿ ಎಲ್ಲ ೩೫೦ ಶಾಲೆಗಳಲ್ಲಿನ ಮಾಹಿತಿ, ೭ ಕ್ಷೇತ್ರಗಳಲ್ಲಿ ಭಾಗೀದಾರರ ಜತೆ ಚರ್ಚೆ ಹಾಗೂ ಪ್ರಕರಣಗಳ ಅಧ್ಯಯನ/ ಕ್ಷೇತ್ರ ಅಧ್ಯಯನದಿಂದ ಗಮನಿಸಲಾದ ಅಂಶಗಳನ್ನು ವಿವರವಾಗಿ ವಿಶ್ಲೇಷಿಸಲಾಗಿದೆ.

ಈ ಎಲ್ಲಾ ಅಂಶಗಳನ್ನು ನೋಡಲು ಅಧ್ಯಯನದ ಅನುಕೂಲಕ್ಕಾಗಿ ಅಧ್ಯಾಯವನ್ನು ಐದು ಭಾಗವಾಗಿ ವಿಂಗಡಿಸಲಾಗಿದೆ. ಭಾಗ-೧ರಲ್ಲಿ ಶಾಲೆಯಲ್ಲಿ ಓದುತ್ತಿರುವ ಮಕ್ಕಳತಂದೆ-ತಾಯಿಗಳಿಗೆ ಶಾಲೆಯಲ್ಲಿ ನಡೆದಿರುವ ಕಾರ್ಯಕ್ರಮಗಳ ಬಗ್ಗೆ ಅರಿವು, ಮನೆಯಲ್ಲಿ ಕಲಿಕಾ ವಾತಾವರಣ, ಆದರ್ಶ ಶಾಲೆ, ಶಿಕ್ಷಕ ಮತ್ತು ವಿದ್ಯಾರ್ಥಿಗಳ ಬಗ್ಗೆ ಪರಿಕಲ್ಪನೆ, ಶಾಲೆ ಮತ್ತು ಪೋಷಕರ ನಡುವೆ ಸಂಬಂಧದ ಬಗ್ಗೆ ಪಾಲಕರ ದೃಷ್ಟಿಕೋನವನ್ನು ವಿಶ್ಲೇಷಣೆ ಮಾಡಲಾಗಿದೆ, ಭಾಗ-೨ರಲ್ಲಿ, ಎಸ್.ಡಿ.ಎಂ.ಸಿಯ ರಚನೆ, ಎಸ್.ಡಿ.ಎಂ.ಸಿ ಬಗೆಗಿನ ಅರಿವು, ಸದಸ್ಯರ ಪಾಲ್ಗೊಳ್ಳುವಿಕೆ ಹಾಗೂ ಇದೆಲ್ಲದರಿಂದ ಉಂಟಾಗುವ ಸಶಕ್ತತೆಯ ಮಾಹಿತಿ ಜೊತೆಗೆ ಎಲ್ಲ ಪಾಲುದಾರರ ಮಾಹಿತಿ ಮತ್ತು ಅಭಿಪ್ರಾಯಗಳ ಕುರಿತು ಸಮಗ್ರ ಮಾಹಿತಿಯನ್ನು ಅಧ್ಯಯನ ಒಳಗೊಂಡಿದೆ. ಭಾಗ-೩ರಲ್ಲಿ ನಾಮನಿರ್ದೇಶಿತ ಸದಸ್ಯರು ಯುವಕ/ಯುವತಿ ಸಂಘದ ಪ್ರತಿ ನಿಧಿಗಳು ಹಾಗೂ ಸ್ವಸಹಾಯ ಸಂಘದ ಪ್ರತಿನಿಧಿಗಳು ಎಸ್.ಡಿ.ಎಂ.ಸಿ ಆಯ್ಕೆಯ ಪ್ರಕ್ರಿಯೆ, ಎಸ್.ಡಿ.ಎಂ.ಸಿ ಸಮಿತಿಯಲ್ಲಿ ಅವರ ಜವಾಬ್ದಾರಿಗಳು ಮತ್ತು ಶಾಲಾಭಿವೃದ್ಧಿಗೆ ಅವರ ಸಲಹೆ ಹಾಗೂ ಅವರು ಮಾಡಿರುವ ಕೆಲಸಗಳ ಬಗ್ಗೆ ಅವರು ಹೊಂದಿರುವ ಮನೋಭಾವ ಏನು ಎಂಬ ದೃಷ್ಟಿಕೋನವನ್ನು ಇಲ್ಲಿ ಚರ್ಚಿಸಲಾಗಿದೆ. ಭಾಗ - ೪ ರಲ್ಲಿ ಪದ ನಿಮಿತ್ತ ಸದಸ್ಯರಾದ ಸಮುದಾಯವನ್ನು ಶಾಲಾಭಿವೃದ್ಧಿಗೆ ತೊಡಗಿಸಿಕೊಳ್ಳುವಲ್ಲಿ ಮುಖ್ಯ ಶಿಕ್ಷಕರ ಪ್ರಯತ್ನಗಳು, ಪಾಲಕರು ಹಾಗೂ ಎಸ್.ಡಿ.ಎಂ.ಸಿ ಮತ್ತು ಸಮುದಾಯದೊಡನೆ ಯಾವ ಸಂಬಂಧವನ್ನು ಹೊಂದಿದ್ದಾರೆ ಎಂಬುದರ ಬಗ್ಗೆ ಈ ಭಾಗದಲ್ಲಿ ವಿಶ್ಲೇಷಿಲಾಗಿದೆ. ಭಾಗ ೫ರಲ್ಲಿ ಗ್ರಾಮ ಪಂಚಾಯತಿಯ ನಾಗರೀಕ ಸೌಲಭ್ಯ ಸಮಿತಿಯ ಸದಸ್ಯರಾಗಿ ಪಾತ್ರ ಹಾಗೂ ಕರ್ತವ್ಯ, ಪಂಚಾಯತಿಯ ಭಾಗದಲ್ಲಿ ಶಿಕ್ಷಣದ ಬಗ್ಗೆ ಅವರು ಹೊಂದಿರುವ ಮಾಹಿತಿ, ಇದರ ಬಗ್ಗೆ ಅವರ ಸ್ಪಂದನೆ, ಇತರೆ ಅಧಿಕಾರಿಗಳ ಸ್ಪಂದನೆ ಮುಂತಾದ ವಿಚಾರಗಳ ಬಗ್ಗೆ ಇವರ ದೃಷ್ಟಿಕೋನ ಏನುಎಂಬುದನ್ನು ಕುರಿತು ಚರ್ಚಿಸಲಾಗಿದೆ.

೪.೧ ತಂದೆ – ತಾಯಿ ಪರಿಷತ್ತಿನ ಸದಸ್ಯರ ಅರಿವು

ಶಾಲೆಯಲ್ಲಿ ಓದುತ್ತಿರುವ ಮಕ್ಕಳ ತಂದೆ ತಾಯಿಗಳಿಗೆ ಶಾಲೆಯಲ್ಲಿ ನಡೆದಿರುವ ಕಾರ್ಯಕ್ರಮಗಳ ಬಗ್ಗೆ ಅರಿವು, ಮನೆಯಲ್ಲಿ ಕಲಿಕಾ ವಾತಾವರಣ, ಆದರ್ಶ ಶಾಲೆ, ಶಿಕ್ಷಕ ಮತ್ತು ವಿದ್ಯಾರ್ಥಿಗಳ ಬಗ್ಗೆ ಪರಿಕಲ್ಪನೆ, ಶಾಲೆ ಮತ್ತು ಪೋಷಕರ ನಡುವೆ ಸಂಬಂಧದ ಬಗ್ಗೆ ಪಾಲಕರ ದೃಷ್ಟಿಕೋನವನ್ನು ವಿಶ್ಲೇಷಣೆ ಮಾಡಲಾಗಿದೆ.

೪.೧.೧ ಶಾಲೆ ಮತ್ತು ಸಮುದಾಯ

ಯಾವುದೇ ಶಾಲೆಯ ಸುಧಾರಣೆ ಕಾರ್ಯಕ್ರಮದ ಯಶಸ್ಸು, ಶಾಲಾ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ಮತ್ತು ತರಗತಿಯ ಒಳಗೂ ಹಾಗೂ ಹೊರಗು ನಡೆಯುವ ಬೋಧನೆ ಮತ್ತು ಕಲಿಯುವ ಪ್ರಕ್ರಿಯೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯ ಗುಣಮಟ್ಟವನ್ನು ಅವಲಂಬಿಸಿದೆ. ಪೋಷಕರು ಹಾಗೂ ಸಮುದಾಯದ ಇತರರು ಹೆಚ್ಚು ತೊಡಗಿಕೊಂಡಾಗ ಶಾಲೆಗಳು ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ ಮತ್ತು ವಿದ್ಯಾರ್ಥಿಗಳು ಹೆಚ್ಚು ಕಲಿಯುತ್ತಾರೆ.ಶಾಲೆಯ ವ್ಯವಹಾರಗಳಲ್ಲಿ ಸಮುದಾಯವನ್ನು ಒಳಗೊಳಿಸಬೇಕಾದರೆ, ಸಮುದಾಯವನ್ನು ಶಾಲೆಗೆ ಸೆಳೆಯುವಂತಹ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ. ಶಾಲೆಯೊಂದಿಗೆ ಗುರುತಿಸಿಕೊಳ್ಳಲು ಆಸಕ್ತಿ ಹೊಂದಿರುವ ಕೆಲವು ತಂದೆ ತಾಯಿಗಳನ್ನು ಗುರುತಿಸಿ ಅವರನ್ನು ಶಾಲಾ ಅಭಿವೃದ್ಧಿ ಚಟುವಟಿಕೆಯಲ್ಲಿ ತೊಡಗಿಸುವಂತೆ ಮಾಡಬೇಕಾಗಿದೆ. ಶಾಲಾ ಸುಧಾರಣೆಯ ಕಾರ್ಯಕ್ರಮಗಳೊಂದಿಗೆ ಕೈಜೋಡಿಸಲು ಬಯಸುವ ಸ್ಥಳೀಯ ಗ್ರಾಮಸ್ಥರಿಗೆ ಶಾಲಾ ಆವರಣದಲ್ಲಿ ರಾಷ್ಟ್ರೀಯ ಕಾರ್ಯಕ್ರಮಗಳನ್ನು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಕೂಡ ಸಮುದಾಯ ಗಮನಾರ್ಹ ಪಾತ್ರ ವಹಿಸಬಲ್ಲದು. ಸ್ವಾತಂತ್ರ್ಯ ದಿನಾಚರಣೆ, ಗಣರಾಜ್ಯೋತ್ಸವ ಹಬ್ಬ ಮತ್ತು ನಿಯಮಿತವಾದ ಕ್ರಿಡೋತ್ಸವ ಇತ್ಯಾದಿಗಳಿಗೆ ಬಹಳ ಹಣ ಬೇಕಿಲ್ಲ. ಅವಕ್ಕೆ ಒಂದಷ್ಟು ಸಂಘಟನಾತ್ಮಕ ಸಾಮಾರ್ಥ್ಯಗಳು ಹಾಗೂ ನಾಯಕತ್ವ ಗುಣಗಳು ಬೇಕಾಗುತ್ತವೆ ಅಷ್ಟೇ. ಇಂತಹ ಕಾರ್ಯಕ್ರಮಗಳು ಗ್ರಾಮದ ಸಾಮಾಜಿಕ ಗುಂಪುಗಳ ನಡುವೆ ಅಂತರ ಮೀರಿ ನಿಲ್ಲುತ್ತದೆ. ಮತ್ತು ಜನತೆಯನ್ನು ಹತ್ತಿರ ತರುವಲ್ಲಿ ಸಹಕರಿಸುತ್ತದೆ. ಈ ಹಿನ್ನಲೆಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಶಾಲೆಯು ಯಾವ ಯಾವ ಸಮುದಾಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಎಂಬುದನ್ನು ಸಂದರ್ಶನಾರ್ಥಿಗಳಲ್ಲಿ ಕೇಳಿದಾಗ

ಕೋಷ್ಟಕ ೧

ಸಮುದಾಯ ಭಾಗವಹಿಸುವಿಕೆಗೆ ಶಾಲೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ತಂದೆ ತಾಯಿಯರಿಗೆ ಅರಿವು

ಚಟುವಟಿಕೆಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ದಾಖಲಾತಿ ಆಂದೋಲನ ಜಾಥಗಳು	೧೨೧	೨೭.೧	೧೩೫	೨೯.೨	೧೨೭	೨೯.೨	೧೨೨	೨೮.೪	೫೦೫	೨೭.೫

ರಾಷ್ಟ್ರೀಯ ದಿನಾಚರಣೆ ಕಾರ್ಯಕ್ರಮಗಳು	೯೮	೨೧.೯	೧೦೮	೨೩.೪	೭೪	೧೭.೨	೯೯	೨೩.೧	೩೭೯	೨೧.೪
ಮಕ್ಕಳ ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಕ್ರಮಗಳು	೧೧೭	೨೬.೨	೯೮	೨೧.೨	೧೩೨	೩೦.೬	೧೧೧	೨೫.೯	೪೫೮	೨೫.೯
ಸಮುದಾಯದತ್ತ ಶಾಲಾ ಕಾರ್ಯಕ್ರಮ	೧೧೧	೨೪.೮	೧೨೧	೨೬.೨	೯೮	೨೨.೭	೯೭	೨೨.೬	೪೨೭	೨೪.೧

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೨೭.೫ ಶಾಲೆಗಳಲ್ಲಿ ಶಾಲೆಯ ವತಿಯಿಂದ ನಡೆಯುವ ದಾಖಲಾತಿ ಆಂದೋಲನದ ಜಾಥ ಕಾರ್ಯಕ್ರಮಗಳು ನಡೆದಿರುವುದರ ಬಗ್ಗೆ ಸಮುದಾಯದ ಗಮನಕ್ಕೆ ಬಂದಿರುವುದನ್ನು ನಾವು ನೋಡಬಹುದಾಗಿದ್ದು, ಇದನ್ನು ನೋಡಿದಾಗ ಈಗಿರುವ ದಾಖಲಾತಿ ಆಂಧೋಲನದಂತಹ ಕಾರ್ಯಕ್ರಮಗಳು ಸಮುದಾಯದ ಜನರ ಗಮನಕ್ಕೆ ಬರದೆ ನಡೆಯುತ್ತಿವೆ ಎಂಬುದನ್ನು ಗಮನಿಸಬಹುದಾಗಿದೆ.ಹಾಗೆಯೇ ಇದರ ನಂತರ ಮಕ್ಕಳ ಕಾರ್ಯಕ್ರಮಗಳಾದ ಚಿಣ್ಣರ ಮೇಳಾ, ಕ್ರೀಡಾ ಕಾರ್ಯಕ್ರಮಗಳು ಹಾಗೂ ಪ್ರತಿಭಾ ಕಾರಂಜಿಯಂತಹ ಕಾರ್ಯಕ್ರಮಗಳು ಶೇಕಡ ೨೫.೯ ರಷ್ಟು ನಡೆದಿರುವುದನ್ನು ಕಾಣಬಹುದಾಗಿದೆ. ನಂತರದ ಸ್ಥಾನ ಸಮುದಾಯದತ್ತ ಶಾಲಾ ಕಾರ್ಯಕ್ರಮ ಶೇಕಡ ೨೪.೧ ರಷ್ಟು ರಾಷ್ಟ್ರೀಯ ಕಾರ್ಯಕ್ರಮಗಳಾದ ಸ್ವಾತಂತ್ರ್ಯ ದಿನಾಚರಣೆ ಹಾಗೂ ಗಣರಾಜ್ಯೋತ್ಸವ ಕಾರ್ಯಕ್ರಮಗಳಂತಹವುಗಳಲ್ಲಿ ತಲಾ ಶೇಕಡ ೨೧.೧ ರಷ್ಟು ಭಾಗವಹಿಸಿರುವುದನ್ನು ನೋಡಬಹುದು. ಈ ಮೇಲಿನ ವಿಚಾರಗಳನ್ನು ನಾವು ನೋಡಿದಾಗ ಮಕ್ಕಳ ದಾಖಲಾತಿ ಮತ್ತು ಶಾಲೆಯಲ್ಲಿ ತಮ್ಮ ಮಕ್ಕಳ ಪ್ರತಿಭೆಯನ್ನು ಹೊರ ಹಾಕುವಂತಹವುಗಳು ಮತ್ತು ಪಾಲಕರಿಗೆ ಇದರಿಂದ ಮನರಂಜನೆ ದೊರಕುವಂತಹ ಕಾರ್ಯಕ್ರಮಗಳಲ್ಲಿ ಮಾತ್ರ ಭಾಗವಹಿಸುತ್ತಿರುವುದನ್ನು ನಾವು ನೋಡಬಹುದಾಗಿದೆ.

ಒಂದು ಸಾಮಾಜಿಕ ಸಂಸ್ಥೆಯಾಗಿ ಶಾಲೆಗೆ ಸಮಾಜದ ಎಲ್ಲಾ ವರ್ಗಗಳ ಸಹಕಾರ ಬೇಕಾಗುತ್ತದೆ. ಅದರಲ್ಲೂ ಮುಖ್ಯವಾಗಿ ಅವಕಾಶ ವಂಚಿತ ಸಾಮಾಜಿಕ ಗುಂಪುಗಳ ಸಹಕಾರ ಬೇಕಾಗುತ್ತದೆ. ಸಮುದಾಯ ಕಾರ್ಯಕ್ರಮಗಳನ್ನು ಶಾಲಾ ಆವರಣದಲ್ಲಿ ನಡೆಸುವುದರಿಂದ, ಪಾಲಕರು ಶಾಲೆಗೆ ಬರುವಂತಾಗುತ್ತದೆ. ಇದು ತನ್ನಿಂದ ತಾನೇ ಶಾಲೆಯ ಕಡೆ ಗಮನ ಹರಿಸಲು ಅತ್ಯಂತ ಪರಿಣಾಮಕಾರಿ ಮಾಧ್ಯಮ, ಸಮುದಾಯವನ್ನು ಕ್ರಿಯಾಶೀಲಗೊಳಿಸುವಲ್ಲಿ ಎಸ್.ಡಿ.ಎಂ.ಸಿ ಸಮಿತಿ ಹಾಗೂ ಶಿಕ್ಷಕರಿಗೆ ವಿಶೇಷವಾದ ಪಾತ್ರವಿದೆ. ವಾಸ್ತವದಲ್ಲಿ ಒಂದು ಉತ್ತಮ ಶಾಲೆಯು ಸಮುದಾಯವನ್ನು ಜತೆಗೆ ಕರೆದೊಯ್ಯುವುದರ ಮೌಲ್ಯವನ್ನು ಅರಿತಿರುತ್ತದೆ. ಶಾಲೆಗಳಿಗೆ ಪಾಲಕರು ಭೇಟಿ ನೀಡುವುದರಿಂದ ಶಿಕ್ಷಕ, ಪಾಲಕ ಮತ್ತು ಎಸ್.ಡಿ.ಎಂ.ಸಿ ಸಂಬಂಧ ಸುಧಾರಣೆಗೊಳ್ಳಲು ನೆರವಾಗುತ್ತದೆ. ಒಂದು ಪರಿಣಾಮಕಾರಿ ಶಾಲೆಯಾಗಿ ಮೂಡಿಬರಲು ಶಾಲೆಗೆ ಅಗತ್ಯವಿರುವ ಸಾಮಾಜಿಕ ಸಹವರ್ತಿತನಕ್ಕಾಗಿ ಇದು ಒಂದು ತಳಹದಿಯನ್ನು ಒದಗಿಸುತ್ತದೆ.

ಕೋಷ್ಟಕ ೨

ಸಮುದಾಯ ಭಾಗವಹಿಸುವಿಕೆಗೆ ಶಾಲೆ ಹಮ್ಮಿಕೊಂಡಿರುವ ಕಾರ್ಯಕ್ರಮಗಳಲ್ಲಿ ಭಾಗವಹಿಸುವಿಕೆಯ ಬಗ್ಗೆ *ತಂದೆ ತಾಯಿಯರಿಗೆ ಇರುವ ಅರಿವು*

ಚಟುವಟಿಕೆಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ದಾಖಲಾತಿ ಆಂದೋಲನ ಜಾಥಗಳು	೭೮	೧೯.೨	೭೪	೧೭.೫	೬೬	೧೭.೩	೬೮	೧೬.೨	೨೮೬	೧೭.೬
ರಾಷ್ಟ್ರೀಯ ದಿನಾಚರಣೆ ಕಾರ್ಯಕ್ರಮಗಳು	೧೨೧	೨೯.೮	೧೦೮	೨೫.೬	೧೧೧	೨೯.೧	೧೨೧	೨೮.೯	೪೬೧	೨೮.೩
ಮಕ್ಕಳ ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಕ್ರಮಗಳು	೧೫೨	೩೭.೪	೧೪೮	೩೫.೧	೧೩೨	೩೪.೬	೧೫೨	೩೬.೩	೫೮೪	೩೫.೯
ಸಮುದಾಯದತ್ತ ಶಾಲಾ ಕಾರ್ಯಕ್ರಮ	೫೫	೧೩.೫	೯೨	೨೧.೮	೭೨	೧೮.೯	೭೮	೧೮.೬	೨೯೭	೧೮.೨

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಈ ಮೇಲ್ಕಂಡಕಾರ್ಯಕ್ರಮಗಳ ಪೈಕಿ ಯಾವ ಕಾರ್ಯಕ್ರಮಗಳಲ್ಲಿ ಹೆಚ್ಚು ಜನ ಭಾಗವಹಿಸಿದ್ದಾರೆ ಎಂಬುದರ ಬಗ್ಗೆ ತಂದೆ ತಾಯಿಯರಿಗೆ ಇರುವ ಅರಿವಿನ ಬಗ್ಗೆ ಪ್ರತಿಕ್ರಿಯೆ ಕೇಳಿದಾಗ ಶಾಲೆಗಳಲ್ಲಿ ನಡೆಯುವ ಸ್ವಾತಂತ್ರ್ಯ ದಿನಾಚರಣೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ಮಾತ್ರ ಪೋಷಕರು ಹೆಚ್ಚು ಭಾಗವಹಿಸಿರುವುದನ್ನು ನೋಡಬಹುದಾಗಿದ್ದು, ಕ್ರಮವಾಗಿ ಶೇಕಡ ೩೫.೯ ರಷ್ಟು ಮಕ್ಕಳ ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಕ್ರಮಗಳು, ಶೇಕಡ ೨೮.೩ ರಷ್ಟು ರಾಷ್ಟ್ರೀಯ ದಿನಾಚರಣೆ ಕಾರ್ಯಕ್ರಮಗಳು, ಶೇಕಡ ೧೮.೨ ರಷ್ಟು ಸಮುದಾಯದತ್ತ ಶಾಲಾ ಕಾರ್ಯಕ್ರಮ ಹಾಗೂ ಶೇಕಡ ೧೭.೬ ರಷ್ಟು ದಾಖಲಾತಿ ಆಂದೋಲನ ಜಾಥಗಳಲ್ಲಿ ಭಾಗವಹಿಸಿದ್ದಾರೆ.

ಸಮುದಾಯ ಸಹಭಾಗಿತ್ವ ಎನ್ನುವುದು ಮೇಲ್ನೋಟಕ್ಕೆ ಅನುಭವಕ್ಕೆ ಬಾರದ ಒಂದು ಪರಿಕಲ್ಪನೆ. ನೈಜ ಪಾಲುದಾರರ ಸಹಭಾಗಿತ್ವವನ್ನು ಖಾತರಿಪಡಿಸಲು ಎಸ್.ಡಿ.ಎಂ.ಸಿ ಸಮಿತಿಯು ಸ್ಥಳೀಯ ಜನತೆಯನ್ನು ಒಳಗೊಂಡು ಇರುವ ಒಂದು ಸಾಂಸ್ಥಿಕ ವ್ಯವಸ್ಥೆ. ತಾವೇ ಸಂರಚನೆ ಮಾಡಿದಂತಹ ಇಂತಹ ಸಮಿತಿಗಳು ಶಾಲಾ ಆಧಾರಿತ ಚಟುವಟಿಕೆಗಳಲ್ಲಿ ಹೇಗೆ ಕ್ರಿಯಾಶೀಲವಾಗಿದೆ ಎಂಬುದನ್ನು ತಿಳಿದು ಇಂತಹ ಎಲ್ಲಾ ಚಟುವಟಿಕೆಗಳ ಆಯೋಜನೆಗಳಲ್ಲಿ ನೆರವು ನೀಡಬೇಕಾಗುತ್ತದೆ. ಈ ಹಿನ್ನಲೆಯಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಏನು ಕೆಲಸ ಮಾಡುತ್ತಿದೆ ಎಂಬ ವಿಷಯಕ್ಕೆ ಈಕೆಳಕಂಡಂತೆ ಉತ್ತರಿಸಿದ್ದಾರೆ.

ಕೋಷ್ಟಕ ೩.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಯಾವ ಚಟುವಟಿಕೆಗಳನ್ನು ಮಾಡುತ್ತಿದೆ ಎಂಬುದರಬಗ್ಗೆ ತಂದೆ ತಾಯಿಯರಿಗೆ ಇರುವ ಅರಿವು

ಎಸ್.ಡಿ.ಎಂ.ಸಿ ಕೈಗೊಂಡಿರುವ ಕೆಲಸಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ದಾಖಲಾತಿ ಮತ್ತು ಹಾಜರಾತಿ	೭೮	೨೦	೮೯	೨೦.೧	೭೮	೨೨.೯	೯೭	೨೦.೫	೩೪೨	೨೦.೮
ಶಾಲಾ ಮೂಲಭೂತ ಸೌಕರ್ಯಗಳು	೧೩೩	೩೪.೧	೧೪೨	೩೨.೧	೧೦೧	೨೯.೭	೧೬೭	೩೫.೨	೫೪೩	೩೩
ಶಾಲಾ ಆಡಳಿತ ಸುಧಾರಣೆ	೯೨	೨೩.೬	೯೬	೨೧.೭	೧೦೨	೩೦	೮೬	೧೮.೧	೩೭೬	೨೨.೮
ಬಿಸಿಊಟ	೬೮	೧೭.೪	೮೬	೧೯.೫	೪೮	೧೪.೧	೭೦	೧೪.೮	೨೭೨	೧೬.೫
ಮಕ್ಕಳ ಕಲಿಕೆಯ ಬಗ್ಗೆ	೧೯	೪.೯	೨೯	೬.೬	೧೧	೩.೨	೫೪	೧೧.೪	೧೧೩	೬.೯

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಪಾಲಕರ ಪ್ರಕಾರ ಎಸ್.ಡಿ.ಎಂ.ಸಿಗಳು ಅತಿ ಹೆಚ್ಚು ಕೆಲಸವನ್ನು ಬಿಸಿಊಟ ಹಾಗೂ ಮಕ್ಕಳ ದಾಖಲಾತಿ ಹಾಜರಾತಿ ಮತ್ತು ಶಾಲೆಗಳ ಭೌತಿಕ ವಿಚಾರಗಳಲ್ಲಿ ತೊಡಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ. ಶೇಕಡ ೩೩ ರಷ್ಟು ಶಾಲಾ ಸೌಕರ್ಯಗಳ ಬಗ್ಗೆ ಗಮನವನ್ನು ಹೆಚ್ಚು ಹರಿಸಿದ್ದು.ಉಳಿದಂತೆ ದಾಖಲಾತಿ ಮತ್ತು ಹಾಜರಾತಿಗೆ ತಲಾ ಶೇಕಡ ೨೦.೮ ರಷ್ಟು, ಶಾಲಾ ಆಡಳಿತ ಸುಧಾರಣೆಯ ಬಗ್ಗೆ ಶೇಕಡ ೨೨.೮ ರಷ್ಟು ಬಿಸಿಊಟದ ಬಗ್ಗೆ ಶೇಕಡ ೧೬.೫ ರಷ್ಟು ಹಾಗೂ ಶೇಕಡ ೬.೯ ರಷ್ಟು ಮಕ್ಕಳ ಕಲಿಕೆ ಬಗ್ಗೆ ನಿರ್ವಹಿಸುತ್ತಿದ್ದಾರೆ ಎಂಬ ಭಾವನೆ ಇದೆ. ಇದನ್ನು ನಾವು ಸೂಕ್ಷ್ಮವಾಗಿ ವಿಶ್ಲೇಷಿಸಿದಾಗ ಅತಿ ಹೆಚ್ಚು ಕೆಲಸವನ್ನು ಶಾಲೆಯ ಭೌತಿಕ ಮೂಲ ಸೌಕರ್ಯಗಳ ಬಗ್ಗೆ ಹೆಚ್ಚು ಕೆಲಸ ನಿರ್ವಹಿಸುತ್ತಿದ್ದು. ಮಕ್ಕಳ ಕಲಿಕೆಯಂತಹ ಕೆಲಸಗಳಲ್ಲಿ ಕಡಿಮೆ ತೊಡಗಿಸಿಕೊಂಡಿದ್ದಾರೆ ಎಂಬುದನ್ನು ಮನಗಾಣಬೇಕಾಗಿದೆ.

೪.೧.೨ ತಂದೆ – ತಾಯಿ ಪರಿಷತ್ತಿನ ಸಭಾ ಕಲಾಪಗಳ ಬಗ್ಗೆ ಅರಿವು

ಮೂರು ತಿಂಗಳಿಗೊಮ್ಮೆ ಎಸ್.ಡಿ.ಎಂ.ಸಿಯು ತಂದೆ ತಾಯಿ ಪರಿಷತ್ತಿನ ಸಭೆ ಮಾಡಬೇಕಾಗಿದ್ದು, ಇದು ಅವರ ಕರ್ತವ್ಯ ಕೂಡ ಆಗಿದೆ. ಈ ಸಭೆಯಲ್ಲಿ ಶಾಲೆಯ ಎಲ್ಲಾ ವಿಚಾರಗಳ ಜೊತೆಗೆ ಮಕ್ಕಳ ಕಲಿಕೆ ಮತ್ತು ಬೇರೆಲ್ಲಾ ವಿಚಾರಗಳ ಬಗ್ಗೆ ಚರ್ಚಿಸಬೇಕಾಗಿರುವುದರಿಂದ ಸಭೆಯನ್ನು

ಆಯೋಜಿಸಬೇಕಾಗಿದೆ. ಇದರ ಅರಿವಿನ ಬಗ್ಗೆ ತಿಳಿಯುವ ಉದ್ದೇಶದಿಂದ ಸಭೆಯು ನಡೆಯುತ್ತಿದೆಯೇ ಎಂಬುದರ ಬಗ್ಗೆ ಅಭಿಪ್ರಾಯವನ್ನು ಸಂಗ್ರಹಿಸಲಾಯಿತು.

ಕೋಷ್ಟಕ ೪

ತಂದೆ ತಾಯಿ ಪರಿಷತ್ತಿನ ಸಭಾ ಕಲಾಪಗಳ ಬಗ್ಗೆ ತಂದೆ ತಾಯಿಗಳಿಗೆ ಅರಿವು

ಜಿಲ್ಲೆ	ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೧೬೮	೩೩.೬	೩೪೮	೬೭.೪
ಬಾಗಲಕೋಟೆ	೧೨೨	೨೫.೫	೩೫೬	೭೪.೫
ಬಳ್ಳಾರಿ	೧೬೫	೩೭.೩	೨೭೭	೬೨.೭
ರಾಯಚೂರು	೧೧೧	೬೦.೩	೭೩	೩೯.೭
ಎಲ್ಲಾ ಜಿಲ್ಲೆಗಳು	೫೬೬	೩೪.೯	೧೦೫೪	೬೫.೧

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ತಂದೆ – ತಾಯಿಂದರ ಪರಿಷತ್ ಸಭೆ ಸರಿಯಾಗಿ ಕಾಲಕಾಲಕ್ಕೆ ನಡೆಯುತ್ತಿದೆ ಎಂಬುದರ ಬಗ್ಗೆ ಶೇಕಡ ೩೪.೯ ರಷ್ಟು ಪಾಲಕರು ನಡೆಯುತ್ತಿದೆ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಉಳಿದ ಶೇಕಡ ೬೫.೧ ರಷ್ಟು ಪಾಲಕರು ಇಲ್ಲ ಎಂಬ ಉತ್ತರವನ್ನು ನೀಡಿದ್ದಾರೆ.

ಕೋಷ್ಟಕ ೫

ತಂದೆ ತಾಯಿ ಸಭೆಯಲ್ಲಿ ಭಾಗವಹಿಸುವಿಕೆ.

	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
೨೦ಕ್ಕಿಂತಲೂ ಕಡಿಮೆ	೧೬೯	೭೭.೫	೧೯೮	೮೮.೮	೨೦೨	೭೮.೬	೭೮	೮೬.೭	೬೪೭	೮೨.೧
೨೦ ರಿಂದ ೫೦	೪೪	೨೦.೨	೨೫	೧೧.೨	೫೨	೨೦.೨	೧೨	೧೩.೩	೧೩೩	೧೬.೯
೫೧ ರಿಂದ ೧೦೦	೫	೨.೩	೦	೦	೩	೧.೨	೦	೦	೮	೧
೧೦೦೧ ರಿಂದ ೨೦೦	೦	೦	೦	೦	೦	೦	೦	೦	೦	೦
೨೦೦ಕ್ಕೂ ಹೆಚ್ಚು	೦	೦	೦	೦	೦	೦	೦	೬	೦	೦

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ತಂದೆ – ತಾಯಿ ಪರಿಷತ್‌ನ ಸಭೆಯಲ್ಲಿ ೨೦ ಕ್ಕಿಂತಲೂಕಡಿಮೆಪಾಲಕರು ಶೇಕಡ ೮೨.೧% ರಷ್ಟು ಜನರು ಸೇರುತ್ತಿದ್ದು, ೨೦ ರಿಂದ ೫೦ ರಷ್ಟು ಸಂಖ್ಯೆಯಲ್ಲಿ ಶೇಕಡ ೧೬.೧ ರಷ್ಟು ಜನ ಪಾಲಕರು ಸೇರುತ್ತಿದ್ದಾರೆ ಎಂಬುದನ್ನು ತಿಳಿಸಿದ್ದಾರೆ, ೫೦ ರಿಂದ ೧೦೦ ಜನ ಪಾಲಕರು ಸೇರುತ್ತಾರೆ ಎಂದು ಶೇಕಡ ೧ ರಷ್ಟು ಜನರು ಪ್ರತಿಕ್ರಿಯಿಸಿದ್ದು, ಉಳಿದಂತೆ ೧೦೦ ರಿಂದ ೨೦೦ ಜನರು ಪಾಲ್ಗೊಳ್ಳುವವರ ಸಂಖ್ಯೆ ಹಾಗೂ ೨೦೦ಕ್ಕೂ ಹೆಚ್ಚು ಎನ್ನುವ ಪ್ರಶ್ನೆಗೆ ಇಲ್ಲ ಎಂದು ಜನರು ಪ್ರತಿಕ್ರಿಯಿಸಿದ್ದಾರೆ. ಇದನ್ನು ನೋಡಿದಾಗ ತಂದೆ ತಾಯಿ ಪರಿಷತ್ತಿನ ಸಭೆಗಳಲ್ಲಿ ಪಾಲ್ಗೊಳ್ಳುವವರ ಸಂಖ್ಯೆ ಕಡಿಮೆ ಇದ್ದು ಇದು ಹೆಚ್ಚು ಮಾಡಲು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.

೪.೧.೩ ತಂದೆ ತಾಯಿ ಪರಿಷತ್ತಿನ ಸಭೆಯಲ್ಲಿ ಚರ್ಚಿತ ವಿಷಯಗಳು

ತಂದೆ ತಾಯಿ ಪರಿಷತ್ತಿನ ಸಭೆಯಲ್ಲಿ ಯಾವ ವಿಷಯಗಳ ಬಗ್ಗೆ ಚರ್ಚೆಯಾಗುತ್ತದೆ ಎಂಬುದರ ಬಗ್ಗೆ ಅಭಿಪ್ರಾಯವನ್ನು ಕೇಳಿದಾಗ ಎಲ್ಲರು ತಿಳಿಸಿದ ವಿಷಯಗಳನ್ನು ಇಲ್ಲಿ ಕ್ರೋಢೀಕರಿಸಲಾಗಿದೆ. ಅವುಗಳೆಂದರೆ ಮಕ್ಕಳು ಮನೆಯಿಂದ ಶಾಲೆಗೆ ಬರುವಾಗ ಸಮವಸ್ತ್ರ ಹಾಕಿಕೊಂಡು ಬರುವುದರ ಬಗ್ಗೆ, ಮಕ್ಕಳ ನಿಯಮಿತ ಮತ್ತು ಕ್ರಮಬದ್ಧ ಹಾಜರಾತಿಯ ಬಗ್ಗೆ, ಶಾಲೆಯಲ್ಲಿ ನಡೆಯುವ ಬಿಸಿಊಟ ಮಕ್ಕಳು ಉಪಯೋಗಿಸಿಕೊಳ್ಳುವುದರ ಬಗ್ಗೆ, ಶಾಲೆಯಲ್ಲಿ ಮೂಲಭೂತ ಸೌಕರ್ಯ ಇಲ್ಲದೆ ಆಗುವ ತೊಂದರೆಗಳ ಬಗ್ಗೆ, ಶಾಲಾ ಆವರಣದ ಸ್ವಚ್ಛತೆ, ಶಾಲೆಗೆ ಶಿಕ್ಷಕರ ಕ್ರಮಬದ್ಧ ಹಾಜರಾತಿ, ಮಕ್ಕಳ ಕಲಿಕೆಯಲ್ಲಿ ತಂದೆ ತಾಯಿರ ಸಹಕಾರ ಚರ್ಚೆಗಳು ನಡೆಯುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪.೧.೪ ಶಾಲೆಯ ವಿವಿಧ ಕಾರ್ಯಕ್ರಮಗಳು ಬಗ್ಗೆ ತಿಳುವಳಿಕೆ

ಶಾಲೆಯಲ್ಲಿ ನಡೆಯುವ ಕಾರ್ಯಕ್ರಮಗಳ ಬಗ್ಗೆ ಸಮುದಾಯದ ಜನರಿಗೆ ತಿಳಿಯುವುದು ಬಹಳ ಮಹತ್ವವಾದ ಅಂಶ ಈ ವಿಷಯಗಳು ಹೇಗೆ ತಿಳಿಯುತ್ತವೆ ಎಂಬ ವಿಷಯದ ಬಗ್ಗೆ ಅಭಿಪ್ರಾಯವನ್ನು ಕ್ರೋಢೀಕರಿಸಿದಾಗ, ಈ ಕೆಳಕಂಡಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕೋಷ್ಟಕ ೬

ಶಾಲೆಯ ವಿವಿಧ ಕಾರ್ಯಕ್ರಮಗಳು ಬಗ್ಗೆ ತಿಳುವಳಿಕೆ

	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಮಕ್ಕಳಿಂದ	೧೯೮	೭೫.೬	೧೭೯	೯೦.೪	೨೦೯	೮೮.೨	೬೩	೭೫	೬೪೯	೮೩.೧
ಶಿಕ್ಷಕರು	೨೨	೮.೪	೧೦	೫.೧	೬	೨.೫	೮	೯.೫	೪೬	೫.೯
ನೆರೆಹೊರೆಯವರಿಂದ	೪೨	೧೬	೯	೪.೫	೨೨	೯.೩	೧೩	೧೫.೫	೮೬	೧೧

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶಾಲೆಯಲ್ಲಿ ನಡೆಯುವ ವಿವಿಧ ರೀತಿಯ ಶೈಕ್ಷಣಿಕ ಕಾರ್ಯಕ್ರಮಗಳು ತಂದೆ-ತಾಯಿ ಪರಿಷತ್ತಿನ ಸದಸ್ಯರಿಗೆ ಯಾವ ಮೂಲಗಳಿಂದ ಸಿಗುತ್ತವೆ ಎಂಬುದರ ಬಗ್ಗೆ ಕೇಳಿದಾಗ ಶೇಕಡ ೮೩.೧ ರಷ್ಟು ಮಾಹಿತಿಯು ಶಾಲೆಗೆ ಹೋಗುತ್ತಿರುವ ಮಕ್ಕಳಿಂದ ದೊರುಕುತ್ತಿವೆ ಎಂಬುದನ್ನು ತಿಳಿಸಿದ್ದಾರೆ. ಉಳಿದಂತೆ ಶೇಕಡ ೫.೯ ರಷ್ಟು ಸದಸ್ಯರು ಶಿಕ್ಷಕರು ದಾರಿಯಲ್ಲಿ ಹೋಗುವಾಗ ಹಾಗೂ ನೇರವಾಗಿ ಸಿಕ್ಕಿದಾಗ ತಿಳಿಸುತ್ತಾರೆ ಎಂಬ ಪ್ರತಿಕ್ರಿಯೆಯನ್ನು. ಉಳಿದಂತೆ ಪಕ್ಕದ ಮನೆಯವರು ಹಾಗೂ ಸ್ನೇಹಿತರಿಂದ ಮಾಹಿತಿ ಸಿಗುತ್ತದೆ ಎಂದುಶೇಕಡ ೧.೧ರಷ್ಟು ಜನರು ಪ್ರತಿಕ್ರಿಯಿಸಿದ್ದಾರೆ.

೪.೧.೫ ಶಾಲಾ ಕಾರ್ಯಕ್ರಮಕ್ಕೆ ಭಾಗವಹಿಸುವಿಕೆ

ಶಾಲಾ ಕಾರ್ಯಕ್ರಮಗಳಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸದೆ ಇರಲು ಕಾರಣಗಳೇನು ಎಂಬುದರ ಬಗ್ಗೆ ವಿಷಯಗಳನ್ನು ಇಲ್ಲಿ ಕ್ರೋಢೀಕರಿಸಲಾಗಿದೆ.

ಕೋಷ್ಟಕ ೭

ಶಾಲಾ ಕಾರ್ಯಕ್ರಮಕ್ಕೆ ತಂದೆ ತಾಯಿಯರ ಭಾಗವಹಿಸುವಿಕೆ

	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಆಹ್ವಾನ ಮತ್ತು ಮಾಹಿತಿ ದೊರೆಯದೆ ಇರುವುದು	೧೨೯	೪೧.೭	೧೪೨	೪೪.೧	೧೭೨	೪೪.೮	೭೭	೫೪.೨	೫೨೦	೪೪.೯
ಗೌರವ ನೀಡದಿರುವುದು	೩೮	೧೨.೩	೬೪	೧೯.೯	೫	೧.೩	೩	೨.೧	೧೧೦	೯.೫
ನಮ್ಮ ಪಾತ್ರ ಏನು ಇಲ್ಲ	೪೨	೧೩.೬	೩೮	೧೧.೮	೯೨	೨೪	೧೯	೧೩.೪	೧೯೧	೧೬.೫
ತಾರತಮ್ಯ	೨೧	೬.೮	೧೦	೩.೧	೭	೧.೮	೦	೦	೩೮	೩.೩
ದೇಣಿಗೆ ಅಥವಾ ಕೊಡುಗೆ ನೀಡಲು ಸಾಧ್ಯವಾಗುವುದಿಲ್ಲ	೭೯	೨೫.೬	೬೮	೨೧.೧	೧೦೮	೨೮.೧	೪೩	೩೦.೩	೨೯೮	೨೫.೮

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೪೪.೯ ರಷ್ಟು ಜನರು ಮಾಹಿತಿ ಹಾಗೂ ಆಹ್ವಾನವಿಲ್ಲದಿರುವುದರಿಂದ ಭಾಗವಹಿಸಲು ಆಗುತ್ತಿಲ್ಲ ಎಂದು, ಶೇಕಡ ೧೬.೫ ರಷ್ಟು ಜನರು ಕಾರ್ಯಕ್ರಮಗಳಲ್ಲಿ ನಮಗೆ ಅರ್ಥಪೂರ್ಣ ಪಾತ್ರವೇ ಇಲ್ಲ ಎಂಬ ಪ್ರತಿಕ್ರಿಯೆಯನ್ನು ನೀಡಿದ್ದಾರೆ. ಶೇಕಡ ೩.೩ %ರಷ್ಟು ಜನರು ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಸಂದರ್ಭದಲ್ಲಿ ಸರಿಯಾದ ಗೌರವ ಸಿಗದಿರುವುದು ಮತ್ತು ಬಡವ, ಶ್ರೀಮಂತ ಮತ್ತು ಮೇಲ್ವರ್ಗ, ಕೆಳವರ್ಗ ಎಂಬ ತಾರತಮ್ಯ ಮಾಡುತ್ತಾರೆ ಎಂಬ ಮನೋಭಾವವನ್ನು ವ್ಯಕ್ತಪಡಿಸಿದ್ದಾರೆ.

ಶೇಕಡ ೨೫.೮ ರಷ್ಟು ಜನರು ಕಾರ್ಯಕ್ರಮಗಳಿಗೆ ಕೇಳುವ ಕೊಡುಗೆ ಮತ್ತು ದೇಣಿಗೆ ನೀಡಲು ನಾವು ಶಕ್ತರಲ್ಲ ಎಂಬ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

೪.೧.೬ ಮನೆಯಲ್ಲಿ ಕಲಿಕಾ ವಾತಾವರಣ

ಮಕ್ಕಳು ಶಾಲೆಯ ಬಗ್ಗೆ ತಂದೆ ತಾಯಿಗಳ ಜೊತೆ ಅಥವಾ ಇತರ ಸದಸ್ಯರ ಜೊತೆ ಜೊತೆ ಶಾಲೆಯಲ್ಲಿ ನಡೆದ ವಿದ್ಯಾಮಾನಗಳ ಬಗ್ಗೆ ಚರ್ಚಿಸುವುದು ವಾಡಿಕೆ. ಇದರ ಬಗ್ಗೆ ಪೋಷಕರು ಕೂಡ ಉತ್ತೇಜಿಸಬೇಕಾಗುತ್ತದೆ. ಈ ಹಿನ್ನಲೆಯಲ್ಲಿ

ಕೋಷ್ಟಕ ೮

ಮಕ್ಕಳು ಶಾಲೆಯ ಬಗ್ಗೆ ತಂದೆ ತಾಯಿಗಳ ಜೊತೆ ಅಥವಾ ಇತರ ಸದಸ್ಯರ ಜೊತೆ ಚರ್ಚೆಯ ಬಗ್ಗೆ ಅಭಿಪ್ರಾಯ

ಜಿಲ್ಲೆ	ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೧೬೨	೪೭.೬	೧೭೮	೫೨.೪
ಬಾಗಲಕೋಟೆ	೧೭೯	೫೨.೬	೧೬೧	೪೭.೪
ಬಳ್ಳಾರಿ	೧೨೯	೪೦.೨	೧೯೨	೫೯.೮
ರಾಯಚೂರು	೭೯	೪೬.೨	೯೨	೫೩.೮
ಎಲ್ಲಾ ಜಿಲ್ಲೆಗಳು	೫೪೯	೪೬.೮	೬೨೩	೫೩.೨

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶಾಲೆಯಿಂದ ಮಕ್ಕಳು ಮನೆಗೆ ಬಂದ ನಂತರ ಪಾಲಕರ ಜೊತೆ ಮಕ್ಕಳು ಶಾಲೆಯ ಬಗ್ಗೆ ಮಾತನಾಡುತ್ತಾರೆಯೇ ಎಂಬುದರ ಬಗ್ಗೆ ಪ್ರತಿಕ್ರಿಯೆಯನ್ನು ತಂದೆ ತಾಯಿ ಪರಿಷತ್ತಿನ ಸದಸ್ಯರಿಂದ ಪ್ರತಿಕ್ರಿಯೆಯನ್ನು ಕೇಳಿದಾಗ ಶೇಕಡ ೪೬.೮ ರಷ್ಟು ಪಾಲಕರು ಹೌದು ಎಂಬ ಪ್ರತಿಕ್ರಿಯೆಯನ್ನು ಶೇಕಡ ೫೩.೨ ರಷ್ಟು ಪಾಲಕರು ಇಲ್ಲ ಎಂಬ ಪ್ರತಿಕ್ರಿಯೆಯನ್ನು ನೀಡಿರುತ್ತಾರೆ. ಮುಂದುವರಿದು ಹೌದಾದಲ್ಲಿ ಯಾವಾಗ ಮಾತನಾಡುತ್ತಾರೆ ಎಂಬುದನ್ನು ಕೇಳಿದಾಗ ಶೇಕಡ ೬೯.೧ ರಷ್ಟು ಪಾಲಕರು ಒಮ್ಮೊಮ್ಮೆ ಮಾತನಾಡುತ್ತಾರೆ. ಶೇಕಡ ೨೭.೯ ರಷ್ಟು ಯಾವಗಲೂ ಇಲ್ಲ ಎಂಬ ಪ್ರತಿಕ್ರಿಯೆಯನ್ನು ನೀಡಿದ್ದಾರೆ. ಶಾಲೆಯಿಂದ ಮಕ್ಕಳು ಮನೆಗೆ ಬಂದ ನಂತರ ಪಾಲಕರ ಜೊತೆ ಮಕ್ಕಳು ಶಾಲೆಯ ಬಗ್ಗೆ ಮಾತನಾಡುತ್ತಾರೆಯೇ ಎಂಬುದರ ಬಗ್ಗೆ ಪ್ರತಿಕ್ರಿಯೆಯನ್ನು ತಂದೆ ತಾಯಿ ಪರಿಷತ್ತಿನ ಸದಸ್ಯರಿಂದ ಪ್ರತಿಕ್ರಿಯೆಯನ್ನು ಕೇಳಿದಾಗ ಇಲ್ಲ ಎಂದು ಪ್ರತಿಕ್ರಿಯೆ ನೀಡಿದ ಶೇಕಡ ೨೭.೯ ರಷ್ಟು ಪಾಲಕರು ನಮಗೆ ಸಮಯ ಇಲ್ಲ ಎಂದು ಶೇಕಡ ೨೩.೧ ರಷ್ಟು ಜನರು ನಮಗೆ ಆಸಕ್ತಿ ಇಲ್ಲ ಎಂದು ಶೇಕಡ ೧೨.೧ರಷ್ಟು ಜನರು ಕುಟುಂಬದವರಿಗೆ ಸಮಯವಿಲ್ಲದಿರುವುದು ಎಂದು ಶೇಕಡ ೩೭.೯ ರಷ್ಟು ಜನರು ಯಾವುದೇ ಕಾರಣವನ್ನು ತಿಳಿಸಿಲ್ಲದಿರುವುದು ನೋಡಬಹುದಾಗಿದೆ.

ಕೋಷ್ಟಕ ೯

ಶಾಲೆಯ ಬಗ್ಗೆ ಮಕ್ಕಳೊಂದಿಗೆ ತಂದೆ ತಾಯಿಗಳ ಚರ್ಚೆ

	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಮಕ್ಕಳ ಕಲಿಕೆಯ ಬಗ್ಗೆ	೧೯೨	೫೨	೧೮೭	೬೦.೭	೧೩೭	೫೩.೭	೯೨	೫೮.೬	೬೦೮	೫೫.೮
ಶಿಕ್ಷಕರ ಬಗ್ಗೆ	೨೨	೬	೧೨	೩.೯	೫	೨	೨	೧.೩	೪೧	೩.೮
ಸ್ನೇಹಿತರ ಬಗ್ಗೆ	೬೮	೧೮.೪	೩೮	೧೨.೩	೩೭	೧೪.೫	೨೧	೧೩.೪	೧೬೪	೧೫.೧
ಮಕ್ಕಳ ಅವಶ್ಯಕತೆಗಳ ಬಗ್ಗೆ	೪೯	೧೩.೩	೫೨	೧೬.೯	೪೯	೧೯.೨	೨೭	೧೭.೨	೧೭೭	೧೬.೩
ಆಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಬಗ್ಗೆ	೩೮	೧೦.೩	೧೯	೬.೨	೨೭	೧೦.೬	೧೫	೯.೬	೯೯	೯.೧

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶಾಲೆಯಿಂದ ಮಕ್ಕಳು ಮನೆಗೆ ಬಂದ ನಂತರ ಪಾಲಕರ ಜೊತೆ ಮಕ್ಕಳು ಶಾಲೆಯ ಬಗ್ಗೆ ಮಾತನಾಡುವಾಗ ಶಾಲೆಯ ಯಾವ ವಿಷಯದ ಬಗ್ಗೆ ಚರ್ಚಿಸುತ್ತೀರಿ ಎಂಬ ಪ್ರಶ್ನೆಗೆ ಪ್ರತಿಕ್ರಿಯೆ ಬಯಸಿದಾಗ ಶೇಕಡ ೫೫.೮ ರಷ್ಟು ಕಲಿಕೆಯ ಪ್ರಗತಿಯ ಬಗ್ಗೆ ಶೇಕಡ ೩.೮ ರಷ್ಟು ಶಾಲೆಯ ಶಿಕ್ಷಕರ ಬಗ್ಗೆ, ಶೇಕಡ ೧೬.೩ ರಷ್ಟು ಮಕ್ಕಳ ವೈಯಕ್ತಿಕ ಅವಶ್ಯಕತೆಯ ಬಗ್ಗೆ ಶೇಕಡ ೯.೧ ರಷ್ಟು ಶಾಲೆಯ ಬೇರೆ ಬೇರೆ ಕಾರ್ಯಕ್ರಮಗಳ ಬಗ್ಗೆ ಶೇ ೧೫.೧ ಇರಷ್ಟು ಮಕ್ಕಳ ಸ್ನೇಹಿತರ ಬಗ್ಗೆ ಚರ್ಚಿಸುತ್ತೇವೆ ಎಂದು ಪ್ರತಿಕ್ರಿಯಿಸಿದ್ದಾರೆ.

೪.೧.೭ಶಾಲೆ ಮತ್ತು ಪೋಷಕರ ನಡುವೆ ಸಂಬಂಧ

ಶಾಲೆಯೊಂದರ ಉತ್ತಮ ಸಾಧನೆಯು ಬಹುಮಟ್ಟಿಗೆ ಶಿಕ್ಷಕರ ನಿರ್ವಹಣೆ ಮೇಲೆ ಅವಲಂಬಿಸಿರುತ್ತದೆ. ಸಮುದಾಯ ಹಾಗೂ ಶಿಕ್ಷಕರ ನಡುವಣ ಸಂಬಂಧವು ಅತ್ಯಂತ ಸೂಕ್ಷ್ಮವಾದುದು. ಸಮುದಾಯದೊಂದಿಗೆ ಹೆಚ್ಚಿನ ಸಂಪರ್ಕ ಇರುವಾಗ ಇನ್ನಷ್ಟು ಹೆಚ್ಚಿನ ಉತ್ತರದಾಯಿತ್ವಕ್ಕೆ ಅದು ಒಂದು ಚೌಕಟ್ಟನ್ನು ಒದಗಿಸುತ್ತದೆ.

ಕೋಷ್ಟಕ ೧೦

ಶಾಲೆಯ ಶಿಕ್ಷಕರು ಪೋಷಕರ ಮನೆ ಭೇಟಿಯ ಬಗ್ಗೆ ತಂದೆ ತಾಯಿಯರ ಅರಿವು

ಜಿಲ್ಲೆ	ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೬೮	೨೦.೫	೨೬೪	೭೯.೫
ಬಾಗಲಕೋಟೆ	೨೨	೭.೯	೨೫೭	೯೧.೧
ಬಳ್ಳಾರಿ	೬೫	೧೯.೩	೨೭೨	೮೦.೭
ರಾಯಚೂರು	೧೧	೧೩.೧	೭೩	೮೬.೯
ಎಲ್ಲಾ ಜಿಲ್ಲೆಗಳು	೧೬೬	೧೬.೧	೮೬೬	೮೩.೯

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶಾಲೆಯ ಶಿಕ್ಷಕರು ನಿಮ್ಮ ಮನೆಗಳಿಗೆ ಬೇಟಿ ನೀಡುತ್ತಾರೆಯೇ ಎಂಬ ಪ್ರತಿಕ್ರಿಯೆಗೆ ಶೇಕಡ ೧೬.೧ ರಷ್ಟು ಜನರು ಹೌದು ಎಂದು ಶೇಕಡ ೮೩.೯ ರಷ್ಟು ಜನರು ಇಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ. ಇದನ್ನು ಗಮನಿಸಿದಾಗ ಪೋಷಕರ ದೃಷ್ಠಿಯಲ್ಲಿ ಶಿಕ್ಷಕ ಹಾಗೂ ಸಮುದಾಯದ ಅನುಸಂಧಾನವಾಗುತ್ತಿಲ್ಲದಿರುವುದು ಹಾಗೂ ಸಮುದಾಯದಿಂದ ಶಿಕ್ಷಕ ವಿಮುಖನಾಗುತ್ತಿರುವುದನ್ನು ಗಮನಿಸಬಹುದಾಗಿದೆ.

೪..೨ ಎಸ್.ಡಿ.ಎಂ.ಸಿಯ ಸಮಿತಿಯ ಬಗ್ಗೆ ಸದಸ್ಯರ ಮನೋಪ್ರವೃತ್ತಿ

ಈ ಅಧ್ಯಾಯವು ಸಮೀಕ್ಷೆಯಿಂದ ಸಂಗ್ರಹಿಸಲಾದ ಮಾಹಿತಿಗಳ ವಿಶ್ಲೇಷಣೆ, ಗುಂಪು ಚರ್ಚೆ ಹಾಗೂ ಪ್ರಕರಣ ಅಧ್ಯಯನ(ಕೇಸ್ ಸ್ಟಡಿ)ಗಳಿಗೆ ಆದ್ಯತೆ ನೀಡುತ್ತದೆ. ಈ ಅಧ್ಯಾಯದಲ್ಲಿ ಎಲ್ಲ ೩೫೦ ಶಾಲೆಗಳಲ್ಲಿನ ಮಾಹಿತಿ, ೭ ಕ್ಷೇತ್ರಗಳಲ್ಲಿ ಪ್ರಕರಣಗಳ ಅಧ್ಯಯನ/ ಕ್ಷೇತ್ರ ಅಧ್ಯಯನದಿಂದ ಗಮನಿಸಲಾದ ಅಂಶಗಳನ್ನು ವಿವರವಾಗಿ ವಿಶ್ಲೇಷಿಸಲಾಗಿದೆ. ಎಸ್.ಡಿ.ಎಂ.ಸಿಯ ರಚನೆ, ಎಸ್.ಡಿ.ಎಂ.ಸಿ ಬಗೆಗಿನ ಅರಿವು, ಸದಸ್ಯರ ಪಾಲ್ಗೊಳ್ಳುವಿಕೆ ಹಾಗೂ ಇದೆಲ್ಲದರಿಂದ ಉಂಟಾಗುವ ಸಶಕ್ತತೆಯ ಮಾಹಿತಿ ಜೊತೆಗೆ ಎಲ್ಲ ಪಾಲುದಾರರ ಮಾಹಿತಿ ಮತ್ತು ಅಭಿಪ್ರಾಯಗಳ ಕುರಿತು ಸಮಗ್ರ ಮಾಹಿತಿಯನ್ನು ಅಧ್ಯಯನ ಒಳಗೊಂಡಿದೆ.

ಅಧ್ಯಯನದಲ್ಲಿ ಉಲ್ಲೇಖಿಸಿದ ಹಾಗೇ ಕರ್ನಾಟಕದಲ್ಲಿ ಎಸ್.ಡಿ.ಎಂ.ಸಿಗಳ ಮೌಲ್ಯಮಾಪನಕ್ಕೆ ೬ ಧ್ಯೇಯೋದ್ದೇಶಗಳನ್ನು ಅಳವಡಿಸಲಾಗಿದೆ. ಅಧ್ಯಯನದ ಉದ್ದೇಶದ ಅನುಸಾರಗಳನ್ನು ಅಬಿವೃದ್ಧಿಪಡಿಸಲಾಗಿದೆ ಹಾಗೂ ಮಾಹಿತಿಗಳನ್ನು ಸಂಗ್ರಹಿಸಿದ ಎಲ್ಲ ಮಾಹಿತಿಗಳು ಮತ್ತು ಉದ್ದೇಶಗಳನ್ನು ನಡುವೆ ತರ್ಕಬದ್ಧವಾದ ಸಂಪರ್ಕ ಕಲ್ಪಿಸಲು ಕಾಳಜಿ ವಹಿಸಲಾಗಿದೆ. ಶಾಲೆ ಸಮುದಾಯದ ಆಶೋತರ್ತಗಳನ್ನು ಈಡೇರಿಸಲು ವ್ಯವಸ್ಥೆ ಹೊಂದಿರುವ ಒಂದು ಸಂಘಟನೆ. ಶಾಲೆಯ ಚಟುವಟಿಕೆಗಳಲ್ಲಿ ಸಮುದಾಯ ಪಾಲ್ಗೊಳ್ಳುವುದು ತನ್ನ ಆಶೋತ್ತರಗಳ ಈಡೇರಿಕೆಗೆ ವೇಗವರ್ಧನೆಯನ್ನು ನೀಡುತ್ತದೆ.

೪.೨.೧ ಸದಸ್ಯರ ಸಾಮಾಜಿಕ –ಆರ್ಥಿಕ ಸ್ಥಾನಮಾನ

ಒಂದು ಸಂಸ್ಥೆಯ ಮೇಲೆ, ಒಂದು ಸಮುದಾಯದ ಕ್ರಿಯಾಶೀಲ ಮನೋಭಾವ ಹಾಗೂ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಸಂಕೀರ್ಣತೆಗಳು ಬೀರುವ ಪ್ರಭಾವವನ್ನು ಅರ್ಥ ಮಾಡಿಕೊಳ್ಳುವುದು ಬಹುಮುಖ್ಯ. ಈ ಹಿನ್ನಲೆಯಲ್ಲಿ ಎಸ್.ಡಿ.ಎಂ.ಸಿ ಸದಸ್ಯರ ಲಿಂಗ, ಜಾತಿ, ವಿದ್ಯಾರ್ಹತೆ ಹಾಗೂ ವೃತ್ತಿಗಳ ವಿವರಗಳನ್ನು ಸಂಗ್ರಹಿಸಲಾಯಿತು.

೪.೨.೨ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರ ಲಿಂಗಾಧಾರಿತ ಮಾಹಿತಿ

ಸಂದರ್ಶನ ಮಾಡಿದವರಲ್ಲಿ ಶೇಕಡ ೬೨.೧ ರಷ್ಟು ಜನರು ಪುರಷರಾಗಿದ್ದು ಶೇಕಡ ೪೭.೯ ರಷ್ಟು ಜನರು ಮಹಿಳೆಯರಾಗಿದ್ದಾರೆ. ಎಸ್.ಡಿ.ಎಂ.ಸಿಯಲ್ಲಿ ಸದಸ್ಯರಾಗಿ ಆಯ್ಕೆಯಾಗಬೇಕಾದರೆ ಶಾಲೆಗೆ ದಾಖಲಾಗಿ ಹೋಗುತ್ತಿರುವ ಮಕ್ಕಳ ಸಹಜ ತಂದೆ ತಾಯಿಗಳಾಗಿರಬೇಕು ಎಂಬುದನ್ನು ಎಸ್.ಡಿ.ಎಂ.ಸಿ ಮಾದರಿ ಉಪವಿಧಿಯು ಬಹಳ ಸ್ಪಷ್ಟವಾಗಿ ತಿಳಿಸಿದೆ. ಈ ಹಿನ್ನಲೆಯಲ್ಲಿ ಎಸ್.ಡಿ.ಎಂ.ಸಿಯಲ್ಲಿ ಸದಸ್ಯರ ಅರಿವು ಯಾವ ಮಟ್ಟದಲ್ಲಿದೆ ಎಂಬುದರ ಅಂಕಿ – ಅಂಶಗಳನ್ನು ಸಂಗ್ರಹಿಸಲಾಗಿದೆ. ಅದರಂತೆ ಸಹಜ ತಾಯಿಗಳು ಎಂದು ಪ್ರತಿಕ್ರಿಯಿಸುವವರು ಶೇಕಡ ೮೯.೮ ರಷ್ಟು ಇದ್ದು. ಇದರಲ್ಲಿ ತಂದೆ ಎಂದು ಶೇಕಡ ೬೪.೬ರಷ್ಟು ತಾಯಿ ಎಂದು ಶೇಕಡ ೨೫.೪ ರಷ್ಟು ಜನರು ಪ್ರತಿಕ್ರಿಯಿಸಿದ್ದಾರೆ. ಉಳಿದಂತೆ ಶೇಕಡ ೧೧ ರಷ್ಟು ಸದಸ್ಯರು ಸಹಜ ತಂದೆತಾಯಿಗಳಲ್ಲದವರು (ಮಾವ, ಅಜ್ಜ, ಚಿಕ್ಕಪ್ಪ, ಚಿಕ್ಕಮ್ಮ) ಇದ್ದು.ಇದನ್ನು ಗಮನಿಸಿದಾಗ ಆಯ್ಕೆ ಪ್ರಕ್ರಿಯೆಯು ಸರಿಯಾಗಿ ಆಗಿಲ್ಲದಿರುವುದನ್ನು ತೋರಿಸುತ್ತಿದೆ. ಇದರ ಬಗ್ಗೆ ಮುಖ್ಯ ಶಿಕ್ಷಕರು ಬಹಳ ಗಮನವಹಿಸಬೇಕಾಗಿದೆ.

೪.೨.೩ ಸಂದರ್ಶಿತರ ವಯಸ್ಸು

ಸಂಧರ್ಶಿತರ ಅಂಕಿಅಂಶಗಳನ್ನು ನೋಡಿದಾಗ ೩೧ ರಿಂದ ೩೬ ವರ್ಷ ವಯೋಮಿತಿಯಲ್ಲಿರುವವರು ಶೇಕಡ ೩೬.೧ ರಷ್ಟು ಇದ್ದು.ಹಾಗೆಯೇ ೩೬ ರಿಂದ ೪೦ ವರ್ಷ ವಯೋಮಿತಿಯಲ್ಲಿರುವವರು ಶೇಕಡ ೩೩ರಷ್ಟು ಇದ್ದಾರೆ ಹಾಗೆಯೇ ೪೧ ರಿಂದ ೪೫ ವರ್ಷ ವಯೋಮಿತಿಯಲ್ಲಿರುವವರು ಶೇಕಡ ೧೫.೧ ರಷ್ಟು ಇರುವವರನ್ನು ನೋಡಬಹುದುದಾಗಿದೆ. ಈ ಹಿನ್ನೆಲೆಯಲ್ಲಿ ನೋಡಿದಾಗ ಯುವಕರು ಹಾಗೂ ಮಧ್ಯಮ ವಯಸ್ಸಿನವರು ಜಾಸ್ತಿ ಇದ್ದು, ಇವರೆಲ್ಲರೂ ಕುಟುಂಬಗಳಿಗೆ ಅದಾರವಾಗಿದ್ದು, ಇವರುಗಳೆಲ್ಲರು ದುಡಿದು ಕುಟುಂಬವನ್ನು ಇವರೇ ನೋಡಿಕೊಳ್ಳಬೇಕಾಗಿದೆ. ಈ ಕಾರಣದಿಂದ ಇವರೆಲ್ಲರೂ ಬೆಳಿಗ್ಗೆಯಿಂದಲೇ ಹೊಲ-ಗದ್ದೆಗಳು, ಕೂಲಿ, ಹಾಗೂ ಕಾಮಗಾರಿ ಕೆಲಸಗಳಿಗೆ ಹೋಗುವುದರಿಂದ ಮತ್ತು ಕೆಲಸ ಹುಡುಕಿಕೊಂಡು ವಲಸೆ ಹೋಗುವುದರಿಂದ ಶಾಲೆಯ ಕಡೆ ಗಮನಹರಿಸುವುದು ಕಷ್ಟ. ಇದರ ನಡುವೆಯೂ ಇವರು ಬಿಡುವಿನ ವೇಳೆಯಲ್ಲಿ ಮಕ್ಕಳ ವಿದ್ಯಾಬ್ಯಾಸ ಹಾಗೂ ಎಸ್.ಡಿ.ಎಂ.ಸಿ ಜವಾಬ್ದಾರಿಗಳನ್ನು ನೀಡಿರುವುದರಿಂದ ಶಾಲೆಗೆ ಭಾಗವಹಿಸುವುದನ್ನು ನೋಡಬಹುದಾಗಿದೆ.

೪.೨.೪ ವಿದ್ಯಾರ್ಹತೆ

ಸದಸ್ಯರ ಶೈಕ್ಷಣಿಕ ಹಿನ್ನಲೆಯು ಗ್ರಾಮೀಣ ಸಂಸ್ಥೆಯ ಮೇಲೆ ಪರಿಣಾಮ ಬೀರುತ್ತದೆ ಎನ್ನುವ ಸಾರ್ವತ್ರಿಕ ಅಭಿಪ್ರಾಯವಿದೆ. ಎಸ್.ಡಿ.ಎಂ.ಸಿಯಂತಹ ಸಮಿತಿಗಳಲ್ಲಿ ಶಿಕ್ಷಿತ ಸದಸ್ಯರನ್ನೇ ಆರಿಸುವುದು ಕಷ್ಟ ಸಾಧ್ಯ. ಏಕೆಂದರೆ ಬಹುತೇಕ ಸಂದರ್ಭಗಳಲ್ಲಿ ಈಗಿನ ಪೀಳಿಗೆಯ ಮಕ್ಕಳೆ ಅವರ ಕುಟುಂಬದಲ್ಲಿ ಶಿಕ್ಷಣ ಪಡೆಯುವ ಮೊದಲಿಗರಾಗಿರುತ್ತಾರೆ. ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ದೇಶದಲ್ಲಿ ಎಸ್.ಡಿ.ಎಂ.ಸಿ ಸದಸ್ಯರು ವಿದ್ಯಾವಂತರಾಗಿರಬೇಕೆಂಬ ನಿಬಂಧನೆ ಸಾಧುವಲ್ಲ. ಏಕೆಂದರೆ ಬಹುತೇಕ ಸದಸ್ಯರು ಅನಕ್ಷರಸ್ಥರಾಗಿರುತ್ತಾರೆ. ಶೈಕ್ಷಣಿಕ ಹಿನ್ನಲೆಯಿಂದಾಗಿ ಪೋಷಕರಿಗೆ ಮಕ್ಕಳ ಶಾಲಾ ಚಟುವಟಿಕೆಯಲ್ಲಿ ಭಾಗವಹಿಸಲು ಅವಕಾಶ ನಿರಾಕರಿಸುವುದು ಕೂಡ ಸಮರ್ಥನೀಯವಲ್ಲ. ಈ ನಿಟ್ಟಿನಲ್ಲಿ ಪರಸ್ಪರ ಶೈಕ್ಷಣಿಕ ಹಿನ್ನಲೆ ಬಗ್ಗೆ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಯಿತು.

ಎಸ್.ಡಿ.ಎಂ.ಸಿ ಸದಸ್ಯರ ವಿದ್ಯಾರ್ಹತೆಯನ್ನು ಗಮನಿಸಿದಾಗ ೧ರಿಂದ ೫ನೇ ತರಗತಿವರೆಗೆ ಓದಿರುವವರ ಸಂಖ್ಯೆ ಶೇಕಡ ೭೦ ರಷ್ಟು ಇದ್ದು, ಶೇಕಡ ೨೨ ರಷ್ಟು ಸದಸ್ಯರು ೬ರಿಂದ ೧೦ನೇ ತರಗತಿವರೆಗೆ ಓದಿರುವುದನ್ನು ಗಮನಿಸಿದರೆ ಕಡಿಮೆ ಸದಸ್ಯರು ಓದಿರುವುದನ್ನು ನೋಡಬಹುದಾಗಿದೆ. ಈ ಕಾರಣದಿಂದ ಶಾಲೆಯ ಎಲ್ಲಾ ಚಟುವಟಿಕೆಗಳಲ್ಲಿ ಭಾಗವಹಿಸುವುದು ಅದರಲ್ಲಿಯು ಶೈಕ್ಷಣಿಕ ಚಟುವಟಿಕೆಯಲ್ಲಿ ಭಾಗವಹಿಸುವುದು ವಿರಳ, ಇದಕ್ಕಾಗಿ ಇವರು ಹೆಚ್ಚಾಗಿ ಕಾಮಗಾರಿಗಳು, ಮಕ್ಕಳ ಹಾಜರಾತಿ, ಶಿಕ್ಷಕರ ಹಾಜರಾತಿಯ ಬಗ್ಗೆ ಮಾತ್ರ ಹೆಚ್ಚು ಭಾಗವಹಿಸುವುದನ್ನು ನೋಡಬಹುದಾಗಿದೆ. ಈ ಕಾರಣಗಳಿಂದ ಪ್ರತಿಯೊಬ್ಬ ಸದಸ್ಯರಿಗೂ ಶಿಕ್ಷಣ ಇಲಾಖೆಯ ಎಲ್ಲಾ ತರಬೇತಿಗಳನ್ನು ಎಲ್ಲಾ ಸದಸ್ಯರಿಗೂ ಅವರಿಗೆ ಮುಟ್ಟುವ ರೀತಿಯಲ್ಲಿ ಸರಳವಾಗಿ ನೀಡಬೇಕಾಗಿದೆ.

೪.೨.೫ ಸದಸ್ಯರ ವೃತ್ತಿ/ಉದ್ಯೋಗ:

ಪ್ರಾಥಮಿಕ ಪಾಲುದಾರರನ್ನು ಸದಸ್ಯರನ್ನಾಗಿ ಮಾಡಿಕೊಂಡು ಎಸ್.ಡಿ.ಎಂ.ಸಿಗಳ ರಚನೆಯಾಗಿರುವುದರಿಂದ ಮತ್ತು ಸದಸ್ಯರ ಸತತವಾದ ಪಾಲ್ಗೊಳ್ಳುವಿಕೆ ಹಾಗೂ ನಿರಂತರ ಸಹಕಾರವೇ ಗುರಿಯಾಗಿರುವುದರಿಂದ, ಪರಸ್ಪರ ವೃತ್ತಿ ಬಗ್ಗೆ ತಿಳಿದುಕೊಳ್ಳುವುದು ಇಲ್ಲಿ ಮಹತ್ವ ಪಡೆದುಕೊಳದುಕೊಳ್ಳುತ್ತದೆ. ಏಕೆಂದರೆ ಇದು ಅವರ ಹಾಜರಾತಿ ಮತ್ತು ಶಾಲಾಭಿವೃದ್ಧಿಗೆ ಅವರ ಕೊಡುಗೆಗೆ ಸಂಬಂಧಿಸಿದೆ. ಎಸ್.ಡಿ.ಎಂ.ಸಿ ಸದಸ್ಯರಲ್ಲಿಶೇಕಡ ೩೫ ರಷ್ಟು ಜನರು ಕೂಲಿ ಕೆಲಸವನ್ನು ೫೮ ರಷ್ಟು ವ್ಯವಸಾಯವನ್ನು ಹಾಗೂ ಶೇಕಡ ೭ ರಷ್ಟು ಮನೆಗೆಲಸ ಮಾಡುವವರನ್ನು ನೋಡಬಹುದಾಗಿದೆ. ಇದನ್ನು ಗಮನಿಸಿದಾಗ ವ್ಯವಸಾಯ ಹಾಗೂ ಕೂಲಿ ಕೆಲಸಗಳ ಸಂದರ್ಭದಲ್ಲಿ ಭಾಗವಹಿಸಲು ಇಷ್ಟವಿದ್ದರು, ಶಾಲೆಗಳಿಗೆ ಇವರು ಭಾಗವಹಿಸುವುದು ಕಡಿಮೆ. ಕಾರಣ ಜೀವನಕ್ಕೆ ಆಧಾರವಾದ ಫಸಲನ್ನು ಪಡೆಯಲು ಗಮನಹರಿಸುವುದು, ಶ್ರಮಿಕ ಕೂಲಿಕಾರರ ಅಭಾವದಿಂದ ಇರುವ ಕೂಲಿಕಾರಿಗೆ ಹೆಚ್ಚಿನ ಪ್ರಾಧಾನ್ಯತೆ, ಮತ್ತು ಈ ಭಾಗಗಳಲ್ಲಿ ಹೆಚ್ಚಿನ ಜನರು ಬೆಂಗಳೂರು ಕಡೆ ವಲಸೆಯ ಪ್ರಭಾವದಿಂದ ಎಲ್ಲವನ್ನು ಸ್ವತಃ ತಾವೇ ಅಥವಾ ಇದ್ದವರನ್ನೇ ಆಶ್ರಯಿಸಬೇಕಾಗಿರುವುದರಿಂದ ಶಾಲಾಭಿವೃದ್ಧಿಗೆ ಇಂತಹ ಸಮಯಗಳಲ್ಲಿ ಗಮನ ಕೊಡುವುದು ಕಡಿಮೆ. ಆಗಾಗಿ ವ್ಯವಸಾಯ ಮತ್ತು ಕೂಲಿ ಇಲ್ಲದ ಸಮಯಗಳಲ್ಲಿ ಹೆಚ್ಚಿನ ಭಾಗವಹಿಸುವಿಕೆಯನ್ನು ಶಾಲೆಗಳಲ್ಲಿ ಕಾಣಬಹುದಾಗಿದೆ.

೪.೨.೬ ಮಾಸಿಕ ಆದಾಯ:

ವೃತ್ತಿ ಮಹತ್ವದ ಜೊತೆಗೆ ಅಲ್ಲಿ ಸಿಗುವ ಆದಾಯವು ಕೂಡ ಬಹಳ ಮಹತ್ವದ ಪಾತ್ರವನ್ನು ವಹಿಸುತ್ತವೆ. ಎಸ್.ಡಿ.ಎಂ.ಸಿ ಸದಸ್ಯರ ಮಾಸಿಕ ಆದಾಯವು ೫೦೦ ರೂ ನಿಂದ ೧೦೦೦ ರೂವರೆಗೆ ಇರುವವರ ಸಂಖ್ಯೆ ಶೇಕಡ ೯೮ ರಷ್ಟು ಇದ್ದು, ೧೦೦೧ ರಿಂದ ೫೦೦೦ ರೂವರೆಗಿನ ಆದಾಯವಿರುವ ಸದಸ್ಯರ ಸಂಖ್ಯೆ ಕೇವಲ ಶೇಕಡ ೨ ರಷ್ಟನ್ನು ನೋಡಬಹುದಾಗಿದೆ. ಆಗಾಗಿ ಇವರು ಶಾಲೆಗಳಿಗೆ ಸಂಪನ್ಮೂಲವನ್ನು ಒದಗಿಸಲು ಕಷ್ಟವಾಗಿದೆ. ಇದರಿಂದ ಅವರ ಭಾಗವಹಿಸುವಕೆಯನ್ನು ಮಾತ್ರ ನೋಡಬಹುದಾಗಿದೆ, ಶಾಲೆಗಳಲ್ಲಿ ರಾಷ್ಟ್ರೀಯ ಹಬ್ಬಗಳನ್ನು ಆಚರಿಸಲು ದೇಣಿಗೆಯನ್ನು ಕೇಳುವುದು, ಶಾಲೆಯ ವಾರ್ಷಿಕೋತ್ಸವ, ಕ್ರಿಡಾ ಕಾರ್ಯಕ್ರಮ, ಸಾಂಸ್ಕೃತಿಕ ಕಾರ್ಯಕ್ರಮ, ಮತ್ತು ಶಾಲೆಯ ವಿಶೇಷ ಕಾರ್ಯಕ್ರಮಗಳಿಗೆ ಸದಸ್ಯರಲ್ಲಿ ದೇಣಿಗೆಯನ್ನು ಬಯಸುವುದರಿಂದ ಅವರು ಶಾಲೆಗಳಿಗೆ ಭಾಗವಹಿಸಲು ಹಿಂಜರಿಯುವುದನ್ನು ನೋಡಬಹುದಾಗಿದೆ.

೪.೨.೭ ಎಸ್.ಡಿ.ಎಂ.ಸಿ ಸಮಿತಿಯ ರಚನೆ, ಸಂರಚನೆ, ಅವಧಿಯ ಬಗ್ಗೆ ಅರಿವು

ಒಂದು ಸಂಸ್ಥೆಯ ರಚನೆ ಹಾಗೂ ಚಟುವಟಿಕೆ ಮತ್ತು ಪಾಲ್ಗೊಳ್ಳುವಿಕೆ ಹಾಗೂ ಅಧಿಕಾರಗಳ ಮಧ್ಯ ಪರಸ್ಪರ ಸಂಪರ್ಕ ಹೊಂದಿದೆ. ಎಸ್.ಡಿ.ಎಂ.ಸಿ ಸದಸ್ಯರಲ್ಲಿ ಅರಿವಿನ ಬಗ್ಗೆ ಮಾಹಿತಿ ಸಂಗ್ರಹಿಸಲು ಪ್ರತ್ಯೇಕ ಸಾಧನಗಳನ್ನು ಅಭಿವೃದ್ಧಿಪಡಿಸಲಾಯಿತು. ಸದಸ್ಯರಲ್ಲಿರುವ ತಿಳುವಳಿಕೆ, ಸಶಕ್ತತೆ ಮತ್ತು ಪಾಲ್ಗೊಳ್ಳುವಿಕೆಯನ್ನು ಪ್ರೇರೇಪಿಸುತ್ತದೆ. ಇದರಿಂದಾಗಿ ಸಮರ್ಪಕ ಕಾರ್ಯನಿರ್ವಹಣೆ ಸಾಧ್ಯ. ಎಸ್.ಡಿ.ಎಂ.ಸಿಗಳ ಮೌಲ್ಯಮಾಪನದ ಅಂಗವಾಗಿ, ಕಾರ್ಯಾವಧಿ, ಹಕ್ಕು, ಕರ್ತವ್ಯಗಳ ಬಗ್ಗೆಎಸ್.ಡಿ.ಎಂ.ಸಿ ಮಾದರಿ ಉಪವಿಧಿಗಳಲ್ಲಿ ಉಲ್ಲೇಖಿಸಿರುವಂತೆ ಪರಸ್ಪರ ಅರಿವಿನ ಬಗ್ಗೆ ತಿಳಿದುಕೊಳ್ಳಲು ಪ್ರಶ್ನಾವಳಿಯನ್ನು ನೀಡಲಾಯಿತು. ಎಸ್.ಡಿ.ಎಂ.ಸಿ ಮಾದರಿ ಉಪವಿಧಿಯ ಪ್ರಕಾರ ಮುಖ್ಯ ಶಿಕ್ಷಕ ಎಸ್.ಡಿ.ಎಂ.ಸಿಯ ಪದನಿಮಿತ್ತ ಕಾರ್ಯದರ್ಶಿಯಾಗಿರುತ್ತಾರೆ. ಇವರು ಎಸ್.ಡಿ.ಎಂ.ಸಿ ಗಳಬಗ್ಗೆ ಮಾಹಿತಿ ಹಾಗೂ ರಚನೆಯನ್ನು ನಡೆಸುವ ಹೊಣೆ ಕೂಡ ಇವರದ್ದೇ ಆಗಿದೆ. ಮುಖ್ಯ ಶಿಕ್ಷಕರು ಎಸ್.ಡಿ.ಎಂ.ಸಿ ಬಗ್ಗೆ ಪೋಷಕರಿಗೆ ಮಾಹಿತಿ ನೀಡುವವರಾಗಿದ್ದರೂ ಪರಸ್ಪರ ಆಯ್ಕೆ ಪ್ರಕ್ರಿಯೆಯನ್ನು ಸಂಘಟಿಸುವವರು ಮತ್ತು ಎಸ್.ಡಿ.ಎಂ.ಸಿಯ ಕಾರ್ಯನಿರ್ವಹಣೆಯನ್ನು ಸಂಘಟಿಸುವ ಹೊಣೆ ಇವರದು. ಎಸ್.ಡಿ.ಎಂ.ಸಿ ಪಾತ್ರ ಹಾಗೂ ಪ್ರಕಾರ್ಯಗಳನ್ನು ಅರ್ಥಮಾಡಿಕೊಳ್ಳಬೇಕಾದರೆ, ಅದರ ರಚನೆಯನ್ನು ಎಸ್.ಡಿ.ಎಂ.ಸಿ ಮಾದರಿ ಉಪವಿಧಿಯ ನಿಯಮದ ಪ್ರಕಾರ ಎಸ್.ಡಿ.ಎಂ.ಸಿ ಸಮಿತಿ ರಚನೆ ಆಗಿದೆಯೇ ಹಾಗೂ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ (ಶಾಲಾಭಿವೃಧ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ) ಮಾದರಿ ಉಪ ವಿಧಿ ಅನ್ವಯ ನಾಗರೀಕ ಸೌಲಭ್ಯ ಸಮಿತಿಯು ತನ್ನ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಪ್ರತಿ ಶಾಲೆಯಲ್ಲಿ ಎಸ್.ಡಿ.ಎಂ.ಸಿ ರಚನೆ ಮಾಡಬೇಕಾಗಿದೆ.

ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ೧೯೯೩ ರ ಕಾಯ್ದೆಯ ಪ್ರಕಾರ ಕರ್ನಾಟಕ ಗ್ರಾಮ ಪಂಚಾಯತಿಗಳ ಉಪವಿಧಿ (ಶಾಲಾಭಿವೃಧ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) (ಮಾದರಿ) ಉಪವಿಧಿಗಳು ೨೦೦೬ ನಿಯಮಗಳ ಪ್ರಕಾರ ಗ್ರಾಮ ಪಂಚಾಯತಿಯ ಸ್ಥಾಯಿ ಸಮಿತಿಯಾದ ನಾಗರೀಕ ಸೌಕರ್ಯ ಸಮಿತಿಯು ಪಂಚಾಯತಿ ವ್ಯಾಪ್ತಿಯ ಶಾಲೆಗಳಲ್ಲಿ ಉಪವಿಧಿಯ ನಿಯಮಗಳು ಹಾಗೂ ಸಂವಿಧಾನದಂತೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ತನ್ನ ವ್ಯಾಪ್ತಿಯಲ್ಲಿ ರಚಿಸಬೇಕಾಗಿದ್ದು. ಇದರ ಬಗ್ಗೆ ಅಧ್ಯಯನಕ್ಕೆ ಒಳಪಡಿಸಿದ ಸದಸ್ಯರ ಜಾಗೃತಿಯ ಬಗ್ಗೆ, ಎಸ್.ಡಿ.ಎಂ.ಸಿ

ಯ ಇತಿಹಾಸ ಮತ್ತು ಯಾವಾಗ ಮತ್ತು ಏಕೆ ಈ ಸಮಿತಿಯು ರಚಿತವಾದವು ಎಂಬುದರ ಬಗ್ಗೆ ಅರಿವು ಎಷ್ಟಿದೆ ಎಂಬುದನ್ನು ತಿಳಿದುಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.

ಈ ಸಮಿತಿಗಳ ಉದ್ದೇಶವು ಶಾಲೆಯ ಅಭಿವೃದ್ಧಿಯನ್ನು ಮಾಡುವುದೇ ಆಗಿದೆ. ಉದಾಹರಣೆಗೆ, ಶಾಲೆಗೆ ಬೇಕಾದ ಕಟ್ಟಡ, ಆಟದ ಮೈದಾನ, ಪೀಠೋಪಕರಣ ಸೌಲಭ್ಯಗಳನ್ನು ಒದಗಿಸಿಕೊಡುವುದು, ಎಲ್ಲಾ ಮಕ್ಕಳು ಶಾಲೆಗೆ ಹೋಗುವಂತೆ ಮಾಡುವುದು ಮತ್ತು ಅವರು ಚೆನ್ನಾಗಿ ಕಲಿಯುವಂತೆ ಮಾಡುವ ಕೆಲಸಗಳು ಶಾಲೆಯ ಅಭಿವೃದ್ಧಿ ಎನ್ನಬಹುದು. ಆಯಾ ಕಾಲದ ಅಗತ್ಯಗಳಿಗೆ ಅನುಗುಣವಾಗಿ, ಈ ಸಮಿತಿಗಳು ಕೆಲಸ ಮಾಡಬೇಕೆಂದು ಸರ್ಕಾರ ಮತ್ತು ಸಮುದಾಯ ಅಪೇಕ್ಷಿಸುತ್ತದೆ. ಈಚಿನ ಬೆಳವಣಿಗೆಗಳಂತೆ ಈ ಸಮಿತಿಗಳ ಕೆಲಸವು ತುಂಬಾ ವಿಸ್ತಾರವಾಗಿದೆ. ಶಾಲೆಗೆ ಬೇಕಾದ ಸೌಲಭ್ಯಗಳಿಂದ ಹಿಡಿದು ಮಕ್ಕಳ ಕಲಿಕೆಯವರಿಗೆ ಈ ಸಮಿತಿಗಳು ಭಾಗವಹಿಸಬೇಕು ಜೊತೆಗೆ ಶಾಲೆಯ ಅಭಿವೃದ್ಧಿ ಸರಿಯಾಗಿ ನಡೆಯುತ್ತಿದೆಯೇ ಎಂದು ನಿಗಾ ವಹಿಸಬೇಕು. ಇಂತಹ ಜವಾಬ್ದಾರಿಯ ಕೆಲಸವನ್ನು ನಿರ್ವಹಿಸಲು ಸರ್ಕಾರ ೨೦೦೦ನೇ ಇಸವಿಯಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸುವಂತೆ ಸೂಚಿಸಿತು ಅನೇಕಪೋಷಕರು, ಶಿಕ್ಷಕರು, ಸಾರ್ವಜನಿಕರ ಅಭಿಪ್ರಾಯದಂತೆಈಗಿನ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆಇನ್ನೂ ಹೆಚ್ಚಿನ ಜವಾಬ್ದಾರಿ ಹಾಗೂ ಅಧಿಕಾರವನ್ನು ಸರ್ಕಾರ ನೀಡಿದೆ. ಅಲ್ಲದೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ಪಂಚಾಯತ್ ರಾಜ್ ವ್ಯಾಪ್ತಿಗೆ ಒಳಪಡಿಸಲು ಸರ್ಕಾರ ನಿರ್ಧರಿಸಿ ಆದೇಶ ನೀಡಿದೆ ಇದರಂತೆ ಈಗಿನ ಶಾಲಾ ಅಭಿವೃದ್ಧಿ ಮತ್ತು ಮೇಲುವಸ್ತುವಾರಿ ಸಮಿತಿಗಳು ನೇರವಾಗಿ ಗ್ರಾಮ ಪಂಚಾಯಿತಿಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತವೆ. ಈಗಿನ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಎರಡು ಹಂತಗಳನ್ನು ಒಳಗೊಂಡಿದೆ. ಮೊದಲನೆಯದು, ತಂದೆ-ತಾಯಿಯರ ಪರಿಷತ್ತು ಅಂದರೆ ಆಯಾ ಶಾಲೆಯ ತಂದೆ- ತಾಯಿಗಳು ಈ ಪರಿಷತ್ತಿನ ಸದಸ್ಯರು. ಎರಡನೆಯದು,ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಇಲ್ಲಿನ ಪೋಷಕ ಸದಸ್ಯರನ್ನು ತಂದೆ -ತಾಯಿಯರ ಪರಿಷತ್ತು ಆಯ್ಕೆ ಮಾಡುತ್ತದೆ. ಈ ಸದಸ್ಯರು, ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ನಾಮನಿರ್ದೇಶಿತ ಸದಸ್ಯರನ್ನು ಆಯ್ಕೆ ಮಾಡುತ್ತಾರೆ. ಇಂತಹ ಪದಾಧಿಕಾರಿಗಳನ್ನು ಒಳಗೊಂಡ ಸಮಿತಿಯೆ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ. ಈ ಸಮಿತಿಯು ಶಾಲೆಯ ಅಭಿವೃದ್ಧಿಗೆ ಜವಾಬ್ದಾಯಾಗಿರುತ್ತದೆ. ಶಾಲೆಗೆ ಬೇಕಾದ ಸೌಲಭ್ಯಗಳನ್ನು ಒದಗಿಸುವಲ್ಲಿ, ಎಲ್ಲಾ ಮಕ್ಕಳನ್ನು ಶಾಲೆಗೆ ಸೇರಿಸುವುದು ಮತ್ತು ಹಾಜರಾಗುವಂತೆ ಮಾಡುವುದು ಹಾಗೂ ಎಲ್ಲಾ ಮಕ್ಕಳು ತರಗತಿಗೆ ಅನುಗುಣವಾಗಿ ಕಲಿಯುವಂತೆ ಮಾಡುವುದು ಈ ಸಮಿತಿಯ ಕರ್ತವ್ಯ ಹಾಗೂ ಜವಾಬ್ದಾರಿಯಾಗಿದೆ.

ಕೋಷ್ಟಕ ೧೧

ಎಸ್.ಡಿ.ಎಂ.ಸಿ ಆಚರಣೆಗೆ ಬರುವುದಕ್ಕೆ ಮೊದಲು ನಿಮ್ಮ ಶಾಲೆಯಲ್ಲಿ ಇದ್ದವ್ಯವಸ್ಥೆ ಬಗ್ಗೆ ಸಮಿತಿ ಸದಸ್ಯರ ಅರಿವು

ಜಿಲ್ಲೆಗಳು	ಪುರುಷ				ಮಹಿಳೆ			
	ಅರಿವು		ಅರಿವು ಇಲ್ಲದಿರುವುದು		ಅರಿವು		ಅರಿವು ಇಲ್ಲದಿರುವುದು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೧೪೦	೪೨.೭	೧೮೮	೫೭.೩	೪೪	೩೩.೧	೮೯	೬೬.೯

ಬಾಗಲಕೋಟೆ	೧೨೫	೪೦.೭	೧೮೨	೫೯.೩	೩೦	೨೪.೨	೯೪	೭೫.೮
ಬಳ್ಳಾರಿ	೧೨೨	೩೮.೭	೧೯೩	೬೧.೩	೫೯	೪೩.೭	೭೬	೫೬.೩
ರಾಯಚೂರು	೭೮	೫೮.೬	೫೫	೪೧.೪	೩೧	೩೯.೨	೪೮	೬೦.೮
ಎಲ್ಲಾ ಜಿಲ್ಲೆಗಳು	೪೬೫	೪೨.೯	೬೧೮	೫೭.೧	೨೨೩	೪೨.೧	೩೦೭	೫೭.೯

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೪೨.೯ ರಷ್ಟು ಪುರುಷ ಸದಸ್ಯರಿಗೆ ಎಸ್.ಡಿ.ಎಂ.ಸಿ ಆಚರಣೆಗೆ ಬರುವುದಕ್ಕೆ ಮೊದಲು ಶಾಲೆಯಲ್ಲಿ ಇದ್ದ ವ್ಯವಸ್ಥೆಯ ಬಗ್ಗೆ ಅರಿತುಕೊಂಡಿರುವುದರ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ಶೇಕಡ ೫೭.೧ ರಷ್ಟು ಪುರುಷ ಸದಸ್ಯರಿಗೆ ಅರಿವು ಇಲ್ಲದಿರುವುದರ ಬಗ್ಗೆ ಗಮನಿಸಬಹುದಾಗಿದ್ದು. ಶೇಕಡ ೪೨.೧ ರಷ್ಟು ಮಹಿಳಾ ಸದಸ್ಯರಿಗೆ ಎಸ್.ಡಿ.ಎಂ.ಸಿ ಆಚರಣೆಗೆ ಬರುವುದಕ್ಕೆ ಮೊದಲು ಶಾಲೆಯಲ್ಲಿದ್ದ ವ್ಯವಸ್ಥೆಯ ಬಗ್ಗೆ ಅರಿತುಕೊಂಡಿರುವುದರ ಬಗ್ಗೆ ಪ್ರತಿಕ್ರಿಯಿಸಿದ್ದು. ಶೇಕಡ ೫೭.೯ ರಷ್ಟು ಮಹಿಳಾ ಸದಸ್ಯರಿಗೆ ಅರಿವು ಇಲ್ಲದಿರುವುದನ್ನು ನೋಡಬಹುದಾಗಿದ್ದು. ಇವರುಗಳಿಗೆ ಎಸ್.ಡಿ.ಎಂ.ಸಿ ಬೆಳೆದು ಬಂದ ದಾರಿಯ ಬಗ್ಗೆ ಅರಿವು ಮೂಡಿಸಬೇಕಾಗಿದೆ

ಕೋಷ್ಟಕ ೧೨

ಎಸ್.ಡಿ.ಎಂ.ಸಿ ಆಚರಣೆಗೆ ಬರುವುದಕ್ಕೆ ಮೊದಲು ಶಾಲೆಯಲ್ಲಿದ್ದವ್ಯವಸ್ಥೆ ಬಗ್ಗೆ ಸಮಿತಿ ಸದಸ್ಯರ ಜನಾಂಗವಾರು ಅರಿವು

		ಸಾಮಾನ್ಯ		ಪರಿಶಿಷ್ಟ ಜಾತಿ		ಪರಿಶಿಷ್ಟ ಪಂಗಡ		ಹಿಂದುಳಿದ ವರ್ಗ		ಒಟ್ಟು	
		ಹೌದು	ಇಲ್ಲ	ಹೌದು	ಇಲ್ಲ	ಹೌದು	ಇಲ್ಲ	ಹೌದು	ಇಲ್ಲ	ಹೌದು	ಇಲ್ಲ
ಬಿಜಾಪುರ	ಸಂಖ್ಯೆ	೮	೦	೨೮೮	೦	೨೩೮	೦	೩೪೪	೦	೮೭೮	೧೯
	%	೧೦೦	೦	೧೦೦	೦	೬೨.೫	೩೭.೫	೮೨.೯	೧೭.೧	೮೫.೪	೧೪.೬
ಬಾಗಲಕೋಟೆ	ಸಂಖ್ಯೆ	೧೭	೧೨	೨೬	೧೬	೧೨	೫	೨೭	೧೦	೮೨	೪೩
	%	೫೮.೬	೪೧.೪	೬೧.೯	೩೮.೧	೭೦.೬	೨೯.೪	೭೩	೨೭	೬೫.೬	೩೪.೪
ಬಳ್ಳಾರಿ	ಸಂಖ್ಯೆ	೨೩	೨	೧೦	೨	೧೪	೩	೫೮	೧೩	೧೦೫	೨೦
	%	೯೨	೮	೮೩.೩	೧೬.೭	೮೨.೪	೧೭.೬	೮೧.೭	೧೮.೩	೮೪	೧೬
ರಾಯಚೂರು	ಸಂಖ್ಯೆ	೩೧	೧೩	೧೬	೬	೮	೬	೩೩	೯	೮೮	೩೪
	%	೭೦.೫	೨೯.೫	೭೨.೭	೨೭.೩	೫೭.೧	೪೨.೯	೭೮.೬	೨೧.೪	೭೨.೧	೨೭.೯
ಎಲ್ಲಾ ಜಿಲ್ಲೆಗಳು	ಸಂಖ್ಯೆ	೭೯	೨೭	೮೨	೨೪	೪೪	೨೦	೧೮೧	೪೫	೩೮೬	೧೧೬
	%	೭೪.೫	೨೫.೫	೭೭.೪	೨೨.೬	೬೮.೮	೩೧.೩	೮೦.೧	೧೯.೯	೭೬.೯	೨೩.೧

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೭೪.೫ ರಷ್ಟು ಸಾಮಾನ್ಯ ಜನಾಂಗದ ಸದಸ್ಯರಿಗೆ ಎಸ್.ಡಿ.ಎಂ.ಸಿ ಆಚರಣೆಗೆ ಬರುವುದಕ್ಕೆ ಮೊದಲು ಶಾಲೆಯಲ್ಲಿ ಇದ್ದ ವ್ಯವಸ್ಥೆಯ ಬಗ್ಗೆ ಅರಿತುಕೊಂಡಿರುವುದರ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. ಶೇಕಡ ೨೫.೫ ರಷ್ಟು ಸಾಮಾನ್ಯ ಜನಾಂಗಕ್ಕೆ ಸೇರಿದ ಸದಸ್ಯರಿಗೆ ಅರಿವು ಇಲ್ಲದಿರುವುದರ ಬಗ್ಗೆ ಗಮನಿಸಬಹುದಾಗಿದ್ದು. ಶೇಕಡ ೭೭.೪ ರಷ್ಟು ಪರಿಶಿಷ್ಟ ಜನಾಂಗದಸದಸ್ಯರಿಗೆ

ಎಸ್.ಡಿ.ಎಂ.ಸಿ ಆಚರಣೆಗೆ ಬರುವುದಕ್ಕೆ ಮೊದಲು ಶಾಲೆಯಲ್ಲಿದ್ದ ವ್ಯವಸ್ಥೆಯ ಬಗ್ಗೆ ಅರಿತುಕೊಂಡಿರುವುದರ ಬಗ್ಗೆ ಪ್ರತಿಕ್ರಿಯಿಸಿದ್ದು. ಶೇಕಡ ೨೨.೬ ರಷ್ಟು ಪರಿಶಿಷ್ಟ ಜನಾಂಗದ ಸದಸ್ಯರಿಗೆ ಅರಿವು ಇಲ್ಲದಿರುವುದನ್ನು ನೋಡಬಹುದಾಗಿದೆ. ಹಾಗೆಯೇ ಶೇಕಡ ೬೮.೪ರಷ್ಟು ಪರಿಶಿಷ್ಟ ಪಂಗಡದ ಜನಾಂಗದ ಸದಸ್ಯರಿಗೆ ಎಸ್.ಡಿ.ಎಂ.ಸಿ ಆಚರಣೆಗೆ ಬರುವುದಕ್ಕೆ ಮೊದಲು ಶಾಲೆಯಲ್ಲಿದ್ದ ವ್ಯವಸ್ಥೆಯ ಬಗ್ಗೆ ಅರಿತುಕೊಂಡಿರುವುದರ ಬಗ್ಗೆ ಪ್ರತಿಕ್ರಿಯಿಸಿದ್ದು. ಶೇಕಡ ೩೧.೩ ರಷ್ಟು ಪರಿಶಿಷ್ಟ ಜನಾಂಗದ ಸದಸ್ಯರಿಗೆ ಅರಿವು ಇಲ್ಲದಿರುವುದನ್ನು ನೋಡಬಹುದಾಗಿದೆ. ಶೇಕಡ ೮೦.೧ ರಷ್ಟು ಹಿಂದುಳಿದ ವರ್ಗದ ಜನಾಂಗದ ಸದಸ್ಯರಿಗೆ ಎಸ್.ಡಿ.ಎಂ.ಸಿ ಆಚರಣೆಗೆ ಬರುವುದಕ್ಕೆ ಮೊದಲು ಶಾಲೆಯಲ್ಲಿದ್ದ ವ್ಯವಸ್ಥೆಯ ಬಗ್ಗೆ ಅರಿತುಕೊಂಡಿರುವುದರ ಬಗ್ಗೆ ಪ್ರತಿಕ್ರಿಯಿಸಿದ್ದು. ಶೇಕಡ ೧೯.೯ ರಷ್ಟು ಹಿಂದುಳಿದ ವರ್ಗದ ಜನಾಂಗದ ಸದಸ್ಯರಿಗೆ ಅರಿವು ಇಲ್ಲದಿರುವುದನ್ನು ನೋಡಬಹುದಾಗಿದೆ.

೪.೨.೮ ಎಸ್.ಡಿ.ಎಂ.ಸಿ ಸದಸ್ಯರ ಆಯ್ಕೆಯ ಪ್ರಕ್ರಿಯೆ

ಗ್ರಾಮ ಪಂಚಾಯಿತಿಯುತನ್ನ ನಾಗರಿಕ ಸೌಲಭ್ಯಗಳ ಸಮಿತಿಯ ಮೂಲಕ ಗ್ರಾಮಪಂಚಾಯಿತಿಯೊಳಗೆ ಬರುವ ಎಲ್ಲಾ ಶಾಲೆಗಳನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರಚನೆಯನ್ನು ಮಾಡುತ್ತದೆ. ಆದರೆ ಈ ಅಧಿಕಾರವನ್ನು ಆಯಾ ಶಾಲೆಯ ಮುಖ್ಯಸ್ಥರಿಗೆ ವಹಿಸಲಾಗುತ್ತದೆ. ಶಾಲೆಗಳು ಎಂದರೆ ಸರ್ಕಾರಿ ಅಥವಾ ಸರ್ಕಾರಿ ಅನುದಾನಿತ ಪ್ರಾಥಮಿಕ ಶಾಲೆಗಳು, ಪ್ರೌಢಶಾಲೆಗಳು ಮತ್ತು ಪರ್ಯಾಯ ಶಿಕ್ಷಣಕೇಂದ್ರಗಳು ಎಂದು ಅರ್ಥ ಪರ್ಯಾಯ ಶಿಕ್ಷಣ ಕೇಂದ್ರಗಳನ್ನು ಶಾಲೆ ಬಿಟ್ಟ ಮಕ್ಕಳಿಗಾಗಿ ಸರ್ಕಾರವು ತೆರದಿದೆ. ಉದಾಹರಣೆಗೆ ಪೂರಕ ಶಾಲೆ ರೆಸಿಡೆನ್ಸಿಯಲ್ ಬ್ರಿಡ್ಜ್ ಕೋರ್ಸ್, ಇತ್ಯಾದಿ ಇಂತಹ ಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ರಚಿಸಬೇಕು. ಎಸ್.ಡಿ.ಎಂ.ಸಿಯನ್ನು ಪ್ರಜಾಸತ್ತಾತ್ಮಕ ಮಾರ್ಗದಲ್ಲಿ ಆರಿಸಬೇಕೆಂದು ಎಸ್.ಡಿ.ಎಂ.ಸಿ ಮಾದರಿ ಉಪವಿಧಿ ಸ್ಪಷ್ಟವಾಗಿ ಹೇಳಿದೆ. ಶಾಲೆಯಲ್ಲಿ ಓದುತ್ತಿರುವ ಮಗುವಿನ ಸಹಜ ತಂದೆ-ತಾಯಿಗಳು ತಂದೆ-ತಾಯಿ ಪರಿಷತ್ತಿನ ಸದಸ್ಯರಾಗಿದ್ದು. ಈ ಪರಿಷತ್ತು ತಮ್ಮ ಪೈಕಿ ೯ ಜನ ಪ್ರತಿನಿಧಿಗಳನ್ನು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗೆ ಆಯ್ಕೆಮಾಡತಕ್ಕದ್ದು ಎಂದು ಸ್ಪಷ್ಟಪಡಿಸಿದೆ.

ಕೋಷ್ಟಕ ೧೩

ಎಸ್.ಡಿ.ಎಂ.ಸಿ ಸದಸ್ಯರ ಆಯ್ಕೆಯ ಪ್ರಕ್ರಿಯೆ ಅರಿವು

ಆಯ್ಕೆ ಮಾಡಿದವರು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ತಂದೆ ತಾಯಿ ಪರಿಷತ್ತ್	೧೫೩	೪೮.೩	೧೩೩	೪೯.೪	೧೩೯	೬೨.೩	೬೯	೫೧.೧	೪೯೪	೫೨.೩
ಶಿಕ್ಷಕರು	೭೨	೨೨.೭	೫೭	೨೧.೨	೧೯	೮.೫	೧೩	೯.೬	೧೬೧	೧೭.೧
ಜನ ಪ್ರತಿನಿಧಿಗಳು	೧೪	೪.೪	೭	೨.೬	೧೬	೭.೨	೧೭	೧೨.೬	೫೪	೫.೭

ಗ್ರಾಮದ ಮುಖಂಡರು	೭೮	೨೪.೬	೭೨	೨೬.೪	೪೯	೨೨	೩೬	೨೬.೭	೨೩೫	೨೪.೯

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ತಂದೆ–ತಾಯಿ ಪರಿಷತ್ತಿನಿಂದ ಒಂಭತ್ತು ಜನರನ್ನು ಆಯ್ಕೆ ಮಾಡಿದರು ಎಂದು ಶೇಕಡ ೫೨.೩ ರಷ್ಟು ಸದಸ್ಯರು ಪ್ರತಿಕ್ರಿಯಿಸಿದ್ದಾರೆ. ಶೇಕಡ ೨೪.೯ ರಷ್ಟು ಸದಸ್ಯರು ಊರಿನ ಹಿರಿಯರು ಸೂಚಿಸಿದರು ಎಂದು, ಶೇಕಡ ೫.೭ ರಷ್ಟು ಸದಸ್ಯರು ಕ್ಷೇತ್ರದ ಜನಪ್ರತಿನಿಧಿಗಳು ಸೂಚಿಸಿದರು ಎಂದು, ಶೇಕಡ ೧೭.೧ ರಷ್ಟು ಸದಸ್ಯರು ಶಿಕ್ಷಕರು ಸೂಚಿಸಿದರು ಎಂದು ತಿಳಿಸಿದ್ದಾರೆ. ಎಸ್.ಡಿ.ಎಂ.ಸಿ ಆಯ್ಕೆ ಸಂಪೂರ್ಣ ಪ್ರಜಾಸತ್ತಾತ್ಮಕವಾಗಿರಬೇಕು. ತಂದೆ–ತಾಯಿ ಪರಿಷತ್ತಿನಿಂದ ೯ ಪೋಷಕ ಸದಸ್ಯರನ್ನು ಆಯ್ಕೆ ಮಾಡಬೇಕೆಂದು ಮಾದರಿ ಉಪವಿಧಿ ಸ್ಪಷ್ಟಪಡಿಸಿದೆ. ಈ ಪ್ರಕ್ರಿಯೆಯ ಸೂಕ್ಷ್ಮತೆಗಳನ್ನು ಹಲವು ಸದಸ್ಯರು ತಿಳಿದುಕೊಂಡಿಲ್ಲ. ಈ ಎಸ್.ಡಿ.ಎಂ.ಸಿ ಮಾದರಿ ಉಪವಿಧಿ ಉಲ್ಲೇಖಿಸಿರುವ ಎಸ್.ಡಿ.ಎಂ.ಸಿ ರಚನೆ ನಿಯಮಗಳನ್ನು ಶಾಲೆಗಳು ಪಾಲಿಸುತ್ತಿಲ್ಲ. ಸದಸ್ಯರ ಆಯ್ಕೆ ಪ್ರಕ್ರಿಯೆ ಏಕರೂಪದಲ್ಲಿಲ್ಲ. ಆಯ್ಕೆ ಪ್ರಕ್ರಿಯೆ ಬಗ್ಗೆ ಪ್ರಸಕ್ತ ಸದಸ್ಯರಿಗೆ ಅರಿವು ಇಲ್ಲದಿರುವುದನ್ನು ನಾವು ಗಮನಿಸಬಹುದಾಗಿದೆ.

೪.೨.೯ ಎಸ್.ಡಿ.ಎಂ.ಸಿ ಸದಸ್ಯರ ಆಯ್ಕೆಯನ್ನುಚುನಾವಣೆಯು ಮೂಲಕ ಆಯ್ಕೆ ಯ ಬಗ್ಗೆ ಸದಸ್ಯರ ಅಭಿಪ್ರಾಯ

ಎಸ್.ಡಿ.ಎಂ.ಸಿ ಸದಸ್ಯರ ಆಯ್ಕೆಯನ್ನು ಚುನಾವಣೆಯ ಮೂಲಕ ಆಯ್ಕೆ ಮಾಡಬೇಕೆ ಎಂಬ ವಿಷಯದ ಬಗ್ಗೆ ಸದಸ್ಯರನ್ನು ಸಂದರ್ಶಿಸಲಾಯಿತು.

ಕೋಷ್ಟಕ ೧೪

ಎಸ್.ಡಿ.ಎಂ.ಸಿ ಸದಸ್ಯರ ಆಯ್ಕೆಯನ್ನುಚುನಾವಣೆಯು ಮೂಲಕ ಆಯ್ಕೆಯ ಬಗ್ಗೆ ಸದಸ್ಯರ ಅಭಿಪ್ರಾಯ

ಜಿಲ್ಲೆ	ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೧೬೨	೪೭.೬	೧೭೮	೫೨.೪
ಬಾಗಲಕೋಟೆ	೧೭೯	೫೨.೬	೧೬೧	೪೭.೪
ಬಳ್ಳಾರಿ	೧೨೯	೪೦.೨	೧೯೨	೫೯.೮
ರಾಯಚೂರು	೭೯	೪೬.೨	೯೨	೫೩.೮
ಎಲ್ಲಾ ಜಿಲ್ಲೆಗಳು	೫೪೯	೪೬.೮	೬೨೩	೫೩.೨

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಈ ಮಾಹಿತಿಗಳು ಎಸ್.ಡಿ.ಎಂ.,ಸಿಯ ಹೊಣೆಗಾರಿಕೆ, ಪಾರದರ್ಶಕತೆ ಬಗ್ಗೆ ಪರೋಕ್ಷ ಸೂಚನೆಯನ್ನು ನೀಡುತ್ತದೆ. ಇದರಲ್ಲಿ ಹೌದು ಎಂದು ಶೇಕಡ ೪೬.೮ ರಷ್ಟು ಹಾಗೂ ಶೇಕಡ ೫೩..೨ ರಷ್ಟು ಇಲ್ಲ ಎಂದು ಉತ್ತರಿಸಿದ್ದಾರೆ. ಇದನ್ನು ಗಮನಿಸಿದಾಗ ಸದಸ್ಯರಲ್ಲಿ ಏಕರೂಪತೆ ಇಲ್ಲ ಎಂದು

ಗಮನಿಸಬಹುದು. ಆದರೆ ಬಹುಜನರು ಆಯ್ಕೆಯನ್ನು ಚುನಾವಣೆಯ ಮೂಲಕ ನಡೆಸಬೇಕು ಎಂಬ ಮಾಹಿತಿ ಇರುವುದರಿಂದ ಪ್ರಜಾಪ್ರಭುತ್ವ ಮಾದರಿಯಲ್ಲಿ ಹೇಗೆ ಮಾಡಬೇಕು ಎಂಬ ವಿಧಾನವನ್ನು ಕಂಡುಕೊಳ್ಳಬೇಕಾಗಿದೆ.

೪.೨.೧೦ ಎಸ್.ಡಿ.ಎಂ.ಸಿ ಸಮಿತಿಯ ಕಾಲಾವದಿಯ ಬಗ್ಗೆ ಸಮಿತಿ ಸದಸ್ಯರಲ್ಲಿ ಅರಿವು

ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಇತರರ ಗರಿಷ್ಠ ಅವಧಿ ೩ ವರ್ಷಗಳು ಅಥವಾ ಗ್ರಾಮ ಪಂಚಾಯತಿ ಮುಕ್ತಾಯವಾಗುವವರೆಗೂ, ಆತ/ಆಕೆ ಎಸ್ ಡಿ ಎಮ್ ಸಿ ಸಮಿತಿಯ ನಿರಂತರ ಮೂರು ಸಭೆಗಳಿಗೆ ಗೈರು ಹಾಜರು ಆದಲ್ಲಿ, ಯಾವುದೇ ವ್ಯವಹಾರದ ನಿರ್ವಹಣೆಯಲ್ಲಿ ಭ್ರಷ್ಟಾಚಾರದಲ್ಲಿ ತೊಡಗಿದಲ್ಲಿ ಅವರ ಮಕ್ಕಳು ವಿದ್ಯಾರ್ಥಿಯಾಗಿರುವುದು ನಿಂತು ಹೋದಲ್ಲಿ, ನ್ಯಾಯಾಲಯದಿಂದ ಆಪಾದಿತನೆಂದು ತೀರ್ಮಾನವಾಗಿದ್ದಲ್ಲಿ, ಯಾವುದೇ ಮಗುವಿನ ತಂದೆ ತಾಯಿಯು ಆಗಿರದಿದ್ದಲ್ಲಿ ಸದಸ್ಯತ್ವ ಕೊನೆಯಾಗುವುದು ಆದರೆ ಪ್ರಸ್ತುತ ಎಸ್.ಡಿ.ಎಂ.ಸಿ ಸಮಿತಿಯ ಕಾಲಾವದಿಯ ಬಗ್ಗೆ ಸಮಿತಿ ಸದಸ್ಯರ ಬಗ್ಗೆ ಮಾತ್ರ ಕೇಳಿರುವುದರಿಂದ ಇದು ಗರಷ್ಟ ಅವಧಿ ಮೂರು ವರ್ಷಗಳು ಮಾತ್ರ ಇರುತ್ತದೆ. ಈ ಹಿನ್ನಲೆಯಲ್ಲಿ ಅವರ ಅರಿವಿನ ಬಗ್ಗೆ ಈಕೆಳಕಂಡಂತೆ ಅರಿವು ಇರುವುದನ್ನು ನೋಡಬಹುದಾಗಿದೆ.

ಕೋಷ್ಟಕ ೧೫

ಎಸ್.ಡಿ.ಎಂ.ಸಿ ಸಮಿತಿಯ ಕಾಲಾವದಿಯ ಬಗ್ಗೆ ಸಮಿತಿ ಸದಸ್ಯರಲ್ಲಿ ಅರಿವು

ಜಿಲ್ಲೆ	ಪುರುಷ				ಮಹಿಳೆ			
	ಅರಿವು		ಅರಿವು ಇಲ್ಲದಿರುವುದು		ಅರಿವು		ಅರಿವು ಇಲ್ಲದಿರುವುದು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೧೩೪	೮೮.೨	೯	೧೧.೮	೪೪	೮೧.೫	೧೦	೧೮.೫
ಬಾಗಲಕೋಟೆ	೧೧೮	೬೫.೮	೨೭	೩೪.೨	೩೦	೬೫.೨	೧೬	೩೪.೮
ಬಳ್ಳಾರಿ	೧೮೮	೮೫.೨	೮	೧೪.೮	೫೯	೮೩.೧	೧೨	೧೬.೯
ರಾಯಚೂರು	೧೮೬	೭೫	೧೯	೨೫	೩೧	೬೭.೪	೧೫	೩೨.೬
ಎಲ್ಲಾ ಜಿಲ್ಲೆಗಳು	೬೨೬	೭೭.೯	೬೩	೨೨.೧	೧೬೪	೭೫.೬	೫೩	೨೪.೪

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಎಸ್.ಡಿ.ಎಂ.ಸಿ ಸಮಿತಿಯ ಕಾಲಾವದಿಯ ಬಗ್ಗೆ ಸಮಿತಿ ಸದಸ್ಯರಲ್ಲಿ ಶೇಕಡ ೭೭.೯ ಅರಿವು ಪುರುಷ ಸದಸ್ಯರಿಗೆ ಇದ್ದು. ಶೇಕಡ ೨೨.೧ ರಷ್ಟು ಪುರುಷ ಸದಸ್ಯರಿಗೆ ಅರಿವು ಇಲ್ಲದಿರುವುದು ಕಂಡುಬಂದಿದ್ದು. ಶೇಕಡ ೭೫.೫ ರಷ್ಟು ಮಹಿಳಾಸದಸ್ಯರಿಗೆ ಅರಿವು ಇದ್ದು. ಶೇಕಡ ೨೪.೪ ರಷ್ಟು ಮಹಿಳಾ ಸದಸ್ಯರಿಗೆ ಅರಿವು ಇಲ್ಲದಿರುವುದನ್ನು ಕಾಣಬಹುದಾಗಿದೆ.

೪.೨.೧೧ ಎಸ್.ಡಿ ಎಂ.ಸಿಯಲ್ಲಿರಬೇಕಾದ ಸದಸ್ಯರು

ಎಸ್.ಡಿ.ಎಂ.ಸಿ ಯಲ್ಲಿ ತಂದೆ-ತಾಯಿ ಪರಷತ್ತಿನಿಂದ ಒಂಬತ್ತು ಜನ ಚುನಾಯಿತರಾದ ಪ್ರತಿನಿಧಿಗಳು ಇರುತ್ತಾರೆ. ಇದರಲ್ಲಿ ಕನಿಷ್ಠ ಮೂರು ಮಹಿಳೆಯರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಸಮುದಾಯದಿಂದ ಒಬ್ಬರು, ಮತ್ತು ಅಲ್ಪ ಸಂಖ್ಯಾತ ಸಮುದಾಯದ ಒಬ್ಬ ಪ್ರತಿನಿಧಿ ಇರಬೇಕು ಹಾಗೂ ಶಾಲೆಯ ಮುಖ್ಯ ಶಿಕ್ಷಕರು, ಆರೋಗ್ಯ ಕಾರ್ಯಕರ್ತೆ ಮತ್ತು ಅಂಗನವಾಡಿ ಶಿಕ್ಷಕಿ ಇವರು ಪದನಿಮಿತ್ತ ಸದಸ್ಯರು, ಶಾಲೆಯ ಉನ್ನತ ತರಗತಿಯಿಂದ ಸಂಬಂಧಪಟ್ಟ ತರಗತಿಗಳ ವಿದ್ಯಾರ್ಥಿಗಳೇ ಆಯ್ಕೆ ಮಾಡಿದ ಇಬ್ಬರು ವಿದ್ಯಾರ್ಥಿಗಳು, ಗ್ರಾಮದಲ್ಲಿನ ಯುವಕ-ಯುವತಿ ಮಂಡಳಿಯಿಂದ ಅಥವಾ ಎಸ್.ಹೆಚ್.ಜಿಯಿಂದ ಒಬ್ಬ ಪ್ರತಿನಿಧಿ ಹಳ್ಳಿಯಲ್ಲಿರುವ ಶಿಕ್ಷಣ ತಜ್ಞ, ಸ್ವಯಂಸೇವಾ ಸಂಸ್ಥೆಯ ಪ್ರತಿನಿಧಿ, ಧಾನಿ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡಿ ಒಟ್ಟು ಸಮಿತಿಯಲ್ಲಿ ಹದಿನೇಳು ಸದಸ್ಯರನ್ನು ಗರಿಷ್ಟ ಹೊಂದಿರಬಹುದು. ಇದರ ಅರಿವು ಇದ್ದಾಗ ಒಟ್ಟು ಸದಸ್ಯರ ಅರಿವು ಉಂಟಾಗುವುದರಿಂದ ಇದರ ಬಗ್ಗೆ ಅರಿವು ಎಷ್ಟಿದೆ ಎಂಬುದರ ಬಗ್ಗೆ ತಿಳಿಯಲಾಯಿತು.

ಕೋಷ್ಟಕ ೧೬

ಎಸ್.ಡಿ ಎಂ.ಸಿಯಲ್ಲಿರಬೇಕಾದ ಸದಸ್ಯರ ಬಗ್ಗೆ ಅರಿವು

ಜಿಲ್ಲೆಗಳು	ಪುರುಷ				ಮಹಿಳೆ			
	ಅರಿವು		ಅರಿವು ಇಲ್ಲದಿರುವುದು		ಅರಿವು		ಅರಿವು ಇಲ್ಲದಿರುವುದು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೧೪೦	೪೨.೭	೧೮೮	೫೭.೩	೪೪	೩೩.೧	೮೯	೬೬.೯
ಬಾಗಲಕೋಟೆ	೧೨೫	೪೦.೭	೧೮೨	೫೯.೩	೩೦	೨೪.೨	೯೪	೭೫.೮
ಬಳ್ಳಾರಿ	೧೨೨	೩೮.೭	೧೯೩	೬೧.೩	೫೯	೪೩.೭	೭೬	೫೬.೩
ರಾಯಚೂರು	೭೮	೫೮.೬	೫೫	೪೧.೫	೩೧	೩೯.೨	೪೮	೬೦.೮
ಎಲ್ಲಾ ಜಿಲ್ಲೆಗಳು	೪೬೫	೪೨.೯	೬೧೮	೫೭.೧	೨೨೩	೪೨.೧	೩೦೭	೫೭.೯

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಎಸ್.ಡಿ.ಎಂ.ಸಿ ಸಮಿತಿಯಲ್ಲಿ ಯಾವ ಯಾವ ಸದಸ್ಯರು ಇರಬೇಕು ಎಂಬುದುರ ಬಗ್ಗೆ ಶೇಕಡ ೪೨.೯ ರಷ್ಟು ಪುರುಷ ಸದಸ್ಯರಿಗೆ ಅರಿವು ಇದ್ದು, ಶೇಕಡ ೫೭.೧ ರಷ್ಟು ಪುರುಷ ಸದಸ್ಯರಿಗೆ ಅರಿವು ಇಲ್ಲದಿರುವುದರ ಬಗ್ಗೆ ತಿಳಿದು ಬಂದಿದೆ. ಶೇಕಡ ೪೨.೧ ರಷ್ಟು ಮಹಿಳಾ ಸದಸ್ಯರಿಗೆ ಎಸ್.ಡಿ.ಎಂ.ಸಿ ಸಮಿತಿಯಲ್ಲಿ ಯಾವ ಯಾವ ಸದಸ್ಯರು ಇರಬೇಕು ಎಂಬುದರ ಬಗ್ಗೆ ಮಾಹಿತಿ ಇದ್ದು, ಶೇಕಡ ೫೭.೯ ರಷ್ಟು ಮಹಿಳಾ ಸದಸ್ಯರಿಗೆ ಅರಿವು ಇಲ್ಲದಿರುವುದನ್ನು ಗಮನಿಸಬಹುದಾಗಿದೆ.

ಎಸ್.ಡಿ.ಎಂ.ಸಿ ರಚನೆಯಲ್ಲಿ ಪಾರದರ್ಶಕತೆ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆ ಆಚರಣೆಗೆತರುವುದು ಬಹಳ ಮುಖ್ಯ ಇದರಿಂದ ಎಲ್ಲಾ ಸಾಮಾಜಿಕ ವ್ಯವಸ್ಥೆ ಸದಸ್ಯರನ್ನು ಒಮ್ಮತದಿಂದ ಭಾಗವಹಿಸುವಂತೆಮಾಡಬಹುದಾಗಿದ್ದು ತಂದೆ ತಾಯಿ ಪರಿಷತ್‌ನ ಸದಸ್ಯರೆಲ್ಲರೂ ಭಾಗವಹಿಸಿ ಆಯ್ಕೆ

ಮಾಡಬೇಕು, ಎಲ್ಲರಿಗೂ ಸಮಾನ ಅವಕಾಶವನ್ನು ನೀಡಬೇಕು, ಎಸ್.ಡಿ.ಎಂ.ಸಿ ಬಗ್ಗೆ ಎಲ್ಲರಿಗೂ ಕರ್ತವ್ಯ, ಜವಬ್ಧಾರಿ ಹಾಗೂ ಅಧಿಕಾರವನ್ನು ಮನದಟ್ಟು ಮಾಡಿ ಆಯ್ಕೆಗೆ ಸಹಾಯ ಮಾಡಬೇಕು, ಗ್ರಾಮಸ್ಥರು ಮತ್ತು ತಂದೆ-ತಾಯಿ ಪರಿಷತ್ತಿನ ಎಲ್ಲಾ ಸದಸ್ಯರು ಶಾಲೆ ಕಡೆ ಗಮನಹರಿಸಬೇಕು ಹಾಗೂ ಶಿಕ್ಷಕರು, ವಿದ್ಯಾರ್ಥಿಗಳ ನಡುವೆ ಉತ್ತಮ ಸಮನ್ವಯ ಸಾಧಿಸುವಂತವರನ್ನು ಆಯ್ಕೆ ಮಾಡಬೇಕು. ಸಮುದಾಯದ ಸಹಭಾಗಿತ್ವದಿಂದ ಎಸ್.ಡಿ.ಎಂ.ಸಿ ಸದಸ್ಯರನ್ನು ತಂದೆ ತಾಯಿ ಪರಿಷತ್ತಿನ ಎಲ್ಲಾ ಸದಸ್ಯರು ಸೇರಿ ಆಯ್ಕೆ ಮಾಡುವುದರಿಂದ ಎಸ್.ಡಿ.ಎಂ.ಸಿ ರಚನೆಯಲ್ಲಿ ಪಾರದರ್ಶಕತೆ ಹಾಗೂ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಜಾರಿಗೆ ತರಬಹುದು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪.೨.೧೨ ಎಸ್.ಡಿ.ಎಂ.ಸಿ ಗಳ ಅಧ್ಯಕ್ಷರು ಹಾಗೂ ಸದಸ್ಯರುಗಳು ಸಾಕ್ಷರತರಾಗಿರಬೇಕೆ

ಸದಸ್ಯರ ಶೈಕ್ಷಣಿಕ ಹಿನ್ನಲೆಯು ಗ್ರಾಮೀಣ ಸಾಂಸ್ಥಿಕ ವ್ಯವಸ್ಥೆಯ ಮೇಲೆ ಪರಿಣಾಮ ಬೀರುತ್ತದೆ ಎನ್ನುವ ಸಾರ್ವತ್ರಿಕ ಅಭಿಪ್ರಾಯವಿದೆ. ಎಸ್.ಡಿ.ಎಂ.ಸಿ ಯಂತಹ ಸಮಿತಿಗಳಲ್ಲಿ ಶಿಕ್ಷಿತ ಸದಸ್ಯರನ್ನೇ ಆರಿಸುವುದು ಕಷ್ಟಸಾಧ್ಯ. ಏಕೆಂದರೆ ಬಹುತೇಕ ಸಂದರ್ಭಗಳಲ್ಲಿ ಈಗಿನ ಪೀಳಿಗೆಯ ಮಕ್ಕಳೇ ಅವರ ಕುಟುಂಬದಲ್ಲಿ ಶಿಕ್ಷಣ ಪಡೆಯುವಲ್ಲಿ ಮೊದಲಿಗರಾಗಿರುತ್ತಾರೆ. ಅಭಿವೃದ್ಧಿ ಹೊಂದುತ್ತಿರುವ ಭಾರತದಂತಹ ದೇಶದಲ್ಲಿ ಎಸ್.ಡಿ.ಎಂ.ಸಿ. ಸದಸ್ಯರು ವಿದ್ಯಾವಂತರಾಗಬೇಕೆಂಬ ನಿಬಂಧನೆ ಸಾಧುವಲ್ಲ. ಏಕೆಂದರೆ ಬಹುತೇಕ ಸದಸ್ಯರು ಅನಕ್ಷರಸ್ಥರಾಗಿರುತ್ತಾರೆ. ಶೈಕ್ಷಣಿಕ ಹಿನ್ನಲೆಯಿಂದಾಗಿ ಪೋಷಕರಿಗೆ ಮಕ್ಕಳ ಶಾಲಾ ಚಟುವಟಿಕೆಯಲ್ಲಿ ಭಾಗವಹಿಸಲು ಅವಕಾಶ ನಿರಾಕರಿಸುವುದು ಕೂಡ ಸಮರ್ಥನೀಯವಲ್ಲ. ಈ ನಿಟ್ಟಿನಲ್ಲಿ ಎಸ್.ಡಿ.ಎಂ.ಸಿ ಅಧ್ಯಕ್ಷರು ಹಾಗೂ ಸದಸ್ಯರುಗಳು ಸಾಕ್ಷರತರಾಗಿರಬೇಕೆ ಎಂಬ ಬಗ್ಗೆ ಮಾಹಿತಿ ಸಂಗ್ರಹಿಸಿ ವಿಶ್ಲೇಷಿಸಲಾಯಿತು.

ಕೋಷ್ಟಕ ೧೭

ಎಸ್.ಡಿ.ಎಂ.ಸಿ ಗಳ ಅಧ್ಯಕ್ಷರು ಹಾಗೂ ಸದಸ್ಯರುಗಳು ಸಾಕ್ಷರತರಾಗಿರಬೇಕೆ ಎಂಬುದರ ಬಗ್ಗೆ ಅಭಿಪ್ರಾಯ

ಜಿಲ್ಲೆ	ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೬೮	೯೧.೨	೨೬೪	೮.೮
ಬಾಗಲಕೋಟೆ	೨೨	೯೨.೯	೨೫೭	೭.೧
ಬಳ್ಳಾರಿ	೬೫	೮೦.೭	೨೭೨	೧೯.೩
ರಾಯಚೂರು	೧೧	೮೮.೬	೭೩	೧೧.೪
ಎಲ್ಲಾ ಜಿಲ್ಲೆಗಳು	೧೬೬	೮೩.೯	೮೬೬	೧೬.೧

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಈ ಪ್ರಶ್ನೆಗೆ ಸಾಕ್ಷರರಾಗಿರಬೇಕು ಎಂದು ಶೇಕಡ ೮೩.೯ ರಷ್ಟು ಜನರು ಹೌದು ಎಂದು ಶೇಕಡ ೧೬.೧ ರಷ್ಟು ಇಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ. ಮುಂದುವರಿದು ಹೌದಾದರೆಅವರಿಗೆ

ಗೊತ್ತುಪಡಿಸಬಹುದಾದ ವಿದ್ಯಾರ್ಹತೆ ಏನು ಎಂಬುದರ ಬಗ್ಗೆ ಪ್ರತಿಕ್ರಿಯೆಯನ್ನು ಕೇಳಿದಾಗ ಈ ಕೆಳಕಂಡಂತೆ ತಮ್ಮ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದು, ಅವುಗಳ ಅಂಕಿ-ಅಂಶಗಳನ್ನು ನೀಡಲಾಗಿದೆ.

ಕೋಷ್ಟಕ ೧೮

ಎಸ್.ಡಿ.ಎಂ.ಸಿ ಸದಸ್ಯರಾಗಲು ವಿದ್ಯಾರ್ಹತೆ ಬೇಕೆ? ಬೇಡವೇ?

ವಿದ್ಯಾರ್ಹತೆ	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಶಿಕ್ಷಣದ ಬಗ್ಗೆ ಆಸಕ್ತಿ ಇದ್ದರೆ ಸಾಕು	೨೦	೫.೯	೧೧	೩.೬	೯	೨.೮	೮	೫.೮	೪೮	೪.೩
ಓದಲು ಬರೆಯಲು ಬಂದರೆ ಸಾಕು	೪೭	೧೩.೮	೨೮	೯.೧	೫೧	೧೫.೬	೧೩	೯.೫	೧೩೯	೧೨.೫
ಕಿರಿಯ ಪ್ರಾಥಮಿಕ ಶಾಲೆ	೯೮	೨೮.೮	೯೦	೨೯.೨	೯೯	೩೦.೪	೮೭	೬೩.೫	೩೭೪	೩೩.೭
ಹಿರಿಯ ಪ್ರಾಥಮಿಕ ಶಾಲೆ	೯೮	೨೮.೮	೧೦೧	೩೨.೮	೧೧೦	೩೩.೭	೨೨	೧೬.೧	೩೩೧	೨೯.೮
ಪ್ರೌಢಶಾಲೆ	೬೬	೧೯.೪	೫೬	೧೮.೨	೪೨	೧೨.೯	೪	೨.೯	೧೬೮	೧೫.೧
ಪಿಯುಸಿ ಮತ್ತು ಅದಕ್ಕಿಂದ ಹೆಚ್ಚು	೧೧	೩.೨	೨೨	೭.೧	೧೫	೪.೬	೩	೨.೨	೫೧	೪.೬

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶಿಕ್ಷಣದ ಬಗ್ಗೆ ಆಸಕ್ತಿ ಇದ್ದರೆ ಸಾಕು ಎಂದು ಶೇಕಡ ೪.೩ ರಷ್ಟು ಸದಸ್ಯರು ಪ್ರತಿಕ್ರಿಯಿಸಿದ್ದು, ಓದಲು, ಬರೆಯಲು ಬಂದರೆ ಸಾಕು ಎಂದು ಶೇಕಡ ೧೨.೫ ರಷ್ಟು ಸದಸ್ಯರು ಪ್ರತಿಕ್ರಿಯಿಸಿದ್ದಾರೆ. ೫ನೇ ತರಗತಿ ತನಕ ಓದಿದ್ದರೆ ಸಾಕು ಎಂದು ಶೇಕಡ ೩೩ರಷ್ಟು ಸದಸ್ಯರು. .೭ನೇ ತರಗತಿ ತನಕ ಓದಿದ್ದರೆ ಸಾಕು ಎಂದು ಶೇಕಡ ೨೯.೮ ರಷ್ಟು ಸದಸ್ಯರು, ೧೦ ನೇ ತರಗತಿಯವರೆಗೆ ಶೇಕಡ ೧೫.೧ ರಷ್ಟು, ಶೇಕಡ ೪.೬ ರಷ್ಟು ಜನರು ಪಿಯುಸಿ ಮತ್ತು ಅದಕ್ಕಿಂತ ಹೆಚ್ಚು ಎಂಬ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ. ಈ ಪ್ರತಿಕ್ರಿಯೆನ್ನು ಗಮನಿಸಿದಾಗ ಎಲ್ಲರ ಒಲವು ಓದಿರಲೇಬೇಕು ಎಂಬ ಅಭಿಪ್ರಾಯಕ್ಕೆ ಮನ್ನಣೆಯನ್ನು ನೀಡಿದ್ದಾರೆ.

೪.೨.೧೩ ಶಾಲಾ ಆಡಳಿತ ನಡೆಸಲು ನಿಮಗೆ ಅಧಿಕಾರ ನೀಡಿದರೆ ತರವ ಬದಲಾವಣೆಯ ಬಗ್ಗೆ ಅಭಿಪ್ರಾಯ.

ಶಾಲಾ ಆಡಳಿತ ನಡೆಸಲು ಭಾಗೀದಾರಿಕೆಯನ್ನು ಹೊರಹೊಮ್ಮಿಸಿ, ಕ್ರಿಯಾಶೀಲ ಪಾಲ್ಗೊಳ್ಳುವಿಕೆಯ ಮೂಲಕ ಹೊಸ ಹೊಸ ಅವಿಷ್ಕಾರಗಳನ್ನು ಮಾಡಲು ಯಾವ ದಿಕ್ಕಿನಲ್ಲಿ ಸಾಗಬೇಕು ಮತ್ತು ಅಲ್ಲಿಗೆ ಹೇಗೆ ಸಾಗಬೇಕು ಎಂಬುದರ ಬಗ್ಗೆ ಒಂದು ಮುನ್ನೋಟವನ್ನು ಮತ್ತು ಸ್ಪಷ್ಟವಾದ

ಪರಿಕಲ್ಪನೆಯನ್ನು ಹೊಂದಿರಬೇಕಾಗುತ್ತದೆ. ಈ ದೃಷ್ಟಿಯಲ್ಲಿ ಶಾಲಾ ಆಡಳಿತ ನಡೆಸಲು ನಿಮಗೆ ಅಧಿಕಾರ ನೀಡಿದರೆ ನೀವು ಏನು ಬದಲಾವಣೆ ತರುತ್ತೀರಿ ಎಂಬ ಪ್ರಶ್ನೆಗೆ ಈ ಕೆಳಕಂಡಂತೆ ಪ್ರತಿಕ್ರಿಯಿಸಿದ್ದಾರೆ.

ಕೋಷ್ಟಕ ೧೯

ಶಾಲಾ ಆಡಳಿತ ನಡೆಸಲು ನಿಮಗೆ ಅಧಿಕಾರ ನೀಡಿದರೆ ತರವ ಬದಲಾವಣೆಯ ಬಗ್ಗೆ ಅಭಿಪ್ರಾಯ

ತರುವ ಬದಲಾವಣೆ	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಶಾಲಾ ಸೌಕರ್ಯಗಳು	೧೫೯	೨೧.೮	೧೩೧	೧೭.೩	೧೩೨	೨೦.೩	೧೦೧	೨೫.೧	೫೨೩	೨೦.೬
ಗುಣಾತ್ಮಕ ಶಿಕ್ಷಣ	೧೬೭	೨೨.೯	೧೫೨	೨೦.೧	೧೪೩	೨೨	೪೮	೧೧.೯	೫೧೦	೨೦.೧
ಶಿಕ್ಷಕರ ನಿಯೋಜನೆ	೯೮	೧೩.೫	೯೦	೧೧.೯	೯೯	೧೫.೨	೮೭	೨೧.೬	೩೭೪	೧೪.೭
ಶಾಲೆ ವೇಳೆ	೧೦೨	೧೪	೧೨೨	೧೬.೧	೧೧೦	೧೬.೯	೯೮	೨೪.೩	೪೩೨	೧೭
ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರ ಸಮಿತಿಯಲ್ಲಿ	೨೦೨	೨೭.೭	೨೬೨	೩೪.೬	೧೬೭	೨೫.೭	೬೯	೧೭.೧	೭೦೦	೨೭.೬

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಕ್ರಮವಾಗಿ ಶೇಕಡ ೨೦.೬ ರಷ್ಟು ಶಾಲಾ ಮೂಲಭೂತ ಸೌಕರ್ಯಗಳಲ್ಲಿ ಬದಲಾವಣೆ, ಮಕ್ಕಳ ಗುಣಾತ್ಮಕ ಕಲಿಕೆಯ ಬಗ್ಗೆ ಶೇಕಡ ೨೧.೬ ರಷ್ಟು ಕಲಿಕೆಯ ಅಭಿವೃದ್ಧಿಗೆ ಶಿಕ್ಷಕರ ನಿಯೋಜನೆಗೆ ಶೇಕಡ ೧೪.೭ ರಷ್ಟು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯಲ್ಲೂ ಶೇಕಡ ೨೭.೬ ರಷ್ಟು ಶೇಕಡ ೧೭ ರಷ್ಟು ಶಾಲಾ ವೇಳೆಯಲ್ಲಿ ಬದಲಾವಣೆಯನ್ನು ತರುತ್ತೇವೆ ಎಂಬ ಪ್ರತಿಕ್ರಿಯೆಯನ್ನು ನೀಡಿದ್ದಾರೆ. ಶೇಕಡ ೪೧ ರಷ್ಟು ಸದಸ್ಯರು ಮಕ್ಕಳ ಗುಣಾತ್ಮಕ ಕಲಿಕೆಯ ಬಗ್ಗೆ ಬದಲಾವಣೆ ತರುತ್ತೇವೆ ಎಂದು ಪ್ರತಿಕ್ರಿಯಿಸಿರುವುದು ಸದಸ್ಯರು ಗುಣಾತ್ಮಕ ಕಲಿಕೆಗೆ ಒತ್ತು ನೀಡುವ ಕಡೆ ಮುಖ ಮಾಡುತ್ತಿರುವುದುನ್ನು ಕಾಣಬಹುದಾಗಿದೆ. ಅಲ್ಲದೆ ಶಿಕ್ಷಕರ ನೇಮಕಾತಿಯು ಈ ಪ್ರತಿಕ್ರಿಯೆಗೆ ಹತ್ತಿರವಿರುವುದನ್ನು ನೋಡಿದರೆ ಎಸ್.ಡಿ.ಎಂ.ಸಿ ಸದಸ್ಯರು ಬರೀ ಕಾಮಗಾರಿ ಹಾಗೂ ಹಣಕಾಸಿನ ವಿಚಾರದಲ್ಲಿ ಮಾತ್ರ ಹೆಚ್ಚು ಪ್ರತಿಕ್ರಿಯಿಸುತ್ತಾರೆ ಎಂಬ ಸಾರ್ವಜನಿಕರ ಭಾವನೆಯನ್ನು ಹುಸಿಗೊಳಿಸುವ ಪ್ರತಿಕ್ರಿಯೆಯನ್ನು ನೋಡಬಹುದಾಗಿದೆ.

ಎಸ್.ಡಿ.ಎಂ.ಸಿ ಮಾದರಿ ಉಪವಿಧಿಗಳಲ್ಲಿ ಎಸ್.ಡಿ.ಎಂ.ಸಿ ಸ್ಥಾಪನೆಯ ಉದ್ದೇಶವನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಎಸ್.ಡಿ.ಎಂ.ಸಿಯ ಪ್ರಯೋಜನಗಳನ್ನು ಗಮನದಲ್ಲಿರಿಸಿಕೊಂಡು ಮಾದರಿ ಉಪವಿಧಿಗಳನ್ನು ತಯಾರಿಸಿದ ತಜ್ಞರು ಇದನ್ನು ಗುರುತಿಸಿದ್ದಾರೆ. ಎಸ್.ಡಿ.ಎಂ.ಸಿಗಳ ಕಾರ್ಯನಿರ್ವಹಣೆಯ ಫಲಿತಾಂಶ ನಿರ್ಣಯಿಸುವ ಸಲುವಾಗಿ ಎಸ್.ಡಿ.ಎಂ.ಸಿಯ ಚಟುವಟಿಕೆಯಲ್ಲಿ

ಪಾಲ್ಗೊಳ್ಳುವ ಬಗ್ಗೆ ಸದಸ್ಯರ ಅಭಿಪ್ರಾಯ ತಿಳಿದುಕೊಳ್ಳುವ ಸಲುವಾಗಿ ಎಸ್.ಡಿ.ಎಂ.ಸಿಯ ಧ್ಯೇಯೋದ್ದೇಶದ ಅರಿವಿನ ಕುರಿತು ಪ್ರಶ್ನೆಗಳನ್ನು ಕೇಳಲಾಯಿತು. ಶಾಲಾ ಸಂಬಂಧಿತ ವಿಚಾರಗಳ ಕುರಿತು ಚರ್ಚೆ ಮತ್ತು ಶಾಲೆಯ ಬಗ್ಗೆ ಕಾಳಜಿ ತೆಗೆದುಕೊಳ್ಳುವ ಕುರಿತಾದ ಸಮಗ್ರ ಧ್ಯೇಯೋದ್ದೇಶಗಳ ಬಗ್ಗೆ ಹೆಚ್ಚಿನ ಅಧ್ಯಕ್ಷರು ಮತ್ತು ಮಹಿಳಾ ಸದಸ್ಯರಿಗೆ ಅರಿವು ಇದೆ. ಈಗಾಗಿ ಶೇಕಡ ೭೮ ರಷ್ಟು ಉತ್ತಮವಾಗಿ ಎಂದು ಶೇಕಡ ೨೨ ರಷ್ಟು ಸಾಧರಣ ಎಂದು ಪ್ರತಿಕ್ರಿಯಿಸಿದ್ದಾರೆ.

೪.೨.೧೪ ಎಸ್.ಡಿ.ಎಂ.ಸಿಯ ಧ್ಯೇಯೋದ್ದೇಶಗಳು, ಅಧಿಕಾರ, ಪ್ರಕಾರ್ಯಗಳು ಮತ್ತು ಕಾರ್ಯನಿರ್ವಹಣೆಯ ಬಗ್ಗೆ ಸದಸ್ಯರ ಅರಿವು

ಎಸ್.ಡಿ.ಎಂ.ಸಿ ಸದಸ್ಯರು ತಮಗಿರುವ ಕರ್ತವ್ಯ ಮತ್ತು ಅಧಿಕಾರಗಳನ್ನು ಸಮರ್ಪಕವಾಗಿ ನಿರ್ವಹಿಸಿದಲ್ಲಿ ಎಸ್.ಡಿ.ಎಂ.ಸಿಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗುತ್ತದೆ. ಆಡಳಿತ ವಿಚಾರದಲ್ಲಿ ಶೈಕ್ಷಣಿಕ ವಿಚಾರಗಳಲ್ಲಿ ಮತ್ತು ಹಣಕಾಸಿನ ವಿಚಾರಗಳ ಕುರಿತು ಎಸ್.ಡಿ.ಎಂ.ಸಿಯ ಸದಸ್ಯರ ಕರ್ತವ್ಯ ಮತ್ತು ಜವಾಬ್ಧಾರಿಗಳ ಬಗ್ಗೆ ಮಾದರಿ ಉಪವಿಧಿಯಲ್ಲಿ ಸ್ಪಷ್ಟವಾಗಿ ಉಲ್ಲೇಖಿಸಲಾಗಿದೆ. ಎಸ್.ಡಿ.ಎಂ.ಸಿಯ ಮಾದರಿ ಉಪವಿಧಿಯಲ್ಲಿ ಎಸ್.ಡಿ.ಎಂ.ಸಿ ಸ್ಥಾಪನೆಯ ಉದ್ದೇಶವನ್ನು ಸ್ಪಷ್ಟವಾಗಿ ತಿಳಿಸಲಾಗಿದೆ. ಎಸ್.ಡಿ.ಎಂ.ಸಿಯ ಪ್ರಯೋಜನಗಳನ್ನು ಗಮನದಲ್ಲಿರಿಸಿಕೊಂಡು ಮಾದರಿ ಉಪವಿಧಿಯನ್ನು ತಯಾರಿಸಿದ ತಜ್ಞರು ಈ ಉದ್ದೇಶಗಳನ್ನು ಗುರುತಿಸಿದ್ದಾರೆ. ಎಸ್.ಡಿ.ಎಂ.ಸಿಗಳ ಕಾರ್ಯ ನಿರ್ವಹಣೆಯ ಫಲಿತಾಂಶ ನಿರ್ಣಯಿಸುವ ಸಲುವಾಗಿ ಎಸ್.ಡಿ.ಎಂ.ಸಿಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವ ಬಗ್ಗೆ ಸದಸ್ಯರ ಅಭಿಪ್ರಾಯ ತಿಳಿದುಕೊಳ್ಳುವ ಸಲುವಾಗಿ ಎಸ್.ಡಿ.ಎಂ.ಸಿಯ ಧ್ಯೇಯೋದ್ದೇಶದ ಅರಿವಿನ ಕುರಿತ ಪ್ರಶ್ನೆಗಳನ್ನು ಕೇಳಲಾಯಿತು.

ಕೋಷ್ಟಕ ೨೦ ಎಸ್.ಡಿ.ಎಂ.ಸಿ ಪ್ರಕಾರ್ಯಗಳ ಬಗ್ಗೆ ಸದಸ್ಯರಲ್ಲಿ ಅರಿವು (ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.)

ಸದಸ್ಯರಲ್ಲಿ ಕರ್ತವ್ಯದ ಬಗ್ಗೆಅರಿವು	ವಿಜಾಪುರ				ಬಾಗಲಕೋಟೆ				ಬಳ್ಳಾರಿ				ರಾಯಚೂರು				ಎಲ್ಲಾ ಜಿಲ್ಲೆಗಳು			
	ಅರಿವು		ಅರಿವು ಇಲ್ಲದಿರುವುದು		ಅರಿವು		ಅರಿವು ಇಲ್ಲದಿರುವುದು		ಅರಿವು		ಅರಿವು ಇಲ್ಲದಿರುವುದು		ಅರಿವು		ಅರಿವು ಇಲ್ಲದಿರುವುದು		ಅರಿವು		ಅರಿವು ಇಲ್ಲದಿರುವುದು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಮಕ್ಕಳನ್ನು ಶಾಲೆಗೆ ಕರೆತರುವುದು	೧೪೮	೪೯.೫	೧೫೧	೫೦.೫	೯೫	೨೯.೧	೨೩೧	೭೦.೯	೧೩೪	೪೦.೬	೧೯೬	೫೯.೪	೫೫	೪೭	೧೫೪	೫೩	೪೩೨	೩೭.೧	೭೩೨	೬೨.[illegible]
ದೈಹಿಕ ಅಂಗವಿಕಲ ಮಕ್ಕಳ ಕಡೆ ಗಮನ	೪೮	೧೬.೬	೨೪೨	೮೩.೪	೩೧	೧೩	೨೦೮	೮೭	೧೮	೬.೮	೨೪೮	೯೩.೨	೬೨	೩೨.೫	೧೨೯	೬೭.೫	೧೫೯	೧೬.೧	೮೨೭	೮೩.[illegible]
ಶಾಲೆಯಲ್ಲಿ ನೈರ್ಮಲ್ಯತೆ	೧೦೧	೩೦.೫	೨೩೦	೬೯.೬	೯೨	೨೮.೪	೨೩೨	೭೧.೬	೯೭	೩೧.೭	೨೦೯	೬೮.೩	೫೫	೨೭.೧	೧೪೮	೭೨.೯	೩೪೫	೨೯.೬	೮೧೯	೭೦.[illegible]
ಮೂಲ ಸೌಕರ್ಯ ಹಾಗೂ ಶಾಲೆಗೆ ಅವಶ್ಯ ಸೌಕರ್ಯಗಳ ಹೆಚ್ಚಳ	೧೨೮	೩೮.೮	೨೦೨	೬೧.೨	೧೬೭	೪೧.೯	೨೩೨	೫೮.೧	೧೭೮	೪೮.೪	೧೯೦	೫೧.೬	೮೦	೩೯.೬	೧೨೨	೬೦.೪	೫೫೩	೪೨.೬	೭೪೬	೫೭.[illegible]
ಅನಗತ್ಯ ವಸ್ತುಗಳ ಹರಾಜು	೧೦೮	೩೦.೯	೨೪೨	೬೯.೧	೧೨೧	೩೮.೧	೧೯೭	೬೧.೯	೭೮	೨೪.೪	೨೪೨	೭೫.೬	೬೮	೩೦.೧	೧೫೮	೬೯.೯	೩೭೫	೩೦.೯	೮೩೯	೬೯.[illegible]
ಕ್ರೀಢೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳು	೯೮	೨೮.೭	೨೪೪	೭೧.೩	೮೮	೨೬.೭	೨೪೨	೭೩.೩	೭೯	೨೫.೪	೨೩೨	೭೪.೬	೧೪	೭.೩	೧೭೮	೯೨.೭	೨೭೯	೨೩.೭	೮೯೬	೭೬.[illegible]
ಶಾಲಾ ಆವರಣ ರಕ್ಷಣೆ	೮೪	೨೨	೨೯೮	೭೮	೯೧	೨೬.೮	೨೪೮	೭೩.೨	೮೭	೨೭.೫	೨೨೯	೭೨.೫	೧೧	೬.೩	೧೬೫	೯೩.೮	೨೭೩	೨೨.೫	೯೪೦	೭೭.[illegible]
ಶಾಲೆಯಲ್ಲಿ ಆರೋಗ್ಯ ಕಾರ್ಯಕ್ರಮ	೮೬	೨೬.೩	೨೪೨	೭೩.೮	೫೮	೧೭.೪	೨೭೫	೮೨.೬	೬೮	೨೦.೩	೨೬೭	೭೯.೭	೨೯	೧೪.೮	೧೬೭	೮೫.೨	೨೪೧	೨೦.೨	೯೫೧	೭೯.[illegible]
ಎಲ್ಲಾ ಶಾಲೆಯ ಕಾರ್ಯಕ್ರಮಗಳ ನಿರ್ವಹಣೆ ಹಾಗೂ ಭಾಗವಹಿಸುವಿಕೆ	೭೧	೨೨.೨	೨೪೯	೭೭.೮	೯೫	[illegible]	[illegible]	೬೭.೯	೬೭	೨೦.೩	೨೬೩	೭೯.೭	೫೮	೨೬.೧	೧೬೪	೭೩.೯	೨೯೧	೨೪.೯	೮೭೭	೭೫.[illegible]
ವಿದ್ಯಾರ್ಥಿಗಳ ಕಲಿಕೆಯ ಗುಣಮಟ್ಟ	೮೧	೨೯.೧	೧೯೭	೭೦.೯	೯೨	೨೮	೨೩೭	೭೨	೬೪	೧೯	೨೭೨	೮೧	೫೦	೨೨.೫	೧೭೨	೭೭.೫	೨೮೭	೨೪.೬	೮೭೮	೭೫.[illegible]
೨೨೦ ದಿವಸ ಕಾರ್ಯಾವಧಿಯನ್ನು ಖಾತ್ರಿಗೊಳಿಸುವುದು	೮೦	೨೮.೪	೨೦೨	೭೧.೬	೮೮	೩೦.೮	೧೯೮	೬೯.೨	೫೮	೧೯	೨೪೮	೮೧	೪೯	೨೬.೧	೧೩೯	೭೩.೯	೨೭೫	೨೫.೯	೭೮೭	೭೪.[illegible]
೩ ತಿಂಗಳಿಗೊಮ್ಮೆ ತಂದೆ ತಾಯಿ ಪರಿಷತ್ತಿನ ಸಭೆ	೮೮	೨೭.೫	೨೩೨	೭೨.೫	೮೪	೨೭.೫	೨೨೧	೭೨.೫	೮೦	೨೫	೨೪೦	೭೫	೩೯	೧೯.೯	೧೫೭	೮೦.೧	೨೯೧	೨೫.೫	೮೫೦	೭೪.[illegible]
ಜಂಟಿ ಖಾತೆಗಳ ಮೂಲಕ ಖಾತೆ ನಿರ್ವಹಣೆ	೮೬	೨೭.೧	೨೩೧	೭೨.೯	೯೦	೨೫.೯	೨೫೮	೭೪.೧	೮೧	೨೫.೪	೨೩೮	೭೪.೬	೪೬	೨೩.೭	೧೪೮	೭೬.೩	೩೦೩	೨೬	೮೬೨	೭೪
ಧಾನಿಗಳನ್ನು ಗುರುತಿಸುವುದು	೬೮	೨೧.೯	೨೪೨	೭೮.೧	೮೧	೨೬	೨೩೦	೭೪	೯೭	೨೯.೩	೨೩೩	೭೦.೭	೪೮	೨೨.೪	೧೬೬	೭೭.೬	೩೦೯	೨೫.೧	೯೨೨	೭೪.[illegible]
ಶಾಲೆಯ ಚಟುವಟಿಕೆಗಳಲ್ಲಿ ಪೋಷಕರು ಭಾಗವಹಿಸುವಂತೆ ಪ್ರೋತ್ಸಾಹ	೭೮	೨೮	೨೦೧	೭೨	೯೭	೩೦.೪	೨೨೨	೬೯.೬	೯೫	೩೨.೪	೧೯೮	೬೭.೬	೫೧	೨೩.೮	೧೬೩	೭೬.೨	೩೨೧	೨೯	೭೮೪	೭೧
ಉತ್ತೇಜಕಗಳನ್ನು ಅಗತ್ಯವಿರುವವರಿಗೆ ತಲುಪಿಸುವುದು	೯೬	೨೮.೪	೨೪೨	೭೧.೬	೫೮	೧೭.೪	೨೭೬	೮೨.೬	೯೨	೩೧.೮	೧೯೭	೬೮.೨	೮೦	೩೮.೫	೧೨೮	೬೧.೫	೩೨೬	೨೭.೯	೮೪೩	೭೨.[illegible]

ಎಸ್.ಡಿ.ಎಂ.ಸಿ ಸದಸ್ಯರು ಪ್ರಕಾರ್ಯಗಳ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು. ಮಕ್ಕಳನ್ನು ಶಾಲೆಗೆ ಕರೆತರುವುದರ ಬಗ್ಗೆ ಶೇಕಡ ೩೭.೧ ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೬೨.೯ರಷ್ಟು ಸದಸ್ಯರಿಗೆ ಅರಿವು ಇಲ್ಲದಿರುವುದರ ಬಗ್ಗೆ ಮಾಹಿತಿಯನ್ನು ನೀಡಿದ್ದು. ದೈಹಿಕ ಅಂಗವಿಕಲತೆಯ ಮಕ್ಕಳ ಕಡೆ ಗಮನವನ್ನು ನೀಡಬೇಕು ಎಂಬುದರ ಬಗ್ಗೆ ಶೇಕಡ ೧೬.೧ ರಷ್ಟು ಸದಸ್ಯರಿಗೆ ಅರಿವಿದ್ದು. ಶೇಕಡ ೮೩.೯ ರಷ್ಟು ಸದಸ್ಯರಿಗೆ ಅರಿವು ಇಲ್ಲದಿರುವುದರ ಬಗ್ಗೆ ಗಮನಿಸಬಹುದಾಗಿದೆ. ಶಾಲೆಯಲ್ಲಿ ನೈರ್ಮಲ್ಯತೆ ಹಾಗೂ ಶಾಲೆಯ ಸ್ವಚ್ಚತೆಯ ಬಗ್ಗೆ ಶೇಕಡ ೭೯.೬ ರಷ್ಟು ಸದಸ್ಯರಿಗೆ ಅರಿವಿದ್ದು. ಶೇಕಡ ೨೦.೪ ರಷ್ಟು ಸದಸ್ಯರಿಗೆ ಅರಿವಿಲ್ಲದಿರುವುದರ ಬಗ್ಗೆ ತಿಳಿದುಕೊಳ್ಳಬಹುದಾಗಿದೆ. ಮೂಲಸೌಕರ್ಯ ಹಾಗೂ ಶಾಲೆಗೆ ಅವಶ್ಯ ಸೌಕರ್ಯಗಳ ಹೆಚ್ಚಳದ ಬಗ್ಗೆ ಶೇಕಡ ೪೭.೬ ರಷ್ಟು ಸದಸ್ಯರಿಗೆ ಅರಿವಿದ್ದು. ಶೇಕಡ ೫೨.೪ ರಷ್ಟು ಸದಸ್ಯರಿಗೆ ಅರಿವಿಲ್ಲದಿರುವುದನ್ನು ನೋಡಬಹುದಾಗಿದೆ. ಶಾಲೆಯ ಅನಗತ್ಯ ವಸ್ತುಗಳ ಹರಾಜು ಹಾಕುವುದರ ಬಗ್ಗೆ ಶೇಕಡ ೩೦.೯ರಷ್ಟು ಸದಸ್ಯರಿಗೆ ಅರಿವಿದ್ದು. ಶೇಕಡ ೬೯.೧ರಷ್ಟು ಸದಸ್ಯರಿಗೆ ಅರಿವಿಲ್ಲದಿರುವುದು ಕಂಡು ಬಂದಿದೆ. ಶಾಲೆಗಳಲ್ಲಿ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಯ ಕಾರ್ಯಕ್ರಮಗಳನ್ನು ನಡೆಸುವುದರ ಬಗ್ಗೆ ಶೇಕಡ ೭೩.೭ರಷ್ಟು ಸದಸ್ಯರಿಗೆ ಅರಿವಿದ್ದು. ಶೇಕಡ ೨೬.೩ ರಷ್ಟು ಸದಸ್ಯರಿಗೆ ಅರಿವಿಲ್ಲದಿರುವುದರ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶಾಲಾ ಆವರಣದ ರಕ್ಷಣೆಯ ಬಗ್ಗೆ ಶೇಕಡ ೭೭.೫ ರಷ್ಟು ಸದಸ್ಯರಿಗೆ ಅರಿವಿದ್ದು. ಶೇಕಡ ೨೨.೫ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಶಾಲೆಯಲ್ಲಿ ಮಕ್ಕಳಿಗೆ ಆರೋಗ್ಯ ತಪಾಷಣೆ ಕಾರ್ಯಕ್ರಮ ಹಮ್ಮಿಕೊಳ್ಳುವುದರ ಬಗ್ಗೆ ಶೇಕಡ ೭೦.೨ ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೨೯.೮ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಶಾಲೆಯ ಎಲ್ಲಾ ಕಾರ್ಯಕ್ರಮಗಳ ನಿರ್ವಹಣೆಯ ಹಾಗೂ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ಶೇಕಡ ೭೪.೯ ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೨೫.೧ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ವಿದ್ಯಾರ್ಥಿಗಳ ಕಲಿಕೆಗೆ ಸಮಬಂಧಿಸಿದಂತೆ ಪ್ರಕಾರ್ಯದ ಬಗ್ಗೆ ಶೇಕಡ ೭೪.೬ ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೨೫.೪ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಶಾಲೆಯು ವಾರ್ಷಿಕವಾಗಿ ೨೨೦ ಶೈಕ್ಷಣಿಕ ಕಾರ್ಯಾವಧಿಯನ್ನು ಖಾತ್ರಿಗೊಳಿಸುವುದರ ಬಗ್ಗೆಶೇಕಡ ೭೫.೯ ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೨೪.೧ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಪ್ರತಿ ಮೂರು ತಿಂಗಳಿಗೊಮ್ಮೆ ತಂದೆ ತಾಯಿ ಪರಿಷತ್ತಿನ ಸಭೆ ಕರೆಯುವುದರ ಬಗ್ಗೆ ಶೇಕಡ ೭೫.೫ ರಷ್ಟು ಸದಸ್ಯರಿಗೆ ಅರಿವಿದ್ದು. ಶೇಕಡ ೨೪.೫ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಎಸ್.ಡಿ.ಎಂ.ಸಿಯ ಜಂಟಿ ಖಾತೆಗಳ ಮೂಲಕ ಶಾಲೆಯ ಖಾತೆಗಳನ್ನು ನಿರ್ವಹಿಸುವುದರ ಬಗ್ಗೆ ಶೇಕಡ ೭೬ ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೨೪ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಶಾಲೆಗೆ ಸಂಪನ್ಮೂಲ ಕ್ರೋಡೀಕರಣಕ್ಕಾಗಿ ದಾನಿಗಳನ್ನು ಗುರುತಿಸುವುದರ ಬಗ್ಗೆ ಶೇಕಡ ೭೫.೧ ರಷ್ಟು ಸದಸ್ಯರಿಗೆ ಅರಿವಿದ್ದು. ಶೇಕಡ ೨೪.೯ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಶಾಲೆಯ ಚಟುವಟಿಕೆಗಳಲ್ಲಿ ಪೋಷಕರು ಭಾಗವಹಿಸುವಂತೆ ಪ್ರೋತ್ಸಾಹ ನೀಡುವ ಪ್ರಕಾರ್ಯದ ಬಗ್ಗೆ ಶೇಕಡ ೭೯ ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೨೧ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಮಕ್ಕಳಿಗೆ ಬರುವ ಉತ್ತೇಜಕಗಳನ್ನು ಅಗತ್ಯವಿರುವವರಿಗೆ ತಲುಪಿಸುವುದರ ಬಗ್ಗೆ ಶೇಕಡ ೭೨.೯ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೨೭.೧ ರಷ್ಟು ಸದಸ್ಯರಿಗೆ ಅರಿವು ಇಲ್ಲದಿರುವುದನ್ನು ನಾವು ನೋಡಬಹುದಾಗಿದೆ.

೪.೨.೧೫ ಎಸ್.ಡಿ.ಎಂ.ಸಿ ಸದಸ್ಯರಲ್ಲಿ ಅಧಿಕಾರದ ಬಗ್ಗೆ ಅರಿವು

ಎಸ್.ಡಿ.ಎಂ.ಸಿಗಳ ಸಮರ್ಪಕ ಕಾರ್ಯನಿರ್ವಹಣೆಗೆ ಪ್ರತಿ ಸದಸ್ಯನೂ ಎಸ್.ಡಿ.ಎಂ.ಸಿ ಮಾದರಿ ಉಪವಿಧಿಯಲ್ಲಿ ಹೇಳಲಾಗಿರುವ ಕರ್ತವ್ಯ ಮತ್ತು ಅಧಿಕಾರಗಳ ಬಗ್ಗೆ ಸಂಪೂರ್ಣ ತಿಳಿದುಕೊಳ್ಳಬೇಕಾದ್ದು ಅತ್ಯಗತ್ಯ. ಎಸ್.ಡಿ.ಎಂ.ಸಿ ಸಮಿತಿ ಸದಸ್ಯರು ಕಾರ್ಯನಿರ್ವಹಣೆಯಲ್ಲಿ ಗಮನಾರ್ಹ ಪಾತ್ರ ನಿರ್ವಹಿಸುವುದರಿಂದ ಸದಸ್ಯರಿಗೆ ತಮ್ಮ ಸ್ವಾಭಾವಿಕ ಅಧಿಕಾರಗಳ ಅರಿವು ಇಲ್ಲದೆ ಹೋದರೆ ಎಸ್.ಡಿ.ಎಂ.ಸಿಯ ಚಟುವಟಿಕೆಗಳಲ್ಲಿ ಸಕ್ರಿಯ ಪಾಲುದಾರಿಕೆ ಸಾಧ್ಯವಾಗುವುದಿಲ್ಲ. ಈ ಅಧ್ಯಯನದಲ್ಲಿ ಎಸ್.ಡಿ.ಎಂ.ಸಿ ಮಾದರಿ ಉಪವಿಧಿಯಲ್ಲಿ ವಿದಿತವಾಗಿರುವಂತೆ ಇರುವ ಅರಿವಿನ ಮಟ್ಟದ ಬಗ್ಗೆ ಅಂಕಿ –ಅಂಶಗಳನ್ನು ಸಂಗ್ರಹಿಸಲಾಗಿದೆ.

ಕೋಷ್ಟಕ ೨೧

ಎಸ್.ಡಿ.ಎಂ.ಸಿ ಸದಸ್ಯರಲ್ಲಿ ಅಧಿಕಾರದ ಬಗ್ಗೆ ಅರಿವು

ಸದಸ್ಯರಲ್ಲಿ ಅಧಿಕಾರದ ಬಗ್ಗೆಅರಿವು	ಬಿಜಾಪುರ				ಬಾಗಲಕೋಟೆ				ಬಳ್ಳಾರಿ				ರಾಯಚೂರು				ಎಲ್ಲಾ ಜಿಲ್ಲೆಗಳು			
	ಅರಿವು		ಅರಿವು ಇಲ್ಲದಿರುವುದು		ಅರಿವು		ಅರಿವು ಇಲ್ಲದಿರುವುದು		ಅರಿವು		ಅರಿವು ಇಲ್ಲದಿರುವುದು		ಅರಿವು		ಅರಿವು ಇಲ್ಲದಿರುವುದು		ಅರಿವು		ಅರಿವು ಇಲ್ಲದಿರುವುದು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಶಾಲಾ ಕೆಲಸಗಳ ಉಸ್ತುವಾರಿ	೧೩೪	೪೦.೪	೧೯೮	೫೯.೬	೧೧೧	೩೩.೪	೨೨೧	೬೬.೬	೧೩೪	೪೦.೬	೧೯೬	೫೯.೪	೪೪	೨೫	೧೩೨	೭೫	೪೨೩	೩೬.೨	೭೪೭	೬೩.
ಮಾಸಿಕ ಸಭೆಗಳಲ್ಲಿ ಸಮಸ್ಯೆಗಳ ಚರ್ಚೆ	೧೧೮	೩೬.೨	೨೦೮	೬೩.೮	೧೫೨	೪೭.೫	೧೬೮	೫೨.೫	೧೧೮	೩೮.೧	೧೯೨	೬೧.೯	೩೦	೧೯.೬	೧೨೩	೮೦.೪	೪೧೮	೩೭.೭	೬೯೧	೬೨.
ಮುಖ್ಯ ಶಿಕ್ಷಕರಿಗೆ ರಜೆ ಮಂಜೂರಾತಿ	೧೦೧	೩೦.೫	೨೩೦	೬೯.೫	೯೮	೩೦.೭	೨೨೧	೬೯.೩	೧೪೮	೪೬.೮	೧೬೮	೫೩.೨	೫೯	೩೨.೬	೧೨೨	೬೭.೪	೪೦೬	೩೫.೪	೭೪೧	೬೪.
ನಾಲ್ಕು ಪ್ರಾದೇಶಿಕ ರಜಾ ದಿವಸಗಳ ಬಗ್ಗೆ ತೀರ್ಮಾನಿಸುವುದು	೯೮	೨೯.೧	೨೩೯	೭೦.೯	೧೧೪	೩೯	೧೭೮	೬೧	೯೮	೩೩.೧	೧೯೮	೬೬.೯	೩೧	೧೯	೧೩೨	೮೧	೩೪೧	೩೧.೩	೭೪೭	೬೮.
ಅನಗತ್ಯ ವಸ್ತುಗಳ ಹರಾಜು	೧೦೮	೨೮.೭	೨೬೮	೭೧.೩	೧೬೪	೪೯.೫	೧೬೭	೫೦.೫	೭೯	೩೨.೬	೧೬೩	೬೭.೪	೧೬	೧೦	೧೫೩	೯೦	೩೬೭	೩೨.೮	೭೫೧	೬೭.
ಖಾತೆಗಳ ಲೆಕ್ಕ ಪರಿಶೋಧನೆ	೩೨	೧೧.೬	೨೪೪	೮೮.೪	೨೩	೮.೯	೨೩೪	೯೧.೧	೪೨	೧೫.೩	೨೩೨	೮೪.೭	೧೪	೭.೪	೧೭೬	೯೨.೬	೧೧೧	೧೧.೧	೮೮೬	೮೮.
ಶಾಲಾ ಜಾಗದಲ್ಲಿ ಬೆಳೆದ ಧಾನ್ಯಗಳ ಹರಾಜು	೪೨	೧೨.೪	೨೯೮	೮೭.೬	೩೫	೧೩.೭	೨೨೧	೮೬.೩	೧೯	೭.೭	೨೨೯	೯೨.೩	೧೧	೬.೧	೧೬೯	೯೩.೯	೧೦೭	೧೦.೪	೯೧೭	೮೯.
ಶಾಲೆಗಳ ಅಗತ್ಯ ಪರಿಕರಗಳ ಖರೀದಿ	೯೭	೨೮.೨	೨೪೨	೭೧.೮	೩೮	೧೪.೩	೨೨೮	೮೫.೭	೬೮	೨೮.೭	೧೬೯	೭೧.೩	೨೯	೧೮	೧೩೨	೮೨	೨೩೨	೨೩.೧	೭೭೧	೭೬.

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಎಸ್.ಡಿ.ಎಂ.ಸಿ ಸಮಿತಿಯು ಶಾಲಾ ಉಸ್ತುವಾರಿ ನಡೆಸುವುದರ ಬಗ್ಗೆ ಶೇಕಡ ೩೬.೨ ರಷ್ಟು ಸದಸ್ಯರಿಗೆ ಅರಿವಿದ್ದು. ಶೇಕಡ ೬೩.೮ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಶಾಲಾ ಕೆಲಸಗಳ ಉಸ್ತುವಾರಿಯ ಬಗ್ಗೆ ಶೇಕಡ ೩೭.೩ ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೬೨.೩ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಮಾಸಿಕ ಸಭೆಗಳಲ್ಲಿ ಸಮಸ್ಯೆಗಳ ಬಗ್ಗೆ ಚರ್ಚೆಯ ಬಗ್ಗೆ ಶೇಕಡ ೩೫.೪ ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೬೪.೬ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಮುಖ್ಯ ಶಿಕ್ಷಕರಿಗೆ ಸಾಂಧರ್ಬಿಕ ರಠೆಯನ್ನು ಮಂಜೂರು ಮಾಡುವ ಬಗ್ಗೆ ಶೇಕಡ ೩೧.೩ ರಷ್ಟು ಸದಸ್ಯರಿಗೆ ಅರಿವು ಇದ್ದು ಶೇಕಡ ೬೮.೭ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಶಾಲೆಗಳಲ್ಲಿ ಇರುವ ಅನಗತ್ಯ ವಸ್ತುಗಳ ಹರಾಜು ಹಾಕುವುದರ ಬಗ್ಗೆ ಶೇಕಡ ೩೨.೮ ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೬೭.೨ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಶಾಲೆಯ ಖಾತೆಗಳ ಲೆಕ್ಕ ಪರಿಶೋಧನೆಯ ಬಗ್ಗೆ ಶೇಕಡ ೧೧.೧ ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೮೮.೯ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಶಾಲಾ ಜಾಗದಲ್ಲಿ ಬೆಳೆದ ಧಾನ್ಯಗಳ ಹರಾಜು ಹಾಕುವುದರ ಬಗ್ಗೆ ಶೇಕಡ ೧೦.೪ ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೮೯.೬ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ. ಶಾಲೆಗಳಿಗೆ ಬೇಕಾದ ಅಗತ್ಯ ಪರಿಕರಗಳನ್ನು ಖರೀದಿಯ ಬಗ್ಗೆ ಶೇಕಡ ೨೩.೧ ರಷ್ಟು ಸದಸ್ಯರಿಗೆ ಅರಿವು ಇದ್ದು. ಶೇಕಡ ೭೬.೯ ರಷ್ಟು ಸದಸ್ಯರಿಗೆ ಅರಿವು ಇರುವುದಿಲ್ಲ.

೪.೨.೧೬ ವಾರ್ಷಿಕ ಕ್ರಿಯಾ ಯೋಜನೆ

ಶಾಲೆಯ ವಾರ್ಷಿಕ ಕ್ರಿಯಾ ಯೋಜನೆಯ ತಯಾರಿಯಲ್ಲಿ ಸದಸ್ಯ ಕಾರ್ಯದರ್ಶಿಗೆ ಮಾರ್ಗದರ್ಶನ ನೀಡುವುದರ ಜೊತೆಗೆ ಅದನ್ನು ಅನುಮೋದಿಸುವುದು ಎಸ್.ಡಿ.ಎಂ.ಸಿ ಕರ್ತವ್ಯವಾಗಿದ್ದು, ಶಾಲೆಯ ಶೈಕ್ಷಣಿಕ ವರ್ಷದ ಪ್ರಾರಂಭದಲ್ಲಿ ಸಭೆ ಸೇರಿ ಶಾಲೆಯ ಸಮಗ್ರ ಅಭಿವೃದ್ಧಿಯ ಬಗ್ಗೆ ಚಿಂತಿಸಿ ವಾಸ್ತಾವಿಕವಾದ ಮತ್ತು ಅನುಷ್ಠಾನ ಗೊಳಿಸಬಹುದಾದ ಕ್ರಿಯಾ ಯೋಜನೆಯನ್ನು ತಯಾರಿಸಿ ಸಂಪನ್ಮೂಲಗಳನ್ನು ಕ್ರೋಢೀಕರಿಸಿ ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕಾಗಿದೆ.

ಕೋಷ್ಟಕ ೨೨

ಶಾಲಾ ವಾರ್ಷಿಕ ಕ್ರೀಯಾ ಯೋಜನೆಯ ಬಗ್ಗೆ ಅರಿವು

ಜಿಲ್ಲೆ	ವಾರ್ಷಿಕ ಕ್ರೀಯಾ ಯೋಜನೆಯ ತಯಾರಿ			
	ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೬೮	೨೪.೭	೨೦೭	೭೫.೩
ಬಾಗಲಕೋಟೆ	೬೪	೨೨.೬	೨೧೯	೭೭.೪
ಬಳ್ಳಾರಿ	೪೪	೧೯.೩	೧೮೪	೮೦.೭
ರಾಯಚೂರು	೨೩	೨೩.೭	೭೪	೭೬.೩
ಎಲ್ಲಾ ಜಿಲ್ಲೆಗಳು	೧೯೯	೨೨.೫	೬೮೪	೭೭.೫

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೨೨.೫ ರಷ್ಟು ಜನರು ವಾರ್ಷಿಕ ಕ್ರಿಯಾ ಯೋಜನೆಯನ್ನು ತಯಾರಿಸಲಾಗುತ್ತಿದೆ ಎಂದು ತಿಳಿಸಿದ್ದು, ಶೇಕಡ ೭೭.೯ ರಷ್ಟು ಜನ ವಾರ್ಷಿಕ ಕ್ರಿಯಾ ಯೋಜನೆ ತಯಾರಿಕೆ ಇಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪.೨.೧೭ ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಹಾಜರಾತಿ ಮೇಲ್ವಿಚಾರಣೆ

ಶಿಕ್ಷಕರು, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳ ಕ್ರಮಬದ್ಧ ಹಾಗೂ ಸಕಾಲಿಕ ಹಾಜರಾತಿಯನ್ನು ನಿಯತವಾಗಿ ಮೇಲ್ವಿಚಾರಣೆ ಮಾಡುವುದು ಹಾಗೂ ಪರಿಶೀಲಿಸುವುದು. ತರಗತಿಯಲ್ಲಿ ಏನು ನಡೆಯುತ್ತಿದೆ ಎಂದು ಗಮನಿಸಲು ಶಾಲೆಗೆ ಎಸ್.ಡಿ.ಎಂ.ಸಿ ಸದಸ್ಯರು ಭೇಟಿ ನೀಡುವಲ್ಲಿ ಎಸ್.ಡಿ.ಎಂ.ಸಿ ಸದಸ್ಯರಿಗೆ ಒಂದು ಮುಖ್ಯವಾದ ಪಾತ್ರವಿದೆ. ಶಿಕ್ಷಕರ ಹಾಜರಾತಿ, ಅವರ ಸಮಯ ನಿಷ್ಠೆ ಇತ್ಯಾದಿಗಳ ಮೇಲೆ ನಿಗಾ ವಹಿಸುವುದು ಹಾಗೂ ತರಗತಿಗಳಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡುವ ಉದ್ದೇಶಕ್ಕಾಗಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು, ಹಾಜರಾತಿ ಪುಸ್ತಕಗಳನ್ನು ನಿರ್ವಹಿಸಿಕೊಂಡು ಬರುವಂತೆ ಶಾಲೆಯನ್ನು ಅಗತ್ಯಪಡಿಸಬಹುದಾಗಿದ್ದು. ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಯಾವುದೇ ಸದಸ್ಯನು ಶಾಲೆಯಲ್ಲಿ ನಿರ್ವಹಿಸಿರುವ ಎಲ್ಲ ಹಾಜರಾತಿ ಪುಸ್ತಕಗಳನ್ನು ಪರಿಶೀಲಿಸುವ ಅಧಿಕಾರ ಹೊಂದಿರುವುದರಿಂದ ಇದರ ಬಗ್ಗೆ ಯಾವ ಕ್ರಮಗಳನ್ನು ತೆಗೆದುಕೊಂಡಿದ್ದಾರೆ ಎಂಬುದರ ಮಾಹಿತಿಯ ಬಗ್ಗೆ ತಿಳಿದುಕೊಳ್ಳಲಾಯಿತು.

ಕೋಷ್ಟಕ ೨೩

ಶಿಕ್ಷಕರ ಕ್ರಮಬದ್ಧ ಹಾಜರಾತಿಯನ್ನು ಖಚಿತಪಡಿಸಿಕೊಳ್ಳಲು ತೆಗೆದುಕೊಂಡ ಕ್ರಮಗಳು

ಕ್ರಮಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಒಟ್ಟು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ೇಲಿನ ಅಧಿಕಾರಿಗಳಿಗೆ ಳಿಸುವುದು	೯೮	೩೬.೩	೧೧೧	೪೧.೭	೯೮	೩೫.೯	೩೦	೩೦.೩	೩೩೭	೩೭.೧
ರಂತರವಾಗಿ ಶಿಕ್ಷಕರಿಗೆ ಸಲಹೆ ೂಚನೆ ನೀಡುವುದು	೧೦	೩.೭	೧೩	೪.೯	೬	೨.೨	೨	೨	೩೧	೩.೪
ಯಾವುದೆ ಕ್ರಮ ಇಲ್ಲ	೧೬೨	೬೦	೧೪೨	೫೩.೪	೧೬೯	೬೧.೯	೬೭	೫೭.೭	೫೪೦	೫೯.೫

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಕ್ರಮವಾಗಿ ಶೇಕಡ ೩೭.೧ ರಷ್ಟು ಸದಸ್ಯರು ಮೇಲಿನ ಅಧಿಕಾರಿಗಳಿಗೆ ಗಮನಕ್ಕೆ ತಂದು ಅವರ ಹಾಜರಾತಿಯಲ್ಲಿ ಕ್ರಮ ಬದ್ಧತೆಯನ್ನು ತರಲು ಪ್ರಯತ್ನಿಸಿದ್ದೇವೆ ಎಂದು, ಶೇಕಡ ೩.೪ ಸದಸ್ಯರು ನಿರಂತರವಾಗಿ ಶಿಕ್ಷಕರಿಗೆ ಎಸ್.ಡಿ.ಎಂ.ಸಿ ಸಭೆಗಳಲ್ಲಿ ಮತ್ತು ವೈಯಕ್ತಿಕವಾಗಿ ಕ್ರಮಬದ್ಧ ಹಾಜರಾತಿಯ ಬಗ್ಗೆ ಸಲಹೆಸೂಚನೆಗಳನ್ನು ಚರ್ಚೆಯ ಮೂಲಕ ನೀಡಿದ್ದೇವೆ ಎಂದು ತಮ್ಮ ಅಭಿಪ್ರಾಯವನ್ನು

ವ್ಯಕ್ತಪಡಿಸಿದ್ದಾರೆ. ಆದರೆ ಶೇಕಡ ೫೯.೫ ರಷ್ಟು ಸದಸ್ಯರು ಶಿಕ್ಷಕರ ಕ್ರಮಬದ್ಧ ಹಾಜರಾತಿಯ ಬಗ್ಗೆ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂಬ ಅಭಿಪ್ರಾವನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಗಮನಿಸಿದಾಗ ಶಿಕ್ಷಕರೊಟ್ಟಿಗೆ ವ್ಯಯಕ್ತಿಕ ಸಂಬಂಧವನ್ನು ಹದಗೆಡಿಸಿಕೊಳ್ಳುವುದು ಬೇಡೆಂಬ ಮನಃಸ್ಥಿತಿ ಸದಸ್ಯರಲ್ಲಿ ಇರುವುದನ್ನು ನಾವು ನೋಡಬಹುದಾಗಿದೆ.

೪.೨.೧೮ ಮಕ್ಕಳ ದಾಖಲಾತಿ ಮತ್ತು ಹಾಜರಾತಿ

ಪ್ರಾಥಮಿಕ ಶಾಲೆಗೆ ಎಲ್ಲಾ ಮಕ್ಕಳು ದಾಖಲಾಗುವಂತೆ ಹಾಗೂ ಶಾಲೆಯಿಂದ ಹೊರಗುಳಿದ ಮಕ್ಕಳು, ಗೈರು ಹಾಜರಾಗುತ್ತಿರುವ ಮಕ್ಕಳು ಮತ್ತೆ ಮರಳಿ ಶಾಲೆಗೆ ಬರುವಂತೆ ಮಾಡಲು ಎಸ್.ಡಿ.ಎಂ.ಸಿಗಳು ಹೆಚ್ಚು ಗಮನಹರಿಸಬೇಕಾಗಿದೆ. ಗಣತಿ ಆದ ಎಲ್ಲಾ ಮಕ್ಕಳನ್ನು ಶಾಲೆಗೆ ಜೂನ್ ೧ ರಂದು ಕಡ್ಡಾಯವಾಗಿ ದಾಖಲಾಗಬೇಕು. ಮುಂದುವರಿದು ಶಿಕ್ಷಣದಿಂದ ವಂಚಿತರಾಗಿ ಬಾಲಕಾರ್ಮಿಕ ವ್ಯವಸ್ಥೆಗೆ ಸಿಕ್ಕಿಕೊಂಡು ನರಳುತ್ತಿರುವ ಮಕ್ಕಳನ್ನು ದಾಸ್ಯದಿಂದ ಬಿಡುಗಡೆಗೊಳಿಸಿ ಶಾಲೆಯ ಮುಖ್ಯವಾಹಿನಿಗೆ ಕರೆತರುವುದು. ಹದಿನಾಲ್ಕು ವಯಸ್ಸಿನೊಳಗಿನ ಮಕ್ಕಳನ್ನು ಕೂಲಿಯಾಗಿಟ್ಟುಕೊಳ್ಳುವುದು ಕಾನೂನು ಬಾಹಿರ ಹಾಗೂ ೮ ವರ್ಷ ಪ್ರಾಥಮಿಕ ಶಿಕ್ಷಣ ಮೂಲಭೂತ ಹಕ್ಕು ಕೂಡ. ಆದ್ದರಿಂದ ಎಸ್.ಡಿ.ಎಂ.ಸಿಗಳು ಇಂತಹ ಮಕ್ಕಳನ್ನು ಶಾಲಾ ವ್ಯಾಪ್ತಿಗೆ ತರಬೇಕಾಗಿದೆ.

ಕೋಷ್ಟಕ ೨೪

ಎಸ್.ಡಿ.ಎಂ.ಸಿ ಸಮಿತಿ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಹೆಚ್ಚಳದಲ್ಲಿ ತೆಗೆದುಕೊಂಡ ಕ್ರಮಗಳು

	ಅಧ್ಯಕ್ಷ				ಸದಸ್ಯರು			
	ಹೌದು		ಇಲ್ಲ		ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೪೮	೫೪.೫	೪೦	೪೫.೫	೭೬	೨೬.೪	೨೧೨	೭೩.೬
ಬಾಗಲಕೋಟೆ	೫೧	೬೧.೪	೩೨	೩೮.೬	೯೪	೩೨.೨	೧೯೮	೬೭.೮
ಬಳ್ಳಾರಿ	೫೨	೫೫.೩	೪೨	೪೪.೭	೯೮	೩೫.೫	೧೭೮	೬೪.೫
ರಾಯಚೂರು	೨೮	೬೨.೨	೧೭	೩೭.೮	೩೪	೨೫.೮	೯೮	೭೪.೨
ಎಲ್ಲಾ ಜಿಲ್ಲೆಗಳು	೧೭೯	೫೭.೭	೧೩೧	೪೨.೩	೩೦೨	೩೦.೬	೬೮೬	೬೯.೪

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಎಸ್.ಡಿ.ಎಂ.ಸಿ ಸಮಿತಿಯು ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಹೆಚ್ಚಳದಲ್ಲಿ ತೆಗೆದುಕೊಂಡ ಕ್ರಮಗಳ ಬಗ್ಗೆ ಕೇಳಿದಾಗ ಹೌದು ಎಂದು ಶೇಕಡ ೫೭.೭ ರಷ್ಟು ಅಧ್ಯಕ್ಷರು ಹೌದು ಎಂದು ಶೇಕಡ ೪೨.೩ ರಷ್ಟು ಸದಸ್ಯರು ಇಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ, ಹಾಗೆಯೇ ಶೇಕಡ ೩೦.೬ ರಷ್ಟು ಸದಸ್ಯರು ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಹೆಚ್ಚಳದಲ್ಲಿ ಕಾರ್ಯಚಟುವಟಿಕೆಗಳನ್ನು ಹಮ್ಮಿಕೊಂಡಿದ್ದೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಹಾಗೂ ಶೇಕಡ ೬೯.೪ ರಷ್ಟು ಸದಸ್ಯರು ಯಾವುದೆ ರೀತಿಯ ಚಟುವಟಿಕೆಗಳನ್ನು ಹಮ್ಮಿಕೊಂಡಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪.೨.೧೯ ಎಸ್.ಡಿ.ಎಂ.ಸಿ ಸಮಿತಿಯು ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಹೆಚ್ಚಳಕ್ಕೆ ಹಾಕಿಕೊಂಡ ಚಟುವಟಿಕೆಗಳು

ಶಾಲೆಗೆ ದಾಖಲಾಗದಿರುವ ಮತ್ತು ಗೈರು ಹಾಜರಿಯ ಮಕ್ಕಳನ್ನು ಸ್ಥಳೀಯ ಗಣ್ಯರ ಮತ್ತು ಪೋಷಕರ ಸಹಕಾರದಿಂದ ಸಂಬಂಧಿಸಿದ ಮಕ್ಕಳ ಮನೆಗೆ ಭೇಟಿ ನೀಡಿ ಶಾಲೆಗೆ ದಾಖಲಾಗಲು ಅಥವಾ ಹಾಜರಾಗಲು ಮತ್ತು ದಾಖಲಾಗಿ ಶಾಲೆ ಬಿಟ್ಟಿರುವ ನಿರ್ದಿಷ್ಟ ಕಾರಣಗಳನ್ನು ಪತ್ತೆ ಹಚ್ಚಿ ಶಿಕ್ಷಣ ಹಕ್ಕು ಕಾಯ್ದೆ ಬಗ್ಗೆ ಪೋಷಕರಿಗೆ ಮನವರಿಕೆ ಮಾಡಿ ಶಾಲೆಗೆ ಮಗು ದಾಖಲಾಗುವಂತೆ ಪೋಷಕರ ಮನವೊಲಿಸಬೇಕು. ಶಾಲೆ ಪ್ರಾರಂಭದಲ್ಲಿ ದಾಖಲಾತಿ ಆಂದೋಲನವನ್ನು ಮಾಡಬೇಕು. ತದ ನಂತರವೂ ಶಾಲೆಗೆ ಬಾರದ ಮಕ್ಕಳಿಗೆ ವಿಶೇಷ ದಾಖಲಾತಿ ಆಂದೋಲನ ಕೈಗೊಳ್ಳಬೇಕಾಗುತ್ತದೆ. ಬಾ ಬಾಲೆ ಶಾಲೆಗೆ, ಬಾ ಮರಳಿ ಶಾಲೆಗೆ, ಕೂಲಿಯಿಂದ ಶಾಲೆಗೆ ಇತ್ಯಾದಿ ಕಾರ್ಯತಂತ್ರಗಳನ್ನು ಬಳಸಿ ಮಕ್ಕಳನ್ನು ಶಾಲಾವಾಹಿನಿಗೆ ಕರೆತರಬೇಕು. ಈ ಬಗ್ಗೆ ಎಸ್.ಡಿ.ಎಂ.ಸಿ ಸದಸ್ಯರ ಅಭಿಪ್ರಾಯವನ್ನು ಕೇಳಿದಾಗ.

ಕೋಷ್ಟಕ ೨೫

ಎಸ್.ಡಿ.ಎಂ.ಸಿ ಸಮಿತಿಯು ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಹೆಚ್ಚಳಕ್ಕೆ ಹಾಕಿಕೊಂಡ ಚಟುವಟಿಕೆಗಳು

ಮಾಡಿರುವ ಕೆಲಸಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ದಾಖಲಾತಿ ಆಂದೋಲನ	೨೪೮	೬೭.೬	೨೫೭	೭೪.೭	೨೧೧	೬೯	೧೧೧	೬೮.೧	೮೨೭	೭೦.೧
ಮನೆ ಮನೆ ಭೇಟಿ	೪೮	೧೩.೧	೬	೧.೭	೩೮	೧೨.೪	೧೩	೮	೧೦೫	೮.೯
ಅಗತ್ಯ ಪರಿಕರಗಳನ್ನು ಒದಗಿಸಲಾಗಿದೆ.	೨೬	೭.೧	೬೫	೧೮.೯	೨೩	೭.೫	೩೦	೧೮.೪	೧೪೪	೧೨.೨
ಇತರೆ	೪೫	೧೨.೩	೧೬	೪.೭	೩೪	೧೧.೧	೯	೫.೫	೧೦೪	೮.೮

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ದಾಖಲಾತಿ ಆಂದೋಲನದಂತಹ ಕಾರ್ಯಕ್ರಮಗಳನ್ನು ಶೇಕಡ ೭೦.೧ ರಷ್ಟು ಹಾಗೂ ಮನೆ ಮನೆ ಭೇಟಿ ಶೇಕಡ ೮.೯ ರಷ್ಟು, ಮಕ್ಕಳಿಗೆ ಅಗತ್ಯ ಕಲಿಕಾ ಪರಿಕರಗಳನ್ನು ಒದಗಿಸಿರುವಂತಹಗಳಲ್ಲಿ ಶೇಕಡ ೧೨.೨ ರಷ್ಟು ಹಾಗೂ ಇತರೆ ಎಂದು ಶೇಕಡ ೮.೮ ರಷ್ಟು ಕಾರ್ಯಕ್ರಮಗಳನ್ನು ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಹೆಚ್ಚಳಕ್ಕೆ ಎಸ್.ಡಿ.ಎಂ.ಸಿ ಸದಸ್ಯರು ಕೆಲಸಗಳನ್ನು ಕೈಗೊಳ್ಳಲಾಗಿದೆ ಎಂದು ತಿಳಿಸಿದ್ದಾರೆ.

ಕೋಷ್ಟಕ ೨೬

ಶಾಲೆಬಿಟ್ಟ ಮಕ್ಕಳನ್ನು ಶಾಲೆಗೆ ಕರೆತರುವಲ್ಲಿ ಸಮಿತಿ ತೆಗೆದುಕೊಂಡ ಕ್ರಮಗಳು

ತೆಗೆದುಕೊಂಡ ಕ್ರಮಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಪಾಲಕರೊಂದಿಗೆ ಸಭೆ	೪೯	೧೪.೯	೩೮	೧೬.೨	೪೨	೧೨.೬	೫೦	೨೩.೪	೧೭೯	೧೬.೧
ಶಿಕ್ಷಕರೊಂದಿಗೆ ಚರ್ಚೆ	೯೮	೨೯.೯	೧೦೦	೪೨.೬	೧೧೦	೩೩	೧೧೧	೫೧.೯	೪೧೯	೩೭.೭
ಮಕ್ಕಳಿಗೆ ಪ್ರೇರಣೆ	೪	೧.೮	೧೧	೪.೭	೫೪	೧೬.೨	೯	೪.೨	೭೮	೭
ಶಾಲಾ ಆವರಣ ಸುಂದರಗೊಳಿಸಲಾಗಿದೆ	೬	೧.೨	೧೧	೪.೭	೧೬	೪.೮	೮	೩.೭	೪೧	೩.೭
ಮಕ್ಕಳಿಗೆ ಅಗತ್ಯ ಪರಿಕರಗಳನ್ನು ಒದಗಿಸಲಾಗುತ್ತಿದೆ	೪೯	೧೪.೯	೧೦	೪.೩	೧೨	೩.೬	೧೩	೬.೧	೮೪	೭.೬
ಪ್ರತಿಕ್ರಿಯೆ ಇಲ್ಲ	೧೨೨	೩೭.೨	೬೫	೨೭.೭	೯೯	೨೯.೭	೨೩	೧೦.೭	೩೦೯	೨೭.೮

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೧೬.೧ ಸದಸ್ಯರು ಪೋಷಕರೊಂದಿಗೆ ಸಭೆ ನಡೆಸಲಾಗಿದೆ ಎಂದು, ಮಕ್ಕಳ ದಾಖಲಾತಿಯ ಬಗ್ಗೆ ಶೇಕಡ ೩೭.೭ ರಷ್ಟು ಜನರು ಶಿಕ್ಷಕರೊಂದಿಗೆ ಚರ್ಚಿಸಿದ್ದೇವೆ ಎಂದು, ಶೇಕಡ ೭ ರಷ್ಟು ಜನರು ಮಕ್ಕಳಿಗೆ ಪ್ರೇರಣೆ ನೀಡಿದ್ದೇವೆ ಎಂದು, ಶೇಕಡ ೩.೨ ರಷ್ಟು ಜನರು ಶಾಲಾ ಆವರಣ ಸುಂದರಗೊಳಿಸಲಾಗಿದೆ ಎಂದು, ಶೇಕಡ ೭.೬ರಷ್ಟು ಜನರು ಮಕ್ಕಳಿಗೆ ಅಗತ್ಯ ಪರಿಕರಗಳನ್ನು ಒದಗಿಸಲಾಗಿದೆ ಎಂದು ಪ್ರತಿಕ್ರಿಯಿಸಿದ್ದು ಶೇಕಡ ೨೭.೮ ರಷ್ಟು ಸದಸ್ಯರು ಯಾವುದೇ ಪ್ರತಿಕ್ರಿಯೆಯನ್ನು ನೀಡಿಲ್ಲದಿರುವುದನ್ನು ನೋಡಬಹುದಾಗಿದೆ.

೪.೨.೨೦ ಸಮುದಾಯ ಪಾಲ್ಗೊಳ್ಳುವಿಕೆ ಮತ್ತು ಗ್ರಹಿಕೆ

ಅರಿವು ಸಮರ್ಪಕ ಪಾಲ್ಗೊಳ್ಳುವಿಕೆಯಾಗಿ ಪರಿವರ್ತಿತವಾಗಬೇಕಾಗಿರುವುದರಿಂದ, ಪಾಲ್ಗೊಳ್ಳುವಿಕೆಯ ವಿವಿಧ ಮಾನದಂಡಗಳ ವಿವರಗಳನ್ನು ಗುಣಮಟ್ಟದ ಅಧ್ಯಯನದಲ್ಲಿ ಕ್ರೋಢೀಕರಿಸಲಾಗಿದೆ. ಎಲ್ಲಾ ಪಾಲುದಾರರಿಂದಲೂ ಅಂಕಿ-ಅಂಶಗಳನ್ನು ಈ ಬಗ್ಗೆ ಸಂಗ್ರಹಿಸಲಾಯಿತು.

ಯಾವುದೇ ಸಮುದಾಯದ ಒಡೆತನವು ಆ ಸಮುದಾಯದಲ್ಲಿನ ಎಲ್ಲಾ ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆ ಮತ್ತು ತೊಡಗಿಸಿಕೊಳ್ಳುವಿಕೆಯಿಂದ ಮಾತ್ರ ಸಾಧ್ಯ. ಈ ನಿಟ್ಟಿನಲ್ಲಿ ಶಾಲೆಗಳು ಸಮರ್ಪಕವಾಗಿ ನಡೆಯಲು ಎಸ್.ಡಿ.ಎಂ.ಸಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸುವುದು ತೀರಾ ಅಗತ್ಯ. ಆದ್ದರಿಂದ ಗುರಿಗಳನ್ನು ತಲುಪವ ಸಲುವಾಗಿ ಪ್ರಾಥಮಿಕ ಪಾಲುದಾರಿಕೆಯನ್ನು ಪ್ರತಿನಿಧಿಸುವ ಸದಸ್ಯರು ಸಭೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳುವುದು ಮತ್ತು ಆದ್ಯತಾ ಕ್ರಮಗಳನ್ನು

ಮುಂದಕ್ಕೆ ತೆಗೆದುಕೊಂಡು ಹೋಗುವುದು ತೀರಾ ಅಗತ್ಯ, ಈ ಹಿನ್ನಲೆಯಲ್ಲಿ ಎಸ್.ಡಿ.ಎಂ.ಸಿ ಸದಸ್ಯರ ಬಲವರ್ಧನೆ ಮತ್ತು ಪಾಲ್ಗೊಳ್ಳುವಿಕೆ ಕುರಿತಾದ ವಿಚಾರಗಳ ಬಗ್ಗೆ ಈ ಅಧ್ಯಯನವನ್ನು ಕೇಂದ್ರೀಕರಿಸಲಾಯಿತು.

ಮುಖ್ಯ ಶಿಕ್ಷಕರು/ ಸದಸ್ಯ ಕಾರ್ಯದರ್ಶಿಗಳ ಸಹಕಾರದೊಂದಿಗೆ ಮಾಸಿಕ ಸಭೆಗಳಿಗೆ ಎಲ್ಲಾ ಸದಸ್ಯರು ಹಾಜರಿರಬೇಕೆಂದು ನಿರೀಕ್ಷಿಸಲಾಗುತ್ತದೆ. ಹಿಂದಿನ ಸಭೆಗಳಲ್ಲಿ ಅಂಗೀಕರಿಸಲ್ಪಟ್ಟ ಚಟುವಟಿಕೆಗಳ ಪ್ರಗತಿಯ ಬಗ್ಗೆ ವಿಚಾರಣೆ ಮತ್ತು ಶಾಲಾ ವಿಚಾರಗಳಿಗೆ ಸಂಬಂಧಿಸಿದಂತೆ ಕೆಲವೊಂದು ಪರಿಶೀಲನಾ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾಗುತ್ತದೆ. ವಾಸ್ತವದಲ್ಲಿ ಎಸ್.ಡಿ.ಎಂ.ಸಿಯ ಮೂಲ ಉದ್ದೇಶವೇ ಶಾಲೆಯ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಿಕೆ ಮತ್ತು ತೊಡಗಿಸಿಕೊಳ್ಳುವಿಕೆಯನ್ನು ನಿಯಮಿತ ಕಾಲಗಳಲ್ಲಿ (ಮಾಸಿಕ) ನೆರವೇರುವುದನ್ನು ಮೇಲ್ವಿಚಾರಣೆ ಮಾಡುವುದಾಗಿದೆ. ಸದಸ್ಯರ ಸಕ್ರಿಯ ಪಾಲ್ಗೊಳ್ಳುವಿಕೆಯು ಶಾಲೆಯ ಪ್ರಗತಿಯ ಮೇಲೆ ಉತ್ತಮ ಪರಿಣಾಮ ಉಂಟುಮಾಡುತ್ತದೆಂದು ಆಶಿಸಲಾಗುತ್ತದೆ. ಈ ಮೌಲ್ಯಮಾಪನದಲ್ಲಿ ಸದಸ್ಯರ ಪಾಲ್ಗೊಳ್ಳುವಿಕೆಯನ್ನು ಎಸ್.ಡಿ.ಎಂ.ಸಿಯ ಯಶಸ್ಸಿನ ಸೂಚಕವಾಗಿ ಭಾವಿಸಿದ್ದೇವೆ.

ಜನ ಸಮುದಾಯ ಪ್ರಾಥಮಿಕ ಶಿಕ್ಷಣದ ಯಜಮಾನಿಕೆ ವಹಿಸಿಕೊಂಡಾಗ 'ಉತ್ತಮ ಶಿಕ್ಷಣ'ವು ಸರ್ವವ್ಯಾಪಿಯಾಗಲು ಸಾಧ್ಯ ಎಂದು ಭಾವಿಸಲಾಗಿದೆ. ಎಸ್.ಡಿ.ಎಂ.ಸಿಗಳು ಸಮಾಜದ ಪ್ರತಿನಿಧಿಗಳಿದ್ದಂತೆ ಮತ್ತು ಇದರಲ್ಲಿ ಪ್ರಾಥಮಿಕ ಪಾಲುದಾರಿಕೆ ಹೊಂದಿರುವುದರಿಂದ ಶಾಲಾ ಚಟುವಟಿಕೆಗಳಲ್ಲಿ ಎಸ್.ಡಿ.ಎಂ.ಸಿಗಳ ಪಾಲ್ಗೊಳ್ಳುವಿಕೆ ಅತ್ಯಗತ್ಯ. ಈ ಕೆಳಗಿನ ಅಧ್ಯಯನದಲ್ಲಿ ಎಸ್.ಡಿ.ಎಂ.ಸಿ ಸದಸ್ಯರುಗಳ ಶಾಲೆಯ ವ್ಯವಹಾರಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳುವ ಪ್ರಕ್ರಿಯೆಯನ್ನು ಕ್ರೋಢೀಕರಿಸುವ ಪ್ರಯತ್ನ ಮಾಡಲಾಗಿದೆ.

ಕೋಷ್ಟಕ ೨೭

ಸಮುದಾಯ ಪಾಲ್ಗೊಳ್ಳುವಿಕೆಗೆ ಹಾಕಿಕೊಂಡ ಚಟುವಟಿಕೆಗಳು

ಜಿಲ್ಲೆ	ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೧೫೮	೩೦.೭	೩೫೬	೬೯.೩
ಬಾಗಲಕೋಟೆ	೧೧೭	೨೬.೫	೩೨೪	೭೩.೫
ಬಳ್ಳಾರಿ	೨೭೪	೬೭.೫	೧೩೨	೩೨.೫
ರಾಯಚೂರು	೪೮	೬೦.೩	೭೩	೩೯.೭
ಎಲ್ಲಾ ಜಿಲ್ಲೆಗಳು	೫೯೭	೩೯.೭	೮೮೫	೬೦.೩

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಸಮುದಾಯವು ಶಾಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವಂತೆ ಮಾಡಲು ಹಾಕಿಕೊಂಡ ಚಟುವಟಿಕೆಗಳ ಬಗ್ಗೆ ಶೇಕಡ ೩೯.೭ ಸದಸ್ಯರು ಹೌದು ಎಂದು ಪ್ರತಿಕ್ರಿಯೆ ವ್ಯಕ್ತಪಡಿಸಿದ್ದು. ಶೇಕಡ ೬೦.೩ ಅತಿ ಹೆಚ್ಚು ಸದಸ್ಯರು ಇಲ್ಲ ಎಂದು ಉತ್ತರಿಸಿರುವುದನ್ನು ನಾವು ಗಮನಿಸಬಹುದಾಗಿದೆ.

೪.೨.೨೧ ಸಮುದಾಯ ಪಾಲ್ಗೊಳ್ಳುವಿಕೆಗೆ ಹಾಕಿಕೊಂಡ ವಿವಿಧ ಕಾರ್ಯಚಟುವಟಿಕೆಗಳು

ಶಾಲೆ ವ್ಯವಹಾರಗಳಲ್ಲಿ ಸಮುದಾಯವನ್ನು ಒಳಗೊಳಿಸಬೇಕಾದರೆ, ಸಮುದಾಯವನ್ನು ಸೆಳೆಯುವಂತಹ ಚಟುವಟಿಕೆಗಳನ್ನು ಅಭಿವೃದ್ಧಿಪಡಿಸಬೇಕಾಗುತ್ತದೆ. ಶಾಲೆಯೊಂದಿಗೆ ಗುರುತಿಸಿಕೊಳ್ಳಲು ಅಸಕ್ತಿ ಹೊಂದಿರುವ ಕೆಲವು ಸಮುದಾಯವನ್ನು ಗುರುತಿಸಿ ಆ ಮೂಲಕ ಕ್ರಿಯೆಯನ್ನು ಆರಂಭಿಸಬೇಕು. ಮಕ್ಕಳಲ್ಲಿ ಭಿನ್ನಭಿನ್ನವಾದ ಸಾಮರ್ಥ್ಯಗಳು ಇರುವುದರಿಂದ ಕ್ರೀಡೆಗಳ, ಹಾಡುಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆ ಹಾಗೂ ಇದರ ಜೊತೆ ರಾಷ್ಟ್ರೀಯ ಕಾರ್ಯಕ್ರಮಗಳು, ಮಕ್ಕಳ ದಾಖಲಾತಿ ಆಂದೋಲನದಂತಹ, ಪ್ರಭಾತ್ ಬೇರಿಗಳಿಂದ, ಮಕ್ಕಳ ಮೇಳಾಗಳಂತಹ ಕಾರ್ಯಕ್ರಮಗಳಿಂದ ಮಕ್ಕಳಲ್ಲಿ ಹುದುಗಿರುವ ಪ್ರತಿಭೆಗಳನ್ನು ಗುರುತಿಸುವ ಜೊತೆಗೆ ಸಮುದಾಯದೊಂದಿಗೆ ಅನುಸಂಧಾನ ನಡೆಸಲು ಒಂದು ಬಲವಾದ ಕಾರ್ಯಸೂಚಿ ಒದಗಿಸಲು ಈ ಚಟುವಟಿಕೆಗಳು ನೆರವಾಗುತ್ತವೆ. ಶ್ರೇಣಿಕೃತ ಸಾಮಾಜಿಕ ವ್ಯವಸ್ಥೆ ಹೊಂದಿರುವ ಗ್ರಾಮಗಳಲ್ಲಿ ಸಾಮಾಜಿಕ ಅಂತರಗಳಿಗೆ ಒಂದು ಸೇತುವೆಯ ಹಾಗೆ ಈ ಕಾರ್ಯಕ್ರಮಗಳು ಕೆಲಸಮಾಡುತ್ತವೆ ಮತ್ತು ಅತ್ಯಂತ ಪ್ರಮುಖವಾದ ಸಾಮಾಜಿಕ ಸಂದೇಶಗಳನ್ನು ರವಾನಿಸಲು ಒಂದು ಸಂದರ್ಭವೆಂಬಂತೆ ಸಾಂಸ್ಕೃತಿಕ ಕಾರ್ಯಕ್ರಮಗಳು ಮುಖ್ಯವಾಗುತ್ತವೆ. ಈ ನೆಪದಲ್ಲಿಯಾದರೂ ಸಮುದಾಯ ಮುಂದಾಳುಗಳು ಶಾಲೆಗಳಿಗೆ ಆಗಾಗ ಭೇಟಿ ನೀಡುವುದರಿಂದ ಸಮಾನ ಶಾಲಾ ದೃಷ್ಟಿಕೋನವು ಬಲಗೊಳ್ಳುತ್ತದೆ. ಗ್ರಾಮೀಣ ಸಮಾಜಗಳ ಸಾಂಸ್ಕೃತಿಕ ಸಂದರ್ಭ ಸನ್ನಿವೇಶಗಳು ತುಂಬಾ ನಿರ್ದಿಷ್ಟವೂ ಅನನ್ಯವೂ ಆಗಿವೆ. ಭಾಷೆಗಳಲ್ಲಿನ ಅನೇಕತೆ, ಸಾಂಸ್ಕೃತಿಕ ರೂಢಿಗಳು ಹಾಗೂ ಅವುಗಳ ಆಳವಾದ ಸಾಮಾಜಿಕ ಬೇರುಗಳು, ಶಾಲಾ ವ್ಯವಸ್ಥೆಯಲ್ಲಿ ಸ್ಥಳೀಯ ಸಾಂಸ್ಕೃತಿಕ ಸಂದರ್ಭಗಳ ಅಪಾರ ಬಳಕೆಯನ್ನು ನಿರೀಕ್ಷಿಸುವುದರಿಂದ ಎಸ್.ಡಿ.ಎಂ.ಸಿಗಳು ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾಗುವ ದೃಷ್ಟಿಯಿಂದ ಸಮುದಾಯ ಭಾಗವಹಿಸುವಿಕೆಗೆ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದಾರೆ ಎಂಬುದರ ಬಗ್ಗೆ ಪ್ರತಿಕ್ರಿಯೆಯನ್ನು ಕೇಳಿದಾಗ

ಕೋಷ್ಟಕ ೨೮

ಎಸ್.ಡಿ.ಎಂ.ಸಿ ಸಮಿತಿಯು ಸಮುದಾಯ ಪಾಲ್ಗೊಳ್ಳುವಿಕೆಗೆ ಹಾಕಿಕೊಂಡ ವಿವಿಧ ಕಾರ್ಯಚಟುವಟಿಕೆಗಳು

ಚಟುವಟಿಕೆಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ದಾಖಲಾತಿ ಆಂದೋಲನ ಜಾಥಗಳು	೫೮	೧೬.೮	೬೮	೧೮.೩	೭೨	೧೮.೭	೩೮	೧೪.೭	೨೩೬	೧೭.೪
ರಾಷ್ಟ್ರೀಯ ದಿನಾಚರಣೆ ಕಾರ್ಯಕ್ರಮಗಳು	೧೧೧	೩೨.೧	೧೦೨	೨೭.೫	೧೨೩	೩೧.೯	೬೯	೨೬.೭	೪೦೫	೨೯.೮
ಮಕ್ಕಳ ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಕ್ರಮಗಳು	೧೨೨	೩೫.೩	೧೩೨	೩೫.೬	೧೧೬	೩೦.೧	೧೦೩	೩೯.೯	೪೭೩	೩೪.೮
ಸಮುದಾಯದತ್ತ ಶಾಲಾ ಕಾರ್ಯಕ್ರಮ	೫೫	೧೫.೯	೬೯	೧೮.೬	೭೪	೧೯.೨	೪೮	೧೮.೬	೨೪೬	೧೮.೧

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಸಮುದಾಯ ಪಾಲ್ಗೊಳ್ಳುವಿಕೆಗೆ ಹಾಕಿಕೊಂಡ ವಿವಿಧ ಕಾರ್ಯಚಟುವಟಿಕೆಗಳಲ್ಲಿ ಕ್ರಮವಾಗಿ ಶೇಕಡ ೩೪.೮ ರಷ್ಟು ಮಕ್ಕಳ ಸಾಂಸ್ಕೃತಿಕ ಮತ್ತು ಕ್ರೀಡಾ ಕಾರ್ಯಕ್ರಮಗಳು, ಶೇಕಡ ೨೯.೮ ರಷ್ಟು ರಾಷ್ಟ್ರೀಯ ಕಾರ್ಯಕ್ರಮಗಳು, ಶೇಕಡ ೧೮.೧ ರಷ್ಟು ಸಮುದಾಯದತ್ತ ಶಾಲಾ ಕಾರ್ಯಕ್ರಮ ಮತ್ತು ಶೇಕಡ ೧೭.೪ ರಷ್ಟು ದಾಖಲಾತಿ ಆಂದೋಲನ ಜಾಥಗಳನ್ನು ಹಮ್ಮಿಕೊಂಡಿರುವುದನ್ನು ನೋಡಬಹುದಾಗಿದೆ. ಶಾಲಾ ಶೈಕ್ಷಣಿಕ ವ್ಯವಸ್ಥೆಯಲ್ಲಿ ಸಮುದಾಯವನ್ನು ತೊಡಗಿಸಿಕೊಳ್ಳುವ ಪ್ರಕ್ರಿಯೆ ಈಗಾಗಲೇ ಚಲನಶೀಲವಾಗಿದೆ. ಅದರ ಪೂರ್ಣ ಉಪಯೋಗವನ್ನು ಪಡೆಯಲು ಸಮಯ ಮತ್ತು ಬುದ್ಧಿಶಕ್ತಿಯನ್ನು ಎಸ್.ಡಿ.ಎಂ.ಸಿ ಸದಸ್ಯರು ವಿನಿಯೋಗಿಸಬೇಕಾಗುತ್ತದೆ. ಇದರಿಂದಾಗುವ ಶೈಕ್ಷಣಿಕ ಪ್ರಯೋಜನಗಳು ಅಪಾರವಾದದ್ದು, ಶಾಲೆಯು ಜನರೊಂದಿಗೆ ಉತ್ತಮವಾದ ಸಂಬಂಧವನ್ನು ಬೆಳಸಿಕೊಳ್ಳಬೇಕಾಗಿದೆ. ಇದಕ್ಕಾಗಿ ಸಮುದಾಯದೊಂದಿಗೆ ಸೂಕ್ತವಾದ ಸಮಯ ಮತ್ತು ವೇದಿಕೆಯನ್ನು ಆಯ್ಕೆ ಮಾಡಿಕೊಂಡು ಅಲ್ಲಿ ಭಾಗೀದಾರರಿಗೆ ಸಂಬಂಧಿಸಿದ ವಿಷಯಗಳ ಕುರಿತು ಶಿಕ್ಷಣದ ನಿಜವಾದ ಕಾಳಜಿ ಮತ್ತು ಆಸಕ್ತಿಯನ್ನು ಹಂಚಿಕೊಳ್ಳಬೇಕಾಗಿದೆ.

೪.೨.೨೨ ಎಸ್.ಡಿ.ಎಂ.ಸಿ ಗಳು ಪ್ರಾರಂಭವಾದಾಗಿನಿಂದ ಶಾಲೆಯಲ್ಲಿ ಆಗಿರುವ ಅಭಿವೃದ್ಧಿ ಕಾರ್ಯಗಳ ಬಗ್ಗೆ ಸದಸ್ಯರ ಅರಿವು

ಶಾಲಾ ಪರಿಣಾಮಕಾರಿತನಕ್ಕೆ ಸಮುದಾಯವನ್ನೂ ಜತೆಗೆ ಸೇರಿಸಿಕೊಳ್ಳುವುದು ತುಂಬಾ ಮುಖ್ಯ. ಸಮುದಾಯಕ್ಕೆ ಇಲ್ಲಿರುವ ಒಂದು ಅತ್ಯಂತ ಬಲವಾದ ಕಾರ್ಯಸೂಚಿಯೆಂದರೆ ಶಾಲಾ ಮೂಲಸೌಕರ್ಯ ಒದಗಿಸುವುದು. ಶಾಲಾ ಮೂಲಸೌಕರ್ಯಗಳಾದ ಕಟ್ಟಡ, ಶೌಚಾಲಯ, ಕುಡಿಯುವ ನೀರು, ಆವರಣ ಗೋಡೆ, ಆಟದ ಮೈದಾನ, ಬೋಧನಾ ಕಲಿಕಾ ಸಾಮಾಗ್ರಿಗಳು, ಕ್ರೀಡಾ ಸಲಕರಣೆಗಳು ಇತ್ಯಾದಿಗಳನ್ನೆಲ್ಲಾ ಒಮ್ಮೆ ಮಾತ್ರ ಒದಗಿಸಲಾಗುತ್ತದೆ. ಇವುಗಳ ನಿರ್ವಹಣೆಗೆ ಸರಿಯಾದ ವ್ಯವಸ್ಥೆ ಎಂದರೆ ಎಸ್.ಡಿ.ಎಂ.ಸಿಯೇ ಆಗಿದೆ. ಉತ್ತಮ ಶಾಲಾ ಮೂಲ ಸೌಕರ್ಯದ ದೃಷ್ಟಿಯಿಂದ ಇರುವ ಒಂದೇ ಒಂದು ಸುಸ್ಥಿರ ವಿಧಾನವೆಂದರೆ ಶಾಲಾ ಮೂಲ ಸೌಕರ್ಯದ ಬಗ್ಗೆ ಸಮುದಾಯದ ಉಸ್ತುವಾರಿ, ನೆರವು ಹಾಗೂ ಕೊಡುಗೆ. ಶಾಲಾ ಪರಿಣಾಮಕಾರಿತನದಲ್ಲಿ ಉತ್ತಮ, ಶಾಲಾ ಮೂಲ ಸೌಕರ್ಯವು ಒಂದು ಪ್ರಮುಖ ಅಂಶ. ಈ ಹಿನ್ನಲೆಯಲ್ಲಿ ಕಟ್ಟಡಗಳ ಕಾಮಗಾರಿ ಮತ್ತು ನಿರ್ಮಾಣ ಅದರ ಮೇಲ್ವಿಚಾರಣೆಗಳನ್ನು ನಡೆಸಲಾಗುತ್ತಿದಿಯೇ ಎಂಬ ಪ್ರಶ್ನೆಗೆ ಈ ಕೆಳಕಂಡಂತೆ ಉತ್ತರಿಸಿದ್ದು.

ಕೋಷ್ಟಕ ೨೯

ಕಟ್ಟಡಗಳ ಕಾಮಗಾರಿ ಮತ್ತು ನಿರ್ಮಾಣ ಅದರ ಮೇಲ್ವಿಚಾರಣೆ

ಜಿಲ್ಲೆ	ಕಟ್ಟಡಗಳ ಕಾಮಗಾರಿ				ಶಾಲಾ ಕಟ್ಟಡಗಳ ನಿರ್ಮಾಣ ಮತ್ತು ಮೇಲ್ವಿಚಾರಣೆ			
	ಹೌದು		ಇಲ್ಲ		ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೨೦೨	೫೭.೧	೧೫೨	೪೯.೯	೧೯೩	೬೪.೩	೧೦೭	೩೫.೭
ಬಾಗಲಕೋಟೆ	೨೩೪	೫೮.೨	೧೬೮	೪೧.೮	೧೫೮	೫೮.೭	೧೧೧	೪೧.೩
ಬಳ್ಳಾರಿ	೨೪೪	೬೨.೯	೧೪೪	೩೭.೧	೧೯೭	೫೯.೯	೧೩೨	೪೦.೧

ರಾಯಚೂರು	೭೧	೫೮.೨	೫೧	೪೧.೮	೯೬	೬೪.೯	೫೨	೩೫.೧
ಎಲ್ಲಾ ಜಿಲ್ಲೆಗಳು	೭೫೧	೫೯.೩	೫೧೫	೪೦.೭	೬೪೪	೬೧.೬	೪೦೨	೩೮.೪

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಕಟ್ಟಡ ಕಾಮಗಾರಿಗಳನ್ನು ಮಾಡಲಾಗಿದೆ ಎಂದು ಶೇಕಡ ೫೯.೩ ರಷ್ಟು ಸದಸ್ಯರು ಹೌದು ಎಂದು, ಶೇಕಡ ೪೦.೭ ರಷ್ಟು ಸದಸ್ಯರು ಇಲ್ಲ ಎಂದು ಹಾಗೂ ಶಾಲಾ ಕಟ್ಟಡ ನಿರ್ಮಾಣ ಮತ್ತು ಮೇಲ್ವಿಚಾರಣೆಯಲ್ಲಿ ಶೇಕಡ ೬೧.೬ ರಷ್ಟು ಹೌದು ಎಂದು ಶೇಕಡ ೩೮.೪ ರಷ್ಟು ಇಲ್ಲ ಎಂದು ಉತ್ತರಿಸಿರುವುದನ್ನು ನೋಡಬಹುದಾಗಿದೆ.

ಶಾಲಾ ಮೂಲ ಸೌಕರ್ಯಕ್ಕೆ ಸರಕಾರದ ಹಣ ಮಾತ್ರವಲ್ಲದೆ ಸಮುದಾಯದ ನಿರಂತರ ನೆರವೂ ಅಗತ್ಯವಾಗುತ್ತದೆ. ಕೆಲವು ಚಿಕ್ಕಪುಟ್ಟ ದುರಸ್ತಿಯ ವಿಚಾರದಲ್ಲಿ ಎಲ್ಲರ ನೆರವು ಸ್ಥಳೀಯವಾಗಿ ಸಿಗುತ್ತದೆ. ಎಸ್.ಡಿ.ಎಂ.ಸಿಗಳು ಶಾಲಾ ಆಟದ ಮೈದಾನ ಸಮತಟ್ಟುಗೊಳಿಸಲು ಶ್ರಮದಾನ, ಕುಡಿಯುವ ನೀರಿನ ಮೂಲದ ನಿರಂತರ ನಿರ್ವಹಣೆ, ಶಾಲಾ ವಠಾರದಲ್ಲಿ ಗಿಡ ನೆಡುವಿಕೆ ಹಾಗೂ ಶಾಲಾ ಆವರಣವನ್ನು ಆಕರ್ಷಕವಾಗಿ ಅಭಿವೃದ್ಧಿಪಡಿಸುವುದು ಇತ್ಯಾದಿಗಳಿಗೂ ಕೂಡ ಎಸ್.ಡಿ.ಎಂ.ಸಿ ಹಾಗೂ ಸಮುದಾಯದ ನಿರಂತರ ನೆರವು ಬೇಕಾಗುತ್ತದೆ.

ಕೋಷ್ಟಕ ೩೦

ಮೂಲಭೂತ ಸೌಕರ್ಯ ಹೆಚ್ಚಳದ ಕೆಲಸಗಳಲ್ಲಿ ಎಸ್.ಡಿ.ಎಂ.ಸಿ ಕೈ ಗೊಂಡಿರುವ ಚಟುವಟಿಕೆಗಳು

ಚಟುವಟಿಕೆಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಕಟ್ಟಡ ನಿರ್ಮಾಣ	೩೭	೧೮.೧	೨೧	೧೩.೩	೨೨	೧೧.೮	೧೧	೧೩.೧	೯೧	೧೪.೪
ಕಾಂಪೌಂಡ್ ನಿರ್ಮಾಣ	೨೨	೧೦.೮	೧೧	೭	೧೧	೫.೯	೧೦	೧೧.೯	೫೪	೮.೫
ಶಾಲಾ ಕೈತೋಟ ಮತ್ತು ಮರಗಿಡಗಳನ್ನು ಬೆಳಸುವುದು	೨೩	೧೧.೩	೧೮	೧೧.೪	೨೯	೧೫.೫	೮	೯.೫	೭೮	೧೨.೩
ಶಾಲೆಗೆ ವಿದ್ಯುತ್ ವ್ಯವಸ್ಥೆ	೩೨	೧೫.೭	೨೯	೧೮.೪	೩೮	೨೦.೩	೧೬	೧೯	೧೧೫	೧೮.೨
ಕುಡಿಯುವ ನೀರಿನ ವ್ಯವಸ್ಥೆ	೬೮	೩೩.೩	೪೨	೨೬.೬	೪೮	೨೫.೭	೧೮	೨೧.೪	೧೭೬	೨೭.೮
ಶೌಚಾಯಲಯ ನಿರ್ಮಾಣ	೨೨	೧೦.೮	೩೭	೨೩.೪	೩೯	೨೦.೯	೨೧	೨೫	೧೧೯	೧೮.೮

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೧೪.೪ ರಷ್ಟು ಜನ ಕಟ್ಟಡ ನಿರ್ಮಾಣದಲ್ಲಿ, ಶೇಕಡ ೮.೫ ರಷ್ಟು ಸದಸ್ಯರು ಕಾಂಪೌಂಡ್ ನಿರ್ಮಾಣ, ಶೇಕಡ ೧೨.೩ ರಷ್ಟು ಸದಸ್ಯರು ಶಾಲಾ ಕೈತೋಟ ಮತ್ತು ಮರಗಿಡಗಳನ್ನು ಬೆಳಸುವುದು, ಶೇಕಡ ೧೮.೨ ರಷ್ಟು ಸದಸ್ಯರು ಶಾಲೆಗೆ ವಿದ್ಯುತ್ ವ್ಯವಸ್ಥೆ, ಶೇಕಡ ೨೭.೮ ರಷ್ಟು ಜನ ಕುಡಿಯುವ ನೀರಿನ ವ್ಯವಸ್ಥೆ ಹಾಗೂ ಶೇಕಡ ೧೮.೮ ರಷ್ಟು ಸದಸ್ಯರು ಶೌಚಾಲಯ ನಿರ್ಮಾಣ ಮಾಡುವ ಕಾರ್ಯಚಟುವಟಿಕೆಗಳನ್ನು ಹಾಕಿಕೊಂಡಿರುವುದನ್ನು ನಾವು ಕಾಣಬಹುದಾಗಿದೆ.

೪.೨.೨೩ ಬೌದ್ಧಿಕ (ಭೋಧನೆ ಮತ್ತು ಕಲಿಕಾ ಪೂರಕ ಸೌಲಭ್ಯ)

ಶಾಲೆಗೆ ಹೋಗತಕ್ಕ ವಯಸ್ಸಿನ ಎಲ್ಲಾ ವಿದ್ಯಾರ್ಥಿಗಳು ಶಾಲೆಗಳಿಗೆ ನಿಯಮಿತವಾಗಿ ಹಾಜರಾಗುತ್ತಿದ್ದರೆ ಮಾತ್ರ ಅಂತಹಾ ಒಂದು ಶಾಲೆಯನ್ನು ಪರಿಣಾಮಕಾರಿ ಶಾಲೆ ಎನ್ನಬಹುದು. ಸಮಾನ ಶಾಲೆಗಳಲ್ಲಿ ಎಲ್ಲ ಸಾಮಾಜಿಕ ಗುಂಪುಗಳ ದಾಖಲಾತಿ ಹಾಗೂ ಸಹಭಾಗಿತ್ವವು ಸ್ವತಃ ಶಾಲಾ ಪರಿಣಾಮಕಾರಿತನದ ಒಂದು ಸೂಚನೆ. ಎಲ್ಲರಿಗೂ ಶಿಕ್ಷಣ ಎಂಬ ತುಡಿತದಲ್ಲಿ ಕೂಡಾ ಎಸ್.ಡಿ.ಎಂ.ಸಿ ಸದಸ್ಯರು ಮತ್ತು ಸಮುದಾಯ ನಿರ್ಣಾಯಕ ಪಾತ್ರ ವಹಿಸಬಲ್ಲರು. ಜವಬ್ಧಾರಿಯಿಂದ ವಿಮುಖರಾಗದೆ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಪಾಲಕರನ್ನು ಪ್ರೇರೇಪಿಸುವುದರಿಂದ ಅನಕ್ಷರಸ್ಥ ಪಾಲಕರ ಮಕ್ಕಳು ಕೂಡಾ ನಿಯಮಿತವಾಗಿ ಶಾಲೆಗೆ ಹಾಜರಾಗುವಂತೆ ನೋಡಿಕೊಳ್ಳಬಹುದು. ಯಾವುದೇ ಶಾಲೆಯ ಸುಧಾರಣೆ ಕಾರ್ಯಕ್ರಮದ ಯಶಸ್ಸು, ಶಾಲಾ ಅಭಿವೃದ್ಧಿ ಪ್ರಕ್ರಿಯೆಯಲ್ಲಿ ತರಗತಿಯ ಒಳಗೂ ಹಾಗೂ ಹೊರಗೂ ನಡೆಯುವ ಬೋಧನೆ ಮತ್ತು ಕಲಿಯುವ ಪ್ರಕ್ರಿಯೆಯಲ್ಲಿ ಎಸ್.ಡಿ.ಎಂ.ಸಿ ಹಾಗೂ ಪಾಲಕರ ಪಾಲ್ಗೊಳ್ಳುವಿಕೆಯ ಗುಣಮಟ್ಟವನ್ನು ಅವಲಂಬಿಸಿದೆ. ಎಸ್.ಡಿ.ಎಂ.ಸಿ ಹಾಗೂ ಪಾಲಕರು ಇತರರು ಹೆಚ್ಚು ತೊಡಗಿಸಿಕೊಂಡಾಗ ಶಾಲೆಗಳು ಪರಿಣಾಮಕಾರಿಯಾಗಿ ಕೆಲಸ ಮಾಡುತ್ತವೆ ಮತ್ತು ವಿದ್ಯಾರ್ಥಿಗಳು ಕಲಿಯುತ್ತಾರೆ. ಮಕ್ಕಳ ಸಂಪೂರ್ಣ ಅಭಿವೃದ್ಧಿಗೆ ಉತ್ತಮ ಗುಣಮಟ್ಟದ ಶಿಕ್ಷಣ ಬಹಳ ಪ್ರಮುಖ ಪಾತ್ರವಹಿಸುತ್ತದೆ. ಇದರೊಟ್ಟಿಗೆ ಎಲ್ಲಾ ಮಕ್ಕಳು ಒಂದೇ ರೀತಿಯಾಗಿ ಮನೆಯಲ್ಲಿ ಓದುವುದಕ್ಕೆ ಸಮಯವಿರುವುದನ್ನು, ಕಲಿಕೆ ಬೋಧನೆಗೆ ಶಾಲೆಗಳಲ್ಲಿ ಶಿಕ್ಷಕರಿಗೆ ಸ್ಥಳೀಯ ಸಂಪನ್ಮೂಲವನ್ನು ಸಂಗ್ರಹಿಸಿಕೊಡುವುದು ಮುಂತಾದವುಗಳಲ್ಲಿ ತೊಡಗಿಸಿಕೊಂಡಾಗ ಮಕ್ಕಳ ಕಲಿಕೆಯಲ್ಲಿ ಅರ್ಥಪೂರ್ಣವಾಗುತ್ತದೆ ಎಂಬ ಉದ್ದೇಶದಿಂದ ಈ ಪ್ರತಿಕ್ರಿಯೆಯನ್ನು ಕೇಳಲಾಯಿತು.

ಕೋಷ್ಟಕ ೩೧

ಬೌದ್ಧಿಕ (ಭೋಧನೆ ಮತ್ತು ಕಲಿಕಾ ಪೂರಕ ಸೌಲಭ್ಯ)

ಚಟುವಟಿಕೆಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಶಾಲೆ ಬಿಟ್ಟ ಮತ್ತು ಗೈರು ಹಾಜರಿಮಕ್ಕಳನ್ನು ಶಾಲೆಗೆ ಸೇರಿಸುವುದು	೩೮	೨೯.೯	೨೧	೧೭೮	೨೨	೨೪.೪	೧೧	೧೯.೬	೯೨	೨೩.೫
ಮಕ್ಕಳಿಗೆ ಕಲಿಕಾ ಸಾಮಾಗ್ರಿ	೧೧	೮.೭	೭	೫.೯	೫	೫.೬	೯	೧೬.೧	೩೨	೮.೨
ಶಿಕ್ಷಕರಿಗೆ ಸಹಾಯ	೧೬	೧೨.೬	೧೨	೧೦.೨	೮	೮.೯	೫	೮.೯	೪೧	೧೦.೫

ಮಕ್ಕಳ ಗ್ರಂಥಾಲಯ ಬಳಕೆ	೪	೩.೧	೨	೧.೭	೭	೭.೮	೧	೧.೮	೧೪	೩.೬
ಅವಶ್ಯ ಶಿಕ್ಷಕರನ್ನು ನಿಯೋಜನೆ ಮಾಡಿಸಿಕೊಂಡಿದ್ದು	೧೦	೭.೯	೧೪	೧೧.೯	೯	೧೦	೬	೧೦.೭	೩೯	೧೦
ಮನೆಗಳಲ್ಲಿ ಓದಿಕೊಳ್ಳಲು ಅವಕಾಶ	೪೮	೩೭.೮	೬೨	೫೨.೫	೩೯	೪೩.೫	೨೪	೪೨.೯	೧೭೩	೪೪.೨

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೨೩.೪ ರಷ್ಟು ಸದಸ್ಯರು ಶಾಲೆ ಬಿಟ್ಟ ಮತ್ತು ಗೈರು ಹಾಜರಿ ಮಕ್ಕಳನ್ನು ಶಾಲೆಗೆ ಸೇರಿಸಿದ್ದೇವೆ ಎಂದು, ಶೇಕಡ ೮.೨ ರಷ್ಟು ಸದಸ್ಯರು ಮಕ್ಕಳಿಗೆ ಕಲಿಕಾ ಸಾಮಾಗ್ರಿಗಳನ್ನು ಒದಗಿಸಿದ್ದೇವೆ ಎಂದು, ಶೇಕಡ ೧೦.೫ ರಷ್ಟು ಸದಸ್ಯರು ಶಿಕ್ಷಕರಿಗೆ ಸಹಾಯ ಮಾಡಿದ್ದೇವೆ ಎಂದು ಶೇಕಡ ೩.೬ ರಷ್ಟು ಸದಸ್ಯರು ಶಾಲೆಯಲ್ಲಿರುವ ಮಕ್ಕಳ ಗ್ರಂಥಾಲಯವನ್ನು ಬಳಕೆ ಮಾಡಲು ಅವಕಾಶ ಮಾಡಿಕೊಟ್ಟಿದ್ದೇವೆ ಎಂದು, ಶೇಕಡ ೧೦ ರಷ್ಟು ಸದಸ್ಯರು ಅವಶ್ಯ ಶಿಕ್ಷಕರನ್ನು ಶಾಲೆಗೆ ನಿಯೋಜಿಸಲು ಇಲಾಖೆಗೆ ತಿಳಿಸಿ ನಿಯೋಜನೆ ಮಾಡಿಸಿಕೊಂಡಿದ್ದೇವೆ ಎಂದು,ಅತಿ ಹೆಚ್ಚು ಸದಸ್ಯರು ಅಂದರೆ ಶೇಕಡ ೪೪.೨ ರಷ್ಟು ಸದಸ್ಯರು ಮನೆಗಳಲ್ಲಿ ಓದಿಕೊಳ್ಳಲು ಅವಕಾಶವನ್ನು ಮತ್ತು ವಾತವರಣವನ್ನು ನಿರ್ಮಿಸಲಾಗಿದೆ ಎಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಶಾಲೆ ಗ್ರಾಮದ ಕೇಂದ್ರ ಬಿಂದುವೇ ಆಗಿದ್ದರೂ. ಇದರ ನಿರ್ವಹಣೆ ಮತ್ತು ಮೇಲುಸ್ತುವಾರಿಯಲ್ಲಿ ಎಸ್.ಡಿ.ಎಂ.ಸಿ ಪಾತ್ರ ಮಹತ್ತರವಾದದ್ದು. ಹಿಂದೆ ಪೋಷಕರು ಮತ್ತು ಎಸ್.ಡಿ.ಎಂ.ಸಿ ಸದಸ್ಯರು ಶಾಲೆಗೆ ಮಕ್ಕಳನ್ನು ಸೇರಿಸುವುದಕ್ಕಷ್ಟೇ ಸೀಮಿತವಾಗಿದ್ದರು. ಶಾಲೆಗೆ ಮಕ್ಕಳು ಹೋದರೆ ಸಾಕು, ಏನಾದರೂ ಎರಡು ಅಕ್ಷರ ಕಲಿತರೆ ಸಾಕು ಎಂಬುದಕ್ಕೆ ಸೀಮಿತವಾಗಿದ್ದ ಎಸ್.ಡಿ.ಎಂ.ಸಿ ಸದಸ್ಯರು ಮತ್ತು ಪೋಷಕರು ಇಂದು ಬಹಳಷ್ಟು ಬದಲಾವಣೆಯ ಮನೋಭಾವವನ್ನು ಹೊಂದಿದ್ದಾರೆ. ಹೊಸ ದೃಷ್ಟಿಕೋನದಲ್ಲಿ ಚಿಂತನೆ ಮಾಡುವವರು ಮತ್ತು ತಮ್ಮ ಮಕ್ಕಳ ಭವಿಷ್ಯದ ಬಗ್ಗೆ ದೂರದೃಷ್ಟಿ ಹೊಂದಿದವರು ಆಗಿದ್ದಾರೆ. ತಮ್ಮ ಮಕ್ಕಳನ್ನು ಶಾಲೆಗೆ ದಾಖಲಿಸುವುದರ ಜೊತೆಗೆ ಶಾಲಾ ಶೈಕ್ಷಣಿಕ ಚಟುವಟಿಕೆಗಳ ಬಗ್ಗೆ ತಮ್ಮ ಮಕ್ಕಳ ಕಲಿಕಾ ಪ್ರಗತಿಯ ಬಗ್ಗೆ ಸದಾ ಗಮನಹರಿಸುತ್ತಾ ತಮ್ಮ ಮಕ್ಕಳಿಗೆ ಎಂತಹ ಶಿಕ್ಷಣ ಬೇಕು? ಎಂದು ನಿರ್ಧರಿಸುವ, ಅದು ದೊರುಕುತ್ತಿದಿಯೇ? ಎಂದು ಖಾತ್ರಿಪಡಿಸಿಕೊಳ್ಳುವ, ಮಕ್ಕಳಲ್ಲಿ ಶೈಕ್ಷಣಿಕವಾಗಿ, ಗುಣಾತ್ಮಕವಾಗಿ ಬದಲಾವಣೆಗಳಾಗುತ್ತಿವಿಯೇ? ಎಂದು ಅವಲೋಕನ ಮಾಡುವ ಗುರುತರ ಜವಾಬ್ಧಾರಿ ಎಸ್.ಡಿ.ಎಂ.ಸಿ ಮತ್ತು ಪೋಷಕ ಸಮುದಾಯದ್ದಾಗಿದೆ. ಶೈಕ್ಷಣಿಕ ಚಟುವಟಿಕೆಗಳಲ್ಲಿ ಭಾಗವಹಿಸುವಂತೆ, ತೊಡಗಿಸಿಕೊಳ್ಳುವಂತೆ ಮಾಡಿದಾಗ ಅರ್ಥಪೂರ್ಣ ಗುಣಾತ್ಮಕ ಕಲಿಕೆಯಾಗುತ್ತದೆ.

೪.೨.೨೪ ಸಮಿತಿಯ ಸದಸ್ಯರು ಶಾಲಾ ಭೇಟಿಯ ಅವಧಿಗಳು,

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಸದಸ್ಯರ ಶಾಲಾ ಭೇಟಿಯು, ಸಮುದಾಯ ಮತ್ತು ಶಾಲೆ ನಡುವೆ ಒಂದು ಸೌಹಾರ್ದಯುತ ಮತ್ತು ಪರಿಣಾಮಕಾರಿಯಾದ ಸಮನ್ವಯತೆಯನ್ನು ಏರ್ಪಡಿಸುತ್ತದೆ.

ಕೋಷ್ಟಕ ೩೨

ಸಮಿತಿಯ ಸದಸ್ಯರು ಶಾಲಾ ಭೇಟಿಯ ಅವಧಿಗಳು

ಕಾಲಾವಧಿ	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ದಿನಕ್ಕೊಮ್ಮೆ	೯	೩.೩	೧೪	೩.೮	೮	೨.೬	೬	೪.೫	೩೭	೩.೪
ವಾರಕ್ಕೊಮ್ಮೆ	೩೨	೧೧.೬	೫೮	೧೫.೯	೨೧	೬.೯	೧೬	೧೧.೯	೧೨೭	೧೧.೮
ಹದಿನೈದು ದಿನಗಳಿಗೊಮ್ಮೆ	೫೨	೧೮.೮	೭೬	೨೦.೯	೪೮	೧೫.೭	೨೮	೨೦.೯	೨೦೪	೧೮.೯
ತಿಂಗಳಿಗೊಮ್ಮೆ	೧೧೧	೪೦.೨	೧೨೮	೩೫.೨	೧೫೨	೪೯.೮	೫೨	೩೮.೮	೪೪೩	೪೧.೧
ಭೇಟಿ ಇಲ್ಲ	೭೨	೨೬.೧	೮೮	೨೪.೨	೭೬	೨೪.೯	೩೨	೨೩.೯	೨೬೮	೨೪.೮

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶಾಲೆಗೆ ಎಸ್.ಡಿ.ಎಂ.ಸಿ ಸಮಿತಿ ಸದಸ್ಯರು ಶೇಕಡ ೩.೪ ರಷ್ಟು ಸದಸ್ಯರು ದಿನಕ್ಕೊಮ್ಮೆ ಎಂದು. ವಾರಕ್ಕೊಮ್ಮೆ ಭೇಟಿ ನೀಡುತ್ತೇವೆ ಎಂದು ಶೇಕಡ ೧೧.೮ ರಷ್ಟು ಸದಸ್ಯರು ತಿಳಿಸಿದ್ದು. ಹದಿನೈದು ದಿನಗಳಿಗೊಮ್ಮೆ ಶಾಲೆಗಳಿಗೆ ಭೇಟಿ ನೀಡುತ್ತೇವೆ ಎಂದು ಶೇಕಡ ೧೮.೯ ರಷ್ಟು ಸದಸ್ಯರು ತಿಳಿಸಿದ್ದು. ತಿಂಗಳಿಗೊಮ್ಮೆ ಭೇಟಿ ನೀಡುತ್ತೇವೆ ಎಂದು ಶೇಕಡ ೪೧.೧ ರಷ್ಟು ಸದಸ್ಯರು ವ್ಯಕ್ತಪಡಿಸಿದ್ದು. ಶೇಕಡ ೨೪.೮ ರಷ್ಟು ಸದಸ್ಯರು ಶಾಲೆಗಳಿಗೆ ಭೇಟಿ ನೀಡುವುದಿಲ್ಲ ಎಂಬ ಅಭಿಪ್ರಾಯವನ್ನು ತಿಳಿಸಿದ್ದಾರೆ.ತಿಂಗಳಿಗೊಮ್ಮೆ ಭೇಟಿ ನೀಡುವವರ ಸಂಖ್ಯೆ ಹೆಚ್ಚಿರುವುದನ್ನು ಈ ಅಂಕಿ ಅಂಶಗಳಿಂದ ನಾವು ಗಮನಿಸಬಹುದಾಗಿದೆ.

೪.೨.೨೫ ಶಾಲಾ ಭೇಟಿ ನೀಡಿದಾಗ ಸಮಿತಿಯ ಸದಸ್ಯರು ನಿರ್ವಹಿಸುವ ಚಟುವಟಿಕೆಗಳು

ಶಾಲಾ ವ್ಯವಹಾರಗಳಲ್ಲಿ ಸಮುದಾಯವು ಪಾಲ್ಗೊಳ್ಳುವಂತೆ ಮಾಡಲು ಅಭಿವೃದ್ಧಿಪಡಿಸಲಾಗಿರುವ ಸಾಂಸ್ಥಿಕ ವ್ಯವಸ್ಥೆಯೇ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ. ಇದು ಶಾಲಾ ಕಾರ್ಯವೈಖರಿಯ ಮೇಲೆ ಹಾಗೂ ಮೂಲಸೌಕರ್ಯ ಅಭಿವೃದ್ಧಿ ಪಡಿಸುವುದರ ಮೇಲೆ ನಿಗಾ ಇರಿಸಬೇಕು.

ಕೋಷ್ಟಕ ೩೩

ಶಾಲಾ ಭೇಟಿ ನೀಡಿದಾಗ ಸಮಿತಿಯ ಸದಸ್ಯರು ನಿರ್ವಹಿಸುವ ಚಟುವಟಿಕೆಗಳು

ಚಟುವಟಿಕೆ	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ದಾಖಲೆಗಳ ಪರಿಶೀಲನೆ	೧೫	೩.೪	೧೪	೧೨.೮	೧೨	೨.೫	೯	೪	೫೦	೩.೧

ಮುಖ್ಯಶಿಕ್ಷಕರು ಬರಲು ಹೇಳಿದ್ದರಿಂದ	೫೨	೧೧.೮	೬೧	೧೫.೯	೭೮	೧೬.೩	೨೨	೯.೯	೨೧೩	೧೩.೧
ಶಾಲೆಯ ಸಮಸ್ಯೆಗಳಿಗೆ ಸ್ಪಂದಿಸುವುದು	೭೨	೧೬.೩	೭೬	೫.೯	೯೨	೧೯.೨	೪೮	೨೧.೫	೨೮೮	೧೭.೮
ಮಕ್ಕಳ ಕಲಿಕೆಯ ಬಗ್ಗೆ ಚರ್ಚಿಸಲು	೩೨	೭.೨	೨೮	೧೦.೯	೨೨	೪.೬	೧೨	೫.೪	೯೪	೫.೮
ಶಾಲಾ ಸ್ವಚ್ಛತೆಯ ಬಗ್ಗೆ	೪೮	೧೦.೯	೫೨	೨೬.೮	೩೮	೭.೯	೩೨	೧೪.೩	೧೭೦	೧೦.೫
ಮೂಲಭೂತ ಸೌಕರ್ಯಗಳ ಪರಿಶೀಲನೆ	೧೧೨	೨೫.೩	೧೨೮	೨೪.೭	೧೩೮	೨೮.೯	೫೮	೨೬	೪೩೬	೨೬.೯
ಇಲಾಖೆಯ ಮಾಹಿತಿಯನ್ನು ತಿಳಿಯಲು	೧೧೧	೨೫.೧	೧೧೮	೨.೯	೯೮	೨೦.೫	೪೨	೧೮.೮	೩೬೯	೨೨.೮

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶಾಲಾ ಭೇಟಿ ನೀಡಿದಾಗ ಸಮಿತಿಯ ಸದಸ್ಯರು ನಿರ್ವಹಿಸುವ ಚಟುವಟಿಕೆಗಳೇನು ಎಂಬುದನ್ನು ಸದಸ್ಯರಲ್ಲಿ ಪ್ರತಿಕ್ರಿಯೆಯನ್ನು ಕೇಳಿದಾಗ ಶಾಲೆಯ ಅಗತ್ಯ ದಾಖಲೆಗಳ ಪರಿಶೀಲನೆಯನ್ನು ಮಾಡುತ್ತೇವೆ ಎಂದು ಶೇಕಡ ೩.೧ ರಷ್ಟು ಸದಸ್ಯರು ತಮ್ಮ ಪ್ರತಿಕ್ರಿಯಿಸಿದು. ಶೇಕಡ ೧೩.೧ ರಷ್ಟು ಸದಸ್ಯರು ಶಾಲೆಗೆ ಸಂಬಂಧಿಸಿದ ವಿಷಯಗಳ ಬಗ್ಗೆ ಚರ್ಚಿಸಲು ಮುಖ್ಯ ಶಿಕ್ಷಕರು ಬರಲು ಹೇಳಿದ್ದರಿಂದ ಭೇಟಿ ನೀಡುತ್ತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು. ಶೇಕಡ ೧೭.೮ ರಷ್ಟು ಸದಸ್ಯರು ಶಾಲೆಯ ಸಮಸ್ಯೆಗಳಿಗೆ ಸ್ಪಂದಿಸಲು ಶಾಲೆಯ ಭೇಟಿ ಮಾಡುತ್ತೇವೆ ಎಂಬುದರ ಬಗ್ಗೆ ತಿಳಿಸಿದ್ದು. ಶೇಕಡ ೫.೮ ರಷ್ಟು ಸದಸ್ಯರು ಮಕ್ಕಳ ಕಲಿಕೆಯ ಬಗ್ಗೆ ಚರ್ಚಿಸಲು ಹೋಗುತ್ತೇವೆ ಎಂದು. ಶೇಕಡ ೧೦.೫ ರಷ್ಟು ಸದಸ್ಯರು ಶಾಲಾ ಪರಿಸರ ಮತ್ತು ಶಾಲಾ ಒಳಾಂಗಣಗಳಾದ ಕೊಠಡಿಗಳ ಸ್ವಚ್ಛತೆಯ ಬಗ್ಗೆ ಪರಿಶೀಲಿಸಲು ಭೇಟಿ ನೀಡುತ್ತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇಕಡ ೨೬.೯ರಷ್ಟು ಸದಸ್ಯರು ಶಾಲಾ ಮೂಲಭೂತ ಸೌಕರ್ಯಗಳ ಪರಿಶೀಲನೆಯನ್ನು ಮಾಡಲು ಭೇಟಿ ಮಾಡುತ್ತೇವೆ ಎಂದು. ಶೇಕಡ ೨೨.೮ರಷ್ಟು ಸದಸ್ಯರು ಸಾರ್ವಜನಿಕ ಶಿಕ್ಷಣ ಇಲಾಖೆಯಿಂದ ಕಾಲಕಾಲಕ್ಕೆ ಬರುವ ಮಾಹಿತಿಯನ್ನು ತಿಳಿಯಲು ಭೇಟಿ ನೀಡುತ್ತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪.೨.೨೬ ಎಸ್.ಡಿ.ಎಂ.ಸಿ ಸಮಿತಿಯ ಸದಸ್ಯರು ಶಾಲೆಯಲ್ಲಿ ಗಮನಿಸಿದ ಮುಖ್ಯ ಸಮಸ್ಯೆಗಳು

ಪ್ರಾಥಮಿಕ ಶಿಕ್ಷಣ ವಲಯವು, ಪರಿಣಾಮ ಶಾಲಾ ವಿದ್ಯಾರ್ಥಿಗಳ ಅಧ್ಯಯನದ ದಿಸೆಯಲ್ಲಿ ಗಭೀರ ಸಮಸ್ಯೆಗಳನ್ನು ಉಂಟುಮಾಡುತ್ತದೆ, ಪ್ರಾಥಮಿಕ ಶಿಕ್ಷಣದ ಯಶಸ್ಸು ಸಂಪನ್ಮೂಲಗಳ ಒದಗಿಸುವುದರಿಂದ ಮಾತ್ರ ಸಾಧ್ಯವಾಗುವುದಿಲ್ಲ. ಇದು ಸಮುದಾಯದ ಸಹಭಾಗಿತ್ವವನ್ನು ಹಾಗೂ ಆಡಳಿತಗಾರರು ಒದಗಿಸುವ ನೆರವನ್ನೂ ಕೂಡ ಅದು ಅವಲಂಬಿಸಿರುತ್ತದೆ. ಯೋಜನೆಯಡಿಯಲ್ಲಿ

ಒದಗಿಸಲಾದ ಮೂಲ ಸೌಕರ್ಯ ಒಳಹೂಡಿಕೆಗಳ ಬದಲಿಗೆ, ಶಿಕ್ಷಕರ ಉತ್ಸಾಹ, ಪ್ರೇರಣಾ ಮಟ್ಟಗಳು ಕಾರ್ಯಕ್ರಮದ ಪರಿಣಾಮವನ್ನು ಸಾಮಾನ್ಯವಾಗಿ ನಿರ್ಣಹಿಸುತ್ತವೆ. ಇದು ಒಂದು ಸಮಸ್ಯೆ, ಹಾಗೆಯೇ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯ ಒಳಗಿನ ಅನೇಕ ಇತರ ಚಟುವಟಿಕೆಗಳ ಪರಿಣಾಮವನ್ನು ವರ್ಗೀಕರಿಸುವುದು ಹಾಗೂ ಹೊರಗಿಡುವುದು ತೀರಾ ಕಷ್ಟಕರ. ಖಾಸಗಿ ಶಾಲಾ ವ್ಯವಸ್ಥೆಗಳು ವ್ಯಾಪಕವಾಗಿ ಹೆಚ್ಚಿದ್ದರಿಂದ ಆರ್ಥಿಕ ಶಕ್ತಿ ಉಳ್ಳವರು ತಮ್ಮ ಮಕ್ಕಳನ್ನು ಖಾಸಗಿ ಶಾಲೆಗಳಿಗೆ ಕಳುಹಿಸಲು ಶಕ್ತರಾಗಿದ್ದಾರೆ. ಅದೇ ಹೊತ್ತಿನಲ್ಲಿ ಬಡ ಮಕ್ಕಳು ಮಾತ್ರ ಸರಕಾರಿ ಶಾಲೆಗಳಿಗೆ ಹೋಗುತ್ತಿದ್ದಾರೆ. ಈ ಮಕ್ಕಳ ಪೋಷಕರು ಅನಕ್ಷರಸ್ಥರಾಗಿದ್ದು ಇವರು ಎಂದೆಂದೂ ಶಾಲೆಗೆ ಹೋಗದವರಾಗಿದ್ದಾರೆ ಅಂಥ ಸಂದರ್ಭದಲ್ಲಿ ಇವು ಈ ಕುಟುಂಬಗಳ ಮಕ್ಕಳ ಪರಿಣಾಮಕಾರಿ ದಾಖಲಾತಿ ಮತ್ತು ಸ್ಥಿರವಾದ ಹಾಜರಾತಿ ಇತ್ಯಾದಿಗಳ ಮೇಲೆ ಪ್ರಭಾವವನ್ನು ಬೀರುತ್ತವೆ. ಈಗಾಗಲೇ ಶಾಲೆಗೆ ಹೋಗುತ್ತಿರುವ ಮಕ್ಕಳ ಕಲಿಕಾ ಪ್ರಗತಿಯನ್ನು, ಸರಕಾರಿ ಶಾಲೆಗಳಲ್ಲಿ ಅನುಸರಿಸುತ್ತಿರುವ ಪ್ರಗತಿ ಪತ್ರ ವ್ಯವಸ್ಥೆಯು, ಪಠ್ಯಪುಸ್ತಕಗಳ ಹೂರಣವನ್ನು ಹೆಚ್ಚಾಗಿ ಅವಲಂಬಿಸಿದೆ. ಚಟುವಟಿಕೆ ಆಧಾರಿತವಾದ, ಸಾಮಾರ್ಥ್ಯ ನೆಲೆಯ ಕಲಿಕೆಯ ಬಗ್ಗೆ ಹೆಚ್ಚು ಪ್ರತಿಪಾದನೆ ಕೇಳಿ ಬರುತ್ತಿರುವ ಸಂದರ್ಭದಲ್ಲಿ, ಒಂದು ನಿರಂತರತೆ ಹೊಂದಿರುವ ವಿದ್ಯಾರ್ಥಿ ಸಾಧನಾ ಪರೀಕ್ಷಾ ವ್ಯವಸ್ಥೆ ಅಭಿವೃಧ್ಧಿಪಡಿಸುವ ಅವಶ್ಯಕತೆ ಇದೆ. ಈ ಎಲ್ಲಾ ಹಿನ್ನಲೆಯಲ್ಲಿ ಎಸ್.ಡಿ.ಎಂ.ಸಿ ಸದಸ್ಯರ ಪ್ರತಿಕ್ರಿಯೆಯನ್ನು ಬಯಸಿದಾಗ ನೀಡಿರುವ ಅಂಕಿ ಅಂಶಗಳನ್ನು ಇಲ್ಲಿ ಕ್ರೋಢೀಕರಿಸಲಾಗಿದೆ.

ಕೋಷ್ಟಕ ೩೪

ಎಸ್.ಡಿ.ಎಂ.ಸಿ ಸಮಿತಿಯ ಸದಸ್ಯರು ಶಾಲೆಯಲ್ಲಿ ಗಮನಿಸಿದ ಮುಖ್ಯ ಸಮಸ್ಯೆಗಳು

ಸಮಸ್ಯೆ	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಅಗತ್ಯ ಮೂಲಭೂತ ಸೌಕರ್ಯಗಳು	೭೮	೧೮.೬	೧೨೧	೨೮.೫	೯೮	೨೫.೩	೪೮	೨೭	೩೪೫	೨೪.೫
ಗೈರು ಹಾಜರಿ ಮಕ್ಕಳು	೧೧೧	೨೬.೪	೧೧೮	೨೭.೮	೯೮	೨೫.೩	೫೨	೨೯.೨	೩೭೯	೨೬.೯
ಗುಣಾತ್ಮಕತೆ	೩೫	೮.೩	೨೨	೫.೨	೨೮	೭.೨	೧೨	೬.೭	೯೭	೬.೯
ಸಂಪನ್ಮೂಲತೆ (ಹಣಕಾಸು)	೧೨೮	೩೦.೫	೧೧೨	೨೬.೪	೧೨೬	೩೨.೫	೪೮	೨೭	೪೧೪	೨೯.೩
ಶಾಲಾ ಸ್ವಚ್ಛತೆ	೬೮	೧೬.೨	೫೨	೧೨.೨	೩೮	೯.೮	೧೮	೧೦.೧	೧೭೬	೧೨.೫

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಎಸ್.ಡಿ.ಎಂ.ಸಿ ಸಮಿತಿಯ ಸದಸ್ಯರು ಶಾಲೆಯಲ್ಲಿ ಗಮನಿಸಿದ ಮುಖ್ಯ ಸಮಸ್ಯೆಗಳ ಬಗ್ಗೆ ಸದಸ್ಯರಲ್ಲಿ ಅಭಿಪ್ರಾಯವನ್ನು ಕ್ರೋಢಿಕರಿಸಿದಾಗ ಶೇಕಡ ೨೪.೫ ರಷ್ಟು ಸದಸ್ಯರು ಅಗತ್ಯ ಮೂಲಭೂತ ಸೌಕರ್ಯಗಳಾದ ಕೊಠಡಿ, ಶೌಚಾಲಯ, ಕುಡಿಯುವ ನೀರು ಪೀಠೋಕರಣಗಳು, ಕಾಂಪೌಂಡ್ ವ್ಯವಸ್ಥೆ ಮುಂತಾದವುಗಳಲ್ಲಿ ಸಮಸ್ಯೆಗಳನ್ನು ನಾವು ಗುರುತಿಸಿದ್ದೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.ಶೇಕಡ ೨೪.೫ ರಷ್ಟು ಸದಸ್ಯರು ಶಾಲೆಗೆ ಮಕ್ಕಳ ಗೈರುಹಾಜರಿಯ ಬಗ್ಗೆ ಸಮಸ್ಯೆಯನ್ನು ಗಮನಿಸಿರುವುದಾಗಿ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇಕಡ ೬.೯ ರಷ್ಟು ಸದಸ್ಯರು ಶಾಲಾ ಮಕ್ಕಳ ಕಲಿಕಾ ಮಟ್ಟದಲ್ಲಿ ಸಮಸ್ಯಗಳಿವೆ ಎಂಬುದರ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇಕಡ ೨೯.೩

ರಷ್ಟು ಸದಸ್ಯರು ಶಾಲಾ ನಿರ್ವಹಣೆ ಮತ್ತು ಉತ್ತಮ ಶಾಲೆಯನ್ನಾಗಿ ಪರಿವರ್ತಿಸಲು ಶಾಲೆಯಲ್ಲಿ ಸಂಪನ್ಮೂಲತೆಯ ಕೊರತೆ ಇದೆ ಎಂದು ಶೇಕಡ ೧೨.೫ ರಷ್ಟು ಸದಸ್ಯರು ಶಾಲಾ ಸುತ್ತಲಿನ ಆವರಣ ಹಾಗೂ ಶಾಲೆಯಲ್ಲಿ ಸ್ವಚ್ಚತೆಯ ಸಮಸ್ಯೆಯನ್ನು ಗಮನಿಸಿರುವುದಾಗಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪.೨.೨೭ ಸಮಿತಿಯ ಸದಸ್ಯರು ಶಾಲೆಯಲ್ಲಿ ಗಮನಿಸಿದ ಮುಖ್ಯ ಸಮಸ್ಯೆಗಳನ್ನು ಬಗೆಹರಿಸಲು ತೆಗೆದುಕೊಂಡ ಕ್ರಮಗಳು

ಎಸ್.ಡಿ.ಎಂ.ಸಿ ಸದಸ್ಯರು ಮತ್ತು ಸಮುದಾಯ ಒಂದಾಗಿ ಶಾಲೆಗಳನ್ನು ಪ್ರಜಾಪ್ರಭುತ್ವ ತತ್ವದಡಿಯಲ್ಲಿ ದೂರದೃಷ್ಟಿತ್ವ ಚಿಂತನೆಯೊಂದಿಗೆ ನಡೆಸಿಕೊಂಡು ಸಾಗಿದಲ್ಲಿ ಗುಣಮಟ್ಟ ಜೀವನಕ್ಕೆ, ಗುಣಮಟ್ಟ ಶಿಕ್ಷಣವನ್ನು ನೀಡುವಲ್ಲಿ ಯಶಸ್ವಿಯಾಗಬಹುದು. ಸಾಮಾನ್ಯವಾಗಿ ಗ್ರಾಮೀಣ ಪ್ರದೇಶದಲ್ಲಿ ಸರ್ಕಾರಿ ಶಾಲೆಗಳಿಗೆ ಬರುವ ಮಕ್ಕಳು ಹೆಚ್ಚಾಗಿ ಕೆಳ ಮಧ್ಯಮ ವರ್ಗ ಮತ್ತು ಮಧ್ಯಮ ವರ್ಗದ ಮಕ್ಕಳು ಮತ್ತು ಕೂಲಿ ಕಾರ್ಮಿಕರ ಮಕ್ಕಳಾಗಿರುತ್ತಾರೆ. ಬದುಕೇ ಕಷ್ಟವಾಗಿರುವ ಅವರಿಗೆ ಶಿಕ್ಷಣದ ಬಗ್ಗೆ, ಮಕ್ಕಳ ಬಗ್ಗೆ ನಾವು ನಿರೀಕ್ಷಿಸಿದಷ್ಟು ಕಾಳಜಿ ಇರುವುದಿಲ್ಲ. ಆದರೂ, ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯಬೇಕೆಂಬ ಹಂಬಲವುಳ್ಳವರಾಗಿರುತ್ತಾರೆ. ಇದನ್ನರಿತು ಸಮುದಾಯವನ್ನು ಬಳಸಿಕೊಂಡು ಆಸಕ್ತಿ ಬದ್ಧತೆಯಿಂದ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಾಗಿದೆ. ಇದಕ್ಕೆ ಅವರು ಕೈ ಗೊಂಡ ಕ್ರಮಗಳ ಬಗ್ಗೆ ಅಭಿಪ್ರಾಯ ಕೇಳಿದಾಗ

ಕೋಷ್ಟಕ ೩೫

ಸಮಿತಿಯ ಸದಸ್ಯರು ಶಾಲೆಯಲ್ಲಿ ಗಮನಿಸಿದ ಮುಖ್ಯ ಸಮಸ್ಯೆಗಳನ್ನು ಬಗೆಹರಿಸಲು ತೆಗೆದುಕೊಂಡ ಕ್ರಮಗಳು

ಕೈಗೊಂಡ ಕ್ರಮಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಇಲಾಖೆಗೆ ಮನವಿ	೧೨೨	೪೫	೧೨೧	೪೩.೪	೧೫೮	೪೯.೮	೩೮	೪೨.೭	೪೩೯	೪೫.೯
ಪೋಷಕರ ಸಹಾಯ	೧೧	೪.೧	೧೮	೬.೫	೯	೨.೮	೬	೬.೭	೪೪	೪.೬
ಪಂಚಾಯತಿಯ ಸಹಾಯ	೧೧೧	೪೧	೧೨೨	೪೩.೭	೧೨೮	೪೦.೪	೩೨	೩೬	೩೯೩	೪೧.೧
ಧಾನಿಗಳ ಸಹಾಯ	೨೭	೧೦	೧೮	೬.೫	೨೨	೬.೯	೧೩	೧೪.೬	೮೦	೮.೪

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೪೫.೯ರಷ್ಟು ಸದಸ್ಯರು ಇಲಾಖೆಗೆ ಮನವಿ ಮಾಡಿ ಅವರ ಸಹಾಯವನ್ನು ಪಡೆದುಕೊಳ್ಳಲಾಯಿತು ಎಂದು, ಶೇಕಡ ೪.೬ರಷ್ಟು ಸದಸ್ಯರು ಪೋಷಕರ ಸಹಾಯ ಪಡೆದುಕೊಳ್ಳಲಾಯಿತು ಎಂದು, ಶೇಕಡ ೪೧.೧ರಷ್ಟು ಸದಸ್ಯರು ಪಂಚಾಯತಿಗಳ ಸಹಾಯವನ್ನು ಪಡೆದುಕೊಳ್ಳಲಾಯಿತು ಎಂದು, ದಾನಿಗಳ ಸಹಾಯದಿಂದ ಶೇಕಡ ೮.೪ರಷ್ಟು ಸದಸ್ಯರು ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲಾಯಿತು ಎಂದು ತಿಳಿಸಿದ್ದಾರೆ.

ಕೋಷ್ಟಕ ೩೬

ಸಮಿತಿ ಸಮಸ್ಯೆಗಳನ್ನು ಬಗೆಹರಿಸಿ ಯಶಸ್ವಿಯಾದದ್ದು

ಸಮಸ್ಯೆ	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಅಗತ್ಯ ಮೂಲಭೂತ ಸೌಕರ್ಯಗಳು	೭೮	೭೨.೯	೬೬	೬೭.೩	೫೪	೬೨.೮	೧೬	೪೩.೨	೨೧೪	೬೫.೨
ಗೈರು ಹಾಜರಿ ಮಕ್ಕಳು	೧೬	೧೫	೧೮	೧೮.೪	೨೨	೨೫.೬	೧೮	೪೮.೬	೭೪	೨೨.೬
ಗುಣಾತ್ಮಕತೆ	೯	೮.೪	೬	೬.೧	೦	೦	೦	೦	೧೫	೪.೬
ಸಂಪನ್ಮೂಲತೆ (ಹಣಕಾಸು)	೦	೦	೨	೨	೩	೩.೫	೧	೨.೭	೬	೧.೮
ಶಾಲಾ ಸ್ವಚ್ಚತೆ	೪	೩.೭	೬	೬.೧	೭	೮.೧	೨	೫.೪	೧೯	೫.೮

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೬೫.೨ ಸದಸ್ಯರು ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಯಶಸ್ವಿ, ಶೇಕಡ ೨೨.೬ರಷ್ಟು ಸದಸ್ಯರು ಗೈರುಹಾಜರಿ ಮಕ್ಕಳ ಸಮಸ್ಯೆಗಳನ್ನು ಬಗೆಹರಿಸಲು ಯಶಸ್ವಿ, ಶೇಕಡ ೪.೬ರಷ್ಟು ಸದಸ್ಯರು ಮಕ್ಕಳ ಗುಣಾತ್ಮಕ ಕಲಿಕೆಬಗ್ಗೆಶೇಕಡ ೧.೮ ರಷ್ಟು ಹಣದ ಸಹಾಯ ಪಡೆಯುವಲ್ಲಿ ಯಶಸ್ವಿ ಎಂದು, ಶಾಲಾ ಸ್ವಚ್ಚತೆಗೆ ಸಹಾಯವನ್ನು ಶೇಕಡ ೫.೮ ರಷ್ಟು ಪಡೆಯಲು ಸಹಾಯವಾಗಿದೆ ಎಂದು ತಿಳಿಸಿದ್ದಾರೆ.

೪.೨.೨೮ ಹಣಕಾಸು ನಿರ್ವಹಣೆ ಮತ್ತು ಹಣಕಾಸು ವಿಚಾರಗಳ ಬಗ್ಗೆ ಅರಿವು

ಕರ್ನಾಟಕ ಗ್ರಾಮ ಪಂಚಾಯತಿಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು) ಉಪವಿಧಿಗಳು, ೨೦೦೬ ರಲ್ಲಿ ಪ್ರತಿಯೊಂದು ಶಾಲೆಗಾಗಿ ಶಾಲಾ ನಿಧಿ ಇದ್ದು, ಇದರಲ್ಲಿ ಸರ್ಕಾರವು ಬಿಡುಗಡೆ ಮಾಡುವ ವೇತನ ಅನುದಾನವನ್ನು ಹೊರತುಪಡಿಸಿ ಕೇಂದ್ರ ಅಥವಾ ರಾಜ್ಯ ಸರ್ಕಾರಗಳು ಅಥವಾ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಅಥವಾ ಗ್ರಾಮ ಪಂಚಾಯತಿಯಂಥ ಸ್ಥಳೀಯ ಮಂಡಳಿಗಳು ಬಿಡುಗಡೆ ಮಾಡುವ ನಿಧಿಗಳು ಅಥವಾ ಶಾಲೆಯ ಪ್ರಯೋಜನಕ್ಕೆ ನಗದು ರೂಪದಲ್ಲಿ ಅಥವಾ ವಸ್ತು ರೂಪದಲ್ಲಿ ನೀಡುವ ಸಾರ್ವಜನಿಕ ವಂತಿಕೆಗಳು ಸೇರುತ್ತದೆ. ಇದು ಅಧ್ಯಕ್ಷರು

ಹಾಗೂ ಸದಸ್ಯ ಕಾರ್ಯದರ್ಶಿ ಜಂಟಿಯಾಗಿ ಖಾತೆಯನ್ನು ನಿರ್ವಹಿತಕ್ಕದ್ದು. ಎಸ್.ಡಿ.ಎಂ.ಸಿಯು ಇಂತಹ ಎಲ್ಲಾ ಸ್ವತ್ತುಗಳು, ನಿಧಿಗಳು ಮತ್ತು ಹಣಕಾಸಿನ ಮೇಲ್ವಿಚಾರಣೆಯನ್ನು ನಡೆಸಬೇಕಾಗಿರುತ್ತದೆ. ಈ ಹಿನ್ನಲೆಯಲ್ಲಿ ಇದರ ಮಾಹಿತಿಯ ಅರಿವು ಸದಸ್ಯರಲ್ಲಿ ಇರಬೇಕಾಗುತ್ತದೆ. ಹಾಗಾಗಿ ಶಾಲೆಯ ಬ್ಯಾಂಕ್ ಖಾತೆ ಮತ್ತು ಹಣಕಾಸು ದಾಖಲೆಗಳ ನಿರ್ವಹಣೆ ಬಗ್ಗೆ ನಿಮಗೆ ತಿಳಿದಿದಿಯೇ ಎಂಬುದನ್ನು ಕೇಳಿದಾಗ,

ಕೋಷ್ಟಕ ೩೭

ಬ್ಯಾಂಕ್ ಖಾತೆ/ಹಣಕಾಸು ದಾಖಲೆಗಳ ನಿರ್ವಹಣೆ

ದಾಖಲೆಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಪಾಸ್ ಪುಸ್ತಕ	೧೫೨	೨೫.೩	೧೪೮	೨೫	೧೬೮	೨೫.೮	೯೮	೩೩.೧	೫೬೬	೨೬.೪
ನಿರ್ವಹಿಸಲಾಗುತ್ತಿದೆ	೧೪೮	೨೪.೭	೧೩೨	೨೨.೩	೧೫೨	೨೩.೩	೫೮	೧೯.೬	೪೯೦	೨೨.೯
ಎಸ್‌ಡಿ.ಎಂ.ಸಿ.ಗೆ ತಿಳಿದಿದೆ	೭೮	೧೩	೬೮	೧೧.೫	೯೮	೧೫	೪೮	೧೬.೨	೨೯೨	೧೩.೬
ಶಿಕ್ಷಕರಿಗೆ ತಿಳಿದಿದ	೨೨೨	೩೭	೨೪೪	೪೧.೨	೨೩೪	೩೫.೯	೯೨	೩೧.೧	೭೯೨	೩೭

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಪ್ರತಿಕ್ರಿಯಿಸಿದ ಶೇಕಡ ೨೬.೪ ರಷ್ಟು ಸದಸ್ಯರು ಪಾಸ್ ಪುಸ್ತಕ ಇಟ್ಟಿರುವುದನ್ನು ದೃಢಪಡಿಸಿದ್ದು, ಶೇಕಡ ೨೨.೯ ರಷ್ಟು ಸದಸ್ಯರು ದಾಖಲೆಗಳನ್ನು ನಿರ್ವಹಿಸಲಾಗುತ್ತಿದೆ ಎಂಬುದನ್ನು ತಿಳಿಸಿದ್ದಾರೆ. ಶೇಕಡ ೧೩.೬ ರಷ್ಟು ಸದಸ್ಯರು ಇದು ಹೆಚ್ಚಿನದಾಗಿ ಎಸ್.ಡಿ.ಎಂ.ಸಿಗೆ ತಿಳಿದಿದೆ ಎಂದು ಪ್ರತಿಕ್ರಿಯಿಸಿದ್ದು. ಶೇಕಡ ೩೭ ಸದಸ್ಯರು ಎಸ್.ಡಿ.ಎಂ.ಸಿಯ ಎಲ್ಲಾ ಲೆಕ್ಕಪತ್ರಗಳು ಮತ್ತು ದಾಖಲೆಗಳನ್ನು ಶಿಕ್ಷಕರೆ ಇಟ್ಟುಕೊಳ್ಳುವುದರಿಂದ ಅವರಿಗೆ ತಿಳಿದಿದೆ ಎಂದು ಉತ್ತರಿಸಿದ್ದಾರೆ.

೪.೨.೨೯ ಎಸ್.ಡಿ.ಎಂ.ಸಿ ಹಣಕಾಸು ನಿರ್ವಹಣೆಯ ಬಗ್ಗೆ ಮಾಸಿಕ ಸಭೆಯಲ್ಲಿ ಚರ್ಚೆ

ಶಾಲೆ ಮತ್ತು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಎಲ್ಲಾ ಆದಾಯ ಮತ್ತು ವೆಚ್ಚಗಳನ್ನು ಎಸ್.ಡಿ.ಎಂ.ಸಿ ಸಮಿತಿಯ ಪ್ರತಿ ಸಭೆಯಲ್ಲೂ ಚರ್ಚಿಸತಕ್ಕದ್ದು ಅಲ್ಲದೆ ಒಂದು ಸಾವಿರ ರೂ.ಗಳನ್ನು ಮೀರಿದ ಯಾವುದೇ ಹಣ ಹಿಂತೆಯುವಿಕೆಗೆ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮುಂದಿನ ಸಭೆಯಲ್ಲಿ ಚರ್ಚಿಸತಕ್ಕದ್ದು ಎಂಬುದಾಗಿ ಇದ್ದು ತುರ್ತು ವೆಚ್ಚಗಳನ್ನು ಭರಿಸಲು ಯಾವುದೇ ಹಣವನ್ನು ಹಿಂತೆಗೆದುಕೊಳ್ಳಬಹುದು ಮತ್ತು ಅದನ್ನು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಮುಂದಿನ ಸಭೆಯಲ್ಲಿ ಚರ್ಚಿಸತಕ್ಕದ್ದು ಎಂದು ಹೇಳಿದ್ದು. ಈ ಹಿನ್ನಲೆಯಲ್ಲಿ ಸಂದರ್ಶಿಸಿದ ಎಸ್.ಡಿ.ಎಂ.ಸಿ ಸದಸ್ಯರಿಗೆ ಇದು ಅರಿವಿದೆಯೇ ಎಂಬುದರ ಬಗ್ಗೆ ಚರ್ಚಿಸಿದಾಗ ಬಂದ ಅಭಿಪ್ರಾಯವನ್ನು ಈ ಕೆಳಕಂಡಂತೆ ತಿಳಿಸಿಲಾಗಿದೆ.

ಕೋಷ್ಟಕ ೩೮

ಎಸ್.ಡಿ.ಎಂ.ಸಿ ಹಣಕಾಸು ನಿರ್ವಹಣೆಯ ಬಗ್ಗೆ ಮಾಸಿಕ ಸಭೆಯಲ್ಲಿ ಚರ್ಚೆ

ಜಿಲ್ಲೆ	ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೩೬೮	೭೯	೯೮	೨೧
ಬಾಗಲಕೋಟೆ	೩೨೪	೭೭.೫	೯೪	೨೨.೫
ಬಳ್ಳಾರಿ	೨೭೪	೭೭.೮	೭೮	೨೨.೨
ರಾಯಚೂರು	೧೧೨	೬೫.೯	೫೮	೩೪.೧
ಎಲ್ಲಾ ಜಿಲ್ಲೆಗಳು	೧೦೭೮	೭೬.೭	೩೨೮	೨೩.೩

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೭೬.೭ ರಷ್ಟು ಸದಸ್ಯರು ಮಾಸಿಕ ಸಭೆಗಳಲ್ಲಿ ಇದನ್ನು ಚರ್ಚಿಸುತ್ತೇವೆ ಎಂದು ಪ್ರತಿಕ್ರಿಯಿಸಿದ್ದು, ಶೇಕಡ ೨೩.೩ ರಷ್ಟು ಸದಸ್ಯರು ಇಲ್ಲ ಎಂದು ಪ್ರತಿಕ್ರಿಯೆಯನ್ನು ನೀಡಿದ್ದಾರೆ.

ಕೋಷ್ಟಕ ೩೯

ಹಣಕಾಸಿನ ಬಳಕೆ

ಹಣದ ಉಪಯೋಗ	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಶಾಲಾ ದುರಸ್ತಿ	೨೩	೨೭.೧	೩೨	೩೦.೮	೨೬	೨೯.೨	೧೨	೩೬.೪	೯೩	೩೨
ಶಾಲಾ ನಿರ್ವಹಣೆ	೫೨	೬೧.೨	೬೩	೬೦.೬	೫೮	೬೫.೨	೨೧	೬೩.೬	೧೯೪	೩೩.೭
ಪಾಠೋಪಕರಣ	೨	೨.೪	೩	೨.೯	೧	೧.೧	೦	೦	೬	೨೧.೯
ಪೀಠೋಪಕರಣ	೮	೯.೪	೬	೫.೮	೪	೪.೫	೦	೦	೧೮	೧೨.೪

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಇಂತಹ ಹಣಕಾಸಿನ ಮೂಲಗಳಿಂದ ಶಾಲೆಯ ಅಭಿವೃದ್ಧಿಗೆ ಹೇಗೆ ಈ ಹಣವನ್ನು ಬಳಸಿಕೊಳ್ಳಲಾಗಿದೆ ಎಂಬುದಕ್ಕೆ ಶೇಕಡ ೩.೨ ರಷ್ಟು ಸದಸ್ಯರು ಶಾಲಾ ದುರಸ್ತಿಗೆ, ಶೇಕಡ ೩೩.೭ ರಷ್ಟು ಸದಸ್ಯರು ಶಾಲಾ ನಿರ್ವಹಣೆಗೆ, ಶೇಕಡ ೨೧.೯ ರಷ್ಟು ಸದಸ್ಯರು ಪಾಠೋಪಕರಣಕ್ಕೆ, ಶೇಕಡ ೧೨.೪ ರಷ್ಟು ಸದಸ್ಯರು ಪೀಠೋಪಕರಣಕ್ಕೆ ಬಳಕೆ ಮಾಡುತ್ತಿದ್ದೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಎಸ್.ಡಿ.ಎಂ.ಸಿ ಸದಸ್ಯರಲ್ಲಿ ಪದನಿಮಿತ್ತ ಮತ್ತು ನಾಮನಿರ್ದೇಶಿತ ಸದಸ್ಯರೇನು ಮಾಡಬೇಕು ಎಂಬುದರ ಬಗ್ಗೆ ಅರಿವು ಮತ್ತು ಸಲಹೆಗಳು

೪.೨.೩೦ ಅಂಗನವಾಡಿ ಕಾರ್ಯಕರ್ತೆಯ ಜವಾಬ್ದಾರಿಗಳು

ಶಾಲಾಭಿವೃದ್ಧಿಯಲ್ಲಿ ಪದನಿಮಿತ್ತ ಸದಸ್ಯರಾದ ಅಂಗನವಾಡಿ ಕಾರ್ಯಕರ್ತೆಯ ಜವಾಬ್ದಾರಿಗಳೇನು ಎಂಬುದನ್ನು ಸದಸ್ಯರಲ್ಲಿ ಕೇಳಿದಾಗ ಅವರು ನೀಡಿದ ಪ್ರತಿಕ್ರಿಯೆಗಳನ್ನು ಇಲ್ಲಿ ಒಟ್ಟುಗೂಡಿಸಲಾಗಿದೆ. ಅವುಗಳೆಂದರೆ ಮಕ್ಕಳನ್ನು ಶಾಲೆಗೆ ಕರೆತರುವುದು, ೫ವರ್ಷ ೧೦ ತಿಂಗಳು ತುಂಬಿದ ಮಕ್ಕಳನ್ನು ಶಾಲೆಗೆಸೇರಿಸುವುದು, ಹೆಣ್ಣು ಮಕ್ಕಳು ಶಾಲೆ ಬಿಡದಂತೆ ನೋಡಿಕೊಳ್ಳುವುದು ಮತ್ತು ನಿರಂತರ ಹಾಜರಾಗುವಂತೆ ಮಾಡುವುದು, ಹೆಣ್ಣು ಮಕ್ಕಳಿಗೆ ಇಲಾಖಾ ಉತ್ತೇಜಕಗಳನ್ನು ಸಕಾಲದಲ್ಲಿ ಸಿಗುವಂತೆ ಮಾಡಿ ಮಕ್ಕಳನ್ನು ಶಾಲೆಗೆ ಕಳುಹಿಸುವುದು, ಚಿಕ್ಕ ವಯಸ್ಸಿಗೆ ಮದುವೆಯಾಗದಂತೆ ನೋಡಿಕೊಳ್ಳುವುದು, ಬಾಲ ಕಾರ್ಮಿಕರ ಬಗ್ಗೆ ಗಮನಹರಿಸುವುದು, ಮಕ್ಕಳ ಮಾರಾಟವಾಗದಂತೆ ನೋಡಿಕೊಳ್ಳುವುದು ಮುಂತಾದ ಕರ್ತವ್ಯಗಳನ್ನು ಅವರು ನಿರ್ವಹಿಸಬೇಕಾಗಿರುವುದರಿಂದ ಶಾಲೆಗೆ ಪೂರಕವಾಗಿ ಕೆಲಸ ನಿರ್ವಹಿಸುವುದು ಉತ್ತಮ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪.೨.೩೧ ಆರೋಗ್ಯ ಕಾರ್ಯಕರ್ತೆಯ ಜವಾಬ್ದಾರಿಗಳು

ಶಾಲಾಭಿವೃದ್ಧಿಯಲ್ಲಿ ಪದ ನಿಮಿತ್ತ ಸದಸ್ಯರಾದ ಆರೋಗ್ಯ ಕಾರ್ಯಕರ್ತೆಯ ಜವಾಬ್ದಾರಿಗಳೇನು ಎಂಬುದನ್ನು ಸದಸ್ಯರಲ್ಲಿ ಕೇಳಿದಾಗ ಅವರು ನೀಡಿದ ಪ್ರತಿಕ್ರಿಯೆಗಳನ್ನು ಇಲ್ಲಿ ಒಟ್ಟುಗೂಡಿಸಲಾಗಿದೆ. ಅವುಗಳೆಂದರೆ ಶಾಲಾ ಮಕ್ಕಳ ಆರೋಗ್ಯವನ್ನು ನೋಡಿಕೊಳ್ಳುವುದು, ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಚಿಕಿತ್ಸೆ, ತಿಂಗಳಿಗೊಮ್ಮೆ ಮಕ್ಕಳ ಆರೋಗ್ಯ ತಪಾಷಣೆ, ಅಂಗವೈಕಲ್ಯ ಮಕ್ಕಳನ್ನು ಗುರುತಿಸುವುದು, ವಿಟಮಿನ್.ಎ, ವಿಟಮಿನ್. ಬಿ ಹಾಗೂ ವಿಟಮಿನ್ ನ್ಯೂನ್ಯತೆಯುಳ್ಳ ಮಕ್ಕಳನ್ನು ಗುರುತಿಸಿ ಅವರಿಗೆ ಸೂಕ್ತ ಆರೈಕೆ, ಹೆಚ್.ಐ.ವಿಸೋಂಕಿತ ಮಕ್ಕಳಿಗೆ ವಿಶೇಷ ಗಮನ, ಮಕ್ಕಳ ವಯಕ್ತಿಕ ಸ್ವಚ್ಚತೆ ಮತ್ತು ನೈರ್ಮಲ್ಯದ ಬಗ್ಗೆ ತಿಳುವಳಿಕೆ ನೀಡುವುದು, ಶೌಚಾಲಯದ ಬಳಕೆ ಬಗ್ಗೆ ಮಕ್ಕಳಲ್ಲಿ ಅರಿವು, ಶಾಲಾ ನೈರ್ಮಲ್ಯ ಮತ್ತು ಗ್ರಾಮ ನೈರ್ಮಲ್ಯದ ಬಗ್ಗೆ ಅರಿವು ಮೂಡಿಸುವುದು, ಮಕ್ಕಳ ಪೌಷ್ಠಿಕತೆ ಕುರಿತು ಅರಿವು ಮತ್ತು ಚಿಕಿತ್ಸೆ ಮುಂತಾದ ಕರ್ತವ್ಯಗಳನ್ನು ಅವರು ನಿರ್ವಹಿಸಬೇಕಾಗಿರುವುದರಿಂದ ಶಾಲೆಗೆ ಪೂರಕವಾಗಿ ಕೆಲಸ ನಿರ್ವಹಿಸುವುದು ಉತ್ತಮ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪.೨.೩೨ ದಾನಿಗಳ ಜವಾಬ್ದಾರಿಗಳು

ಶಾಲಾಭಿವೃದ್ಧಿಯಲ್ಲಿ ನಾಮ ನಿರ್ದೇಶಿತ ಸದಸ್ಯರಾದ ಧಾನಿಗಳ ಜವಬ್ದಾರಿಗಳೇನು ಎಂಬುದನ್ನು ಸದಸ್ಯರಲ್ಲಿ ಕೇಳಿದಾಗ ಅವರು ನೀಡಿದ ಪ್ರತಿಕ್ರಿಯೆಗಳನ್ನು ಇಲ್ಲಿ ಒಟ್ಟುಗೂಡಿಸಲಾಗಿದೆ. ಅವುಗಳೆಂದರೆ, ಧನ ಸಹಾಯ ಹಾಗೂ ಅಗತ್ಯ ಸಂಪನ್ಮೂಲಗಳನ್ನು ಒದಗಿಸುವುದು, ಖರ್ಚು ವೆಚ್ಚಗಳ ಬಗ್ಗೆ ಪರಿಶೀಲಿಸುವುದು, ಶಾಲಾ ಆಡಳಿತಕ್ಕೆ ಸಹಾಯ ನೀಡುವುದು, ಶಾಲಾ ಕಟ್ಟಡ ಹಾಗೂ ಇನ್ನಿತರ

ಶಾಲಾ ಸಂಬಂಧಿತ ಕಾಮಗಾರಿಗಳಿಗೆ ಸ್ಥಳಾವಕಾಶ, ಶಿಕ್ಷಕರ ಸಾಮಾರ್ಥ್ಯಭಿವೃದ್ಧಿ ಹಾಗೂ ಕಲಿಕಾ ಸಾಮಗ್ರಿಗಳಿಗೆ ಸಹಾಯ, ಮಕ್ಕಳ ಆಟದ ಮೈದಾನ, ಶಾಲೆಯ ರಸ್ತೆ ಸಂಪರ್ಕಕ್ಕೆ ಭೂಮಿದಾನ, ಅಗತ್ಯವಿರುವ ಮಕ್ಕಳಿಗೆ ಉಚಿತ ನೋಟ್ ಪುಸ್ತಕ, ಪೆನ್ನು, ಬಟ್ಟೆ ವಿತರಣೆ, ಪೀಠೋಪಕರಣಗಳು, ಮೈಕ್ ಸೆಟ್, ಶಾಲಾ ಬ್ಯಾಂಡ್‌ಸೆಟ್ ಗಳನ್ನು ಒದಗಿಸುವುದು, ಕಂಪ್ಯೂಟರ್, ಪ್ರಯೋಗಾಲಯಗಳ ಸ್ಥಾಪನೆಗೆ ಸಹಾಯ, ರಾಷ್ಟ್ರೀಯ ಕಾರ್ಯಕ್ರಮಗಳು, ಶಾಲಾ ವಿಶೇಷ ಕಾರ್ಯಕ್ರಮಗಳು, ಮಕ್ಕಳ ಕ್ರೀಡಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಉತ್ತೇಜನವನ್ನು ನೀಡಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪.೨.೩೩ ಶಿಕ್ಷಣ ತಜ್ಞ ಅಥವಾ ಶಿಕ್ಷಣ ಆಸಕ್ತರ ಜವಾಬ್ದಾರಿಗಳು

ಶಾಲಾಭಿವೃದ್ಧಿಯಲ್ಲಿ ನಾಮ ನಿರ್ದೇಶಿತ ಸದಸ್ಯರಾದ ಶಿಕ್ಷಣ ತಜ್ಞ ಅಥವಾ ಆಸಕ್ತರ ಜವಬ್ದಾರಿಗಳೇನು ಎಂಬುದನ್ನು ಸದಸ್ಯರಲ್ಲಿ ಕೇಳಿದಾಗ ಅವರು ನೀಡಿದ ಪ್ರತಿಕ್ರಿಯೆಗಳನ್ನು ಇಲ್ಲಿ ಒಟ್ಟುಗೂಡಿಸಲಾಗಿದೆ. ಅವುಗಳೆಂದರೆ ಶಿಕ್ಷಕರ ಅನುಪಸ್ಥಿತಿ ಹಾಗೂ ಕೊರತೆ ಇದ್ದ ಸಂದರ್ಭದಲ್ಲಿ ತರಗತಿ ನಡೆಸಲು ಸಹಾಯ, ಮಕ್ಕಳ ಕಲಿಕಾ ಹಂತವನ್ನು ಗುರುತಿಸಲು ಸಹಾಯ, ಕನಿಷ್ಟ ಕಲಿಕೆಯ ಮಗುವಿಗೆ ವಿಶೇಷ ಒತ್ತು, ವಿಶೇಷ ಮಕ್ಕಳ ಸಮನ್ವಯ ಶಿಕ್ಷಣಕ್ಕೆ ಗಮನಹರಿಸುವುದು, ಮಗುವಿನ ಸಾಮಾಜಿಕ, ಆರ್ಥಿಕ, ಪರಿಸರದ ಆಧಾರದ ಮೇಲೆ ಮಗುವು ಓದಿನಲ್ಲಿ ಏಕೆ ಹಿಂದೆ ಬಿದ್ದಿದೆ ಎಂಬುದನ್ನು ಅರಿತು ಶಿಕ್ಷಕರಿಗೆ ಸಹಾಯ ಮಾಡುವುದು, ಶಿಕ್ಷಕ ಮತ್ತು ಪಾಲಕರ ನಡುವೆ ಸಮನ್ವಯತೆಯಿಂದ ಮಗುವಿನ ಕೊರತೆಯನ್ನು ತುಂಬಿ ಮುಂದೆ ಓದಲು ಉತ್ತೇಜಿಸುವುದು, ಗುಣಾತ್ಮಕ ಶಿಕ್ಷಣ, ಹೆಣ್ಣು ಮಕ್ಕಳ ಶಿಕ್ಷಣದ ಬಗ್ಗೆ ಗ್ರಾಮ ಸಭೆ ಹಾಗೂ ಸಂಘ ಸಂಸ್ಥೆಗಳ ಸಭೆಗಳಲ್ಲಿ ಚರ್ಚಿಸುವುದು ಹಾಗೂ ಅರಿವು ಮೂಡಿಸುವುದು, ಮಕ್ಕಳನ್ನು ಶಾಲೆಗೆ ದಾಖಲಿಸುವುದು, ಶಾಲೆ ಬಿಡದಂತೆ ನೋಡಿಕೊಳ್ಳುವುದು, ಶಾಲೆಯಲ್ಲಿರುವ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಸಿಗುವಂತೆ ನೋಡಿಕೊಳ್ಳುವುದು, ಶಿಕ್ಷಕರ ತರಬೇತಿಗಳಲ್ಲಿ ಹಾಜರಾಗಿ ಹೊಸ ಹೊಸ ವಿಧಾನದ ಬಳಕೆಯ ಬಗ್ಗೆ ಜ್ಞಾನ ಮೂಡಿಸಿಕೊಳ್ಳುವುದು ಹಾಗೂ ಶಾಲೆಯಲ್ಲಿ ಇದು ಅನುಷ್ಠಾನದ ಬಗ್ಗೆ ಗಮನಹರಿಸುವುದು, ಕಲಿಕೆಯ ಗುಣಮಟ್ಟದ ಪರಿಶೀಲಿಸುವುದು ಮುಂತಾದ ಕಾರ್ಯಚಟುವಟಿಕೆಯನ್ನು ನಿರ್ವಹಿಸಬೇಕು ಎಂಬುದರ ಬಗ್ಗೆ ತಿಳಿಸಿದ್ದಾರೆ.

೪.೨.೩೪ ಯುವಕ ಯುವತಿ ಸಂಘದ ಪ್ರತಿನಿಧಿಗಳು ಅಥವಾ ಸ್ವ ಸಹಾಯ ಸಂಘದ ಪ್ರತಿನಿಧಿಗಳ ಜವಾಬ್ದಾರಿಗಳು

ಶಾಲಾಭಿವೃದ್ಧಿಯಲ್ಲಿ ನಾಮನಿರ್ದೇಶಿತ ಸದಸ್ಯರಾದ ಮಹಿಳಾ ಸಂಘದ ಪ್ರತಿನಿಧಿಗಳು ಅಥವಾ ಯುವಕ/ಯುವತಿ ಸಂಘದ ಸದಸ್ಯರ ಜವಬ್ದಾರಿಗಳೇನು ಎಂಬುದನ್ನು ಸದಸ್ಯರಲ್ಲಿ ಕೇಳಿದಾಗ ಅವರು ನೀಡಿದ ಪ್ರತಿಕ್ರಿಯೆಗಳನ್ನು ಇಲ್ಲಿ ಒಟ್ಟುಗೂಡಿಸಲಾಗಿದೆ. ಅವುಗಳೆಂದರೆ, ಶಾಲೆಗೆ ಮಕ್ಕಳನ್ನು ದಾಖಲಿಸುವುದು, ಮಕ್ಕಳ ಕಲಿಕೆ, ಮಕ್ಕಳ ಉಳಿಕೆಯ ಬಗ್ಗೆ ಸಭೆಯಲ್ಲಿ ಚರ್ಚಿಸುವುದು, ಹೆಣ್ಣು ಮಕ್ಕಳ ಶಿಕ್ಷಣಕ್ಕೆ ಆದ್ಯತೆ, ಬಾಲ್ಯ ವಿವಾಹದ ದುಷ್ಪರಿಣಾಮ ಹಾಗೂ ತಡೆಗಟ್ಟುವುದರ ಬಗ್ಗೆ ಮನವರಿಕೆ ಶಾಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಮಕ್ಕಳನ್ನು ಉತ್ತೇಜಿಸುವುದು, ಬಿಸಿಊಟದ ಮೇಲುಸ್ತುವಾರಿಯನ್ನು ನೋಡಿಕೊಳ್ಳುವುದು, ಹೆಣ್ಣು ಮಕ್ಕಳನ್ನು ಮನೆಗೆಲಸ, ಬಾಲಕಾರ್ಮಿಕತೆಗೆ ಮಕ್ಕಳನ್ನು ದೂಡದಂತೆ ನೋಡಿಕೊಳ್ಳುವುದು, ಮಕ್ಕಳ ಮೇಲೆ ಲೈಂಗಿಕ ಕಿರುಕುಳದಂತಹ ದೂರುಗಳು ಬಂದಾಗ ನಾಯಕತ್ವವನ್ನು

ವಹಿಸಿ ಇಂತಹ ಪ್ರಕರಣಗಳನ್ನು ನಿಭಾಯಿಸುವುದು, ವಿದ್ಯಾರ್ಥಿ ಸಂಘವನ್ನು ಸ್ಥಾಪಿಸುವುದು, ಶಾಲೆಯಲ್ಲಿ ನಡೆಯುವ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ನೆರವು ಮತ್ತು ಸಹಾಯ ನೀಡುವುದು. ಕ್ರೀಡಾ ಸಾಂಸ್ಕೃತಿಕ ಕಾರ್ಯಕ್ರಮಗಳು, ರಾಷ್ಟ್ರೀಯ ಕಾರ್ಯಕ್ರಮಗಳು, ಮುಂತಾದ ಸಂದರ್ಭಗಳಲ್ಲಿ ಶಿಕ್ಷಕರಿಗೆ ಹಾಗೂ ಮಕ್ಕಳಿಗೆ ಸಹಾಯ ಸಹಕಾರವನ್ನು ನೀಡುವುದು. ಮುಂತಾದ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಬೇಕು ಎಂಬುದರ ಬಗ್ಗೆ ತಿಳಿಸಿದ್ದಾರೆ.

೪.೨.೩೫ ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರ ಜವಬ್ದಾರಿಗಳು

ಶಾಲಾಭಿವೃದ್ಧಿಯಲ್ಲಿ ನಾಮನಿರ್ದೇಶಿತ ಸದಸ್ಯರಾದ ಸ್ವಯಂ ಸೇವಾ ಸಂಸ್ಥೆಗಳ ಕಾರ್ಯಕರ್ತರ ಜವಾಬ್ದಾರಿಗಳೇನು ಎಂಬುದನ್ನು ಸದಸ್ಯರಲ್ಲಿ ಕೇಳಿದಾಗ ಅವರು ನೀಡಿದ ಪ್ರತಿಕ್ರಿಯೆಗಳನ್ನು ಇಲ್ಲಿ ಒಟ್ಟುಗೂಡಿಸಲಾಗಿದೆ. ಅವುಗಳೆಂದರೆ, ಶಾಲಾ ಆಡಳಿತ ಮತ್ತು ಸ್ಥಳೀಯ ಆಡಳಿತಕ್ಕೆ ಕುಂದು ಬರದಂತೆ ನೋಡಿಕೊಳ್ಳುವುದು, ಶಿಕ್ಷಣದ ಅರಿವು, ಮಾಹಿತಿ, ಹಾಗೂ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು, ಶಿಕ್ಷಕ, ಪಾಲಕ, ಗ್ರಾಮದ ಸಮುದಾಯ ಹಾಗೂ ಶಾಲೆಯ ಮಕ್ಕಳೊಟ್ಟಿಗೆ ಸಮನ್ವಯತೆಯನ್ನು ಸಾಧಿಸಿ ಗುಣಾತ್ಮಕ ಶಿಕ್ಷಣವು ಸುಗುಮವಾಗಿ ನಡೆಯಲು ಅನುವು ಮಾಡಿಕೊಡುವುದು.

ಎಸ್.ಡಿ.ಎಂ.ಸಿಗಳ ಸಮರ್ಪಕ ಕಾರ್ಯನಿರ್ವಹಣೆಗೆ ಪ್ರತಿ ಸದಸ್ಯನೂ ಎಸ್.ಡಿ.ಎಂ.ಸಿ ಮಾದರಿ ಉಪವಿಧಿಗಳಲ್ಲಿ ಹೇಳಲಾಗಿರುವ ಕರ್ತವ್ಯ ಮತ್ತು ಅಧಿಕಾರಗಳ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳಬೇಕಾದದು ಅತ್ಯಗತ್ಯ, ಎಸ್.ಡಿ.ಎಂ.ಸಿ ಪಧಾಧಿಕಾರಿಗಳು ಎಸ್.ಡಿ.ಎಂ.ಸಿ ಕಾರ್ಯನಿರ್ವಹಣೆಯಲ್ಲಿ ಗಮನಾರ್ಹ ಪಾತ್ರ ವಹಿಸಿರುವುದರಿಂದ ಸದಸ್ಯರಿಗೆ ತಮ್ಮ ಸ್ವಾಭಾವಿಕ ಅಧಿಕಾರಗಳ ಬಗ್ಗೆ ಅರಿವು ಇಲ್ಲದೆ ಹೋದರೆ ಎಸ್.ಡಿ.ಎಂ.ಸಿಯ ಚಟುವಟಿಕೆಯಲ್ಲಿ ಸಕ್ರಿಯ ಪಾಲುದಾರಿಕೆ ಸಾಧ್ಯವಾಗುವುದಿಲ್ಲ. ಈ ಅಧ್ಯಯನದ ಎಸ್.ಡಿ.ಎಂ.ಸಿ ಮಾದರಿ ಉಪವಿಧಿಯಲ್ಲಿ ವಿದಿತವಾಗಿರುವಂತೆ ಇರುವ ಅರಿವಿನ ಮಟ್ಟದ ಬಗ್ಗೆ ಅಂಕಿ ಅಂಶಗಳನ್ನು ಸಂಗ್ರಹಿಸಲಾಗಿದೆ.

೪.೨.೩೬ ನಾಗರೀಕ ಸೌಕರ್ಯ ಸಮಿತಿಯ ಕಾರ್ಯ ವೈಖರಿ ಹಾಗೂ ಅದರ ಸಂರಚನೆಯ ಬಗ್ಗೆಅರಿವು

ನಾಗರೀಕ ಸೌಲಭ್ಯ ಸಮಿತಿಯು ಗ್ರಾಮ ಪಂಚಾಯತಿ ಮಟ್ಟದಲ್ಲಿ ಚುನಾಯಿತ ಪ್ರತಿನಿಧಿಗಳನ್ನು ಒಳಗೊಂಡ ೩ ರಿಂದ ೫ ಮಂದಿ ಸದಸ್ಯರನ್ನು ಹೊಂದಿದ ಸಮಿತಿಯಾಗಿರುತ್ತದೆ. ಈ ಸಮಿತಿಗೆ ಪಂಚಾಯತಿಯ ಅಧ್ಯಕ್ಷರೆ ಪದನಿಮಿತ್ತ ಸದಸ್ಯ ಮತ್ತು ಸಭಾಪತಿಯಾಗಿರುತ್ತಾರೆ. ಈ ಸಮಿತಿಯು ಪಂಚಾಯತ್ ರಾಜ್ ವ್ಯವಸ್ಥೆಯ ೭೩ನೇ ವಿಧಿಯ ಅಧಿನಿಯಮದಡಿ ರಚಿತವಾಗಿರುತ್ತದೆ. ಈ ಸಮಿತಿಯು ಕರ್ನಾಟಕ ರಾಜ್ಯ ಅಧಿನಿಯಮ ೧೯೯೩ ರಲ್ಲಿ ತಿಳಿಸಿರುವ ಶೈಕ್ಷಣಿಕ ಜವಾಬ್ದಾರಿಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಶಾಲಾಭಿವೃದ್ಧಿ ಸಮಿತಿಗೆ ಎಲ್ಲ ರೀತಿಯ ಸಹಾಯ ಹಾಗೂ ಬೆಂಬಲವನ್ನು ನೀಡುವ ಮೂಲಕ ಪಂಚಾಯತಿ ವ್ಯಾಪ್ತಿಯಲ್ಲಿರುವ ೬ ರಿಂದ ೧೪ ವರ್ಷದ ಮಕ್ಕಳು ದಾಖಲಾಗುವಂತೆ ಹಾಗೂ ಗುಣಾತ್ಮಕ ಕಲಿಕೆ ಪಡೆಯುವಂತೆ ನೋಡಿಕೊಳ್ಳಬೇಕಾಗಿದೆ. ಗ್ರಾಮ ಪಂಚಾಯಿತಿಯ ನಾಗರೀಕ ಸೌಲಭ್ಯ ಸಮಿತಿಯ ಉಪಸ್ಥಿತಿಯಲ್ಲಿ ಎಸ್.ಡಿ.ಎಂ.ಸಿಗಳು ಒಟ್ಟು ಸೇರಿ ಮೂರು ತಿಂಗಳಿಗೊಮ್ಮೆ ಎಸ್.ಡಿ.ಎಂ.ಸಿ ಅಧ್ಯಕ್ಷರು ಉಪಾಧ್ಯಕ್ಷರು ಮತ್ತು ಮುಖ್ಯ

ಶಿಕ್ಷಕರೊಳಗೊಂಡಂತೆ ಸಭೆ ಸೇರಿ ಚರ್ಚಿಸಬೇಕು. ಈ ಹಿನ್ನಲೆಯಲ್ಲಿ ಶೇಕಡ ೮೧.೯ರಷ್ಟು ಸದಸ್ಯರು ಇಲ್ಲ ಎಂದು ಶೇಕಡ ೧೯.೧ ರಷ್ಟು ಸದಸ್ಯರು ಹೌದು ಎಂದು ಪ್ರತಿಕ್ರಿಯಿಸಿದ್ದಾರೆ.

೪.೨.೩೭ ಎಸ್.ಡಿ.ಎಂ.ಸಿ ಹಾಗೂ ನಾಗರೀಕ ಸಮಿತಿಗಳ ಸಮನ್ವಯತೆ

ಎರಡೂ ಸಮಿತಿಗಳ ಪ್ರಸ್ತುತ ಸ್ಥಿತಿಯನ್ನು ಗಮನಿಸಿದಾಗ ಆರ್ಥಿಕ ವ್ಯವಹಾರ ನಿರ್ವಹಣೆ ಹಾಗೂ ಭೌತಿಕ ಸೌಲಭ್ಯ ಕಾರ್ಯನಿರ್ವಹಣೆಯ ಬಗ್ಗೆ ಹೆಚ್ಚಿನ ಗಮನಹರಿಸಿರುವುದು ಕಂಡು ಬರುತ್ತಿದೆ. ಈ ಸಮಿತಿಗಳ ಪಾತ್ರ ಇಷ್ಟಕ್ಕೆ ಸೀಮಿತವಾಗಿರದೆ ಶೈಕ್ಷಣಿಕ ಪ್ರಗತಿಯ ನಿಟ್ಟಿನಲ್ಲಿ ಚಿಂತನೆ ಮಾಡುವುದು ಅವಶ್ಯಕವಿದೆ. ಈ ಎರಡೂ ಸಮಿತಿಗಳು ಸಂವಿಧಾನಬದ್ಧವಾಗಿ ರಚಿತವಾಗಿವೆ. ಈ ಸಮಿತಿಗಳು ಶಿಕ್ಷಣದ ಗುರಿ ಸಾಧನೆಗೆ ಶಿಕ್ಷಣ ಸಂಸ್ಥೆಗಳೊಂದಿಗೆ ಕಾರ್ಯನಿರ್ವಹಿಸಬೇಕಾಗಿದೆ. ಎರಡೂ ಸಮಿತಿಗಳು ಶಾಲೆ ಮತ್ತು ಸಮುದಾಯವನ್ನು ಒಂದುಗೂಡಿಸುವ ಕೊಂಡಿಗಳಾಗಿವೆ. ಸಮುದಾಯದಿಂದ ಆಯ್ಕೆಯಾದ ಎಸ್.ಡಿ.ಎಂ.ಸಿ ಸಮಿತಿ ಶೈಕ್ಷಣಿಕವಾಗಿ ಚಿಂತನಾಶೀಲರಾಗಿ ಶಾಲೆಗಳು ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಎಲ್ಲಾ ರೀತಿಯ ಸಹಕಾರ ನೀಡಬೇಕಾಗಿದೆ. ಗುಣಮಟ್ಟ ಶಿಕ್ಷಣವು ಶಾಲೆ, ಎಸ್.ಡಿ.ಎಂ.ಸಿ ಸಮಿತಿ ಮತ್ತು ಸಮುದಾಯದಿಂದ ಮಾತ್ರ ಸಾಧ್ಯ. ಮುಂದಿನ ಸಾಮಾಜಿಕ, ಆರ್ಥಿಕ, ಧಾರ್ಮಿಕ ಮತ್ತು ಶೈಕ್ಷಣಿಕ ಬದಲಾವಣೆಗಳನ್ನು ಆಲೋಚಿಸಿ, ಜಾಗತಿಕ ಬದಲಾವಣೆಗಳನ್ನು ಗಮನಿಸಿ, ಶಿಕ್ಷಣ ಹೇಗಿರಬೇಕು, ಶಿಕ್ಷಣ ನೀಡುತ್ತಿರುವ ಶಾಲೆಗಳು ಹೇಗೆ ರೂಪುಗೊಳ್ಳಬೇಕು. ಅದರಲ್ಲಿ ಸಮಿತಿಗಳ ಕೊಡುಗೆ ಏನು ಎಂಬುದನ್ನು ತಿಳಿದು ಶಾಲೆಗಳನ್ನು ಬಲಗೊಳಿಸುವುದು ಎಸ್.ಡಿ.ಎಂ.ಸಿ ಮತ್ತು ನಾಗರೀಕ ಸೌಕರ್ಯಗಳ ಸಮಿತಿಗಳ ಪ್ರಮುಖ ಪಾತ್ರವಾಗಿದೆ. ಈ ಕುರಿತಾಗಿ ಇಂದಿನ ಸರಕಾರಗಳು ಸಾಕಷ್ಟು ಚಿಂತನೆ ನಡೆಸಿ ಈ ಎರಡೂ ಸಮಿತಿಗಳಿಗೆ ಸಂವಿಧಾನಬದ್ಧ ಅವಕಾಶಗಳನ್ನು ನೀಡಿ ಪ್ರಜಾಪ್ರಭುತ್ವ ತತ್ವವನ್ನು ಬಲಪಡಿಸಿದೆ.

೪.೨.೩೮ ಎಸ್.ಡಿ.ಎಂ.ಸಿ ಸಭಾ ಕಲಾಪ ಪ್ರಕ್ರಿಯೆ ಬಗ್ಗೆ ಅರಿವು

ಶಾಲೆಯ ಸರ್ವತೋಮುಖ ಅಭಿವೃದ್ಧಿಯಲ್ಲಿ ಎಸ್.ಡಿ.ಎಂ.ಸಿಯ ಪಾತ್ರ ಅತಿ ಮುಖ್ಯವಾದುದು. ಒಂದು ಸಕ್ರಿಯವಾದ ಎಸ್.ಡಿ.ಎಂ.ಸಿಯು ಶಾಲೆಯ ಭೌತಿಕ ಅಗತ್ಯತೆಗಳ ಜೊತೆಯಲ್ಲಿ ಶೈಕ್ಷಣಿಕ ಅಗತ್ಯತೆಗಳ ಕಡೆಗೂ ಗಮನಹರಿಸುತ್ತದೆ. ಶಾಲೆಯಲ್ಲಿ ಎಲ್ಲಾ ಮಕ್ಕಳಿಗೂ ಗುಣಾತ್ಮಕ ಶಿಕ್ಷಣ ಸಿಗುವಂತೆ ಮಾಡಲು ಏನೆಲ್ಲಾ ಕಾರ್ಯಗಳನ್ನು ಮಾಡಬೇಕೋ ಆ ಎಲ್ಲಾ ಕಾರ್ಯಗಳನ್ನು ಮಾಡಲು ಪೂರ್ಣ ಪ್ರಮಾಣದಲ್ಲಿ ಶ್ರಮಿಸಬೇಕಾಗುತ್ತದೆ. ಎಸ್.ಡಿ.ಎಂ.ಸಿ ಒಂದು ವ್ಯಕ್ತಿ ಕೇಂದ್ರಿತ ಸಂಸ್ಥೆಯಲ್ಲ ಅದು ಸಮೂಹ ಕೇಂದ್ರಿತವಾದುದು. ಎಸ್.ಡಿ.ಎಂ.ಸಿ ಎಲ್ಲಾ ಸದಸ್ಯರು ಸಮಾನ ಅವಕಾಶ ಜವಬ್ದಾರಿಗಳನ್ನು ಹೊಂದಿದ್ದು, ಶಾಲೆಯ ಪ್ರತಿ ಆಗು ಹೋಗುಗಳನ್ನು ನೋಡಿಕೊಳ್ಳಬೇಕಾಗುತ್ತದೆ. ಈ ರೀತಿ ಕಾರ್ಯನಿರ್ವಹಿಸುತ್ತಿರುವಾಗ ಸಾಮೂಹಿಕವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗಿದೆ. ಈ ನಿಟ್ಟಿನಲ್ಲಿ ಎಸ್.ಡಿ.ಎಂ.ಸಿ ಸಭೆಗಳು ಬಹಳ ಪ್ರಾಮುಖ್ಯತೆ ಪಡೆದುಕೊಂಡಿವೆ. ಈ ಸಭೆಗಳು ಎಸ್.ಡಿ.ಎಂ.ಸಿಯು ಹೇಗೆ ಕಾರ್ಯನಿರ್ವಹಿಸುತ್ತಿದೆ ಎಂಬುದರ ಸೂಚಕವಾಗಿರುತ್ತದೆ. ಸಭೆ ಸೇರುವ ಮೂಲಕ ಎಲ್ಲರ ಅಭಿಪ್ರಾಯಗಳನ್ನು ಪರಸ್ಪರ ಆಲಿಸಲು ಮತ್ತು ಒಂದು ನಿರ್ಧಾರಕ್ಕೆ ಬರಲು ಅಲ್ಲದೇ ಆ ನಿರ್ಧಾರಗಳನ್ನು ಜಾರಿಗೊಳಿಸಲು ತಾನು ಹೇಗೆ ತೊಡಗಿಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸಲು ಸಹಕಾರಿಯಾಗುತ್ತದೆ. ಸಭೆ ಸೇರದೆ ಕೆಲವರು ಅಥವಾ ಒಬ್ಬ ವ್ಯಕ್ತಿ ತೆಗೆದುಕೊಳ್ಳುವ ನಿರ್ಧಾರವು ಎಷ್ಟೇ ಸದ್ಭಾವನೆಯಿಂದ ಕೂಡಿದ್ದರೂ ಅದು ಪ್ರಜಾಪ್ರಭುತ್ವ ಮೌಲ್ಯಗಳಿಗೆ ಪೂರಕವಾಗಿರುವುದಿಲ್ಲ. ಪ್ರತಿ ಸದಸ್ಯರಿಗೆ ತಮ್ಮ ಜವಬ್ದಾರಿಗಳ ಬಗ್ಗೆ ಅರಿವು ಮೂಡಿಸಲು

ಪ್ರತಿಯೊಬ್ಬರನ್ನು ತೊಡಗಿಸಿಕೊಳ್ಳಲು ಎಸ್.ಡಿ.ಎಂ.ಸಿ ಸಭೆಯು ಉತ್ತಮ ವೇದಿಕೆಯಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಒಂದು ಎಸ್.ಡಿ.ಎಂ.ಸಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ಹೇಳಬೇಕಾದರೆ ಅದು ತಿಂಗಳಿಗೊಂದು ಸಭೆ ನಡೆಸುತ್ತಿದೆಯೇ? ನಡೆಸುತ್ತಿರುವ ಸಭೆಗಳು ಸರಿಯಾದ ರೀತಿಯಲ್ಲಿ ನಡೆಯುತ್ತಿವೆಯೇ? ಎಂಬುದು ಬಹುಮುಖ್ಯ ಮಾನದಂಡವಾಗುತ್ತದೆ. ಎಸ್.ಡಿ.ಎಂ.ಸಿಯು ಶಾಲೆಗೆ ಸಂಬಂಧಿಸಿದ ಪೋಷಕರ ಸಮುದಾಯವಾಗಿದ್ದು ಎಲ್ಲಾ ವರ್ಗದ ಪ್ರತಿನಿಧಿಗಳನ್ನು ಒಳಗೊಂಡಿರುತ್ತದೆ. ಹಿಂದುಳಿದ ಸಮುದಾಯದ ಪ್ರತಿನಿಧಿಗಳಿಗೆ, ಮಹಿಳಾ ಪ್ರತಿನಿಧಿಗಳಿಗೆ ಇಲ್ಲಿ ಅವಕಾಶ ಕಲ್ಪಿಸಲಾಗಿದೆ. ಅವರನ್ನು ಶಾಲೆಯ ಎಲ್ಲಾ ಆಗುಹೋಗುಗಳಲ್ಲಿ ತೊಡಗಿಸುವುದು ನಮ್ಮೆಲ್ಲರ ಬಹುಮುಖ್ಯ ಜವಬ್ದಾರಿಯಾಗಿದೆ. ಈ ನಿಟ್ಟಿನಲ್ಲಿ ಎಸ್.ಡಿ.ಎಂ.ಸಿ ಸಭೆಗಳು ಮಹತ್ವವನ್ನು ಪಡೆದುಕೊಂಡಿದೆ. ತಮ್ಮ ಕೆಲಸ ಕಾರ್ಯಗಳ ಬಗ್ಗೆ ಸಮರ್ಥನೆ ಮಾಡಿಕೊಳ್ಳುವ ಮತ್ತು ವಿಮರ್ಶೆ ಮಾಡಿಕೂಳ್ಳುವ ಅವಕಾಶ ಇಲ್ಲಿ ದೊರೆಯುತ್ತದೆ ಕಾಲಕಾಲಕ್ಕೆ ನಡೆಯುವ ಸಭೆಗಳು ಎಸ್‌ಡಿಎಂಸಿಯ ಕಾಯನಿರ್ವಹಣೆಯನ್ನು ಅಧಿಕೃತಗೊಳಿಸುತ್ತದೆ, ವಿಮರ್ಶೆಗೆ ಒಳಪಡಿಸುತ್ತದೆ ಹಾಗು ವ್ಯವಸ್ಥಿತಗೊಳಿಸುತ್ತದೆ. ಇಲ್ಲಿ ನಡೆಯುವ ಚರ್ಚೆಗಳು ತೆಗೆದುಕೊಳ್ಳುವ ತೀರ್ಮಾನಗಳ ದಾಖಲೆ ಮೊದಲಾದ ಪ್ರತಿಕ್ರಿಯೆಗಳ ಮೂಲಕ ಇದು ವ್ಯಕ್ತವಾಗುತ್ತದೆ. ಸಭೆಯು ಮಕ್ಕಳ, ಪೋಷಕರ, ಶಿಕ್ಷಕರ ಮತ್ತು ಇತರರ ದೂರುಗಳನ್ನು ಪರಿಶೀಲಿಸಲು ಹಾಗು ಪರಿಹರಿಸಲು ಸೂಕ್ತ ವೇದಿಕೆಯಾಗಿರುತ್ತದೆ. ಜೀವಿಯು ಬದುಕಿದೆ ಎಂದು ನಿರ್ಧರಿಸುವಲ್ಲಿ ಆ ಜೀವಿ ಉಸಿರಾಟ ನಡೆಸುತ್ತಿರುವುದನ್ನು ಹೇಗೆ ಪರಿಗಣಿಸುತ್ತೇವೆಯೋ ಹಾಗೆಯೇ ಎಸ್.ಡಿ.ಎಂ.ಸಿ ಸಕ್ರಿಯವಾಗಿದೆ ಎಂದು ನಿರ್ಧರಿಸುವಲ್ಲಿ ಅದು ನಿಯಮಬದ್ಧವಾಗಿ ಕಾಲಕಾಲಕ್ಕೆ ಸಭೆ ಸೇರುತ್ತಿದೆಯೇ ಎಂಬುದನ್ನು ಅತಿ ಮುಖ್ಯವಾಗಿ ಪರಗಣಿಸಬೇಕಾಗುತ್ತದೆ.

೪.೨.೩೯ ಶಾಲಾ ಮುಖ್ಯ ಶಿಕ್ಷಕರು ಎಸ್.ಡಿ.ಎಂ.ಸಿ ಸದಸ್ಯರನ್ನು ಸಭೆಗಳಿಗೆ ಹೇಗೆ ಆಹ್ವಾನಿಸುತ್ತಾರೆ?

ಶಾಲೆಯ ಸಿಬ್ಬಂಧಿ ಮತ್ತು ಎಸ್.ಡಿ.ಎಂ.ಸಿ ಸಮಿತಿ ಸಮುದಾಯ ಉದ್ದೇಶಿತ ಸಮಯದಲ್ಲಿ ತಮ್ಮ ತಮ್ಮ ಅಭಿಪ್ರಾಯಗಳನ್ನು ಮಂಡಿಸಲು, ಚರ್ಚಿಸಲು, ಜವಬ್ದಾರಿಗಳನ್ನು ಹಂಚಿಕೊಳ್ಳಲು ಒಂದಡೆ ಸೇರುವ ವೇದಿಕೆ, ಶಾಲೆಗಳಲ್ಲಿ ಸಾಮಾನ್ಯ ಸಭೆ, ತುರ್ತು ಸಭೆ, ಹಾಗೂ ವಿಶೇಷ ಸಭೆಗಳು ಎಂಬ ಮೂರು ಸಭೆಗಳನ್ನು ಮಾಡಲಾಗುತ್ತದೆ. ಎಸ್.ಡಿ.ಎಂ.ಸಿ ಸದಸ್ಯರನ್ನು ಸಭೆಗಳು ಹೇಗೆ ನಡೆಯುತ್ತಿದೆ ಹಾಗೂ ಸಭೆ ಎಷ್ಟು ದಿನಗಳಿಗೊಮ್ಮೆ ನಡೆಯಬೇಕು ಎಂಬುದು ಸದಸ್ಯರಿಗೆ ಅರಿವು ಎಷ್ಟಿದೆ ಎಂಬುದರ ಬಗ್ಗೆ ಪ್ರತಿಕ್ರಿಯೆಯನ್ನು ತಿಳಿಯುವ ಉದ್ದೇಶದಿಂದ ಮುಖ್ಯ ಶಿಕ್ಷಕರು ಎಸ್.ಡಿ.ಎಂ.ಸಿ ಸದಸ್ಯರನ್ನು ಸಭೆಗಳಿಗೆ ಹೇಗೆ ಆಹ್ವಾನಿಸುತ್ತಾರೆ ಎಂಬುದರ ಬಗ್ಗೆ ಸದಸ್ಯರ ಅಭಿಪ್ರಾಯವನ್ನು ಕೇಳಿದಾಗ ಈ ಕೆಳಕಂಡಂತೆ ಪ್ರತಿಕ್ರಿಯಿಸಿದ್ದಾರೆ.

ಕೋಷ್ಟಕ ೪೦

ಶಾಲಾ ಮುಖ್ಯ ಶಿಕ್ಷಕರು ಎಸ್.ಡಿ.ಎಂ.ಸಿ ಸದಸ್ಯರನ್ನು ಸಭೆಗಳಿಗೆ ಹೇಗೆ ಆಹ್ವಾನಿಸುತ್ತಾರೆ?

ಸಭೆಯ ವಿಷಯ ತಿಳಿಯುವುದು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%

ಮಕ್ಕಳಿಂದ	೧೯೮	೭೫.೬	೧೭೯	೯೦.೪	೨೦೯	೮೮.೨	೬೩	೭೫	೬೪೯	೮೩.೧
ಶಿಕ್ಷಕರು	೨೨	೮.೪	೧೦	೫.೧	೬	೨.೫	೮	೯.೫	೪೬	೫.೯
ನೆರೆಹೊರೆಯವರಿಂದ	೪೨	೧೬	೯	೪.೫	೨೨	೯.೩	೧೩	೧೫.೫	೮೬	೧೧

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೮೩.೧ರಷ್ಟು ಮಕ್ಕಳ ಹತ್ತಿರ ಸದಸ್ಯರಿಗೆ ಪತ್ರ ಕಳುಹಿಸುತ್ತಾರೆ ಎಂದು. ಶೇಕಡ ೫.೯ ರಷ್ಟು ಶಿಕ್ಷಕರು ಸಿಕ್ಕಿದಾಗ ತಿಳಿಸುತ್ತಾರೆ, ಶೇಕಡ ೧೧ ರಷ್ಟು ಸದಸ್ಯರು ನೆರೆಹೊರೆಯವರಿಂದ ತಿಳಿಯುತ್ತದೆ ಎಂದು ತಿಳಿಸಿದ್ದಾರೆ. ಇದನ್ನು ನೋಡಿದಾಗ ಸಭೆಗಳಿಗೆ ಸದಸ್ಯರನ್ನು ಆಹ್ವಾನಿಸುವಲ್ಲಿ ಸರಿಯಾದ ಪ್ರಕ್ರಿಯೆ ಇಲ್ಲದಿರುವುದನ್ನು ನೋಡಬಹುದಾಗಿದೆ. ಹಾಗೂ ಸದಸ್ಯರಿಗೂ ಸರಿಯಾದ ಅರಿವು ಇಲ್ಲದಿರುವುದನ್ನು ಕಾಣಬಹುದಾಗಿದೆ.

೪.೨.೪೦ ಸಭೆ ಕರೆಯುವ ವಿಧಾನ

ಶಾಲೆಯ ಅಭಿವೃದ್ಧಿ ದೃಷ್ಟಿಯಿಂದ ಪ್ರತಿ ತಿಂಗಳು ಸಭೆಯನ್ನು ನಡೆಸಬೇಕು, ಹಿಂದಿನ ಸಭೆಯಲ್ಲಿ ನಿರ್ಣಯಿಸಿ ಯೋಜಿಸಿದ ಅಂಶಗಳು ಎಷ್ಟರ ಮಟ್ಟಿಗೆ ಅನುಷ್ಠಾನಗೊಂಡಿದೆ ಎಂಬುದನ್ನು ಪರಿಶೀಲನೆ ಮಾಡಲು ಈ ಸಭೆ ಅನುಕೂಲವಾಗುತ್ತದೆ. ಈ ಸಭೆ ನಡೆಯುವ ದಿನಾಂಕದ ಜೊತೆಗೆ ಒಂದು ವಾರದ ಮೊದಲು ಜ್ಞಾಪನಾ ಪತ್ರದ ಜೊತೆಗೆ ಸಭೆಯ ಕಾರ್ಯಸೂಚಿಯನ್ನು ಕಾರ್ಯದರ್ಶಿಗಳು ಎಲ್ಲಾ ಸದಸ್ಯರಿಗೆ ತಲುಪಿಸಬೇಕು. ಈ ಕಾರ್ಯಸೂಚಿಯಲ್ಲಿ ಶಾಲೆಯ ಭೌತಿಕ ಅವಶ್ಯಕತೆ, ವಿವಿಧ ಶೈಕ್ಷಣಿಕ ಕಾರ್ಯಕ್ರಮಗಳ ವಿವರ ಮುಂತಾದವುಗಳನ್ನು ಒಳಗೊಂಡಿರಬೇಕಾಗುತ್ತದೆ.

ಕೋಷ್ಟಕ ೪೧

ಸಭೆ ಕರೆಯುವ ವಿಧಾನದ ಬಗ್ಗೆ ಸದಸ್ಯರ ಅಭಿಪ್ರಾಯ

ಜಿಲ್ಲೆ	ಸಭೆಗೂ ಮುನ್ನ ಅಜೆಂಡಾ ಸಿದ್ಧಪಡಿಸಲಾಗುತ್ತಿದೆ				ಪ್ರತಿ ಸಭೆಗೂ ಮುನ್ನ ಅಜೆಂಡಾವನ್ನು ತಿಳಿಸುವುದು			
	ಹೌದು		ಇಲ್ಲ		ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೧೯೨	೮೦	೪೮	೨೦	೧೭೯	೮೯.೯	೨೦	೧೦.೧
ಬಾಗಲಕೋಟೆ	೨೦೨	೭೪.೮	೬೮	೨೫.೨	೧೯೮	೭೨.೯	೩೨	೨೭.೧
ಬಳ್ಳಾರಿ	೨೩೫	೮೬.೧	೩೮	೧೩.೯	೧೦೨	೮೫.೩	೧೫	೧೪.೭
ರಾಯಚೂರು	೭೮	೮೭.೬	೧೧	೧೨.೪	೬೮	೭೮.೨	೧೯	೨೧.೮
ಎಲ್ಲಾ ಜಿಲ್ಲೆಗಳು	೭೦೭	೮೧.೧	೧೬೫	೧೮.೯	೫೪೭	೮೬.೪	೮೬	೧೩.೬

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಸಭೆಗೂ ಮುನ್ನ ಅಜೆಂಡಾ ಸಿದ್ಧಪಡಿಸಲಾಗುತ್ತಿದೆ ಎಂದು ಶೇಕಡ ೮೧.೧ ರಷ್ಟು ಉತ್ತರಿಸಿದ್ದು, ಶೇಕಡ ೧೬.೯ ರಷ್ಟು ಜನರು ಇಲ್ಲ ಎಂದು ಉತ್ತರಿಸಿದ್ದಾರೆ, ಹಾಗೆಯೇ ಪ್ರತಿ ಸಭೆಗೂ ಮುನ್ನ ಅಜೆಂಡಾವನ್ನು ಜ್ಞಾಪನಾ ಪತ್ರದೊಟ್ಟಿಗೆ ಕಳುಹಿಸುತ್ತಾರೆ ಎಂದು ಶೇಕಡ ೮೬.೪ ರಷ್ಟು ಜನರು ಉತ್ತರಿಸಿದ್ದು. ಶೇಕಡ ೧೩.೬ ರಷ್ಟು ಸದಸ್ಯರು ಇಲ್ಲ ಎಂದು ಉತ್ತರಿಸಿದ್ದಾರೆ. ಆದರೆ ವಾಸ್ತವಿಕವಾಗಿ

ಶಾಲೆಗಳ ಜ್ಞಾಪನಾ ಪತ್ರದ ಮಾದರಿಯನ್ನು ಪಡೆದು ನೋಡಿದಾಗ ಸದಸ್ಯರ ಪ್ರತಿಕ್ರಿಯೆಗೂ ಅದರ ಅನುಷ್ಠಾನಕ್ಕೂ ಅಜಗಜಾಂತರ ವ್ಯತ್ಯಾಸವಿರುವುದನ್ನು ಗಮನಿಸಬಹುದಾಗಿದೆ.

೪.೨.೪೧ ಎಸ್.ಡಿ.ಎಂ.ಸಿ ಸಭೆಗಳಲ್ಲಿ ವಿಷಯಗಳ ಚರ್ಚೆ ಬಗ್ಗೆ ಅರಿವು

ಎಸ್.ಡಿ.ಎಂ.ಸಿ ಸಭಾಕಲಾಪ ಪ್ರಕ್ರಿಯೆ ಬಗ್ಗೆ ಅರಿವು ಹಾಗೂ ಸಭೆಗಳಲ್ಲಿ ಯಾವ ವಿಷಯಗಳ ಬಗ್ಗೆ ಚರ್ಚೆಗಳಾಗುತ್ತವೆ ಎಂಬುದರ ಬಗ್ಗೆ ಪ್ರತಿಕ್ರಿಯೆಯನ್ನು ಕೇಳಿದಾಗ

ಕೋಷ್ಟಕ ೪೨

ಎಸ್.ಡಿ.ಎಂ.ಸಿ ಸಭೆಗಳಲ್ಲಿ ವಿಷಯಗಳ ಚರ್ಚೆ ಬಗ್ಗೆ ಅರಿವು

ಸಭೆಯಲ್ಲಿ ಚರ್ಚಿತ ವಿಷಯಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಶಾಲಾ ಮೂಲಭೂತ ಸೌಕರ್ಯಗಳ ಬಗ್ಗೆ	೧೭೮	೨೦.೪	೨೦೨	೨೪.೬	೧೯೨	೩೦.೬	೯೮	೧೮.೭	೬೭೦	೨೩.೬
ಶಾಲೆ ಸರಿಯಾಗಿ ನಡೆಯುವುದರ ಬಗ್ಗೆ	೧೨೮	೧೪.೬	೧೫೨	೧೮.೫	೧೧೧	೧೭.೭	೭೨	೧೩.೮	೪೬೩	೧೬.೩
ಮಕ್ಕಳ ಹಾಜರಾತಿ ದಾಖಲಾತಿ, ಕಲಿಕೆಯ ಬಗ್ಗೆ	೨೦೨	೨೩.೧	೧೭೮	೨೧.೭	೯೮	೧೫.೬	೧೨೨	೨೩.೩	೬೦೦	೨೧.೧
ಶಿಕ್ಷಕರ ಹಾಜರಾತಿಯ ಬಗ್ಗೆ	೫೮	೬.೬	೪೭	೫.೭	೩೮	೬.೧	೨೨	೪.೨	೧೬೫	೫.೮
ಎಸ್.ಡಿ.ಎಂ.ಸಿಯ ಚಟುವಟಿಕೆಯ ಬಗ್ಗೆ	೧೩೨	೧೫.೧	೧೧೧	೧೩.೫	೬೮	೧೦.೮	೩೯	೭.೫	೩೫೦	೧೨.೩
ಶಾಲೆಯ ನೈರ್ಮಲ್ಯ ಮತ್ತು ಸ್ವಚ್ಚತೆಯ ಬಗ್ಗೆ	೭೮	೮.೯	೫೨	೬.೩	೩೨	೫.೧	೪೨	೮	೨೦೪	೭.೨
ಉತ್ತೇಜಕಗಳು ಮತ್ತು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ	೯೮	೧೧.೨	೭೮	೯.೫	೮೮	೧೪	೧೨೮	೨೪.೫	೩೯೨	೧೩.೮

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೨೩.೬ ರಷ್ಟು ಶಾಲಾ ಭೌತಿಕ ಸೌಲಭ್ಯದ ಬಗ್ಗೆ ಶೇಕಡ ೧೬.೩ರಷ್ಟು ಸದಸ್ಯರು ಶಾಲೆ ಸರಿಯಾಗಿ ನಡೆಸುವ ಬಗ್ಗೆ ಶೇಕಡ ೨೧.೧ ರಷ್ಟು ಮಕ್ಕಳ ದಾಖಲಾತಿ, ಹಾಜರಾತಿ, ಮತ್ತು ಉಳುವಿಕೆಯ ಬಗ್ಗೆ ಶೇಕಡ ೫.೮ ರಷ್ಟು ಸದಸ್ಯರು ಶಿಕ್ಷಕರ ಹಾಜರಾತಿಯ ಬಗ್ಗೆ, ಶೇಕಡ ೧೨.೩ ರಷ್ಟು ಎಸ್.ಡಿ.ಎಂ.ಸಿ ಚಟುವಟಿಕೆಯ ಬಗ್ಗೆ, ಶೇಕಡ ೭.೨ ರಷ್ಟು ಶಾಲೆಯ ನೈರ್ಮಲ್ಯ ಮತ್ತು ಸ್ವಚ್ಚತೆಯ ಬಗ್ಗೆ ಶೇಕಡ ೧೩.೮ ರಷ್ಟು ಉತ್ತೇಜಕಗಳು ಮತ್ತು ಇಲಾಖೆಯ ಕಾರ್ಯಕ್ರಮಗಳ ಬಗ್ಗೆ ಚರ್ಚಿಸಲಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪.೨.೪೨ ಎಸ್.ಡಿ..ಎಂ.ಸಿ ಸಭೆಗಳಿಗೆ ನಾಮ ನಿರ್ದೇಶಿತ ಮತ್ತು ಪದನಿಮಿತ್ತ ಸದಸ್ಯರನ್ನು ಸಭೆಗೆ ಆಹ್ವಾನ

ಸಭೆಗಳಿಗೆ ಎಲ್ಲಾ ಭಾಗಿದಾರರನ್ನು ಆಹ್ವಾನಿಸುವುದರಿಂದ ಪ್ರತಿಯೊಬ್ಬರ ದೃಷ್ಟಿಕೋನಗಳ ಆಧಾರದ ಮೇಲೆ ವಿಷಯಗಳನ್ನು ಮಂಡಿಸಲು ಸಾಧ್ಯವಾಗುವುದರಿಂದ ಹಾಗೂ ಜವಬ್ಧಾರಿಗಳ ಹಂಚಿಕೆಯ ದೃಷ್ಟಿಯಿಂದ ಸಭೆಗಳಿಗೆ ಆಹ್ವಾನಿಸಬೇಕಾಗಿದೆ. ಹಾಗಾಗಿ ಎಸ್.ಡಿ.ಎಂ.ಸಿ ಪದನಿಮಿತ್ತ ಮತ್ತು ನಾಮನಿರ್ದೇಶಿತ ಸದಸ್ಯರನ್ನು ಆಹ್ವಾನಿಸಬೇಕಾಗಿರುವುದು ಅಷ್ಟೇ ಮುಖ್ಯ. ಈ ರೀತಿ ಆಹ್ವಾನಿಸಲಾಗುತ್ತಿದಿಯೇ ಎಂಬುದರ ಬಗ್ಗೆ ಅವರ ಅರಿವನ್ನು ತಿಳಿದುಕೊಳ್ಳಲು ಇಲ್ಲಿ ಪ್ರಯತ್ನಿಸಲಾಗಿದೆ.

ಕೋಷ್ಟಕ ೪೩

ಎಸ್.ಡಿ..ಎಂ.ಸಿ ಸಭೆಗಳಿಗೆ ನಾಮ ನಿರ್ದೇಶಿತ ಮತ್ತು ಪದನಿಮಿತ್ತ ಸದಸ್ಯರನ್ನು ಸಭೆಗೆ ಆಹ್ವಾನ

ಪದನಿಮಿತ್ತ ಹಾಗೂ ನಾಮನಿರ್ದೇಶಿತ ಸದಸ್ಯರಿಗೆ ಆಹ್ವಾನ	ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೬೮	೨೦.೨	೨೬೮	೭೯.೮
ಬಾಗಲಕೋಟೆ	೩೮	೧೨.೯	೨೫೭	೮೭.೧
ಬಳ್ಳಾರಿ	೨೨	೭.೫	೨೭೨	೯೨.೫
ರಾಯಚೂರು	೧೨	೧೦.೫	೯೮	೮೯.೧
ಎಲ್ಲಾ ಜಿಲ್ಲೆಗಳು	೧೪೦	೧೩.೫	೮೯೫	೮೬.೫

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಎಸ್.ಡಿ.ಎಂ.ಸಿ ಸಭೆಗಳಿಗೆ ಪದನಿಮಿತ್ತ ಮತ್ತು ನಾಮನಿರ್ದೇಶಿತ ಸದಸ್ಯರನ್ನು ಆಹ್ವಾನದ ಬಗ್ಗೆ ಪ್ರತಿಕ್ರಿಯೆನ್ನು ಎಸ್.ಡಿ.ಎಂ.ಸಿ ಸದಸ್ಯರಲ್ಲಿ ಕೇಳಿದಾಗ ಹೌದು ಎಂದು ಶೇಕಡ ೧೩.೫ ರಷ್ಟು ಸದಸ್ಯರು ಹಾಗೂ ಇಲ್ಲ ಎಂದು ಶೇಕಡ ೮೬.೫ ರಷ್ಟು ಪ್ರತಿಕ್ರಿಯಿಸಿರುವುದನ್ನು ನೋಡಬಹುದಾಗಿದೆ. ಇದನ್ನು ನೋಡಿದಾಗ ಬಹಳಷ್ಟು ಜನರು ನಾಮನಿರ್ದೇಶಿತ ಸದಸ್ಯರನ್ನು ಸಭೆಗಳಿಗೆ ಕರೆದರು ನಾಮಖಾವಸ್ಥೆಗೆ ಕರೆಯುವ ಪ್ರಕ್ರಿಯೆಯನ್ನು ಇಟ್ಟುಕೊಂಡಿದ್ದಾರೆ ಎಂಬುದು ಕಂಡು ಬರತ್ತಿದೆ.

ಆಹ್ವಾನ ನೀಡಿಕೆ ಆದ ಮೇಲೆ ಸಂಬಂಧಿಸಿದ ಭಾಗೀದಾರರು ಎಷ್ಟರ ಮಟ್ಟಿಗೆ ಸಭೆಗಳಲ್ಲಿ ಭಾಗಿಯಾಗುತ್ತಾರೆ ಎನ್ನುವುದರಿಂದ ಶಾಲೆಗಳಲ್ಲಿ ಅವರ ಪಾಲ್ಗೊಳ್ಳುವಿಕೆಯ ಮೇಲೆ ಪರಿಣಾಮ

ಬೀರುತ್ತದೆ. ಈಗಾಗಿ ನಾಮ ನಿರ್ದೇಶಿತ ಮತ್ತು ಪದನಿಮಿತ್ತ ಸದಸ್ಯರು ತಪ್ಪದೆ ಸಭೆಯಲ್ಲಿ ಭಾಗವಹಿಸುತ್ತಾರೆಯೇ ಎಂಬುದರ ಬಗ್ಗೆ ಅಭಿಪ್ರಾಯವನ್ನು ಕೇಳಿದಾಗ

ಕೋಷ್ಟಕ ೪೪

ಎಸ್.ಡಿ.ಎಂ.ಸಿ ಸಭೆಗಳಿಗೆ ಪದನಿಮಿತ್ತ ಹಾಗೂ ನಾಮನಿರ್ದೇಶಿತ ಸದಸ್ಯರ ಭಾಗವಹಿಸುವಿಕೆ

ಪದನಿಮಿತ್ತ ಹಾಗೂ ನಾಮನಿರ್ದೇಶಿತ ಸದಸ್ಯರು ಸಭೆಯಲ್ಲಿ ಭಾಗವಹಿಸುವಿಕೆ	ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೨೮೮	೧೪.೩	೪೮	೮೫.೭
ಬಾಗಲಕೋಟೆ	೨೬೭	೯.೫	೨೮	೯೦.೫
ಬಳ್ಳಾರಿ	೨೮೨	೪.೧	೧೨	೯೫.೯
ರಾಯಚೂರು	೯೯	೨.೯	೩	೯೭.೧
ಎಲ್ಲಾ ಜಿಲ್ಲೆಗಳು	೯೩೬	೮.೯	೯೧	೯೧.೧

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಸಭೆಗೆ ನಾಮ ನಿರ್ದೇಶಿತ ಮತ್ತು ಪದನಿಮಿತ್ತ ಸದಸ್ಯರು ತಪ್ಪದೆ ಭಾಗವಹಿಸುತ್ತಾರೆಯೇ ಎಂಬ ಪ್ರತಿಕ್ರಿಯೆಗೆ ಶೇಕಡ ೮.೯ ರಷ್ಟು ಹೌದು ಎಂದು ಶೇಕಡ ೯೧.೧ ರಷ್ಟು ಇಲ್ಲ ಎಂಬ ಪ್ರತಿಕ್ರಿಯೆ ವ್ಯಕ್ತವಾಗಿದೆ. ಇಂತಹ ಸದಸ್ಯರು ಭಾಗವಹಿಸಿದ್ದರು ಸಹ ಪದನಿಮಿತ್ತ ಸದಸ್ಯರಾದ ಅಂಗನವಾಡಿ ಕಾರ್ಯಕರ್ತೆ ಹಾಗೂ ಆರೋಗ್ಯ ಕಾರ್ಯಕರ್ತೆಯರು ಶಾಲೆಯ ಸಭೆಗಳಲ್ಲಿ ಯಾರು ಭಾಗವಹಿಸುತ್ತಾರೆ ಎಂಬ ಪ್ರತಿಕ್ರಿಯೆಗೆ ಶೇಕಡ ೫೪ ರಷ್ಟು ಅಂಗನವಾಡಿ ಕಾರ್ಯಕರ್ತೆ ಹಾಗೂ ೪೬ ರಷ್ಟು ಆರೋಗ್ಯ ಕಾರ್ಯಕರ್ತೆ ಎಂಬ ಅಂಶವು ಬೆಳಕಿಗೆ ಬಂದಿದೆ.

೪.೨.೪೩ ತಂದೆ ತಾಯಿ ಪರಿಷತ್ ಸಭೆ

ಎಸ್.ಡಿ.ಎಂ.ಸಿಯು ಮೂಲತಃ ಪ್ರಜಾಪ್ರಭುತ್ವ ನಡವಳಿಕೆಯುಳ್ಳ ಸಂಸ್ಥೆಯಾಗಿದೆ. ಎಸ್.ಡಿ.ಎಂ.ಸಿಯ ಪ್ರತಿಯೊಬ್ಬ ಸದಸ್ಯನೂ ತಂದೆ-ತಾಯಿ ಪರಿಷತ್‌ನಿಂದ ಆಯ್ಕೆಯಾಗಿರುತ್ತಾನೆ ಮತ್ತು ಅವರೆಲ್ಲರ ಪ್ರತಿನಿಧಿಯಂತೆ ಕೆಲಸ ನಿರ್ವಹಿಸುತ್ತಾನೆ. ಹೀಗೆ ಕಾರ್ಯನಿರ್ವಹಿಸುವುದಲ್ಲದೆ ತಂದೆ-ತಾಯಿ ಪರಿಷತ್‌ಗೆ ಉತ್ತರದಾಯಿಯಾಗಿರುತ್ತಾನೆ ಮೂರು ತಿಂಗಳಿಗೊಮ್ಮೆ ನಡೆಯುವ ತಂದೆ-ತಾಯಿ ಪರಿಷತ್‌ಗೆ ಉತ್ತರದಾಯಿಯಾಗಿರುತ್ತಾನೆ. ತಂದೆ-ತಾಯಿ ಪರಿಷತ್ ಸಭೆಯು ಎಸ್.ಡಿ.ಎಂ.ಸಿಯ ಅವಧಿಯಲ್ಲಿ ಮಾಡಿರುವ ಕೆಲಸಗಳನ್ನು ಸಮುದಾಯದ ಮುಂದಿಡುವ ಹಾಗೂ ಪೋಷಕರ ಸಮುದಾಯದಿಂದ ಸಲಹೆ, ಸೂಚನೆ, ಮೆಚ್ಚುಗೆ ಪಡೆಯುವ ಅವಕಾಶವನ್ನು ಒದಗಿಸುತ್ತದೆ. ಈ ಸಂದರ್ಭವು ಎಸ್.ಡಿ.ಎಂ.ಸಿಯು ಪೋಷಕರಿಂದ ಬಯಸುವ ಸಹಕಾರವನ್ನು ಪಡೆಯಲು ಕೆಲಸ ಕಾರ್ಯಗಳ ವರದಿಗಳನ್ನು ಇಡಲು ಹಾಗೂ ಲೆಕ್ಕ ಪತ್ರಗಳನ್ನು ಹಂಚಿಕೊಳ್ಳಲು ಉತ್ತಮ

ಸಂದರ್ಭಗಳನ್ನು ನೀಡುತ್ತದೆ ಆದ್ದರಿಂದ ಕನಿಷ್ಟ ಮೂರು ತಿಂಗಳಿಗೊಮ್ಮೆ ತಂದೆ- ತಾಯಿ ಪರಿಷತ್‌ನ ಸಭೆಯನ್ನು ತಪ್ಪದೇ ನಡೆಸಬೇಕು.

೪.೨.೪೪ ಸಭೆಯ ದಾಖಲೆ ನಿರ್ವಹಣೆಯ ಅರಿವು

ಮಾದರಿ ಉಪವಿಧಿಯ ಕರ್ತವ್ಯಗಳಲ್ಲಿ ಕನಿಷ್ಠ ಪಕ್ಷ ಮೂರು ತಿಂಗಳಿಗೊಮ್ಮ ತಂದೆ- ತಾಯಿಯರ ಪರಿಷತ್ತಿನ ಸಭೆಗಳನ್ನು ಕರೆಯಬೇಕಾಗಿರುವುದನ್ನು ಸ್ಪಷ್ಟಪಡಿಸಿದ್ದು. ಇದರ ಅರಿವಿನ ಬಗ್ಗೆ ತಿಳಿಯಲು ಪ್ರಶ್ನೆಯನ್ನು ಕೇಳಿದಾಗ ಈ ಕೆಳಕಂಡಂತೆ ಉತ್ತರಿಸಿದ್ದಾರೆ.

ಕೋಷ್ಟಕ ೪೫

ಸಭೆಯ ದಾಖಲೆ ನಿರ್ವಹಣೆಯ ಅರಿವು

	ಸಭೆಗೂ ಮುನ್ನ ಅಜೆಂಡಾ ಸಿದ್ಧಪಡಿಸಲಾಗುತ್ತಿದೆ				ಪ್ರತಿ ಸಭೆಗೂ ಮುನ್ನ ಅಜೆಂಡಾವನ್ನು ತಿಳಿಸುವುದು			
ಜಿಲ್ಲೆ	ಹೌದು		ಇಲ್ಲ		ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೧೯೨	೮೦	೪೮	೨೦	೧೭೯	೮೯.೯	೨೦	೧೦.೧
ಬಾಗಲಕೋಟೆ	೨೦೨	೭೪.೮	೬೮	೨೫.೨	೧೯೮	೭೨.೯	೩೨	೨೭.೧
ಬಳ್ಳಾರಿ	೨೩೫	೮೬.೧	೩೮	೧೩.೯	೧೦೨	೮೫.೩	೧೫	೧೪.೭
ರಾಯಚೂರು	೭೮	೮೭.೬	೧೧	೧೨.೪	೬೮	೭೮.೨	೧೯	೨೧.೮
ಎಲ್ಲಾ ಜಿಲ್ಲೆಗಳು	೭೦೭	೮೧.೧	೧೬೫	೧೮.೯	೫೪೭	೮೬.೪	೮೬	೧೩.೬

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಪ್ರತಿ ಎಸ್.ಡಿ.ಎಂ.ಸಿಯು ಮೂರು ತಿಂಗಳಿಗೊಮ್ಮೆ ಸಭೆ ಕರೆಯಬೇಕಾಗಿದ್ದು, ಅದರಂತೆ ಶೇಕಡ ೮೧.೧ ರಷ್ಟು ಜನರು ಸಭೆಗೂ ಮುನ್ನ ಸಭೆಯ ಕಾರ್ಯಸೂಚಿಯನ್ನು ತಯಾರಿಸಿ ಕಳುಹಿಸಿಕೊಡಲಾಗುತ್ತಿದ್ದು, ಇದನ್ನು ನಮಗೆ ಸಭೆಗೂ ಮುನ್ನವೆ ತಿಳಿಸಲಾಗುತ್ತಿದೆ ಎಂಬ ಅಭಿಪ್ರಾಯವನ್ನು ಶೇಕಡ ೮೬.೪ ರಷ್ಟು ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು,ಶೇಕಡ ೧೮.೯ ರಷ್ಟು ಜನರು ಸಭೆಗೂ ಮುನ್ನಅಜೆಂಡಾ ಸಿದ್ಧಪಡಿಸುತ್ತಿಲ್ಲ ಹಾಗೂ ಶೇಕಡ ೧೩.೬ ರಷ್ಟು ಜನರು ಪ್ರತಿ ಸಭೆಗೂ ಮುನ್ನ ಅಜೆಂಡಾ ತಿಳಿಯುತ್ತಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪.೨.೪೫ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಯಶೋಗಾಥೆಗಳನ್ನು ಹೇಳಿಕೊಳ್ಳಲು ಒಂದು ವ್ಯವಸ್ಥೆಯು (ಫೇಡರೇಷನ್)

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಯಶೋಗಾಥೆಗಳನ್ನು ಹೇಳಿಕೊಳ್ಳಲು ಒಂದು ವ್ಯವಸ್ಥೆಯು (ಫೇಡರೇಷನ್) ಹೇಗಿರಬೇಕು ಎಂಬ ಅಂಶಗಳನ್ನು ಎಲ್ಲಾ ಭಾಗೀದಾರರೊಂದಿಗೆ

ಚರ್ಚಿಸಿದಾಗ ಹಾಗೂ ಕ್ಷೇತ್ರ ಕಾರ್ಯದ ಅವಲೋಕನದಿಂದ ಬಂದು ಒಳಹುಗಳನ್ನು ಇಲ್ಲಿ ಕ್ರೋಢೀಕರಿಸಲಾಗಿದೆ.

ಮಾನವ ಹಕ್ಕುಗಳ ಇಂದಿನ ಯುಗದಲ್ಲಿ ಶಿಕ್ಷಣ ಎಲ್ಲ ಮಕ್ಕಳ ಮೂಲಭೂತ ಹಕ್ಕೆಂಬುದು ಸಾರ್ವತ್ರಿಕ ಸತ್ಯ ಈ ಸಾರ್ವತ್ರಿಕ ಸತ್ಯವನ್ನು ಸಾರ್ವತ್ರೀಕರಣಗೊಳಿಸುವ ಪ್ರಯತ್ನಗಳು ಸ್ವಾತಂತ್ರ್ಯ ಪೂರ್ವದಿಂದಲೂ ನಡೆಯುತ್ತಾ ಬಂದಿವೆ. ಇದಕ್ಕೆ ನಿದರ್ಶನವಾಗಿ ೧೮೮೨ರಲ್ಲಿ ಶಿಕ್ಷಣ ಆಯೋಗದ (ಹಂಟರ್ ಆಯೋಗ)ಮುಂದೆ ಹಾಜರಾಗಿ ಸಾಕ್ಷಧಾರಗಳನ್ನು ಒದಗಿಸಿದ ಜ್ಯೋತಿಭಾಪುಲೆಯವರು ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಒತ್ತಾಯಿಸಿದ್ದರು.ಸ್ವತಂತ್ರ ಭಾರತದಲ್ಲಿ ಶಿಕ್ಷಣ ಸಾರ್ವತ್ರೀಕರಣದ ಮಹತ್ವವನ್ನು ಅರಿತ ನಮ್ಮ ಸಂವಿಧಾನ ರಚನಾಕಾರರು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನಿರ್ದೇಶಕ ತತ್ವಗಳಡಿಯಲ್ಲಿ ಒಂದು ಕಾಲಾಮಿತಿ ಕಾರ್ಯಕ್ರಮವನ್ನಾಗಿ ಸೇರಿಸಿದರು. ಅದರಂತೆ, ಎಲ್ಲ ಮಕ್ಕಳಿಗೆ ಶಾಲಾ ಶಿಕ್ಷಣವನ್ನು ಒದಗಿಸುವ ಗುರಿ ೧೯೬೦ಕ್ಕೆ ಮುಗಿಯಬೇಕಿತ್ತು. ಆದರೆ, ನಮಗೆಲ್ಲಾ ತಿಳಿದಿರುವಂತೆ ಸ್ವಾತಂತ್ರ್ಯ ಬಂದು ೬೫ ವರ್ಷಗಳು ಕಳೆದರೂ ಎಲ್ಲಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುವ ಗುರಿಯನ್ನುತಲುಪದಿರುವುದರ ಬಗ್ಗೆ ಪ್ರಜ್ಞಾವಂತ ಸಮಾಜ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ಇಂದು ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕೆಂಬ ಬೇಡಿಕೆ ಕೇವಲ ರಾಷ್ಟ್ರಗಳಿಗೆ ಮಾತ್ರ ಸೀಮಿತವಾಗದೆ ಒಂದು ಜಾಗತಿಕ ವಿಷಯವಾಗಿದೆ. ಜೊತೆಗೆ, ಮಾನವ ಹಕ್ಕುಗಳ ಅವಿಭಾಜ್ಯ ಅಂಗವಾಗಿರುವ ಈ ಶಿಕ್ಷಣದಹಕ್ಕು ಪ್ರತಿಯೊಂದು ಮಗುವಿಗೂ ಸಿಗಲೇ ಬೇಕೆಂಬ ಕೂಗು ಜಾಗತಿಕ ಮಟ್ಟದಲ್ಲಿ ಗಟ್ಟಿಯಾಗುತ್ತಿದೆ. ಈ ಸಂಬಂಧ ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವು ಒಪ್ಪಂದಗಳು ಮತ್ತು ಒಡಂಬಡಿಕೆಗಳು ಜಾರಿಗೆ ಬಂದಿವೆ. ಅವುಗಳಲ್ಲಿ ಒಂದು ಮಹತ್ವ ಒಡಂಬಡಿಕೆಯೆಂದರೆ **ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ**. ಈ ಒಡಂಬಡಿಕೆಯನ್ನು ವಿಶ್ವಸಂಸ್ಥೆಯು ಸದಸ್ಯ ರಾಷ್ಟ್ರಗಳ ಒಪ್ಪಿಗೆಗಾಗಿ ೧೯೮೯ರಲ್ಲಿ ತೆರೆದಿಟ್ಟಾಗ ಭಾರತ ಸರ್ಕಾರವು ಈ ಒಡಂಬಡಿಕೆಯನ್ನು(ಡಿಸೆಂಬರ್ ೧೯೯೨) ಅಂಗೀಕರಿಸಿದೆ. ಈ ಬೆಳವಣಿಗೆಗಳ ಭಾಗವಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಸಾಧಿಸುವ ನಿಟ್ಟನಲ್ಲಿ ಅಂತರಾಷ್ಟ್ರೀಯ ಮಟ್ಟದಒತ್ತಡಗಳು ಹೆಚ್ಚುತ್ತಿದ್ದು ಭಾರತ ಇದಕ್ಕೆ ಹೊರತಲ್ಲ.

ಇದರ ಜೊತೆ ಜೊತೆಗೆ ಭಾರತದಲ್ಲಿ ನ್ಯಾಯಾಂಗದ ಕ್ರಿಯಾಶೀಲತೆಯಿಂದಾಗಿ ನಿರ್ದೇಶಕ ತತ್ವದ ಅಡಿಯಲ್ಲಿದ್ದ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿ ಘೋಷಿಸಿದ ಸರ್ವೋಚ್ಚ ನ್ಯಾಯಲಯವು ೧೯೯೩ರಲ್ಲಿ ಐತಿಹಾಸಿಕ ತೀರ್ಪನ್ನು ನೀಡಿದೆ. ಇಂದು, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕಾನೂನುಗಳ ಅನ್ವಯ ಶಿಕ್ಷಣ ಎಲ್ಲ ಮಕ್ಕಳ ಮೂಲಭೂತ ಹಕ್ಕು. ಈ ಮೂಲಭೂತ ಹಕ್ಕನ್ನು ಸಾಕಾರಗೊಳಿಸುವುದು ಪ್ರತಿಯೊಂದು ಸರ್ಕಾರಗಳ ಆದ್ಯ ಕರ್ತವ್ಯ ಮತ್ತು ಜವಾಬ್ದಾರಿ.

ಮಾನವ ಹಕ್ಕು ಮತ್ತು ಕಾನೂನಿನ ಪರಿಭಾಷೆಯಲ್ಲಿ ಶಿಕ್ಷಣ ಒಂದು ಮೂಲಭೂತ ಹಕ್ಕಾಗಿದ್ದರೂ ಅದನ್ನು ಸಾಕರಗೊಳಿಸಬೇಕಾದ ರಾಷ್ಟ್ರಗಳೂ ಶಿಕ್ಷಣವನ್ನುತಮ್ಮ ಅಭಿವೃದ್ಧಿಯ ಭಾಗವೆಂದು ಪರಿಗಣಿಸಿ ಅಗತ್ಯ ಸಂಪನ್ಮೂಲ ಮತ್ತು ಹಣಕಾಸಿನ ನೆರವನ್ನು ಒದಗಿಸುವಲ್ಲಿ ನಿರೀಕ್ಷಿತ ಮಟ್ಟಕ್ಕೆ ಸ್ಪಂದಿಸುತ್ತಿಲ್ಲವೆಂಬುದು ನಾಗರೀಕ ಸಮಾಜಕ್ಕಿರುವ ಆತಂಕ. ಶಿಕ್ಷಣದ ಈ ಹಕ್ಕು ಕೇವಲ ಅಕ್ಷರಭ್ಯಾಸದ ಕಲಿಸಬಹುದಾದ ಶಾಲಾ ಶಿಕ್ಷಣಕ್ಕೆ ಮಾತ್ರ ಸೀಮಿತವಾಗದೆ ಎಲ್ಲಮಕ್ಕಳಿಗೆ

ಸಮಾನಗುಣಮಟ್ಟದ ಶಿಕ್ಷಣ ಒದಗಿಸಬಲ್ಲ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಳ್ಳುವ ಮೂಲಕ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಆಧಾರದ ಮೇಲೆ ಸಮಾಜವನ್ನು ಕಟ್ಟಿಕೊಳ್ಳಬೇಕೆಂಬ ಆಶಯ ನೈಜಜನಪರ ಚಳುವಳಿಗಳ ಮೂಲಭೂತ ಬೇಡಿಕೆಯಾಗಿದೆ.

ಎಲ್ಲ ಮಕ್ಕಳಿಗೆ ಸಮಾನ ಗುಣಮಟ್ಟದ ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಜನಪರ ಚಳುವಳಿಗಳು ಹಲವು ದಶಕಗಳಿಂದ ಕೆಲಸ ನಿರ್ವಹಿಸುತ್ತಿದ್ದರೂ, ಸ್ವತಂತ್ರ ಭಾರತದಲ್ಲಿ ಅಸ್ತಿತ್ವಕ್ಕೆ ಬಂದ ಸರ್ಕಾರಗಳು ಅದನ್ನು ಗಂಭೀರವಾಗಿ ಪರಿಗಣಿಸದಂತೆ ಕಾಣುವುದಿಲ್ಲ. ಇದಕ್ಕೆ ಉದಾಹರಣೆ ಎಂಬಂತೆ ಇತ್ತೀಚೆಗೆ ರೂಪಿಸಲ್ಪಟ್ಟ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ – ೨೦೦೯ ಮಕ್ಕಳ ಶಿಕ್ಷಣದ ಮೂಲಭೂತ ಹಕ್ಕನ್ನು ತಿಳಿಗೊಳಿಸುವ ಮತ್ತು ಶ್ರೇಣಿಕೃತ ಶಿಕ್ಷಣ ವ್ಯವಸ್ಥೆಯನ್ನು ಮುಂದುವರಿಸುಲು ಪೂರಕವಾಗುವ ರೀತಿಯಲ್ಲಿ ರೂಪಿಸಲ್ಪಟ್ಟಿದ್ದು ನಾಗರಿಕ ಸಮಾಜದ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ.

ನೀತಿ ನಿರೂಪಣೆಗೆ ಸಂಬಂಧಿಸಿದಂತೆ ನಾವು ಗುರುತಿಸಿದ ಒಂದು ಅತ್ಯಂತ ಪ್ರಮುಖವಾದ ನ್ಯೂನತೆ ಎಂದರೆ ಕೆಳಹಂತದಲ್ಲಿ ಕೆಲಸ ನಿರ್ವಹಿಸವ ಮೂಲ ವಾರಸುದಾರರ ಅಭಿಪ್ರಾಯ ಮತ್ತು ಒಳಹುಗಳನ್ನು ಆಧರಿಸಿ ನೀತಿ, ಕಾರ್ಯಕ್ರಮ ಮತ್ತು ಕಾನೂನುಗಳನ್ನು ರೂಪಿಸುವ ಬದಲು ಮೇಲಿನಿಂದ ಕೆಳಗೆ ಒತ್ತಾಯಪೂರ್ವಕವಾಗಿ ಹೇರುವಪರಿಪಾಠ ಮೊದಲಿನಿಂದಲೂ ಬೆಳೆದು ಬಂದಿದೆ. ಜನಪ್ರತಿನಿಧಿಗಳು, ನೀತಿ ನಿರೂಪಕರು ಮತ್ತು ವಿದ್ಯಾವಂತರು ಸಾಮಾನ್ಯವಾಗಿ ಕೆಳಸ್ತರದ ಮೂಲವಾರಸುದಾರರನ್ನು ತಿಳಿಗೇಡಿಗಳೆಂದು ಭಾವಿಸಿ ಅವರು ನೀತಿ ನಿರೂಪಣೆಗೆ ಅಗತ್ಯವಾದ ಸಲಹೆ ಸೂಚನೆಗಳನ್ನು ನೀಡುವ ಅರ್ಹತೆ ಇಲ್ಲವೆಂದು ಭಾವಿಸುತ್ತಾರೆ. ಇದಕ್ಕೆ ಹೊರತಾಗಿ, ನಾವು ನಮ್ಮ ಭಾಗವಹಿಸುವಾತ್ಮಕ ಸಂಶೋಧನೆಯ ಮೂಲಕ ಕಂಡು ಕೊಂಡ ಅಂಶವೆಂದರೆರಾಜ್ಯದಲ್ಲಿನ ಶಾಲಾ ಶಿಕ್ಷಣ ಕ್ಷೇತ್ರದ ಮೂಲವಾರಸುದಾರರಾದ ಮಕ್ಕಳು, ಶಿಕ್ಷಕರು, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರು ಮತ್ತು ಶಾಲಾ ಶಿಕ್ಷಣದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭಿವೃದ್ಧಿಪರ ಸಂಘಟನೆಗಳು ತಮ್ಮ ಅಪಾರ ಅನುಭವದ ಮೂಲಕ ಸುಭದ್ರ ಮತ್ತು ಸುಸ್ಥಿರ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯೊಂದನ್ನು ಸಮಾನತೆಯ ನೆಲೆಗಟ್ಟಿನಲ್ಲಿ ಕಟ್ಟಿಕೊಳ್ಳುಲು ಅಗತ್ಯವಾದ ಒಳಹು ಮತ್ತು ಅನುಭವಗಳನ್ನು ಹೊಂದಿದ್ದು ಅವರಿಗೆ ಒಂದು ಸೂಕ್ತ ವೇದಿಕೆಯ ಅಗತ್ಯತೆವಿದೆಯೆಂಬ ಅಂಶ.

ಈ ಎಲ್ಲಾ ಮೂಲ ವಾರಸುದಾರರನ್ನುಒಂದೇ ವೇದಿಕೆಯಲ್ಲಿ ಒಗ್ಗೂಡಿಸಿ ಅವರ ಅನುಭವಗಳ ಆಧಾರದ ಮೇಲೆ ಬಲಿಷ್ಠ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯೊಂದನ್ನು ಕಟ್ಟಿಕೊಳ್ಳುವ ಪ್ರಯತ್ನಗಳನ್ನು ಮಾಡಬೇಕಾಗಿದೆ.

ಇಲ್ಲಿಯವರೆಗೆ ಶಾಲಾಭಿವೃದ್ದಿ ಮತ್ತು ಮೇಲುಸ್ತುವಾರಿ ಸಮಿತಿಗಳು ರಾಜ್ಯಾದ್ಯಾಂತ ಕ್ರಿಯಾತ್ಮಕವಾಗಿ ಕೆಲಸ ನಿರ್ವಹಿಸುವ ಮೂಲಕ ಶಾಲಾಭಿವೃದ್ಧಿಗೆ ಭೌತಿಕ ಮತ್ತು ಬೌದ್ಧಿಕವಾಗಿಅಪಾರ ಕೊಡುಗೆ ನೀಡಿವೆ. ಎಸ್.ಡಿ.ಎಂ.ಸಿಗಳ ಈ ಕೊಡುಗೆಯನ್ನು ವಿಶ್ವವಿದ್ಯಾಲಯ ಮತ್ತು ಸರ್ಕಾರೇತರ ಸಂಘಟನೆಗಳು ಕೈಗೊಂಡ ಹತ್ತು ಹಲವು ಅಧ್ಯಯನಗಳು ದೃಢೀಕರಿಸಿವೆ. ಎಸ್.ಡಿ.ಎಂ.ಸಿ ಯ ಕಾರ್ಯವೈಖರಿಯ ಬಗ್ಗೆ ಅಧ್ಯಯನ ನಡೆಸಿ ವರದಿ ಸಲ್ಲಿಸಲು ರಚಿತವಾದ ವಿಶೇಷ ವಿಧಾನ ಪರಿಷತ್ತಿನ ಸದನ ಸಮಿತಿಯು ಎಸ್.ಡಿ.ಎಂ.ಸಿಯ ಕಾರ್ಯ ವೈಖರಿಯ ಬಗ್ಗೆ ಅಪಾರವಾದ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಲ್ಲದೆ, ಎಸ್.ಡಿ.ಎಂ.ಸಿ ಗಳನ್ನು ಸರ್ಕಾರಿ ಶಾಲೆಗಳಲ್ಲಿ ಮಾತ್ರವಲ್ಲದೆ ಸರ್ಕಾರಿ ಅನುದಾನಿತ

ಮತ್ತು ಅನುದಾನ ರಹಿತ ಶಾಲೆಗಳಿಗೂ ವಿಸ್ತರಿಸುವಂತೆ ಶಿಫಾರಸ್ಸು ಕೂಡ ಮಾಡಿದೆ. ಈ ಎಲ್ಲಾ ಬೆಳವಣಿಗೆಗಳ ಹಿನ್ನಲೆಯಲ್ಲಿ ಎಸ್.ಡಿ.ಎಂ.ಸಿ ಗಳನ್ನು ಮತ್ತಷ್ಟು ಬಲಗೊಳಿಸಿ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯನ್ನು ಗಟ್ಟಿಗೊಳಿಸುವ ಕೆಲಸದಲ್ಲಿ ನಾವೆಲ್ಲರೂ ಸಕ್ರಿಯವಾಗಿ ತೊಡಗಿಸಕೊಳ್ಳಬೇಕಾಗಿದೆ. ಜೊತೆಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ ೨೦೦೯ ಜಾರಿಯಾಗಿದ್ದು, ಕಾಯ್ದೆಯ ಅಡಿಯ ಪ್ರಕರಣ ೨೧ ಮತ್ತು ೨೨ರ ಅಡಿಯಲ್ಲಿ ಶಾಲಾನಿರ್ವಹಣಾ ಸಮಿತಿಗಳು/ಎಸ್.ಡಿ.ಎಂ.ಸಿಗಳಿಗೆ ವಿಶೇಷ ಕಾನೂನಾತ್ಮಕ ಅವಕಾಶವನ್ನು ಕಲ್ಪಿಸಿದ್ದು, ಇದು ಎಸ್.ಡಿ.ಎಂ.ಸಿಗಳಿಗೆ ಮತ್ತಷ್ಟು ಕಾನೂನಿನ ಬಲವನ್ನು ತಂದುಕೊಟ್ಟದೆ. ಈಗ ಎಸ್.ಡಿ.ಎಂ.ಸಿಗಳು ಕರ್ನಾಟಕ ರಾಜ್ಯ ಪಂಚಾಯತಿ ಅಧಿನಿಯಮ ೧೯೯೩ರ ಅಡಿಯಲ್ಲಿ ಮಾತ್ರ ಕೆಲಸ ನಿರ್ವಹಿಸಿಸದೆಕೇಂದ್ರ ಸರ್ಕಾರದ ಶಿಕ್ಷಣ ಹಕ್ಕು ಕಾಯ್ದೆ ೨೦೦೯ರ ಅನ್ವಯವು ಕಾನೂನಾತ್ಮಕ ಸಮಿತಿಯಾಗಿದೆ. ಈ ಒಂದು ಪ್ರಕ್ರಿಯೆಯ ಭಾಗವಾಗಿ ಕೆಳಸ್ತರದ ಸಮುದಾಯಗಳು ವಿಶೇಷವಾಗಿ ತಂದೆ ತಾಯಿ, ಎಸ್.ಡಿ.ಎಂ.ಸಿ ಸದಸ್ಯರು ಒಗ್ಗೂಡಿ ಕೆಲಸ ನಿರ್ವಹಿಸದೆ ಇದ್ದರೆ ಗುಣಾತ್ಮಕ ಶಿಕ್ಷಣ ಸಾಧ್ಯವಿಲ್ಲ ಎಂಬುದನ್ನು ಕಂಡುಕೊಂಡಿದ್ದೇವೆ. ಇಂದಿನ ಬೆಳವಣಿಗೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಶಿಕ್ಷಣವನ್ನು ಒಂದು ಸಾಮಾಜಿಕ ಒಳಿತನ್ನಾಗಿ ನೋಡುವ ಬದಲು ವ್ಯಾಪಾರದ ಒಂದು ಸರಕನ್ನಾಗಿಸುವ ಪ್ರಕ್ರಿಯೆಯು ತ್ವರಿತಗತಿಯಲ್ಲಿ ಬೆಳೆಯುತ್ತಿದೆ. ಇದಕ್ಕೆ ಅಪವಾದವೆಂಬಂತೆ ಕಡು ಬಡತನದ ಅಂಚಿನಲ್ಲಿರುವ ಕೋಟ್ಯಾಂತರ ಜನರು ತಮ್ಮ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಬೇಕೆಂಬ ಕನಸುಗಳನ್ನು ಹೊತ್ತಿದ್ದಾರೆ. ಇದಕ್ಕೆ ಪೂರಕವಾಗಿ ಸಾರ್ವಜನಿಕ ಶಿಕ್ಷಣ ಬಲಗೊಳ್ಳುವುದರ ಮೂಲಕ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ಎಲ್ಲಾ ಮಕ್ಕಳಿಗೆ ಸಮಾನ ಗುಣಮಟ್ಟದ ಶಿಕ್ಷಣ ಒಂದು ಸವಾಲಿನ ಪ್ರಶ್ನೆಯಾಗಿದೆ.

ಈ ಅಂಶವನ್ನು ಮನಗಂಡಿರುವ ಎಸ್.ಡಿ.ಎಂ.ಸಿ ಸದಸ್ಯರು ಸರ್ಕಾರಿ ಶಾಲೆಗಳನ್ನು ಉಳಿಸಿ ಬೆಳಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿತ್ತಿದ್ದಾರೆ.ಈ ಎಲ್ಲ ಅಂಶಗಳ ಹಿನ್ನಲೆಯಲ್ಲಿ ಗ್ರಾಮ ಹಂತದಿಂದ ತಾಲ್ಲೂಕು, ಜಿಲ್ಲೆ ಮತ್ತು ರಾಜ್ಯದಲ್ಲಿ ಎಸ್.ಡಿ.ಎಂ.ಸಿಗಳನ್ನು ಮತ್ತಷ್ಟು ಸಬಲೀಕರಣಗೊಳಿಸುವ ಕೆಲಸ ತ್ವರಿತವಾಗಿ ಆಗಬೇಕಿದೆ. ಈಗಾಗಿ ರಾಜ್ಯದ ಎಲ್ಲಾ ಎಸ್.ಡಿ.ಎಂ.ಸಿ ಗಳನ್ನು ಬಲವರ್ಧಿಸುವುದರ ಮೂಲಕ ರಾಜ್ಯದ ಪ್ರತಿಯೊಂದು ಮಗುವಿಗೂಸಮಾನ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದಕ್ಕಾಗಿ ಮುಂದಿನ ಉದ್ದೇಶಗಳನ್ನು ಇಟ್ಟುಕೊಂಡು ವೇದಿಕೆಯನ್ನು ಮಾಡಬಹುದಾಗಿದೆ. ಎಸ್.ಡಿ.ಎಮ್.ಸಿ. ಸದಸ್ಯರು ಶಾಲಾಭಿವೃದ್ಧಿಯಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಾಡಲು, ಎಸ್.ಡಿ.ಎಮ್.ಸಿ. ಸದಸ್ಯರು ಶಾಲಾಭಿವೃದ್ಧಿಯಲ್ಲಿ ಭಾಗವಹಿಸಿ ಉತ್ತಮವಾಗಿ ಕೆಲಸ ನಿರ್ವಹಿಸಿದ ಯಶೋಗಾಥೆಗಳನ್ನು ಹಂಚಿಕೊಳ್ಳಲು, ಶಿಕ್ಷಣ ಮತ್ತು ವಿವಿಧ ಇಲಾಖೆಗಳ ಸಂಪರ್ಕ ಜಾಲ ಹೊಂದಲು, ಮಕ್ಕಳ ದಾಖಲಾತಿ, ಹಾಜರಾತಿ, ಹೆಚ್ಚಿಸಿ ಸಮಾನ ಗುಣಮಟ್ಟದಶಿಕ್ಷಣ ಮಕ್ಕಳಿಗೆ ದೊರೆಯುವಂತೆ ಎಸ್.ಡಿ.ಎಮ್.ಸಿ. ಯವರು ಭಾಗವಹಿಸುವಂತೆ ಮಾಡಲು, ಎಲ್ಲ ಮಕ್ಕಳಿಗೆ ಸಮಾನ ಗುಣಮಟ್ಟದ ಶಿಕ್ಷಣ ಒದಗಿಸುವಲ್ಲಿ ಗ್ರಾಮ ಪಂಚಾಯತಿಗಳ ಜೊತೆ ನಿಕಟ ಸಂಪರ್ಕ ಸಾಧಿಸಲು, ಶಿಕ್ಷಕರು, ಪಾಲಕರು, ಗ್ರಾಮ ಪಂಚಾಯತಿ ಸದಸ್ಯರು, ಯುವಕ/ಯುವತಿ ಮಂಡಳಿ ಹಾಗೂ ಸ್ವ ಸಹಾಯ ಸಂಘ ಹಾಗೂ ಇನ್ನಿತರ ಸಂಘಟನೆಗಳೊಂದಿಗೆ ಸಮನ್ವಯತೆ ಹೊಂದುವುದು, ಎಸ್.ಡಿ.ಎಮ್.ಸಿ. ಸದಸ್ಯರು ಶಾಲಾಭಿವೃದ್ಧಿ ಕಾರ್ಯಗಳಲ್ಲಿ ಸುಸ್ಥಿರತೆ ಮತ್ತು ನಿರಂತರತೆ ಕಾಪಾಡಿಕೊಂಡು ಹೋಗಲು ಪ್ರೇರೆಪಿಸುವ ಉದ್ದೇಶಗಳಿಂದ ಈ ವೇದಿಕೆಗಳನ್ನು ಕಂಡುಕೊಳ್ಳಬೇಕಾಗಿದೆ.

ಇದರೊಟ್ಟಿಗೆ ಪ್ರಾಥಮಿಕ ಹಂತದ ಶಾಲಾ ಶಿಕ್ಷಣದಲ್ಲಿ ಗುಣಾತ್ಮಕ ಬದಲಾವಣೆ ತರುವುದು ಮತ್ತು ಸಮುದಾಯದ ಸಕ್ರೀಯ ಪಾಲ್ಗೊಲ್ಲುವಿಕೆಯನ್ನು ಉತ್ತೇಜಿಸುವುದು, ಶಾಲೆ, ಶಿಕ್ಷಣ ಇಲಾಖೆ,ಪಂಚಾಯತ್ ರಾಜ್ ಸಂಸ್ಥೆ ಮತ್ತು ಸಮುದಾಯದ ಜೊತೆ ಸಮನ್ವಯತೆ ಸಾದಿಸುವುದು, ಶಿಕ್ಷಣರಂಗದಲ್ಲಿಯ ಬೆಳವಣಿಗೆ, ಹೊಸ ವಿಚಾರ, ಕಲಿಕೆಗಳನ್ನು ವ್ಯಾಪಕಗೊಳಿಸುವುದು, ಶೈಕ್ಷಣಿಕ ಅಭಿವೃದ್ಧಿ ಮತ್ತು ಶಿಕ್ಷಣಕ್ಕೆ ಸಂಭಂದಿತ ವಿಷಯಗಳ ಕುರಿತು ಇಲಾಖೆ ಮತ್ತು ಸರ್ಕಾರದೊಂದಿಗೆ ಕೊಂಡಿಯಾಗಿ ಪರಸ್ಪರ ಪೂರಕವಾಗಿ ಕಾರ್ಯನಿರ್ವಹಿಸುವುದು, ಪಕ್ಷಾತೀತವಾಗಿ, ರಾಜಕೀಯರಹಿತವಾಗಿ, ಎಸ್.ಡಿ.ಎಮ್.ಸಿ.ಗಳಲ್ಲಿ ಬಗೆಹರಿಸಲಾಗದ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಲು ಕಾರ್ಯೋನ್ಮುಖವಾಗುವ ಉದ್ದೇಶಗಳನ್ನು ಹೊಂದಬೇಕಾಗುತ್ತದೆ.

ರಾಜ್ಯದ ಎಲ್ಲಾ ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಚುನಾಯಿತ ಸದಸ್ಯರಾಗಿ ಕಾರ್ಯನಿರ್ವಹಿಸುತ್ತಿರುವ ಸುಮಾರು ನಾಲ್ಕುವರೆ ಲಕ್ಷ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ ಸದಸ್ಯರನ್ನು ಪ್ರತಿನಿಧಿಸುವ ಎಸ್.ಡಿ.ಎಮ್.ಸಿ. ವೇದಿಕೆಯ ಪ್ರತಿನಿಧಿಗಳು, ಶಾಲಾ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುತ್ತಿರುವ ಅಭಿವೃದ್ಧಿ ಸಂಘಟನೆಗಳ ಪ್ರತಿನಿಧಿಗಳು ಮತ್ತು ಸಾಮಾಜಿಕ ಚಳುವಳಿಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡಿರುವ ಸಾಮಾಜಿಕ ಕಾರ್ಯಕರ್ತರು ಒಟ್ಟಾಗಿ ಸೇರಿದ್ದೆ ಆದರೆಸಮಾನತೆಯ ನೆಲೆಗಟ್ಟಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಳ್ಳಬೇಕೆಂಬ ಹೋರಾಟಕ್ಕೆ ಹೆಚ್ಚಿನ ಶಕ್ತಿಯನ್ನು ತುಂಬಬಹುದಾಗಿದೆ. ಈ ಎಲ್ಲ ಪ್ರಯತ್ನಗಳ ಮೂಲಕ ಸಾರ್ವಜನಿಕ ಶಿಕ್ಷಣವ್ಯವಸ್ಥೆಯನ್ನು ಉಳಿಸಿ-ಬೆಳಸಬೇಕೆಂಬ ನಮ್ಮೆಲ್ಲರ ಆಶಯ ಈಢೇರಿಸುವ ಪ್ರಯತ್ನ ಮಾಡಬಹುದಾಗಿದೆ. ಈ ನಿಟ್ಟಿನಲ್ಲಿ ಮುಂಬರುವ ದಿನಗಳಲ್ಲಿ ನಾವೆಲ್ಲರೂ ಮತ್ತಷ್ಟು ಒಗ್ಗಟ್ಟಿನಿಂದ ಕೆಲಸ ನಿರ್ವಹಿಸಬೇಕಾಗಿದೆ. ಈ ಹಿನ್ನಲೆಯ ಎಸ್.ಡಿ.ಎಂ.ಸಿ ವೇದಿಕೆ ಹೇಗಿರಬೇಕು ಅದರ ಸಾಧಕ ಬಾಧಕಗಳ ಬಗ್ಗೆ ಒಂದು ವಿಸ್ತ್ರುತವಾದ ಅಧ್ಯಯನವಾಗಬೇಕಾಗಿದೆ.

೪.೩ ಯುವಕ/ಯುವತಿ ಸಂಘದ ಪ್ರತಿ ನಿಧಿಗಳು ಮತ್ತು ಸ್ತ್ರೀ ಶಕ್ತಿ ಸ್ವ ಸಹಾಯ ಸಂಘದ ಎಸ್.ಡಿ.ಎಂ.ಸಿ ಪ್ರತಿ ನಿಧಿಗಳು ಎಸ್.ಡಿ.ಎಂ.ಸಿಯ ಬಗ್ಗೆ ಹೊಂದಿರುವ ಮನೋಭಾವ

ಈ ಅಧ್ಯಯನ ಭಾಗದಲ್ಲಿ ನಾಮನಿರ್ದೇಶಿತ ಸದಸ್ಯರಾದ ಯುವಕ/ಯುವತಿ ಸಂಘದ ಪ್ರತಿನಿಧಿಗಳು ಹಾಗೂ ಸ್ವಸಹಾಯ ಸಂಘದ ಪ್ರತಿನಿಧಿಗಳು ಎಸ್.ಡಿ.ಎಂ.ಸಿ ಆಯ್ಕೆಯ ಪ್ರಕ್ರಿಯೆ, ಎಸ್.ಡಿ.ಎಂ.ಸಿ ಸಮಿತಿಯಲ್ಲಿ ಅವರ ಜವಾಬ್ದಾರಿಗಳು ಮತ್ತು ಶಾಲಾಭಿವೃದ್ಧಿಗೆ ಅವರ ಸಲಹೆ ಹಾಗೂ ಅವರು ಮಾಡಿರುವ ಕೆಲಸಗಳ ಬಗ್ಗೆ ಅವರು ಹೊಂದಿರುವ ಮನೋಭಾವ ಏನು ಎಂಬ ದೃಷ್ಟಿಕೋನವನ್ನು ಇಲ್ಲಿ ಚರ್ಚಿಸಲಾಗಿದೆ.

ಯುವಕ/ಯುವತಿ ಮತ್ತು ಮಹಿಳಾ ಸ್ವ ಸಹಾಯ ಸಂಘಗಳು ಶಾಲಾ ಶಿಕ್ಷಕರು, ಎಸ್.ಡಿ.ಎಂ.ಸಿ ಮತ್ತು ಗ್ರಾಮ ಪಂಚಾಯತ್ ಮುಂತಾದವರೊಡನೆ ಸೇರಿ ಶಾಲಾ ಕಾರ್ಯಕ್ರಮಗಳನ್ನು ಆಯೋಜಿಸಬಹುದು. ಇಂತಹ ಎಲ್ಲಾ ಚಟುವಟಿಕೆಗಳ ಆಯೋಜನೆಗೂ ಇಂತಹ ಸಂಘಟನೆಗಳ ನೆರವು ಬೇಕಾಗುತ್ತದೆ. ನೆರವಾಗಲು ಮುಂದೆ ಬರುವವರನ್ನು ಇಂತಹ ಸಂಘಟನಾತ್ಮಕ ಪ್ರಯತ್ನಗಳ ಮೂಲಕ ಗುರುತಿಸಬಹುದಾಗಿದೆ. ಇಂತಹ ಕ್ರೀಯಾಶೀಲ ಸದಸ್ಯರೇ ಶಾಲಾ ವ್ಯವಹಾರಗಳ ಆಡಳಿತದೊಂದಿಗೆ ಕೈ ಜೋಡಿಸಬೇಕೆ ಹೊರತು ಕಾಟಾಚಾರಕ್ಕಾಗಿ ಇಂತಹ ಸಂರಚನೆಗಳನ್ನು ರಚಿಸಬಾರದು. ಹುಡುಗರಿಗೆ ಹೋಲಿಸಿದಾಗ ಹೆಣ್ಣಮಕ್ಕಳ ಸಹಭಾಗಿತ್ವವು ಪ್ರಾಥಮಿಕ ಶಿಕ್ಷಣ ಹಂತದಲ್ಲಿ ಕೂಡ ಅಸಮಾನವಾಗಿ

ಇರುವುದು ಕಂಡು ಬಂದಿದೆ. ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ಹೆಣ್ಣು ಮಕ್ಕಳ ಒಟ್ಟಾರೆ ದಾಖಲಾತಿಯಲ್ಲಿ ಪ್ರತಿಶತ ಏರಿಕೆಯು ಗಂಡು ಮಕ್ಕಳಿಗಿಂತ ಅಧಿಕವಾಗಿಯೇ ಇದೆಯಾದರೂ ಲಿಂಗತ್ವ ಅಂತರವು ಗಮನಾರ್ಹವಾಗಿಯೇ ಮುಂದುವರಿದಿದೆ. ಹೆಣ್ಣು ಮಕ್ಕಳು ಶಾಲೆ ತೊರೆಯುವಿಕೆಯು ಉನ್ನತ ಪ್ರಾಥಮಿಕ ಹಾಗೂ ಮಾಧ್ಯಮಿಕ ಹಂತಗಳಲ್ಲಿ ಅಧಿಕವಿದೆ. ಹೆಣ್ಣು ಮಕ್ಕಳೂ ಶಾಲೆಗೆ ಹೋಗುವ ಅಗತ್ಯವಿದೆ ಎಂಬ ಅಭಿಪ್ರಾಯ ವ್ಯಾಪಕವಾಗುತ್ತಿದೆ. ವೆಚ್ಚದ ಕಾರಣವಾಗಿಯೇ ಅಥವಾ ಮನೆಯಲ್ಲಿನ ಕೆಲಸದ ಕಾರಣವಾಗಿ ಶಾಲೆ ಬಿಡಿಸಬೇಕಾದ ಪ್ರಸಂಗ ಬಂದಲ್ಲಿ ಮೊದಲು ಶಾಲೆ ಕಳೆದುಕೊಳ್ಳುವವಳು ಈಗಲೂ ಹೆಣ್ಣು. ಹೆಣ್ಣು ಮಕ್ಕಳ ಅಗತ್ಯಗಳನ್ನು ಮಹಿಳೆಯರು ಹೆಚ್ಚು ಸಮರ್ಥವಾಗಿ ಅರಿತುಕೊಂಡು ಅವಳನ್ನು ರೂಪಿಸಬಲ್ಲರು ಎನ್ನುವುದನ್ನು ಎಲ್ಲರೂ ಒಪ್ಪುತ್ತಾರೆ. ಶೈಕ್ಷಣಿಕ ಪುನರ್ ನಿರ್ಮಾಣಕ್ಕಾಗಿ ಅಭಿಪ್ರಾಯ ಕ್ರೋಢೀಕರಣದ ದಿಶೆಯಲ್ಲಿ, ಮಹಿಳಾ ಗುಂಪುಗಳು ಪ್ರಧಾನ ಭೂಮಿಕೆಯನ್ನು ವಹಿಸಬೇಕಾಗಿದೆ. ಮಹಿಳಾ ಮತ್ತು ಮಹಿಳಾ ಗುಂಪುಗಳ ಸಹಭಾಗಿತ್ವದ ಈ ಒಟ್ಟಾರೆ ಸಂದರ್ಭ ಸನ್ನಿವೇಶವನ್ನು ಗಮನದಲ್ಲಿರಿಸಿಕೊಂಡು ಶಾಲೆಗಳ, ಶಾಲಾ ಆಡಳಿತ ಹಾಗೂ ಶಿಕ್ಷಕರ ಮೇಲೆ ಒತ್ತಡ ಹಾಕಲು ಮಹಿಳಾ ಸಂಘಟನೆಗಳ ಅಗತ್ಯವಿದ್ದು, ಇದರಿಂದ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಶಾಲಾ ವಿಷಯಗಳನ್ನು ಸುಧಾರಿಸಲು ಯಶಸ್ವಿಯಾಗುತ್ತದೆ.

ಕರ್ನಾಟಕ ಗ್ರಾಮ ಪಂಚಾಯತಿಗಳ (ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು)(ಮಾದರಿ) ಉಪವಿಧಿಗಳು, ೨೦೦೬ ರ ಅಧ್ಯಾಯ ೨ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ (ಎಸ್‌ಡಿಎಂಸಿ)ರಚನೆಯ (ಜಿ) ಖಂಡದ ಅಡಿಯಲ್ಲಿ ನಾಮನಿರ್ದೇಶನ ಮಾಡತಕ್ಕದ್ದು ಎಂದು ಗ್ರಾಮದಲ್ಲಿನ ಯುವಕ-ಯುವತಿ ಮಂಡಳಿಯಿಂದ ಅಥವಾ ಎಸ್.ಹೆಚ್.ಜಿ ಯಿಂದ ಒಬ್ಬರು ಪ್ರತಿನಿಧಿಯನ್ನು ನಾಮನಿರ್ದೇಶನ ಮಾಡಬೇಕೆಂದು ಸ್ಪಷ್ಟವಾಗಿ ಹೇಳಲಾಗಿದೆ.

ಕೋಷ್ಟಕ ೧

ಎಸ್.ಡಿ.ಎಂ.ಸಿನಾಮನಿರ್ದೇಶಿತ ಸದಸ್ಯರಾಗಿ ಆಯ್ಕೆ ಪ್ರಕ್ರಿಯೆಯ ಅರಿವು

ಎಸ್.ಡಿ.ಎಂ.ಸಿ ನಾಮನಿರ್ದೇಶಿತ ಸದಸ್ಯರಾಗಿ ಆಯ್ಕೆಯಾದದ್ದು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಶಿಕ್ಷಕರ ಸಹಾಯದಿಂದ	೨೨	೨೨	೧೮	೧೮.೪	೧೯	೨೧.೧	೧೨	೨೦	೭೧	೨೦.೪
ಪಾಲಕರ ಪರಿಷತ್‌ನಿಂದ	೩೦	೩೦	೨೮	೨೮.೬	೨೪	೨೬.೭	೨೦	೩೩.೩	೧೦೨	೨೯.೩
ಎಸ್.ಡಿ.ಎಂ.ಸಿ ಪ್ರತಿನಿಧಿಗಳಿಂದ	೪೮	೪೮	೫೨	೫೩.೧	೪೭	೫೨.೨	೨೮	೪೬.೭	೧೭೫	೫೦.೩

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಈ ಹಿನ್ನಲೆಯಲ್ಲಿ ಎಸ್.ಡಿ.ಎಂ.ಸಿ ಯಲ್ಲಿ ತಾವು ನಾಮ ನಿರ್ದೇಶಿತ ಸದಸ್ಯರಾಗಿ ಆಯ್ಕೆ ಆದದ್ದು ಹೇಗೆ ಎಂಬುದರ ಬಗ್ಗೆ ಪ್ರತಿಕ್ರಿಯೆಯನ್ನು ಬಯಸಿದಾಗ.ಶೇಕಡ ೫೦.೩ ರಷ್ಟು ಎಸ್.ಡಿ.ಎಂ.ಸಿ ಪ್ರತಿನಿಧಿಗಳಿಂದ ಶೇಕಡ ೨೯.೩ ರಷ್ಟು ಪಾಲಕರ ಪರಿಷತ್ತಿನಿಂದ ಶೇಕಡ೨೦.೪ ರಷ್ಟು ಶಿಕ್ಷಕರಿಂದ ಆಯ್ಕೆಯಾಗಿದ್ದೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಯುವಕ/ಯುವತಿ ಸಂಘ ಮತ್ತು ಮಹಿಳಾ ಸ್ವ-ಸಹಾಯ ಗುಂಪುಗಳ ಪಾತ್ರವನ್ನು ಸಾಂಸ್ಥೀಕರಿಸಲು, ಶಾಲಾಡಳಿತ ಸಮಿತಿಗೆ ಯುವಕ ಯುವತಿ ಮತ್ತು ಮಹಿಳಾ ಸ್ವ ಸಂಘದ ಪ್ರತಿನಿಧಿಗಳನ್ನು ನಾಮನಿರ್ದೇಶನ ಮಾಡಲು ಸರ್ಕಾರವು ಕಡ್ಡಾಯಗೊಳಿಸಿದೆ. ಈ ಪ್ರತಿನಿಧಿಗಳ ಸಂಪನ್ಮೂಲ ಬಳಕೆಯಲ್ಲಿ ಹೆಚ್ಚಿನ ಪಾರದರ್ಶಕತೆಯನ್ನು ಹಾಗೂ ಶಾಲೆಗಳಲ್ಲಿ ಏನೇನು ನಡೆಯುತ್ತಿದಿಯೋ ಅದರ ಬಗ್ಗೆ ಮಾಹಿತಿಯನ್ನು ತಿಳಿಯಬೇಕಾಗಿದೆ. ಶಾಲೆಯ ಪರಿಣಾಮಕಾರಿ ಪರಿಸರ ನಿರ್ಮಾಣವನ್ನು ಆಧರಿಸಿ ಹೆಣ್ಣು ಮಕ್ಕಳ ದಾಖಲಾತಿ ಹಾಗೂ ಶಾಲೆಯಲ್ಲಿ ಉಳಿಸಿಕೊಳ್ಳುವಿಕೆ ಇವುಗಳಲ್ಲಿ ಸುಧಾರಣೆ ತರಲು ಒಂದು ಬುನಾದಿಯೆಂಬಂತೆ ಮಹಿಳಾ ಗುಂಪುಗಳು ಕೆಲಸ ನಿರ್ವಹಿಸಬೇಕಾಗಿದೆ. ಎಸ್.ಡಿ.ಎಂ.ಸಿ ಯಲ್ಲಿನಾಮ ನಿರ್ದೇಶಿತಸದಸ್ಯರಾಗಿ ನಿಮ್ಮ ಪಾತ್ರ ಹಾಗೂ ಕರ್ತವ್ಯಗಳೇನು ಎಂಬುದರ ಬಗ್ಗೆ ಯುವಕ/ಯುವತಿ ಸಂಘದ ಪ್ರತಿ ನಿಧಿಗಳು ಮತ್ತು ಸ್ವ ಸಹಾಯ ಸಂಘದ ಪ್ರತಿನಿಧಿಗಳಲ್ಲಿ ಎಷ್ಟು ಅರಿವು ಇದೆ ಎಂಬುದರ ಬಗ್ಗೆ ಪ್ರತಿಕ್ರಿಯೆ ಬಯಸಿದಾಗ

ಕೋಷ್ಟಕ ೨

ಎಸ್.ಡಿ.ಎಂ.ಸಿ ಯಲ್ಲಿನಾಮ ನಿರ್ದೇಶಿತಸದಸ್ಯರಾಗಿ ಪಾತ್ರ ಹಾಗೂ ಕರ್ತವ್ಯಗಳ ಬಗ್ಗೆ ಯುವಕ ಯುವತಿ ಸಂಘದ ಪ್ರತಿ ನಿಧಿಗಳು ಮತ್ತು ಸ್ವ ಸಹಾಯ ಸಂಘದ ಪ್ರತಿನಿಧಿಗಳಲ್ಲಿ ಎಷ್ಟು ಅರಿವು

ಜಿಲ್ಲೆಗಳು	ಕರ್ತವ್ಯ ಪಾತ್ರಗಳ ಬಗ್ಗೆ ಅರಿವು			
	ಅರಿವು		ಅರಿವು ಇಲ್ಲದಿರುವುದು	
	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೧೨	೧೯.೭	೪೯	೮೦.೯
ಬಾಗಲಕೋಟೆ	೧೦	೧೬.೧	೫೨	೮೩.೯
ಬಳ್ಳಾರಿ	೧೫	೨೧.೪	೫೫	೭೮.೬
ರಾಯಚೂರು	೬	೨೨.೨	೨೧	೭೭.೮
ಎಲ್ಲಾ ಜಿಲ್ಲೆಗಳು	೪೩	೧೯.೫	೧೭೭	೮೦.೫

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೮೦.೫ ರಷ್ಟು ಅರಿವು ಇಲ್ಲದಿರುವುದನ್ನು ನೋಡಿದಾಗ ಇವರು ಶಾಲೆಯಲ್ಲಿ ಹೋಗಿ ಏನು ಮಾಡಬೇಕು ಎಂಬುದರ ಪಾತ್ರದ ಬಗ್ಗೆ ಸ್ಪಷ್ಟತೆ ಇಲ್ಲದಿರುವುದನ್ನು ನೋಡಬಹುದಾಗಿದೆ.ಅರಿವು ಇರುವ ಶೇಕಡ ೧೯.೫ ರಷ್ಟು ಜನರನ್ನು ಯಾವ ಕರ್ತವ್ಯಗಳು ಪಾತ್ರ ನಿರ್ವಹಿಸಬೇಕು ಏನನ್ನು ನಿರ್ವಹಿಸಿದ್ದೀರಿ ಎಂಬುದರ ಬಗ್ಗೆ ಅಭಿಪ್ರಾಯವನ್ನು ಕೇಳಿದಾಗ ಸಭೆಗಳಿಗೆ ಹಾಜರಾಗುವುದು, ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚಿನ ಜವಾಬ್ಧಾರಿ, ಶಾಲಾ ಕಾರ್ಯಕ್ರಮಗಳಿಗೆ ಸಹಕಾರ ಸಹಾಯ ನೀಡುವುದು,

ಶಾಲಾ ಸಮಸ್ಯಗಳಿಗೆ ಸ್ಪಂದಿಸುವುದು ಹಾಗೂ ಬಿಸಿಊಟದ ಮೇಲ್ವಿಚಾರಣೆಯನ್ನು ನಡೆಸುವುದರ ಬಗ್ಗೆ ತಿಳಿಯಲಾಗಿದೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪.೩.೧ ಸಭೆ ಮತ್ತು ಸಭಾ ಕಲಾಪದ ಬಗ್ಗೆ ಅರಿವು

ಶಾಲೆಗಳಲ್ಲಿ ನಡೆಯುವ ಸಭೆಗಳಲ್ಲಿ ಪಾಲ್ಗೊಳ್ಳುವಿಕೆ ಮತ್ತು ಅರಿವಿನ ಬಗ್ಗೆ ಸ್ವ ಸಹಾಯ ಸಂಘದ ಪ್ರತಿನಿಧಿಗಳಿಂದ ಮಾಹಿತಿಯನ್ನು ಕೇಳಿದಾಗ

ಕೋಷ್ಟಕ ೩

ಸ್ವ ಸಹಾಯ ಹಾಗೂ ಯುವಕ/ಯುವತಿ ಸದಸ್ಯರಲ್ಲಿ ಸಭೆ ಮತ್ತು ಸಭಾ ಕಲಾಪದ ಬಗ್ಗೆ ಅರಿವು

ಜಿಲ್ಲೆಗಳು	ಸಭಾ ಕಲಾಪದಲ್ಲಿ ಭಾಗವಹಿಸುವಿಕೆ			
	ಹೌದು		ಇಲ್ಲ	
	ಸಂಖ್ಯೆ	%	ಸಂಖ್ಯೆ	%
ಬಿಜಾಪುರ	೮	೧೨.೯	೫೪	೮೭.೧
ಬಾಗಲಕೋಟೆ	೭	೧೦.೯	೫೭	೮೯.೧
ಬಳ್ಳಾರಿ	೮	೧೧.೪	೬೨	೮೮.೬
ರಾಯಚೂರು	೪	೧೪.೩	೨೪	೮೫.೭
ಎಲ್ಲಾ ಜಿಲ್ಲೆಗಳು	೨೭	೧೨.೩	೧೯೨	೮೭.೭

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶಾಲೆಯಲ್ಲಿ ನಡೆಯುವ ಸಭಾ ಕಲಾಪಗಳಲ್ಲಿ ಭಾಗವಹಿಸುತ್ತಿದ್ದೀರಾ ಎಂಬುದಕ್ಕೆ ಶೇ ೧೨.೩ ರಷ್ಟು ಸದಸ್ಯರು ಹೌದು ಎಂದು ಶೇ ೮೭.೭ ರಷ್ಟು ಸದಸ್ಯರು ಇಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.

ಕೋಷ್ಟಕ ೪

ಯುವಕ/ಯುವತಿ ಮತ್ತು ಸ್ವ ಸಹಾಯ ಸಂಘದ ಪ್ರತಿನಿಧಿಗಳು ಎಸ್.ಡಿ.ಎಂ.ಸಿ ಸಭೆಗಳಿಗೆ ಹಾಜರಾಗದಿರಲು ಕಾರಣ

ಸಭೆಗಳಿಗೆ ಹಾಜರಾಗದಿರಲು ಕಾರಣ	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಮಾಹಿತಿ ದೊರೆಯದಿರುವುದು	೪೫	೪೩.೩	೪೮	೪೧.೪	೩೯	೪೨.೪	೧೭	೪೩.೬	೧೪೯	೪೨.೫
ಸಭೆಗಳಿಗೆ ಆಹ್ವಾನಿಸದೆ ಇರುವುದು	೫೯	೫೬.೭	೬೮	೫೮.೬	೫೩	೫೭.೬	೨೨	೫೬.೪	೨೦೨	೫೭.೫

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೪೨.೫ ರಷ್ಟು ಜನ ಮಾಹಿತಿ ದೊರೆಯದಿರುವುದರ ಬಗ್ಗೆ ಹಾಗೂ ಶೇಕಡ ೫೭.೫ ರಷ್ಟು ಜನ ನಮಗೆ ಸಭೆಗಳಿಗೆ ಆಹ್ವಾನವನ್ನೆ ನೀಡುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

೪.೩.೨ ಯುವಕ/ಯುವತಿ ಮತ್ತು ಮಹಿಳಾ ಸ್ವ ಸಹಾಯ ಸಂಘಟನೆಗಳಿಂದ ಕೊಡುಗೆ

ಶಾಲೆಗಳಿಗೆ ಮಕ್ಕಳನ್ನು ದಾಖಲಿಸುವಲ್ಲಿ, ಪೋಷಕರು ಹೆಚ್ಚು ಶಾಲೆಗೆ ಭೇಟಿ ನೀಡುವಂತೆ, ಕ್ರೀಡೆಗಳು ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳಲ್ಲಿ ವಿಜೇತರಾದವರಿಗೆ ಬಹುಮಾನ, ಕುಡಿಯುವ ನೀರು, ಗೋಡೆಗಳ ಮೇಲೆ ನುಡಿಮುತ್ತು ರಾಷ್ಟ್ರೀಯ ನಾಯಕರ ಹೇಳಿಕೆಗಳು, ಕ್ರೀಡಾ ಸಾಮಗ್ರಿಗಳನ್ನು ಮತ್ತು ಮಕ್ಕಳ ಕ್ರೀಡೆಗೆ ಪ್ರೋತ್ಸಾಹ, ಪ್ರತಿಭಾ ಕಾರಂಜಿ, ಸಾಂಸ್ಕೃತಿಕ ಕಾರ್ಯಕ್ರಮಗಳು, ಆರೋಗ್ಯ ತಪಾಷಣಾ ಕಾರ್ಯಕ್ರಮ, ಬಿಸಿ ಊಟ ಕಾರ್ಯಕ್ರಮಕ್ಕೆ ತಟ್ಟೆ, ಲೋಟ ವಿತರಿಸಿದ್ದೇವೆ.ಬಿಸಿಊಟದಲ್ಲಿ ಅಡುಗೆಯವರು ಇಲ್ಲದಿದ್ದಾಗ ನಾವೂ ಸಹಾಯ ಮಡಿದ್ದೇವೆ. ಬಿಸಿಊಟ ಸಮರ್ಪಕ ಮತ್ತು ಗುಣಮಟ್ಟದ ಬಗ್ಗೆ ಪ್ರತಿ ವಾರಕ್ಕೊಮ್ಮೆ ಗುಣಮಟ್ಟದ ಆಹಾರ ನೀಡುತ್ತಾರೆಯೇ ಎಂಬುದರ ಪರಿಶೀಲನೆ, ಸ್ವಚ್ಚತೆಯ ಬಗ್ಗೆ ಅನೇಕ ರೀತಿಯ ಸಹಾಯ ಸಹಕಾರಗಳನ್ನು ನೀಡಲಾಗಿದೆ ಎಂಬ ಅಭಿಪ್ರಾಯಗಳನ್ನು ಮೇಲಿನಂತೆ ಕ್ರೊಢೀಕರಿಸಲಾಗಿದೆ.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಮತ್ತು ಶಿಕ್ಷಕರು ಈ ಸಂಘಗಳಿಗೆ ಯಾವತ್ತೂ ಪ್ರಾಮುಖ್ಯತೆ ನೀಡಿದ್ದಲ್ಲಿ, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿಯಲ್ಲಿ ಯುವಕ ಯುವತಿಯರ ಮತ್ತು ಮಹಿಳೆಯರ ಸಕ್ರಿಯ ಪಾತ್ರವು ಪರಿಣಾಮಕಾರಿ ಶಾಲೆಗಳನ್ನು ಸ್ಥಾಪಿಸಲು ಸಾಧ್ಯವಾಗುತ್ತದೆ. ಯಾಕೆಂದರೆ ಇದು ಮಕ್ಕಳ ಹಾಜರಾತಿಯನ್ನು, ಶಿಕ್ಷಕರ ಉತ್ತರದಾಯಿತ್ವ ಇವೆರಡನ್ನೂ ಸುಧಾರಿಸುತ್ತದೆ. ಸ್ಥಳೀಯ ಗುಂಪುಗಳು ಸ್ಥಳೀಯ ಸಂದರ್ಭ-ಸನ್ನಿವೇಶಗಳಿಗೆ ಸ್ಪಂದಿಸಲು ಶಕ್ತವಿರುತ್ತದೆ. ಪರಿಣಾಮಕಾರಿ ಮೇಲುಸ್ತುವಾರಿ ವ್ಯವಸ್ಥೆಗೆ, ಸ್ಥಳೀಯ ವಿಷಯಗಳ ಕುರಿತಂತೆ ತ್ವರಿತ ಪ್ರತಿಸ್ಪಂದನ ಬೇಕಾಗುತ್ತದೆ. ಯುವಕ ಯುವತಿ ಮತ್ತು ಮಹಿಳೆಯರ ಸ್ಥಳೀಯ ಸಂಘಟನೆಗಳು ಕ್ರಮ ಆರಂಭಿಸಿದಾಗ ಮಾತ್ರ ಇದು ಸಾಧ್ಯವಾಗುತ್ತದೆ.

೪.೪ ಶಿಕ್ಷಕರ ಅಭಿಪ್ರಾಯ

ಭಾಗ - ೪ ರಲ್ಲಿ ಪದ ನಿಮಿತ್ತ ಸದಸ್ಯರಾದ ಸಮುದಾಯವನ್ನು ಶಾಲಾಭಿವೃದ್ಧಿಗೆ ತೊಡಗಿಸಿಕೊಳ್ಳುವಲ್ಲಿ ಮುಖ್ಯ ಶಿಕ್ಷಕರ ಪ್ರಯತ್ನಗಳು, ಪಾಲಕರು ಹಾಗೂ ಎಸ್.ಡಿ.ಎಂ.ಸಿ ಮತ್ತು ಸಮುದಾಯದೊಡನೆ ಯಾವ ಸಂಬಂಧವನ್ನು ಹೊಂದಿದ್ದಾರೆ ಎಂಬುದರ ಬಗ್ಗೆ ಈ ಭಾಗದಲ್ಲಿ ವಿಶ್ಲೇಷಿಸಲಾಗಿದೆ.

ಎಸ್.ಡಿ.ಎಂ.ಸಿಗಳ ಸಮರ್ಪಕ ಕಾರ್ಯನಿರ್ವಹಣೆಯಲ್ಲಿ ಮುಖ್ಯ ಶಿಕ್ಷಕರುಗಳು ಮಹತ್ವದ ಪಾತ್ರ ನಿರ್ವಹಿಸುತ್ತಾರೆ. ಅವರು ಸರ್ಕಾರದ ಅಧಿಕಾರಿಗಳು ಮತ್ತು ಪ್ರಾಥಮಿಕ ಪಾಲುದಾರರ ಮಧ್ಯೆ ಮುಖ್ಯ ಕೊಂಡಿಯಾಗಿರುತ್ತಾರೆ. ಇವರು ಎಸ್.ಡಿ.ಎಂ.ಸಿಗಳ ಪದನಿಮಿತ್ತ ಕಾರ್ಯದರ್ಶಿಗಳಾಗಿರುತ್ತಾರೆ. ಮುಖ್ಯ ಶಿಕ್ಷಕರು ಎಸ್.ಡಿ.ಎಂ.ಸಿಗಳ ಬಗ್ಗೆ ಸರ್ಕಾರದ ಆದೇಶದಲ್ಲಿನ ಸಾರವನ್ನು ತಿಳಿಸಬೇಕು ಎಂದು ಭಾವಿಸಲಾಗುತ್ತದೆ. ಅವರು ಎಸ್.ಡಿ.ಎಂ.ಸಿಗಳ ರಚನೆ ಮತ್ತು ಕಾರ್ಯನಿರ್ವಹಣೆಯ ಹಿಂದಿನ ಮುಖ್ಯ

ಸಂಚಾಲಕರಾದ್ದರಿಂದ ಅವರ ಕರ್ತವ್ಯ ಸರಿಯಾಗಿ ನಿರ್ವಹಿಸುವಲ್ಲಿ ಎದುರಾಗುವ ಸಮಸ್ಯೆಗಳ ಬಗ್ಗೆ ತಿಳಿದುಕೊಳ್ಳುವುದು ಅತ್ಯಗತ್ಯ. ಮುಖ್ಯ ಶಿಕ್ಷಕರಿಗೋಸ್ಕರ ಪ್ರತ್ಯೇಕ ಸಾಧನವೊಂದನ್ನು ಸಿದ್ಧಪಡಿಸಲಾಯಿತು. ಶಾಲೆಯೊಂದರ ಉತ್ತಮ ಸಾಧನೆಯು ಬಹುಮಟ್ಟಿಗೆ ಶಿಕ್ಷಕರ ನಿರ್ವಹಣೆಯ ಮೇಲೆ ಅವಲಂಬಿಸಿರುತ್ತದೆ. ಶಿಕ್ಷಕರ ನಿರ್ವಹಣೆಯನ್ನು ಸಮುದಾಯವು ಸುಧಾರಿಸಬಹುದು ಈ ದಿಶೆಯಲ್ಲಿ ಅದು ನೆರವು ನೀಡಲುಬಹುದು. ಆದರೆ ಶಾಲಾ ಉತ್ತಮ ಸಾಧನೆಯಲ್ಲಿ ಸಮುದಾಯವು ಒಂದು ಬದಲಿ ವ್ಯವಸ್ಥೆಯಾಗದು. ಸಮುದಾಯದೊಂದಿಗೆ ನಿಕಟ ಸಂಪರ್ಕ ಹೊಂದಿರುವ ಇವರನ್ನು ಉತ್ತಮವಾದ ಆಡಳಿತದ ಮೂಲಕ ಉತ್ಸಾಹಿತರನ್ನಾಗಿಸಬೇಕಾದ ಅಗತ್ಯವಿದೆ. ಸಮುದಾಯದೊಂದಿಗೆ ಹೆಚ್ಚಿನ ಸಂಪರ್ಕ ಇರುವಾಗ ಇನ್ನಷ್ಟು ಹೆಚ್ಚಿನ ಉತ್ತರದಾಯಿತ್ವಕ್ಕೆ ಅದು ಒಂದು ಚೌಕಟ್ಟನ್ನು ಒದಗಿಸುತ್ತದೆ. ಏಕೆಂದರೆ ಶಾಲಾ ವ್ಯವಹಾರಗಳೊಂದಿಗೆ ಸಮುದಾಯ ಹೆಚ್ಚು ಹೆಚ್ಚು ತೊಡಗಿಸಿಕೊಂಡಾಗ ಶಾಲೆ ಹೆಚ್ಚು ಕ್ರಿಯಾಶೀಲವಾಗುತ್ತದೆ. ಈ ಹಿನ್ನಲೆಯಲ್ಲಿ ಶಿಕ್ಷಕರನ್ನು ಸಂದರ್ಶಿಸಿ ಈ ಅಂಕಿ ಅಂಶಗಳನ್ನು ಸಂಗ್ರಹಿಸಲಾಗಿದೆ.

ಶಿಕ್ಷಣವೆ ಜೀವನವೆಂದು ಪರಿಗಣಿತವಾದ ಮೇಲೆ, ಸಮುದಾಯದ ಪ್ರಭಾವ ಶಾಲೆಯ ಚಟುವಟಿಕೆಗಳ ಮೇಲೆ ಇರುವುದು ಅನಿವಾರ್ಯವಾಗುತ್ತದೆ. ಈ ಸಮುದಾಯ ಪ್ರಭಾವವು ಮಕ್ಕಳ ವ್ಯಕ್ತಿತ್ವ ವಿಕಾಸಕ್ಕೆ ಸಹಾಯಕವಾಗುತ್ತದೆ. ಶಾಲಾ ಚಟುವಟಿಕೆಗಳನ್ನು ನಿರ್ಮಿಸುವಾಗ ಶಿಕ್ಷಕನು ಸಮುದಾಯದ ಜೀವನ ಗತಿವಿನ್ಯಾಸಕ್ಕೆ ಅನುಗುಣವಾಗಿರಬೇಕೆಂಬುದನ್ನು ಮರೆಯಕೂಡದು. ಶಿಕ್ಷಕನು ಆಗಾಗ್ಗೆ ಸಮುದಾಯದಲ್ಲಿ ಕೆಲವು ಶೈಕ್ಷಣಿಕ ಚಟುವಟಿಕೆಗಳಿಗೆ ವ್ಯವಸ್ಥೆ ಮಾಡಿ ಶಾಲೆಯಲ್ಲಿ ಕಲಿತ ವಿಷಯವನ್ನು ವಿನಿಯೋಗಿಸುವುದಕ್ಕೆ ಅವಕಾಶ ಕಲ್ಪಿಸಬೇಕು. ಶಾಲೆಯ ಜ್ಞಾನ ಸಮುದಾಯದತ್ತ ಸದಾ ಹರಿಯುತ್ತಿರಬೇಕು. ಶಾಲಾ ಚಟುವಟಿಕೆಗಳ ಬಗ್ಗೆ ಸಾರ್ವಜನಿಕರಲ್ಲಿ ಪ್ರಶಂಸೆ ಬೆಳೆಯಲು ಶಿಕ್ಷಕನು ಯಾವಾಗಲೂ ಪ್ರಯತ್ನಿಸಬೇಕು. ಶಿಕ್ಷಣದ ಆವಶ್ಯಕತೆಯನ್ನು ಅನಿವಾರ್ಯತೆಯನ್ನು ಉಪಯುಕ್ತತೆಯನ್ನು ಜನತೆ ಅರಿತಲ್ಲಿ ಕಡ್ಡಾಯ ಶಿಕ್ಷಣವನ್ನು ಯಶಸ್ವಿಗೊಳಿಸುವುದು, ಸಮುದಾಯದ ಅಭಿವೃದ್ಧಿ ಚಟುವಟಿಕೆಗಳನ್ನು ಕಾರ್ಯಗತಗೊಳಿಸಲು ಸುಲಭ ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಮುಖ್ಯ ಶಿಕ್ಷಕರಾಗಿಸಮುದಾಯವನ್ನು ಶಾಲಾಭಿವೃದ್ಧಿಗೆ ತೊಡಗಿಸಿಕೊಳ್ಳುವಲ್ಲಿ ನಿಮ್ಮ ಪ್ರಯತ್ನವೇನು? ಎಂಬುದಕ್ಕೆ ಪ್ರತಿಕ್ರಿಯೆಯನ್ನು ಬಯಸಿದಾಗ

ಕೋಷ್ಟಕ ೧

ಶಿಕ್ಷಕರು ಸಮುದಾಯವನ್ನು ಶಾಲಾಭಿವೃದ್ಧಿಗೆ ತೊಡಗಿಸಿಕೊಳ್ಳುವಲ್ಲಿ ಪ್ರಯತ್ನ

ಸಮುದಾಯ ಪಾಲ್ಗೊಳ್ಳುವಿಕೆ ಪ್ರಯತ್ನ	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಪಾಲಕರ ಮನೆಗೆ ಭೇಟಿ	೪೧	೨೧	೩೨	೧೮.೩	೩೮	೨೦.೪	೨೭	೩೧.೪	೧೩೮	೨೧.೫
ಗ್ರಾಮದಲ್ಲಿ ನಡೆಯುವ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ಮಾಹಿತಿ	೫೨	೨೬.೭	೬೩	೩೬	೫೮	೩೧.೨	೧೯	೨೨.೧	೧೯೨	೨೯.೯
ಸಭೆ ಸಮಾರಂಭಗಳ	೬೮	೩೪.೯	೫೨	೨೯.೭	೬೮	೩೬.೬	೧೨	೧೪	೨೦೦	೩೧.೨

ಆಯೋಜನೆ										
ಎಸ್.ಡಿ.ಎಂ.ಸಿ ಸದಸ್ಯರು ಹಾಗೂ ಪಾಲಕರಿಗೆ ಶಾಲೆಯಲ್ಲಿ ಹೇಗೆ ತೊಡಗಿಸಿಕೊಳ್ಳಬೇಕೆಂಬ ಮಾಹಿತಿ	೩೪	೧೭.೪	೨೮	೧೬	೨೨	೧೧.೮	೨೮	೩೨.೬	೧೧೨	೧೭.೪

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶಾಲೆಗೆ ದಾಖಲಾಗಿರುವ ಮಕ್ಕಳ ಮನೆಗೆ ಪಾಲಕರ ಭೇಟಿಗಾಗಿ ಹೋಗುತ್ತೇವೆ ಎಂದು ಶೇಕಡ ೨೧.೫ ರಷ್ಟು ಶಿಕ್ಷಕರು ಅಭಿಪ್ರಾಯ ವ್ಯಕ್ತಪಡಿಸಿದ್ದು, ಗ್ರಾಮದಲ್ಲಿ ನಡೆಯುವ ಸಭೆ ಸಮಾರಂಭಗಳಲ್ಲಿ ಭಾಗವಹಿಸಿ ಶಾಲೆ ಹಾಗೂ ಮಕ್ಕಳ ಶೈಕ್ಷಣಿಕ ವಿಷಯದ ಬಗ್ಗೆ ಮಾಹಿತಿಯನ್ನು ನೀಡುತ್ತೇವೆ ಎಂದು ಶೇಕಡ ೨೯.೯ ರಷ್ಟು ಶಿಕ್ಷಕರು ಪ್ರತಿಕ್ರಿಯಿಸಿದ್ದು, ಶಾಲೆಯಲ್ಲಿ ಕಾಲಕಾಲಕ್ಕೆ ಸಭೆ ಸಮಾರಂಭಗಳ ಆಯೋಜನೆಯನ್ನು ಮಾಡಿ ಸಮುದಾಯವನ್ನು ಭಾಗವಹಿಸುವಂತೆ ಮಾಡುತ್ತೇವೆ ಎಂದು ಶೇಕಡ ೩೧.೨ ರಷ್ಟು ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು,ಎಸ್.ಡಿ.ಎಂ.ಸಿ ಸದಸ್ಯರು ಹಾಗೂ ಪಾಲಕರು ಶಾಲೆಯಲ್ಲಿ ಹೇಗೆ ತೊಡಗಿಸಿಕೊಳ್ಳಬೇಕೆಂಬ ಅರಿವಿಗಾಗಿಮಾಹಿತಿಯನ್ನು ಎಲ್ಲಾ ಸದಸ್ಯರಿಗೆ ನಿರಂತರವಾಗಿ ನೀಡಲಾಗುವುದು ಎಂದು ಶೇಕಡ ೧೭.೪ ರಷ್ಟು ಶಿಕ್ಷಕರು ಪ್ರತಿಕ್ರಿಯಿಸಿದ್ದು, ಶಾಲಾ ಮೂಲಭೂತ ಸೌಕರ್ಯ ಸುಧಾರಣೆ, ಉತ್ತೇಜಿಸುವುದು ಹಾಗೂ ಶಾಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು, ಶಾಲೆಯಲ್ಲಿ ಮಕ್ಕಳ ನಿರಂತರ ಹಾಜರಾತಿ ಹಾಗೂ ಸಹಬಾಗಿತ್ವ ಇತ್ಯಾದಿಗಳಲ್ಲಿ ಶಿಕ್ಷಕರು ಸಮುದಾಯದ ಸಹಕಾರವನ್ನು ಮೊದಲಾಗಿ ಅಪೇಕ್ಷಿಸುತ್ತಾರೆ. ಈ ಎಲ್ಲಾ ವಿಚಾರಗಳಲ್ಲಿ ಸಮುದಾಯದ ಸಹಕಾರವಿಲ್ಲದಿದ್ದರೆ ಶಿಕ್ಷಕರು ತೀರಾ ಅಸಹಾಯಕರಾಗುತ್ತಾರೆ. ಶಿಕ್ಷಕರು ಪಾಲಕರು ಹಾಗೂಸಮುದಾಯ ಮುಂದಾಳುಗಳ ಮನೆಗಳಿಗೆನಿಯಮಿತವಾಗಿ ಭೇಟಿ ನೀಡುತ್ತಿದ್ದರೆ, ಮಕ್ಕಳಿಗೆ ತಾವೇನನ್ನು ಹೇಳಿಕೊಡುತ್ತಿದ್ದೇವೆ ಎಂದು ಹೇಳುವುದಕ್ಕೆ ಅವಕಾಶ ಹಾಗೂ ಶಾಲಾ ಮಟ್ಟದಲ್ಲಿ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳಾದ ಸಾಂಸ್ಕೃತಿಕ ಕಾರ್ಯಕ್ರಮಗಳು, ಕ್ರೀಡೋತ್ಸವಗಳನ್ನು ಹಾಗೂ ಇತರ ಸಮೂಹ ಚಟುವಟಿಕೆಗಳನ್ನು ಆಯೋಜಿಸಬೇಕಾದರೆ ಸಮುದಾಯದ ನಿರಂತರ ಪ್ರೋತ್ಸಾಹ ಹಾಗೂ ನೆರವು ಬೇಕಾಗುತ್ತದೆ. ಓರ್ವ ಉತ್ತಮ ಶಿಕ್ಷಕರಾದವರು, ನೆರವು ನೀಡುವ ಕೆಲವು ಮನೆಗಳನ್ನು ಸಾಮಾನ್ಯವಾಗಿ ಗುರುತಿಸಿ ಉತ್ತೇಜಿಸುವ ಮೂಲಕ ಸಂಬಂಧ ಗಟ್ಟಿಗೊಳಿಸಲು ಯತ್ನಿಸುತ್ತಾರೆ. ಈ ಹಿನ್ನಲೆಯಲ್ಲಿ ಭೇಟಿ ನೀಡಿದ ಸಮಯದಲ್ಲಿ ಪೋಷಕರೊಂದಿಗೆ ಅನೌಪಚಾರಿಕವಾಗಿ ಯಾವ ವಿಷಯ ಕುರಿತು ಚರ್ಚಿಸುತ್ತೀರಿ ಎಂಬ ವಿಷಯದಲ್ಲಿ ಮಕ್ಕಳ ಆರೋಗ್ಯದ ಬಗ್ಗೆ, ಕುಟುಂಬದ ಸಮಸ್ಯೆಗಳಿಂದ ಮಕ್ಕಳಿಗೆ ಆಗುತ್ತಿರುವ ಸಮಸ್ಯೆಗಳ ಬಗ್ಗೆ, ಮಗುವಿನ ವೈಯಕ್ತಿಕ ಕೆಲಸ ಕಾರ್ಯಗಳ ಬಗ್ಗೆ, ಕುಟುಂಬದ ಆರ್ಥಿಕ ಪರಿಸ್ಥಿತಿಯ ಬಗ್ಗೆ, ಮಗುವಿನ ವಿದ್ಯಾಭ್ಯಾಸದ ಬಗ್ಗೆ ಆಸಕ್ತಿ ವಹಿಸುವಂತೆ, ಮಕ್ಕಳಲ್ಲಿ ಶಿಸ್ತು, ನೈರ್ಮಲ್ಯ, ಕಲಿಕೆಯಲ್ಲಿ ಹಿಂದುಳಿದ ಮಗುವಿಗೆ ಮನೆಯಲ್ಲಿ ತಂದೆ ತಾಯಿಗಳು ವಿಶೇಷ ಕಾಳಜಿವಹಿಸುವಂತೆ, ಶಾಲೆಗೆ ಗೈರು ಹಾಜರಾಗುತ್ತಿರುವ ಮಕ್ಕಳ ತಂದೆ ತಾಯಿಯರಿಗೆ ತಿಳುವಳಿಕೆ, ಮಕ್ಕಳ ಶೈಕ್ಷಣಿಕ ಪ್ರಗತಿಯ ಬಗ್ಗೆ ಚರ್ಚಿಸಲಾಗುತ್ತಿದ್ದು, ಈ ಹಿನ್ನಲೆಯಲ್ಲಿ ಅನೇಕ ಪ್ರಗತಿಯನ್ನು ಕಾಣಲಾಗುತ್ತಿದೆ. ಇದರ ಬಗ್ಗೆ ನೀಡಿರುವ ಅಭಿಪ್ರಾಯಗಳನ್ನು ಮುಂದಿನಂತೆ ಇವೆ.

ಶಿಕ್ಷಕರು ಶಾಲೆ ಮತ್ತು ಸಮುದಾಯದಲ್ಲಿ ಮಾಡಿದ ಕೆಲಸಗಳಿಂದ ಅನೇಕ ಒಳ್ಳೆಯ ಪರಿಣಾಮಗಳನ್ನು ಮತ್ತು ಪ್ರಭಾವಗಳನ್ನು ಕಾಣಬಹುದು. ಅವುಗಳನ್ನು ಇಲ್ಲಿ ಕ್ರೋಢೀಕರಿಸುವ ಪ್ರಯತ್ನಗಳನ್ನು ಮಾಡಲಾಗಿದೆ. ಈ ಎಲ್ಲಾ ಪರಿಣಾಮವಾಗಿ ಶಾಲೆಗೂ ಸಮುದಾಯಕ್ಕೂ ನಿಕಟ ಸಂಬಂಧವನ್ನು ಬೆಳಸಲು ಸಾಧ್ಯವಾಯಿತು. ಸಮುದಾಯದ ಸಂಪನ್ಮೂಲಗಳನ್ನು ಶಾಲಾಭಿವೃದ್ಧಿಗೆ ಬಳಸಲು ನಾಂಧಿಯಾಯಿತು. ಪೋಷಕರ ಜೊತೆ ಅನುಸಂಧಾನದಿಂದ ಶಾಲೆಯಿಂದ ಹೊರಬಿದ್ದ ಕಾರಣಗಳನ್ನು ಕಂಡುಹಿಡಿಲು ಸಾಧ್ಯವಾಯಿತು ಆ ಮೂಲಕ ತಮ್ಮ ಮಕ್ಕಳನ್ನು ಮತ್ತೆ ಶಾಲೆಗೆ ಕಳುಹಿಸಲು ಪೋಷಕರೊಂದಿಗೆ ಸಮಾಲೋಚಿಸಿದಾಗ ವಿದ್ಯಾರ್ಥಿಗಳ ಹಾಜರಾತಿಯಲ್ಲಿ ಹೆಚ್ಚಳ ಕಂಡುಬಂದಿತು. ಪಾಲಕರು ಶಾಲೆಗಳಿಗೆ ಹೆಚ್ಚು ಹೆಚ್ಚು ಭೇಟಿಗಳನ್ನು ಮಾಡಿದ್ದರ ಫಲವಾಗಿ ಮಕ್ಕಳ ಕಲಿಕೆಯಲ್ಲಿ ಪ್ರಗತಿ ಕಾಣಲು ಸಾಧ್ಯವಾಯಿತು. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಮಾಸಿಕ ಸಭೆಗಳು ಮತ್ತು ಶಾಲಾ ಸಮುದಾಯ ಸಭೆಗಳು ಕ್ರೀಯಾಶೀಲವಾಗಲು ತೊಡಗಿದವು. ಇಲ್ಲಿ ನಿರ್ಣಯಿಸಿದ ಎಲ್ಲಾ ವಿಚಾರಗಳನ್ನು ಅನುಷ್ಠಾನಗೊಳಸಲು ಸಹಾಯಕವಾಯಿತು. ಶಾಲೆಯ ಮೂಲಭೂತ ಸೌಕರ್ಯಗಳನ್ನು ನಿರ್ವಹಿಸುವಲ್ಲಿ ಶಿಕ್ಷಕರಿಗೆ ಅಗತ್ಯವಾದ ನೆರವು ದೊರಕಿತು. ಮಕ್ಕಳ ಕಲಿಕಾ ಸಾಮಾರ್ಥ್ಯದ ಬಗ್ಗೆ ಚರ್ಚಿಸಲು ಈಗ ಪರಿಣಾಮಕಾರಿಯಾಗಿರುವುದರಿಂದ ಮಕ್ಕಳಿಗೆ ಮನೆಕೆಲಸ ಮಾಡಲು ಮತ್ತು ಓದಲು ಸಾಕಷ್ಟು ಸಮಯಾವಕಾಶವನ್ನು ನೀಡುತ್ತಿರುವುದರಿಂದ ಮಕ್ಕಳಲ್ಲಿ ಲವಲವಿಕೆ ಇದರಿಂದ ಶಿಕ್ಷಕರಿಗೂ ಕಲಿಸಲು ಪ್ರೇರಣೆಗೊಂಡಿದ್ದಾರೆ ಎಂಬದಾಗಿ ಅಭಿಪ್ರಾಯವನ್ನು ತಿಳಿಸಿದ್ದಾರೆ.

೪.೪.೧ ಎಸ್.ಡಿ.ಎಂ.ಸಿಗಳ ಕಾರ್ಯ ನಿರ್ವಹಣೆಯ ಬಗ್ಗೆ ಅಭಿಪ್ರಾಯ

ಹೆಚ್ಚಿನ ಮುಖ್ಯ ಶಿಕ್ಷಕರುಎಸ್.ಡಿ.ಎಂ.ಸಿಗಳ ಕಾರ್ಯನಿರ್ವಹಣೆ ತೃಪ್ತಿಕರವಾಗಿದೆ ಎಂದು ಹೆಚ್ಚಿನವರು ಹೇಳಿಕೊಂಡಿದ್ದಾರೆ. ಆದರೆ ಈ ಹಿಂದಿನ ಭಾಗಗಳಲ್ಲಿ ನೋಡಿರುವಂತೆ ಹಲವು ಶಾಲೆಗಳ ಎಸ್.ಡಿ.ಎಂ.ಸಿಗಳ ಸ್ಥಾಪನೆಯ ನಿಯಮಗಳು ಎಸ್.ಡಿ.ಎಂ.ಸಿ ಮಾದರಿ ಉಪವಿಧಿಗಳ ಪ್ರಕಾರ ಇರಲಿಲ್ಲ. ಸಹಜ ತಂದೆ–ತಾಯಿಗಳಲ್ಲದವರು ಎಸ್.ಡಿ.ಎಂ.ಸಿ ಸದಸ್ಯರಾಗಿರುವಂತಹ ಕಡೆಗಳಲ್ಲಿ ಸಮುದಾಯ ಮತ್ತು ರಾಜಕೀಯ ಗುಂಪುಗಳ ಒತ್ತಡದಿಂದಾಗಿ ನಿಯಮಗಳನ್ನು ಪಾಲಿಸಲಾಗಲಿಲ್ಲ ಎಂದು ಮುಖ್ಯ ಶಿಕ್ಷಕರು ಅನೌಪಚಾರಿಕ ಮಾತುಕತೆಯ ಸಂದರ್ಭದಲ್ಲಿ ಉಲ್ಲೇಖಿಸಿದ್ದಾರೆ. ಆರ್ಥಿಕ ಬಲವರ್ಧನೆಯಿಂದಾಗಿ ಎಸ್.ಡಿ.ಎಂ.ಸಿಗಳಲ್ಲಿ ಸದಸ್ಯತ್ವಕ್ಕೆ ಮಹತ್ವ ಬಂದಂತಾಗಿದೆ ಎಂದು ಹೇಳಿದ್ದಾರೆ. ಆದರೆ ಇವರುಗಳಿಗೆ ಉದ್ಯೋಗದ ಭದ್ರತೆಯ ಕವಚ ಇರುವುದರಿಂದ ಮತ್ತು ತಮ್ಮ ಮೇಲಿನ ಕೆಲಸದ ಒತ್ತಡ ಕಡಿಮೆ ಮಾಡಿಕೊಳ್ಳುವ ಸಲುವಾಗಿ ಹೆಚ್ಚಿನ ಸಂದರ್ಭಗಳಲ್ಲಿ ಮುಖ್ಯ ಶಿಕ್ಷಕರು ಪೂರ್ತಿ ಮಾಹಿತಿ ನೀಡದೆ ತಡೆಹಿಡಿಯುವ ಸಾಧ್ಯತೆಗಳಿವೆ ಮತ್ತು ಇತರ ಸದಸ್ಯರಿಗಿಂತ ಹೆಚ್ಚು ಅಧಿಕಾರ ಹೊಂದಿಬಿಡಬಹುದು. ಹಾಗೂ ಬದಲಾವಣೆಗಳನ್ನು ಅಳವಡಿಸುವಲ್ಲಿ ಆಸಕ್ತಿ ತೋರದೆ ಇರಬಹುದು. ಕಡ್ಡಾಯವಾಗಿ ಎಲ್ಲಾ ಸದಸ್ಯರು ಭಾಗವಹಿಸದಿದ್ದರೂ ಕೆಲವರು ಮಾತ್ರ ಸಕ್ರೀಯವಾಗಿ ಭಾಗವಹಿಸುತ್ತಾರೆ ಎಂದು ತಿಳಿಸಿದ್ದು. ಎಸ್.ಡಿ.ಎಂ.ಸಿಯೊಂದಿಗೆ ಶಿಕ್ಷಕರ ಅನುಭವಗಳನ್ನು ಮುಂದಿನಂತೆ ಹಂಚಿಕೊಂಡಿದ್ದಾರೆ.

ಕೋಷ್ಟಕ ೨

ಎಸ್.ಡಿ.ಎಂ.ಸಿಗಳೊಡನೆ ಶಿಕ್ಷಕರ ಅನುಭವಗಳು

ಎಸ್.ಡಿ.ಎಂ.ಸಿ ಚಟುವಟಿಕೆಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಶಾಲಾ ಭೌತಿಕ ಪ್ರಗತಿ	೫೮	೩೦.೧	೪೮	೨೭.೯	೬೮	೩೬	೨೧	೧೭.೮	೧೯೫	೨೯
ಶಾಲೆಯ ನಿರ್ವಹಣೆ	೩೮	೧೯.೭	೨೮	೧೬.೩	೩೨	೧೬.೯	೨೮	೨೩.೭	೧೨೬	೧೮.೮
ಸಾಂಘಿಕ ಪಾಲ್ಗೊಳ್ಳುವಿಕೆ ಮೂಲಕ ಪರಿಹಾರ	೫೪	೨೮	೪೬	೨೬.೭	೪೯	೨೫.೯	೩೨	೨೭.೧	೧೮೧	೨೬.೯
ವಿದ್ಯಾರ್ಥಿ ಹಾಜರಾತಿಯಲ್ಲಿ ವೃದ್ಧಿ	೨೪	೧೨.೪	೨೮	೧೬.೩	೨೪	೧೨.೭	೨೯	೨೪.೬	೧೦೫	೧೫.೬
ಕಲಿಕೆಯ ಸಾಧನೆಯಲ್ಲಿ ಪ್ರಗತಿ	೧೯	೯.೮	೨೨	೧೨.೮	೧೬	೮.೫	೮	೬.೮	೬೫	೯.೭

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶಾಲೆಗಳಲ್ಲಿ ಭೌತಿಕ ಅಭಿವೃದ್ಧಿಯನ್ನು ಕೈಗೊಳ್ಳುವಲ್ಲಿ ಎಸ್.ಡಿ.ಎಂ.ಸಿಗಳು ಸಮರ್ಥವಾಗಿ ಕಾರ್ಯನಿರ್ವಹಿಸುತ್ತಿವೆ ಎಂದು ಶಿಕ್ಷಕರು ಶೇಕಡ ೨೯ ರಷ್ಟು ಅಭಿಪ್ರಾಯಪಟ್ಟಿದ್ದಾರೆ. ಸಾಂಘಿಕ ಪಾಲ್ಗೊಳ್ಳುವಿಕೆಯ ಮೂಲಕ ಎಸ್.ಡಿ.ಎಂ.ಸಿಗಳು ಸಮಸ್ಯೆಗಳಿಗೆ ಪರಿಹಾರ ಹುಡುಕುತ್ತವೆ ಎಂದು ಶೇಕಡ ೨೬.೯ ರಷ್ಟು ಅಭಿಪ್ರಾಯ ಪಟ್ಟಿದ್ದಾರೆ. ಮಕ್ಕಳನ್ನು ಶಾಲೆಗೆ ಕಳುಹಿಸುವ ಅಗತ್ಯದ ಬಗ್ಗೆ ಪೋಷಕರಿಗೆ ಅರಿವು ಮಾಡಿಕೊಡುವ ಮೂಲಕ ತಾವು ವಿದ್ಯಾರ್ಥಿ ಹಾಜರಾತಿಯಲ್ಲಿ ವೃದ್ಧಿಯನ್ನು ತಂದಿದ್ದಾರೆ ಎಂದು ಶೇಕಡ ೧೫.೬ ರಷ್ಟು ಅಭಿಪ್ರಾಯ ಹೇಳಿಕೊಂಡಿದ್ದಾರೆ.

ಕೋಷ್ಟಕ ೩

ಮುಖ್ಯ ಶಿಕ್ಷಕರು ಎಸ್.ಡಿ.ಎಂ.ಸಿ ಕಾರ್ಯದರ್ಶಿಯಾಗಿ ಎದುರಿಸಿದ ಸಮಸ್ಯೆಗಳು

ಮುಖ್ಯ ಶಿಕ್ಷಕರು ಎಸ್.ಡಿ.ಎಂ.ಸಿಯಿಂದ ಎದುರಿಸಿದ ಸಮಸ್ಯೆಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಜಂಟಿ ಖಾತೆ ನಿರ್ವಹಣೆಯಲ್ಲಿ	೨೮	೧೯.೬	೧೮	೧೬.೪	೨೭	೨೨.೭	೧೧	೧೧.೭	೮೪	೧೮

ಸಮಸ್ಯೆ										
ಎಸ್.ಡಿ.ಎಂ.ಸಿ ಸದಸ್ಯರ ಅವ್ಯವಹಾರಗಳು	೧೨	೮.೪	೮	೭.೩	೯	೭.೬	೩	೩.೨	೩೨	೬.೯
ಕೆಲವು ಸದಸ್ಯರ ಅಸಹಕಾರ	೨೪	೧೬.೮	೧೯	೧೭.೩	೧೨	೧೦.೧	೨೧	೨೨.೩	೭೬	೧೬.೩
ರಜೆ ನೀಡುವ ಅಧಿಕಾರ	೧೯	೧೩.೩	೨೨	೨೦	೧೬	೧೩.೪	೨೯	೩೦.೯	೮೬	೧೮.೫
ಎಸ್.ಡಿ.ಎಂ.ಸಿ ರಚನೆಯಲ್ಲಿ	೨೮	೧೯.೬	೧೫	೧೩.೬	೧೮	೧೫.೧	೧೨	೧೨.೮	೭೩	೧೫.೭
ಹಣಕಾಸಿನ ಹೊಣೆಗಾರಿಕೆ	೩೨	೨೨.೪	೨೮	೨೫.೫	೩೭	೩೧.೧	೧೮	೧೯.೧	೧೧೫	೨೪.೭

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಜಂಟಿ ಖಾತೆ ನಿರ್ವಹಣೆಯಲ್ಲಿ ಸಮಸ್ಯೆಗಳು ಉಂಟಾಗುತ್ತಿದೆ ಎಂದು ಶೇಕಡ ೧೮ ರಷ್ಟು ಶಿಕ್ಷಕರು ಅಭಿಪ್ರಾಯಪಟ್ಟಿದ್ದು. ಎಸ್.ಡಿ.ಎಂ.ಸಿ ಸದಸ್ಯರು ಅವ್ಯವಹಾರಗಳನ್ನು ಮಾಡುವುದರಿಂದ ಸಮಸ್ಯೆ ಉಂಟಾಗುತ್ತಿದೆ ಎಂದು ಶೇಕಡ ೬.೯ ರಷ್ಟು ಸದಸ್ಯರು ಅಭಿಪ್ರಾಯಪಟ್ಟಿದ್ದು. ಎಸ್.ಡಿ.ಎಂ.ಸಿ ಕೆಲವು ಸದಸ್ಯರ ಅಸಹಕಾರದಿಂದ ಶಾಲೆಯ ಶೈಕ್ಷಣಿಕ ಕೆಲಸಗಳಿಗೆ ತೊಂದರೆಯಾಗುತ್ತಿದೆ ಎಂದು ಶೇಕಡ ೧೬.೩ ರಷ್ಟು ಸದಸ್ಯರು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಅಧ್ಯಕ್ಷರಿಗೆ ಮುಖ್ಯಶಿಕ್ಷಕರಿಗೆ ಸಾಂಧರ್ಬಿಕ ರಜೆ ನೀಡುವ ಅಧಿಕಾರ ನೀಡಿರುವುದರಿಂದ ತೊಂದರೆಯಾಗುತ್ತಿದೆ ಎಂದು ಶೇಕಡ ೧೮.೫ ರಷ್ಟು ಶಿಕ್ಷಕರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದು. ಶೇಕಡ ೧೫.೭ ರಷ್ಟು ಎಸ್.ಡಿ.ಎಂ.ಸಿ ಮಾದರಿ ಉಪವಿಧಿಯ ನಿಯಮದ ಪ್ರಕಾರ ಎಸ್.ಡಿ.ಎಂ.ಸಿ ಸಮಿತಿಯ ರಚನೆ ಮಾಡಲು ಸಮಸ್ಯೆಯಾಗುತ್ತದೆ ಕಾರಣ ಗ್ರಾಮ ಹಂತದಲ್ಲಿ ಜಾತಿ, ರಾಜಕೀಯ ಶ್ರೀಮಂತ ಹಾಗೂ ಮುಖಂಡರುಗಳು ಎಂಬ ಕಾರಣಗಳು ಸಮಸ್ಯೆಯನ್ನು ಉಂಟುಮಾಡುತ್ತವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು. ಶೇಕಡ ೨೪.೭ ರಷ್ಟು ಎಸ್.ಡಿ.ಎಂ.ಸಿಗಳಿಗೆ ಹಣಕಾಸಿನ ಹೊಣೆಗಾರಿಕೆಯನ್ನು ನೀಡಿರುವುದರಿಂದ ಎಲ್ಲದಕ್ಕೂ ಕಾರಣ ಕೇಳುವುದು, ಹಾಗೂ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸೋಣ ಎಂಬ ವಿಷಯಗಳಿಂದ ಸಮಸ್ಯೆಯಾಗುತ್ತಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಹೆಚ್ಚಿನ ಮುಖ್ಯೋಪಾಧ್ಯಾಯರುಗಳು ಎಸ್.ಡಿ.ಎಂ.ಸಿ ರಚನೆಯಲ್ಲಿ ತಮಗೆ ಯಾವುದೇ ಸಮಸ್ಯೆಗಳು ಎದುರಾಗಲಿಲ್ಲ ಎಂದು ಹೇಳಿದ್ದಾರೆ. ಅನೇಕ ಕಡೆ ಗಮನಿಸಿರುವಂತೆ ಕೆಲವು ಶಾಲೆಗಳ ಎಸ್.ಡಿ.ಎಂ.ಸಿ ರಚನೆಯ ನಿಯಮಗಳನ್ನು ಎಸ್.ಡಿ.ಎಂ.ಸಿ ಉಪವಿಧಿಯಲ್ಲಿ ವಿಧಿಸಲಾದ ನಿಯಮಗಳ ಪ್ರಕಾರ ಇರಲಿಲ್ಲ. ಕೆಲವು ಪ್ರಮುಖರೆ ಎಸ್.ಡಿ.ಎಂ.ಸಿ ಸದಸ್ಯರಾಗಿರುವ ಕಡೆಗಳಲ್ಲಿ ಸಮುದಾಯ ಮತ್ತು ರಾಜಕೀಯ ಗುಂಪುಗಳ ಒತ್ತಡದಿಂದಾಗಿ ನಿಯಮಗಳನ್ನು ಪಾಲಿಸಲಾಗಲಿಲ್ಲ ಎಂದು ಮುಖ್ಯ ಶಿಕ್ಷಕರು ಅನೌಪಚಾರಿಕ ಮಾತುಕತೆಯ ಸಂದರ್ಭದಲ್ಲಿ ಉಲ್ಲೇಖಿಸಿದ್ದಾರೆ. ಆರ್ಥಿಕ ಬಲವರ್ಧನೆಯಿಂದಾಗಿ ಎಸ್.ಡಿ.ಎಂ.ಸಿಗಳಲ್ಲಿ ಸದಸ್ಯತ್ವಕ್ಕೆ ಮಹತ್ವ ಬಂದಂತಾಗಿದೆ ಎಂದೂ ಹೇಳಿದ್ದಾರೆ. ಆದರೆ ಶಿಕ್ಷಕರುಗಳಿಗೆ ಉದ್ಯೋಗ ಭದ್ರತೆಯ ಕವಚವಿರುವುದರಿಂದ ಮತ್ತು ತಮ್ಮ ಮೇಲಿನ ಕೆಲಸದ ಒತ್ತಡ ಕಡಿಮೆ ಮಾಡಿಕೊಳ್ಳುವ ಸಲುವಾಗಿ ಹೆಚ್ಚಿನ ಸಂದರ್ಭಗಳಲ್ಲಿ ಮುಖ್ಯ ಶಿಕ್ಷಕರು ಪೂರ್ತಿ ಮಾಹಿತಿ ನೀಡದೆ

ತಡೆಯಿಡಿಯುವ ಸಾಧ್ಯತೆಗಳಿವೆ ಮತ್ತು ಇತರ ಸದಸ್ಯರಿಗಿಂತ ಹೆಚ್ಚು ಅಧಿಕಾರ ಹೊಂದಿಬಿಡಬಹುದು ಹಾಗೂ ಬದಲಾವಣೆಗಳನ್ನು ಅಳವಡಿಸಿಕೊಳ್ಳುವಲ್ಲಿ ಆಸಕ್ತಿ ತೋರಿಸದೆ ಇರಬಹುದು. ಮುಖ್ಯ ಶಿಕ್ಷಕರೇ ಎಸ್.ಡಿ.ಎಂ.ಸಿಗಳ ಪದನಿಮಿತ್ತ ಕಾರ್ಯದರ್ಶಿಗಳಾಗಿರುವುದರಿಂದ ಎಸ್.ಡಿ.ಎಂ.ಸಿ ಮಾದರಿ ಉಪವಿಧಿ ಅನ್ವಯ ಕಾರ್ಯನಿರ್ವಹಣೆಯಲ್ಲಿ ಎದುರಾಗುವ ಸಮಸ್ಯೆಗಳ ಕುರಿತು ಕೇಳಿದಾಗ, ಹೆಚ್ಚಿನವರು ಮಾದರಿ ಉಪವಿಧಿಯ ಅನುಗುಣವಾಗಿ ಎಸ್.ಡಿ.ಎಂ.ಸಿಗಳನ್ನು ರಚಿಸುವುದಕ್ಕೆ ಸಾಧ್ಯವಾಯಿತು ಎಂದರೂ ಸ್ಥಳೀಯ ಜನಪ್ರತಿನಿಧಿಗಳ ಮತ್ತು ಗ್ರಾಮದ ಮುಖಂಡರ ಮಧ್ಯಸ್ತಿಕೆಯಿಂದಾಗಿ ನಿಯಮಗಳಿಗೆ ಬದ್ಧರಾಗುವುದಕ್ಕೆ ಸಾಧ್ಯವಾಗಲಿಲ್ಲ ಎಂದು ಅನೌಪಚಾರಿಕವಾಗಿ ತಿಳಿಸಿರುವರು. ಎಸ್.ಡಿ.ಎಂ.ಸಿ ಅಧ್ಯಕ್ಷರುಗಳು ಜಂಟಿ ಖಾತೆಯ ಪಾಲುದಾರರಾಗಿದ್ದರೂ, ಹಣಕಾಸಿನ ಅವ್ಯವಹಾರಗಳಲ್ಲಿ ಅವರನ್ನು ಹೊಣೆಗಾರರನ್ನಾಗಿ ಮಾಡಲು ಸಾಧ್ಯವಾಗುವುದಿಲ್ಲ ಎಂದು ಹಲವರು ಗೌಪ್ಯವಾಗಿ ತಿಳಿಸಿರುವರು. ಮಾದರಿ ಉಪವಿಧಿಯ ಅನ್ವಯ ಅಗತ್ಯವಿಲ್ಲದಿದ್ದರೂ, ರಜೆಯ ಮೇಲೆ ಹೋಗಲು ಅಧ್ಯಕ್ಷರ ಅನುಮತಿಗೋಸ್ಕರ ಕಾಯಬೇಕಾಗುತ್ತದೆ ಅಥವಾ ಅವರನ್ನು ಹುಡುಕಿಕೊಂಡು ಹೋಗುವಂತಹ ಸಂದರ್ಭ ಇದೆ ಎಂದು ಹೆಚ್ಚಿನವರು ಹೇಳಿಕೊಂಡಿದ್ದಾರೆ.

ಕೋಷ್ಟಕ ೪

ಎಸ್.ಡಿ.ಎಂ.ಸಿಗಳ ಕಾರ್ಯನಿರ್ವಹಣೆ ಉತ್ತಮಗೊಳಿಸುವ ದಿಸೆಯಲ್ಲಿ ಮುಖ್ಯ ಶಿಕ್ಷಕರ ಸಲಹೆ

ಶಿಕ್ಷಕರು ನೀಡಿದ ಸಲಹೆಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಎಸ್.ಡಿ.ಎಂ.ಸಿ ಮಾದರಿ ಉಪವಿಧಿಯ ಪ್ರಕಾರವೆ ಕಾರ್ಯನಿರ್ವಹಿಸಬೇಕು	೫೯	೨೧.೮	೬೮	೨೪.೫	೫೩	೨೪	೨೨	೧೭.೧	೨೦೨	೨೨.೫
ರಾಜಕೀಯ ಮಧ್ಯಪ್ರವೇಶ ನಿಷೇಧ	೪೫	೧೬.೬	೪೮	೧೭.೩	೩೯	೧೭.೬	೧೮	೧೪	೧೫೦	೧೬.೭
ನಿಯತವಾಗಿ ಸಭೆಗಳು ನಡೆಯಬೇಕು	೪೩	೧೫.೯	೩೮	೧೩.೭	೨೮	೧೨.೭	೨೧	೧೬.೩	೧೩೦	೧೪.೫
ಎಸ್.ಡಿ.ಎಂ.ಸಿಯ ಬಗ್ಗೆ ಜಾಗೃತಿ ಮಟ್ಟ ಹೆಚ್ಚಬೇಕು	೩೦	೧೧.೧	೨೨	೭.೯	೧೬	೭.೨	೧೯	೧೪.೭	೮೭	೯.೭
ಸದಸ್ಯರಾಗಲು ವಿದ್ಯಾರ್ಹತೆ ಇರಬೇಕು	೨೬	೯.೬	೨೨	೭.೯	೧೮	೯.೧	೧೨	೯.೩	೭೮	೮.೭
ಪೋಷಕರಿಂದ ಸಹಕಾರ	೨೫	೯.೨	೨೮	೧೦.೧	೩೭	೧೬.೭	೧೭	೧೩.೨	೧೦೭	೧೧.೯
ಎಲ್ಲಾಸದಸ್ಯರಿಗೂ ೩ ತಿಂಗಳಿಗೊಮ್ಮೆ ತರಬೇತಿ	೨೨	೮.೧	೨೯	೧೦.೪	೧೨	೫.೪	೧೧	೮.೫	೭೪	೮.೨
ಹಣಕಾಸಿನ ನೆರವು	೨೧	೭.೭	೨೩	೮.೩	೧೮	೮.೧	೯	೭	೭೧	೭.೯

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಮುಖ್ಯ ಶಿಕ್ಷಕರು ಎಸ್.ಡಿ.ಎಂ.ಸಿ ಗಳ ಕಾರ್ಯ ನಿರ್ವಹಣೆ ಉತ್ತಮಗೊಳಿಸಲು ಸಲಹೆಯನ್ನು ಕೇಳಿದಾಗ ಅವರು ಮುಂದಿನಂತೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು. ಅದರಂತೆ ಉತ್ತರಿಸಿದವರಲ್ಲಿ ಹೆಚ್ಚಿನವರು ಎಸ್.ಡಿ.ಎಂ.ಸಿಗಳು ಮಾದರಿ ಉಪವಿಧಿಯಲ್ಲಿ ತಿಳಿಸಲಾಗಿರುವ ನಿಯಮಗಳ ಪ್ರಕಾರವೇ ಕಾರ್ಯಾನಿರ್ವಹಿಸಬೇಕು ಎಂದು ಶೇಕಡ ೨೨.೫ ರಷ್ಟುಅಭಿಪ್ರಾಯಪಟ್ಟಿದ್ದಾರೆ. ರಾಜಕೀಯ ಮಧ್ಯ ಪ್ರವೇಶ ಎಸ್.ಡಿ.ಎಂ.ಸಿಗಳ ಸುಗಮ ಕಾರ್ಯನಿರ್ವಹಣೆಯಲ್ಲಿ ಒಂದು ಮುಖ್ಯ ಅಡ್ಡಿ ಎಂದು ಕಂಡುಬರುತ್ತದೆ ಹಾಗಾಗಿ ಪಕ್ಷ ರಾಜಕೀಯದ ಮಧ್ಯಪ್ರವೇಶ ಶಾಲೆಗಳಲ್ಲಿ ಇರಬಾರದೆಂದು ಶೇಕಡ ೧೬.೭ ರಷ್ಟು ಶಿಕ್ಷಕರೂ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಶೇಕಡ ೧೪.೫ ರಷ್ಟು ಶಿಕ್ಷಕರು ಎಸ್.ಡಿ.ಎಂ.ಸಿ ಸಭೆಗಳು ತಿಂಗಳಿಗೊಮ್ಮೆ ನಿರಂತರವಾಗಿ ನಡೆಯಬೇಕು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು. ಶೇಕಡ ೯.೭ ರಷ್ಟು ಶಿಕ್ಷಕರುಸದಸ್ಯರಲ್ಲಿ ಎಸ್.ಡಿ.ಎಂ.ಸಿಯ ಕಾರ್ಯಚಟುವಟಿಕೆಗಳು ಹಾಗೂ ಕರ್ತವ್ಯ ಜವಬ್ದಾರಿಗಳ ಬಗ್ಗೆ ಅರಿವಿನ ಮಟ್ಟ ಹೆಚ್ಚಬೇಕು ಎಂದು ಸಲಹೆ ನೀಡಿದ್ದು. ಶೇಕಡ ೮.೭ ರಷ್ಟು ಶಿಕ್ಷಕರು ಎಸ್.ಡಿ.ಎಂ.ಸಿ ಸದಸ್ಯರಾಗಲು ಕನಿಷ್ಟ ವಿದ್ಯಾರ್ಹತೆಯಾದರೂ ಇರಬೇಕು ಎಂದು ಅಭಿಪ್ರಾಯ ವ್ಯಕ್ತಪಡಿಸಿದ್ದು. ಶೇಕಡ ೧೧.೯ ರಷ್ಟು ಶಿಕ್ಷಕರು ಎಸ್.ಡಿ.ಎಂ.ಸಿ ಸದಸ್ಯರು ಶಾಲೆಯ ಶೈಕ್ಷಣಿಕ ಅಭಿವೃದ್ಧಿಗೆ ಪೋಷಕರ ಸಹಕಾರವನ್ನು ಪಡೆದುಕೊಳ್ಳಬೇಕು ಎಂದು ಅಭಿಪ್ರಾಯಪಟ್ಟಿದ್ದಾರೆ. ಶೇಕಡ ೮.೨ ರಷ್ಟು ಶಿಕ್ಷಕರು ಎಸ್.ಡಿ.ಎಂ.ಸಿ ಸದಸ್ಯರಿಗೆ ಮೂರು ತಿಂಗಳಿಗೊಮ್ಮೆ ತರಬೇತಿಯನ್ನು ಆಯೋಜನೆ ಮಾಡಬೇಕು ಎಂದು ತಿಳಿಸಿದ್ದು. ಶೇಕಡ ೭.೯ ರಷ್ಟು ಶಿಕ್ಷಕರುಶಾಲಾ ಸಂಬಂಧಿತ ಚಟುವಟಿಕೆಗಳನ್ನು ನಡೆಸಲು ಹೆಚ್ಚಿನ ಹಣಕಾಸಿನ ಅಗತ್ಯವಿರುವುದರಿಂದ ಪ್ರಸ್ತುತ ಇರುವ ಅಧಿಕಾರದಿಂದ ಸಮರ್ಪಕ ನಿರ್ವಹಣೆ ಸಾಧ್ಯವಿಲ್ಲ ಎಂದು ಹೆಚ್ಚಿನವರು ಭಾವಿಸುತ್ತಾರೆ ಮತ್ತು ಎಸ್.ಡಿ.ಎಂ.ಸಿಗಳಿಗೆ ಹೆಚ್ಚಿನ ಹಣಕಾಸಿನ ಅನುದಾನ ಕೊಡಬೇಕೆಂದೂ ಸಲಹೆ ಮಾಡಿದ್ದಾರೆ.

ಶಾಲೆಯೊಂದರ ಉತ್ತಮ ಸಾಧನೆಯು ಬಹುಮಟ್ಟಿಗೆ ಶಿಕ್ಷಕರ ನಿರ್ವಹಣೆಯ ಮೇಲೆ ಅವಲಂಬಿಸಿರುತ್ತದೆ. ಶಿಕ್ಷಕರ ನಿರ್ವಹಣೆಯನ್ನು ಎಸ್.ಡಿ.ಎಂ.ಸಿಯು ಸುಧಾರಿಸಬಹುದು. ಈ ದಿಶೆಯಲ್ಲಿ ಅದು ನೆರವು ನೀಡಲುಬಹುದು. ಆದರೆ ಶಾಲಾ ಉತ್ತಮ ಸಾಧನೆಯಲ್ಲಿ ಸಮುದಾಯ ಮತ್ತು ಎಸ್.ಡಿ.ಎಂ.ಸಿಯು ಒಂದು ಬದಲಿ ವ್ಯವಸ್ಥೆಯಾಗದು. ರಾಜ್ಯದಲ್ಲಿಎರಡು ಮೂರು ಶಿಕ್ಷಕರುಳ್ಳ ಶಾಲೆಗಳು ಬಹುದೊಡ್ಡ ಸಂಖ್ಯೆಯಲ್ಲಿ ಇರುವ ಹಿನ್ನಲೆಯಲ್ಲಿ ಶಿಕ್ಷಕರ ಮೇಲೆ ಅತಿ ಹೆಚ್ಚಿನ ಹೊರೆಯಿದೆ. ಸಮುದಾಯದೊಂದಿಗೆ ನಿಕಟವಾಗಿ ಸಂಪರ್ಕ ಹೊಂದಿರುವ ಈ ಮಂದಿಯನ್ನು ಉತ್ತಮವಾದ ಆಡಳಿತದ ಮೂಲಕ ಉತ್ಸಾಹಿತರನ್ನಾಗಿಸಬೇಕಾದ ಅಗತ್ಯವಿದೆ. ಸಮುದಾಯದೊಂದಿಗೆ ಹೆಚ್ಚಿನ ಸಂಪರ್ಕ ಇರುವಾಗ ಇನ್ನಷ್ಟು ಹೆಚ್ಚಿನ ಉತ್ತರದಾಯಿತ್ವಕ್ಕೆ ಅದು ಒಂದು ಚೌಕಟ್ಟನ್ನು ಒದಗಿಸುತ್ತದೆ. ಯಾಕೆಂದರೆ ಶಾಲಾ ವ್ಯವಹಾರಗಳೊಂದಿಗೆ ಎಸ್.ಡಿ.ಎಂ.ಸಿಯ ಸದಸ್ಯರು ಮತ್ತು ಸದಸ್ಯರು ಹೆಚ್ಚು ತೊಡಗಿಸಿಕೊಂಡಾಗ ಶಿಕ್ಷಕರಿಗೆ ಹೆಚ್ಚು ಗೈರುಹಾಜರಾಗಲು ಸಾಧ್ಯವಾಗುವುದಿಲ್ಲ. ಎಸ್.ಡಿ.ಎಂ.ಸಿ ಹಾಗೂ ಶಿಕ್ಷಕರ ನಡುವಣ ಸಂಬಂಧವು ಅತ್ಯಂತ ಸೂಕ್ಷ್ಮವಾದುದು. ಏಕೆಂದರೆ ಎಸ್.ಡಿ.ಎಂ.ಸಿಯ ಮಂದಿ ಅನಗತ್ಯ ಕಿರುಕುಳ ನೀಡತೊಡಗಿದರೆ ಮತ್ತೆ ಇದು ಶಿಕ್ಷಕರ ಮೇಲೆ ಪ್ರತಿಕೂಲ ಪರಿಣಾಮ ಬೀರಿತು. ಶಿಕ್ಷಕರ ಉತ್ಸಾಹಕ್ಕೆ ತಣ್ಣೀರೆರಚಿದ ಹಾಗೆ ಉತ್ತರದಾಯಿತ್ವದ ಚೌಕಟ್ಟನ್ನು ಅಭಿವೃದ್ಧಿಪಡಿಸಬೇಕು.

ಶಾಲಾ ಮೂಲ ಸೌಕರ್ಯ ಸುಧಾರಣೆ, ಉತ್ತೇಜಿಸುವುದು ಹಾಗೂ ಶಾಲಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದು, ಶಾಲೆಯಲ್ಲಿ ಮಕ್ಕಳ ನಿರಂತರ ಹಾಜರಾತಿ ಹಾಗೂ ಸಹಭಾಗಿತ್ವ ಇತ್ಯಾದಿಗಳಲ್ಲಿ ಶಿಕ್ಷಕರು ಎಸ್.ಡಿ.ಎಂ.ಸಿ ಸಹಭಾರವನ್ನು ಮೊದಲಾಗಿ ಅಪೇಕ್ಷಿಸುತ್ತಾರೆ. ಈ ಎಲ್ಲ ವಿಚಾರಗಳಲ್ಲಿ ಎಸ್.ಡಿ.ಎಂ.ಸಿ ಸಹಕಾರವಿಲ್ಲದಿದ್ದರೆ ಶಿಕ್ಷಕರು ತೀರಾ ಅಸಹಾಯಕರಾಗಿರುತ್ತಾರೆ. ಪಾಲಕರು ಹಾಗೂ

ಕೆಲವು ಸಮುದಾಯ ಮುಂದಾಳುಗಳು ಶಾಲೆಗೆ ನಿಯಮಿತವಾಗಿ ಭೇಟಿ ನೀಡುತ್ತಿದ್ದರೆ, ಮಕ್ಕಳಿಗೆ ತಾವೇನನ್ನು ಹೇಳಿಕೊಡುತ್ತಿದ್ದೇವೆ ಎಂಬುದನ್ನುಅವರಿಗೆ ತಿಳಿಸಲು ಶಿಕ್ಷಕರಿಗೆ ಒಂದು ಅವಕಾಶ ದೊರಕುತ್ತದೆ. ಬೋಧನೆಯ ಪರಿಣಾಮಕಾರಿತನವನ್ನು, ಶಾಲಾ ಮಟ್ಟದಲ್ಲಿ ಹಮ್ಮಿಕೊಳ್ಳಲಾಗುವ ಕಾರ್ಯಕ್ರಮಗಳ ಮೂಲಕ ಅಳೆದು ನೋಡಬಹುದು. ಸಾಂಸ್ಕೃತಿಕ ಕಾರ್ಯಕ್ರಮಗಳನ್ನು, ಕ್ರಿಡೋತ್ಸವಗಳನ್ನು ಹಾಗೂ ಇತರ ಸಮೂಹ ಚಟುವಟಿಕೆಗಳನ್ನು ಆಯೋಜಿಸಬೇಕಾದರೆ ಎಸ್.ಡಿ.ಎಂ.ಸಿಯ ನಿರಂತರ ಪ್ರೋತ್ಸಾಹ ಹಾಗೂ ನೆರವು ನೀಡುವ ಕೆಲವು ಮನೆಗಳನ್ನು ಸಾಮಾನ್ಯವಾಗಿ ಗುರುತಿಸುತ್ತಾರೆ ಮತ್ತು ಉತ್ತೇಜನದ ಮೂಲಕ ಅದನ್ನು ಗಟ್ಟಿಗೊಳಿಸಲು ಯತ್ನಿಸುತ್ತಾರೆ.

ಪುಟ್ಟ ಪ್ರದೇಶಗಳು ಹಾಗೂ ಗ್ರಾಮಗಳು ದೂರದ ಮೂಲೆಯಲ್ಲಿರುವ ಸಂದರ್ಭದಲ್ಲಿ, ಶಿಕ್ಷಕರಿಗೆ ಸ್ಥಿರವಾದ ಬೆಂಬಲವು ಸಮುದಾಯದಿಂದ ಬೇಕಾಗುತ್ತದೆ. ಶಿಕ್ಷಕರಿಗೆ ಸಮುದಾಯವೇ ವಾಸ್ತವ್ಯದ ವ್ಯವಸ್ಥೆಯನ್ನು ಮಾಡಿಕೊಟ್ಟರೆ ಅದೊಂದು ಪ್ರಶಂಸಾರ್ಹ ಕೆಲಸವೆನಿಸುತ್ತದೆ ಗ್ರಾಮದಲ್ಲಿನ ಶಿಕ್ಷಕರ ವಸತಿಯು ಶಾಲಾ ಪರಿಣಾಮಕಾರಿತನದಲ್ಲಿ ಬಹುಮುಖ್ಯ ಪಾತ್ರ ವಹಿಸುತ್ತದೆ. ಏಕೆಂದರೆ, ಶಾಲಾವೇಳೆ ಮುಗಿದ ಹೊತ್ತಿನಲ್ಲಿ ಶಿಕ್ಷಕರು ಸಮುದಾಯದೊಂದಿಗೆ ಸಂಪರ್ಕ ಇಟ್ಟುಕೊಳ್ಳುವುದರಿಂದ ಶಾಲಾ ವ್ಯವಹಾರಗಳಲ್ಲಿ ಸಮುದಾಯ ಮುಂದಾಳುಗಳು ಸಹಭಾಗಿಗಳಾಗಲು ಭಾರೀ ಉತ್ತೇಜನ ದೊರೆಯುತ್ತದೆ. ಯೋಜನಾ ಪ್ರಕ್ರಿಯ ಸಂದರ್ಭದಲ್ಲಿಯೇ, ಶಿಕ್ಷಕರ ಬಗ್ಗೆ ತಮ್ಮ ಬದ್ಧತೆಯನ್ನು ಸಮುದಾಯವು ಅರಿತುಕೊಳ್ಳುವಂತೆ ಮಾಡಬೇಕು. ಕೋಣೆಯೊಂದನ್ನು ಒದಗಿಸಿಕೊಡುವುದು ಕೂಡಾ ಶಿಕ್ಷಕರಿಂದ ಹೆಚ್ಚಿನ ಉತ್ತರದಾಯಿತ್ವ ಕೇಳುವ ವಿಚಾರದಲ್ಲಿ ನೆರವಿಗೆ ಬರುತ್ತದೆ. ಭಾರತದಲ್ಲಿ ಬಹುದೊಡ್ಡ ಸಂಖ್ಯೆಯಲ್ಲಿ ಶಿಕ್ಷಕರು ಶಾಲೆಗೆ ದಿನವೂ ಬಂದು ಹೋಗುವವರು. ತಮ್ಮ ಗ್ರಾಮಕ್ಕಾಗಲಿ ವಸತಿ ಸನಿಹಕ್ಕಾಗಲಿ ವರ್ಗಾವಣೆ ಹೊಂದಲು ಅನೇಕ ರಾಜ್ಯಗಳ ಸರಕಾರಿ ನಿಯಮಗಳು ಶಿಕ್ಷಕರಿಗೆ ಅವಕಾಶ ನೀಡುವುದಿಲ್ಲವಾದ್ದರಿಂದ ಕೆಲವು ಶಿಕ್ಷಕರು ೧೫-೨೦ ಕಿ.ಮಿ. ಹೋಗಿ ಕಲಿಸಿ ಬರುವುದು ನಮ್ಮಲ್ಲಿ ಅಸಾಮಾನ್ಯ ಸಂಗತಿಯೇನಲ್ಲ. ಅದೇ ರೀತಿಯಲ್ಲಿ ಕೆಲವು ಶಿಕ್ಷಕರು ಸಾರಿಗೆ ಬಸ್ಸುಗಳಲ್ಲಿ ಪ್ರತಿ ನಿತ್ಯ ಹೆಚ್ಚಿನ ದೂರ ಕ್ರಮಿಸಿ ಶಾಲೆಗೆ ಹೋಗಿ ಬರುತ್ತಾರೆ. ಈ ಶಿಕ್ಷಕರ ಹೆಚ್ಚಿನ ವೇಳೆ ಪ್ರಯಾಣದಲ್ಲಿಯೇ ಕಳೆದುಹೋಗುತ್ತದೆ. ಹೀಗಾಗಿ ಅವರು ಮಾನಸಿಕವಾಗಿ ಹಾಗೂ ದೈಹಿಕವಾಗಿ ಆಯಾಸಗೊಳ್ಳುವರು. ಹಾಗಾಗಿ, ಶಿಕ್ಷಕರಿಗೆ ವಸತಿ ಒದಗಿಸುವ ಮೂಲಕ ಎಸ್.ಡಿ.ಎಂ.ಸಿಯು ತನ್ನ ಪ್ರಾಮುಖ್ಯ ಪಾತ್ರವನ್ನು ನಿಭಾಯಿಸುವುದು ತುಂಬಾ ಮುಖ್ಯ ಕನಿಷ್ಠ ಪಕ್ಷ ಒಂದು ಕೋಣೆಯನ್ನು ಈ ಬಗ್ಗೆ ಒದಗಿಸುವುದು ಕಡುಬಡತನದ ಗ್ರಾಮದಲ್ಲಿ ಕೂಡಾ ಅಸಾಧ್ಯ ಕೆಲಸವಲ್ಲ.

ಗ್ರಾಮ ಶಾಲೆಯ ಸಂಸ್ಥೆಯನ್ನು ಅಭಿವೃದ್ಧಿ ಸಂಬಂಧಿತ ಉಪಕ್ರಮಗಳ ಕೇಂದ್ರ ಬಿಂದುವನ್ನಾಗಿ ನಿರ್ಮಿಸುವುದು ಎಸ್.ಡಿ.ಎಂ.ಸಿಯ ಮಟ್ಟಿಗೆ ಅಷ್ಟೇ ಮುಖ್ಯ ಆರೋಗ್ಯ ಕಾರ್ಯಕರ್ತರ, ಅಂಗನವಾಡಿ ಕಾರ್ಯಕರ್ತರ, ಉತ್ತರದಾಯಿತ್ವಗಳು ಶಾಲೆಯೊಂದಿಗಿರಬೇಕು. ಶಾಲಾ ಸೌಲಭ್ಯಗಳನ್ನು ವಿಚಾರ ನಡೆಸುವ ವಿಚಾರದಲ್ಲಿಯೂ ಬಹುದೊಡ್ಡ ಪಾತ್ರ ಹೊಂದಿರಬೇಕು. ಪ್ರತಿಯೊಂದನ್ನೂ ಪ್ರತ್ಯೇಕಿಸುವ ವಿಧಾನದಲ್ಲಿ ಅಭಿವೃದ್ಧಿ ಯೋಜನೆಗಳನ್ನು ನಿರ್ವಹಿಸಿರುವುದು ಅವುಗಳ ಸೀಮಿತ ಪರಿಣಾಮಕ್ಕೆ ಕಾರಣವಾಗಿದೆ. ಯಾವುದೇ ತೆರನಾದ ಸರ್ವಾಂಗ ಪರಿಪೂರ್ಣವಾದ ಕ್ರಮವೇ ಇರಬಹುದು ಅದಕ್ಕೆ ಗ್ರಾಮದ ಶಾಲೆಯು ಅತ್ಯಂತ ಕ್ರಿಯಾಶೀಲವಾದ ಸಾಮಾಜಿಕ ದುಡಿಯಬಲ್ಲದು.

ಶಿಕ್ಷಕರ ಮೇಲೆ ಸಮುದಾಯದ ನಿಯಂತ್ರಣ ಇಲ್ಲದಿರುವುದು, ಶಿಕ್ಷಕರ ಗೈರುಹಾಜರಾತಿ ಹಾಗೂ ಶಿಕ್ಷಕರಲ್ಲಿ ಪ್ರೋತ್ಸಾಹದ ಕೊರತೆ ಇತ್ಯಾದಿಗಳನ್ನು ಹೊಸ ಶಿಕ್ಷಕ ನೇಮಕಾತಿ ನಡಸದೇ

ಇರುವುದಕ್ಕೆ ಕಾರಣಗಳನ್ನಾಗಿ ತೋರಿಸಲಾಗುತ್ತಿದೆ. ಖಾಸಗಿ ಅನುದಾನರಹಿತ ಹಾಗೂ ನೊಂದಾಯಿಸಲ್ಪಡದ ಖಾಸಗಿ ಶಾಲೆಗಳಲ್ಲಿ ದಾಖಲಾತಿಗೆ ಅವಕಾಶ ಮಾಡಿಕೊಟ್ಟ ಬಳಿಕ ಕೂಡಾ ಇರುವ, ಶಿಕ್ಷಕ ಕೊರತೆಯು ನಿಜಕ್ಕೂ ಗಣನೀಯವಾಗಿದೆ. ಇದರ ದೂರಗಾಮಿ ಪರಣಾಮವನ್ನು ಗಣನೆಗೆ ತೆಗೆದುಕೊಂಡು ಎಲ್ಲಾ ರಾಜ್ಯಗಳು ಶಿಕ್ಷಕ ನೇಮಕಾತಿ ವಿಷಯವನ್ನು ಗಂಭೀರವಾಗಿ ಗಣನೆಗೆ ತೆಗದುಕೊಳ್ಳಬೇಕಾಗಿದೆ. ಇಲಾಖೆ ಅಡಿಯಲ್ಲಿ ಕೂಡಾ ಅಂತಿಮವಾಗಿ ಶಿಕ್ಷಕ ವೇತನದ ಹೆಚ್ಚಿನ ಉತ್ತರದಾಯಿತ್ವ, ಪ್ರೇರಣೆ, ಸಮುದಾಯದೊಂದಿಗೆ ಅನುಸಂಧಾನ ಹಾಗೂ ಅಗತ್ಯಕ್ಕೆ ತಕ್ಕಷ್ಟು ಮಾತ್ರ ಶಿಕ್ಷಕ ಹುದ್ದೆ ಇತ್ಯಾದಿಗಳೆಲ್ಲಾ ಬೇಕಾಗುತ್ತವೆ.ಇಷ್ಟಾಗಿಯೂ, ನಮಗೆ ಬಹಳ ದೊಡ್ಡ ಸಂಖ್ಯೆಯಲ್ಲಿ ಹೊಸ ಶಿಕ್ಷಕರ ಅಗತ್ಯವಿದೆ.

ಸಮುದಾಯ ಪಾಲ್ಗೊಳ್ಳುವಂತೆ ಮಾಡಲು ಸರ್ವಶಿಕ್ಷಣ ಅಭಿಯಾನದಡಿಯಲ್ಲಿ ಅನೇಕ ಕಾರ್ಯಕ್ರಮಗಳನ್ನು ರೂಪಿಸಿದ್ದಾರೆ. ಆದರೆ ಶಿಕ್ಷಣ ಇಲಾಖೆಯ ಕೆಳಸ್ತರದಲ್ಲಿ ಕಾರ್ಯ ನಿರ್ವಹಿಸುತ್ತಿರುವವರಿಗೆ ನೇರ ಭಾಗೀದಾರ ಸಮಿತಿಗಳ ಪಾಲ್ಗೊಳ್ಳುವಿಕೆಯ ನಿರ್ವಹಣಾ ಕೌಶಲ್ಯದ ಕೊರತೆಯಿಂದಾಗಿ ಬಲಗೊಳಿಸುವ ಕಾರ್ಯ ಮಂದವಾಗಿವೆ. ಸಮುದಾಯ ಪಾಲ್ಗೊಳ್ಳುವಿಕೆಯನ್ನು ಬಲಪಡಿಸುವಲ್ಲಿ ಸಮುದಾಯದ ಬಳಕೆ ಮತ್ತು ನಿರ್ವಹಣೆ ಬಹಳ ಮುಖ್ಯವಾದದು. ಇದರಲ್ಲಿ ಶಾಲೆಯ ಮುಖ್ಯಸ್ಥರು, ಶಿಕ್ಷಕ, ಶಿಕ್ಷಕಿಯರ ಪಾತ್ರ ವಿಶಿಷ್ಟವಾದದು. ಇವರು ಉತ್ತಮ ಪ್ರೋತ್ಸಾಹಕರಾಗಿ ಕಾರ್ಯನಿರ್ವಹಿಸಬೇಕಾಗಿದೆ. ಸಮುದಾಯದೊಂದಿಗೆ ಉತ್ತಮ ಬಾಂಧವ್ಯ ಹೊಂದಿದವನಾಗಿ ಶಾಲೆಯ ಒಟ್ಟಾರೆ ಪರಿಣಾಮಕಾರಿ ವೃತ್ತಿ ನೈಪುಣ್ಯವನ್ನು ಹೊಂದಿ ಶಿಕ್ಷಣದ ಬಗ್ಗೆ ಕಾಳಜಿ, ಹೊಣೆಗಾರಿಕೆ ಮತ್ತು ಉತ್ತರದಾಯಿತ್ವದೊಂದಿಗೆ ಕಾರ್ಯ ನಿರ್ವಹಿಸಬೇಕಾಗಿದೆ. ಇಂದಿನ ಶಿಕ್ಷಕರು ಮಕ್ಕಳ ತಂದೆತಾಯಿಗಳ ಮನೋಭಾವನೆಗಳನ್ನು ಅರಿತು, ಎಸ್.ಡಿ.ಎಂ.ಸಿ ಮತ್ತು ಸಮುದಾಯ ಜನರೊಂದಿಗೆ ಒಂದಾಗಿ ಕೆಲಸ ಮಾಡಬೇಕಾಗಿದೆ.

೪.೫ ಪಂಚಾಯಿತಿ ಸದಸ್ಯರ ಅಭಿಪ್ರಾಯ

ಭಾಗ–೫ರಲ್ಲಿ ಗ್ರಾಮ ಪಂಚಾಯತಿಯ ನಾಗರೀಕ ಸೌಲಭ್ಯ ಸಮಿತಿಯ ಸದಸ್ಯರಾಗಿ ಪಾತ್ರ ಹಾಗೂ ಕರ್ತವ್ಯ, ಪಂಚಾಯತಿಯ ಭಾಗದಲ್ಲಿ ಶಿಕ್ಷಣದ ಬಗ್ಗೆ ಅವರು ಹೊಂದಿರುವ ಮಾಹಿತಿ, ಇದರ ಬಗ್ಗೆ ಅವರ ಸ್ಪಂದನೆ, ಇತರೆ ಅಧಿಕಾರಿಗಳ ಸ್ಪಂದನೆ, ಮುಂತಾದ ವಿಚಾರಗಳ ಬಗ್ಗೆ ಇವರ ದೃಷ್ಟಿಕೋನ ಏನುಎಂಬುದನ್ನು ಕುರಿತು ಚರ್ಚಿಸಲಾಗಿದೆ.

ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ೧೯೯೩ ಅಡಿಯಲ್ಲಿ ಒಂದು ಶಾಸನಬದ್ಧ ಸಮಿತಿಯಾಗಿದ್ದು. ನಾಗರೀಕ ಸೌಕರ್ಯಗಳ ಸಮಿತಿಗಳಡಿಯಲ್ಲಿ ಕೆಲಸ ನಿರ್ವಹಿಸಲು ಅನುಕೂಲವಾಗುವಂತೆ ಮಾದರಿ ಉಪವಿಧಿಗಳನ್ನು ರಚಿಸಲಾಗಿದೆ. ಕರ್ನಾಟಕ ಸರ್ಕಾರವು ತನ್ನ ಅಧಿಕೃತ ರಾಜ್ಯ ಪತ್ರದಲ್ಲಿ ದಿನಾಂಕ ೧೪ ೦೬ ೨೦೦೬ ರಂದು ಅಧಿಸೂಚನೆ ಹೊರಡಿಸುವುದರ ಮೂಲಕ ರಾಜ್ಯದ ಎಲ್ಲ ಶಾಲೆಗಳಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳನ್ನು ರಚಿಸುವಂತೆ ಆದೇಶಿಸಿದೆ. ಇದರಿಂದಾಗಿ ಎಸ್.ಡಿ.ಎಂ.ಸಿಗಳು ಪಂಚಾಯತ್ ರಾಜ್ ವ್ಯವಸ್ಥೆಯ ಭಾಗವಾಗಿದ್ದು. ವಿಕೇಂದ್ರೀಕರಣ ಪ್ರಕ್ರಿಯೆಯಲ್ಲಿ ಹೊಸ ಇತಿಹಾಸವನ್ನು ಸೃಷ್ಟಿಸಿದೆ. ಈ ಪ್ರಯತ್ನ ವಿಕೇಂದ್ರೀಕರಣದ ಮತ್ತೊಂದು ಪ್ರಮುಖ ಹೆಜ್ಜೆಯಾಗಿದ್ದು, ಈವರೆಗೆ ಪಂಚಾಯಿತಿಗಳಿಗೆ ಸಮಾನಾಂತರವಾಗಿ ಕೆಲಸ ನಿರ್ವಹಿಸುತ್ತಿದ್ದ ಸಂಸ್ಥೆಗಳನ್ನು

ಪಂಚಾಯಿತಿಯಡಿಯಲ್ಲಿ ಒಗ್ಗೂಡಿಸುವುದರ ಮೂಲಕ ಪಂಚಾಯತ್ ರಾಜ್ ವ್ಯವಸ್ಥೆಗಳನ್ನು ಮತ್ತಷ್ಟು ಬಲಿಷ್ಠಗೊಳಿಸುವ ಪ್ರಾಮಾಣಿಕ ಪ್ರಯತ್ನ ಇದಾಗಿದೆ.

ಇನ್ನು ಮುಂದೆ ಗ್ರಾಮೀಣ ಪ್ರದೇಶದಲ್ಲಿನ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳ ಎಸ್.ಡಿ.ಎಂ.ಸಿ.ಗಳು ಗ್ರಾಮ ಪಂಚಾಯಿತಿಯ ನಾಗರಿಕ ಸೌಕರ್ಯಗಳ ಸಮಿತಿಯ ಭಾಗವಾಗಿ ಕೆಲಸ ನಿರ್ವಹಿಸಲಿದ್ದು, ಗ್ರಾಮ ಪಂಚಾಯಿತಿಯು ತನ್ನ ನಾಗರಿಕ ಸೌಲಭ್ಯಗಳ ಸಮಿತಿಯ ಮೂಲಕ ಗ್ರಾಮಪಂಚಾಯಿತಿಯೊಳಗೆ ಬರುವ ಎಲ್ಲಾ ಶಾಲೆಗಳನ್ನು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ರಚನೆಯನ್ನು ಮಾಡುತ್ತದೆ. ಆದರೆ ಈ ಅಧಿಕಾರವನ್ನು ಆಯಾ ಶಾಲೆಯ ಮುಖ್ಯಸ್ಥರಿಗೆ ವಹಿಸಲಾಗುತ್ತದೆ. ಶಾಲೆಗಳು ಎಂದರೆ ಸರ್ಕಾರಿ ಅಥವಾ ಸರ್ಕಾರಿ ಅನುದಾನಿತ ಪ್ರಾಥಮಿಕ ಶಾಲೆಗಳು ಪ್ರೌಢಶಾಲೆಗಳು ಮತ್ತು ಪರ್ಯಾಯ ಶಿಕ್ಷಣ ಕೇಂದ್ರಗಳು ಎಂದು ಅರ್ಥ ಪರ್ಯಾಯ ಶಿಕ್ಷಣ ಕೇಂದ್ರಗಳನ್ನು ಶಾಲೆ ಬಿಟ್ಟ ಮಕ್ಕಳಿಗಾಗಿ ಸರ್ಕಾರವು ತೆರದಿದೆ. ಉದಾಹರಣೆಗೆ ಪೂರಕ ಶಾಲೆ ರೆಸಿಡೆನ್ಸಿಯಲ್ ಬ್ರಿಡ್ಜ್ ಕೋರ್ಸ್ ಇತ್ಯಾದಿ ಇಂತಹ ಶಾಲೆಗಳಲ್ಲಿ ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ರಚಿಸಬೇಕು. ಎಸ್.ಡಿ.ಎಂ.ಸಿ ಗಳನ್ನು ಉಪವಿಧಿಗಳ ಅನ್ವಯ ರಚಿಸುವ ಮತ್ತು ಮೇಲ್ವಿಚಾರಣೆ ಮಾಡುವ ಜವಾಬ್ದಾರಿ ಸಿ.ಎ.ಸಿ ಗಳದ್ದಾಗಿರುತ್ತದೆ. ಅಂದರೆ ಸಿ.ಇ.ಸಿ ಮತ್ತು ಎಸ್.ಡಿ.ಎಂ.ಸಿ ಗಳು ಪರಸ್ಪರ ಸಹಕಾರ ಮತ್ತು ಸಮನ್ವಯದಿಂದ ಉಪವಿಧಿಗಳಲ್ಲಿರುವ ಅಂಶಗಳಿಗೆ ಅನುಗುಣವಾಗಿ ಕೆಲಸ ನಿರ್ವಹಿಸಬೇಕಾಗಿದೆ.

೧೯೯೩ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮವು ಅನೂಸೂಚಿ ೧, ೨ ಮತ್ತು ೩ರಲ್ಲಿ ಪಟ್ಟಿ ಮಾಡಿರುವಂತೆ ಗ್ರಾಮ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಮತ್ತು ಜಿಲ್ಲಾ ಪಂಚಾಯತಿಗಳು ನಿರ್ವಹಿಸಬೇಕಾದ ನಿರ್ದಿಷ್ಟ ಪ್ರಕಾರಗಳ ಬಗ್ಗೆ ಉಪಬಂಧ ಕಲ್ಪಿಸಿರುತ್ತದೆ. ಅಧಿನಿಯಮದ ೩೧೨ನೇ ಪ್ರಕರಣದಿಂದ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಸರ್ಕಾರವು ಅಧಿಸೂಚನೆ ಸಂಖ್ಯೆ ಆರ್.ಡಿ.ಪಿ ೪೭೨ ಜಿಪಸ ೯೩, ದಿನಾಂಕ ೨೩-೭-೧೯೯೪ರ ಮೇರೆಗೆ ೧, ೨, ೩ ರ ಅನೂಸೂಚಿಗಳಿಗೆ ಕೆಲವು ನಿರ್ದಿಷ್ಟ ಚಟುವಟಿಕೆಗಳನ್ನು, ಕಾರ್ಯಕ್ರಮಗಳನ್ನು ಮತ್ತು ಯೋಜನೆಗಳನ್ನು ಸೇರಿಸಿ ಅಧಿಸೂಚನೆ ಸಂಖ್ಯೆ ಗ್ರಾಅಪ ೧೨೧ ಜಿಪಸ ೯೮. ದಿನಾಂಕ ೬-೯-೧೯೯೮ಲನ್ನು ಹೊರಡಿಸಲಾಗಿದೆ.

ಆಡಳಿತ ವಿಕೇಂದ್ರಿಕರಣದಲ್ಲಿ ಪಂಚಾಯತ್ ರಾಜ್ ಸಂಸ್ಥೆಗಳು ಇನ್ನೂ ಹೆಚ್ಚು ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಶಕ್ತವಾಗುವಂತೆ ಮತ್ತು ಅವುಗಳನ್ನು ಬಲಪಡಿಸುವ ನಿಟ್ಟಿನಲ್ಲಿ ವಿವಿಧ ಪಂಚಾಯತ್ ರಾಜ್ ಸಂಸ್ಥೆಗಳು ನಿರ್ವಹಿಸುತ್ತಿರುವ ಕೆಲವು ಕಾರ್ಯ ಚಟುವಟಿಕೆಗಳನ್ನು ಪುನರ್ ವಿಂಗಡಿಸಿದ್ದಾರೆ ಅಲ್ಲದೆ ಇದರಂತೆ ಜಿಲ್ಲಾ ಪಂಚಾಯತಿಗಳು, ತಾಲ್ಲೂಕು ಪಂಚಾಯತಿಗಳು ಹಾಗೂ ಗ್ರಾಮ ಪಂಚಾಯತಿಗಳು ಈ ಅಧಿಸೂಚನೆಯಲ್ಲಿ ಸೂಚಿಸಿರುವಂತೆ ತಮಗೆ ಸಂಬಂಧಪಡದ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಬೇಕೆಂದು ನಿರ್ದೇಶಿಸಲಾಗಿದೆ.

೧೯೯೩ರ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಕೆಳಗೆ ಹೊರಡಿಸಲಾಗಿರುವ ಆದೇಶ ಮತ್ತು ಅಧಿಸೂಚನೆಯಂತೆ ಪ್ರಾಥಮಿಕ ಮತ್ತು ಪ್ರೌಢಶಾಲೆಗಳು ಸೇರಿದಂತೆ ಶಿಕ್ಷಣದಲ್ಲಿ ಗ್ರಾಮ ಪಂಚಾಯತಿಯ ಪಾತ್ರದ ಬಗ್ಗೆ ತಿಳಿಸಿದ್ದು ಅವುಗಳು ಈ ಮುಂದಿನಂತಿವೆ. ಶಾಲಾ ವಯಸ್ಸಿನ ಎಲ್ಲ ಮಕ್ಕಳ ಸೇರ್ಪಡೆಯನ್ನು ಖಚಿತಪಡಿಸುವುದು, ಶಾಲಾ ಕಟ್ಟಡಗಳು ಮತ್ತು ಆಟದ ಮೈದಾನಗಳ

ನಿರ್ವಹಣೆ, ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳ ನಿಯಮಿತ ಹಾಜರಾತಿಯ ಮೇಲೆ ವೀಕ್ಷಣ ಪ್ರಕ್ರಿಯೆ ಮತ್ತು ಸಂಬಂಧಿಸಿದವರಿಗೆ ವರದಿ ಸಲ್ಲಿಸುವುದು, ಎಲ್ಲಾ ಮಕ್ಕಳ ಶಾಲೆ ಸೇರ್ಪಡೆ ಹಾಗೂ ಶಾಲೆ ಬಿಡುವುದನ್ನು ತಪ್ಪಿಸಲು ಪ್ರಚಾರ, ಶಾಲೆ ಬಿಡುವ ಮಕ್ಕಳ ಸ್ಥಾನಮಾನವನ್ನು ಅಂದಾಜು ಮಾಡುವುದು ಮತ್ತು ಅದನ್ನು ತಪ್ಪಿಸಲು ಸೂಕ್ತ ಕ್ರಮ ತೆಗೆದುಕೊಳ್ಳುವುದು, ಉದ್ದೇಶಿತ ವಿದ್ಯಾರ್ಥಿ ಸಮೂಹಕ್ಕೆ ಅಧ್ಯಯನ ಸಾಮಗ್ರಿ ವಿತರಣೆಯಲ್ಲಿ ತಾಲ್ಲೂಕು ಪಂಚಾಯತಿಗೆ ಸಹಕರಿಸುವುದು.

ಗ್ರಾಮ ಪಂಚಾಯತ್ ತನ್ನ ಸಾಮಾನ್ಯ ಸಭೆಗಳಲ್ಲಿ ವಿಷಯ ಸೂಚಿಯಡಿ ಚರ್ಚಿಸುವ ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ಪರಾಮರ್ಶಿಸಿ ಅದರ ಸಾಧಕ-ಬಾಧಕಗಳನ್ನು ವಿವರವಾಗಿ ತಿಳಿದುಕೊಂಡು ಯೋಗ್ಯ ತೀರ್ಮಾನಗಳನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲ. ಚುನಾಯಿತ ಸದಸ್ಯರ ತಜ್ಞತೆ ಮತ್ತು ಅಪಾರ ಅನುಭವದಡಿ ಮಂಡಿತ ವಿಷಯಗಳ ಗುಣಾವಗುಣಗಳನ್ನು ಪ್ರಾಥಮಿಕ ಹಂತದಲ್ಲಿ ವಿಮರ್ಶಿಸಲು ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩ರ ಅಡಿಯಲ್ಲಿ ಸ್ಥಾಯಿ ಸಮಿತಿ ರಚನೆಗೆ ಅವಕಾಶ ಮಾಡಿಕೊಡಲಾಗಿದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ೧೯೯೩ರ ಕಲಂ ೬೧ರಡಿ ಸ್ಥಾಯಿ ಸಮಿತಿ ಹಾಗೂ ಅವಶ್ಯಕತೆಗೆ ಅನುಗುಣವಾಗಿ ಇನ್ನಿತರ ಸಮಿತಿಗಳನ್ನು ರಚಿಸಲಾಗಿದೆ. ಕರ್ನಾಟಕ ಗ್ರಾಮ ಪಂಚಾಯತಿಗಳ (ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ)ಮಾದರಿ ಉಪವಿಧಿಗಳು೨೦೦೬ ಅಧ್ಯಾಯ ೨ ಪ್ರಕರಣ ೪ ರ ಅನ್ವಯ ಪ್ರಕರಣ ೪ (ಸಿ) ಅನ್ವಯಮಾಹಿತಿ ವಿನಿಮಯ ಸಮನ್ವತೆಯ ಉದ್ದೇಶಕ್ಕಾಗಿ ಶೈಕ್ಷಣಿಕ ವರ್ಷದಲ್ಲಿ ಕನಿಷ್ಠ ಪಕ್ಷ ೩ ತಿಂಗಳಿಗೊಮ್ಮೆ ಪಂಚಾಯತಿ ಪ್ರದೇಶದ ವ್ಯಾಪ್ತಿಯಲ್ಲಿರುವ ಎಲ್ಲಾ ಶಾಲೆಗಳ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಪದಾಧಿಕಾರಿಗಳ ಜಂಟಿ ಸಭೆಯನ್ನು ನಡೆಸುವ ಕರ್ತವ್ಯವನ್ನು ಹೊಂದಿರುತ್ತದೆ. ಮುಂದುವರಿದು ೧-೪-೨೦೧೦ ರಿಂದ ಜಾರಿಯಾಗಿರುವ ಉಚಿತ ಮತ್ತು ಕಡ್ಡಾಯ ಶಿಕ್ಷಣ ಮಕ್ಕಳ ಹಕ್ಕು ಕಾಯ್ದೆ ೨೦೦೯, ಪ್ರಕರಣ ೯ ರ ಅನ್ವಯ ಪಂಚಾಯತಿಯೂ ತನ್ನ ವ್ಯಾಪ್ತಿಯಲ್ಲಿ ಬರುವ ಪ್ರತಿಯೊಂದು ಮಗುವು ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶ ಪಡೆದು, ಹಾಜರಾಗಿ ಅದನ್ನು ಪೂರ್ಣಗೊಳಿಸುವಂತೆ ನೋಡಿಕೊಳ್ಳುವ ವಿಷಯದಲ್ಲಿ ಮೇಲ್ವಿಚಾರಣೆ ಮಾಡುವ ಅಧಿಕಾರವನ್ನು ಹೊಂದಿರುತ್ತದೆ.

ನಾಗರಿಕ ಸೌಕರ್ಯ ಸಮಿತಿಯು ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಗುಣಾತ್ಮಕ ಶಾಲಾ ಶಿಕ್ಷಣವನ್ನು ಖಚಿತಪಡಿಸುವ ನಿಟ್ಟಿನಲ್ಲಿ ಎಸ್.ಡಿ.ಎಂ.ಸಿ ಗಳಿಗೆ ಎಲ್ಲಾ ರೀತಿಯ ಬೆಂಬಲ ಸಹಕಾರ ಮತ್ತು ಉತ್ತೇಜನವನ್ನು ನೀಡಬೇಕಾಗಿದೆ. ಇದೇ ರೀತಿಯಲ್ಲಿ ಎಸ್.ಡಿ.ಎಂ.ಸಿಗಳು ತಾವು ರಚಿಸುವ ಶಾಲಾಭಿವೃದ್ಧಿಯ ಕ್ರಿಯಾ ಯೋಜನೆಗಳನ್ನು ಸಿ.ಇ.ಸಿ.ಯಗಳು ಅನುಷ್ಠಾನಗೊಳಿಸಲು ಪೂರಕ ಬೆಂಬಲ ನೀಡುವುದು. ಜೊತೆಗೆಪ್ರತಿ ೩ ತಿಂಗಳಿಗೊಮ್ಮೆ ಸಿ.ಇ.ಸಿಯು ಸಮನ್ವಯ ಸಭೆಯಲ್ಲಿ ಪಾಲ್ಗೊಂಡು ಶೈಕ್ಷಣಿಕ ಅಬಿವೃದ್ಧಿಯ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿ, ತೀರ್ಮಾನ ಕೈಗೊಳ್ಳುವುದು. ಶಾಲೆಗೆ ಬೇಕಾದ ಅಗತ್ಯಗಳನ್ನು ಪಂಚಾಯಿತಿಯ ಗಮನ ಸೆಳೆಯುವುದರ ಮೂಲಕ ಪಂಚಾಯಿತಿ ವ್ಯಾಪ್ತಿಯಲ್ಲಿನ ಎಲ್ಲಾ ಮಕ್ಕಳಿಗೆ ಗುಣಾತ್ಮಕ ಶಾಲಾ ಶಿಕ್ಷಣ ಸಿಗುವುದನ್ನು ಖಾತರಿಪಡಿಸಿಕೊಳ್ಳಬೇಕಾಗಿದೆ. ಈ ಹಿನ್ನಲೆಯಲ್ಲಿ ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಪರಸ್ಪರ ಅನ್ಯೋನ್ಯತೆ ಮತ್ತು ಸಹಕಾರದಿಂದ ಕೆಲಸ ನಿರ್ವಹಿಸಬೇಕಾಗಿದೆ. ಶಾಲಾ ವಯಸ್ಸಿನ ಎಲ್ಲ ಮಕ್ಕಳ ಶಾಲೆಗೆ ಸೇರ್ಪಡೆಯನ್ನು ಖಚಿತಪಡಿಸಿಕೊಳ್ಳುವುದು. ಶಾಲಾ ಕಟ್ಟಡಗಳು ಮತ್ತು ಆಟದ ಮೈದಾನಗಳ ನಿರ್ವಹಣೆ, ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳ ನಿಯಮಿತ ಹಾಜರಾತಿಯ ಮೇಲೆ ವೀಕ್ಷಣ ಪ್ರಕ್ರಿಯೆ ಮತ್ತು ಸಂಬಂಧಿಸಿದವರಿಗೆ ವರದಿ ಸಲ್ಲಿಸುವುದು. ಎಲ್ಲಾ ಮಕ್ಕಳ ಶಾಲಾ ಸೇರ್ಪಡೆ ಹಾಗೂ

ಶಾಲೆ ಬಿಡುವುದನ್ನು ತಪ್ಪಿಸಲು ಪ್ರಚಾರ ಮುಂತಾದ ಕರ್ತವ್ಯಗಳನ್ನು ನಿರ್ವಹಿಸಬೇಕಾಗಿರುವುದರಿಂದ ಶಿಕ್ಷಣ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ತಮ್ಮ ಕರ್ತವ್ಯಗಳನ್ನು ಅರಿಯಬೇಕಾಗಿರುವುದರಿಂದ ಪ್ರಸ್ತುತ ಅವರಿಗೆ ಎಷ್ಟು ತಿಳಿದಿದೆ ಎಂಬುದನ್ನು ಅರಿಯಲು ಪಂಚಾಯತಿಯ ನಾಗರೀಕ ಸೌಲಭ್ಯ ಸಮಿತಿಯ ಸದಸ್ಯರಾಗಿ ನಿಮ್ಮ ಪಾತ್ರ ಹಾಗೂ ಕರ್ತವ್ಯಗಳೇನು ಎಂಬುದರ ಬಗ್ಗೆ ಅವರ ಪ್ರತಿಕ್ರಿಯೆಯನ್ನು ಬಯಸಿದಾಗ ಈ ಕೆಳಕಂಡಂತೆ ಪ್ರತಿಕ್ರಿಯಿಸಿದ್ದಾರೆ.

ಕೋಷ್ಟಕ ೧

ನಾಗರೀಕ ಸೌಲಭ್ಯ ಸಮಿತಿಯ ಸದಸ್ಯರಾಗಿ ಪಾತ್ರ ಹಾಗೂ ಕರ್ತವ್ಯಗಳು

ಕರ್ತವ್ಯಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಪರಿಶೀಲನೆ	೧೨	೧೬.೪	೮	೧೯	೫	೧೬.೭	೪	೨೬.೭	೨೯	೧೮.೧
ಶಾಲಾ ಕಟ್ಟಡಗಳು ಮತ್ತು ಆಟದ ಮೈದಾನಗಳ ನಿರ್ವಹಣೆ	೧೭	೨೩.೩	೪	೯.೫	೩	೧೦	೩	೨೦	೨೭	೧೬.೯
ಶಾಲಾ ಸೌಲಭ್ಯಗಳು ಶಾಲಾ ವಿಷಯಗಳ ಬಗ್ಗೆ ಮೇಲಾಧಿಕಾರಿಗಳೊಂದಿಗೆ ಚರ್ಚಿಸಲು ಎಸ್.ಡಿ.ಎಂ.ಸಿ ಯವರೊಟ್ಟಿಗೆ ಹೋಗುವುದು	೧೪	೧೯.೨	೬	೧೪.೩	೪	೧೩.೩	೧	೬.೭	೨೫	೧೫.೬
ವಿವಿಧ ಇಲಾಖೆಗಳಲ್ಲಿ ಇರುವ ಸೌಲಭ್ಯಗಳನ್ನು ಶಾಲೆಗೆ ದೊರಕುವಂತೆ ಮಾಡುವುದು	೮	೧೧	೪	೯.೫	೪	೧೩.೩	೧	೬.೭	೧೭	೧೦.೬
ಎಸ್.ಡಿ.ಎಂ.ಸಿ ಮತ್ತು ಶಾಲೆ ಸರಿಯಾಗಿ ಕೆಲಸ ನಿರ್ವಹಿಸುತ್ತಿದಿಯೇ ಎಂದು ಮೇಲುಸ್ತುವಾರಿ ಮಾಡುವುದು	೧೩	೧೭.೮	೯	೨೧.೪	೬	೨೦	೨	೧೩.೩	೩೦	೧೮.೮
ಗ್ರಾಮ ಪಂಚಾಯಿತಿಯಿಂದ ಅನುದಾನ ನೀಡುವುದು	೯	೧೨.೩	೧೧	೨೬.೨	೮	೨೬.೭	೪	೨೬.೭	೩೨	೨೦
ಗೌರವ ಶಿಕ್ಷಕರನ್ನು ನೇಮಿಸುವುದು	೦	೦	೦	೦	೦	೦	೦	೦	೦	೦

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶಾಲೆಗೆ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಪರಿಶೀಲನೆಯಲ್ಲಿ ಶೇಕಡ ೧೮.೧ ರಷ್ಟು, ಶಾಲಾ ಕಟ್ಟಡಗಳು ಮತ್ತು ಆಟದ ಮೈದಾನಗಳ ನಿರ್ವಹಣೆಯಲ್ಲಿ ಶೇಕಡ ೧೬.೯ ರಷ್ಟು ಶಾಲಾ ಸೌಲಭ್ಯಗಳು ಶಾಲಾ ವಿಷಯಗಳ ಬಗ್ಗೆ ಮೇಲಾಧಿಕಾರಿಗಳೊಂದಿಗೆ ಚರ್ಚಿಸಲು ಎಸ್.ಡಿ.ಎಂ.ಸಿ ಯವರೊಟ್ಟಿಗೆ ಹೋಗುವುದರಲ್ಲಿ ಶೇಕಡ ೧೫.೬ರಷ್ಟು, ವಿವಿಧ ಇಲಾಖೆಗಳಲ್ಲಿ ಇರುವ ಸೌಲಭ್ಯಗಳನ್ನು ಶಾಲೆಗೆ ದೊರಕುವಂತೆ ಮಾಡುವುದರಲ್ಲಿ ಶೇಕಡ ೧೦.೬, ಎಸ್.ಡಿ.ಎಂ.ಸಿ ಮತ್ತು ಶಾಲೆ ಸರಿಯಾಗಿ ಕೆಲಸ ನಿರ್ವಹಿಸುತ್ತಿದಿಯೇ ಎಂದು ಮೇಲುಸ್ತುವಾರಿ ಮಾಡುವುದು ಶೇಕಡ ೧೮.೮, ಗ್ರಾಮ ಪಂಚಾಯಿತಿಯಿಂದ ಅನುದಾನ ನೀಡುವುದು ಶೇಕಡ ೨೦ ರಷ್ಟು, ಗೌರವ ಶಿಕ್ಷಕರನ್ನು ನೇಮಿಸುವುದರ ಬಗ್ಗೆ ಯಾವುದೇ ಪ್ರತಿಕ್ರಿಯೆಗಳನ್ನು ನೀಡದಿರುವುದನ್ನು ಗಮನಿಸಬಹುದಾಗಿದೆ. ಸಿ.ಎಸಿಯ ಪ್ರಮುಖವಾದ ಕರ್ತವ್ಯಗಳಾದ ಪಂಚಾಯತ್ ವ್ಯಾಪ್ತಿಗೆ ಸೇರಿದ ಎಲ್ಲ ಶಾಲೆಗಳಲ್ಲಿ ಎಸ್.ಡಿ.ಎಂ.ಸಿ ರಚನೆಯನ್ವಯ ಮಾಡುವುದು. ವಾರ್ಷಿಕ ಕ್ರಿಯಾ ಯೋಜನೆಯಂತೆ ಕಾರ್ಯಚುವಟಿಕೆಗಳು ಅನುಷ್ಠಾನಗೊಂಡ ಬಗ್ಗೆ ಪರಿಶೀಲನೆ ಮಾಡುವುದು, ಪಂಚಾಯತಿ ಮಟ್ಟದ ಅನುದಾನ ವಿಲೇವಾರಿ ಮಾಡುವುದು, ಎಸ್.ಡಿ.ಎಂ.ಸಿ ಸದಸ್ಯರ, ಶಿಕ್ಷಕರ, ಸಿಬ್ಬಂಧಿಯ ವಿರುದ್ಧ ಬಂದ ದೂರುಗಳ ವಿಚಾರಣೆಗಾಗಿ ಸಮಿತಿ ರಚಿಸಿ ಸಮಿತಿಯ ವರದಿ ಪ್ರಕಾರ ಕ್ರಮ ಕೈಗೊಳ್ಳುವುದು. ಎಸ್.ಡಿ.ಎಂ.ಸಿಗಳ ಕಾರ್ಯವೈಖರಿಯನ್ನು ಪ್ರತಿ ತ್ರೈಮಾಸಿಕ ಅವಧಿಯ ಕೊನೆಗೆ ಪರಿಶೀಲಿಸುವುದು. ಹಣ, ಅಧಿಕಾರಗಳ ದುರುಪಯೋಗವಾದ ಸಂದರ್ಭಗಳಲ್ಲಿ ಎಸ್.ಡಿ.ಎಂ.ಸಿ ಸದಸ್ಯತ್ವ ರದ್ದುಪಡಿಸುವುದು ಮುಂತಾದ ಕರ್ತವ್ಯಗಳು ಕೂಡ ಇದೆ.

ಸಿ.ಎ.ಸಿ. ತನ್ನ ವ್ಯಾಪ್ತಿಯಲ್ಲಿ ಬರುವ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಗುಣಾತ್ಮಕ ಶಾಲಾ ಶಿಕ್ಷಣವನ್ನು ಖಚಿತ ಪಡಿಸುವ ನಿಟ್ಟಿನಲ್ಲಿ ಎಸ್.ಡಿ.ಎಂ.ಸಿಗಳಿಗೆ ಸಿ.ಎ.ಸಿ ಬೆಂಬಲ, ಸಹಕಾರ ಮತ್ತು ಉತ್ತೇಜನ ನೀಡಬೇಕು. ಎಸ್.ಡಿ.ಎಂ.ಸಿ. ರಚಿಸಿರುವ ಶಾಲಾಭಿವೃದ್ಧಿ ಕ್ರಿಯಾಯೋಜನೆಗಳನ್ನು ಸಿ.ಎ.ಸಿ. ಅನುಮೋದನೆಯೊಂದಿಗೆ ಜಾರಿಗೊಳಿಸಬೇಕು. ಪ್ರತಿ ೩ ತಿಂಗಳಿಗೊಮ್ಮೆ ಸಿ.ಎ.ಸಿ. ಸಭೆ ಮಾಡಬೇಕು. ಈ ಸಭೆಗೆ ಎಸ್.ಡಿ.ಎಂ.ಸಿ. ಅಧ್ಯಕ್ಷರು /ಉಪಾಧ್ಯಕ್ಷರು ಹಾಗೂ ಪದನಿಮಿತ್ತ ಕಾರ್ಯದರ್ಶಿಗಳು ಕಡ್ಡಾಯವಾಗಿ ಹಾಜರಿರಬೇಕು. ತಮ್ಮ ತಮ್ಮ ಶಾಲೆಗಳ ಅಭಿವೃದ್ಧಿಗಾಗಿ ಸಿ.ಎ.ಸಿ. ಸಭೆಯಲ್ಲಿ ಚರ್ಚಿಸಿ, ಪರಿಹಾರ ಕಂಡುಕೊಳ್ಳಬೇಕು. ಸಿ.ಎ.ಸಿ. ಪಂಚಾಯತಿ ಸಭೆಯಲ್ಲಿ ಶಾಲೆಯ ಅಗತ್ಯತೆಗಳನ್ನು ನಿರ್ಧರಿಸಿ ಪೂರೈಸಬೇಕು. ಸಿ.ಎ.ಸಿ. ಶಾಲೆಗಳಲ್ಲಿ ಗುಣಾತ್ಮಕ ಶಾಲಾ ಶಿಕ್ಷಣ ಸಿಗುವುದನ್ನು ಖಾತರಿ ಪಡಿಸಿಕೊಳ್ಳಬೇಕು. ಈ ಹಿನ್ನಲೆಯಲ್ಲಿ ಎಸ್.ಡಿ.ಎಂ.ಸಿ. ಮತ್ತು ಸಿ.ಎ.ಸಿ. ಪರಸ್ಪರ ಅನ್ಯೋನ್ಯತೆ ಮತ್ತು ಸಹಕಾರದಿಂದ ಕೆಲಸ ನಿರ್ವಹಿಸಬೇಕಾಗಿದೆ.

ಕೋಷ್ಟಕ ೨

ಸಿ.ಎ.ಸಿ. ಸಭೆಯಲ್ಲಿ ಚರ್ಚಿಸುವ ವಿಷಯಗಳ ಬಗ್ಗೆ ಸದಸ್ಯರ ಅಭಿಪ್ರಾಯ

ಸಭೆಯಲ್ಲಿ ಚರ್ಚೆ	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಶಾಲಾ ಭೌತಿಕ ಸೌಲಭ್ಯಗಳ ಬಗ್ಗೆ	೧೧	೨೨	೭	೨೫	೪	೨೧.೧	೩	೩೩.೩	೨೫	೨೩.೬
ಶಾಲಾ ಸರಿಯಾಗಿ	೬	೧೨	೨	೭.೧	೨	೧೦.೫	೨	೨೨.೨	೧೨	೧೧.೩

ನಡೆಯುತ್ತಿದಿಯೇ ಎಂಬುದರ ಬಗ್ಗೆ										
ಮಕ್ಕಳ ದಾಖಲಾತಿ,ಹಾಜರಾತಿ, ಮತ್ತು ಉಳಿಕೆಯ ಬಗ್ಗೆ	೧೫	೩೦	೮	೨೮.೬	೬	೩೧.೬	೧	೧೧.೧	೩೦	೨೮.೩
ಶಿಕ್ಷಕರ ಹಾಜರಾತಿಯ ಬಗ್ಗೆ	೬	೧೨	೩	೧೦.೭	೨	೧೦.೫	೧	೧೧.೧	೧೨	೧೧.೩
ಎಸ್.ಡಿ.ಎಂ.ಸಿಯ ಬಗ್ಗೆ	೧೨	೨೪	೮	೨೮.೬	೫	೨೬.೩	೨	೨೨.೨	೨೭	೨೫.೫
ಮಕ್ಕಳ ಕಲಿಕೆಯ ಬಗ್ಗೆ	೦	೦	೦	೦	೦	೦	೦	೦	೦	೦

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಪ್ರಾಥಮಿಕ ಶಿಕ್ಷಣವನ್ನು ಕುರಿತ ಪ್ರಚಲಿತ ನಿಲುವೆಂದರೆ ಪ್ರಾಥಮಿಕ ಶಾಲೆಯನ್ನು ಸ್ಥಳೀಯ ಸಮುದಾಯದ ಕೇಂದ್ರವನ್ನಾಗಿ ಮಾಡಿ ಅದನ್ನು ಸಮುದಾಯ ಶಾಲೆಯನ್ನಾಗಿ ಪರಿವರ್ತಿಸುವುದು. ಸ್ಥಳೀಯ ಸಮುದಾಯಕ್ಕೂ ಮತ್ತು ಶಾಲೆಗೆ ಸಹಜವಾದ ಸಂಬಂಧವನ್ನು, ಅದರಲ್ಲೂ ಚುನಾಯಿತ ಸದಸ್ಯರಿಂದ ಕೂಡಿದ ಗ್ರಾಮ ಪಂಚಾಯಿತಿಗಳ ಮೂಲಕ ಬೆಳೆಸುವುದು ಮೇಲು. ಈ ಹಿನ್ನಲೆಯಲ್ಲಿ ಪಂಚಾಯತಿಗಳು ತಮ್ಮ ಸಾಮಾನ್ಯ ಸಭೆಗಳಲ್ಲಿ ಯಾವ ಯಾವ ವಿಷಯಗಳನ್ನು ಚರ್ಚಿಸುತ್ತೀರಾ ಎಂಬ ಪ್ರಶ್ನೆಗೆ ಶೇಕಡ ೨೩.೬ ರಷ್ಟು ಸದಸ್ಯರು ಶಾಲೆಗಳ ಭೌತಿಕ ಸೌಲಭ್ಯಗಳ ಬಗ್ಗೆ ಚರ್ಚಿಸುತ್ತೇವೆ ಎಂದು ಶೇಕಡ ೧೧.೩ ರಷ್ಟು ಸದಸ್ಯರು ಶಾಲೆಗಳು ಸರಿಯಾಗಿ ನಡೆಯುತ್ತಿದಿಯೇ ಎಂಬುದರ ಬಗ್ಗೆ ಚರ್ಚಿಸುತ್ತೇವೆ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು. ಶೇಕಡ ೨೮.೩ ರಷ್ಟು ಸದಸ್ಯರು ಶಾಲೆಗಳಲ್ಲಿ ಮಕ್ಕಳು ದಾಖಲಾತಿ , ಹಾಜರಾತಿ ಮತ್ತು ಉಳಿಕೆಯ ಬಗ್ಗೆ ಚರ್ಚಿಸುತ್ತೇವೆ ಎಂದು, ಶೇಕಡ ೧೧.೩ ರಷ್ಟು ಸದಸ್ಯರು ಶಿಕ್ಷಕರ ಹಾಜರಾತಿಯ ಬಗ್ಗೆ ಚರ್ಚಿಸುತ್ತೇವೆ ಎಂದು, ಶೇಕಡ ೨೫.೬ ರಷ್ಟು ಸದಸ್ಯರು ಎಸ್.ಡಿ.ಎಂ.ಸಿ ಬಗ್ಗೆ ಚರ್ಚಿಸುತ್ತೇವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಕೋಷ್ಟಕ ೩

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ಗ್ರಾಮ ಪಂಚಾಯತಿ ಸದಸ್ಯರ ಅರಿವು

ಪಂಚಾಯತಿ ವ್ಯಾಪ್ತಿಯ ಶೈಕ್ಷಣಿಕ ಸಮಸ್ಯೆಗಳು	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಮಕ್ಕಳು ಶಾಲೆಗೆ ಬರುವುದಿಲ್ಲ	೨೯	೨೨.೮	೩೨	೨೬.೭	೨೮	೩೧.೮	೪	೭	೯೩	೨೩.೭
ಶಿಕ್ಷಕರು ಸರಿಯಾದ ಸಮಯಕ್ಕೆ ಬರುವುದಿಲ್ಲ	೧೮	೧೪.೨	೧೮	೧೫	೧೭	೧೯.೩	೫	೮.೮	೫೮	೧೪.೮

ಶಾಲೆಗಳು ಸರಿಯಾಗಿ ನಡೆಯುತ್ತಿಲ್ಲ.	೧೬	೧೨.೬	೧೩	೧೦.೮	೧೧	೧೨.೫	೬	೧೦.೫	೪೬	೧೧.೭
ಎಸ್.ಡಿ.ಎಂ.ಸಿ ಗಳು ಸರಿಯಾಗಿ ಕಾರ್ಯ ನಿರ್ವಹಿಸುತ್ತಿಲ್ಲ.	೧೨	೯.೪	೧೧	೯.೨	೭	೮	೯	೧೫.೮	೩೯	೯.೯
ಪೋಷಕರು ಶಾಲೆಯ ಬಗ್ಗೆ ಕಾಳಜಿ ವಹಿಸುತ್ತಿಲ್ಲ	೧೮	೧೪.೨	೯	೭.೫	೫	೫.೭	೧೧	೧೯.೩	೪೩	೧೧
ಶಾಲೆಗಳ ಬಗ್ಗೆ ಜನಪ್ರತಿನಿಧಿಗಳ ಗಮನ ಕಡಿಮೆ	೧೬	೧೨.೬	೨೨	೧೮.೩	೮	೯.೧	೧೪	೨೪.೬	೬೦	೧೫.೩
ಕಟ್ಟಡ ಮತ್ತು ಇತರ ಸೌಲಭ್ಯಗಳ ಗುಣಮಟ್ಟ ಕಡಿಮೆ	೧೮	೧೪.೨	೧೫	೧೨.೫	೧೨	೧೩.೬	೮	೧೪	೫೩	೧೩.೫

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಗ್ರಾಮ ಪಂಚಾಯಿತಿಯ ಸಿ.ಎ.ಸಿ ಸದಸ್ಯರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಇರುವ ಶೈಕ್ಷಣಿಕ ಸಮಸ್ಯೆಗಳನ್ನು ಗುರುತಿಸಿದ್ದು ಅವುಗಳು ಈ ಕೆಳಕಂಡಂತಿವೆ. ಶಾಲೆಗಳಿಗೆ ಮಕ್ಕಳು ಹಾಜರಾಗುವುದಿಲ್ಲ ಎಂದು ಶೇಕಡ ೨೩.೭ ರಷ್ಟು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದು. ಶೇಕಡ ೧೪.೮ ರಷ್ಟು ಸದಸ್ಯರು ಶಿಕ್ಷಕರು ಶಾಲೆಗಳಿಗೆ ಕ್ರಮಬದ್ಧ ಹಾಜರಾತಿ ಇರುವುದಿಲ್ಲವೆಂದು, ಶೇಕಡ ೧೧.೭ ರಷ್ಟು ಸದಸ್ಯರು ಶಾಲೆಗಳು ಗುಣಾತ್ಮಕ ಕಲಿಕಾ ಕೇಂದ್ರಗಳಾಗಿ ನಡೆಯುತ್ತಿಲ್ಲವೆಂದು, ಶೇಕಡ ೧೫.೩ ರಷ್ಟು ಸದಸ್ಯರು ಜನಪ್ರತಿನಿಧಿಗಳು ಶಾಲೆಗಳ ಕಡೆ ಮತ್ತು ಶೈಕ್ಷಣಿಕವಾಗಿ ಗಮನಹರಿಸುವುದಿಲ್ಲ ಎಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಶೇಕಡ ೧೩.೫ ರಷ್ಟು ಸದಸ್ಯರು ಶಾಲೆಗಳ ಕಟ್ಟಡ ಮತ್ತು ಇತರ ಮೂಲಭೂತ ಸೌಕರ್ಯಗಳ ಗುಣಮಟ್ಟ ಕಡಿಮೆ ಇದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ನಾಗರೀಕ ಸೌಕರ್ಯ ಸಮಿತಿಯ ಸದಸ್ಯರು ಶಾಲಾ ಅಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯು ಕೈಗೊಂಡ ಕ್ರಮಗಳನ್ನು ಪರಿಶೀಲನೆ ಮಾಡತಕ್ಕದ್ದು. ಶಾಲೆಗಳ ವಾರ್ಷಿಕ ಕಾಮಗಾರಿ ಯೋಜನೆಗಳ ಅನುಷ್ಠಾನವನ್ನು ನಿಯತವಾಗಿ ಪರಿಶೀಲನೆ ಮಾಡತಕ್ಕದ್ದು ಮತ್ತು ಸಾಧ್ಯವಿರುವ ಕಡೆಗಳಲ್ಲಿ ಅವುಗಳ ಅನುಷ್ಠಾನಕ್ಕೆ ಅಗತ್ಯ ನೆರವು ನೀಡತಕ್ಕದ್ದು, ಶಾಲೆಗಳ ಲೆಕ್ಕಕ್ಕೆ ಹೆಚ್ಚುವರಿ ನಿಧಿಗಳನ್ನು ವರ್ಗಾಯಿಸಬಹುದು. ಅಲ್ಲದೆ ಈ ಕೆಳಕಂಡ ಸಂಗತಿಗಳಿಗೆ ಬಾಲ ಕಾರ್ಮಿಕರನ್ನಾಗಿ ಬಳಸಿಕೊಳ್ಳುವುದು, ಶಾಲೆಯಲ್ಲಿ ದೈಹಿಕವಾಗಿ ನಿಂದಿಸುವುದು, ಶಾಲೆಯಲ್ಲಿ ಲೈಂಗಿಕ ಕಿರುಕುಳ ನೀಡುವುದು ಅಥವಾ ನಿಂದಿಸುವುದು ಯಾವುದೇ ರೂಪದಲ್ಲಿ ಮಗುವಿಗೆ ಅಪಮಾನ ಮಾಡುವುದು ಅಥವಾ ತಾರತಮ್ಯ ತೋರುವುದು. ಶಾಲೆಯಲ್ಲಿ ಸಿಬ್ಬಂದಿ ಸದಸ್ಯರಿಗೆ ಯಾವುದೇ ರೂಪದಲ್ಲಿ ಅಪಮಾನ ಮಾಡುವುದು ಅಥವಾ ತಾರತಮ್ಯ ತೋರುವುದು, ಕರ್ತವ್ಯ ಲೋಪ, ನಿಧಿಗಳ ಮತ್ತು ಸೌಲಭ್ಯಗಳ ದುರುಪಯೋಗ,

ಎಸ್.ಡಿ.ಎಂ.ಸಿಯ ಸಮಗ್ರ ಕಾರ್ಯನಿರ್ವಹಣೆ ಕುರಿತು ಎಸ್.ಡಿ.ಎಂ.ಸಿ ಅಧ್ಯಕ್ಷರು ದೂರುಗಳನ್ನು ಸ್ವೀಕರಿಸಿದ ಒಂದು ವಾರದೊಳಗೆ ಸಿಎಸಿ ಸಮಿತಿಗೆ ಕಳುಹಿಸುವುದು. ಈ ರೀತಿಯ ದೂರುಗಳನ್ನು ಹಾಗೂ ಶಿಕ್ಷಕರು, ಬೋಧಕೇತರ ಸಿಬ್ಬಂದಿ ಅಥವಾ ಸಮಿತಿಯ ಸದಸ್ಯರ ಉದಾಸೀನತೆ, ಕರ್ತವ್ಯ ಲೋಪ, ದುರ್ವರ್ತನೆ, ದುರ್ನಡತೆ ಅಥವಾ ಅಸಭ್ಯ ವರ್ತನೆ, ತಪ್ಪು ನಿರ್ವಹಣೆ, ನಿಧಿಗಳ ಮತ್ತು ಸೌಲಭ್ಯಗಳ ದುರುಪಯೋಗ, ಸಮಿತಿಯ ಒಟ್ಟು ಕಾರ್ಯನಿರ್ವಹಣೆ ದೂರುಗಳು ಬಂದಲ್ಲಿ ನಾಗರಿಕ ಸೌಲಭ್ಯಗಳ ಸಮಿತಿಯು ಈ ಮುಂದಿನ ಕಾರ್ಯವಿಧಾನ ಅನುಸರಿಸಿ ಸಮಸ್ಯೆಗಳನ್ನು ಬಗೆಹರಿಸಬಹುದಾಗಿದ್ದು. ಈ ಹಿನ್ನಲೆಯಲ್ಲಿ ಮೇಲಿನ ಸಮಸ್ಯೆಗಳನ್ನು ಬಗೆಹರಿಸಲು ಯಾಯ ಕ್ರಮಗಳನ್ನು ತೆಗೆದುಕೊಂಡಿದೆ ಎಂಬುದರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿದಾಗ.

ಕೋಷ್ಟಕ ೪

ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಲು ಗ್ರಾಮ ಪಂಚಾಯತಿ ಸದಸ್ಯರ ಕ್ರಮಗಳು

ಸಮಸ್ಯೆ ಬಗೆಹರಿಸಲು ತೆಗೆದುಕೊಂಡ ಕ್ರಮ	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ನಾಗರೀಕ ಸೌಕರ್ಯ ಸಮಿತಿಯಲ್ಲಿ ಚರ್ಚಿಸಿದ್ದೇವೆ	೦	೦	೦	೦	೦	೦	೦	೦	೦	೦
ಶಾಲೆಗಳಿಗೆ ಭೇಟಿ ನೀಡಿದ್ದೇವೆ	೭	೧೦.೮	೯	೧೧.೫	೯	೧೪.೩	೫	೧೨.೫	೩೦	೧೨.೨
ಗ್ರಾಮ ಸಭೆಗಳಲ್ಲಿ ಪ್ರಸ್ತಾಪಿಸಿದ್ದೇವೆ.	೧೧	೧೬.೯	೧೩	೧೬.೭	೧೧	೧೭.೫	೯	೨೨.೫	೪೪	೧೭.೯
ಇಲಾಖೆಯ ಅಧಿಕಾರಿಗಳಿಗೆ ತಿಳಿಸಿದ್ದೇವೆ	೬	೯.೨	೮	೧೦.೩	೭	೧೧.೧	೮	೨೦	೨೯	೧೧.೮
ಸಂಬಂಧಪಟ್ಟ ವ್ಯಕ್ತಿಗಳೊಂದಿಗೆ ಚರ್ಚಿಸಿದ್ದೇವೆ.	೩	೪.೬	೬	೭.೭	೪	೬.೩	೫	೧೨.೫	೧೮	೭.೩
ಪ್ರಯತ್ನಿಸಿಲ್ಲ	೩೮	೫೮.೫	೪೨	೫೩.೮	೩೨	೫೦.೮	೧೩	೩೨.೫	೧೨೫	೫೦.೮

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶಾಲೆಗಳಿಗೆ ಮತ್ತು ಶಾಲಾ ನಿರ್ವಹಣೆಗೆ ಸಂಬಂಧಿಸಿದ ಹಾಗೆ ಯಾವುದೇ ದೂರುಗಳು ಬಂದಾಗ ಗ್ರಾಮ ಪಂಚಾಯತಿಗಳು ಕೆಲವು ಕಾರ್ಯವಿಧಾನಗಳನ್ನು ಅನುಸರಿಸುವ ಮೂಲಕ

ಕ್ರಮಗಳನ್ನು ತೆಗದುಕೊಳ್ಳಬೇಕು. ಇದರ ಬಗ್ಗೆ ಅಭಿಪ್ರಾಯ ಕ್ರೊಢೀಕರಿಸಿದಾಗ. ನಾಗರೀಕ ಸೌಕರ್ಯ ಸಮಿತಿಯು ಸಭೆ ನಡೆಸಿ ಯಾವುದೆ ರೀತಿ ಚರ್ಚಿಸಿಲ್ಲ ಎಂದು ಎಲ್ಲರು ಒಮ್ಮತದಿಂದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಶೇಕಡ ೧೨.೨ ಸದಸ್ಯರು ನಾವು ಶಾಲೆಗಳಿಗೆ ನೇರವಾಗಿ ಭೇಟಿ ನೀಡಿ ಆ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸಿದ್ದೇವೆ ಎಂದು, ಶೇಕಡ ೧೧.೮ ರಷ್ಟು ಸದಸ್ಯರು ಸಮಸ್ಯೆಗೆ ಸಂಬಂಧಿಸಿದ ಇಲಾಖೆಗಳೊಂದಿಗೆ ಚರ್ಚಿಸಿದ್ದೇವೆ ಎಂದು, ಸಮಸ್ಯೆಗೆ ಮೂಲ ಕಾರಣರಾದ ವ್ಯಕ್ತಿಗಳೊಂದಿಗೆ ಮುಖಾಮುಖಿ ಚರ್ಚೆಯನ್ನು ನಡೆಸಿದ್ದೇವೆ ಎಂದು ಶೇಕಡ ೭.೩ ರಷ್ಟು ಸದಸ್ಯರು ಅಭಿಪ್ರಾಯ ವ್ಯಕ್ತಪಡಿಸಿದ್ದು. ದೂರುಗಳಿಗೆ ಅಥವಾ ಸಮಸ್ಯೆಗಳಿಗೆ ನಾವು ಯಾವುದೆ ಕ್ರಮಗಳನ್ನು ತೆಗೆದುಕೊಂಡಿಲ್ಲ ಎಂದು ಅತಿ ಹೆಚ್ಚು ಜನ ಅಂದರೆ ಶೇಕಡ ೫೦.೮ ಸದಸ್ಯರು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಗಳಾದ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು ಹಾಗೂ ಗುಚ್ಚ ಸಂಪನ್ಮೂಲ ವ್ಯಕ್ತಿಗಳು ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು ಮತ್ತು ಜಿಲ್ಲಾ ಉಪನಿರ್ದೇಶಕರು ಹಾಗು ಇನ್ನಿತರ ಶೈಕ್ಷಣಿಕ ಅಧಿಕಾರಿಗಳು ಗ್ರಾಮ ಪಂಚಾಯತಿಯ ಜೊತೆ ಪೂರಕವಾಗಿ ಕೆಲಸ ನಿರ್ವಹಿಸಿದರೆ ಹಾಗೂ ಸ್ಪಂದಿಸಿದರೆ ಉತ್ತಮ ರೀತಿಯಲ್ಲಿ ಕೆಲಸ ನಿರ್ವಹಿಸಲು ಸಾಧ್ಯವಾಗುತ್ತದೆ. ಈಗಾಗಿ ಇದರ ಬಗ್ಗೆ ಮೇಲ್ಕಂಡ ಆಧಿಕಾರಿಗಳ ಸ್ಪಂದನೆ ಹೇಗಿದೆ ಎಂಬುದರ ಬಗ್ಗೆಪ್ರತಿಕ್ರಿಯೆ ಕೇಳಿದಾಗ ಈ ಕೆಳಕಂಡಂತೆ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ

ಕೋಷ್ಟಕ ೫

ಗ್ರಾಮ ಪಂಚಾಯತಿಯ ಸದಸ್ಯರ ಜೊತೆ ಶಿಕ್ಷಣ ಇಲಾಖೆಯ ಅಧಿಕಾರಿಗಳ ಸ್ಪಂದನೆಯ ಬಗ್ಗೆ

ಅಧಿಕಾರಿಗಳ ಸ್ಪಂದನೆ	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಉತ್ತಮ	೧೨	೧೯.೩	೮	೧೫.೧	೧೭	೩೦.೪	೬	೧೮.೮	೪೩	೨೧.೭
ಮಧ್ಯಮ	೩೪	೨೧.೧	೩೨	೬೦.೪	೨೮	೫೦	೧೭	೫೩.೧	೧೧೧	೫೬.೧
ಸಾಧರಣ	೧೧	೫೯.೬	೧೩	೨೪.೫	೧೧	೧೯.೬	೯	೨೮.೧	೪೪	೨೨.೨

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಶೇಕಡ ೨೧.೭ ರಷ್ಟು ಸದಸ್ಯರು ಉತ್ತಮವಾಗಿ ಸ್ಪಂದಿಸುತ್ತಾರೆ ಎಂದು, ಶೇಕಡ ೫೬.೧ ರಷ್ಟು ಸದಸ್ಯರು ಮಧ್ಯಮ ಎಂದು ಶೇಕಡ ೨೨.೨ ರಷ್ಟು ಸದಸ್ಯರು ಸಾಧರಣ ಎಂದು ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ನಾಗರಿಕ ಸೌಕರ್ಯ ಸಮಿತಿಯು ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಗುಣಾತ್ಮಕ ಶಾಲಾ ಶಿಕ್ಷಣವನ್ನು ಖಚಿತಪಡಿಸುವ ನಿಟ್ಟಿನಲ್ಲಿ ಎಸ್.ಡಿ.ಎಂ.ಸಿ ಗಳಿಗೆ ಎಲ್ಲಾ ರೀತಿಯ ಬೆಂಬಲ ಸಹಕಾರ ಮತ್ತು ಉತ್ತೇಜನವನ್ನು ನೀಡಬೇಕಾಗಿದೆ. ಇದೇ ರೀತಿಯಲ್ಲಿ ಎಸ್.ಡಿ.ಎಂ.ಸಿಗಳು ತಾವು ರಚಿಸುವ ಶಾಲಾಭಿವೃದ್ಧಿಯ ಕ್ರಿಯಾ ಯೋಜನೆಗಳನ್ನು ಸಿ.ಇ.ಸಿ.ಯಗಳು

ಅನುಷ್ಠಾನಗೊಳಿಸಲು ಪೂರಕ ಬೆಂಬಲ ನೀಡುವುದರ ಬಗ್ಗೆ ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ೧೯೯೩ ಹಾಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ ೨೦೦೯ರಲ್ಲಿ ಸ್ಪಷ್ಟವಾಗಿ ತಿಳಿಸಿದ್ದು. ಈ ಹಿನ್ನಲೆಯಲ್ಲಿ ಗ್ರಾಮ ಪಂಚಾಯಿತಿಯಿಂದ ಶಾಲೆಗೆ ದೊರೆತಿರುವ ಕೊಡುಗೆಗಳೇನು ಎಂಬುದರ ಬಗ್ಗೆ ಪ್ರತಿಕ್ರಿಯೆಯನ್ನು ಬಯಸಿದಾಗ

ಕೋಷ್ಟಕ ೬

ಗ್ರಾಮ ಪಂಚಾಯಿತಿಯಿಂದ ಶಾಲೆಗೆ ದೊರೆತಿರುವ ಕೊಡುಗೆಗಳು

ಪಂಚಾಯತಿಯಿಂದ ಶಾಲೆ ಕೊಡುಗೆ	ಬಿಜಾಪುರ		ಬಾಗಲಕೋಟೆ		ಬಳ್ಳಾರಿ		ರಾಯಚೂರು		ಎಲ್ಲಾ ಜಿಲ್ಲೆಗಳು	
	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%	ಸಂಖ್ಯೆ	%
ಕಾಮಗಾರಿಗಳಿಗೆ ಅನುದಾನ	೨೮	೩೩.೩	೨೬	೨೯.೯	೨೩	೩೨.೪	೯	೨೯	೮೬	೩೧.೫
ಅಡುಗೆ ಮನೆ ನಿರ್ಮಾಣ	೭	೮.೩	೯	೧೦.೩	೫	೭	೨	೬.೫	೨೩	೮.೪
ಬಿಸಿಊಟಕ್ಕೆ ತಟ್ಟೆ ಮತ್ತು ಲೋಟ	೧೮	೨೧.೪	೧೩	೧೪.೯	೧೧	೧೫.೫	೫	೧೬.೧	೪೭	೧೭.೨
ಶಾಲೆ ಬಿಟ್ಟ ಮಕ್ಕಳಿಗೆ ಸಹಾಯ	೯	೧೦.೭	೮	೯.೨	೬	೮.೫	೪	೧೨.೯	೨೭	೯.೯
ಶಾಲಾ ಕಾರ್ಯಕ್ರಮಗಳಿಗೆ ಸಹಾಯ	೨೨	೨೬.೨	೩೧	೩೫.೬	೨೬	೩೬.೬	೧೧	೩೫.೫	೯೦	೩೩

ಮೂಲ : ಕ್ಷೇತ್ರ ಕಾರ್ಯದ ಮಾಹಿತಿ.

ಕ್ರಮವಾಗಿ ಶೇಕಡ ೩೧.೫ ರಷ್ಟು ಸದಸ್ಯರು ಶಾಲಾ ಮೂಲಭೂತ ಸೌಕರ್ಯಗಳ ಕಾಮಗಾರಿಗೆ ಅನುದಾನವನ್ನು ನೀಡಲಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ಮಧ್ಯಾಹ್ನದ ಬಿಸಿಊಟದ ಯೋಜನೆಯಾದ ಅಕ್ಷರ ದಾಸೋಹ ಕಾರ್ಯಕ್ರಮವನ್ನು ವ್ಯವಸ್ಥಿತವಾಗಿ ನಡೆಸಲು ಅಡುಗೆ ಕೋಣೆ ನಿರ್ಮಾಣವನ್ನು ಮಾಡಿಸಿದ್ದೇವೆ ಎಂದು ಶೇಕಡ ೮.೪ ರಷ್ಟು ಜನ ಪ್ರತಿಕ್ರಿಯಿಸಿದ್ದಾರೆ. ಹಾಗೆಯೇ ಬಿಸಿಊಟದಲ್ಲಿ ಮಕ್ಕಳಿಗೆ ತಟ್ಟೆ ಹಾಗೂ ನೀರು ಕುಡಿಯಲು ಲೋಟದ ವ್ಯವಸ್ಥೆಯನ್ನು ಕಲ್ಪಿಸಿದ್ದೇವೆ ಎಂದು ಶೇಕಡ ೧೭.೨ ರಷ್ಟು ಪ್ರತಿಕ್ರಿಯಿಸಿದ್ದು. ಶಾಲೆಯ ರಾಷ್ಟ್ರೀಯ ಕಾರ್ಯಕ್ರಮಗಳು ಮತ್ತು ಕ್ರೀಡಾ, ಸಾಂಸ್ಕೃತಿಕ ಕಾರ್ಯಕ್ರಮ ಮುಂತಾದ ಕಾರ್ಯಕ್ರಮಗಳಿಗೆ ಕೊಡುಗೆ ನೀಡಿದ್ದೇವೆ ಎಂದು ಶೇಕಡ ೯.೯ ರಷ್ಟು ಸದಸ್ಯರು ಪ್ರತಿಕ್ರಿಯಿಸಿರುವುದನ್ನು ನಾವು ಕಾಣಬಹುದಾಗಿದೆ. ಇದೆ ಏನೆ ಇದ್ದರೂ ಗ್ರಾಮ ಪಂಚಾಯತಿಗಳು ತಮ್ಮ ವ್ಯಾಪ್ತಿಯಲ್ಲಿ ಪ್ರಾಥಮಿಕ ಶಿಕ್ಷಣವನ್ನು ಅಭಿವೃದ್ಧಿಗೊಳಿಸಲು ಯೋಜನೆಯೊಂದನ್ನು ತಯಾರಿಸಿ ಅಗತ್ಯತೆಯ ಆಧಾರದ ಮೇಲೆ ನೆರವನ್ನು ನೀಡುವುದು. ಸ್ಥಳೀಯ ಪ್ರಾಥಮಿಕ ಶಾಲೆಗಳಿಗೆ ಅಗತ್ಯವಾದ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು, ಪ್ರಸ್ತುತ ಶಾಲಾ ಕಟ್ಟಡವನ್ನು ದುರಸ್ತಿಗೊಳಿಸುವುದು, ನಾಗರೀಕ ಸೌಕರ್ಯ ಸಮಿತಿಯ ಸಲಹೆ ಮೇರೆಗೆ ಹೊಸ ಕಟ್ಟಡವನ್ನು ನಿರ್ಮಿಸುವುದು, ಶಾಲಾ ಮಕ್ಕಳ ಕಲಿಕೆಗೆ ಪೂರಕವಾಗಿ ಅವರಿಗೆ ನೆರವನ್ನು ನೀಡುವುದು. ಸ್ಥಳೀಯ ಪ್ರಾಥಮಿಕ ಶಾಲೆಗಳ ಮೇಲುಸ್ತುವಾರಿಯನ್ನು ಕಾಲ ಕಾಲಕ್ಕೆ ಮಾಡುವುದು, ಉಚಿತ ಮತ್ತು

ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಮೂಲಭೂತ ಹಕ್ಕು ಕಾಯ್ದೆ ೨೦೦೯ ರ ಪ್ರಕಾರ ಮಕ್ಕಳು ಶಾಲೆಗೆ ಬರುವಂತೆ ಹಾಗೂ ಹಾಜರಾತಿ ಹೆಚ್ಚಳದ ಕೆಲಸಗಳನ್ನು ಮಾಡಬೇಕಾಗಿದೆ. ತಮ್ಮಲ್ಲಿರುವ ಸಂಪನ್ಮೂಲದ ಮಿತಿಗೆ ಅನುಸಾರವಾಗಿ ಶಾಲಾ ಮಕ್ಕಳಿಗೆ ಅವಶ್ಯಕ ಸಹಾಯ, ಮಕ್ಕಳ ಆಟಕ್ಕೆ ಹಾಗೂ ಶಾಲಾ ತೋಟಕ್ಕೆ ಭೂಮಿಯನ್ನು ಒದಗಿಸಿ ಅವುಗಳನ್ನು ಉತ್ತಮ ಸ್ಥಿತಿಯಲ್ಲಿಡಲು ಪ್ರಯತ್ನಿಸುವುದು. ಕುಡಿಯುವ ನೀರು ಮತ್ತು ಶೌಚಾಲಯದಂತಹ ಇತರ ಸೌಲಭ್ಯಗಳನ್ನು ಮಕ್ಕಳಿಗೆ ಪ್ರತ್ಯೇಕವಾಗಿ ಒದಗಿಸುವುದು. ಮಧ್ಯಾಹ್ನದ ಉಪಾಹಾರ ಯೋಜನೆಗೆ ಪೌಷ್ಠಿಕಾಂಶದ ಹೆಚ್ಚಳದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಮಕ್ಕಳನ್ನು ವಿಹಾರ, ಪ್ರವಾಸ ಹಾಗೂ ಶಾಲೆಗಳಲ್ಲಿ ಸಾಂಸ್ಕೃತಿಕ ಹಾಗೂ ಕ್ರೀಡಾ ಕಾರ್ಯಕ್ರಮಗಳನ್ನು ಯೋಜಿಸಿ ಸಂಯೋಜಿಸುವ ಕಾರ್ಯವನ್ನು ನಡೆಸಬಹುದಾಗಿದೆ.

ಒಟ್ಟಾರೆ ನಮ್ಮ ಅಧ್ಯಯನವು ಅಧ್ಯಯನ ನಡೆಸಿದ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಶಾಲೆಗಳನ್ನು ಮಾದರಿ ಮಾಡುವಲ್ಲಿ ನಿಮ್ಮ ಹಾಗೂ ಪಂಚಾಯಿತಿಯ ಪಾತ್ರವೇನು ಎಂಬುದನ್ನು ಎಲ್ಲಾ ಭಾಗೀದಾರರೊಂದಿಗೆ ಕೇಂದ್ರೀಕೃತ ಗುಂಪು ಚರ್ಚೆ ಮೂಲಕ ಪಡೆದ ಸಲಹೆಗಳು ಹಾಗೂ ಅಧ್ಯಯನಗಳ ಮೂಲಕ ಪಡೆದ ಒಳಹುಗಳನ್ನು ಇಲ್ಲಿ ಒಟ್ಟು ಗೂಡಿಸಿ ವಿಶ್ಲೇಣೆಯನ್ನು ಇಲ್ಲಿ ನೀಡಲಾಗಿದೆ,

ನಾಗರಿಕ ಸೌಕರ್ಯ ಸಮಿತಿಯು ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಗುಣಾತ್ಮಕ ಶಾಲಾ ಶಿಕ್ಷಣವನ್ನು ಖಚಿತಪಡಿಸುವ ನಿಟ್ಟಿನಲ್ಲಿ ಎಸ್.ಡಿ.ಎಂ.ಸಿ ಗಳಿಗೆ ಎಲ್ಲಾ ರೀತಿಯ ಬೆಂಬಲ ಸಹಕಾರ ಮತ್ತು ಉತ್ತೇಜನವನ್ನು ನೀಡಬೇಕಾಗಿದೆ. ಇದೇ ರೀತಿಯಲ್ಲಿ ಎಸ್.ಡಿ.ಎಂ.ಸಿಗಳು ತಾವು ರಚಿಸುವ ಶಾಲಾಭಿವೃದ್ಧಿಯ ಕ್ರೀಯಾ ಯೋಜನೆಗಳನ್ನು ಸಿ.ಇ.ಸಿ.ಯಗಳು ಅನುಷ್ಠಾನಗೊಳಿಸಲು ಪೂರಕ ಬೆಂಬಲ ನೀಡುವುದು. ಜೊತೆಗೆಪ್ರತಿ ೩ ತಿಂಗಳಿಗೊಮ್ಮೆ ಸಿ.ಇ.ಸಿಯು ಸಮನ್ವಯ ಸಭೆಯಲ್ಲಿ ಪಾಲ್ಗೊಂಡು ಶೈಕ್ಷಣಿಕ ಅಭಿವೃದ್ಧಿಯ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿ, ತೀರ್ಮಾನ ಕೈಗೊಳ್ಳುವುದು. ಶಾಲೆಗೆ ಬೇಕಾದ ಅಗತ್ಯಗಳನ್ನು ಪಂಚಾಯಿತಿಯ ಗಮನಸೆಳೆಯುವುದರ ಮೂಲಕ ಪಂಚಾಯಿತಿ ವ್ಯಾಪ್ತಿಯಲ್ಲಿನ ಎಲ್ಲಾ ಮಕ್ಕಳಿಗೆ ಗುಣಾತ್ಮಕ ಶಾಲಾ ಶಿಕ್ಷಣ ಸಿಗುವುದನ್ನು ಖಾತರಿಪಡಿಸಿಕೊಳ್ಳಬೇಕಾಗಿದೆ. ಈ ಹಿನ್ನಲೆಯಲ್ಲಿ ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಪರಸ್ಪರ ಅನ್ಯೋನ್ಯತೆ ಮತ್ತು ಸಹಕಾರದಿಂದ ಕೆಲಸ ನಿರ್ವಹಿಸಬೇಕಾಗಿದೆ. ಶಾಲಾ ವಯಸ್ಸಿನ ಎಲ್ಲ ಮಕ್ಕಳ ಶಾಲೆಗೆ ಸೇರ್ಪಡೆಯನ್ನು ಖಚಿತಪಡಿಸಿಕೊಳ್ಳುವುದು. ಶಾಲಾ ಕಟ್ಟಡಗಳು ಮತ್ತು ಆಟದ ಮೈದಾನಗಳ ನಿರ್ವಹಣೆ, ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳ ನಿಯಮಿತ ಹಾಜರಾತಿಯ ಮೇಲೆ ವೀಕ್ಷಣ ಪ್ರಕ್ರಿಯೆ ಮತ್ತು ಸಂಬಂಧಿಸಿದವರಿಗೆ ವರದಿ ಸಲ್ಲಿಸುವುದು. ಎಲ್ಲಾ ಮಕ್ಕಳ ಶಾಲಾ ಸೇರ್ಪಡೆ ಹಾಗೂ ಶಾಲೆ ಬಿಡುವುದನ್ನು ತಪ್ಪಿಸಲು ಪ್ರಚಾರ. ಶಾಲೆ ಬಿಡುವ ಮಕ್ಕಳ ಸ್ಥಾನಮಾನವನ್ನು ಅಂದಾಜು ಮಾಡುವುದು ಮತ್ತು ಅದನ್ನು ತಪ್ಪಿಸಲು ಸೂಕ್ತ ಕ್ರಮ ತೆಗದುಕೊಳ್ಳುವುದು. ಉದ್ದೇಶಿತ ವಿದ್ಯಾರ್ಥಿ ಸಮೂಹಕ್ಕೆ ಅಧ್ಯಯನ ಸಾಮಗ್ರಿ ವಿತರಣೆಯಲ್ಲಿ ತಾಲ್ಲೂಕು ಪಂಚಾಯಿತಿಗೆ ಸಹಕರಿಸುವುದು. ಊರಿನ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗುವುದು, ಶಾಲೆಗೆ ನಿರಂತರವಾಗಿ ಹಾಜರಾಗುವುದು. ಮತ್ತು ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯುವಂತೆ ಮಾಡುವುದು ಸಮಾಜದ ಎಲ್ಲಾ ಜನರ ಕರ್ತವ್ಯವಾಗಿದೆ ಹಾಗೂ ಭವಿಷ್ಯದಲ್ಲಿ ಉತ್ತಮ ಪೀಳಿಗೆಯ ನಿರ್ಮಾಣಕ್ಕೆ ಇದು ಅನಿವಾರ್ಹವಾಗಿದೆ. ಇದಕ್ಕಾಗಿ ನಾವೇನು ಮಾಡಬಹುದು ಎಂಬುದನ್ನು ಚಿಂತಿಸಬೇಕಾಗಿದೆ. ಊರಿನಲ್ಲಿ ಪ್ರಾಥಮಿಕ ಶಾಲೆ ಇಲ್ಲ ಎಂದಾದರೆ ಅದು ಏಕೆ ಎಂಬುದನ್ನು ಎಲ್ಲರು ತಿಳಿದುಕೊಳ್ಳಬೇಕು. ಊರಿಗೆ ತಕ್ಷಣ ಒಂದು ಶಾಲೆಯನ್ನು ಮಂಜೂರು ಮಾಡಿಸಿಕೊಳ್ಳಬೇಕು. ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಈ ಕುರಿತು ಬೇಡಿಕೆ ಸಲ್ಲಿಸಿ ಗ್ರಾಮ

ಪಂಚಾಯಿತಿಯಲ್ಲಿ ಈ ಕುರಿತು ನಿರ್ಣಯ ಮಾಡಿಸಿ ಮೇಲುಹಂತಕ್ಕೆ ಬೇಡಿಕೆಯನ್ನು ಕಳುಹಿಸಿಕೊಡಬೇಕು. ಗಂಡಿರಲಿ ಹೆಣ್ಣಿರಲಿ ಆರು ವರ್ಷ ತುಂಬಿದ ಪ್ರತಿಯೊಂದು ಮಗು ಶಾಲೆಗೆ ದಾಖಲಾಗಿದೆಯೆ ಅನ್ನುವುದನ್ನು ನೋಡಬೇಕು. ಇಲ್ಲ ಎಂದಾದರೆ ಶಾಲೆಗೆ ದಾಖಲಾಗದ ಅಥವಾ ಶಾಲೆಗೆ ಕ್ರಮಬದ್ಧವಾಗಿ ಹಾಜರಾಗದ ಮತ್ತು ಶಾಲೆಬಿಟ್ಟ ಮಕ್ಕಳ ಹೆಸರುಗಳನ್ನು ತಿಳಿದುಕೊಂಡು ಅಂತಹ ಮಕ್ಕಳ ಮನೆಗೆ ಭೇಟಿ ನೀಡಿ ಅವರೇಕೆ ಶಾಲೆಗೆ ಬರುತ್ತಿಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ಈ ಕಾರ್ಯದಲ್ಲಿ ಶಿಕ್ಷಕರ ನೆರವನ್ನು ಪಡೆದುಕೊಳ್ಳಬೇಕು. ಅಂತಹ ಮಕ್ಕಳ ಹೆತ್ತವರು ಹಾಗೂ ಪೋಷಕರಿಗೆ ಮಕ್ಕಳ ವಿದ್ಯಾಭ್ಯಾಸವು ಅವರ ಭವಿಷ್ಯಕ್ಕೆ ಎಷ್ಟು ಮುಖ್ಯ ಎಂಬುದನ್ನು ಮನವರಿಕೆ ಮಾಡಬೇಕು. ಅವರು ಮಕ್ಕಳನ್ನು ಶಾಲೆಗೆ ಕಳುಹಿಸದೆ ಇರಲು ಇರುವ ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದು ಸಾಧ್ಯವಿದೆ ಉದಾಹರಣೆಗೆ ಶಾಲೆಗೆ ಬರುವ ಹೆಣ್ಣು ಮಕ್ಕಳಿಗೆ ರಕ್ಷಣೆ ಅಗತ್ಯವಾದರೆ ಅದಕ್ಕೆ ಸ್ವಯಂ ಸೇವಕರ ವ್ಯವಸ್ಥೆಯನ್ನು ಮಾಡಬಹುದು. ತಂದೆ ತಾಯಿ ಕೆಲಸಕ್ಕೆ ಹೋದಾಗ ಮನೆಯ ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿಯಿಂದಾಗಿ ಆರು ವರ್ಷ ತುಂಬಿದ ಮಕ್ಕಳು ಶಾಲೆಗೆ ಬರದಿದ್ದರೆ ಶಾಲೆಯ ಹತ್ತಿರದಲ್ಲಿ ಒಂದು ಅಂಗನವಾಡಿ ಸ್ಥಾಪಿಸಲು ಕ್ರಮ ಕೈಗೊಳ್ಳಬಹುದು. ಈ ಕುರಿತು ವಾರ್ಡ್ ಹಾಗೂ ಗ್ರಾಮ ಸಭೆಗಳಲ್ಲಿ ಬೇಡಿಕೆ ಸಲ್ಲಿಸಿ ಗ್ರಾಮ ಪಂಚಾಯಿತಿಯ ಗಮನ ಸೆಳೆಯಬಹುದು.

ಎಲ್ಲಾ ಪೋಷಕರು ಶಿಕ್ಷಣದ ಅಗತ್ಯ ಹಾಗೂ ಮಹತ್ವವನ್ನು ತಿಳಿದಿಲ್ಲ. ಇದಕ್ಕಾಗಿ ಪಂಚಾಯತಿ ಸದಸ್ಯರು ತಮ್ಮ ಪರಿಸರದ ಜನರಿಗೆ ಪ್ರೇರಣೆ ಹಾಗೂ ತಿಳುವಳಿಕೆ ನೀಡಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು. ಈ ಕಾರ್ಯಕ್ರಮಗಳಲ್ಲಿ ಮಕ್ಕಳನ್ನು ಸರಿಯಾದ ವಯಸ್ಸಿನಲ್ಲಿ ಶಾಲೆಗೆ ಸೇರಿಸುವ ಮತ್ತು ನಿಯಮಿತವಾಗಿ ಶಾಲೆಗೆ ಕಳಿಸಬೇಕಾದ ಅಗತ್ಯವನ್ನು ತಿಳಿಹೇಳಬೇಕು. ವಿದ್ಯಾಭ್ಯಾಸ ಇಲ್ಲದೇ ಹೋದರೆ ಮಕ್ಕಳ ಭವಿಷ್ಯ ಏನಾಗುತ್ತದೆ ಎಂಬುದನ್ನು ಮನವರಿಕೆ ಮಾಡಬೇಕು.

ಶಾಲೆಗೆ ಶಿಕ್ಷಕರು ಕ್ರಮವಾಗಿ ಬರುತ್ತಿಲ್ಲ ಎಂದಾದರೆ ಅದಕ್ಕೆ ಕಾರಣಗಳನ್ನು ತಿಳಿಯಬೇಕು. ಉದಾಹರಣೆಗೆ ಶಾಲೆಯಲ್ಲಿ ಶಿಕ್ಷಕರ ಹುದ್ದೆ ಖಾಲಿ ಇದೆಯೇ? ಹುದ್ದೆ ತುಂಬಲಾಗಿದಿಯೇ? ಶಿಕ್ಷಕರು ದೀರ್ಘಾವಧಿ ರಜೆಯಲ್ಲಿದ್ದಾರೆಯೇ? ಇಂತಹ ಕಾರಣಗಳಿಗೆ ಜಿಲ್ಲಾ ಪಂಚಾಯಿತಿ ಮತ್ತು ಶಿಕ್ಷಣಾಧಿಕಾರಿಗಳನ್ನು ಸಂಪರ್ಕಿಸಬಹುದು. ಗ್ರಾಮ ಪಂಚಾಯಿತಿ ವ್ಯಾಪ್ತಿಯಶಿಕ್ಷಕರ ಕೊರತೆ ಇರುವ ಶಾಲೆಗಳಿಗೆ ಹೆಚ್ಚಿನ ಶಿಕ್ಷಕರಿರುವ ಶಾಲೆಗಳಿಂದ ಶಿಕ್ಷಕರನ್ನು ಪಡೆಯಲು ಪ್ರಯತ್ನಿಸಬಹುದು. ಮಂಜೂರಾಗಿರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಖಚಿತ ಪಡಿಸಿಕೊಳ್ಳಬಹುದು. ಇಲಾಖೆಯ ಹಲವು ಕಾರ್ಯಕ್ರಮ, ಯೋಜನೆಗಳಲ್ಲಿ ನೀಡಲಾಗುವ ಶಿಕ್ಷಕರ ಹುದ್ದೆಗಳನ್ನು ಶಾಲೆಗಳಿಗೆ ಪಡೆಯಲು ಪ್ರಯತ್ನಿಸಬಹುದು. ಶಿಕ್ಷಕರು ಗೈರು ಹಾಜರಾಗುತ್ತಿದ್ದರೆ ಅದಕ್ಕೆ ಕಾರಣಗಳನ್ನು ತಿಳಿದು. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಅವರಿಗೆ ವಾಸಿಸಲು ಮನೆ ಇದಿಯೆ, ಊರಿನಲ್ಲಿ ವಾಸ ಮಾಡದೇ ಇರುವ ಶಿಕ್ಷಕರಿಗೆ ಸೂಕ್ತ ಪ್ರಯಾಣ ಸೌಕರ್ಯ ಇದಿಯೆ ಇತ್ಯಾದಿಗಳನ್ನು ತಿಳಿದುಕೊಂಡು, ಅವರಿಗೆ ಊರಿನಲ್ಲಿ ಮನೆ ಒದಗಿಸಿಕೊಡುವುದರ ಮೂಲಕ ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವಿದೆ.

ಶಾಲೆಯಲ್ಲಿ ಶಿಕ್ಷಕರು ಕಡಿಮೆ ಇದ್ದು ಮಕ್ಕಳ ಸಂಖ್ಯೆ ಜಾಸ್ತಿ ಇದೆ ಎಂದಾದರೆ ಮುಂದಿನ ಕ್ರಮಗಳನ್ನು ಕೈಗೊಳ್ಳಬಹುದು. ಶಾಲೆಯನ್ನು ಎರಡು ಪಾಳಿಗಳಲ್ಲಿ ನಡೆಸುವುದು. ಅದಕ್ಕೆ ಅವೇ ತರಗತಿ

ಕೊರತಡಿಗಳು, ಅದೇ ಶಿಕ್ಷಕರನ್ನು ಬಳಿಸಿಕೊಳ್ಳಬಹುದು. ಇದಕ್ಕಾಗಿ ಶಿಕ್ಷಕರಿಗೆ ಒಂದಕ್ಕಿಂತ ಹೆಚ್ಚು ವಿಷಯಗಳ ಬೋಧನೆಯಲ್ಲಿ ತರಬೇತಿಯನ್ನು ಒದಗಿಸಬೇಕು. ತರಬೇತಿ ಹೊಂದಿರುವ ಶಿಕ್ಷಕರ ಕೊರತೆ ಇದ್ದರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಊರುಗಳಲ್ಲಿರುವ ವಿದ್ಯಾವಂತ ಯುವಕ ಯುವತಿಯರನ್ನು ಸ್ವಯಂ ಸೇವಕರಾಗಿ ನೇಮಿಸಬಹುದು.

ನಿಧಾನವಾಗಿ ಕಲಿಯುವ ಮಕ್ಕಳು ಶಾಲೆಯನ್ನು ಬಿಡದಂತೆ ತಡೆಯಲು ಅವರಿಗೆ ಪರಿಹಾರಾತ್ಮಕ ಬೋಧನೆಗೆ ಅವಕಾಶಗಳನ್ನು ಕಲ್ಪಿಸಬೇಕು. ಇಲ್ಲವೆಂದಾದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ)ಗಳು ಇಂತಹ ಅವಕಾಶಗಳನ್ನು ಕಲ್ಪಿಸಬಹುದು. ಇದಕ್ಕೆ ಗ್ರಾಮ ಪಂಚಾಯಿತಿ ಸಹಕರಿಸಬೇಕು. ಇವುಗಳೊಟ್ಟಿಗೆ ಎಲ್ಲಾ ಮಕ್ಕಳಿಗೂ ಶಾಲೆಯ ಪ್ರಾರಂಭದ ದಿನವೇ ನೋಟು ಪುಸ್ತಕ, ಸ್ಲೇಟು, ಪಠ್ಯ ಪುಸ್ತಕಗಳನ್ನು ಒದಗಿಸಬೇಕು. ಇಲ್ಲ ಎಂದಾದರೆ ಇದರ ಬಗ್ಗೆ ಗ್ರಾಮ ಪಂಚಾಯಿತಿ ಪ್ರಯತ್ನಿಸಬೇಕು. ಶಿಕ್ಷಣ ಇಲಾಖೆಯಿಂದ ಉಚಿತ ಪಠ್ಯ ಪುಸ್ತಕಗಳನ್ನು ತಂದು ವಿತರಿಸುವಂತೆ ಶಿಕ್ಷಕರನ್ನು ಮತ್ತು ಎಸ್.ಡಿ.ಎಂ.ಸಿ ಗಳನ್ನು ಕೋರಬಹುದು. ಸ್ಲೇಟು, ನೋಟು ಪುಸ್ತಕ ಮುಂತಾದವುಗಳನ್ನು ಒದಗಿಸುವಲ್ಲಿ ಪೋಷಕರು ಊರಿನ ದಾನಿಗಳ ಸಹಾಯ ಪಡೆಯಬಹುದು. ಹಳೆಯ ಪಠ್ಯಪುಸ್ತಕಗಳನ್ನು ಸಂಗ್ರಹಿಸಿ ಮಕ್ಕಳಿಗೆ ಒದಗಿಸಬಹುದು.

ಶಿಕ್ಷಕರಲ್ಲಿ ಸಾಕಷ್ಟು ಬೋಧನಾ-ಕಲಿಕಾ ಸಾಮಾಗ್ರಿ ಇದೆಯೇ ಎಂಬುದನ್ನು ನೋಡಬೇಕು. ಬೋಧನಾ - ಕಲಿಕಾ ಸಾಮಾಗ್ರಿ ಅಗತ್ಯ ಪ್ರಮಾಣದಲ್ಲಿರದಿದ್ದಲ್ಲಿ ಶಿಕ್ಷಕರಿಗೆ ತರಬೇತಿ ನೀಡಬಹುದು. ಅವರು ಸೃಜನಾತ್ಮಕವಾಗಿ ಕಡಿಮೆ ವಚ್ಚದ ಅಥವಾ ವೆಚ್ಚ ರಹಿತ ಬೋಧನಾ ಸಾಮಾಗ್ರಿಗಳನ್ನು ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಉಪಯೋಗಿಸಿ ತಯಾರಿಸುವಂತೆ ಪ್ರೋತ್ಸಾಹಿಸಬಹುದು. ಸ್ಥಳೀಯ ಕುಶಲ ಕರ್ಮಿಗಳು ಶಾಲೆಗೆ ಬಂದು ಅಂತಹ ವಸ್ತುಗಳನ್ನು ತಯಾರಿಸಲು ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸಹಾಯ ಮಾಡುವಂತೆ ಪ್ರೋತ್ಸಾಹಿಸಬೇಕು. ಡಯಟ್‌ನಂತಹ ಸಂಸ್ಥೆಗಳ ಸಹಾಯವನ್ನು ಪಡೆದು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು. ಈ ರೀತಿಯ ತರಬೇತಿಯನ್ನು ಶಿಕ್ಷಣಕ್ಕಾಗಿಯೇ ಮೀಸಲಾದ ಕೆಲವು ಸ್ವಯಂ ಸೇವಾ ಸಂಸ್ಥೆಗಳೂ ಉಚಿತವಾಗಿ ನೀಡುತ್ತವೆ. ಪಂಚಾಯತ್ ಪ್ರದೇಶದಲ್ಲಿ ಅಂತಹ ಸಂಸ್ಥೆಗಳಿದ್ದರೆ ಅದರ ಲಾಭವನ್ನು ಪಡೆದುಕೊಳ್ಳಬಹುದು.

ಶಾಲೆಗಳಿಗೆ ಶಿಕ್ಷಣ ಇಲಾಖೆಯಿಂದ ಸರಬರಾಜಾಗುವ ವಸ್ತುಗಳು ಸರಿಯಾಗಿ ಬಂದಿವೆಯೇ? ಅವುಗಳನ್ನು ಪೂರ್ಣವಾಗಿ ಬಳಸಲಾಗುತ್ತಿದೆಯೆ? ಎಂಬುದನ್ನು ಕಾಲಕಾಲಕ್ಕೆ ಗಮನಿಸುವುದು ಹಾಗೂ ಇಂತಹ ವಸ್ತುಗಳು ಶಾಲೆಗೆ ಸರಬರಾಜು ಆಗದಿದ್ದಲ್ಲಿ ಈ ಬಗ್ಗೆ ಸೂಕ್ತ ಪರಿಶೀಲನೆ ನಡೆಸಿ ಅವು ಶಾಲೆಗೆ ತಲುಪುವಂತೆ ಮಾಡಬೇಕು. ಶಾಲೆಗೆ ವಸ್ತುಗಳು ಸರಬರಾಜು ಆಗಿದ್ದಲ್ಲಿ ಅವುಗಳು ಪೂರ್ತಿಯಾಗಿ ಬಳಕೆಯಾಗುವಂತೆ ನೋಡಿಕೊಳ್ಳಬೇಕು. ಅವುಗಳ ಬಳಕೆಗೆ ಶಿಕ್ಷಕರಿಗೆ ಏನಾದರೂ ತರಬೇತಿ ಅಗತ್ಯವಿದ್ದಲ್ಲಿ ಅದನ್ನು ಒದಗಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಈ ದಿಸೆಯಲ್ಲಿ ಮುಖ್ಯ ಶಿಕ್ಷಕರಿಗೆ ಹೆಚ್ಚಿನ ಅಧಿಕಾರ ನೀಡಬಹುದು.

ಗ್ರಾಮ ಪಂಚಾಯತ್ ವ್ಯಾಪ್ತಿಯ ಶಾಲೆಗಳಿಗೆ ಸೂಕ್ತ ಕಟ್ಟಡ, ಸ್ಥಳ ಇದೆಯೇ ಎಂಬುದನ್ನು ಪರಿಶೀಲಿಸಿ ಇಲ್ಲ ಎಂದಾದಲ್ಲಿ ಪಂಚಾಯಿತಿ ಕಟ್ಟಡ, ದಾನಿಗಳ ಮನೆ, ದೇವಸ್ಥಾನ, ಮಸೀದಿಗಳ ಆವರಣ ಮುಂತಾದ ಯಾವುದಾದರೂ ಸಾರ್ವಜನಿಕ ಸ್ಥಳವನ್ನು ಪ್ರಾರಂಭದಲ್ಲಿ ನೀಡಲು ಸಾಧ್ಯವೆ

ಎಂಬುದನ್ನು ಪರಿಶೀಲಿಸಬೇಕು, ಇದು ಆಗದಿದ್ದರೆ ತಾತ್ಕಾಲಿಕ ಕಟ್ಟಡ ಆಗುವವರೆಗೆ ಶೆಡ್‌ಗಳನ್ನು ಒದಗಿಸಬಹುದು. ಅಥವಾ ಮರದ ನೆರಳಿನಲ್ಲಿ ಬಯಲು ತರಗತಿಗಳನ್ನೂ ಪ್ರಾರಂಭಿಸಲು ಯೋಚಿಸಬಹುದು. ಶಾಲೆಗೆ ಕಟ್ಟಡವಿದ್ದಲ್ಲಿ ಅದು ಯಾವ ಸ್ಥಿತಿಯಲ್ಲಿದೆ? ಅದಕ್ಕೆ ದುರಸ್ತಿ, ಸುಣ್ಣ ಬಣ್ಣ ಆಗಬೇಕೆ? ಅಲ್ಲಿ ನೀರು ಸರಬರಾಜು ಇದಿಯೆ? ಶುದ್ಧ ಕುಡಿಯುವ ನೀರು ಸಿಗುತ್ತಿದೆಯೆ? ಶೌಚಾಲಯ ವ್ಯವಸ್ಥೆ ಇದೆಯೆ? ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಇದೆಯೆ? ಶಾಲೆಯ ರಕ್ಷಣೆಗಾಗಿ ಆವರಣ ಗೋಡೆ ಇದೆಯೆ? ಸಾಕಷ್ಟು ಗಾಳಿ ಬೆಳಕಿನ ವ್ಯವಸ್ಥೆ ಇದೆಯೆ? ಕುಳಿತಕೊಳ್ಳಲು ಸಾಕಷ್ಟು ಸ್ಥಳಾವಕಾಶ ಇದೆಯೆ? ಮಕ್ಕಳಿಗೆ ಆಟದ ಮೈದಾನ ಇದೆಯೆ?ಇಲ್ಲವೆಂದಾದಲ್ಲಿ ಈ ಸೌಲಭ್ಯಗಳನ್ನು ಒದಗಿಸಲು ಗ್ರಾಮ ಪಂಚಾಯಿತಿ ಸಹಾಯ ಮಾಡಬಹುದು. ಇದರಿಂದ ಹೆಚ್ಚು ಮಕ್ಕಳು ಶಾಲೆಗೆ ಬರುವಂತಾಗುತ್ತದೆ. ಹಣದ ಅಗತ್ಯವಿದ್ದಲ್ಲಿ ಉದ್ಯೋಗ ಖಾತರಿ ಯೋಜನೆಯಂತಹ ಸರಕಾರಿ ಯೋಜನೆಗಳು. ಸಂಸದರು ಮತ್ತು ಶಾಸಕರ ಸ್ಥಳೀಯ ಅಭಿವೃದ್ಧಿ ನಿಧಿಯಿಂದ ನೆರವು ಪಡೆಯಬಹುದು. ದಾನಿಗಳಿಂದ ನೆರವು ಪಡೆಯಲು ನೆರವಾಗಬಹುದು. ಕೆಲವು ಕಡೆಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ ನೆರವು ನೀಡುವ ದತ್ತಿನಿಧಿಗಳು, ಟ್ರಸ್ಟ್‌ಗಳು ಇದಿಯೇ ಎಂಬುದನ್ನು ತಿಳಿದುಕೊಂಡ ಅವರಿಂದ ನೆರವು ಪಡೆದುಕೊಳ್ಳುವುದು.

ಶಾಲೆಯ ಕೋಣೆಗಳು ಆಕರ್ಷಕವಾಗಿವೆಯೆ? ಮಕ್ಕಳು ಕಲಿಯಲು ಅದೊಂದು ಸಂತೋಷದಾಯಕ ಪರಿಸರ ಹೊಂದಿದೆಯೆ? ಅಲ್ಲಿ ಕರಿ ಹಲಗೆ ಇದೆಯೆ? ಅಕಸ್ಮಾತ್ ಇಲ್ಲವೆಂದಾದಲ್ಲಿ ತರಗತಿಗಳನ್ನು ಆಕರ್ಷಕವಾಗಿಡಲು ಶಿಕ್ಷಕರಿಗೆ ನೆರವಾಗುವುದು. ಬೇರೆ ಬೇರೆ ರೀತಿಯ ಚಿತ್ರಪಟಗಳನ್ನು ಗೋಡೆಗಳಲ್ಲಿ ತೂಗು ಹಾಕಿ. ತರಗತಿಗಳಿಗೆ ಬಣ್ಣ ಹಾಕಿಸಿ ಅಲಂಕರಿಸಿ, ಇದೊಂದು ಸುಲಭದ ಕೆಲಸ, ಮಕ್ಕಳನ್ನು ಊರವರನ್ನು ಇದರಲ್ಲಿ ತೊಡಗಿಸಿಕೊಳ್ಳಬಹುದು. ಕರಿಹಲಗೆ ಇಲ್ಲದಿದ್ದಲ್ಲಿ ಒಂದು ಗೋಡೆಯನ್ನು ಕಪ್ಪು ಮಾಡಿಸಿ. ಮೂರು ಅಡಿ ಎತ್ತರದ ಮಕ್ಕಳು ತಮ್ಮ ಬರವಣಿಗೆ ಅಭ್ಯಾಸ ಮಾಡಲು ಅನುಕೂಲವಾಗುವಂತೆ ಕಪ್ಪು ಗೋಡೆಯನ್ನು ಒದಗಿಸಿ. ಇದು ಮಧ್ಯಪ್ರದೇಶದ ಶಿಕ್ಷಕರ ಸಾಮಾರ್ಥ್ಯಾವೃದ್ಧಿ ಯೋಜನೆಯಲ್ಲಿ ಯಶಸ್ವಿಯಾದ ಅಂಶವಾಗಿದೆ.

ಶಾಲೆಯಲ್ಲಿ ಮಧ್ಯಾಹ್ನದ ಬಿಸಿಊಟವನ್ನು ಸರಿಯಾಗಿ ನೀಡಲಾಗುತ್ತಿದಿಯೇ? ಎಂಬುದನ್ನು ಪರಿಶೀಲಿಸಬೇಕು. ಇಲ್ಲವೆಂದಾದಲ್ಲಿ ಮುಖ್ಯ ಶಿಕ್ಷಕರೊಂದಿಗೆ ಸಮಸ್ಯೆಗಳ ಕುರಿತು ಚರ್ಚಿಸಿ. ಉತ್ತಮಗುಣ ಮಟ್ಟದ ಅಕ್ಕಿ.ಬೇಳೆ, ತರಕಾರಿ ಇತ್ಯಾದಿಗಳನ್ನು ಶಾಲೆಗೆ ಸರಿಯಾಗಿ ಸರಬರಾಜು ಆಗುವಂತೆ ನೋಡಿಕೊಳ್ಳಿ. ದಾನಿಗಳ ನೆರವಿನಿಂದ ಮಕ್ಕಳಿಗೆ ಹೆಚ್ಚುವರಿ ಪೂರಕ ಪೌಷ್ಟಿಕ ಆಹಾರವನ್ನು ಒದಗಿಸಲು ಸಾಧ್ಯವಿದೆ. ಕೆಲವು ಊರುಗಳಲ್ಲಿ ಊರವರು ಸಾಧ್ಯವಾದಗಲೆಲ್ಲಾ ಮಕ್ಕಳಿಗೆ ಹಾಲು, ತರಕಾರಿ ಇತ್ಯಾದಿಗಳನ್ನು ನೀಡುತ್ತಿದ್ದಾರೆ. ಇಂತಹ ಕಾರ್ಯವನ್ನು ಪಂಚಾಯತಿ ಸದಸ್ಯರು ಪ್ರೋತ್ಸಾಹಿಸಬಹುದು. ಶಾಲೆಯ ವೇಳಾಪಟ್ಟಿಯು ಮಕ್ಕಳನ್ನು ಶಾಲೆಗೆ ಕಳುಹಿಸಲು ತೊಡಕಾಗಿದೆಯೆ? ಎಂಬುದನ್ನು ನೋಡಿ. ಹೀಗಿದ್ದಲ್ಲಿ ಶಾಲೆಯ ವೇಳೆಯನ್ನು ಸಡಿಲಗೊಳಿಸಿ ಹೆಚ್ಚು ಮಕ್ಕಳು ಶಾಲೆಗೆ ಬರುವಂತೆ ಮಾಡಲು ಇರುವ ಅವಕಾಶಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬಹುದು.

ಶಾಲೆಯ ಇಡೀ ವರ್ಷ ವೇಳಾಪಟ್ಟಿಯು ವ್ಯವಸಾಯ ಆಧಾರಿತ ಪ್ರದೇಶದ ಕೃಷಿ ವೇಳಾಪಟ್ಟಿಯೊಂದಿಗೆ ಜೊತೆಗೂಡುವುದಿಲ್ಲವೆ? ಅಂದರೆ ಸುಗ್ಗಿಯ ಕಾಲದಲ್ಲಿ ಮಕ್ಕಳ ನೆರವು ಬೇಕಾದಾಗ ಅವರು ಶಾಲೆಯಲ್ಲಿರಬೇಕಾಗುತ್ತಿದೆಯೇ? ಬೇಸಾಯದ ಕೆಲಸಗಳಿಲ್ಲದ ವೇಳೆ ಶಾಲೆ ಮುಚ್ಚಲಾಗಿದೆಯೇ? ಎಂಬುದನ್ನು ನೋಡಿ. ಹೌದೆಂದಾದರೆ ಜಿಲ್ಲಾ ಪಂಚಾಯಿತಿಯೊಂದಿಗೆ

ಸಮಾಲೋಚಿಸಿ ಶಾಲೆಯ ವಾರ್ಷಿಕ ವೇಳಾಪಟ್ಟಿಯನ್ನು ಅಗತ್ಯಕ್ಕೆ ತಕ್ಕಂತೆ ಬದಲಾಯಿಸಲು ಸಾಧ್ಯವಿದೆ. ಆಗ ಶಾಲೆಯ ವೇಳಾಪಟ್ಟಿಯು ಬೇಸಾಯದ ವೇಳಾಪಟ್ಟಿಯೊಂದಿಗೆ ಹೆಚ್ಚು ಹೊಂದಿಕೊಳ್ಳುತ್ತದೆ. ಇದರಿಂದ ಹೆಚ್ಚು ಗ್ರಾಮೀಣ ಮಕ್ಕಳು ಶಾಲೆಗೆ ಬರಲು ಸಾಧ್ಯವಾಗುತ್ತದೆ.

ಮಕ್ಕಳ ಆರೈಕೆ, ಆರೋಗ್ಯ ಮತ್ತು ಶಾಲಾ ಶಿಕ್ಷಣ ನಮ್ಮ ಜವಾಬ್ದಾರಿಯಲ್ಲ ಎಂಬ ಭಾವನೆ ಇದೆ. ಅಲ್ಲದೆ ಗ್ರಾಮ ಪಂಚಾಯಿತಿಯಲ್ಲಿ ಶಾಲಾ ಶಿಕ್ಷಣದ ನಿರ್ವಹಣೆ ಯಾರದೆಂಬುದರ ಸೂಕ್ತ ಮಾಹಿತಿ ಇಲ್ಲದಿರುವುದನ್ನು ನೋಡಬಹುದು. ಇದು ತಪ್ಪು. ಕಾನೂನುಬದ್ಧವಾಗಿ ಮಕ್ಕಳ ಆರೈಕೆ, ಆರೋಗ್ಯ ಮತ್ತು ಶಾಲಾ ಶಿಕ್ಷಣ ಗ್ರಾಮ ಪಂಚಾಯಿತಿ ನಿರ್ವಹಿಸಬೇಕಾದ ಪ್ರಮುಖ ಕರ್ತವ್ಯವೆಂದು ತಿಳಿಯುವುದು ಬಹಳ ಮುಖ್ಯ.ಗ್ರಾಮ ಪಂಚಾಯಿತಿ ಸ್ಥಳೀಯ ಸರ್ಕಾರವಾಗಿರುವುದರಿಂದ ಮಕ್ಕಳ ಸರ್ವತೋಮುಖವಾದ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸುವುದು. ಪಂಚಾಯಿತಿ ಮಟ್ಟದಲ್ಲಿ ವಿಶೇಷವಾಗಿ ಮಕ್ಕಳ ಗ್ರಾಮಸಭೆಯನ್ನು ಆಯೋಜಿಸಿ ಮಕ್ಕಳಿಗೆ ಸಂಬಂಧಿಸಿದ ಅಭಿವೃದ್ಧಿ ವಿಚಾರಗಳಲ್ಲಿ ಅವರ ಅಭಿಪ್ರಾಯ ತಿಳಿದು ಯೋಜನೆಗಳಲ್ಲಿ ಅಳವಡಿಸಿಕೊಳ್ಳುವುದು. ಪಂಚಾಯಿತಿಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮೂರು ಸ್ಥಾಯಿ ಸಮಿತಿಗಳನ್ನು ರಚಿಸಿಕೊಳ್ಳಲು ಅವಕಾಶ ಮಾಡಿಕೊಡುವುದು. ಹಾಗೂ ಮಕ್ಕಳ ಆರೈಕೆ, ಆರೋಗ್ಯ ಹಾಗೂ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಗತ್ಯ ಕ್ರಮ ತೆಗೆದುಕೊಳ್ಳುವುದು ಮೂಲ ಸೌಕರ್ಯಗಳ ಸಮಿತಿ (ಸಿ.ಎ.ಸಿ) ಮತ್ತು ಸಾಮಾಜಿಕ ನ್ಯಾಯ ಸಮಿತಿಗಳ ಕೆಲಸವಾಗಿದೆ ಎಂಬುದನ್ನು ಅರಿಯುವುದು. ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಕಾಯ್ದೆಯಲ್ಲಿರುವ ಎಲ್ಲಾ ಅವಕಾಶಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು. ಪ್ರತಿ ಪಂಚಾಯತ್ ಸಭೆಯಲ್ಲಿ ಹಾಗೂ ಗ್ರಾಮ ಸಭೆಗಳಲ್ಲಿ ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಿ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳುವುದರ ಮೂಲಕ ಅನುಷ್ಠಾನಗೊಳಿಸುವುದು. ವರ್ಷದಲ್ಲಿ ಕನಿಷ್ಠ ಒಮ್ಮೆ ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ಏರ್ಪಡಿಸಿ ಅವರಿಗೆ ತಮ್ಮ ಹಕ್ಕುಗಳ ಬಗ್ಗೆ ತಿಳಿಸಿ, ಮುಕ್ತವಾಗಿ ಚರ್ಚಿಸಲು ಅವಕಾಶ ಕಲ್ಪಿಸಿ ಅದಕ್ಕನುಗುಣವಾಗಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು. ಪಂಚಾಯತ್ ಕಾಯ್ದೆಯ ಬಗ್ಗೆ ಸಮಗ್ರ ಮಾಹಿತಿ ಪಡೆಯಲು ಅಗತ್ಯ ತರಬೇತಿಗಳನ್ನು ಆಯೋಜಿಸಲು ಇಲಾಖೆಯನ್ನು ಒತ್ತಾಯಿಸಬೇಕು. ಪಂಚಾಯತ್ ಕಾಯ್ದೆಯ ಬಗ್ಗೆ ಇರುವ ಮಾಹಿತಿ ಕೈಪಿಡಿ/ಸಾಹಿತ್ಯವನ್ನು ಓದಿ ಹೆಚ್ಚಿನ ವಿಷಯ ತೆಗೆದುಕೊಳ್ಳಲು ಪ್ರಯತ್ನಿಸಬೇಕು. ಉದ್ದೇಶಕ್ಕನುಗುಣವಾಗಿ ರಚನೆಯಾಗಿರುವ ಸ್ಥಾಯಿ ಸಮಿತಿಗಳ ಬಗೆಗಿನ ಮಾಹಿತಿಯನ್ನು ಸಾರ್ವಜನಿಕರ ಗಮನಕ್ಕಾಗಿ ಪಂಚಾಯಿತಿಯಲ್ಲಿ ಪ್ರಕಟಿಸುವುದು.

ಶಾಲಾ ಶಿಕ್ಷಣದ ಸಾರ್ವತ್ರೀಕರಣದ ಜವಾಬ್ದಾರಿ ಹೊತ್ತಿರುವ ಮೂಲ ಸೌಕರ್ಯ ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ತನ್ನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳ ಮುಖ್ಯುರುಗಳು ಹಾಗೂ ಎಸ್.ಡಿ.ಎಂ.ಸಿ ಪದಾಧಿಕಾರಿಗಳ ಸಭೆ ಆಯೋಜಿಸಿ ಶೈಕ್ಷಣಿಕ ಪ್ರಗತಿಯನ್ನು ಪರಿಶೀಲಿಸುವುದರ ಮೂಲಕ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಸಿಗುವುದನ್ನು ಖಾತ್ರಿಪಡಿಸಿಕೊಳ್ಳುವುದು. ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳಲ್ಲೂ ಸಿಎಸಿಎ ಭಾಗವಾಗಿ ರಚಿಸಲ್ಪಡುವ ಎಸ್.ಡಿ.ಎಂ.ಸಿಗಳ ಬಗ್ಗೆ ಮಾಹಿತಿ ಪಡೆದು ಸುಸೂತ್ರವಾಗಿ ನಡೆಸಲು ಅಗತ್ಯವಾದ ಸಹಕಾರವನ್ನು ಎಸ್.ಡಿ.ಎಂ.ಸಿಗೆ ನೀಡಬೇಕು. ಪಂಚಾಯಿತಿಗಳು ತಮ್ಮ ವಾರ್ಷಿಕ ಅನುದಾನದಲ್ಲಿ ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕೆ ಅಗತ್ಯಕ್ಕನುಗುಣವಾಗಿ ಹಣವನ್ನು ಒದಗಿಸುವುದರ ಮೂಲಕ ಸಂವಿಧಾನದಲ್ಲಿ ಮೂಲಭೂತ ಹಕ್ಕಾದ ಶಿಕ್ಷಣದ ಹಕ್ಕನ್ನು ಸಾಕಾರಗೊಳಿಸಬೇಕು. ಮಕ್ಕಳ ಈ ಮೂಲಭೂತ ಹಕ್ಕನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸದಸ್ಯರು ಪಂಚಾಯಿತಿಯ ಅನುದಾನದ ಜೊತೆಗೆ ಪಂಚಾಯಿತಿ ಪ್ರದೇಶವನ್ನು

ಪ್ರತಿನಿಧಿಸುವ ತಾಲ್ಲೂಕು ಪಂಚಾಯಿತಿ ಸದಸ್ಯರು, ಜಿಲ್ಲಾ ಪಂಚಾಯಿತಿ ಸದಸ್ಯರು, ವಿಧಾನಸಭಾ ಸದಸ್ಯರು, ಹಾಗೂ ಲೋಕಸಭಾ ಸದಸ್ಯರ ಅನುದಾನಗಳಿಂದ ಗರಿಷ್ಠ ಹಣವನ್ನು ಪಡೆಯಲು ಒತ್ತಾಯಿಸುವುದರ ಮೂಲಕ ನಮ್ಮ ಶಾಲಾ/ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಮಕ್ಕಳಿಗು ಗುಣಾತ್ಮಕ ಶಿಕ್ಷಣ ದೊರಕುವಂತೆ ಮಾಡಲು ಶ್ರಮಿಸಬೇಕು. ಈ ಮೂಲಕ ತನ್ನ ಗ್ರಾಮ ಪಂಚಾಯತಿಯ ಎಲ್ಲಾ ಶಾಲೆಗಳನ್ನು ಮಾದರಿ ಶಾಲೆಯನ್ನಾಗಿ ಪರಿವರ್ತಿಸಲು ಸಾಧ್ಯವಿದೆ.

***

ಅಧ್ಯಾಯ ಐದು

ತೀರ್ಮಾನ ಮತ್ತು ಫಲಿತಗಳು

ಹಿಂದಿನ ಅಧ್ಯಾಯದ ಆಧಾರದಲ್ಲಿ ವ್ಯಾಪಕವಾಗಿ ಮತ್ತು ವಸ್ತು ನಿಷ್ಟವಾಗಿ ಸಂಗ್ರಹಿಸಿದ ಅಭಿಪ್ರಾಯಗಳು ಮತ್ತು ದತ್ತಾಂಶಗಳ ವಿಶ್ಲೇಷಣೆಯ ಮೂಲಕ ಈ ಅಧ್ಯಾಯದಲ್ಲಿ ಕಂಡುಕೊಂಡ ತೀರ್ಮಾನ ಮತ್ತು ಫಲಿತಗಳನ್ನು ಇಲ್ಲಿ ನೀಡಲಾಗಿದೆ.

ಮಾನವ ಹಕ್ಕುಗಳ ಇಂದಿನ ಯುಗದಲ್ಲಿ ಶಿಕ್ಷಣ ಎಲ್ಲ ಮಕ್ಕಳ ಮೂಲಭೂತ ಹಕ್ಕೆಂಬುದು ಸಾರ್ವತ್ರಿಕ ಸತ್ಯ ಈ ಸಾರ್ವತ್ರಿಕ ಸತ್ಯವನ್ನು ಸಾರ್ವತ್ರೀಕರಣಗೊಳಿಸುವ ಪ್ರಯತ್ನಗಳು ಸ್ವಾತಂತ್ರ್ಯ ಪೂರ್ವದಿಂದಲೂ ನಡೆಯುತ್ತಾ ಬಂದಿವೆ. ಇದಕ್ಕೆ ನಿದರ್ಶನವಾಗಿ 1882ರಲ್ಲಿ ಶಿಕ್ಷಣ ಆಯೋಗದ (ಹಂಟರ್ ಆಯೋಗ)ಮುಂದೆ ಹಾಜರಾಗಿ ಸಾಕ್ಷಧಾರಗಳನ್ನು ಒದಗಿಸಿದ ಜ್ಯೋತಿಭಾಪುಲೆಯವರು ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಒತ್ತಾಯಿಸಿದ್ದರು. ಸ್ವತಂತ್ರ ಭಾರತದಲ್ಲಿ ಶಿಕ್ಷಣ ಸಾರ್ವತ್ರೀಕರಣದ ಮಹತ್ವವನ್ನು ಅರಿತ ನಮ್ಮ ಸಂವಿಧಾನ ರಚನಾಕಾರರು ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನಿರ್ದೇಶಕ ತತ್ವಗಳಡಿಯಲ್ಲಿ ಒಂದು ಕಾಲಾಮಿತಿ ಕಾರ್ಯಕ್ರಮವನ್ನಾಗಿ ಸೇರಿಸಿದರು. ಅದರಂತೆ, ಎಲ್ಲ ಮಕ್ಕಳಿಗೆ ಶಾಲಾ ಶಿಕ್ಷಣವನ್ನು ಒದಗಿಸುವ ಗುರಿ 1960ಕ್ಕೆ ಮುಗಿಯಬೇಕಿತ್ತು. ಆದರೆ, ನಮಗೆಲ್ಲಾ ತಿಳಿದಿರುವಂತೆ ಸ್ವಾತಂತ್ರ್ಯ ಬಂದು 65 ವರ್ಷಗಳು ಕಳೆದರೂ ಎಲ್ಲಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುವ ಗುರಿಯನ್ನು ತಲುಪದಿರುವುದರ ಬಗ್ಗೆ ಪ್ರಜ್ಞಾವಂತ ಸಮಾಜ ಆತ್ಮಾವಲೋಕನ ಮಾಡಿಕೊಳ್ಳಬೇಕಾಗಿದೆ.

ಇಂದು ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಬೇಕೆಂಬ ಬೇಡಿಕೆ ಕೇವಲ ರಾಷ್ಟ್ರಗಳಿಗೆ ಮಾತ್ರ ಸೀಮಿತವಾಗದೆ ಒಂದು ಜಾಗತಿಕ ವಿಷಯವಾಗಿದೆ. ಜೊತೆಗೆ, ಮಾನವ ಹಕ್ಕುಗಳ ಅವಿಭಾಜ್ಯ ಅಂಗವಾಗಿರುವ ಈ ಶಿಕ್ಷಣದಹಕ್ಕು ಪ್ರತಿಯೊಂದು ಮಗುವಿಗೂ ಸಿಗಲೇ ಬೇಕೆಂಬ ಕೂಗು ಜಾಗತಿಕ ಮಟ್ಟದಲ್ಲಿ ಗಟ್ಟಿಯಾಗುತ್ತಿದೆ. ಈ ಸಂಬಂಧ ಅಂತರಾಷ್ಟ್ರೀಯ ಮಟ್ಟದಲ್ಲಿ ಹಲವು ಒಪ್ಪಂದಗಳು ಮತ್ತು ಒಡಂಬಡಿಕೆಗಳು ಜಾರಿಗೆ ಬಂದಿವೆ. ಅವುಗಳಲ್ಲಿ ಒಂದು ಮಹತ್ವ ಒಡಂಬಡಿಕೆಯೆಂದರೆ **ವಿಶ್ವಸಂಸ್ಥೆಯ ಮಕ್ಕಳ ಹಕ್ಕುಗಳ ಒಡಂಬಡಿಕೆ**. ಈ ಒಡಂಬಡಿಕೆಯನ್ನು ವಿಶ್ವಸಂಸ್ಥೆಯು ಸದಸ್ಯ ರಾಷ್ಟ್ರಗಳ ಒಪ್ಪಿಗೆಗಾಗಿ 1989ರಲ್ಲಿ ತೆರೆದಿಟ್ಟಾಗ ಭಾರತ ಸರ್ಕಾರವು ಈ ಒಡಂಬಡಿಕೆಯನ್ನು (ಡಿಸೆಂಬರ್ 1992) ಅಂಗೀಕರಿಸಿದೆ. ಈ ಬೆಳವಣಿಗೆಗಳ ಭಾಗವಾಗಿ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಸಾಧಿಸುವ ನಿಟ್ಟಿನಲ್ಲಿ ಅಂತರಾಷ್ಟ್ರೀಯ ಮಟ್ಟದ ಒತ್ತಡಗಳು ಹೆಚ್ಚುತ್ತಿದ್ದು ಭಾರತ ಇದಕ್ಕೆ ಹೊರತಲ್ಲ.

ಇದರ ಜೊತೆ ಜೊತೆಗೆ ಭಾರತದಲ್ಲಿ ನ್ಯಾಯಾಂಗದ ಕ್ರಿಯಾಶೀಲತೆಯಿಂದಾಗಿ ನಿರ್ದೇಶಕ ತತ್ವದ ಅಡಿಯಲ್ಲಿದ್ದ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕನ್ನಾಗಿ ಘೋಷಿಸಿದ ಸರ್ವೋಚ್ಚ ನ್ಯಾಯಲಯವು 1993ರಲ್ಲಿ ಐತಿಹಾಸಿಕ ತೀರ್ಪನ್ನು ನೀಡಿದೆ. ಇಂದು, ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಕಾನೂನುಗಳ ಅನ್ವಯ ಶಿಕ್ಷಣ ಎಲ್ಲ ಮಕ್ಕಳ ಮೂಲಭೂತ ಹಕ್ಕು. ಈ ಮೂಲಭೂತ ಹಕ್ಕನ್ನು ಸಾಕಾರಗೊಳಿಸುವುದು ಪ್ರತಿಯೊಂದು ಸರ್ಕಾರಗಳ ಆದ್ಯ ಕರ್ತವ್ಯ ಮತ್ತು ಜವಾಬ್ದಾರಿ.

ಮಾನವ ಹಕ್ಕು ಮತ್ತು ಕಾನೂನಿನ ಪರಿಭಾಷೆಯಲ್ಲಿ ಶಿಕ್ಷಣ ಒಂದು ಮೂಲಭೂತ ಹಕ್ಕಾಗಿದ್ದರೂ ಅದನ್ನು ಸಾಕರಗೊಳಿಸಬೇಕಾದ ರಾಷ್ಟ್ರಗಳೂ ಶಿಕ್ಷಣವನ್ನು ತಮ್ಮ ಅಭಿವೃದ್ಧಿಯ ಭಾಗವೆಂದು ಪರಿಗಣಿಸಿ ಅಗತ್ಯ ಸಂಪನ್ಮೂಲ ಮತ್ತು ಹಣಕಾಸಿನ ನೆರವನ್ನು ಒದಗಿಸುವಲ್ಲಿ ನಿರೀಕ್ಷಿತ ಮಟ್ಟಕ್ಕೆ ಸ್ಪಂದಿಸುತ್ತಿಲ್ಲವೆಂಬುದು ನಾಗರೀಕ ಸಮಾಜಕ್ಕಿರುವ ಆತಂಕ. ಶಿಕ್ಷಣದ ಈ ಹಕ್ಕು ಕೇವಲ ಅಕ್ಷರಭ್ಯಾಸದ

ಕಲಿಸಬಹುದಾದ ಶಾಲಾ ಶಿಕ್ಷಣಕ್ಕೆ ಮಾತ್ರ ಸೀಮಿತವಾಗದೆ ಎಲ್ಲಮಕ್ಕಳಿಗೆ ಸಮಾನಗುಣಮಟ್ಟದ ಶಿಕ್ಷಣ ಒದಗಿಸಬಲ್ಲ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಕಟ್ಟಿಕೊಳ್ಳುವ ಮೂಲಕ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ಆಧಾರದ ಮೇಲೆ ಸಮಾಜವನ್ನು ಕಟ್ಟಿಕೊಳ್ಳಬೇಕೆಂಬ ಆಶಯ ನೈಜ ಜನಪರ ಚಳುವಳಿಗಳ ಮೂಲಭೂತ ಬೇಡಿಕೆಯಾಗಿದೆ.

ಎಲ್ಲ ಮಕ್ಕಳಿಗೆ ಸಮಾನ ಗುಣಮಟ್ಟದ ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಜನಪರ ಚಳುವಳಿಗಳು ಹಲವು ದಶಕಗಳಿಂದ ಕೆಲಸ ನಿರ್ವಹಿಸುತ್ತಿದ್ದರೂ, ಸ್ವತಂತ್ರ ಭಾರತದಲ್ಲಿ ಆಸ್ತಿತ್ವಕ್ಕೆ ಬಂದ ಸರ್ಕಾರಗಳು ಅದನ್ನು ಗಂಭೀರವಾಗಿ ಪರಿಗಣಿಸದಂತೆ ಕಾಣುವುದಿಲ್ಲ. ಇದಕ್ಕೆ ಉದಾಹರಣೆ ಎಂಬಂತೆ ಇತ್ತೀಚೆಗೆ ರೂಪಿಸಲ್ಪಟ್ಟ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ – 2009 ಮಕ್ಕಳ ಶಿಕ್ಷಣದ ಮೂಲಭೂತ ಹಕ್ಕನ್ನು ತಿಳಿಗೊಳಿಸುವ ಮತ್ತು ಶ್ರೇಣಿಕೃತ ಶಿಕ್ಷಣ ವ್ಯವಸ್ಥೆಯನ್ನು ಮುಂದುವರಿಸುಲು ಪೂರಕವಾಗುವ ರೀತಿಯಲ್ಲಿ ರೂಪಿಸಲ್ಪಟ್ಟಿದ್ದು ನಾಗರಿಕ ಸಮಾಜದ ಆತಂಕವನ್ನು ಮತ್ತಷ್ಟು ಹೆಚ್ಚಿಸಿದೆ.

ಅಧ್ಯಾಯ 4 ರಲ್ಲಿ ತಿಳಿಸಿರುವ ವಿಧಾನಗಳಿಂದ ಸಂಗ್ರಹಿಸಲಾದ ಅಭಿಪ್ರಾಯಗಳನ್ನು ಮತ್ತು ದತ್ತಾಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ನೋಡಿದಾಗ ಈ ಕೆಳಕಂಡ ಫಲಿತಗಳು ಕಂಡುಬಂದಿರುತ್ತವೆ.

- ಶಾಲಾ ಮೇಲ್ವಿಚಾರಣೆಯಲ್ಲಿ ಪಾಲಕರು ಪಾಲ್ಗೊಳ್ಳುವಂತೆ ಮಾಡಿರುವುದರಿಂದ ಇದು ಒಂದು ಉತ್ತಮ ನೀತಿಯಾಗಿದೆ ಇದರಿಂದ ಗುಣಾತ್ಮಕ ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕಾಗಿ ಹಾಗೂ ಶಾಲೆಯ ಒಟ್ಟಾರೆ ಅಭಿವೃದ್ಧಿಯನ್ನು ತರಲು ಸಾಧ್ಯವಾಗುತ್ತದೆ ಎಂಬ ತೃಪ್ತಿಯನ್ನು ಗುಂಪು ಚರ್ಚೆಯಲ್ಲಿ ವ್ಯಕ್ತಪಡಿಸಿದ್ದಾರೆ.

- ಸರಕಾರದ ಸ್ಪಷ್ಟವಾದ ಮತ್ತು ದೂರ ದೃಷ್ಟಿತ್ವದ ನೀತಿಯಿಂದಾಗಿ ಶಾಲಾ ಹಂತದಲ್ಲಿ ಮೌಲ್ಯಯುತವಾದ ಸಮುದಾಯ ಭಾಗವಹಿಸುವಿಕೆಗೆ ಅವಕಾಶಗಳನ್ನು ನೀಡಿದೆ ಹಾಗೂ ಎಸ್.ಡಿ.ಎಂ.ಸಿಗಳು ತಮ್ಮ ಅಧಿಕಾರಗಳನ್ನು ಸರಿಯಾಗಿ ಬಳಸಿದ್ದೆ ಆದಲ್ಲಿ ಗಮನಾರ್ಹವಾದ ಬದಲಾವಣೆಗಳನ್ನು ಶಾಲೆ ಹಂತದಲ್ಲಿ ತರಬಹುದು ಎಂಬ ಅಭಿಪ್ರಾಯವನ್ನು ಬುಹುಸಂಖ್ಯಾತ ಜನರು ತಮ್ಮ ಪ್ರತಿಕ್ರಿಯಯನ್ನು ಗುಂಪು ಚರ್ಚೆಯಲ್ಲಿ ನೀಡಿದ್ದಾರೆ.

- ಎಸ್.ಡಿ.ಎಂ.ಸಿಗಳ ರಚನೆ ಮತ್ತು ದೈನಂದಿನ ಕಾರ್ಯನಿರ್ವಹಣೆಗೆ ಅಡ್ಡಿಯನ್ನುಂಟು ಮಾಡುವ ರಾಜಕೀಯ ಹಸ್ತಕ್ಷೇಪವನ್ನು ತಡೆಗಟ್ಟಿ ಎಸ್.ಡಿ.ಎಂ.ಸಿಗಳ ಸ್ವಾಯತ್ತತೆಯನ್ನು ಕಾಪಾಡುವುದು ಇಂದಿನ ತುರ್ತು ಅಗತ್ಯವಾಗಿದೆ. ಈ ಮೂಲಕ ಎಸ್.ಡಿ.ಎಂ.ಸಿಗಳ ಕಾರ್ಯನಿರ್ವಹಣೆಯಲ್ಲಿ ಪಾರದರ್ಶಕತೆ ಮತ್ತು ಪ್ರಜಾಸತ್ತಾತ್ಮಕ ಕಾರ್ಯನಿರ್ವಹಣೆಯನ್ನು ಖಾತ್ರಿಪಡಿಸಿಕೊಳ್ಳಬಹುದು.

- ಎಸ್.ಡಿ.ಎಂ.ಸಿಗಳಲ್ಲಿ ಹೆಚ್ಚು ಹೆಚ್ಚು ಸದಸ್ಯರು ವಿದ್ಯಾವಂತರಾಗಿರಬೇಕು ಎಂದು ಹೆಚ್ಚು ಜನ ತಮ್ಮ ಅನಿಸಿಕೆಯನ್ನು ತಿಳಿಸಿದ್ದಾರೆ.

- ಎಸ್.ಡಿ.ಎಂ.ಸಿ ರಚನೆಯಲ್ಲಿ ವಾಸ್ತವವಾಗಿ ಶಿಕ್ಷಕರು ಮನಃಪೂರ್ವಕವಾಗಿ ಸಹಕಾರವನ್ನು ನೀಡುವುದಿಲ್ಲ. ಕೆಲವು ಸಂದರ್ಭಗಳಲ್ಲಿ ಬೇರೆಯವರನ್ನು ಸೂಚಿಸುವುದು ಹಾಗು ಆಯ್ಕೆಮಾಡಿಕೊಳ್ಳುವುದು ನಡೆಯುತ್ತಿದೆ ಇದನ್ನು ಪೋಷಕರು ಸಾಮಾನ್ಯವಾಗಿ ಪ್ರಶ್ನಿಸುವುದಿಲ್ಲ.

- ಅತಿ ಹೆಚ್ಚು ಜನ ಎಸ್.ಡಿ.ಎಂ.ಸಿ ಸದಸ್ಯರು ತಮ್ಮ ಪಾತ್ರ ಜವಾಬ್ದಾರಿ ಹಾಗೂ ಅಧಿಕಾರದ ಬಗ್ಗೆ ತಿಳಿದಿರಲಿಲ್ಲ

- ಸಮುದಾಯವು ಶಾಲೆಗಾಗಿ ಹೆಚ್ಚು ಹಣದ ರೂಪದಲ್ಲಿ ಹಾಗೂ ವಸ್ತು ರೂಪದಲ್ಲಿ ಕೊಡುಗೆಯನ್ನು ನೀಡಿದೆ ಎಂಬುದನ್ನು ಆಧ್ಯಯನವು ಗುರುತಿಸಿದೆ.

- ಗುಂಪು ಚರ್ಚೆಯಲ್ಲಿ ಎಸ್.ಡಿ.ಎಂ.ಸಿಯು ಕಟ್ಟಡ ಕಾಮಗಾರಿಗಳಲ್ಲಿ ಅಂದರೆ ಶಾಲೆ ಕೊಠಡಿ ಕಟ್ಟುವಲ್ಲಿ, ಶೌಚಾಲಯ, ಅಡುಗೆ ಕೋಣೆ, ಕಾಂಪೌಂಡ್ ಮುಂತಾದವುಗಳ ನಿರ್ಮಾಣದ ಸಂದರ್ಭಗಳಲ್ಲಿ ಅವರ ಸಮಯ ಹಾಗೂ ಶ್ರಮದಾನವನ್ನು ನೀಡಿರುತ್ತೇವೆ ಎಂಬ ಅಭಿಪ್ರಾಯವನ್ನು ನೀಡಿದ್ದಾರೆ.

- ಮಧ್ಯಾಹ್ನದ ಬಿಸಿಊಟಕ್ಕೆ ತರಕಾರಿ, ಧಾನ್ಯ ಹಾಗೂ ಲೋಟ ಮತ್ತು ತಟ್ಟೆ ಹಾಗೂ ಅಡುಗೆ ತಯಾರಿಸಲು ಮತ್ತು ಬಡಿಸಲು ಬೇಕಾದ ಪರಿಕರಗಳನ್ನು ಒದಗಿಸಿದ್ದಾರೆ ಎಂಬ ಅಂಶವನ್ನು ಈ ಅಧ್ಯಯನವು ಗುರುತಿಸಿದೆ.

- ಶಾಲೆಗೆ ಅಗತ್ಯವಿರುವ ಕಲಿಕೋಪರಣಗಳು, ಸಮವಸ್ತ್ರ, ಶೂ, ಮೇಜು, ಕುರ್ಚಿ, ಬೆಂಚ್ ಮುಂತಾದವುಗಳನ್ನು ಕೊಡುಗೆಯಾಗಿ ನೀಡಿದ್ದಾರೆ ಎಂಬುದನ್ನು ಈ ಅಧ್ಯಯನವು ಗುರುತಿಸಿದೆ.

- ಶಾಲೆಗಳಲ್ಲಿ ಕಲಿತು ಬೇರೆ ಕಡೆ ಕೆಲಸ ನಿರ್ವಹಿಸುತ್ತಿರುವ ಹಳೆ ವಿದ್ಯಾರ್ಥಿಗಳು ಸಹ ಶಾಲೆಗಾಗಿ ಕೊಡುಗೆಯನ್ನು ನೀಡಿದ್ದಾರೆ.

- ರಾಜ್ಯ ಸರ್ಕಾರವು ಎಸ್.ಡಿ.ಎಂ.ಸಿ ಸದಸ್ಯರಿಗೆ ಉತ್ತಮವಾದ ತಿಳುವಳಿಕೆಯನ್ನು ಅಪೇಕ್ಷಿತ ರೀತಿಯಲ್ಲಿ ನೀಡಿಲ್ಲ. ಅವರ ಕರ್ತವ್ಯ, ಪಾತ್ರ, ಜವಾಬ್ಧಾರಿ ಹಾಗೂ ಅಧಿಕಾರವನ್ನು ತಿಳಿದುಕೊಂಡು ಅವರ ಸಾಮರ್ಥ್ಯವನ್ನು ಹೆಚ್ಚಿಸುವಂತಹ ಹೊಸತನಗಳನ್ನು ತಂದಿಲ್ಲ, ಹೆಚ್ಚಿನ ಸಮಯಗಳಲ್ಲಿ ಗ್ರಾಮ ಪಂಚಾಯತ್ ಹಂತದಲ್ಲಿ ಅಥವಾ ಕ್ಷೇತ್ರ ಸಂಪನ್ಮೂಲ ಕೇಂದ್ರದಲ್ಲಿ ಉತ್ತ್ರೇಕ್ಷಿತವಾಗಿ ಮತ್ತು ನೀಡಿದ್ದೇವೆ ಎಂಬ ರೀತಿಯಲ್ಲಿ ನಡೆಸುತ್ತಿದ್ದು, ಅದರಲ್ಲೂ ಒಬ್ಬರು ಅಥವಾ ಇಬ್ಬರಿಗೆ ತರಬೇತಿಯನ್ನು ನೀಡಲಾಗುತ್ತಿದೆ. ಸಾಮಾನ್ಯವಾಗಿ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಪದನಿಮಿತ್ತ ಕಾರ್ಯದರ್ಶಿ ಮಾತ್ರ ಕೆಲವು ತರಬೇತಿ ಪ್ರಕ್ರಿಯೆಗಳಲ್ಲಿ ಪಾಲ್ಗೊಳ್ಳುತ್ತಾರೆ.

- ಸಂಬಂಧಿಸಿದ ಪ್ರಾಧಿಕಾರಗಳು ಎಸ್.ಡಿ.ಎಂ.ಸಿಯ ಮಾದರಿ ಉಪವಿಧಿಗಳಲ್ಲಿ ನೀಡಿರುವ ಮಾಹಿತಿಗಳನ್ನು ವಿವಿಧ ಹಂತಗಳಲ್ಲಿ, ರೀತಿಗಳಲ್ಲಿ ಮತ್ತು ಪಾತ್ರ, ಜವಾಬ್ದಾರಿ ಹಾಗೂ ಅಧಿಕಾರವನ್ನು ಹೇಗೆ ಪರಿಭಾವಿಸಿಕೊಳ್ಳಬೇಕು ಎಂಬುದರ ಬಗ್ಗೆ ತಿಳಿಸಿಕೊಡಬೇಕು.

- ಎಸ್.ಡಿ.ಎಂ.ಸಿ ಸದಸ್ಯರಿಗೆ ತಮ್ಮ ಕಾರ್ಯಚಟುವಟಿಕೆಗಳನ್ನು ಹೆಚ್ಚು ಅರ್ಥಪೂರ್ಣವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸಲು ಅವರಿಗೆ ನಿರಂತರ ಮತ್ತು ಖಚಿತತೆಯ ಮಾಹಿತಿಗಾಗಿ ವ್ಯವಸ್ಥೆಯನ್ನು ಕಲ್ಪಿಸಬೇಕು.

- ಹಲವು ಸಮಯಗಳಲ್ಲಿ ನಡೆಯುವ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಎಸ್.ಡಿ.ಎಂ.ಸಿ ಸದಸ್ಯರಿಗೆ ಅವರ ಭಾಗವಹಿಸುವಿಕೆ ಹಾಗೂ ಜವಾಬ್ದಾರಿಯ ಬಗ್ಗೆ ಮಾತ್ರ ಹೇಳುತ್ತಾರೆಯೇ ಹೊರತು ಅವರ ಅಧಿಕಾರ, ಶಾಲೆಯ ನಿರ್ವಹಣೆಯಲ್ಲಿ ನಾಯಕತ್ವದ ಬಗ್ಗೆ ಮಾತ್ರ ತಿಳಿಸುವುದಿಲ್ಲ. ಎಸ್.ಡಿ.ಎಂ.ಸಿಯ ದಿನನಿತ್ಯ ಕಾರ್ಯಚಟುವಟಿಕೆಗಳಲ್ಲಿ ಪ್ರಗತಿಯನ್ನು ಸಾಧಿಸುವಂತಹ ವಿಷಯಗಳ ಬಗ್ಗೆ ಪ್ರಸ್ತಾಪಿಸುವುದಿಲ್ಲ ಹಾಗೂ ಇದುವರೆವಿಗೂ ಅಗತ್ಯ ವಿಷಯಗಳ ಮೇಲೆ ತರಬೇತಿ ನೀಡದೆ ಮೇಲಿನಿಂದ ಕೆಳಕ್ಕೆ ವಿಷಯಗಳು ಹರಿದುಬರುತ್ತಿದೆ ಎಂಬುದನ್ನು ಈ ಅಧ್ಯಯನವು ಗುರುತಿಸಿದೆ.

- ಪಾಲಕರಿಂದ ಚುನಾಯಿತ ಪ್ರತಿನಿಧಿಗಳಾದ ಸದಸ್ಯರಿಗೆ ತಮ್ಮ ಅಧಿಕಾರದ ಬಗ್ಗೆ ಅರಿವಿಲ್ಲ. ಇದರ ಬಗ್ಗೆ ಹಲವು ಸಮಯ ಮುಖ್ಯ ಶಿಕ್ಷಕರು ಅಥವಾ ಸಹಶಿಕ್ಷಕರುಗಳು ಇದರ ಬಗ್ಗೆ ಮುಚ್ಚಿಡುತ್ತಾರೆ.

- ಎಸ್.ಡಿ.ಎಂ.ಸಿಗಳಿಗೆ ತಮ್ಮ ಅಧಿಕಾರ ಹಾಗೂ ಜವಾಬ್ದಾರಿ ಹಾಗೂ ಕಾರ್ಯನಿರ್ವಹಣೆಯ ಬಗ್ಗೆ ಜಾಗೃತಿ ಇಲ್ಲದಿರುವುದರಿಂದ ಕಾರ್ಯಚಟುವಟಿಕೆಗಳನ್ನು ಮುಂದುವರಿಸುವಲ್ಲಿ ಸಲಹೆಗಳು ಹಾಗೂ ನಿರ್ದೇಶನಗಳನ್ನು ಮುಖ್ಯ ಶಿಕ್ಷಕರು ಹಾಗೂ ಸಹಶಿಕ್ಷಕರುಗಳು ನೀಡುತ್ತಾರೆ.

- ತಮ್ಮ ಅಧಿಕಾರ ಜವಾಬ್ದಾರಿಗಳ ಬಗ್ಗೆ ಅರಿವಿಲ್ಲದಿರುವುದರಿಂದ ತಮ್ಮ ಕಾರ್ಯ ನಿರ್ವಹಣೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸುವಲ್ಲಿ ತೊಡಕಾಗುತ್ತಿದೆ ಎಂಬ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

- ಗುಚ್ಛ ಸಂಪನ್ಮೂಲ ಕೇಂದ್ರಗಳು ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರಗಳು ಸಂಘಟಿಸುವ ತಿಳುವಳಿಕೆ ಮೂಡಿಸುವ ಕಾರ್ಯಾಗಾರಗಳಲ್ಲಿ ಎಸ್.ಡಿ.ಎಂ.ಸಿಯವರ ಅಧಿಕಾರ ಹಾಗೂ ಜವಾಬ್ದಾರಿಗಳ ಬಗ್ಗೆ ಚರ್ಚಿಸುವುದನ್ನು ಮರೆಮಾಚುತ್ತಾರೆ ಎಂಬ ಅಂಶವನ್ನು ಅಧ್ಯಯನವು ಗುರುತಿಸಿದೆ.

- ಸ್ವಾತಂತ್ರ್ಯ ದಿನಾಚರಣೆ, ಮಕ್ಕಳ ದಿನಾಚರಣೆ, ಗಣರಾಜ್ಯೋತ್ಸವ ಮುಂತಾದ ಶಾಲೆಗಳ ರಾಷ್ಟ್ರೀಯ ಕಾರ್ಯಕ್ರಮಗಳಿಗೆ ಎಸ್.ಡಿ.ಎಂ.ಸಿ ಸದಸ್ಯರನ್ನು ಆಹ್ವಾನಿಸುತ್ತಾರೆ ಮತ್ತು ಕೆಲವು ಜವಾಬ್ದಾರಿಗಳನ್ನು ಸಹ ಹಂಚಿಕೆ ಮಾಡಿರುತ್ತಾರೆ ಎಂಬುದನ್ನು ಈ ಅಧ್ಯಯನವು ಗುರುತಿಸಿದೆ.

- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯನ್ನು ಮುಖ್ಯ ಶಿಕ್ಷಕರು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳಲು ನೋಡುತ್ತಾರೆ ಮತ್ತು ಎಸ್.ಡಿ.ಎಂ.ಸಿ ಸಮಿತಿಗಳು ತಮ್ಮ ಕಾರ್ಯನಿರ್ವಹಣೆಯನ್ನು ತಾವೇ ನಿರ್ವಹಿಸಿಕೊಳ್ಳಲು ಹಾಗೂ ಪ್ರಜಾಪ್ರಭುತ್ವ ಮಾದರಿಯಲ್ಲಿ ನಿರ್ವಹಿಸಿಕೊಳ್ಳಲು ಉತ್ಸಾಹವನ್ನು ತುಂಬುವುದಿಲ್ಲ.

- ಎಸ್.ಡಿ.ಎಂ.ಸಿ ಸದಸ್ಯರುಗಳು ಸಭೆಗಳಲ್ಲಿ ಹಾಗೂ ಸಭಾ ಪ್ರಕ್ರಿಯೆಗಳಲ್ಲಿ ಕಡಿಮೆ ಸಂಖ್ಯೆಯಲ್ಲಿ ಭಾಗವಹಿಸುತ್ತಿದ್ದು. ಅತಿ ಹೆಚ್ಚು ಜನ ಸಭೆಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸುವುದಿಲ್ಲ, ನಡಾವಳಿಗಳನ್ನು ಬರೆಯುವ ಸಂದರ್ಭಗಳಲ್ಲಿ ಶಿಕ್ಷಕರೆ ಅಂತಿಮಗೊಳಿಸಿಕೊಂಡು ಬರೆಯುವುದನ್ನು ನೋಡಬಹುದಾಗಿದ್ದು, ಇಂತಹವುಗಳಲ್ಲಿ ಎಸ್.ಡಿ.ಎಂ.ಸಿ ಸದಸ್ಯರು ಬಹಳ ಕಡಿಮೆ ರೀತಿಯಲ್ಲಿ ಪಾಲ್ಗೊಳ್ಳುತ್ತಾರೆ.

- ಈ ಅಧ್ಯಯನವು ಗುರುತಿಸಿರುವ ಹಾಗೆ ಮುಖ್ಯ ಶಿಕ್ಷಕರು ಮುತುವರ್ಜಿ ವಹಿಸಿದರೆ ಮಾತ್ರ ಪ್ರತಿ ತಿಂಗಳು ಸಭೆ ನಡೆಯುತ್ತದೆ. ಇಲ್ಲದಿದ್ದಲ್ಲಿ ಎರಡು ಅಥವಾ ಮೂರು ತಿಂಗಳಿಗೊಮ್ಮೆ ಸಭೆ ನಡೆಯುತ್ತದೆ.

- ಹೆಚ್ಚು ಶಾಲೆಗಳಲ್ಲಿ ಪ್ರತಿ ತಿಂಗಳು ನಿರಂತರವಾಗಿ ಸಭೆ ನಡೆಯುವುದಿಲ್ಲ. ತುಂಬ ವಿರಳವಾಗಿ ಶಾಲಾ ಆಡಳಿತವು ಎಸ್.ಡಿ.ಎಂ.ಸಿ ಮಾಸಿಕ ಸಭೆಯನ್ನು ನಡೆಸುತ್ತವೆ. ಇಂತಹ ಸಭೆಗಳು ನಡೆದರು ಶಾಲೆಗೆ ಅಗತ್ಯವಿರುವ ಅಗತ್ಯ ವಸ್ತುಗಳ ಬಗ್ಗೆ ಮಾತ್ರ ಚರ್ಚೆಯಾಗುತ್ತದೆ.

- ಬಹಳಷ್ಟು ಜನ ಅಭಿಪ್ರಾಯ ಪಡುವ ಹಾಗೆ ಸಭೆಗಳನ್ನು ಎಸ್.ಡಿ.ಎಂ.ಸಿಯವರ ಹೆಸರಿನಲ್ಲಿ ಮುಖ್ಯ ಶಿಕ್ಷಕರೇ ನಿರ್ಧರಿಸಿ, ಸಭೆಯ ನಡಾವಳಿ ಪುಸ್ತಕಕ್ಕೆ ಸಹಿಗಾಗಿ ಸದಸ್ಯರ ಮಕ್ಕಳ ಮೂಲಕ ಮನೆಗಳಿಗೆ ಕಳುಹಿಸುತ್ತಾರೆ ಎಂಬ ಅಭಿಪ್ರಾಯ ಪಡುತ್ತಾರೆ.

- ಅನೇಕ ಜನ ಅಭಿಪ್ರಾಯ ಪಡುವ ಹಾಗೆ. ಶಿಸ್ತುಬದ್ಧವಾಗಿ ಪ್ರತಿ ತಿಂಗಳು ಸಮಿತಿ ಸಭೆ ಸೇರುವುದಿಲ್ಲ. ಆದರೆ ಯಾವಾಗ ಸಭೆ ಸೇರುತ್ತಾರೆಯೋ ಅಂತಹ ಸಭೆಗಳಲ್ಲಿ ಅಗತ್ಯ ವಸ್ತುಗಳ ಬಗ್ಗೆ ಮಾತ್ರ ಚರ್ಚೆಯಾಗುತ್ತದೆ.

- ಸಭೆಗಳು ನಿರಂತರವಾಗಿ ನಡೆದಿದೆ ಎಂದು ದಾಖಲೆಗಳನ್ನು ಸೃಷ್ಟಿಸಿರುತ್ತಾರೆ ಎಂಬುದನ್ನು ಈ ಅಧ್ಯಯನವು ಗುರುತಿಸಿದೆ.

- ಚುನಾಯಿತ ಪ್ರತಿನಿಧಿಗಳು ತಮ್ಮ ಅಭಿಪ್ರಾಯವನ್ನು ತಿಳಿಸುತ್ತಾ ನಾಮನಿರ್ದೇಶಿತ ಮತ್ತು ಪದನಿಮಿತ್ತ ಸದಸ್ಯರನ್ನು ಸಭೆಗೆ ಆಹ್ವಾನಿಸುವುದಿಲ್ಲ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

- ಎಸ್.ಡಿ.ಎಂ.ಸಿ ಸಭೆಗಳಲ್ಲಿ ಮಹಿಳಾ ಸದಸ್ಯರ ಪಾಲ್ಗೊಳ್ಳುವಿಕೆ ಕಡಿಮೆ ಇರುವುದು.

- ಈ ಅಧ್ಯಯನವು ಗುರುತಿಸಿರುವ ಹಾಗೆ ತಮ್ಮ ಅಧಿಕಾರ ಮತ್ತು ಕಾರ್ಯನಿರ್ವಹಣೆಯ ಬಗ್ಗೆ ಕಡಿಮೆ ತಿಳುವಳಿಕೆ ಇರುವುದರಿಂದ ಇದು ಎಸ್.ಡಿ.ಎಂ.ಸಿ ಸಮಿತಿಯ ಕಾರ್ಯಚಟುವಟಿಕೆಯ ಮೇಲೆ ಪರಿಣಾಮ ಬೀರುತ್ತಿದೆ.

- ಹಣಕಾಸು ನಿರ್ವಹಣೆಯಲ್ಲಿ ಗುರುತಿಸಿರುವ ಹಾಗೆ ಸಾಮಾನ್ಯವಾಗಿ ಅಧ್ಯಕ್ಷರು ಯಾವ ಉದ್ದೇಶಕ್ಕೆ ಎಂಬುದು ತಿಳಿಯದೆ ಚೆಕ್‌ಗೆ ಸಹಿ ಹಾಕುತ್ತಿದ್ದಾರೆ.

- ಹಣಕಾಸು ವಿಚಾರವಾಗಿ ಸಭೆಗಳಲ್ಲಿ ಚರ್ಚೆಯಾಗುವುದಿಲ್ಲ. ಸದಸ್ಯರಿಗೆ ಒಟ್ಟು ಹಣ ಹಾಗೂ ಯಾವ ಉದ್ದೇಶಕ್ಕೆ ಶಾಲೆಗೆ ಬಂದಿದೆ ಎಂಬುದು ಕೇಳಿದಾಗ ಮಾತ್ರ ತಿಳಿದಿರುತ್ತದೆ.

- ಹಣಕಾಸು ನಿರ್ವಹಣೆಯನ್ನು ಮುಖ್ಯ ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ ಅಧ್ಯಕ್ಷರು ಮಾತ್ರ ಮಾಡುತ್ತಾರೆ.

- ಶಾಲಾ ಹಂತದ ಕೆಲಸಗಳಲ್ಲಿ ಎಸ್.ಡಿ.ಎಂ.ಸಿಯು ಉತ್ತಮವಾಗಿ ಕೆಲಸ ನಿರ್ವಹಿಸುತ್ತಿದ್ದು, ತೆಗೆದುಕೊಂಡಿರುವ ಕೆಲಸಗಳಲ್ಲಿ ಶಾಲಾ ದಾಖಲಾತಿ ಆಂದೋಲನ, ನಿರಂತರ ಹಾಜರಾತಿಯನ್ನು ಖಾತ್ರಿಪಡಿಸಿಕೊಳ್ಳುವುದು, ಮಧ್ಯಾಹ್ನದ ಬಿಸಿ ಊಟಕ್ಕೆ ಸಹಾಯ, ಸಕಾಲದಲ್ಲಿ ಉತ್ತೇಜಕಗಳು ಸರಬರಾಜು ಆಗಿರುವುದರ ಬಗ್ಗೆ ಖಾತ್ರಿಪಡಿಸಿಕೊಳ್ಳುವುದು, ಶಿಕ್ಷಕರ ಹಾಜರಾತಿಯ ಮೇಲ್ವಿಚಾರಣೆ, ಶಾಲಾ ಸಾಂಸ್ಕೃತಿಕ ಕಾರ್ಯಕ್ರಮಗಳ ಸಂಘಟನೆ ಹಾಗೂ ಪಾಲ್ಗೊಳ್ಳುವಿಕೆ, ಶಾಲಾ ಮೂಲಭೂತ ಸೌಕರ್ಯಗಳ ಕುರಿತಾದ ವಿಷಯಗಳಲ್ಲಿ ಶಾಲಾ ಆಡಳಿತವು ಬಗೆಹರಿಸಿಕೊಳ್ಳುವ ಕೆಲಸ ಮಾಡುತ್ತಿದೆ ಎಂಬ ವಿಷಯವನ್ನು ಈ ಅಧ್ಯಯನವು ಗುರುತಿಸಿದೆ.

- ಎಸ್.ಡಿ.ಎಂ.ಸಿಯ ಬಗ್ಗೆ ನಿರ್ವಹಿಸುತ್ತಿರುವ ಯಾವುದೆ ದಾಖಲೆ ಹಾಗೂ ವಹಿಯ ಬಗ್ಗೆ ಎಸ್.ಡಿ.ಎಂ.ಸಿ ಸದಸ್ಯರಿಗೆ ಅರಿವಿರುವುದಿಲ್ಲ.

- ಎಸ್.ಡಿ.ಎಂ.ಸಿಯ ಎಲ್ಲಾ ದಾಖಲೆಗಳು ಹಾಗೂ ವಹಿಯನ್ನು ಪದನಿಮಿತ್ತ ಕಾರ್ಯದರ್ಶಿಯು ಆದ ಮುಖ್ಯಶಿಕ್ಷಕರೇ ನಿರ್ವಹಣೆ ಮಾಡುತ್ತಿದ್ದು, ಎಸ್.ಡಿ.ಎಂ.ಸಿಯವರ ಸಹಿಗಳು ಯಾವಾಗ ಎಲ್ಲಿ ಬೇಕಾಗಿದ್ದಲ್ಲಿ ಅದನ್ನು ಮಾಡಿಸಿರುತ್ತಾರೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

- ಎಸ್.ಡಿ.ಎಂ.ಸಿಯೇ ಯಾವ ರೀತಿಯ ದಾಖಲೆ ಹಾಗೂ ವಹಿಗಳನ್ನು ಹೇಗೆ ನಿರ್ವಹಿಸಬಹುದು ಎಂಬುದರ ಬಗ್ಗೆ ಅರಿವು ಇಲ್ಲ ಎಂಬುದನ್ನು ಕಂಡುಬಂದಿದೆ.

- ವಿಶೇಷ ಅಗತ್ಯವುಳ್ಳ ಮಕ್ಕಳ ವಿಷಯದ ಬಗ್ಗೆ ಕರುಣೆ ರೂಪದಲ್ಲಿ ನೋಡುತ್ತಿದ್ದು, ಇದನ್ನು ವೃತ್ತಿಪರತೆಯಿಂದ ನೋಡುವುದಿಲ್ಲ.

- ವಿಶೇಷ ಅಗತ್ಯವುಳ್ಳ ಮಕ್ಕಳ ಅಗತ್ಯದ ವಿಷಯದ ಬಗ್ಗೆ ಯಾವುದೇ ರೀತಿಯ ಯೋಜನೆಯನ್ನು ಸಮಿತಿಗಳು ಹೊಂದಿಲ್ಲ.

- ಎಸ್.ಡಿ.ಎಂ.ಸಿ ಸದಸ್ಯರು ಶಾಲೆಬಿಟ್ಟ ಮಕ್ಕಳನ್ನು ಶಾಲೆಯ ಮುಖ್ಯವಾಹಿನಿಗೆ ತರುವಲ್ಲಿ, ಶಾಲೆಯ ಅಗತ್ಯ ಭೌತಿಕ ಸೌಕರ್ಯಗಳಲ್ಲಿ, ಶಿಕ್ಷಕರ ಹಾಜರಾತಿ, ಮಧ್ಯಾಹ್ನದ ಬಿಸಿಊಟ, ಮಕ್ಕಳಿಗೆ ಸಮವಸ್ತ್ರ, ಪಠ್ಯಪುಸ್ತಕ, ವಿದ್ಯಾರ್ಥಿ ವೇತನ ಮತ್ತು ಕಾಮಗಾರಿ ಕೆಲಸಗಳಲ್ಲಿ ಹೆಚ್ಚು ಪಾಲ್ಗೊಂಡಿದ್ದಾರೆ.

- ಎಸ್.ಡಿ.ಎಂ.ಸಿಯು ಅಧ್ಯಕ್ಷರು ಅಥವಾ ಒಬ್ಬ ಇಬ್ಬರು ಮಾತ್ರ ಶಾಲೆಯ ಹಲವು ಕಾರ್ಯಗಳಲ್ಲಿ ಪಾಲ್ಗೊಂಡಿರುವುದನ್ನು ಈ ಅಧ್ಯಯನವು ಗುರುತಿಸಿದೆ.

- ಶಾಲಾ ಹಣಕಾಸು ಹಾಗೂ ಅನುದಾನ ನಿರ್ವಹಣೆಯನ್ನು ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಯ ಪಾಲ್ಗೊಳ್ಳುವಿಕೆಯು ಇಲ್ಲದೆ ಮುಖ್ಯ ಶಿಕ್ಷಕರೆ ನಡೆಸುತ್ತಾರೆ. ಶಾಲೆಯ ಕೆಲಸಗಳನ್ನು ಮುಖ್ಯ ಶಿಕ್ಷಕರೆ ವಹಿಸುತ್ತಾರೆ. ಪ್ರತಿಕ್ರಿಯೆ ನೀಡಿರುವವರಲ್ಲಿ ಹೆಚ್ಚು ಜನ ಎಸ್.ಡಿ.ಎಂ.ಸಿ ಯ ಜೊತೆ ವಿಷಯಾಧಾರಿತ ಅನುದಾನದ ಬಗ್ಗೆ ಎಸ್.ಡಿ.ಎಂ.ಸಿ ಸಭೆಗಳಲ್ಲಿ ಚರ್ಚೆ ನಡೆಸುವುದಿಲ್ಲ. ಮುಖ್ಯ ಶಿಕ್ಷಕರೆ ಸಂಪೂರ್ಣ ಹಣಕಾಸು ವ್ಯವಹಾರದ ಹತೋಟಿಯನ್ನು ಇಟ್ಟುಕೊಂಡಿರುತ್ತಾರೆ ಎಂಬ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದ್ದಾರೆ.

- ಎಸ್.ಡಿ.ಎಂ.ಸಿ ಸದಸ್ಯರು ಶಾಲೆಯ ಎಲ್ಲಾ ಕಾಮಗಾರಿ ಮತ್ತು ಕೊಠಡಿ ನಿರ್ಮಾಣ ಹಾಗೂ ದುರಸ್ತಿ ಕೆಲಸಗಳ ಮೇಲುಸ್ತುವಾರಿಯನ್ನು ಅತ್ಯಂತ ಉತ್ತಮವಾಗಿ ಮಾಡಿದೆ ಎಂಬುದನ್ನು ಈ ಅಧ್ಯಯನವು ಗುರುತಿಸಿದೆ.

- ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳಿಗೆ ಶಾಲೆಯಲ್ಲಿ ನಿರ್ವಹಿಸುತ್ತಿರುವ ಎಲ್ಲಾ ದಾಖಲೆಗಳನ್ನು ತೋರಿಸುವುದಿಲ್ಲ. ಎಲ್ಲಾ ದಾಖಲೆಗಳು ಹಾಗೂ ವರದಿಗಳನ್ನು ಮುಖ್ಯ ಶಿಕ್ಷಕರೆ ತಮ್ಮ ಸುಪರ್ದಿಯಲ್ಲಿಟ್ಟುಕೊಂಡಿರುತ್ತಾರೆ.

- ಎಸ್.ಡಿ.ಎಂ.ಸಿ ಸಮಿತಿಯ ಸದಸ್ಯರಿಗೆ ಎಲ್ಲಾ ರೀತಿಯ ದಾಖಲೆಗಳು ದೊರಕುವ ರೀತಿಯಲ್ಲಿ ಇರುವುದಿಲ್ಲ. ಅದನ್ನು ಸಾರ್ವಜನಿಕರು ನೋಡುವ ರೀತಿಯಲ್ಲೂ ಪ್ರದರ್ಶಿಸುವುದಿಲ್ಲ ಹಾಗೂ ಯಾವ ಉದ್ದೇಶಕ್ಕೆ ಹಣ ಖರ್ಚಾಗಿದೆ ಎಂಬ ಮಾಹಿತಿಯು ಕೂಡ ಸಾರ್ವಜನಿಕರಿಗೆ ತಿಳಿದಿರುವುದಿಲ್ಲ.

- ಮುಖ್ಯ ಶಿಕ್ಷಕರು ಮತ್ತು ಶಿಕ್ಷಕರು ಯಾವುದೇ ಮಾಹಿತಿಗಳನ್ನು ಸಮಿತಿಯ ಸದಸ್ಯರಿಗೆ ತಿಳಿಯುವ ಹಾಗೆ ಬಿಟ್ಟುಕೊಡುವುದಿಲ್ಲ ಎಂಬುದನ್ನು ಈ ಅಧ್ಯಯನವು ಗುರುತಿಸಿದೆ.

- ಎಸ್.ಡಿ.ಎಂ.ಸಿಯ ಮೂಲಕ ಹಣ ಖರ್ಚಾಗಿರುವುದರ ಮಾಹಿತಿಯ ಬಗ್ಗೆ ಸಾರ್ವಜನಿಕವಾಗಿ ಪ್ರದರ್ಶಿಸಲು ಯಾವುದೇ ರೀತಿಯ ವ್ಯವಸ್ಥೆ ಇರುವುದಿಲ್ಲ. ಯಾವ ಹಣ ಯಾವುದಕ್ಕೆ ಉಪಯೋಗಿಸಲಾಗಿದೆ ಎಂಬುದಕ್ಕೆ ಪಾರದರ್ಶಕತೆ ಇರುವುದಿಲ್ಲ.

- ಈ ಅಧ್ಯಯನವು ಗುರುತಿಸಿದ ಹಾಗೆ ಎಸ್.ಡಿ.ಎಂ.ಸಿ ಸಮಿತಿಯು ಹಣಕಾಸು ನಿರ್ವಹಣೆಯಲ್ಲಿ ಪಾಲ್ಗೊಂಡಿಲ್ಲದಿರುವುದು ಕಂಡು ಬಂದಿದ್ದು. ಪದನಿಮಿತ್ತ ಕಾರ್ಯದರ್ಶಿಗಳು ಹಾಗೂ ಮುಖ್ಯ ಶಿಕ್ಷಕರು ಶಾಲಾ ಅನುಧಾನ ಹಾಗೂ ನಿಧಿಯನ್ನು ಶಾಲೆಗೆ ನೀಡುವಲ್ಲಿ ಹಾಗೂ ಹಣವನ್ನು ಕಾಪಾಡುವುದರ ಜವಾಬ್ಧಾರಿಯನ್ನು ವಹಿಸಿಕೊಳ್ಳಬೇಕಾಗಿದೆ. ಈ ಬಗ್ಗೆ ಎಸ್.ಡಿ.ಎಂ.ಸಿ ಮಾಸಿಕ ಸಭೆಯಲ್ಲಿ ಹಣಕಾಸು ವ್ಯವಹಾರದ ನಿರ್ವಹಣೆಯ ಬಗ್ಗೆ ಬಹುತೇಕ ಸಂದರ್ಭಗಳಲ್ಲಿ ಚರ್ಚೆ ಆಗುವುದಿಲ್ಲ, ಆದರೂ ತಪ್ಪು ಮಾಹಿತಿಗಳನ್ನು ನೀಡುತ್ತಾರೆ.

- ಪ್ರತಿ ಮೂರು ತಿಂಗಳಿಗೊಮ್ಮೆ ತಂದೆ ತಾಯಿ ಪರಷತ್ತಿನ ಸಭೆ ಸೇರಬೇಕು, ಎಸ್.ಡಿ.ಎಂ.ಸಿ ಸಮಿತಿಯ ಎಲ್ಲಾ ಕೆಲಸಗಳನ್ನು ನೋಡುವ ಗುರುತರವಾದ ಜವಾಬ್ಧಾರಿ ಇದಕ್ಕಿರಬೇಕು, ಹಾಗೆಯೇ ಎಸ್.ಡಿ.ಎಂ.ಸಿಯ ನಿರ್ವಹಿಸಿರುವ ಕೆಲಸಗಳ ಬಗ್ಗೆ ಗ್ರಾಮ ಪಂಚಾಯತಿಯ ನಾಗರೀಕ ಸೌಕರ್ಯ ಸಮಿತಿಯು ಪರಾಮರ್ಶೆಯನ್ನು ನಡೆಸಬೇಕು. ಆದರೆ ಈ ಎರಡು ಸಂಗತಿಗಳಲ್ಲೂ ಈ ಎರಡು ಸಂಘಟನೆಗಳ ಸಭೆಗಳು ನಿರಂತರವಾಗಿ ನಡೆದಿಲ್ಲ.

- ಎಸ್.ಡಿ.ಎಂ.ಸಿ ಸಮಿತಿಯ ಚಟುವಟಿಕೆಗಳ ಬಗ್ಗೆ ಗುಚ್ಚ ಸಂಪನ್ಮೂಲ ಕೇಂದ್ರದ ವ್ಯಕ್ತಿ ಗಮನಹರಿಸಬೇಕು ಆದರೆ ಇದುವರೆವಿಗೂ ನಡೆದಿಲ್ಲ.

- ಎಸ್.ಡಿ.ಎಂ.ಸಿಗಳ ಪರಿಣಾಮಕಾರಿ ಚಟುವಟಿಕೆಗಳಲ್ಲಿ ರಾಜಕೀಯ ಹಸ್ತಕ್ಷೇಪ, ಓದು ಬರಹ ಗೊತ್ತಿಲ್ಲದ ಸದಸ್ಯರು, ಸರಿಯಾದ ತರಬೇತಿ ಇಲ್ಲದಿರುವುದು, ಸಮಿತಿಯ ಸದಸ್ಯರಲ್ಲಿ ಹೊಂದಾಣಿಕೆ ಇಲ್ಲದಿರುವುದು, ಅಧಿಕಾರ ವ್ಯಾಮೋಹ, ಮಾಸಿಕ ಎಸ್.ಡಿ.ಎಂ.ಸಿಗಳ ಸಭೆಯಲ್ಲಿ ನಿರೀಕ್ಷಿತ ಮಟ್ಟದ ಹಾಜರಾತಿಯಿಲ್ಲದಿರುವುದು, ನಿಯಮದ ಪ್ರಕಾರ ಸಮಿತಿ ರಚನೆ ಆಗದೇ ಇರುವುದು, ಸರಕಾರಿ ಅಧಿಕಾರಿಗಳಿಂದ ಸಹಕಾರ ಸಿಗದೇ ಇರುವುದು, ಸಮಿತಿಯ ಕಾನೂನಿನ ಕುರಿತು ತಿಳುವಳಿಕೆ ಇಲ್ಲದೇ ಇರುವುದು, ಸದಸ್ಯರಲ್ಲಿ ವೈಮನಸ್ಸು ಮತ್ತು ಕಚ್ಚಾಟ, ಆರ್ಥಿಕ ಬಿಕ್ಕಟ್ಟು, ಮಾಹಿತಿಯ ಕೊರತೆ, ಸದಸ್ಯರಲ್ಲಿ ಸ್ವಇಚ್ಛೆ ಇಲ್ಲದಿರುವುದು, ಕಾನೂನಿನ ಬೆಂಬಲ ಹಾಗೂ ಸರಿಯಾದ ಅನುಷ್ಠಾನ ಇಲ್ಲದೇ ಇರುವುದು, ಸರಕಾರಿ ಅಧಿಕಾರಿಗಳ ನೇರ ಸಂಪರ್ಕ ಇಲ್ಲದೇ ಇರುವುದು, ಎಸ್.ಡಿ.ಎಂ.ಸಿ ಗೆ ನೀಡಿದ ಸೌಲಭ್ಯಗಳನ್ನು ಸರಿಯಾಗಿ ಬಳಕೆಯಾಗದೇ ಇರುವುದು, ನಿರಂತರತೆಯ ಕೊರತೆ, ಸದಸ್ಯರಲ್ಲಿ ಸಮಾನತೆ ಇಲ್ಲದೆ ಇರುವುದು, ಸರಕಾರಿ ಯೋಜನೆಗಳ ಕುರಿತು ಮಾಹಿತಿ ಇಲ್ಲದೆ ಇರುವುದು, ಗ್ರಾಮ ಪಂಚಾಯತಿ ಹಾಗೂ ಶಾಲೆಗಳ ನಡುವೆ ಸರಿಯಾದ ಸಂಪರ್ಕ ಇಲ್ಲದೆ ಇರುವುದು, ಪೋಷಕರ ಸಭೆಯಲ್ಲಿ ಎಸ್.ಡಿ.ಎಂ.ಸಿ ರಚನೆಯಲ್ಲಿ ಮಾದರಿ ಉಪವಿಧಿಯಂತೆ ಆಯ್ಕೆ ಮಾಡದೆ ಇರುವುದು, ಎಸ್.ಡಿ.ಎಂ.ಸಿಗಳು ಕೇವಲ ಕಾಮಗಾರಿ ಕೆಲಸಗಳಿಗೆ ಮಾತ್ರ ಸೀಮಿತವಾಗಿವೆ ಎಂಬ ಅಪವಾದ, ಎಸ್.ಡಿ.ಎಂ.ಸಿಗಳ ಬಗ್ಗೆ ಕೇಳಿ ಬರುತ್ತಿರುವ ಹಣ ದುರುಪಯೋಗ ಮತ್ತು ಭ್ರಷ್ಟಾಚಾರದ ಆರೋಪ, ಎಲ್ಲಕ್ಕಿಂತ ಮಿಗಿಲಾಗಿ ಮಾದರಿ ಉಪವಿಧಿಗಳ ಅನ್ವಯ ಎಸ್.ಡಿ.ಎಂ.ಸಿಗಳು ಪಂಚಾಯಿತಿಯ ಸಿಎಸಿ

ಭಾಗವಾಗಿ ಕಾರ್ಯನಿರ್ವಹಿಸಲು ಇರುವ ಅಡಚಣೆಗಳು ಮುಂತಾದ ಅಬಿಪ್ರಾಯಗಳನ್ನು ಈ ಅಧ್ಯಯನವು ಧೃಢೀಕರಿಸುತ್ತದೆ.

- ಎಸ್.ಡಿ.ಎಂ.ಸಿಗಳು ಉತ್ತಮವಾಗಿ ಕೆಲಸ ನಿರ್ವಹಿಸಲು ಹೆಚ್ಚು ಹೆಚ್ಚು ಪಾಲಕರಲ್ಲಿ ವಿದ್ಯಾವಂತರು ಎಸ್.ಡಿ.ಎಂ.ಸಿ. ಸಮಿತಿಯ ಸದಸ್ಯರಾಗಿ ಬರುವ ರೀತಿ ಪ್ರೋತ್ಸಾಹಿಸಬೇಕು.

- ತಂದೆ-ತಾಯಿ ಪರಿಷತ್ತಿನ ಸದಸ್ಯರು ಸೇರಿದಂತೆ ಎಸ್.ಡಿ.ಎಂ.ಸಿ ಎಲ್ಲಾ ಸದಸ್ಯರಿಗೆ ಸಾಮಾರ್ಥ್ಯಾಭಿವೃದ್ಧಿ ಮಾಡುವಂತಹ ಹಾಗು ಉತ್ತಮ ರೀತಿಯಲ್ಲಿ ವಿನ್ಯಾಸಗೊಳಿಸಿದ ತರಬೇತಿಗಳನ್ನು ನೀಡಬೇಕು.

- ಎಸ್.ಡಿ.ಎಂ.ಸಿಯ ಅಧಿಕಾರ ಹಾಗೂ ಕರ್ತವ್ಯದ ಉತ್ತಮವಾಗಿ ನಿರ್ವಹಿಸುವಂತಾಗಲು ಗ್ರಾಮದ ಎಲ್ಲಾ ಸಮುದಾಯಕ್ಕೂ ತಿಳಿದಿದ್ದರೆ ಉತ್ತಮ

- ಎಸ್.ಡಿ.ಎಂ.ಸಿಯಲ್ಲಿ ಏಕಸ್ವಾಮ್ಯ ನಿರ್ಧಾರ ಇರುವುದರ ಬಗ್ಗೆ ಗುಂಪು ಚರ್ಚೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

- ಶಾಲೆ ಹಾಗೂ ಗ್ರಾಮಗಳಿಗೆ ಇಲಾಖೆಯ ಅಧಿಕಾರಿಗಳು ನಿಗಧಿತ ದಿನಗಳಂದು ಭೇಟಿ ನೀಡಿ ಎಸ್.ಡಿ.ಎಂ.ಸಿ ಕಾರ್ಯಚಟುವಟಿಕೆಯಲ್ಲಿ ಕಂಡುಬರುವ ಸಮಸ್ಯೆಗಳನ್ನು ಗುರುತಿಸಿ ಅವರಿಗೆ ಉತ್ತಮ ನಿರ್ದೇಶನ ಹಾಗೂ ಪ್ರೋತ್ಸಾಹವನ್ನು ನೀಡಿ ಎಸ್.ಡಿ.ಎಂ.ಸಿ ಕಾರ್ಯಚಟುವಟಿಕೆಗಳಲ್ಲಿ ಉತ್ತಮಗೊಳಿಸಿಕೊಳ್ಳಲು ಪರಿಣಾಮಕಾರಿಯಾಗಿರುತ್ತದೆ.

- ಎಸ್.ಡಿ.ಎಂ.ಸಿಗಳು ಉತ್ತಮವಾಗಿ ಕೆಲಸ ನಿರ್ವಹಿಸುತ್ತದೆ ಎನ್ನುವುದು ಕೇವಲ ಅಧ್ಯಕ್ಷರು ಅಥವ ಒಬ್ಬರು ಅಥವಾ ಇಬ್ಬರು ಕೆಲಸಮಾಡುತ್ತಾರೆ ಎಂಬುದರಿಂದ ಅಲ್ಲ. ಆದರೆ ಇದು ತಂಡತ್ವದಿಂದ ಕೆಲಸ ನಿರ್ವಹಿಸಿದಾಗ ಮಾತ್ರ ಎಂಬ ಅಂಶಗಳನ್ನು ಗುಂಪು ಚರ್ಚೆಯಲ್ಲಿ ಕಂಡು ಬಂದ ಅಭಿಪ್ರಾಯವಾಗಿದೆ.

- ಸಾಧ್ಯವಾದ ಕಡೆಯಲೆಲ್ಲಾ ಎಸ್.ಡಿ.ಎಂ.ಸಿ ಸದಸ್ಯರು ತಮ್ಮಲ್ಲೆ ಕೆಲಸಗಳನ್ನು ಹಂಚಿಕೊಳ್ಳಬೇಕು. ಶೈಕ್ಷಣಿಕ ಚಟುವಟಿಕೆ, ಕಾಮಗಾರಿ, ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆ ಹಾಗೂ ಅಕ್ಷರ ದಾಸೋಹ ಮುಂತಾದ ಶಾಲೆಯ ಕಾರ್ಯಕ್ರಮಗಳ ಬಗ್ಗೆ ಉಪ ಸಮಿತಿಗಳನ್ನು ಮಾಡಿಕೊಳ್ಳಬೇಕು. ಹಾಗೂ ಎಲ್ಲಾ ಪಾಲಕರಿಂದ ಆಯ್ಕೆಯಾಗಿರುವ ಪ್ರತಿಯೊಬ್ಬ ಪ್ರತಿನಿಧಿಯು ಇದರ ಜವಾಬ್ದಾರಿಗಳನ್ನು ಸಮಾನವಾಗಿ ಹಂಚಿಕೊಳ್ಳಬೇಕು.

- ಸಭೆಗಳಲ್ಲಿ ಪ್ರತಿಯೊಬ್ಬರು ಭಾಗವಹಿಸುವಂತಾಗಲು ಸಮಯ, ಸ್ಥಳ ದಿನ ಮುಂತಾದ ವಿಷಯಗಳಲ್ಲಿರುವ ಸಮಸ್ಯೆಗಳನ್ನು ಪರಿಹರಿಸಿ ಪ್ರತಿ ಸದಸ್ಯರಿಗೂ ಸೂಕ್ತ ಹಾಗೂ ಭಾಗವಹಿಸುವಂತಾಗುವ ರೀತಿಯಲ್ಲಿ ಸಭೆಗಳನ್ನು ಸಂಘಟಿಸಬೇಕು.

- ರಾಜ್ಯ ಸರ್ಕಾರದ ವಾರ್ಷಿಕ ಹಣಕಾಸು ಯೋಜನೆಯಲ್ಲಿ ಎಸ್.ಡಿ.ಎಂ.ಸಿ ತರಬೇತಿಯ ಕಾರ್ಯಕ್ರಮವು ಸೇರ್ಪಡೆಗೊಳ್ಳಬೇಕು.

- ಪಾಲಕರ ಪರಷತ್ತಿನ ಸದಸ್ಯರನ್ನು ಒಳಗೊಂಡಂತೆ ಎಸ್.ಡಿ.ಎಂ.ಸಿ ತರಬೇತಿಯನ್ನು ಗ್ರಾಮದ ಹಂತದಲ್ಲೆ ಯೋಜಿಸಬೇಕು ಹಾಗೂ ಸಭೆಗಳಲ್ಲಿ ಸದಸ್ಯರ ಹಾಜರಿಯನ್ನು ಖಚಿತಪಡಿಸಿಕೊಳ್ಳಲು ಸಾಯಂಕಾಲ ಸಮಯದಲ್ಲಿ ಸಭೆಯನ್ನು ಆಯೋಜಿಸಬೇಕು.

- ಎಸ್.ಡಿ.ಎಂ.ಸಿ ತರಬೇತಿಯ ಎಲ್ಲಾ ರೀತಿಯ ಜವಾಬ್ಧಾರಿಯನ್ನು ಗುಚ್ಚ ಸಂಪನ್ಮೂಲ ಕೇಂದ್ರ, ಕ್ಷೇತ್ರ ಸಂಪನ್ಮೂಲ ಕೇಂದ್ರ ಮತ್ತು ಡಯಟ್ ವಹಿಸಿಕೊಳ್ಳಬೇಕು. ತರಬೇತಿಗಳು ಪರಿಣಾಮಕಾರಿಯಾಗಿ ಆಗಿಲ್ಲದಿದ್ದಲ್ಲಿ ಡಯಟ್ ಪ್ರಾಂಶುಪಾಲರು ಇದರ ಜವಾಬ್ಧಾರರಾಗಬೇಕು.

- ದಾಖಲೆಗಳ ನಿರ್ವಹಣೆಯ ಬಗ್ಗೆ ಎಸ್.ಡಿ.ಎಂ.ಸಿ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಪದನಿಮಿತ್ತ ಕಾರ್ಯದರ್ಶಿ ಮತ್ತು ಆಯ್ದ ಪ್ರತಿನಿಧಿಗಳಿಗೆ ವಿಶೇಷ ತರಬೇತಿಯನ್ನು ನೀಡಬೇಕು.

- ತರಬೇತಿಯಲ್ಲಿ ಬಳಸಿದ್ದ ತರಬೇತಿ ಸಾಹಿತ್ಯ ಹಾಗೂ ಪರಿಕರಗಳು ಹಾಗೂ ಅದರಲ್ಲಿದ್ದ ವಿಷಯಗಳ ಬಗ್ಗೆ ತಮ್ಮ ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

- ಗುಚ್ಚ ಸಂಪನ್ಮೂಲ ವ್ಯಕ್ತಿಗಳು ಹಾಗೂ ಸಮೂಹ ಸಂಪನ್ಮೂಲ ವ್ಯಕ್ತಿಗಳು ಗ್ರಾಮ ಪಂಚಾಯತಿ ಹಾಗೂ ತಾಲ್ಲೂಕು ಹಂತದಲ್ಲಿ ಸಂಘಟಿಸಿದ್ದ ತರಬೇತಿ ಕಾರ್ಯಕ್ರಮಗಳ ಬಗ್ಗೆ ಅಸಂತೃಪ್ತಿಯನ್ನು ಬಹಳ ಜನ ವ್ಯಕ್ತಪಡಿಸಿದ್ದಾರೆ.

- ಪದ್ಧತಿಯಂತೆ ಎಸ್.ಡಿ.ಎಂ.ಸಿ ಅಧ್ಯಕ್ಷರು, ಉಪಾಧ್ಯಕ್ಷರ ಜೊತೆಗೆ ಪದನಿಮಿತ್ತ ಕಾರ್ಯದರ್ಶಿಗಳಾದ ಮುಖ್ಯಶಿಕ್ಷಕರು ಮಾತ್ರ ತರಬೇತಿಗಳಿಗೆ ಹಾಜರಾಗುತ್ತಿದ್ದು. ಇತರೆ ಸದಸ್ಯರಿಗೆ ಇಂತಹ ಅವಕಾಶಗಳನ್ನು ನಿರ್ಲಕ್ಷಿಸಲಾಗುತ್ತಿದೆ.

- ತರಬೇತಿಯಲ್ಲಿ ಜವಾಬ್ದಾರಿಗಳು ಹಾಗೂ ಪಾತ್ರಗಳ ಬಗ್ಗೆ ನೇರವಾಗಿ ಹೇಳುವುದಿಲ್ಲ.

- ತರಬೇತಿ ಕಾರ್ಯಾಗಾರಗಳಿಗೆ ತರಬೇತಿ ಪರಿಕರಗಳು ಹಾಗೂ ತರಬೇತಿ ಸಾಹಿತ್ಯಗಳು ಸಕಾಲದಲ್ಲಿ ತಲುಪುವುದಿಲ್ಲ, ತಲುಪಿದರೂ ಅದು ಹಂಚಿಕೆಯಾಗುವುದಿಲ್ಲ, ಇವುಗಳು ಕ್ಷೇತ್ರ ಸಂಪನ್ಮೂಲ ಕೇಂದ್ರದಲ್ಲಿ ದಾಸ್ತಾನು ಆಗಿರುತ್ತದೆ ಎಂಬ ಅಂಶವು ಕಂಡುಬಂದಿದೆ.

- ಎಸ್.ಡಿ.ಎಂ.ಸಿ ಸದಸ್ಯರಿಗೆ ನೀಡಲಾದ ತರಬೇತಿ ಈ ಕೆಳಕಂಡ ಕಾರಣಗಳಿಗಾಗಿ ಪರಿಣಾಮಕಾರಿಯಾಗಿಲ್ಲ. ಅವುಗಳೆಂದರೆ ಎಲ್ಲಾ ಸದಸ್ಯರನ್ನು ಒಳಗೊಂಡಿರಲಿಲ್ಲ, ಪದನಿಮಿತ್ತ ಮತ್ತು ನಾಮ ನಿರ್ದೇಶಿತ ಪ್ರತಿನಿಧಿಗಳನ್ನು ಒಳಗೊಂಡಿರಲಿಲ್ಲ. ಅತಿ ಹೆಚ್ಚು ಸದಸ್ಯರಿಗೆ ಹಣಕಾಸು

ನಿಧಿಯ ಕೊರತೆಯಿಂದ ಒಂದೇ ಬಾರಿ ತರಬೇತಿ ನೀಡಲಾಯಿತು ಎಂದು ಅಧ್ಯಯನದ ವೇಳೆಗೆ ಗಮನಿಸಲಾಗಿದೆ.

- ತರಬೇತಿ ಕಾರ್ಯಗಾರಗಳಲ್ಲಿ ಎಸ್.ಡಿ.ಎಂ.ಸಿ ಸದಸ್ಯರು ಪಾಲ್ಗೊಳ್ಳುವುದು ತೀರ ಕಡಿಮೆ

- ಸಾಮಾನ್ಯವಾಗಿ ತರಬೇತಿಗಳನ್ನು ಎಸ್.ಡಿ.ಎಂ.ಸಿ ಸದಸ್ಯರ ಅಗತ್ಯಕ್ಕೆ ತಕ್ಕಂತೆ ಸಂಘಟಿಸದೆ, ತರಬೇತಿಗೆ ಹಾಜರಾಗುವ ಸಂಪನ್ಮೂಲ ವ್ಯಕ್ತಿಗಳು ಹಾಗೂ ಇಲಾಖೆಯ ಅಗತ್ಯಕ್ಕೆ ತಕ್ಕಂತೆ ಸಂಘಟಿಸಲಾಗುತ್ತಿದೆ.

- ತರಬೇತಿಗಳನ್ನು ಇಬ್ಬರು ಅಥವಾ ಮೂರು ಜನರಿಗೆ ನೀಡುವುದರಿಂದ ಎಸ್.ಡಿ.ಎಂ.ಸಿ ಕಾರ್ಯಚಟುವಟಿಕೆಯನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ಸಹಕಾರಿಯಾಗುವುದಿಲ್ಲ ಎಂಬ ಅಭಿಪ್ರಾಯವನ್ನು ಅತಿ ಹೆಚ್ಚು ಜನ ನೀಡಿದ್ದಾರೆ.

- ತರಬೇತಿ ಕಾರ್ಯಕ್ರಮಗಳ ಬಗ್ಗೆ ತಿಳಿದಿರುವುದಿಲ್ಲ ಎಂಬುದರ ಬಗ್ಗೆ ಬಹಳಷ್ಟು ಮಂದಿ ತಿಳಿಸಿದ್ದಾರೆ.

- ಈ ಅಧ್ಯಯನವು ಗುರುತಿಸಿರುವ ಮತ್ತೊಂದು ಅಂಶ ಎಂದರೆ ತರಬೇತಿಗಳಲ್ಲಿ ಭಾಗವಹಿಸಿದವರ ಸದಸ್ಯರ ಹಾಜರಾತಿ ಹಾಗೂ ಹಣಕಾಸಿನ ಎಲ್ಲಾ ದಾಖಲೆಗಳನ್ನು ಹೊಂದಾಣಿಕೆ ಮಾಡಿಕೊಂಡಿರುತ್ತಾರೆ ಎಂಬ ಅಂಶವನ್ನು ಗುರುತಿಸಿದೆ.

- ಅತಿ ಹೆಚ್ಚು ಜನ ಅಭಿಪ್ರಾಯ ಪಡುವಂತೆ ತರಬೇತಿಗಳು ಬರಿ ನಾಮಕವಸ್ಥೆಗೆ ಮಾತ್ರ, ಹಾಜರಾತಿ ಹಾಳೆಗೆ ಸಹಿ ಹಾಕಿಸಿಕೊಳ್ಳುವುದು, ಊಟ ನೀಡುವುದು, ವಾಪಸ್ಸು ಕಳುಹಿಸುವುದಾಗಿದೆ ಎಂದು ಅಭಿಪ್ರಾಯ ಪಡುತ್ತಾರೆ.

- ಎಸ್.ಡಿ.ಎಂ.ಸಿಯು ಗುಣಾತ್ಮಕ ಶಿಕ್ಷಣ ಅಥವಾ ತರಗತಿ ಒಳಗೆ ನಡೆಯುವ ಪ್ರಕ್ರಿಯೆಗಳಲ್ಲಿ ಎಸ್.ಡಿ.ಎಂ.ಸಿಯ ಪಾತ್ರ ತುಂಬ ಕಡಿಮೆ. ಕಾಮಗಾರಿ, ಕಟ್ಟಡಗಳ ನಿರ್ಮಾಣ ಮತ್ತು ದುರಸ್ತಿ, ಶಾಲಾ ಅನುದಾನ ಬಳಕೆಯಲ್ಲಿ ಎಸ್.ಡಿ.ಎಂ.ಸಿಗಳು ಹೆಚ್ಚು ಕ್ರಿಯಾಶೀಲವಾಗಿವೆ.

- ಎಸ್.ಡಿ.ಎಂ.ಸಿಯು ಗುಣಾತ್ಮಕ ಶಿಕ್ಷಣದ ವಿಷಯದಲ್ಲಿ ಮೇಲುಸ್ತುವಾರಿಯ ಪಾತ್ರ ಬಹಳ ಕಡಿಮೆ ಮಟ್ಟದಲ್ಲಿದೆ ಎಂಬುದನ್ನು ಈ ಅಧ್ಯಯನವು ಗುರುತಿಸಿದೆ.

- ಎಸ್.ಡಿ.ಎಂ.ಸಿ ಸದಸ್ಯರು ತಮ್ಮ ಶಾಲೆಯ ಎಸ್.ಡಿ.ಎಂ.ಸಿ ಕಾರ್ಯದ ಬಗ್ಗೆ ತಿಳಿದಿಲ್ಲ ಏಕೆಂದರೆ ತಮ್ಮ ಪಾತ್ರ ಜವಾಬ್ಧಾರಿಗಳ ಬಗ್ಗೆ ಅರಿವಿಲ್ಲ. ಆದರೆ ಇದರ ಹೊರತಾಗಿ ತಮ್ಮ ಸ್ವಂತ ಮಕ್ಕಳ ಗುಣಾತ್ಮಕ ಶಿಕ್ಷಣದ ಬಗ್ಗೆ ಕಾಳಜಿ, ಬದ್ಧತೆಯಿಂದ ನೋಡುತ್ತಾರೆ, ಆದರೆ ಇದೇ ಸಮಯದಲ್ಲಿ ನಿಯಮಗಳನ್ನು ಮತ್ತು ಕಾರ್ಯತಂತ್ರಗಳನ್ನು ಕಠಿಣವಾಗಿ ಹಾಗೂ ಶಿಸ್ತುಬದ್ಧವಾಗಿ ಪಾಲಿಸುವುದಿಲ್ಲ.

- ಎಸ್.ಡಿ.ಎಂ.ಸಿ ಸಮಿತಿಗಳು ಸ್ವತಃ ತಾವೆ ಗುಣಾತ್ಮಕ ಶಿಕ್ಷಣದ ಗುರಿಯನ್ನು ತಲುಪಲು ಹಾಗೂ ಚಟುವಟಿಕೆಗಳು ಅರ್ಥಗರ್ಭಿತವಾಗಿ ನಡೆಸಲು ಪರಿಣಾಮಕಾರಿ ತರಬೇತಿಗಳನ್ನು ಆಯೋಜಿಸಬೇಕು.

- ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆಯ ಪ್ರಕಾರ ನಾಗರೀಕ ಸೌಕರ್ಯ ಸಮಿತಿಯು ತನ್ನದೆ ಕಾನೂನು ಅಡಿಯಲ್ಲಿ ಬರುವ ಒಂದು ಉಪಸಮಿತಿ ಎಂದು ಗುರುತಿಸಬೇಕು.

- ಎಸ್.ಡಿ.ಎಂ.ಸಿಯನ್ನು ತನ್ನ ವ್ಯಾಪ್ತಿಯಲ್ಲಿ ತನಗೆ ಸಹಕಾರಿಯಾಗಿ ಕೆಲಸ ನಿರ್ವಹಿಸುವ ತನ್ನದೆ ಒಂದು ವ್ಯವಸ್ಥೆ ಎಂದು ಭಾವಿಸಿ ಅದಕ್ಕೆ ತನ್ನ ಕೆಲಸವನ್ನು ಪ್ರಜಾಪ್ರಭುತ್ವ ಮತ್ತು ಪಾರದರ್ಶಕವಾಗಿ ಚಟುವಟಿಕೆಯನ್ನು ನಿರ್ವಹಿಸಲು ಸಹಕಾರವನ್ನು ನೀಡಬೇಕು.

- ಎಸ್.ಡಿ.ಎಂ.ಸಿ ಸಮಿತಿಯು ಕಾರ್ಯ ನಿರ್ವಹಿಸಲು ಎಲ್ಲಾ ವಿಷಯಗಳನ್ನೊಳಗೊಂಡಂತೆ ಪರಿಣಾಮಕಾರಿಯಾದ ಪರಾಮರ್ಶೆ ಸಭೆಗಳನ್ನು ನಡೆಸಬೇಕು. ಈ ಮೂಲಕ ಉತ್ತಮ ರೀತಿಯ ನಿರ್ದೇಶನ ಮತ್ತು ಸಹಕಾರವನ್ನು ನೀಡಬೇಕು.

- ಎಸ್.ಡಿ.ಎಂ.ಸಿ ಹಾಗೂ ಗ್ರಾಮ ಪಂಚಾಯತ್ ನಡುವೆ ಸಮನ್ವಯತೆಯ ಬಗ್ಗೆ ನಿಖರವಾದ ನೀತಿ ಹಾಗೂ ಮಾರ್ಗಸೂಚಿಯನ್ನು ಹೊಂದಿರಬೇಕು. ಪ್ರಸ್ತುತದಲ್ಲಿ ಎರಡರ ನಡುವೆ ಸಮನ್ವಯತೆಯಾಗಲಿ ಅಥವಾ ಸಂಪರ್ಕವಾಗಲಿ ತೀರ ಕಡಿಮೆ. ಪಂಚಾಯತ್ ಸದಸ್ಯರು ಶಾಲೆಗೆ ಭೇಟಿ ನೀಡಿ ಶಾಲಾ ಶಿಕ್ಷಣದಲ್ಲಿ ಏನಾಗುತ್ತಿದೆ ಎಂಬುದನ್ನು ತಿಳಿದುಕೊಳ್ಳಬೇಕು.

- ನೀತಿಯಲ್ಲಿ ತಿಳಿಸಿರುವಂತೆ ನಾಗರೀಕ ಸೌಕರ್ಯ ಸಮಿತಿಯ ಪರಾಮರ್ಶೆ ಸಭೆಗಳನ್ನು 3 ತಿಂಗಳಿಗೊಮ್ಮೆ ನಿರಂತರವಾಗಿ ಪಂಚಾಯತಿ ಹಂತದಲ್ಲಿ ನಡೆಸಬೇಕು ಎಂಬುದನ್ನು ಅಧ್ಯಯನವು ಗುರುತಿಸಿದೆ

- ಪಂಚಾಯತಿ ಮತ್ತು ಎಸ್.ಡಿ.ಎಂ.ಸಿ ನಡುವೆ ಗಟ್ಟಿಯಾದ ಸಮನ್ವಯತೆ ಇರಬೇಕು ಹಾಗೂ ಎಸ್.ಡಿ.ಎಂ.ಸಿಗಳ ಕೆಲಸಗಳನ್ನು ಕಾಲಕಾಲಕ್ಕೆ ಪರಾಮರ್ಶೆ ನಡೆಸುವ ಜವಾಬ್ಧಾರಿಯನ್ನು ತೆಗೆದುಕೊಳ್ಳುವುದು ಉತ್ತಮ.

- ಪಂಚಾಯತಿಯ ನಾಗರೀಕ ಸೌಕರ್ಯ ಸಮಿತಿಯು ಎಸ್.ಡಿ.ಎಂ.ಸಿ ಕಾರ್ಯಚಟುವಟಿಕೆಯ ಬಗ್ಗೆ ಪರಾಮರ್ಶೆ ನಡೆಸಲು ಅಧಿಕಾರವನ್ನು ಹೊಂದಿದ್ದರು ಇದು ಇದವರೆವಿಗೂ ನಡೆದಿಲ್ಲ.

- ಪೂರ್ವ ಪ್ರಾಥಮಿಕ ಶಿಕ್ಷಣ ಹಾಗೂ ಪೌಷ್ಠಿಕ ಆಹಾರ ದೊರಕುವ ಅಂಗನವಾಡಿಗಳಿಗೆ ಹೋಗದ ಮಕ್ಕಳು ಮುಂದಿನ ಶಾಲಾ ಶಿಕ್ಷಣಕ್ಕೆ ಸರಿಯಾಗಿ ತಯಾರಾಗದೆ ಇರುವವರಾಗಿ ಉಳಿದುಕೊಳ್ಳುತ್ತಾರೆ. ಅಂಗನವಾಡಿಗೆ ಹೋದ ಮಕ್ಕಳು ಶಾಲೆಯನ್ನು ಬೇಗನೆ ಹೊಂದಿಕೊಂಡು

ಶಾಲೆಗೆ ಸರಿಯಾಗಿ ಹಾಜರು ಆಗುತ್ತಿರುವುದನ್ನು ನಾವು ಕಂಡಿದ್ದೇವೆ ಎಂಬುದನ್ನು ಗುಂಪು ಚರ್ಚೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ.

- 5 ವರ್ಷ 10 ತಿಂಗಳು ತುಂಬಿದ ಮಕ್ಕಳನ್ನು ಅಂಗನವಾಡಿಯಿಂದ ಶಾಲೆಗೆ ದಾಖಲಿಸುವುದು.

- 5 ವರ್ಷ ತುಂಬಿದ ಮಕ್ಕಳನ್ನು ಅವರ ತಂದೆ-ತಾಯಿಗಳು ಒಪ್ಪಿದಲ್ಲಿ ಶಾಲೆಗೆ ದಾಖಲಿಸಲು ಪ್ರಯತ್ನಿಸಬೇಕು.

- ಸ್ಥಳೀಯವಾಗಿ ಮಕ್ಕಳು ಶಾಲೆ ಬಿಡುತ್ತಿರುವ ಬಗ್ಗೆ ಇರುವ ಮಾಹಿತಿಯನ್ನು ಹಂಚಿಕೊಳ್ಳುವುದು

- ಶಾಲೆ ಬಿಡುತ್ತಿರುವ ಮಕ್ಕಳ ಬಗ್ಗೆ ಮಾಹಿತಿ ಪಡೆದು ಸ್ಥಳೀಯ ಪ್ರಾಧಿಕಾರ ಹಾಗೂ ತಾಯಂದಿರ ಗುಂಪು, ಸ್ವ ಸಹಾಯ ಸಂಘಗಳು, ಮಹಿಳಾ ಮಂಡಲಗಳಿಗೆ ತಿಳಿಸಿ ಶಾಲೆ ಬಿಡುತ್ತಿರುವ ಮಕ್ಕಳು ಶಾಲೆಗೆ ಹೋಗುವಂತೆ ಆಸಕ್ತಿ ತೋರುವಂತೆ ಪ್ರೇರೇಪಿಸಬೇಕು ಎಂಬ ಅಭಿಪ್ರಾಯವನ್ನು ಗುಂಪು ಚರ್ಚೆಯಲ್ಲಿ ಮೂಡಿ ಬಂದಿದೆ.

- ಅಂಗನವಾಡಿಯನ್ನು ಬಲಪಡಿಸಿ ಶಾಲೆ ಬಿಟ್ಟಿರುವ ಮಕ್ಕಳನ್ನು ಹೇಗೆ ಶಾಲೆಗೆ ಸೇರಿಸುತ್ತೇವೆ ಎಂಬುಕ್ಕೆ ಯೋಜನೆ ತಯಾರಿಸುವುದು.

***

ಅಧ್ಯಾಯ ಆರು

ಸಮಾರೋಪ ಮತ್ತು ಮುಂದಿನ ಚರ್ಚೆಗೆ ಶಿಫಾರಸ್ಸುಗಳು

೬.೧ ನೀತಿಯ ಬದಲಾವಣೆ

೬.೨ ಎಸ್.ಡಿ.ಎಂ.ಸಿ ರಚನೆ

೬.೩ ಸಾಮಾರ್ಥ್ಯಾಭಿವೃದ್ಧಿ

೬.೪ ತರಬೇತಿ ವಿಷಯ ಮತ್ತು ವಿಧಾನ

೬.೫ ಎಸ್.ಡಿ.ಎಂ.ಸಿ ಸಭೆಗಳು ಮತ್ತು ನಿರಂತರ ಹಾಜರಾತಿ

೬.೬ ದಾಖಲೀಕರಣ ಮತ್ತು ಅನುಪಾಲನೆ

೬.೭ ಶಾಲಾ ನಿಧಿ ಸ್ಥಾಪನೆ

೬.೮ ಎಸ್.ಡಿ.ಎಂ.ಸಿಗಳಲ್ಲಿ ಆಡಳಿತ ಮತ್ತು ವಿಕೇಂದ್ರಿಕರಣ

೬.೯ ವಿಶೇಷ ಅಗತ್ಯವುಳ್ಳ ಮಕ್ಕಳ ಬಗ್ಗೆ ಜಾಗೃತಿ ಮೂಡಿಸುವುದು

೬.೧೦ ಎಸ್.ಡಿ.ಎಂ.ಸಿಗಳಲ್ಲಿ ವೃತ್ತಿಪರತೆ

೬.೧೧ ಎಸ್.ಡಿ.ಎಂ.ಸಿಗಳಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ

೬.೧೨ ಪಂಚಾಯತ್ ರಾಜ್ ಸಂಸ್ಥೆಗಳ ಜೊತೆ ಬಾಂಧವ್ಯ

೬.೧೩ ತಂದೆ ತಾಯಿ ಪರಿಷತ್ತು

ಹದಿನಾಲ್ಕು ವರ್ಷ ವಯಸ್ಸಿನವರೆಗೆ ಎಲ್ಲ ಮಕ್ಕಳಿಗೆ ಅದರಲ್ಲೂ ವಿಶೇಷವಾಗಿ ವಂಚಿತ ಸಮುದಾಯಗಳಾದ ಪರಿಶಿಷ್ಟ ಜಾತಿ/ಪಂಗಡ, ಅಲ್ಪ ಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡುವುದು ಸಂವಿಧಾನದ ಆಶಯವಾಗಿದೆ. ಸಂವಿಧಾನವು ಈ ಮಹತ್ವದ ಕಾರ್ಯಕ್ಕೆ ಕಾಲಮಿತಿಯನ್ನು ನಿಗದಿಗೊಳಿಸಿ, ಸಂವಿಧಾನ ಜಾರಿಯಾದ ಹತ್ತು ವರ್ಷ ಒಳಗಾಗಿ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ವಾಗ್ದಾನವನ್ನು ನೀಡಿತ್ತು ಹಲವು ಕಾರಣಗಳಿಂದ ಸಂವಿದಾನದ ಈ ಆಶಯವನ್ನು ಈಡೇರಿಸಲು ಸಾಕಷ್ಟು ವಿಳಂಬವಾಗಿದ್ದು. ಮಕ್ಕಳ ಸಂವಿಧಾನಿಕ ಈ ಹಕ್ಕನ್ನು ಯುದ್ಧೋಪಾದಿಯಲ್ಲಿ ಈಡೇರಿಸಲು ಎಲ್ಲ ಭಾಗೀದಾರರು ಬದ್ಧವಾಗಬೇಕಾಗಿದೆ. ಸಂವಿಧಾನದ ಈ ಆಶಯಕ್ಕೆ ಪೂರಕವಾಗಿ ೧೯೯೩ ರಲ್ಲಿ ಸರ್ವೋಚ್ಛ ನ್ಯಾಯಾಲಯವು ಶಿಕ್ಷಣ ಮೂಲಭೂತ ಹಕ್ಕೆಂದು ಘೋಷಿಸಿದೆ. ಮಕ್ಕಳ ಶಿಕ್ಷಣ ಹಕ್ಕು ಜೀವಿಸುವ ಹಕ್ಕಿನ ಭಾಗವಾಗಿದ್ದು, ಯಾವುದೇ ವ್ಯಕ್ತಿ ಘನತೆಯಿಂದ ಜೀವಿಸಬೇಕಾದರೆ ಮೂಲ ಶಿಕ್ಷಣ ಅತ್ಯಗತ್ಯವೆಂದು ಅಭಿಪ್ರಾಯಪಟ್ಟಿದೆ. ಸಮಾನತೆಯ ತತ್ವದ ಆಧಾರದ ಮೇಲೆ ಸಾರ್ವತ್ರಿಕ ಅವಕಾಶ ಒದಗಿಸುವುದು ಗುಣಾತ್ಮಕ ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕೆ ಮೊದಲ ಹೆಜ್ಜೆ, ಸಾರ್ವತ್ರಿಕ ಅವಕಾಶಕ್ಕೆ ಸಂಬಂಧಿಸಿದಂತೆ ನಮ್ಮ ರಾಜ್ಯದಲ್ಲಿ ಸ್ಪಷ್ಟ ಲಿಖಿತ ಮತ್ತು ಸಮಗ್ರ ನೀತಿ ಅಸ್ತಿತ್ವದಲ್ಲಿಲ್ಲ ಈ ಹಿನ್ನಲೆಯಲ್ಲಿ ಸರ್ಕಾರವು ತಾರತಮ್ಯಗಳನ್ನು ತೊಡೆದುಹಾಕಿ ಸಮಾನ ಅವಕಾಶ ಮತ್ತು ಸಮಾನತೆಯನ್ನು ಕಲ್ಪಿಸುವ ಶಿಕ್ಷಣ ವ್ಯವಸ್ಥೆಯನ್ನು ರೂಪಿಸಬೇಕಾಗಿದೆ. ಪ್ರಾಥಮಿಕ ಹಂತದಲ್ಲಿ ರಾಜ್ಯವು ದಾಖಲಾತಿಯಲ್ಲಿ ಗಣನೀಯ ಸಾಧನೆ ಮಾಡಿದೆ, ಆದರೆ ದಾಖಲಾಗಿ ಶಿಕ್ಷಣವನ್ನು ಮುಗಿಸುವ ಮಧ್ಯದಲ್ಲೇ ಶಾಲೆ ಬಿಡುವ ಮಕ್ಕಳ ಸಂಖ್ಯೆಯು ಗಣನೀಯವಾಗಿದೆ.

ಈ ವಿಷಯವನ್ನು ಅಂಕಿ–ಅಂಶಗಳ, ಸರಿ ತಪ್ಪುಗಳ ಬಗ್ಗೆ ಗುದ್ದಾಡುವ ಬದಲು ನೆರೆ ಹೊರೆ ವ್ಯಾಪ್ತಿಯಲ್ಲಿ ಬರುವ ಅರ್ಹ ವಯಸ್ಸಿನ ಪ್ರತಿಯೊಂದು ಮಗುವು ಶಾಲೆಗಳಿಗೆ ಕಡ್ಡಾಯವಾಗಿ ದಾಖಲಾಗಬೇಕು ಮತ್ತು ನಿಗದಿತ ಸಮಯದ ನಂತರ ಮುಂದಿನ ಹಂತಗಳಿಗೆ ಯಾವುದೇ ಅಡಚಣೆಯಿಲ್ಲದೆ ಮುಂದೆ ಹೋಗಬೇಕು. ಗುಣಾತ್ಮಕ ಮತ್ತು ಗುಣಮಟ್ಟದ ಶಿಕ್ಷಣ ಇಂದು ಶಿಕ್ಷಣ ಕ್ಷೇತ್ರದಲ್ಲಿ ಚರ್ಚೆಯ ಕೇಂದ್ರ ಬಿಂದುವಾಗಿದ್ದು. ಗುಣಾತ್ಮಕತೆಯನ್ನು ಆಯಾ ಪ್ರದೇಶಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದಿಂದ ಬೇರ್ಪಡಿಸಿ ಪ್ರತ್ಯೇಕವಾಗಿ ನೋಡಲು ಸಾಧ್ಯವಿಲ್ಲ. ಗುಣಮಟ್ಟದ ಶಿಕ್ಷಣವನ್ನು ಒಂದು ಪ್ರಕ್ರಿಯೆನ್ನಾಗಿ ನೋಡಬೇಕೆ ಹೊರತು ಒಂದು ಉತ್ಪನ್ನವಾಗಿ ನೋಡಲು ಸಾಧ್ಯವಿಲ್ಲ. ಗುಣಾತ್ಮಕತೆಯ ಬಗ್ಗೆ ಚರ್ಚಿಸುವಾಗ ಗುಣಾತ್ಮಕ ಶಿಕ್ಷಣ ಮತ್ತು ಅಗತ್ಯ ಸೌಲಭ್ಯಗಳನ್ನು ಶಿಕ್ಷಣ ಮತ್ತು ಅಗತ್ಯ ಸೌಲಭ್ಯಗಳಿಗಿರುವ ನಿಕಟ ಸಂಬಂಧಗಳನ್ನು ಗುರುತಿಸಬೇಕು. ಯಾವುದೇ ಶಾಲೆಯಲ್ಲಿ ಅಗತ್ಯ ಸಂಖ್ಯೆಯ ಕೊಠಡಿ. ಶಿಕ್ಷಕರು. ಮೂಲಸೌಲಭ್ಯಗಳಾದ ಕುಡಿಯುವ ನೀರು, ಶೌಚಾಲಯ. ಆಡಳಿತಾತ್ಮಕ ಕೆಲಸಗಳನ್ನು ನಿರ್ವಹಿಸಲು ಅಗತ್ಯವಾದ ಸಿಬ್ಬಂಧಿ. ಎಲ್ಲಕ್ಕಿಂತ ಮಿಗಿಲಾಗಿ ಶಿಕ್ಷಕರು ಸಂಪೂರ್ಣವಾಗಿ ಕಲಿಕಾ ಪ್ರಕ್ರಿಯೆಗೆ ತೊಡಗಿಸಿಕೊಳ್ಳಲು ಸಾಧ್ಯವಾಗಬಹುದಾದ ಭೌತಿಕ ಮತ್ತು ಮಾನಸಿಕ ವಾತಾವರಣ ಮತ್ತು ಪ್ರೋತ್ಸಾಹಿಸಿ ಉತ್ತೇಜನ ನೀಡಬಲ್ಲ ಮೇಲುಸ್ತುವಾರಿ ವ್ಯವಸ್ಥೆ ಮಾತ್ರ ಗುಣಾತ್ಮಕತೆಯನ್ನು ತರಬಲ್ಲದು.

ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ಸಮುದಾಯದ ಸಹಬಾಗಿತ್ವವನ್ನು ಖಾತರಿಪಡಿಸಿಕೊಳ್ಳಲು ಮತ್ತು ಸಮುದಾಯದ ಅದರಲ್ಲೂ ವಿಶೇಷವಾಗಿ ಶಾಲೆಯಲ್ಲಿ ಕಲಿಯುತ್ತಿರುವ ಮಕ್ಕಳ ತಂದೆ ತಾಯಿಂದಿರ ಭಾಗವಹಿಸುವಿಕೆಯನ್ನು ಶಾಲಾ ಶಿಕ್ಷಣದ ಎಲ್ಲ ಹಂತಗಳಲ್ಲಿ ದೃಢಪಡಿಸಿಕೊಳ್ಳಲು ರಾಜ್ಯ

ಸರ್ಕಾರವು ಜಾರಿಗೆ ತಂದ ಎಸ್.ಡಿ.ಎಂ.ಸಿ ಪ್ರಜಾಸತ್ತಾತ್ಮಕ ಸಾಂಸ್ಥಿಕ ಚೌಕಟ್ಟನ್ನು ಉತ್ತಮವಾಗಿದೆ. ಸಮುದಾಯ ಭಾಗವಹಿಸುವಿಕೆ ಒಂದು ಮೂಡಿ ಬರುತ್ತಿರುವ ಕಲ್ಪನೆಯಾಗಿದ್ದು, ಸಮುದಾಯಗಳನ್ನು ಅವರ ಸಾಮಾಜಿಕ ನೆಲೆಗಟ್ಟಿನಲ್ಲಿ ಅರ್ಥೈಸಿಕೊಂಡು ಕರೆದೊಯ್ಯಬೇಕೆಂಬ ಅರಿವು ಎಲ್ಲರಿಗೂ ಇರಬೇಕಾಗಿದೆ. ಸಮುದಾಯಗಳ ಕಲ್ಪನೆ ಸಂಕೀರ್ಣತೆಯಿಂದ ಕೂಡಿದ್ದು ಅವರ ಭಾಗವಹಿಸುವಿಕೆಯನ್ನು ಒಂದು ಸರಳ ಪ್ರಕ್ರಿಯೆಗಳು ಪರಿಭಾವಿಸಲು ಸಾಧ್ಯವಿಲ್ಲ. ಸಮುದಾಯದ ಸಬಲೀಕರಣ ಮತ್ತು ಸಕ್ರಿಯ ಭಾಗವಹಿಸುವಿಕೆ ಶಾಲಾ ಶಿಕ್ಷಣದ ಸಾರ್ವತ್ರೀಕರಣದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತದೆ. ಅದೇ ಸಂದರ್ಭದಲ್ಲಿ ಸಮುದಾಯ ಮತ್ತು ಶಿಕ್ಷಕ ಗುಣಾತ್ಮಕ ಶಿಕ್ಷಣಕ್ಕಾಗಿ ಒಟ್ಟಿಗೆ ನಿರ್ವಹಿಸಬೇಕಾದ ಕೆಲಸ ಎಂದು ಮನವರಿಕೆ ಮಾಡಿಕೊಡಬೇಕಾಗಿದೆ.

ಒಟ್ಟಾರೆ ನಮ್ಮ ಅಧ್ಯಯನವು ಅಧ್ಯಯನ ನಡೆಸಿದ ಪಂಚಾಯಿತಿ ವ್ಯಾಪ್ತಿಯಲ್ಲಿರುವ ಶಾಲೆಗಳನ್ನು ಮಾದರಿ ಮಾಡುವಲ್ಲಿ ನಿಮ್ಮ ಹಾಗೂ ಪಂಚಾಯಿತಿಯ ಪಾತ್ರವೇನು ಎಂಬುದನ್ನು ಎಲ್ಲಾ ಭಾಗೀದಾರರೊಂದಿಗೆ ಕೇಂದ್ರೀಕೃತ ಗುಂಪು ಚರ್ಚೆ ಮೂಲಕ ಪಡೆದ ಸಲಹೆಗಳು ಹಾಗೂ ಅಧ್ಯಯನಗಳ ಮೂಲಕ ಪಡೆದ ಒಳಹುಗಳನ್ನು ಇಲ್ಲಿ ಒಟ್ಟು ಗೂಡಿಸಿ ವಿಶ್ಲೇಣೆಯನ್ನು ಇಲ್ಲಿ ನೀಡಲಾಗಿದೆ,

ನಾಗರಿಕ ಸೌಕರ್ಯ ಸಮಿತಿಯು ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಗುಣಾತ್ಮಕ ಶಾಲಾ ಶಿಕ್ಷಣವನ್ನು ಖಚಿತಪಡಿಸುವ ನಿಟ್ಟಿನಲ್ಲಿ ಎಸ್.ಡಿ.ಎಂ.ಸಿ ಗಳಿಗೆ ಎಲ್ಲಾ ರೀತಿಯ ಬೆಂಬಲ ಸಹಕಾರ ಮತ್ತು ಉತ್ತೇಜನವನ್ನು ನೀಡಬೇಕಾಗಿದೆ. ಇದೇ ರೀತಿಯಲ್ಲಿ ಎಸ್.ಡಿ.ಎಂ.ಸಿಗಳು ತಾವು ರಚಿಸುವ ಶಾಲಾಭಿವೃದ್ಧಿಯ ಕ್ರೀಯಾ ಯೋಜನೆಗಳನ್ನು ಸಿ.ಇ.ಸಿ.ಯಗಳು ಅನುಷ್ಠಾನಗೊಳಿಸಲು ಪೂರಕ ಬೆಂಬಲ ನೀಡುವುದು. ಜೊತೆಗೆ ಪ್ರತಿ ೩ ತಿಂಗಳಿಗೊಮ್ಮೆ ಸಿ.ಇ.ಸಿಯು ಸಮನ್ವಯ ಸಭೆಯಲ್ಲಿ ಪಾಲ್ಗೊಂಡು ಶೈಕ್ಷಣಿಕ ಅಭಿವೃದ್ಧಿಯ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿ, ತೀರ್ಮಾನ ಕೈಗೊಳ್ಳುವುದು. ಶಾಲೆಗೆ ಬೇಕಾದ ಅಗತ್ಯಗಳನ್ನು ಪಂಚಾಯಿತಿಯ ಗಮನಸೆಳೆಯುವುದರ ಮೂಲಕ ಪಂಚಾಯಿತಿ ವ್ಯಾಪ್ತಿಯಲ್ಲಿನ ಎಲ್ಲಾ ಮಕ್ಕಳಿಗೆ ಗುಣಾತ್ಮಕ ಶಾಲಾ ಶಿಕ್ಷಣ ಸಿಗುವುದನ್ನು ಖಾತರಿಪಡಿಸಿಕೊಳ್ಳಬೇಕಾಗಿದೆ. ಈ ಹಿನ್ನಲೆಯಲ್ಲಿ ಎಸ್.ಡಿ.ಎಂ.ಸಿ ಮತ್ತು ಸಿ.ಎ.ಸಿ ಪರಸ್ಪರ ಅನ್ಯೋನ್ಯತೆ ಮತ್ತು ಸಹಕಾರದಿಂದ ಕೆಲಸ ನಿರ್ವಹಿಸಬೇಕಾಗಿದೆ. ಶಾಲಾ ವಯಸ್ಸಿನ ಎಲ್ಲ ಮಕ್ಕಳ ಶಾಲೆಗೆ ಸೇರ್ಪಡೆಯನ್ನು ಖಚಿತಪಡಿಸಿಕೊಳ್ಳುವುದು. ಶಾಲಾ ಕಟ್ಟಡಗಳು ಮತ್ತು ಆಟದ ಮೈದಾನಗಳ ನಿರ್ವಹಣೆ, ಉಪಾಧ್ಯಾಯರು ಮತ್ತು ವಿದ್ಯಾರ್ಥಿಗಳ ನಿಯಮಿತ ಹಾಜರಾತಿಯ ಮೇಲೆ ವೀಕ್ಷಣ ಪ್ರಕ್ರಿಯೆ ಮತ್ತು ಸಂಬಂಧಿಸಿದವರಿಗೆ ವರದಿ ಸಲ್ಲಿಸುವುದು. ಎಲ್ಲಾ ಮಕ್ಕಳ ಶಾಲಾ ಸೇರ್ಪಡೆ ಹಾಗೂ ಶಾಲೆ ಬಿಡುವುದನ್ನು ತಪ್ಪಿಸಲು ಪ್ರಚಾರ. ಶಾಲೆ ಬಿಡುವ ಮಕ್ಕಳ ಸ್ಥಾನಮಾನವನ್ನು ಅಂದಾಜು ಮಾಡುವುದು ಮತ್ತು ಅದನ್ನು ತಪ್ಪಿಸಲು ಸೂಕ್ತ ಕ್ರಮ ತೆಗದುಕೊಳ್ಳುವುದು. ಉದ್ದೇಶಿತ ವಿದ್ಯಾರ್ಥಿ ಸಮೂಹಕ್ಕೆ ಅಧ್ಯಯನ ಸಾಮಗ್ರಿ ವಿತರಣೆಯಲ್ಲಿ ತಾಲ್ಲೂಕು ಪಂಚಾಯಿತಿಗೆ ಸಹಕರಿಸುವುದು. ಊರಿನ ಎಲ್ಲಾ ಮಕ್ಕಳು ಶಾಲೆಗೆ ದಾಖಲಾಗುವುದು, ಶಾಲೆಗೆ ನಿರಂತರವಾಗಿ ಹಾಜರಾಗುವುದು. ಮತ್ತು ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯುವಂತೆ ಮಾಡುವುದು ಸಮಾಜದ ಎಲ್ಲಾ ಜನರ ಕರ್ತವ್ಯವಾಗಿದೆ ಹಾಗೂ ಭವಿಷ್ಯದಲ್ಲಿ ಉತ್ತಮ ಪೀಳಿಗೆಯ ನಿರ್ಮಾಣಕ್ಕೆ ಇದು ಅನಿವಾರ್ಹವಾಗಿದೆ. ಇದಕ್ಕಾಗಿ ನಾವೇನು ಮಾಡಬಹುದು ಎಂಬುದನ್ನು ಚಿಂತಿಸಬೇಕಾಗಿದೆ. ಊರಿನಲ್ಲಿ ಪ್ರಾಥಮಿಕ ಶಾಲೆ ಇಲ್ಲ ಎಂದಾದರೆ ಅದು ಏಕೆ ಎಂಬುದನ್ನು ಎಲ್ಲರು ತಿಳಿದುಕೊಳ್ಳಬೇಕು. ಊರಿಗೆ ತಕ್ಷಣ ಒಂದು ಶಾಲೆಯನ್ನು ಮಂಜೂರು ಮಾಡಿಸಿಕೊಳ್ಳಬೇಕು. ವಾರ್ಡ್ ಮತ್ತು ಗ್ರಾಮ ಸಭೆಗಳಲ್ಲಿ ಈ ಕುರಿತು ಬೇಡಿಕೆ ಸಲ್ಲಿಸಿ ಗ್ರಾಮ

ಪಂಚಾಯಿತಿಯಲ್ಲಿ ಈ ಕುರಿತು ನಿರ್ಣಯ ಮಾಡಿಸಿ ಮೇಲುಹಂತಕ್ಕೆ ಬೇಡಿಕೆಯನ್ನು ಕಳುಹಿಸಿಕೊಡಬೇಕು. ಗಂಡಿರಲಿ ಹೆಣ್ಣಿರಲಿ ಆರು ವರ್ಷ ತುಂಬಿದ ಪ್ರತಿಯೊಂದು ಮಗು ಶಾಲೆಗೆ ದಾಖಲಾಗಿದೆಯೆ ಅನ್ನುವುದನ್ನು ನೋಡಬೇಕು. ಇಲ್ಲ ಎಂದಾದರೆ ಶಾಲೆಗೆ ದಾಖಲಾಗದ ಅಥವಾ ಶಾಲೆಗೆ ಕ್ರಮಬದ್ಧವಾಗಿ ಹಾಜರಾಗದ ಮತ್ತು ಶಾಲೆಬಿಟ್ಟ ಮಕ್ಕಳ ಹೆಸರುಗಳನ್ನು ತಿಳಿದುಕೊಂಡು ಅಂತಹ ಮಕ್ಕಳ ಮನೆಗೆ ಭೇಟಿ ನೀಡಿ ಅವರೇಕೆ ಶಾಲೆಗೆ ಬರುತ್ತಿಲ್ಲ ಎಂಬುದನ್ನು ತಿಳಿದುಕೊಳ್ಳಬೇಕು. ಈ ಕಾರ್ಯದಲ್ಲಿ ಶಿಕ್ಷಕರ ನೆರವನ್ನು ಪಡೆದುಕೊಳ್ಳಬೇಕು. ಅಂತಹ ಮಕ್ಕಳ ಹೆತ್ತವರು ಹಾಗೂ ಪೋಷಕರಿಗೆ ಮಕ್ಕಳ ವಿದ್ಯಾಭ್ಯಾಸವು ಅವರ ಭವಿಷ್ಯಕ್ಕೆ ಎಷ್ಟು ಮುಖ್ಯ ಎಂಬುದನ್ನು ಮನವರಿಕೆ ಮಾಡಬೇಕು. ಅವರು ಮಕ್ಕಳನ್ನು ಶಾಲೆಗೆ ಕಳುಹಿಸದೆ ಇರಲು ಇರುವ ಸಮಸ್ಯೆಗಳಿಗೆ ಪರಿಹಾರ ಸೂಚಿಸುವುದು ಸಾಧ್ಯವಿದೆ ಉದಾಹರಣೆಗೆ ಶಾಲೆಗೆ ಬರುವ ಹೆಣ್ಣು ಮಕ್ಕಳಿಗೆ ರಕ್ಷಣೆ ಅಗತ್ಯವಾದರೆ ಅದಕ್ಕೆ ಸ್ವಯಂ ಸೇವಕರ ವ್ಯವಸ್ಥೆಯನ್ನು ಮಾಡಬಹುದು. ತಂದೆ ತಾಯಿ ಕೆಲಸಕ್ಕೆ ಹೋದಾಗ ಮನೆಯ ಚಿಕ್ಕ ಮಕ್ಕಳನ್ನು ನೋಡಿಕೊಳ್ಳುವ ಜವಾಬ್ದಾರಿಯಿಂದಾಗಿ ಆರು ವರ್ಷ ತುಂಬಿದ ಮಕ್ಕಳು ಶಾಲೆಗೆ ಬರದಿದ್ದರೆ ಶಾಲೆಯ ಹತ್ತಿರದಲ್ಲಿ ಒಂದು ಅಂಗನವಾಡಿ ಸ್ಥಾಪಿಸಲು ಕ್ರಮ ಕೈಗೊಳ್ಳಬಹುದು. ಈ ಕುರಿತು ವಾರ್ಡ್ ಹಾಗೂ ಗ್ರಾಮ ಸಭೆಗಳಲ್ಲಿ ಬೇಡಿಕೆ ಸಲ್ಲಿಸಿ ಗ್ರಾಮ ಪಂಚಾಯಿತಿಯ ಗಮನ ಸೆಳೆಯಬಹುದು.

ಎಲ್ಲಾ ಪೋಷಕರು ಶಿಕ್ಷಣದ ಅಗತ್ಯ ಹಾಗೂ ಮಹತ್ವವನ್ನು ತಿಳಿದಿಲ್ಲ. ಇದಕ್ಕಾಗಿ ಪಂಚಾಯತಿ ಸದಸ್ಯರು ತಮ್ಮ ಪರಿಸರದ ಜನರಿಗೆ ಪ್ರೇರಣೆ ಹಾಗೂ ತಿಳುವಳಿಕೆ ನೀಡಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬಹುದು. ಈ ಕಾರ್ಯಕ್ರಮಗಳಲ್ಲಿ ಮಕ್ಕಳನ್ನು ಸರಿಯಾದ ವಯಸ್ಸಿನಲ್ಲಿ ಶಾಲೆಗೆ ಸೇರಿಸುವ ಮತ್ತು ನಿಯಮಿತವಾಗಿ ಶಾಲೆಗೆ ಕಳಿಸಬೇಕಾದ ಅಗತ್ಯವನ್ನು ತಿಳಿಹೇಳಬೇಕು. ವಿದ್ಯಾಭ್ಯಾಸ ಇಲ್ಲದೇ ಹೋದರೆ ಮಕ್ಕಳ ಭವಿಷ್ಯ ಏನಾಗುತ್ತದೆ ಎಂಬುದನ್ನು ಮನವರಿಕೆ ಮಾಡಬೇಕು.

ಶಾಲೆಗೆ ಶಿಕ್ಷಕರು ಕ್ರಮವಾಗಿ ಬರುತ್ತಿಲ್ಲ ಎಂದಾದರೆ ಅದಕ್ಕೆ ಕಾರಣಗಳನ್ನು ತಿಳಿಯಬೇಕು. ಉದಾಹರಣೆಗೆ ಶಾಲೆಯಲ್ಲಿ ಶಿಕ್ಷಕರ ಹುದ್ದೆ ಖಾಲಿ ಇದೆಯೇ? ಹುದ್ದೆ ತುಂಬಲಾಗಿದಿಯೇ? ಶಿಕ್ಷಕರು ದೀರ್ಘಾವಧಿ ರಜೆಯಲ್ಲಿದ್ದಾರೆಯೇ? ಇಂತಹ ಕಾರಣಗಳಿಗೆ ಜಿಲ್ಲಾ ಪಂಚಾಯಿತಿ ಮತ್ತು ಶಿಕ್ಷಣಾಧಿಕಾರಿಗಳನ್ನು ಸಂಪರ್ಕಿಸಬಹುದು. ಗ್ರಾಮ ಪಂಚಾಯಿತಿ ವ್ಯಾಪ್ತಿಯ ಶಿಕ್ಷಕರ ಕೊರತೆ ಇರುವ ಶಾಲೆಗಳಿಗೆ ಹೆಚ್ಚಿನ ಶಿಕ್ಷಕರಿರುವ ಶಾಲೆಗಳಿಂದ ಶಿಕ್ಷಕರನ್ನು ಪಡೆಯಲು ಪ್ರಯತ್ನಿಸಬಹುದು. ಮಂಜೂರಾಗಿರುವ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದನ್ನು ಖಚಿತ ಪಡಿಸಿಕೊಳ್ಳಬಹುದು. ಇಲಾಖೆಯ ಹಲವು ಕಾರ್ಯಕ್ರಮ, ಯೋಜನೆಗಳಲ್ಲಿ ನೀಡಲಾಗುವ ಶಿಕ್ಷಕರ ಹುದ್ದೆಗಳನ್ನು ಶಾಲೆಗಳಿಗೆ ಪಡೆಯಲು ಪ್ರಯತ್ನಿಸಬಹುದು. ಶಿಕ್ಷಕರು ಗೈರು ಹಾಜರಾಗುತ್ತಿದ್ದರೆ ಅದಕ್ಕೆ ಕಾರಣಗಳನ್ನು ತಿಳಿದು. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಅವರಿಗೆ ವಾಸಿಸಲು ಮನೆ ಇದಿಯೆ, ಊರಿನಲ್ಲಿ ವಾಸ ಮಾಡದೇ ಇರುವ ಶಿಕ್ಷಕರಿಗೆ ಸೂಕ್ತ ಪ್ರಯಾಣ ಸೌಕರ್ಯ ಇದಿಯೆ ಇತ್ಯಾದಿಗಳನ್ನು ತಿಳಿದುಕೊಂಡು, ಅವರಿಗೆ ಊರಿನಲ್ಲಿ ಮನೆ ಒದಗಿಸಿಕೊಡುವುದರ ಮೂಲಕ ಈ ಎಲ್ಲಾ ಸಮಸ್ಯೆಗಳನ್ನು ನಿವಾರಿಸಲು ಸಾಧ್ಯವಿದೆ.

ಶಾಲೆಯಲ್ಲಿ ಶಿಕ್ಷಕರು ಕಡಿಮೆ ಇದ್ದು ಮಕ್ಕಳ ಸಂಖ್ಯೆ ಜಾಸ್ತಿ ಇದೆ ಎಂದಾದರೆ ಮುಂದಿನ ಕ್ರಮಗಳನ್ನು ಕೈಗೊಳ್ಳಬಹುದು. ಶಾಲೆಯನ್ನು ಎರಡು ಪಾಳಿಗಳಲ್ಲಿ ನಡೆಸುವುದು. ಅದಕ್ಕೆ ಅವೇ ತರಗತಿ ಕೊಠಡಿಗಳು, ಅದೇ ಶಿಕ್ಷಕರನ್ನು ಬಳಿಸಿಕೊಳ್ಳಬಹುದು. ಇದಕ್ಕಾಗಿ ಶಿಕ್ಷಕರಿಗೆ ಒಂದಕ್ಕಿಂತ ಹೆಚ್ಚು ವಿಷಯಗಳ ಬೋಧನೆಯಲ್ಲಿ ತರಬೇತಿಯನ್ನು ಒದಗಿಸಬೇಕು. ತರಬೇತಿ ಹೊಂದಿರುವ ಶಿಕ್ಷಕರ ಕೊರತೆ

ಇದ್ದರೆ ಗ್ರಾಮ ಪಂಚಾಯತ್ ವ್ಯಾಪ್ತಿಯ ಊರುಗಳಲ್ಲಿರುವ ವಿದ್ಯಾವಂತ ಯುವಕ ಯುವತಿಯರನ್ನು ಸ್ವಯಂ ಸೇವಕರಾಗಿ ನೇಮಿಸಬಹುದು.

ನಿಧಾನವಾಗಿ ಕಲಿಯುವ ಮಕ್ಕಳು ಶಾಲೆಯನ್ನು ಬಿಡದಂತೆ ತಡೆಯಲು ಅವರಿಗೆ ಪರಿಹಾರಾತ್ಮಕ ಬೋಧನೆಗೆ ಅವಕಾಶಗಳನ್ನು ಕಲ್ಪಿಸಬೇಕು. ಇಲ್ಲವೆಂದಾದಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿ (ಎಸ್.ಡಿ.ಎಂ.ಸಿ)ಗಳು ಇಂತಹ ಅವಕಾಶಗಳನ್ನು ಕಲ್ಪಿಸಬಹುದು. ಇದಕ್ಕೆ ಗ್ರಾಮ ಪಂಚಾಯಿತಿ ಸಹಕರಿಸಬೇಕು. ಇವುಗಳೊಟ್ಟಿಗೆ ಎಲ್ಲಾ ಮಕ್ಕಳಿಗೂ ಶಾಲೆಯ ಪ್ರಾರಂಭದ ದಿನವೇ ನೋಟು ಪುಸ್ತಕ, ಸ್ಲೇಟು, ಪಠ್ಯ ಪುಸ್ತಕಗಳನ್ನು ಒದಗಿಸಬೇಕು. ಇಲ್ಲ ಎಂದಾದರೆ ಇದರ ಬಗ್ಗೆ ಗ್ರಾಮ ಪಂಚಾಯಿತಿ ಪ್ರಯತ್ನಿಸಬೇಕು. ಶಿಕ್ಷಣ ಇಲಾಖೆಯಿಂದ ಉಚಿತ ಪಠ್ಯ ಪುಸ್ತಕಗಳನ್ನು ತಂದು ವಿತರಿಸುವಂತೆ ಶಿಕ್ಷಕರನ್ನು ಮತ್ತು ಎಸ್.ಡಿ.ಎಂ.ಸಿ ಗಳನ್ನು ಕೋರಬಹುದು. ಸ್ಲೇಟು, ನೋಟು ಪುಸ್ತಕ ಮುಂತಾದವುಗಳನ್ನು ಒದಗಿಸುವಲ್ಲಿ ಪೋಷಕರು ಊರಿನ ದಾನಿಗಳ ಸಹಾಯ ಪಡೆಯಬಹುದು. ಹಳೆಯ ಪಠ್ಯಪುಸ್ತಕಗಳನ್ನು ಸಂಗ್ರಹಿಸಿ ಮಕ್ಕಳಿಗೆ ಒದಗಿಸಬಹುದು.

ಶಿಕ್ಷಕರಲ್ಲಿ ಸಾಕಷ್ಟು ಬೋಧನಾ-ಕಲಿಕಾ ಸಾಮಾಗ್ರಿ ಇದೆಯೇ ಎಂಬುದನ್ನು ನೋಡಬೇಕು. ಬೋಧನಾ – ಕಲಿಕಾ ಸಾಮಾಗ್ರಿ ಅಗತ್ಯ ಪ್ರಮಾಣದಲ್ಲಿರದಿದ್ದಲ್ಲಿ ಶಿಕ್ಷಕರಿಗೆ ತರಬೇತಿ ನೀಡಬಹುದು. ಅವರು ಸೃಜನಾತ್ಮಕವಾಗಿ ಕಡಿಮೆ ವಚ್ಚದ ಅಥವಾ ವೆಚ್ಚ ರಹಿತ ಬೋಧನಾ ಸಾಮಾಗ್ರಿಗಳನ್ನು ಸ್ಥಳೀಯವಾಗಿ ಲಭ್ಯವಿರುವ ವಸ್ತುಗಳನ್ನು ಉಪಯೋಗಿಸಿ ತಯಾರಿಸುವಂತೆ ಪ್ರೋತ್ಸಾಹಿಸಬಹುದು. ಸ್ಥಳೀಯ ಕುಶಲ ಕರ್ಮಿಗಳು ಶಾಲೆಗೆ ಬಂದು ಅಂತಹ ವಸ್ತುಗಳನ್ನು ತಯಾರಿಸಲು ಶಿಕ್ಷಕರಿಗೆ ಹಾಗೂ ವಿದ್ಯಾರ್ಥಿಗಳಿಗೆ ಸಹಾಯ ಮಾಡುವಂತೆ ಪ್ರೋತ್ಸಾಹಿಸಬೇಕು. ಡಯಟ್‌ನಂತಹ ಸಂಸ್ಥೆಗಳ ಸಹಾಯವನ್ನು ಪಡೆದು ತರಬೇತಿ ಕಾರ್ಯಕ್ರಮಗಳನ್ನು ಏರ್ಪಡಿಸಬಹುದು. ಈ ರೀತಿಯ ತರಬೇತಿಯನ್ನು ಶಿಕ್ಷಣಕ್ಕಾಗಿಯೇ ಮೀಸಲಾದ ಕೆಲವು ಸ್ವಯಂ ಸೇವಾ ಸಂಸ್ಥೆಗಳೂ ಉಚಿತವಾಗಿ ನೀಡುತ್ತವೆ. ಪಂಚಾಯತ್ ಪ್ರದೇಶದಲ್ಲಿ ಅಂತಹ ಸಂಸ್ಥೆಗಳಿದ್ದರೆ ಅದರ ಲಾಭವನ್ನು ಪಡೆದುಕೊಳ್ಳಬಹುದು.

ಶಾಲೆಗಳಿಗೆ ಶಿಕ್ಷಣ ಇಲಾಖೆಯಿಂದ ಸರಬರಾಜಾಗುವ ವಸ್ತುಗಳು ಸರಿಯಾಗಿ ಬಂದಿವೆಯೇ? ಅವುಗಳನ್ನು ಪೂರ್ಣವಾಗಿ ಬಳಸಲಾಗುತ್ತಿದೆಯೆ? ಎಂಬುದನ್ನು ಕಾಲಕಾಲಕ್ಕೆ ಗಮನಿಸುವುದು ಹಾಗೂ ಇಂತಹ ವಸ್ತುಗಳು ಶಾಲೆಗೆ ಸರಬರಾಜು ಆಗದಿದ್ದಲ್ಲಿ ಈ ಬಗ್ಗೆ ಸೂಕ್ತ ಪರಿಶೀಲನೆ ನಡೆಸಿ ಅವು ಶಾಲೆಗೆ ತಲುಪುವಂತೆ ಮಾಡಬೇಕು. ಶಾಲೆಗೆ ವಸ್ತುಗಳು ಸರಬರಾಜು ಆಗಿದ್ದಲ್ಲಿ ಅವುಗಳು ಪೂರ್ತಿಯಾಗಿ ಬಳಕೆಯಾಗುವಂತೆ ನೋಡಿಕೊಳ್ಳಬೇಕು. ಅವುಗಳ ಬಳಕೆಗೆ ಶಿಕ್ಷಕರಿಗೆ ಏನಾದರೂ ತರಬೇತಿ ಅಗತ್ಯವಿದ್ದಲ್ಲಿ ಅದನ್ನು ಒದಗಿಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು. ಈ ದಿಸೆಯಲ್ಲಿ ಮುಖ್ಯ ಶಿಕ್ಷಕರಿಗೆ ಹೆಚ್ಚಿನ ಅಧಿಕಾರ ನೀಡಬಹುದು.

ಗ್ರಾಮ ಪಂಚಾಯತ್ ವ್ಯಾಪ್ತಿಯ ಶಾಲೆಗಳಿಗೆ ಸೂಕ್ತ ಕಟ್ಟಡ, ಸ್ಥಳ ಇದೆಯೇ ಎಂಬುದನ್ನು ಪರಿಶೀಲಿಸಿ ಇಲ್ಲ ಎಂದಾದಲ್ಲಿ ಪಂಚಾಯಿತಿ ಕಟ್ಟಡ, ದಾನಿಗಳ ಮನೆ, ದೇವಸ್ಥಾನ, ಮಸೀದಿಗಳ ಆವರಣ ಮುಂತಾದ ಯಾವುದಾದರೂ ಸಾರ್ವಜನಿಕ ಸ್ಥಳವನ್ನು ಪ್ರಾರಂಭದಲ್ಲಿ ನೀಡಲು ಸಾಧ್ಯವೆ ಎಂಬುದನ್ನು ಪರಿಶೀಲಿಸಬೇಕು, ಇದು ಆಗದಿದ್ದರೆ ತಾತ್ಕಾಲಿಕ ಕಟ್ಟಡ ಆಗುವವರೆಗೆ ಶೆಡ್‌ಗಳನ್ನು ಒದಗಿಸಬಹುದು. ಅಥವಾ ಮರದ ನೆರಳಿನಲ್ಲಿ ಬಯಲು ತರಗತಿಗಳನ್ನೂ ಪ್ರಾರಂಭಿಸಲು

ಯೋಚಿಸಬಹುದು. ಶಾಲೆಗೆ ಕಟ್ಟಡವಿದ್ದಲ್ಲಿ ಅದು ಯಾವ ಸ್ಥಿತಿಯಲ್ಲಿದೆ? ಅದಕ್ಕೆ ದುರಸ್ತಿ, ಸುಣ್ಣ ಬಣ್ಣ ಆಗಬೇಕೇ? ಅಲ್ಲಿ ನೀರು ಸರಬರಾಜು ಇದಿಯೆ? ಶುದ್ಧ ಕುಡಿಯುವ ನೀರು ಸಿಗುತ್ತಿದೆಯೆ? ಶೌಚಾಲಯ ವ್ಯವಸ್ಥೆ ಇದೆಯೆ? ಹೆಣ್ಣು ಮಕ್ಕಳಿಗೆ ಪ್ರತ್ಯೇಕ ಶೌಚಾಲಯ ಇದೆಯೆ? ಶಾಲೆಯ ರಕ್ಷಣೆಗಾಗಿ ಆವರಣ ಗೋಡೆ ಇದೆಯೆ? ಸಾಕಷ್ಟು ಗಾಳಿ ಬೆಳಕಿನ ವ್ಯವಸ್ಥೆ ಇದೆಯೆ? ಕುಳಿತಕೊಳ್ಳಲು ಸಾಕಷ್ಟು ಸ್ಥಳಾವಕಾಶ ಇದೆಯೆ? ಮಕ್ಕಳಿಗೆ ಆಟದ ಮೈದಾನ ಇದೆಯೆ? ಇಲ್ಲವೆಂದಾದಲ್ಲಿ ಈ ಸೌಲಭ್ಯಗಳನ್ನು ಒದಗಿಸಲು ಗ್ರಾಮ ಪಂಚಾಯಿತಿ ಸಹಾಯ ಮಾಡಬಹುದು. ಇದರಿಂದ ಹೆಚ್ಚು ಮಕ್ಕಳು ಶಾಲೆಗೆ ಬರುವಂತಾಗುತ್ತದೆ. ಹಣದ ಅಗತ್ಯವಿದ್ದಲ್ಲಿ ಉದ್ಯೋಗ ಖಾತರಿ ಯೋಜನೆಯಂತಹ ಸರಕಾರಿ ಯೋಜನೆಗಳು. ಸಂಸದರು ಮತ್ತು ಶಾಸಕರ ಸ್ಥಳೀಯ ಅಭಿವೃದ್ಧಿ ನಿಧಿಯಿಂದ ನೆರವು ಪಡೆಯಬಹುದು. ದಾನಿಗಳಿಂದ ನೆರವು ಪಡೆಯಲು ನೆರವಾಗಬಹುದು. ಕೆಲವು ಕಡೆಗಳಲ್ಲಿ ಶಿಕ್ಷಣ ಕ್ಷೇತ್ರಕ್ಕೆ ನೆರವು ನೀಡುವ ದತ್ತಿನಿಧಿಗಳು, ಟ್ರಸ್ಟ್‌ಗಳು ಇದಿಯೇ ಎಂಬುದನ್ನು ತಿಳಿದುಕೊಂಡ ಅವರಿಂದ ನೆರವು ಪಡೆದುಕೊಳ್ಳುವುದು.

ಶಾಲೆಯ ಕೋಣೆಗಳು ಆಕರ್ಷಕವಾಗಿವೆಯೆ? ಮಕ್ಕಳು ಕಲಿಯಲು ಅದೊಂದು ಸಂತೋಷದಾಯಕ ಪರಿಸರ ಹೊಂದಿದೆಯೆ? ಅಲ್ಲಿ ಕರಿ ಹಲಗೆ ಇದೆಯೆ? ಅಕಸ್ಮಾತ್ ಇಲ್ಲವೆಂದಾದಲ್ಲಿ ತರಗತಿಗಳನ್ನು ಆಕರ್ಷಕವಾಗಿಡಲು ಶಿಕ್ಷಕರಿಗೆ ನೆರವಾಗುವುದು, ಬೇರೆ ಬೇರೆ ರೀತಿಯ ಚಿತ್ರಪಟಗಳನ್ನು ಗೋಡೆಗಳಲ್ಲಿ ತೂಗು ಹಾಕಿ. ತರಗತಿಗಳಿಗೆ ಬಣ್ಣ ಹಾಕಿಸಿ ಅಲಂಕರಿಸಿ, ಇದೊಂದು ಸುಲಭದ ಕೆಲಸ, ಮಕ್ಕಳನ್ನು ಊರವರನ್ನು ಇದರಲ್ಲಿ ತೊಡಗಿಸಿಕೊಳ್ಳಬಹುದು. ಕರಿಹಲಗೆ ಇಲ್ಲದಿದ್ದಲ್ಲಿ ಒಂದು ಗೋಡೆಯನ್ನು ಕಪ್ಪು ಮಾಡಿಸಿ. ಮೂರು ಅಡಿ ಎತ್ತರದ ಮಕ್ಕಳು ತಮ್ಮ ಬರವಣಿಗೆ ಅಭ್ಯಾಸ ಮಾಡಲು ಅನುಕೂಲವಾಗುವಂತೆ ಕಪ್ಪು ಗೋಡೆಯನ್ನು ಒದಗಿಸಿ. ಇದು ಮಧ್ಯಪ್ರದೇಶದ ಶಿಕ್ಷಕರ ಸಾಮಾರ್ಥ್ಯಾವೃದ್ಧಿ ಯೋಜನೆಯಲ್ಲಿ ಯಶಸ್ವಿಯಾದ ಅಂಶವಾಗಿದೆ.

ಶಾಲೆಯಲ್ಲಿ ಮಧ್ಯಾಹ್ನದ ಬಿಸಿಊಟವನ್ನು ಸರಿಯಾಗಿ ನೀಡಲಾಗುತ್ತಿದಿಯೇ? ಎಂಬುದನ್ನು ಪರಿಶೀಲಿಸಬೇಕು. ಇಲ್ಲವೆಂದಾದಲ್ಲಿ ಮುಖ್ಯ ಶಿಕ್ಷಕರೊಂದಿಗೆ ಸಮಸ್ಯೆಗಳ ಕುರಿತು ಚರ್ಚಿಸಿ. ಉತ್ತಮಗುಣ ಮಟ್ಟದ ಅಕ್ಕಿ.ಬೇಳೆ, ತರಕಾರಿ ಇತ್ಯಾದಿಗಳನ್ನು ಶಾಲೆಗೆ ಸರಿಯಾಗಿ ಸರಬರಾಜು ಆಗುವಂತೆ ನೋಡಿಕೊಳ್ಳಿ. ದಾನಿಗಳ ನೆರವಿನಿಂದ ಮಕ್ಕಳಿಗೆ ಹೆಚ್ಚುವರಿ ಪೂರಕ ಪೌಷ್ಟಿಕ ಆಹಾರವನ್ನು ಒದಗಿಸಲು ಸಾಧ್ಯವಿದೆ. ಕೆಲವು ಊರುಗಳಲ್ಲಿ ಊರವರು ಸಾಧ್ಯವಾದಗಲೆಲ್ಲಾ ಮಕ್ಕಳಿಗೆ ಹಾಲು, ತರಕಾರಿ ಇತ್ಯಾದಿಗಳನ್ನು ನೀಡುತ್ತಿದ್ದಾರೆ. ಇಂತಹ ಕಾರ್ಯವನ್ನು ಪಂಚಾಯತಿ ಸದಸ್ಯರು ಪ್ರೋತ್ಸಾಹಿಸಬಹುದು. ಶಾಲೆಯ ವೇಳಾಪಟ್ಟಿಯು ಮಕ್ಕಳನ್ನು ಶಾಲೆಗೆ ಕಳುಹಿಸಲು ತೊಡಕಾಗಿದೆಯೆ? ಎಂಬುದನ್ನು ನೋಡಿ, ಹೀಗಿದ್ದಲ್ಲಿ ಶಾಲೆಯ ವೇಳೆಯನ್ನು ಸಡಿಲಗೊಳಿಸಿ ಹೆಚ್ಚು ಮಕ್ಕಳು ಶಾಲೆಗೆ ಬರುವಂತೆ ಮಾಡಲು ಇರುವ ಅವಕಾಶಗಳನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬಹುದು.

ಶಾಲೆಯ ಇಡೀ ವರ್ಷ ವೇಳಾಪಟ್ಟಿಯು ವ್ಯವಸಾಯ ಆಧಾರಿತ ಪ್ರದೇಶದ ಕೃಷಿ ವೇಳಾಪಟ್ಟಿಯೊಂದಿಗೆ ಜೊತೆಗೂಡುವುದಿಲ್ಲವೆ? ಅಂದರೆ ಸುಗ್ಗಿಯ ಕಾಲದಲ್ಲಿ ಮಕ್ಕಳ ನೆರವು ಬೇಕಾದಾಗ ಅವರು ಶಾಲೆಯಲ್ಲಿರಬೇಕಾಗುತ್ತಿದೆಯೇ? ಬೇಸಾಯದ ಕೆಲಸಗಳಿಲ್ಲದ ವೇಳೆ ಶಾಲೆ ಮುಚ್ಚಲಾಗಿದೆಯೇ? ಎಂಬುದನ್ನು ನೋಡಿ. ಹೌದೆಂದಾದರೆ ಜಿಲ್ಲಾ ಪಂಚಾಯಿತಿಯೊಂದಿಗೆ ಸಮಾಲೋಚಿಸಿ ಶಾಲೆಯ ವಾರ್ಷಿಕ ವೇಳಾಪಟ್ಟಿಯನ್ನು ಅಗತ್ಯಕ್ಕೆ ತಕ್ಕಂತೆ ಬದಲಾಯಿಸಲು ಸಾಧ್ಯವಿದೆ.

ಆಗ ಶಾಲೆಯ ವೇಳಾಪಟ್ಟಿಯು ಬೇಸಾಯದ ವೇಳಾಪಟ್ಟಿಯೊಂದಿಗೆ ಹೆಚ್ಚು ಹೊಂದಿಕೊಳ್ಳುತ್ತದೆ. ಇದರಿಂದ ಹೆಚ್ಚು ಗ್ರಾಮೀಣ ಮಕ್ಕಳು ಶಾಲೆಗೆ ಬರಲು ಸಾಧ್ಯವಾಗುತ್ತದೆ.

ಮಕ್ಕಳ ಆರೈಕೆ, ಆರೋಗ್ಯ ಮತ್ತು ಶಾಲಾ ಶಿಕ್ಷಣ ನಮ್ಮ ಜವಾಬ್ದಾರಿಯಲ್ಲ ಎಂಬ ಭಾವನೆ ಇದೆ. ಅಲ್ಲದೆ ಗ್ರಾಮ ಪಂಚಾಯಿತಿಯಲ್ಲಿ ಶಾಲಾ ಶಿಕ್ಷಣದ ನಿರ್ವಹಣೆ ಯಾರದೆಂಬುದರ ಸೂಕ್ತ ಮಾಹಿತಿ ಇಲ್ಲದಿರುವುದನ್ನು ನೋಡಬಹುದು. ಇದು ತಪ್ಪು. ಕಾನೂನುಬದ್ಧವಾಗಿ ಮಕ್ಕಳ ಆರೈಕೆ, ಆರೋಗ್ಯ ಮತ್ತು ಶಾಲಾ ಶಿಕ್ಷಣ ಗ್ರಾಮ ಪಂಚಾಯಿತಿ ನಿರ್ವಹಿಸಬೇಕಾದ ಪ್ರಮುಖ ಕರ್ತವ್ಯವೆಂದು ತಿಳಿಯುವುದು ಬಹಳ ಮುಖ್ಯ. ಗ್ರಾಮ ಪಂಚಾಯಿತಿ ಸ್ಥಳೀಯ ಸರ್ಕಾರವಾಗಿರುವುದರಿಂದ ಮಕ್ಕಳ ಸರ್ವತೋಮುಖವಾದ ಅಭಿವೃದ್ಧಿಗೆ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸುವುದು. ಪಂಚಾಯಿತಿ ಮಟ್ಟದಲ್ಲಿ ವಿಶೇಷವಾಗಿ ಮಕ್ಕಳ ಗ್ರಾಮಸಭೆಯನ್ನು ಆಯೋಜಿಸಿ ಮಕ್ಕಳಿಗೆ ಸಂಬಂಧಿಸಿದ ಅಭಿವೃದ್ಧಿ ವಿಚಾರಗಳಲ್ಲಿ ಅವರ ಅಭಿಪ್ರಾಯ ತಿಳಿದು ಯೋಜನೆಗಳಲ್ಲಿ ಅಳವಡಿಸಿಕೊಳ್ಳುವುದು. ಪಂಚಾಯಿತಿಯ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಮೂರು ಸ್ಥಾಯಿ ಸಮಿತಿಗಳನ್ನು ರಚಿಸಿಕೊಳ್ಳಲು ಅವಕಾಶ ಮಾಡಿಕೊಡುವುದು. ಹಾಗೂ ಮಕ್ಕಳ ಆರೈಕೆ, ಆರೋಗ್ಯ ಹಾಗೂ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದಂತೆ ಅಗತ್ಯ ಕ್ರಮ ತೆಗೆದುಕೊಳ್ಳುವುದು ಮೂಲ ಸೌಕರ್ಯಗಳ ಸಮಿತಿ (ಸಿ.ಎ.ಸಿ) ಮತ್ತು ಸಾಮಾಜಿಕ ನ್ಯಾಯ ಸಮಿತಿಗಳ ಕೆಲಸವಾಗಿದೆ ಎಂಬುದನ್ನು ಅರಿಯುವುದು. ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಪಂಚಾಯತ್ ರಾಜ್ ಕಾಯ್ದೆಯಲ್ಲಿರುವ ಎಲ್ಲಾ ಅವಕಾಶಗಳನ್ನು ತಿಳಿದುಕೊಳ್ಳಲು ಪ್ರಯತ್ನಿಸುವುದು. ಪ್ರತಿ ಪಂಚಾಯತ್ ಸಭೆಯಲ್ಲಿ ಹಾಗೂ ಗ್ರಾಮ ಸಭೆಗಳಲ್ಲಿ ಮಕ್ಕಳ ಅಭಿವೃದ್ಧಿಗೆ ಸಂಬಂಧಿಸಿದ ವಿಷಯಗಳನ್ನು ಚರ್ಚಿಸಿ ಸೂಕ್ತ ತೀರ್ಮಾನಗಳನ್ನು ತೆಗೆದುಕೊಳ್ಳುವುದರ ಮೂಲಕ ಅನುಷ್ಠಾನಗೊಳಿಸುವುದು. ವರ್ಷದಲ್ಲಿ ಕನಿಷ್ಠ ಒಮ್ಮೆ ಮಕ್ಕಳ ವಿಶೇಷ ಗ್ರಾಮ ಸಭೆಯನ್ನು ಏರ್ಪಡಿಸಿ ಅವರಿಗೆ ತಮ್ಮ ಹಕ್ಕುಗಳ ಬಗ್ಗೆ ತಿಳಿಸಿ, ಮುಕ್ತವಾಗಿ ಚರ್ಚಿಸಲು ಅವಕಾಶ ಕಲ್ಪಿಸಿ ಅದಕ್ಕನುಗುಣವಾಗಿ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸುವುದು. ಪಂಚಾಯತ್ ಕಾಯ್ದೆಯ ಬಗ್ಗೆ ಸಮಗ್ರ ಮಾಹಿತಿ ಪಡೆಯಲು ಅಗತ್ಯ ತರಬೇತಿಗಳನ್ನು ಆಯೋಜಿಸಲು ಇಲಾಖೆಯನ್ನು ಒತ್ತಾಯಿಸಬೇಕು. ಪಂಚಾಯತ್ ಕಾಯ್ದೆಯ ಬಗ್ಗೆ ಇರುವ ಮಾಹಿತಿ ಕೈಪಿಡಿ/ಸಾಹಿತ್ಯವನ್ನು ಓದಿ ಹೆಚ್ಚಿನ ವಿಷಯ ತೆಗೆದುಕೊಳ್ಳಲು ಪ್ರಯತ್ನಿಸಬೇಕು. ಉದ್ದೇಶಕ್ಕನುಗುಣವಾಗಿ ರಚನೆಯಾಗಿರುವ ಸ್ಥಾಯಿ ಸಮಿತಿಗಳ ಬಗೆಗಿನ ಮಾಹಿತಿಯನ್ನು ಸಾರ್ವಜನಿಕರ ಗಮನಕ್ಕಾಗಿ ಪಂಚಾಯಿತಿಯಲ್ಲಿ ಪ್ರಕಟಿಸುವುದು.

ಶಾಲಾ ಶಿಕ್ಷಣದ ಸಾರ್ವತ್ರೀಕರಣದ ಜವಾಬ್ದಾರಿ ಹೊತ್ತಿರುವ ಮೂಲ ಸೌಕರ್ಯ ಸಮಿತಿಯು ಪ್ರತಿ ಮೂರು ತಿಂಗಳಿಗೊಮ್ಮೆ ತನ್ನ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳ ಮುಖ್ಯಗುರುಗಳು ಹಾಗೂ ಎಸ್.ಡಿ.ಎಂ.ಸಿ ಪದಾಧಿಕಾರಿಗಳ ಸಭೆ ಆಯೋಜಿಸಿ ಶೈಕ್ಷಣಿಕ ಪ್ರಗತಿಯನ್ನು ಪರಿಶೀಲಿಸುವುದರ ಮೂಲಕ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ಸಿಗುವುದನ್ನು ಖಾತ್ರಿಪಡಿಸಿಕೊಳ್ಳುವುದು. ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಶಾಲೆಗಳಲ್ಲೂ ಸಿಎಸಿಎ ಭಾಗವಾಗಿ ರಚಿಸಲ್ಪಡುವ ಎಸ್.ಡಿ.ಎಂ.ಸಿಗಳ ಬಗ್ಗೆ ಮಾಹಿತಿ ಪಡೆದು ಸುಸೂತ್ರವಾಗಿ ನಡೆಸಲು ಅಗತ್ಯವಾದ ಸಹಕಾರವನ್ನು ಎಸ್.ಡಿ.ಎಂ.ಸಿಗೆ ನೀಡಬೇಕು. ಪಂಚಾಯಿತಿಗಳು ತಮ್ಮ ವಾರ್ಷಿಕ ಅನುದಾನದಲ್ಲಿ ಶಾಲಾ ಶಿಕ್ಷಣದ ಸಾರ್ವತ್ರೀಕರಣಕ್ಕೆ ಅಗತ್ಯಕ್ಕನುಗುಣವಾಗಿ ಹಣವನ್ನು ಒದಗಿಸುವುದರ ಮೂಲಕ ಸಂವಿಧಾನದಲ್ಲಿ ಮೂಲಭೂತ ಹಕ್ಕಾದ ಶಿಕ್ಷಣದ ಹಕ್ಕನ್ನು ಸಾಕಾರಗೊಳಿಸಬೇಕು. ಮಕ್ಕಳ ಈ ಮೂಲಭೂತ ಹಕ್ಕನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸದಸ್ಯರು ಪಂಚಾಯಿತಿಯ ಅನುದಾನದ ಜೊತೆಗೆ ಪಂಚಾಯಿತಿ ಪ್ರದೇಶವನ್ನು ಪ್ರತಿನಿಧಿಸುವ ತಾಲ್ಲೂಕು ಪಂಚಾಯಿತಿ ಸದಸ್ಯರು, ಜಿಲ್ಲಾ ಪಂಚಾಯಿತಿ ಸದಸ್ಯರು, ವಿಧಾನಸಭಾ

ಸದಸ್ಯರು, ಹಾಗೂ ಲೋಕಸಭಾ ಸದಸ್ಯರ ಅನುದಾನಗಳಿಂದ ಗರಿಷ್ಠ ಹಣವನ್ನು ಪಡೆಯಲು ಒತ್ತಾಯಿಸುವುದರ ಮೂಲಕ ನಮ್ಮ ಶಾಲಾ/ ಪಂಚಾಯಿತಿ ವ್ಯಾಪ್ತಿಯ ಎಲ್ಲಾ ಮಕ್ಕಳಿಗು ಗುಣಾತ್ಮಕ ಶಿಕ್ಷಣ ದೊರಕುವಂತೆ ಮಾಡಲು ಶ್ರಮಿಸಬೇಕು. ಈ ಮೂಲಕ ತನ್ನ ಗ್ರಾಮ ಪಂಚಾಯತಿಯ ಎಲ್ಲಾ ಶಾಲೆಗಳನ್ನು ಮಾದರಿ ಶಾಲೆಯನ್ನಾಗಿ ಪರಿವರ್ತಿಸಲು ಸಾಧ್ಯವಿದೆ.

ಸಾರ್ವತ್ರಿಕ ಗುಣಮಟ್ಟದ ಪ್ರಾಥಮಿಕ ಶಿಕ್ಷಣ ಪ್ರಕ್ರಿಯೆಯಲ್ಲಿ ಸಮುದಾಯ ಭಾಗವಹಿಸುವಿಕೆಗೆ ಸಂಬಂಧಿಸಿದಂತೆ ರಾಜ್ಯದ ನೀತಿಗಳಲ್ಲಿ ಸಮಗ್ರ ಬದಲಾವಣೆಗಳನ್ನು ತರಬೇಕು ಎಂಬುದು ಅಧ್ಯಯನದ ಫಲಿತದಿಂದ ಸ್ಪಷ್ಟವಾಗಿ ವ್ಯಕ್ತವಾಗಿದ್ದು, ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಶಾಲೆಯ ಅವಕಾಶ, ದಾಖಲಾತಿ, ಉಳುವಿಕೆ ಮತ್ತು ಶಾಲೆಯ ಮೇಲ್ವಿಚಾರಣೆ ಕಡೆಗೆ ಹೊಸ ಅಭಿವೃದ್ಧಿಯಲ್ಲಿ ಗಮನಾರ್ಹ ಪಾತ್ರವನ್ನು ಹಾಗೂ ಸಾರಥ್ಯವನ್ನು ವಹಿಸಿವೆ. ಆದಾಗ್ಯೂ ಗುಣಾತ್ಮಕ ಶಿಕ್ಷಣ ಮತ್ತು ತರಗತಿ ಪ್ರಕ್ರಿಯೆಗೆ ಸಂಬಂಧಿಸಿದಂತೆ ಸಹ ಸಂಬಂಧದ ಅವಶ್ಯಕತೆ ಇದ್ದು. ಸಹಜವಾಗಿ ಗುಣಾತ್ಮಕ ಮತ್ತು ಪರಿಣಾಮಾತ್ಮಕ ಎರಡು ರೀತಿಯಲ್ಲೂ ಸಮುದಾಯ ಭಾಗವಹಿಸುವಿಕೆ ಆಗಬೇಕಿದೆ. ಶಾಲೆಯ ಒಟ್ಟಾರೆ ಅಭಿವೃದ್ಧಿಗೆ ವಸ್ತುಗಳ ಕೊಡುಗೆ ಮತ್ತು ಶಾಲೆಯ ಪ್ರಕ್ರಿಯೆಯಲ್ಲಿ ಹೊಣೆಗಾರಿಕೆ ಮತ್ತು ಪಾರದರ್ಶಕತೆಯನ್ನು ಖಚಿತಪಡಿಸಿಕೊಳ್ಳಲು ಶಾಲೆಯ ಮೇಲ್ವಿಚಾರಣೆ ಹಾಗೂ ನಿರ್ವಹಣೆ ಗುಣಮಟ್ಟದ ಶಿಕ್ಷಣದ ಕಡೆಗೆ ಮೊದಲ ಹೆಜ್ಜೆ ಎನ್ನಬಹುದು.

ರಾಜ್ಯದ ಶಾಲೆಗಳು ಸಮಾನ ಗುಣಮಟ್ಟದ ಶಿಕ್ಷಣ ಖಚಿತಪಡಿಸಿಕೊಳ್ಳಲು ಮತ್ತು ಶ್ರೇಷ್ಠತೆಯ ಕೇಂದ್ರಗಳಾಗಿ ಕೆಲಸ ನಿರ್ವಹಿಸಲು ವಿಕೇಂದ್ರೀಕೃತ ಪ್ರಜಾಪ್ರಭುತ್ವದ ರಚನೆಯಲ್ಲಿ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳು ಅತ್ಯುತ್ತಮ ಸಾಂಸ್ಥಿಕ ವ್ಯವಸ್ಥೆಯಾಗಿದೆ ಎಂಬುದನ್ನು ಈ ಅಧ್ಯಯನದ ಫಲಿತಗಳು ಸ್ಪಷ್ಟವಾಗಿ ಗುರುತಿಸಿದೆ. ಅಧ್ಯಯನದ ಗತಿಯ ಚಲಕಗಳನ್ನು ಪರಿಶೀಲಿಸಿದಾಗ ಪ್ರಾಥಮಿಕ ಶಿಕ್ಷಣ ಕ್ಷೇತ್ರದಲ್ಲಿ ಎಸ್.ಡಿ.ಎಂ.ಸಿ.ಗಳಿಗೆ ಸಾಕಷ್ಟು ಅಗತ್ಯ ಹಣಕಾಸಿನ ನೆರವು ಮತ್ತು ಸಾಮಾರ್ಥ್ಯಾಭಿವೃದ್ಧಿಯನ್ನು ನೀಡಿದರೆ ಪ್ರಜಾಪ್ರಭುತ್ವದ ಮಾದರಿಯಲ್ಲಿ ಸಮಿತಿಯ ಕಾರ್ಯಚಟುವಟಿಕೆಯಲ್ಲಿ ಅದ್ಭುತಗಳನ್ನು ಮಾಡಬಹುದು ಎಂಬುದು ಸಾಬೀತಾಗಿದೆ. ಸಂವಿಧಾನದ ಪ್ರಕಾರ ಪ್ರಸ್ತುತ ಶಿಕ್ಷಣ ಒಂದು ಮೂಲಭೂತ ಹಕ್ಕು ಹಾಗೂ ಉಚಿತ ಮತ್ತು ಶಿಕ್ಷಣ ಹಕ್ಕು ಕಾಯ್ದೆ ೨೦೦೯ರ ಅಡಿಯಲ್ಲಿ ಎಸ್.ಡಿ.ಎಂ.ಸಿಯು ಒಂದು ಶಾಸನಬದ್ಧ ಸಮಿತಿಯಾಗಿದ್ದು, ಇದು ಸಮಿತಿಗಳನ್ನು ಮತ್ತಷ್ಟು ಬಲಪಡಿಸಲು ಒಂದು ಕಾನೂನಿನ ಆಧಾರವಾಗಿದೆ.

ಮಕ್ಕಳ ದಾಖಲಾತಿ, ಉಳಿಯುವಿಕೆ ಮತ್ತು ಶಾಲಾ ಆಡಳಿತ ಕ್ಷೇತ್ರದಲ್ಲಿ ಸಕಾರಾತ್ಮಕ ವ್ಯತ್ಯಾಸವನ್ನು ಕಾಣಲು ಅವರ ನಾಯಕತ್ವ, ಶಾಲೆಯ ನಿರ್ವಹಣೆ ಮತ್ತು ಮೇಲ್ವಿಚಾರಣೆಯ ಕೌಶಲ್ಯ ವೃದ್ಧಿಸಲು ಬೆಂಬಲವನ್ನು ನೀಡಿದ್ದೆ ಆದರೆ ರಾಜ್ಯವು ನಡೆಸುತ್ತಿರುವ ಸರ್ಕಾರಿ ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣ ಸುಧಾರಣೆಗೆ ಎಸ್.ಡಿ.ಎಂ.ಸಿ ಸಮಿತಿ ಶಾಲೆಗಳು ಅಭಿವೃದ್ಧಿ ಕಾಪಾಡಿಕೊಳ್ಳಲು ಒಂದು ಅರ್ಥದಲ್ಲಿ ಸಾಂಭವ್ಯ ಬಲವಾಗಿದೆ. ಇದರಿಂದ ವೃತ್ತಿಪರತೆ ಕಾಪಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂಬ ದೃಷ್ಟಿಕೋನಗಳನ್ನು ಈ ಅಧ್ಯಯನವು ಸ್ಪಷ್ಟವಾಗಿ ಸೂಚಿಸುತ್ತದೆ.

ಸಮುದಾಯ ಭಾಗವಹಿಸುವಿಕೆ ಶಾಲಾ ಶಿಕ್ಷಣದಲ್ಲಿ ಗುಣಮಟ್ಟ ಸಾಧಿಸಲು ಒಂದು ನಿರ್ಣಾಯಕ ಅಂಶ ಎಂದು ಮಕ್ಕಳಿಗಾಗಿ ಉಚಿತ ಮತ್ತು ಶಿಕ್ಷಣ ಹಕ್ಕು ಕಾಯ್ದೆ ವಾಸ್ತವವಾಗಿ ಪುನರುಚ್ಚರಿಸಿತು. ಸಮುದಾಯದ ಅರ್ಥಪೂರ್ಣ ಭಾಗವಹಿಸುವಿಕೆ ಇಲ್ಲದೆ ಶಾಲಾ ಶಿಕ್ಷಣದಲ್ಲಿ

ಸಮುದಾಯ ಭಾಗವಹಿಸುವಿಕೆ ಕೇವಲ ಘೋಷಣೆಯಾಗಿಯೇ ಉಳಿದುಕೊಳ್ಳುತ್ತದೆ ಎಂಬುದು ಸಾರ್ವತ್ರಿಕ ಸತ್ಯ. ಹೀಗಾಗಿ ಸಾಂಸ್ಥಿಕ ವ್ಯವಸ್ಥೆ ರಚಿಸಲು ಹಾಗೂ ದೀರ್ಘಾವಧಿ ಗುರಿ ಸಾಧಿಸಲು ರಾಜ್ಯವು ಶಾಲಾ ಸಮಿತಿಗಳಿಗೆ ಹೆಚ್ಚು ಜವಾಬ್ದಾರಿ, ವಿಶೇಷವಾಗಿ ಅಧಿಕಾರ ಹಾಗೂ ಹಣಕಾಸಿನ ನೆರವು ಮತ್ತು ಕಾನೂನಿನ ಬೆಂಬಲ ಒದಗಿಸಬೇಕು.

ಶಾಲಾ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯ ಪರಿಣಾಮಕಾರಿಯಾಗಿ ಮತ್ತು ನಿಗದಿತ ಫಲಿತಾಂಶವನ್ನು ಕಂಡುಕೊಳ್ಳುವ ಗುಣಾತ್ಮಕ ಕಾರ್ಯಕ್ರಮವಾಗಬೇಕಾದರೆ ಶಿಕ್ಷಣ ಇಲಾಖೆಯಲ್ಲಿನ ವಿವಿಧ ಸ್ಥರಗಳಲ್ಲಿರುವ ಅಧಿಕಾರಿಗಳು ಶಿಕ್ಷಕ, ಎಸ್.ಡಿ.ಎಂ.ಸಿ ಮತ್ತು ಪಂಚಾಯತಿ ಸದಸ್ಯರ ಜೊತೆ ಅರ್ಥಪೂರ್ಣವಾಗಿ ಮತ್ತು ಪ್ರೋತ್ಸಾಹಕವಾಗಿ ಕೆಲಸ ನಿರ್ವಹಿಸುವಂತಾಗಬೇಕು.

ಗುಣಾತ್ಮಕ ಶಾಲಾ ಶಿಕ್ಷಣದ ಪ್ರಕ್ರಿಯೆಯಲ್ಲಿ ಸಾರ್ವತ್ರೀಕರಣ ತಳಹದಿ ಮತ್ತು ಸಾರ್ವತ್ರೀಕರಣ ಪ್ರಕ್ರಿಯೇಯಲ್ಲಿ ಪ್ರಧಾನ ಪಾತ್ರ ವಹಿಸುವ ಶಾಲೆ ಕೆಳಭಾಗದಲ್ಲಿದ್ದು. ಅದೂ ಇಡೀ ಶೈಕ್ಷಣಿಕ ಭಾರವನ್ನು ಹೊತ್ತಿರುತ್ತದೆ. ಅಲ್ಲದೆ ಗುಣಾತ್ಮಕ ಶಿಕ್ಷಣದ ಮೂಲ ಜವಬ್ದಾರಿಯ ಹೊರೆ ಶಿಕ್ಷಕ, ಪಾಲಕ, ಎಸ್.ಡಿ.ಎಂ.ಸಿ, ಗ್ರಾಮ ಪಂಚಾಯತಿ ಮತ್ತು ಇಡೀ ಸಮುದಾಯದ ಮೇಲೆ ಶಾಸಕಾಂಗ, ಅದೀಕಾರಿ ಶಾಹಿ, ಬುದ್ಧಿಜೀವಿಗಳು, ಶಿಕ್ಷಣ ತಜ್ಞರು ರೂಪಿಸುವ ಸಾರ್ವತ್ರೀಕರಣದ ಯಾವುದೇ ಕಾರ್ಯಕ್ರಮಗಳು ಎಲ್ಲಾ ಭಾಗೀದಾರರ ಅನುಭವ ಮತ್ತು ಒಳುಹುಗಳನ್ನು ಗಣನೆಗೆ ತೆಗೆದುಕೊಳ್ಳದಿದ್ದರೆ ಸಾರ್ವತ್ರೀಕರಣ ಪ್ರಕ್ರಿಯೆಯು ಕನಸಾಗಿಯೇ ಉಳಿಯುತ್ತದೆ. ಗುಣಾತ್ಮಕ ಶಾಲಾ ಶಿಕ್ಷಣದ ಸಾರ್ವತ್ರೀಕರಣ ಎಲ್ಲಾ ಭಾಗೀದಾರರಿಂದ ಅದರಲ್ಲೂ ವಿಶೇಷವಾಗಿ ಶಸಕ್ತಗೊಂಡ ಮತ್ತು ಸೃಜನಾತ್ಮಕವಾಗಿ ತೊಡಗಿಸಿಕೊಳ್ಳಬಲ್ಲ ಶಿಕ್ಷಕ, ಎಸ್.ಡಿ.ಎಂ.ಸಿ ಮತ್ತು ಸಮುದಾಯದಿಂದ ಮಾತ್ರ ಸಾಧ್ಯ. ಅಂತಹ ಸಮುದಾಯವನ್ನು ರೂಪಿಸುವುದು ನಮ್ಮೆಲ್ಲರ ಹೊಣೆ. ಶಾಲಾ ಹಂತದ ನಂತರ ಬರುವ ಪ್ರತಿಯೊಂದು ಸಂರಚನೆ ಮತ್ತು ಸಿಬ್ಬಂಧಿ ಶಾಲೆಗಳಿಗೆ ಬೆನ್ನೆಲುಬಾಗಿ ಮತ್ತು ಪ್ರೋತ್ಸಾಹಕದಾಯಕವಾಗಿ ನಿಲ್ಲಬೇಕು. ಗುಣಾತ್ಮಕ ಶಾಲಾ ಶಿಕ್ಷಣದ ಸಾರ್ವತ್ರೀಕರಣ ಪ್ರಕ್ರಿಯೆಯಲ್ಲಿ ಭಾಗೀದಾರರೆ ಪ್ರಧಾನ ಉಳಿದೆಲ್ಲ ವ್ಯವಸ್ಥೆಗಳು ಅವರಿಗೆ ಪೂರಕ ಮತ್ತು ಬೆಂಬಲವಾಗಿ ಮಾತ್ರ ನಿರ್ವಹಿಸಬಲ್ಲವೆಂಬ ಸಾರ್ವತ್ರಿಕ ಸತ್ಯವನ್ನು ವಾವೆಲ್ಲರೂ ಮನಗಾಣಬೇಕು. ಇದೇ ಸಂದರ್ಭದಲ್ಲಿ ಮಕ್ಕಳ ಮೂಲಭೂತ ಹಕ್ಕನ್ನು ಸಾಕಾರಗೊಳಿಸುವ ಮತ್ತು ಮಕ್ಕಳ ಅರ್ಥಪೂರ್ಣ ಬಾಲ್ಯಾವ್ಯವಸ್ಥೆಯನ್ನು ಅನುಭವಿಸಲು ಅಗತ್ಯವಾದ ಎಲ್ಲ ಕ್ರಮಗಳನ್ನು ಕೈಗೊಂಡು ಮಕ್ಕಳ ಹಕ್ಕುಗಳ ರಕ್ಷಣೆಯ ಹರಿಕಾರರಾಗುವುದರ ಜೊತೆಗೆ ದೇಶಕ್ಕೆ ಉತ್ತಮ ನಾಗರೀಕರನ್ನು ನೀಡುವುದರ ಮೂಲಕ ಸಾಮಾಜಿಕ ನ್ಯಾಯ ಮತ್ತು ಸಮಾನತೆಯ ತಳಹದಿಯ ಮೇಲೆ ಶೈಕ್ಷಣಿಕ ವ್ಯವಸ್ಥೆಯನ್ನು ಕಟ್ಟುವ ಕಾಯಕಕ್ಕೆ ಎಲ್ಲರು ಕಂಕಣಬದ್ದರಾಗಬೇಕಾಗಿದೆ.

ಹಿಂದಿನ ಅಧ್ಯಾಯದಲ್ಲಿ ಪ್ರಸ್ತಾಪಿಸಿದ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯದಲ್ಲಿ ಎಸ್.ಡಿ.ಎಂ.ಸಿಗಳನ್ನು ಮತ್ತಷ್ಟು ಸಬಲೀಕರಣಗೊಳಿಸುವುದರ ಮೂಲಕ ರಾಜ್ಯದ ಪ್ರತಿಯೊಂದು ಮಗುವಿಗೂ ಅದರಲ್ಲೂ ವಿಶೇಷವಾಗಿ ಸರ್ಕಾರಿ ಶಾಲೆಯಲ್ಲಿ ಕಲಿಯುತ್ತಿರುವ ಎಲ್ಲಾ ವರ್ಗದ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಒದಗಿಸುವ ನಿಟ್ಟಿನಲ್ಲಿ ಈ ಕೆಳಕಂಡ ಶಿಫಾರಸ್ಸುಗಳನ್ನು ಮಾಡಲಾಗಿದೆ.

೬.೧ ನೀತಿಯ ಬದಲಾವಣೆ

- ಉಚಿತ ಮತ್ತು ಕಡ್ಡಾಯ ಶಿಕ್ಷಣ ಪಡೆಯಲು ಮಕ್ಕಳ ಹಕ್ಕು ಅಧಿನಿಯಮ, ೨೦೦೯ರ ಪ್ರಕರಣ ೨೧ ಮತ್ತು ೨೨ ರ ಪ್ರಕಾರ ಶಾಲೆಯ ಹಂತದಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಖಚಿತಪಡಿಸಿಕೊಳ್ಳಲು ಶಾಲೆಯ ವ್ಯವಸ್ಥಾಪನಾ ಸಮಿತಿಯನ್ನು ರಚಿಸಬೇಕು ಎಂಬುದನ್ನು ಹೇಳಿದ್ದು, ಇದನ್ನು ರಚಿಸಲು ರಾಜ್ಯವು ಅಗತ್ಯ ಕ್ರಮ ಮತ್ತು ನಿಯಮಗಳನ್ನು ತೆಗೆದುಕೊಳ್ಳಬೇಕು ಎಂದು ತಿಳಿಸಿದ್ದರು. ಈಗಿರುವ ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ ಮಾದರಿ ಉಪವಿಧಿಯು ೨೦೦೬ ಉತ್ತಮವಾಗಿದ್ದು, ಉಪವಿಧಿಯ ನಿಯಮಗಳಲ್ಲಿ ಕೆಲವು ಬದಲಾವಣೆಗಳೊಂದಿಗೆ ಎಸ್.ಎಂ.ಸಿ.ಗಳನ್ನು ರಚಿಸಬೇಕು.

- ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆ ೨೦೦೯ ಜಾರಿಯಾಗಿದ್ದು, ಕಾಯ್ದೆಯ ಅಡಿಯ ಪ್ರಕರಣ ೨೧ ಮತ್ತು ೨೨ರ ಅಡಿಯಲ್ಲಿ ಶಾಲಾನಿರ್ವಹಣಾ ಸಮಿತಿಗಳು/ಎಸ್.ಡಿ.ಎಂ.ಸಿಗಳಿಗೆ ವಿಶೇಷ ಕಾನೂನಾತ್ಮಕ ಅವಕಾಶವನ್ನು ಕಲ್ಪಿಸಿದ್ದು, ಇದು ಎಸ್.ಡಿ.ಎಂ.ಸಿಗಳಿಗೆ ಮತ್ತಷ್ಟು ಕಾನೂನಿನ ಬಲವನ್ನು ತಂದುಕೊಟ್ಟಿದೆ. ಈಗ ಎಸ್.ಡಿ.ಎಂ.ಸಿಗಳು ಕರ್ನಾಟಕ ರಾಜ್ಯ ಪಂಚಾಯತಿ ಅಧಿನಿಯಮ ೧೯೯೩ರ ಅಡಿಯಲ್ಲಿ ಮಾತ್ರ ಕೆಲಸ ನಿರ್ವಹಿಸದೆ ಕೇಂದ್ರ ಸರ್ಕಾರದ ಶಿಕ್ಷಣ ಹಕ್ಕು ಕಾಯ್ದೆ ೨೦೦೯ರ ಅನ್ವಯವು ಕಾನೂನಾತ್ಮಕ ಸಮಿತಿಯಾಗಿದೆ. ಇದನ್ನು ಕರ್ನಾಟಕ ರಾಜ್ಯದ ನೀತಿಯಲ್ಲಿ ಸ್ಪಷ್ಟಪಡಿಸಬೇಕು.

- ಕರ್ನಾಟಕ ಗ್ರಾಮ ಪಂಚಾಯಿತಿ (ಶಾಲಾಭಿವೃದ್ಧಿ ಮತ್ತು ಮೇಲುಸ್ತುವಾರಿ ಸಮಿತಿಗಳ) ಮಾದರಿ ಉಪವಿಧಿ ಪ್ರಕರಣ ೨(೧) ತಿದ್ದುಪಡಿ ತಂದು ಪ್ರೌಢಶಾಲೆಗಳನ್ನು ಈ ಮಾದರಿ ಉಪವಿಧಿ ಅಡಿಯಲ್ಲಿ ತಂದು ಗ್ರಾಮೀಣ ಭಾಗದ ಎಲ್ಲಾ ಶಾಲೆಗಳಲ್ಲೂ ಇದರ ರಚನೆಯಾಗಬೇಕು.

- ಗ್ರಾಮ ಪಂಚಾಯತಿಯ ಕಾಲಾವಧಿಯು ೫ ವರ್ಷಗಳು ಇರುವುದರಿಂದ, ಎಸ್.ಡಿ.ಎಂ.ಸಿಯ ಕಾಲಾವಧಿಯು ಎಸ್.ಡಿ.ಎಂ.ಸಿ ಮಾದರಿ ಉಪವಿಧಿಗಳಲ್ಲಿ ರಾಜ್ಯವು ತಿದ್ದುಪಡಿ ತಂದು ಇದರ ಕಾಲಾವಧಿಯನ್ನು ೫ ವರ್ಷಕ್ಕೆ ವಿಸ್ತರಿಸಬೇಕು.

- ಶಾಲೆಯ ವ್ಯವಸ್ಥಾಪನಾ ಸಮಿತಿ ರಚನೆಯ ಸಂಬಂಧವಾಗಿ (೧) ೨ನೇ ಪ್ರಕರಣದ (ಎನ್) ಖಂಡದ ನಾಲ್ಕನೇ ಉಪ ಖಂಡದಲ್ಲಿ ನಿರ್ದಿಷ್ಟಪಡಿಸಿದ ಶಾಲೆಯು, ಸ್ಥಳೀಯ ಪ್ರಾಧಿಕಾರದ ಚುನಾಯಿತ ಪ್ರತಿನಿಧಿಗಳು, ಅಂಥ ಶಾಲೆಯಲ್ಲಿ ಪ್ರವೇಶ ಪಡೆದ ಮಕ್ಕಳ ತಂದೆ, ತಾಯಿ ಅಥವಾ ಪೋಷಕರು ಮತ್ತು ಶಿಕ್ಷಕರನ್ನು ಒಳಗೊಂಡಿರುವ ಶಾಲಾ ವ್ಯವಸ್ಥಾಪನಾ ಸಮಿತಿಯೊಂದನ್ನು ರಚಿಸತಕ್ಕದ್ದು. ಅಂಥ ಸಮಿತಿಯ ಸದಸ್ಯರಲ್ಲಿ ಕನಿಷ್ಠ ಮುಕ್ಕಾಲು ಮಂದಿ ಸದಸ್ಯರು ತಂದೆ–ತಾಯಿ ಅಥವಾ ಪೋಷಕರಾಗಿರತಕ್ಕದ್ದು. ಅನುಕೂಲಸ್ಥರಲ್ಲದ ಗುಂಪು ಹಾಗೂ ದುರ್ಬಲ ವರ್ಗಕ್ಕೆ ಸೇರಿದ ಮಕ್ಕಳ ಪೋಷಕರು ಅಥವಾ ಪಾಲಕರಿಗೆ ಪ್ರಮಾಣಾನುಸಾರ ಪ್ರಾತಿನಿಧ್ಯ ನೀಡತಕ್ಕದ್ದು, ಅಂಥ ಸಮಿತಿಯ ಸದಸ್ಯರ ಶೇಕಡಾ ಐವತ್ತರಷ್ಟು ಸದಸ್ಯರು ಮಹಿಳೆಯರಾಗಿರತಕ್ಕದ್ದು, ಎಂಬ ವಿಚಾರಗಳಲ್ಲಿ ಸ್ವಲ್ಪ ಬದಲಾವಣೆಯನ್ನು ಮಾತ್ರ ತರಬೇಕಾಗಿದೆ.

೬.೨ ಎಸ್.ಡಿ.ಎಂ.ಸಿ ರಚನೆ

- ಈ ಅದ್ಯಯನವು ಗುರುತಿಸಿರುವುದೆನೆಂದರೆ ಎಸ್.ಡಿ.ಎಂ.ಸಿ ರಚನೆಯನ್ನು ಮುಖ್ಯ ಶಿಕ್ಷಕರು ಪ್ರಜಾಪ್ರಭುತ್ವ ಮಾದರಿಯಲ್ಲಿ ಮಾಡುತ್ತಿಲ್ಲ. ಕಾರಣ ಈ ವಿಷಯಗಳಲ್ಲಿ ಸ್ವಂತ ಹಿತಾಶಕ್ತಿ ಮತ್ತು ತಾನೆ ಆಯ್ಕೆ ಮಾಡಿದವರು ಆಗಬೇಕು ಎಂಬ ಇಚ್ಚೆ. ಈ ರೀತಿಯ ಅಸಂವಿಧಾನಿಕ ಕ್ರಮಗಳಿಗೆ ರಾಜ್ಯವು ಎಸ್.ಡಿ.ಎಂ.ಸಿಗಳ ರಚನೆಗೆ ಬೇಕಾದ ಅಗತ್ಯ ಕ್ರಮಗಳನ್ನು ಎಸ್.ಡಿ.ಎಂ.ಸಿ ಮಾದರಿ ಉಪವಿಧಿಯಲ್ಲಿ ಸೇರಿಸಬೇಕು. ಅಧ್ಯಕ್ಷರ ಚುನಾಯಿಸುವುದು, ವಿದ್ಯಾರ್ಥಿ ಪ್ರತಿನಿಧಿಗಳು, ನಾಮನಿರ್ದೇಶಿತ ಸದಸ್ಯರನ್ನು ಪ್ರಜಾಪ್ರಭುತ್ವ ಮಾದರಿಯಲ್ಲಿ ಆಯ್ಕೆ ಮಾಡಿಕೊಳ್ಳಲು ಕ್ರಮಗಳನ್ನು ತಿಳಿಸಬೇಕು.

- ಶಾಲಾ ಹಂತದ ಎಸ್.ಡಿ.ಎಂ.ಸಿಗಳನ್ನು ರಚಿಸುವ ಕ್ರಮಗಳ ಕುರಿತು ವಿವಿಧ ಹಂತದ ಅಧಿಕಾರಿಗಳಾದ ಕಿರಿಯ, ಹಿರಿಯ, ಪ್ರೌಢ ಶಾಲೆಯ ಮುಖ್ಯ ಶಿಕ್ಷಕರನ್ನು ಒಳಗೊಂಡಂತೆ, ಗುಚ್ಚ ಸಂಪನ್ಮೂಲ ವ್ಯಕ್ತಿ, ಸಮೂಹ ಸಂಪನ್ಮೂಲ ವ್ಯಕ್ತಿ, ಕ್ಷೇತ್ರ ಸಮನ್ವಯಾಧಿಕಾರಿಗಳು ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ಶಿಕ್ಷಣ ಸಂಯೋಜಕರಿಗೆ ತರಬೇತಿಗಳನ್ನು ಆಯೋಜಿಸಬೇಕು.

- ಕ್ಷೇತ್ರ ಭೇಟಿಯ ಗುಂಪು ಚರ್ಚೆಯಲ್ಲಿ ಕಂಡುಬಂದಂತೆ ಎಸ್.ಡಿ.ಎಂ.ಸಿಯ ಮಾದರಿ ಉಪವಿಧಿಯನ್ನು ಬಲಪಡಿಸಲು ಸರ್ಕಾರವು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

- ಉತ್ತಮ ಮತ್ತು ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸಲು ಎಸ್.ಡಿ.ಎಂ.ಸಿ ಮತ್ತು ಗ್ರಾಮ ಪಂಚಾಯತಿ ನಡುವೆ ಉತ್ತಮ ಮಾನವೀಯ ಸಂಬಂಧವನ್ನು ಉಂಟು ಮಾಡಲು ಆಸಕ್ತಿದಾಯಕ ಕ್ರಮಗಳನ್ನು ತೆಗೆದುಕೊಳ್ಳಬೇಕು.

೬.೩ ಸಾಮಾರ್ಥ್ಯಭಿವೃದ್ಧಿ

- ಮಾದರಿ ಉಪವಿಧಿಯಲ್ಲಿರುವಂತೆ ಎಸ್.ಡಿ.ಎಂ.ಸಿ ಪಾತ್ರ ಹಾಗೂ ಜವಾಬ್ಧಾರಿಗಳ ಬಗ್ಗೆ ಎಸ್.ಡಿ.ಎಂ.ಸಿ ಸದಸ್ಯರು ಹಾಗೂ ಪಾಲಕರ ಪರಿಷತ್ತಿನ ಸದಸ್ಯರಿಬ್ಬರಿಗೂ ಸಾಮಾರ್ಥ್ಯಾಭಿವೃದ್ಧಿಯನ್ನು ಮಾಡಲು ಯೋಜನೆಯನ್ನು ಮಾಡಬೇಕು.

- ಸಾರ್ವತ್ರಿಕ ಶಾಲಾ ಶಿಕ್ಷಣವು ಜನಾಂದೋಲನದ ರೀತಿಯಲ್ಲಿ ಆಗುವ ರೀತಿಯಲ್ಲಿ ಎಸ್.ಡಿ.ಎಂ.ಸಿ ಸದಸ್ಯರು ಹಾಗೂ ತಂದೆ-ತಾಯಿ ಪರಿಷತ್ತಿನ ಸದಸ್ಯರಿಗೆ ತಿಳುವಳಿಕೆ ಹಾಗೂ ಜಾಗೃತಿ ಮೂಡಿಸಬೇಕು.

- ತಂದೆ ತಾಯಿ ಪರಿಷತ್ತಿನಿಂದ ಎಸ್.ಡಿ.ಎಂ.ಸಿ ಪ್ರತಿನಿಧಿಸುವ ಸದಸ್ಯರಿಗೆ ತಿಳುವಳಿಕೆ ಹೆಚ್ಚಿಸುವ ಎಲ್ಲಾ ರೀತಿಯ ಅಗತ್ಯ ಕ್ರಮಗಳನ್ನು ರಾಜ್ಯ ಸರ್ಕಾರವು ತೆಗೆದುಕೊಳ್ಳಬೇಕು

- ವಿನೂತನ ಮಾಧ್ಯಮಗಳಾದ ಬೀದಿ ನಾಟಕ, ನಾಟಕ, ಕಿರುಸಿನಿಮಾ, ಜಾನಪದ ಕಲಾ ಮಾಧ್ಯಮ ಮುಂತಾದ ತಿಳುವಳಿಕೆ ಹೆಚ್ಚಿಸುವ ಕಾರ್ಯಕ್ರಮಗಳ ಮೂಲಕ ಮೇಲಿನ ಹಂತದಿಂದ ಕೆಳಗಿನ ಹಂತದವರೆಗೆ ತಿಳುವಳಿಕೆಯನ್ನು ಹೆಚ್ಚಿಸಬೇಕು.

- ತಾಲ್ಲೂಕು, ಗುಚ್ಚ ಸಂಪನ್ಮೂಲ ಕೇಂದ್ರ ಮತ್ತು ಗ್ರಾಮ ಪಂಚಾಯತಿ ಹಂತದವರೆಗೆ ಎಸ್.ಡಿ.ಎಂ.ಸಿ ಮಾದರಿ ಉಪವಿಧಿಯಲ್ಲಿರುವಂತೆ ಮಾಹಿತಿಯನ್ನು ತರಬೇತಿದಾರರು ನೀಡುವಂತೆ ಖಚಿತಪಡಿಸಿಕೊಳ್ಳಲು ರಾಜ್ಯವು ಎಲ್ಲಾ ರೀತಿಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

- ಕ್ರಮವಾಗಿ ಗುಚ್ಚ ಸಂಪನ್ಮೂಲ ವ್ಯಕ್ತಿ, ಸಮೂಹ ಸಂಪನ್ಮೂಲ ವ್ಯಕ್ತಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಲ್ಲಿ ಸಮುದಾಯ ಸಹಭಾಗಿತ್ವದ ಅಗತ್ಯತೆಯ ಬಗ್ಗೆ ತನ್ನೊಳಗೆ ಬರುವಂತೆ ರಾಜ್ಯವು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

- ಗುಚ್ಚ ಸಂಪನ್ಮೂಲ ವ್ಯಕ್ತಿ, ಸಮೂಹ ಸಂಪನ್ಮೂಲ ವ್ಯಕ್ತಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳಲ್ಲಿ ಎಸ್.ಡಿ.ಎಂ.ಸಿ ಮಾದರಿ ಉಪವಿಧಿಯ ಪಾತ್ರ ಜವಾಬ್ದಾರಿ ಹಾಗೂ ಕಾರ್ಯಚಟುವಟಿಕೆಯ ಬಗ್ಗೆ ವಿಕೇಂದ್ರೀಕರಣದ ಆಡಳಿತದ ಬಗ್ಗೆ ತಾತ್ವಿಕವಾಗಿ ಗೌರವಿಸುವ ರೀತಿಯಲ್ಲಿ ತಿಳುವಳಿಕೆಗಳನ್ನು ಮೂಡಿಸಬೇಕು.

- ಮಾದರಿ ಉಪವಿಧಿಯ ಮಾಹಿತಿಯು ತಿಳಿಯುವಂತಾಗಲು ತುರ್ತಾಗಿ ಸಾರ್ವಜನಿಕ ಸ್ಥಳಗಳಾದ ಶಾಲೆ, ಸಾರ್ವಜನಿಕ ಗ್ರಂಥಾಲಯ, ಮುಂದುವರಿಕಾ ಶಿಕ್ಷಣ ಕೇಂದ್ರಗಳು, ಗ್ರಾಮ ಪಂಚಾಯತಿ ಕಛೇರಿ, ಗುಚ್ಚ ಸಂಪಪನ್ಮೂಲ ಕೇಂದ್ರ, ಸಮೂಹ ಸಂಪನ್ಮೂಲ ಕೇಂದ್ರ, ಕ್ಷೇತ್ರ ಸಂಪನ್ಮೂಲ ಕೇಂದ್ರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಗಳಲ್ಲಿ ಮುಂತಾಗಿ ಪ್ರದರ್ಶಿಸಬೇಕು ಹಾಗೂ ಸಾರ್ವಜನಿಕರಿಗೆ ಸಿಗುವ ರೀತಿಯಲ್ಲಿ ಇರಬೇಕು.

೬.೪ ತರಬೇತಿ ವಿಷಯ ಮತ್ತು ವಿಧಾನ

- ಎಸ್.ಡಿ.ಎಂ.ಸಿ ಸದಸ್ಯರು ಮತ್ತು ತಂದೆ ತಾಯಿ ಪರಿಷತ್ತಿನ ಸದಸ್ಯರು ಒಳಗೊಂಡಂತೆ ಶಾಲೆ/ಗ್ರಾಮ ಹಂತದಲ್ಲಿ ಆಯೋಜಿಸಿ ಅವರನ್ನು ಬಲಗೊಳಿಸಲು ಚಳುವಳಿಯ ರೂಪದಲ್ಲಿ ತರಬೇತಿಯನ್ನು ಆಯೋಜಿಸಬೇಕು.

- ಎಸ್.ಡಿ.ಎಂ.ಸಿಯ ಎಲ್ಲಾ ಚುನಾಯಿತ ಸದಸ್ಯರು, ನಾಮನಿರ್ದೇಶಿತ, ಪದನಿಮಿತ್ತ ಸದಸ್ಯರೆಲ್ಲರಿಗೂ ತರಬೇತಿಯನ್ನು ಕಡ್ಡಾಯವಾಗಿ ನೀಡಬೇಕು.

- ಎಸ್.ಡಿ.ಎಂ.ಸಿಗಳು ರಚನೆಯಾದ ಅಥವಾ ಶಾಲೆ ಪ್ರಾರಂಭವಾದ ಎರಡು ತಿಂಗಳೊಳಗೆ ಪ್ರಾರಂಭದ ತರಬೇತಿಯನ್ನು ಪೂರ್ಣಗೊಳಿಸುವುದು, ಎಲ್ಲಾ ಸದಸ್ಯರಿಗೆ ತರಬೇತಿ ನೀಡಿರುವ ಬಗ್ಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳು ಖಾತ್ರಿಪಡಿಸಿಕೊಳ್ಳುವುದು.

- ಎಸ್.ಡಿ.ಎಂ.ಸಿಗಳ ಸದಸ್ಯರಿಗೆ ನೀಡುವ ತರಬೇತಿಯನ್ನು ಗ್ರಾಮ ಪಂಚಾಯತಿ ಹಂತದಲ್ಲಿ ಆಯೋಜಿಸುವುದು. ಇದಕ್ಕೆ ಸಂಬಂಧಿಸಿದ ಗುಚ್ಛ ಸಂಪನ್ಮೂಲ ವ್ಯಕ್ತಿ, ಶಿಕ್ಷಣ ಸಂಯೋಜಕ, ಸಮೂಹ ಸಂಪನ್ಮೂಲ ವ್ಯಕ್ತಿಗಳು, ಗ್ರಾಮ ಪಂಚಾಯತಿ ಅಧ್ಯಕ್ಷ ಹಾಗೂ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು ತರಬೇತಿ ಪ್ರಕ್ರಿಯೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವುದು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಮನ್ವಯಾಧಿಕಾರಿಗಳು ಸಂದರ್ಭೋಚಿತವಾಗಿ ತರಬೇತಿಯಲ್ಲಿ ಭಾಗವಹಿಸುವುದು.

- ತರಬೇತಿಯಲ್ಲಿ ಭಾಗವಹಿಸದೆ ಇರುವ ಎಸ್.ಡಿ.ಎಂ.ಸಿ ಸದಸ್ಯರಿಗೆ ಮುಖ್ಯ ಶಿಕ್ಷಕರು ತರಬೇತಿಯನ್ನು ಪಡೆದ ಸಮರ್ಥ ಎಸ್.ಡಿ.ಎಂ.ಸಿ ಸದಸ್ಯರ ನೆರವಿನೊಂದಿಗೆ ಗುಚ್ಛ ಸಂಪನ್ಮೂಲ ವ್ಯಕ್ತಿಯ ನೇತೃತ್ವದಲ್ಲಿ ಒಂದು ದಿನದ ತರಬೇತಿಯನ್ನು ನೀಡುವುದು.

- ತರಬೇತಿಯ ಪರಿಣಾಮಕತೆಯನ್ನು ಕಾಯ್ದುಕೊಳ್ಳಲು ಒಂದು ತರಬೇತಿಯಲ್ಲಿ ೪೦ ಎಸ್.ಡಿ.ಎಂ.ಸಿ ಸದಸ್ಯರನ್ನು ಮಾತ್ರ ತೊಡಗಿಸಿಕೊಳ್ಳಬೇಕು.

- ಎಸ್.ಡಿ.ಎಂ.ಸಿ ಸದಸ್ಯರ ತರಬೇತಿಗಾಗಿ ನಿಗಧಿಪಡಿಸಿರುವ ಅನುದಾನದ ಮೊತ್ತ ಸಾಕಷ್ಟಿಲ್ಲದಿರುವುದನ್ನು ಅಧ್ಯಯನವು ಗುರುತಿಸಿದೆ. ಆದ್ದರಿಂದ ಎಲ್ಲಾ ಎಸ್.ಡಿ.ಎಂ.ಸಿ ಸದಸ್ಯರ ತರಬೇತಿಯನ್ನು ನೀಡಲು ಅವಶ್ಯವಾದ ಅನುದಾನವನ್ನು ನೀಡಬೇಕೆಂದು ಅಧ್ಯಯನವು ಪ್ರತಿಪಾದಿಸುತ್ತದೆ.

- ಶಾಲಾ ಪ್ರಕ್ರಿಯೆಯಲ್ಲಿ ಎಸ್.ಡಿ.ಎಂ.ಸಿ ಪ್ರತಿನಿಧಿಸುವ ವಿದ್ಯಾರ್ಥಿಗಳ ಅರ್ಥಪೂರ್ಣ ಭಾಗವಹಿಸುವಿಕೆಗೆ ಪ್ರತ್ಯೇಕವಾದ ಶಿಶು ಸ್ನೇಹಿ ತರಬೇತಿ ಸಂಚಿಕೆಯನ್ನು ರೂಪಿಸಬೇಕಾದ ಪ್ರಬಲ ಅಗತ್ಯವನ್ನು ಅಧ್ಯಯನವು ಗುರುತಿಸಿದೆ.

- ವ್ಯವಸ್ಥಾಪನಾ ಹಾಗೂ ವೃತ್ತಿಪರತೆಯ ಕೌಶಲ್ಯಗಳು ಇರುವ ರೀತಿಯಲ್ಲಿ ತರಬೇತಿ ಕಾರ್ಯಕ್ರಮಗಳನ್ನು ವಿನ್ಯಾಸಗೊಳಿಸಬೇಕು.

- ತರಬೇತಿ ವಿಧಾನವು ನಿರೀಕ್ಷಿತ ಮಟ್ಟ ಮುಟ್ಟಿಲ್ಲ. ಒಂದೆ ರೀತಿಯ ಮಾದರಿಗೆ ಅಂಟಿಕೊಳ್ಳದೆ ವಿವಿಧ ವಿಧಾನಗಳನ್ನು ಅಳವಡಿಸಿಕೊಳ್ಳಬೇಕು.

- ರಾಜ್ಯವು ತನ್ನ ವಾರ್ಷಿಕ ಹಣಕಾಸಿನ ಯೋಜನೆಯಲ್ಲಿ ಎಸ್.ಡಿ.ಎಂ.ಸಿ ತರಬೇತಿ ಉದ್ದೇಶಕ್ಕಾಗಿ ಅನುದಾನವನ್ನು ಮೀಸಲಿಡಬೇಕು.

- ತರಬೇತಿಯನ್ನು ಶಾಲೆ ಅಥವಾ ಎಲ್ಲಿ ಆಯೋಜಿಸಲಾಗಿದೆಯೋ ಅಲ್ಲಿಗೆ ತರಬೇತಿ ಪರಿಕರಗಳು ಸರಿಯಾದ ಸಮಯಕ್ಕೆ ಮುಟ್ಟುವ ರೀತಿಯಲ್ಲಿ ರಾಜ್ಯವು ಖಚಿತಪಡಿಸಿಕೊಳ್ಳಬೇಕು.

- ತರಬೇತಿ ಕಾರ್ಯಕ್ರಮಗಳಲ್ಲಿ ವಿವಿಧ ವಿಧಾನಗಳಲ್ಲಿ ತರಬೇತಿಯನ್ನು ನೀಡಲು ಹಿರಿಯ/ತಜ್ಞ ಸಂಪನ್ಮೂಲ ವ್ಯಕ್ತಿಯು ನಿರ್ದಿಷ್ಟ ತಿಳುವಳಿಕೆಯನ್ನು ನೀಡಬೇಕು.

- ತಕ್ಷಣದ ಅಧಿಕಾರಿಗಳಾದ ಗುಚ್ಚ ಸಂಪಪನ್ಮೂಲ ವ್ಯಕ್ತಿ, ಸಮೂಹ ಸಂಪನ್ಮೂಲ ವ್ಯಕ್ತಿ, ಕ್ಷೇತ್ರ ಸಂಪನ್ಮೂಲ ವ್ಯಕ್ತಿ, ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕಿರಿಯ, ಹಿರಿಯ, ಹಾಗೂ ಪ್ರೌಢ ಶಾಲೆ ಮುಖ್ಯ ಶಿಕ್ಷಕರು ಒಳಗೊಂಡಂತೆ ಶಾಲಾ ಹಂತದಲ್ಲಿ ಎಸ್.ಡಿ.ಎಂ.ಸಿ ರಚನಾ ಪ್ರಕ್ರಿಯಗಳ ಬಗ್ಗೆ ತರಬೇತಿಯನ್ನು ನೀಡಬೇಕು.

- ದಾಖಲೆಗಳ ನಿರ್ವಹಣೆಗಾಗಿ ಪದನಿಮಿತ್ತ ಕಾರ್ಯದರ್ಶಿ, ಅಧ್ಯಕ್ಷರು, ಉಪಾಧ್ಯಕ್ಷರು ಮತ್ತು ಕೆಲವು ಆಯ್ದ ಸದಸ್ಯರಿಗೆ ವಿಶೇಷ ತರಬೇತಿಯನ್ನು ನೀಡಬೇಕು.

- ಪ್ರತಿ ತರಬೇತಿ ಕಾರ್ಯಕ್ರಮದ ಕೊನೆಯಲ್ಲಿ ತರಬೇತಿಯ ಬಗ್ಗೆ ಪಾಲ್ಗೊಂಡವರ ಹತ್ತಿರ ಹಿಮ್ಮಾಹಿತಿ ಪಡೆದುಕೊಳ್ಳಲು ಕ್ರಮಗಳು ಇರಬೇಕು.

- ಪಾರದರ್ಶಕತೆ ಮತ್ತು ಉತ್ತರದಾಯಿತ್ವವನ್ನು ತರುವ ಉದ್ದೇಶದಿಂದ ತರಬೇತಿಯ ಕೊನೆಯಲ್ಲಿ ತರಬೇತಿ ಕಾರ್ಯಕ್ರಮದ ಸಂಪೂರ್ಣ ಹಣಕಾಸು ವಿವರವನ್ನು ಪ್ರದರ್ಶಿಸಬೇಕು.

೬.೫ ಎಸ್.ಡಿ.ಎಂ.ಸಿ ಸಭೆಗಳು ಮತ್ತು ನಿರಂತರ ಹಾಜರಾತಿ

- ಎಸ್.ಡಿ.ಎಂ.ಸಿ ಮಾಸಿಕ ಸಭೆಯು ನಿರಂತರವಾಗಿ ನಡೆಯುವಂತೆ ಖಚಿತಪಡಿಸಿಕೊಳ್ಳಲು ರಾಜ್ಯವು ಕೆಲವು ಕಾರ್ಯತಂತ್ರಗಳನ್ನು ಸೃಷ್ಟಿಸಬೇಕು ಹಾಗೂ ಈ ಪ್ರಕ್ರಿಯೆಗಳು ಸರಿಯಾಗಿ ನಡೆಯುವಂತೆ ಗುಚ್ಚ ಸಂಪನ್ಮೂಲ ವ್ಯಕ್ತಿಗಳು ಜವಾಬ್ದಾರಿ ಮತ್ತು ಉತ್ತರದಾಯಿಗಳಾಗಬೇಕು.

- ಸದಸ್ಯರು ಸಭೆಗೆ ಹಾಜರಾಗುವಂತೆ ಖಚಿತಪಡಿಸಿಕೊಳ್ಳಲು ಪರಿಣಾಮಕಾರಿ ಪ್ರಯತ್ನಗಳನ್ನು ಹಾಕಬೇಕು.

- ಸಭೆಗಳನ್ನು ಆಯೋಜಿಸುವಾಗ ಆಗುವ ಸಮಯ, ಸ್ಥಳ ಹಾಗೂ ದಿನ ಮುಂತಾದ ಅಡಚಣೆಗಳನ್ನು ಹೋಗಲಾಡಿಸಬೇಕು ಹಾಗೂ ಪ್ರತಿಯೊಬ್ಬರು ಸದಸ್ಯರು ಸಭೆಯಲ್ಲಿ ಉತ್ತಮ ರೀತಿಯಲ್ಲಿ ಪಾಲ್ಗೊಳ್ಳಲು ಅವಕಾಶವಿರಬೇಕು ಇದಕ್ಕೆ ಇರುವ ಅಡೆತಡೆಗಳನ್ನು ಹೋಗಲಾಡಿಸಬೇಕು.

- ಸಭಾಸೂಚಿ ಪತ್ರ, ಸಭೆಯಲ್ಲಿ ನಿರ್ದಿಷ್ಟಪಡಿಸಿದ ವಿಷಯಗಳು, ಚರ್ಚಿತ ವಿಷಯಗಳು, ತೀರ್ಮಾನ ತೆಗೆದುಕೊಳ್ಳುವುದು ಮತ್ತು ಸಭೆಯ ನಡಾವಳಿಯನ್ನು ದಾಖಲಿಸುವುದು ಮುಂತಾದ ಸಭೆ ನಡೆಸುವ ಬಗ್ಗೆ ಕಿರುಚಿತ್ರಗಳು ಹಾಗೂ ಸಿನಿಮಾಗಳನ್ನು ತೆಗೆದು ಅವುಗಳನ್ನು ಗ್ರಾಮ

ಹಂತದಲ್ಲಿ ಎಸ್.ಡಿ.ಎಂ.ಸಿ ಮತ್ತು ತಂದೆ ತಾಯಿ ಪರಿಷತ್ತಿನ ಸದಸ್ಯರಿಗೆ ಪ್ರದರ್ಶಿಸಿ ಜಾಗೃತಿ ಮೂಡಿಸಬೇಕು.

೬.೬ ದಾಖಲೀಕರಣ ಮತ್ತು ಅನುಪಾಲನೆ

- ಎಸ್.ಡಿ.ಎಂ.ಸಿ ಸದಸ್ಯರು ನಿರಂತರವಾಗಿ ನಿಯತವಾಗಿ ಶಾಲೆಗೆ ಭೇಟಿ ನೀಡುವುದನ್ನು ಕಡ್ಡಾಯಗೊಳಿಸಬೇಕು.

- ಎಲ್ಲಾ ಶಾಲೆಗಳಲ್ಲಿ ಪ್ರತ್ತ್ಯೇಕವಾದ ಎಸ್.ಡಿ.ಎಂ.ಸಿ ದಾಖಲೆ ಪುಸ್ತಕಗಳನ್ನು ನಿರ್ವಹಿಸತಕ್ಕದ್ದು. ಇದರಲ್ಲಿ ಶಾಲೆಗೆ ಬೇಟಿ ನೀಡಿದ ಎಸ್.ಡಿ.ಎಂ.ಸಿ ಸದಸ್ಯರ ಸಲಹೆ ಸೂಚನೆ ಹಾಗೂ ಅನುಪಾಲನಾ ಕ್ರಮಗಳನ್ನು ದಾಖಲಿಸತಕ್ಕದ್ದು. ಸದಸ್ಯರು ಸೂಚಿಸಿರುವ ಮಾಪಕಗಳ ವಿವರಗಳಿಗೆ ಅನುಸಾರವಾಗಿ ಸಲಹೆ ನೀಡಬೇಕಾಗುವುದು.

- ಎಸ್.ಡಿ.ಎಂ.ಸಿ ಸಭೆಗಳಲ್ಲಿ ನಡೆಯುವ ಎಲ್ಲಾ ಕಾರ್ಯಚಟುವಟಿಕೆಗಳನ್ನು ದಾಖಲಿಸಿ ಅದನ್ನು ಸಂಬಂಧಪಟ್ಟ ಎಲ್ಲಾ ಸದಸ್ಯರೊಂದಿಗೆ ಹಂಚಿಕೊಳ್ಳುವುದು.

- ಎಸ್.ಡಿ.ಎಂ.ಸಿಗಳು ಕೈಗೊಂಡ ಉತ್ತಮ ಅಭ್ಯಾಸಗಳನ್ನು ಆಯಾ ಕ್ಲಸ್ಟರ್‌ನಲ್ಲಿಯ ಇತರೆ ಎಸ್.ಡಿ.ಎಂ.ಸಿ ಸದಸ್ಯರುಗಳಿಗೆ ತಲುಪಿಸುವ ಸೂಕ್ತ ವ್ಯವಸ್ಥೆಯನ್ನು ಕಲ್ಪಿಸುವುದು.

- ಲಭ್ಯವಿರುವ ಸೌಲಭ್ಯಗಳ ಕಾರ್ಯನಿರ್ವಹಣೆಯನ್ನು ಧೃಢಪಡಿಸಿಕೊಳ್ಳುವುದು ಎಲ್ಲಾ ಸದಸ್ಯರುಗಳ ಆಧ್ಯ ಕರ್ತವ್ಯವಾಗಿರುತ್ತದೆ. ಹಾಗೆಯೇ ಸಮಿತಿಯು ಶಾಲಾ ಹಾಗೂ ಶೈಕ್ಷಣಿಕ ಅಭಿವೃದ್ಧಿಯನ್ನು ದೃಢಪಡಿಸಿಕೊಳ್ಳುವುದು.

- ಸುಲಭವಾಗಿ ನಿರ್ವಹಿಸಬಲ್ಲ ಸ್ಥಳೀಯ ಉತ್ತಮ ಅಭ್ಯಾಸಗಳ ಅಳವಡಿಸುವಿಕೆ ಪರಿಣಾಮಕಾರಿ ಕಾರ್ಯನಿರ್ವಹಣೆಗೆ ಸಾಧ್ಯವಾಗುತ್ತದೆ. ಆದ್ದರಿಂದ ಎಸ್.ಡಿ.ಎಂ.ಸಿಗಳು ಹಾಗೂ ಶಾಲೆಗಳು ಸುಲಭವಾಗಿ ನಿರ್ವಹಿಸಬಲ್ಲ ಶಾಲಾ ಚಟುವಟಿಕೆಗಳನ್ನು ಯೋಜಿಸಬಹುದಾಗಿದೆ.

- ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಎಸ್.ಡಿ.ಎಂ.ಸಿಗಳಿರುವ ಶಾಲೆಗಳಿಗೆ ಇತರೆ ಎಸ್.ಡಿ.ಎಂ.ಸಿ ಸದಸ್ಯರುಗಳ ಭೇಟಿಯನ್ನು ಆಯೋಜಿಸುವುದು.

- ನಿರ್ದಿಷ್ಟ ಕಾರ್ಯನಿರ್ವಹಣಾ ಸೂಚಕಗಳನ್ನು ತಿಳಿಸುವುದರಿಂದ ಸದಸ್ಯರುಗಳಿಗೆ ಜವಾಬ್ದಾರಿಯನ್ನು ಹೊರಿಸಬಹುದಾಗಿದೆ.

* ಎಸ್.ಡಿ.ಎಂ.ಸಿ ಅಧ್ಯಕ್ಷರುಗಳು, ಕ್ಷೇತ್ರ ಮತ್ತು ಕ್ಲಸ್ಟರ್ ಹಂತದಲ್ಲಿ ಅನುಭವ ಹಂಚಿಕೆ ಸಭೆಗಳನ್ನು ಆಯೋಜಿಸಿ ಆ ಸಭೆಯ ನಡಾವಳಿಕೆಗಳನ್ನು ದಾಖಲಿಸಿ ಅವುಗಳನ್ನು ಇಲಾಖೆಯ ಶಿಕ್ಷಣ ವಾರ್ತೆ ಪತ್ರಿಕೆ ಮೂಲಕ ಎಲ್ಲರಿಗೂ ತಲುಪಿಸುವುದು.

೬.೭ ಶಾಲಾ ನಿಧಿ ಸ್ಥಾಪನೆ

* ಗ್ರಾಮದ ಸಮುದಾಯ ಅದರಲ್ಲೂ ವಿಶೇಷವಾಗಿ ಎಸ್.ಡಿ.ಎಂ.ಸಿಗಳು ಶಾಲೆಗಳಿಗೆ ನೀಡಿರುವ ಕೊಡುಗೆಗಳು ಮತ್ತು ನೀಡುವ ಕೊಡುಗೆಗಳನ್ನು ಅಂದಾಜಿಸುವ ವ್ಯವಸ್ಥೆಯನ್ನು ಕಲ್ಪಿಸಬೇಕು.

* ಎಸ್.ಡಿ.ಎಂ.ಸಿಯ ಮೇಲ್ವಿಚಾರಣೆಯಲ್ಲಿ ಹಾಗೂ ನಿರ್ವಹಣೆಯಲ್ಲಿ ಶಾಲೆಗೆ ಸರ್ಕಾರ ಆಗೆಯೇ ಸರ್ಕಾರೇತರ ಮೂಲಗಳಿಂದ ಬರುವ ಹಣಕಾಸುಗಳಿಗಾಗಿ ಶಾಲಾ ಹಂತದಲ್ಲಿ ನಿಧಿ ಸ್ಥಾಪನೆಗೆ ಬೇಕಾದ ಪ್ರಕ್ರಿಯೆಗಳನ್ನು ಪ್ರಾರಂಭಿಸಬೇಕು.

* ಹಳೆಯ ವಿದ್ಯಾರ್ಥಿಗಳಿಂದ ಸಂದಾಯವಾದ ವಂತಿಗೆಗಳಿಂದಲೂ ಹೆಚ್ಚಿನ ಶಾಲೆಗಳಲ್ಲಿ ಸಾಕಷ್ಟು ನಿಧಿ ಸಂಗ್ರಹವಾಗಿದೆ ಎಂದು ಗಮನಿಸಲಾಗಿದೆ. ಈ ಹಿನ್ನಲೆಯಲ್ಲಿ ಶಾಲೆಗಳು ಹಳೆ ವಿದ್ಯಾರ್ಥಿಗಳ ವಿವರವನ್ನು ಸಂಗ್ರಹಿಸತಕ್ಕದ್ದು ಮತ್ತು ಅವರ ಮೂಲಕ ಸಂಪನ್ಮೂಲ ಕ್ರೋಢೀಕರಿಸಬಹುದು.

* ಪದನಿಮಿತ್ತ ಕಾರ್ಯದರ್ಶಿಯಾಗಿರುವ ಮುಖ್ಯ ಶಿಕ್ಷಕ ಸಾವಿರ ರೂಪಾಯಿಗೆ ಮೇಲ್ಪಟ್ಟ ಖರ್ಚು/ಆದಾಯಗಳು ಇದ್ದರೆ ಎಸ್.ಡಿ.ಎಂ.ಸಿಯ ಗಮನಕ್ಕೆ ತರತಕ್ಕದ್ದು ಮತ್ತು ಹಣಕಾಸು ವಿಚಾರದಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳುವ ಸಲುವಾಗಿ ಎಲ್ಲರ ಸಮ್ಮತಿ ತೆಗೆದುಕೊಳ್ಳತಕ್ಕದ್ದು.

* ಎಸ್.ಡಿ.ಎಂ.ಸಿ ನಿಧಿಯ ಅವ್ಯವಹಾರದ ಸಂದರ್ಭಗಳಲ್ಲಿ ಮಾದರಿ ಉಪವಿಧಿಯಲ್ಲಿರುವ ಪ್ರಕ್ರಿಯೆಗಳನ್ನು ಗ್ರಾಮ ಪಂಚಾಯತಿಯ ಮೂಲಭೂತ ಸೌಕರ್ಯ ಸಮಿತಿಯ ನೆರವಿನೊಂದಿಗೆ ಕಡ್ಡಾಯವಾಗಿ ಪಾಲಿಸತಕ್ಕದ್ದು.

೬.೮ ಎಸ್.ಡಿ.ಎಂ.ಸಿಗಳಲ್ಲಿ ಆಡಳಿತ ಮತ್ತು ವಿಕೇಂದ್ರಿಕರಣ

* ಶಾಲಾ ಸಮಯವನ್ನು ಎಸ್.ಡಿ.ಎಂ.ಸಿಗಳು ನಿರ್ಧರಿಸುವಂತಾಗಬೇಕು

* ಎಸ್.ಡಿ.ಎಂ.ಸಿ ಮತ್ತು ತಂದೆ-ತಾಯಿ ಪರಿಷತ್ತಿನ ಸದಸ್ಯರಿಗೆ ತಮ್ಮ ಪಾತ್ರ, ಕಾರ್ಯ ಚಟುವಟಿಕೆ ಹಾಗೂ ಅಧಿಕಾರವನ್ನು ಎಲ್ಲರಿಗೂ ತಲುಪಿದೆಯೇ ಎಂಬುದನ್ನು ತಿಳಿದುಕೊಳ್ಳಲು ರಾಜ್ಯವು ದಾರಿಗಳನ್ನು ಗುರುತಿಸಬೇಕು.

- ಎಸ್.ಡಿ.ಎಂ.ಸಿಯು ಆಡಳಿತ ವಿಕೇಂದ್ರೀಕರಣದ ಕೊನೆಯ ಹಂತ ಎಂಬುದನ್ನು ಕಡ್ಡಾಯವಾಗಿ ಪರಿಭಾವಿಸಬೇಕು ಹಾಗೂ ಪರಿಣಾಮಕಾರಿಯಾಗಿ ಮತ್ತು ಅರ್ಥಗರ್ಭಿತವಾಗಿ ಕೆಲಸ ನಿರ್ವಹಿಸಲು ವ್ಯವಸ್ಥೆಯನ್ನು ರೂಪಿಸಬೇಕು.

- ಎಸ್.ಡಿ.ಎಂ.ಸಿಗಳ ಮೂಲ ಉದ್ದೇಶ ಸಮುದಾಯಕ್ಕೆ ಅಧಿಕಾರ ಕೊಡುವುದು ಆಗಿರುವುದರಿಂದ ಮುಖ್ಯ ಶಿಕ್ಷಕರು ರಜೆ ಮಂಜೂರು ಮಾಡುವ ಅಧಿಕಾರವನ್ನು ಎಸ್.ಡಿ.ಎಂ.ಸಿಗಳಿಂದ ಹಿಂಪಡೆದುಕೊಳ್ಳಬೇಕಾದ ಅಗತ್ಯವಿಲ್ಲ.

- ಪಂಚಾಯತಿ ಹಂತದಲ್ಲಿ ಎಸ್.ಡಿ.ಎಂ.ಸಿ ಮತ್ತು ಗ್ರಾಮ ಪಂಚಾಯತಿ ನಡುವೆ ಉತ್ತಮ ಬಾಂಧವ್ಯ ಉಂಟುಮಾಡಲು ಅಗತ್ಯ ಕ್ರಮಗಳನ್ನು ರಾಜ್ಯವು ತೆಗೆದುಕೊಳ್ಳಬೇಕು.

- ಎಸ್.ಡಿ.ಎಂ.ಸಿ ಮತ್ತು ಪಂಚಾಯತಿ ಎರಡರ ನಡುವೆ ಕಾರ್ಯಕಾರಿಣಿ ಸಂಬಂಧವನ್ನು ಹೊಂದಿರಬೇಕು ಎಂಬುದನ್ನು ಈ ಅಧ್ಯಯನವು ಶಿಫಾರಸ್ಸು ಮಾಡುತ್ತದೆ.

- ಎಸ್.ಡಿ.ಎಂ.ಸಿಯು ತನ್ನ ಕೆಲಸ ನಿರ್ವಹಿಸಲು ಇರುವ ತನ್ನದೆ ಉಪಸಮಿತಿ ಎಂದು ಪಂಚಾಯತಿಯು ಪರಿಭಾವಿಸಬೇಕು ಹಾಗೂ ಪಾರದರ್ಶಕ ಮತ್ತು ಪ್ರಜಾಪ್ರಭುತ್ವ ಮಾದರಿಯಲ್ಲಿ ಕೆಲಸ ನಿರ್ವಹಿಸುವಂತೆ ಎಲ್ಲಾ ರೀತಿಯ ಸಹಾಯ ಸಹಕಾರವನ್ನು ಖಚಿತಪಡಿಸಬೇಕು.

- ಎಸ್.ಡಿ.ಎಂ.ಸಿಯ ಎಲ್ಲಾ ರೀತಿಯ ಕಾರ್ಯಚಟುವಟಿಕೆಯ ಬಗ್ಗೆ ಪರಾಮರ್ಶೆ ಸಭೆಯನ್ನು ಕಾಲಕಾಲಕ್ಕೆ ಕಡ್ಡಾಯವಾಗಿ ನಡೆಸಿ, ಉತ್ತಮ ಸಲಹೆ ಸಹಕಾರ ಹಾಗೂ ಮಾರ್ಗದರ್ಶನ ಮಾಡಬೇಕು.

೬.೯ ವಿಶೇಷ ಅಗತ್ಯವುಳ್ಳ ಮಕ್ಕಳ ಬಗ್ಗೆ ಜಾಗೃತಿ ಮೂಡಿಸುವುದು

- ವಿಶೇಷ ಅಗತ್ಯವುಳ್ಳ ಮಕ್ಕಳು ಶಾಲಾ ಶಿಕ್ಷಣದ ಮುಖ್ಯವಾಹಿನಿಗೆ ಬರುವಂತೆ ಎಸ್.ಡಿ.ಎಂ.ಸಿ ಮತ್ತು ಪಂಚಾಯತಿ ಸದಸ್ಯರಿಗೆ ಅಗತ್ಯವಾದ ಜಾಗೃತಿಯನ್ನು ಮೂಡಿಸಬೇಕು.

- ಅಂಗವೈಕಲ್ಯತೆ ಕೇವಲ ದೈಹಿಕ ನ್ಯೂನ್ಯತೆ ಅಲ್ಲ, ಅದು ಸಾಮಾಜಿಕ ಸಮಸ್ಯೆ ಎಂದು ಪರಿಭಾವಿಸಿಕೊಳ್ಳಬೇಕು ಮತ್ತು ಅಗತ್ಯತೆಗಳ ಬಗ್ಗೆ ಎಲ್ಲಾ ಹಂತಗಳಲ್ಲು ತಿಳಿಸಬೇಕು. ಇಂತಹ ಮಕ್ಕಳಿಗೆ ಎಲ್ಲಾ ಅಗತ್ಯಗಳನ್ನು ಎಲ್ಲಾ ಹಂತಗಳಲ್ಲೂ ಒದಗಿಸಬೇಕು.

೬.೧೦ ಎಸ್.ಡಿ.ಎಂ.ಸಿಗಳಲ್ಲಿ ವೃತ್ತಿಪರತೆ

- ಎಸ್.ಡಿ.ಎಂ.ಸಿಯು ನಿಜವಾದ ಉತ್ಸಾಹದಿಂದ ವಿಕೇಂದ್ರೀಕರಣ ಮತ್ತು ಮೇಲ್ವಿಚಾರಣೆ ವ್ಯವಸ್ಥೆಗಳಲ್ಲಿ ನಿರ್ವಹಿಸಲು ಸಾಮಾರ್ಥ್ಯಾಭಿವೃದ್ಧಿಯನ್ನು ಮಾಡಬೇಕು.

- ಎಸ್.ಡಿ.ಎಂ.ಸಿಗಳು ತಮ್ಮ ಪಾತ್ರ ಹಾಗೂ ಜವಾಬ್ಧಾರಿಗಳನ್ನು ವೃತ್ತಿಪರತೆಯಿಂದ ನಿರ್ವಹಿಸಲು ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಬೇಕು.

- ತರಬೇತಿ ವಿನ್ಯಾಸಗಳನ್ನು ಸಿದ್ಧಪಡಿಸುವಾಗ ವೃತ್ತಿಪರತೆ ಹಾಗೂ ವ್ಯವಸ್ಥಾಪನಾ ಕೌಶಲ್ಯಕ್ಕೆ ಒತ್ತು ನೀಡಬೇಕು.

- ಎಸ್.ಡಿ.ಎಂ.ಸಿ ಜವಾಬ್ಧಾರಿಗಳ ಪ್ರಕ್ರಿಯೆಗಳನ್ನು ಉತ್ತಮವಾಗಿ ನಿರ್ವಹಿಸಲು ತರಬೇತಿ ವಿನ್ಯಾಸಗಳನ್ನು ವ್ಯವಸ್ಥಿತವಾಗಿ ಮಾಡಿ ಅವುಗಳ ಮೂಲಕ ತಿಳುವಳಿಕೆ, ತರಬೇತಿ ಹಾಗೂ ಜ್ಞಾನವನ್ನು ನೀಡಬೇಕು.

- ಎಸ್.ಡಿ.ಎಂ.ಸಿಗಳು ಉತ್ತಮವಾಗಿ ಹಾಗೂ ಪರಿಣಾಮಕಾರಿಯಾಗಿ ಎಲ್ಲರಿಗೂ ಜವಾಬ್ಧಾರಿ ಮತ್ತು ಅವಕಾಶ ನೀಡುವ ಉದ್ದೇಶದಿಂದ ಕಾಮಗಾರಿ, ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ಕ್ರೀಡಾ ಹಾಗೂ ಶಾಲೆಯ ದಿನನಿತ್ಯದ ಚಟುವಟಿಕೆಗಳನ್ನು ನಿರ್ವಹಿಸಲು ಎಸ್.ಡಿ.ಎಂ.ಸಿಯಲ್ಲಿ ಚುನಾಯಿತ ಪ್ರತಿನಿಧಿಗಳ ನೇತೃತ್ವದಲ್ಲಿ ಉಪಸಮಿತಿ ರಚಿಸಿ ಪ್ರತಿಯೊಬ್ಬರಿಗೂ ಸಮಾನ ಜವಾಬ್ಧಾರಿಗಳನ್ನು ನೀಡಬೇಕು.

೬.೧೧ ಎಸ್.ಡಿ.ಎಂ.ಸಿಗಳಲ್ಲಿ ಪಾರದರ್ಶಕತೆ ಮತ್ತು ಉತ್ತರದಾಯಿತ್ವ

- ಶಾಲೆಯ ಹಣಕಾಸು ಜೊತೆಗೂಡಿದಂತೆ ಶಾಲೆಯ ಎಲ್ಲಾ ಆಡಳಿತದಲ್ಲೂ ಪಾರದರ್ಶಕತೆಯನ್ನು ಉಂಟು ಮಾಡಲು ಕೆಲವು ವ್ಯವಸ್ಥೆಯನ್ನು ಸೃಷ್ಟಿಸಬೇಕು.

- ಎಸ್.ಡಿ.ಎಂ.ಸಿಯ ಅಧ್ಯಕ್ಷರು ಅಥವಾ ಒಬ್ಬ ಇಬ್ಬರು ಮಾತ್ರ ಕೆಲಸ ನಿರ್ವಹಿಸದೆ ಎಲ್ಲರೂ ಒಮ್ಮತದಿಂದ ಕಾರ್ಯನಿರ್ವಹಿಸುವಂತಾಗಬೇಕು.

- ಶಾಲಾ ಆಡಳಿತದ ನಿರ್ವಹಣೆಯಲ್ಲಿ ಪ್ರಜಾಪ್ರಭುತ್ವದ ಬಗ್ಗೆ ಶಿಕ್ಷಕರಿಗೆ ಅದರಲ್ಲೂ ಮುಖ್ಯ ಶಿಕ್ಷಕರಿಗೆ ತಿಳುವಳಿಕೆ ಮೂಡಿಸಬೇಕು

- ಶಾಲೆಯು ತನ್ನದೆ ಆದ ಶೋಧನೆಗಳನ್ನು ವಿವಿಧ ದೃಷ್ಟಿಕೋನಗಳಲ್ಲಿ ಮಾಡಿಕೊಳ್ಳುವುದರ ಜೊತೆಗೆ ದಾಖಲಾತಿ, ಹಾಜರಾತಿ, ಉಳಿಯುವಿಕೆ ಹಾಗೂ ಪೂರ್ಣಗೊಳಿಸುವಿಕೆ, ಗುಣಾತ್ಮಕ ಕಲಿಕೆ, ಸಮುದಾಯ ಭಾಗವಹಿಸುವಿಕೆ, ಮುಂತಾದ ವಿಚಾರಗಳಲ್ಲಿ ಸಾಮಾಜಿಕ ಪರಿಶೋಧನೆಗೆ ಬೇಕಾದ ಸಹಕಾರ, ನಿದರ್ಶನಗಳನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಂಪನ್ಮೂಲ ಕೇಂದ್ರ, ಗುಚ್ಚ ಸಂಪನ್ಮೂಲ ಕೇಂದ್ರಗಳು ಶಾಲೆಯಲ್ಲಿ ಪ್ರತಿ ಮಗುವು ಗುಣಾತ್ಮಕ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಆಗಲು ಹಾಗೂ ಎಲ್ಲಾ ಚಟುವಟಿಕೆಗಳನ್ನು ಮುಂದೆ ತೆಗೆದುಕೊಂಡು ಹೋಗಲು ಸಹಕಾರ ಹಾಗೂ ಮಾರ್ಗದರ್ಶನವನ್ನು ನೀಡಬೇಕು.

- ಸ್ಥಳೀಯ ಸರ್ಕಾರೇತರ ಸಂಘಟನೆ, ಶೈಕ್ಷಣಿಕ ವಿಶ್ವವಿದ್ಯಾಲಯಗಳು ಮತ್ತು ವಿಶೇಷ ತಜ್ಞ ಸಂಶೋಧನಾ ಕೇಂದ್ರಗಳು ಎಸ್.ಡಿ.ಎಂ.ಸಿ ತರಬೇತಿಗಳು ಹಾಗೂ ಸಾಮಾಜಿಕ ಲೆಕ್ಕ ಪರಿಶೋಧನೆಯ ಬಗ್ಗೆ ಸಣ್ಣ ಸಣ್ಣ ಸಂಶೋಧನೆಗಳನ್ನು ಮಾಡಬೇಕು.

- ಸರ್ಕಾರೇತರ ಸಂಘಟನೆಗಳು ಮಕ್ಕಳ ಶಾಲಾ ಶಿಕ್ಷಣದ ಮೇಲೆ ನಿರ್ವಹಿಸುತ್ತಿರುವ ಕೆಲಸಗಳ ಫಲಿತಾಂಶಗಳನ್ನು ಪರಾಮರ್ಶಿಸಿ ಉತ್ತೇಜಿಸಬೇಕು

೬.೧೨ ಪಂಚಾಯತ್ ರಾಜ್ ಸಂಸ್ಥೆಗಳ ಜೊತೆ ಬಾಂಧವ್ಯ

- ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣ ಸಾಕಾರಗೊಳಿಸುವ ಸಲುವಾಗಿ ಗ್ರಾಮ ಪಂಚಾಯತ್ ಮಟ್ಟಗಳಲ್ಲಿ ಶಿಕ್ಷಣ ಸಮಿತಿಗಳನ್ನು ರಚಿಸಲು ಶಿಕ್ಷಣ ಕಾರ್ಯಪಡೆ ಶಿಫಾರಸ್ಸು ಮಾಡಿದ್ದರೂ ಈ ಸಮಿತಿಗಳು ರಚನೆಯಾಗಿಲ್ಲ ಎಂದು ಕಂಡುಬಂದಿದೆ. ಗ್ರಾಮ ಪಂಚಾಯತ್ ಸಂಸ್ಥೆಗಳ ಬಗ್ಗೆ ತೀರ್ಮಾನ ತೆಗೆದುಕೊಳ್ಳುವಷ್ಟು ಸಾಮಾರ್ಥ್ಯ ಎಸ್.ಡಿ.ಎಂ.ಸಿಗಳಿಗೆ ಇಲ್ಲ. ಆದರೂ ಪಂಚಾಯತ್ ರಾಜ್ ಸಂಸ್ಥೆ ಮತ್ತು ಎಸ್.ಡಿ.ಎಂ.ಸಿಗಳ ನಡುವೆ ವಿವಿಧ ಮಟ್ಟಗಳಲ್ಲಿ ಸಹಕಾರ ಬಾಂಧವ್ಯ ಏರ್ಪಡಬೇಕು ಎಂದು ದೃಢವಾಗಿ ಬೆಂಬಲಿಸುತ್ತದೆ. ಆದುದರಿಂದ ಈ ಶಿಫಾರಸ್ಸುಗಳನ್ನು ಮಾಡಲಾಗುತ್ತದೆ.

- ಗ್ರಾಮ ಸಭೆಗಳಲ್ಲಿ ಆಯಾ ಗ್ರಾಮದ ಶಾಲೆಗಳ ಎಸ್.ಡಿ.ಎಂ.ಸಿ ಅಧ್ಯಕ್ಷರು ಹಾಗೂ ಉಪಾಧ್ಯಕ್ಷರುಗಳು ಖಾಯಂ ಆಮಂತ್ರಿತ ಸದಸ್ಯರಾಗುತ್ತಾರೆ. ಸಭೆಗಳಲ್ಲಿ ಶೈಕ್ಷಣಿಕ ಸಮಸ್ಯೆ ಹಾಗೂ ಪ್ರಗತಿಯ ಕುರಿತು ಚರ್ಚಿಸಲು ಅವರುಗಳಿಗೆ ಸೂಕ್ತ ಕಾಲಾವಕಾಶವನ್ನು ನೀಡಬೇಕು.

- ಗ್ರಾಮ ಪಂಚಾಯತಿಯ ಕೇಂದ್ರದಲ್ಲಿರುವ ಎಸ್.ಡಿ.ಎಂ.ಸಿ ಅಧ್ಯಕ್ಷ ಅಥವಾ ಉಪಾಧ್ಯಕ್ಷರು ಆ ಗ್ರಾಮ ಪಂಚಾಯತಿಯ ಸಭೆಗೆ ವಿಶೇಷ ಆಹ್ವಾನಿತರಾಗಿರುತ್ತಾರೆ. ಈ ಕ್ರಮವು ಶಾಲೆ ಹಾಗೂ ಶೈಕ್ಷಣಿಕ ವಿಚಾರಗಳನ್ನು ಗ್ರಾಮ ಪಂಚಾಯತಿ ಹಂತದಲ್ಲಿ ಮಂಡಿಸಲು ಸೂಕ್ತ ಅವಕಾಶವನ್ನು ಕಲ್ಪಿಸುತ್ತದೆ. ಉಳಿದ ಶಾಲೆಗಳ ಎಸ್.ಡಿ.ಎಂ.ಸಿ ಅಧ್ಯಕ್ಷರು ತಮ್ಮ ಶಾಲೆಗಳ ಸಮಸ್ಯೆಗಳನ್ನು ಮೇಲ್ಕಾಣಿಸಿದ ಅಧ್ಯಕ್ಷರ/ ಉಪಾಧ್ಯಕ್ಷರ ಮುಖಾಂತರ ಗ್ರಾಮ ಪಂಚಾಯತಿಯ ಗಮನಕ್ಕೆ ತರಬಹುದಾಗಿದೆ.

- ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆಗಳು ಸೇರಿ ಗ್ರಾಮ ಪಂಚಾಯತಿ ಸದಸ್ಯರುಗಳಿಗೆ ಎಸ್.ಡಿ.ಎಂ.ಸಿಗಳಲ್ಲಿ ಅವರ ಪಾತ್ರದ ಬಗ್ಗೆ ತಿಳುವಳಿಕೆ ನೀಡುವುದು.

- ಮಾರ್ಪಾಡು ಹೊಂದಿದ ಸುತ್ತೋಲೆಯೊಂದಿಗೆ ನಿಯಾಮಾವಳಿಗಳಿಂದ ಸಮರ್ಥವಾಗಿರುವ ಈ ಬದಲಾವಣೆಗಳನ್ನು ಎಲ್ಲಾ ಶಾಲೆಗಳಿಗೂ ತಿಳಿಯಪಡಿಸತಕ್ಕದ್ದು.

೬.೧೩ ತಂದೆ ತಾಯಿ ಪರಿಷತ್ತು

- ಎಲ್ಲಾ ಮಕ್ಕಳಿಗೂ ಗುಣಮಟ್ಟದ ಶಿಕ್ಷಣ ಒದಗಿಸುವ ಸಲುವಾಗಿ ಶಾಲೆಗಳೊಂದಿಗೆ ಪೋಷಕರು ಮತ್ತು ಸಮುದಾಯದ ಇತರ ಸದಸ್ಯರು ಹೆಚ್ಚು ಸಮರ್ಥವಾಗಿ ಕೆಲಸಮಾಡಲು ಯಾವ ರೀತಿ ನೆರವಾಗಬಹುದು ಎಂಬ ಪ್ರಕ್ರಿಯೆಗಳು ಮತ್ತು ವ್ಯವಸ್ಥೆಗಳನ್ನು ಸೃಷ್ಟಿಸಬೇಕು

- ಸಮುದಾಯ ಸದಸ್ಯರು ಮತ್ತು ಪೋಷಕರು ಶಾಲೆಗೆ ನಿರಂತರವಾಗಿ ಭೇಟಿ ಮತ್ತು ಸಮುದಾಯ ಹಾಗೂ ಶಾಲೆಯ ನಡುವೆ ಸೌಹರ್ದಯುತವಾದ ಮತ್ತು ಪರಿಣಾಮಕಾರಿಯಾದ ಸಮನ್ವಯತೆಯನ್ನು ಸಾಧಿಸುವಂತಾಗಬೇಕು.

- ತಂದೆ-ತಾಯಿ ಪರಿಷತ್ತಿನ ಸದಸ್ಯರು ಮನೆಯಲ್ಲಿ ಮಕ್ಕಳಿಗೆ ಓದುವುದಕ್ಕೆ ಸಮಯ ನೀಡುವ ರೀತಿಯಲ್ಲಿ ತಿಳುವಳಿಕೆಯನ್ನು ಮೂಡಿಸಬೇಕು

- ಶಿಕ್ಷಕರಿಗೆ ಮಕ್ಕಳ ಕಲಿಕೆಗೆ ಪೂರಕವಾಗಿ ಸ್ಥಳೀಯ ಸಂಪನ್ಮೂಲಗಳನ್ನು ಒದಗಿಸುವಂತೆ ಜಾಗೃತಿ ಮೂಡಿಸಬೇಕು

- ಶಾಲೆಯ ಕಾರ್ಯಕ್ರಮಗಳಲ್ಲಿ ಸ್ಥಳೀಯ ಸಮುದಾಯ ತೊಡಗಿಸಿಕೊಳ್ಳುವಂತೆ ಮಾಡಲು ವ್ಯವಸ್ಥೆಗಳನ್ನು ರೂಪಿಸಬೇಕು

- ತಂದೆ ತಾಯಿ ಪರಿಷತ್ತಿನ ಸದಸ್ಯರು ಶಾಲೆಯಲ್ಲಿ ಮಕ್ಕಳ ದಾಖಲಾತಿ, ಹಾಜರಾತಿ ಹಾಗೂ ಎಸ್.ಡಿ.ಎಂ.ಸಿಯ ಶಾಲಾ ಆಡಳಿತ ನಿರ್ವಹಣೆಗೆ ಪೂರಕ ಬೆಂಬಲವನ್ನು ಒದಗಿಸಬೇಕು

- ಮಕ್ಕಳಿಗೆ ಬೋಧನೆ ಹಾಗೂ ಕಲಿಕಾ ಸಾಮಾಗ್ರಿಗಳನ್ನು ಒದಗಿಸಬೇಕು ಮತ್ತು ಬಿಸಿ ಊಟಕ್ಕೆ ಬೇಕಾದ ಧಾನ್ಯ, ತರಕಾರಿ ಮುಂತಾದವುಗಳನ್ನು ಒದಗಿಸುವುದು ಹಾಗೂ ಶಾಲೆಗೆ ಬೇಕಾದ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿಪಡಿಸಲು ಸಹಾಯ

- ಸಮುದಾಯದಲ್ಲಿ ಮತ್ತು ಮನೆಗಳಲ್ಲಿ ಮಕ್ಕಳಿಗೆ ಶೈಕ್ಷಣಿಕ ಪರಿಸರವನ್ನು ಸೃಷ್ಟಿಸುವ ರೀತಿಯಲ್ಲಿ ತಂದೆ ತಾಯಿಗಳಿಗೆ ಜಾಗೃತಿ ಮೂಡಿಸುವುದು

- ಶಾಲಾಭಿವೃದ್ಧಿ ಯೋಜನೆ, ಶೈಕ್ಷಣಿಕ ಕ್ರಿಯಾ ಯೋಜನೆಗಳನ್ನು ತಯಾರಿಸುವಾಗ ಪಾಲ್ಗೊಳ್ಳಬೇಕು ಹಾಗು ಇದರ ಅನುಷ್ಠಾನದ ಮೇಲ್ವಿಚಾರಣೆಗೆ ಪೋಷಕರು ಹಾಗೂ ಸಮುದಾಯದ ಇತರರು ಪ್ರತಿನಿತ್ಯ ತೊಡಗಿಕೊಳ್ಳುವಂತೆ ಮಾಡಲು ವಿವಿಧ ಮಾರ್ಗಗಳನ್ನು ಹುಡುಕಲು ನೆರವಾಗುವಂತೆ ಮಾರ್ಗಗಳನ್ನು ರೂಪಿಸಬೇಕು

- ಶಾಲಾ ಆಧಾರಿತ ಎಸ್.ಡಿ.ಎಂ.ಸಿಗಳಲ್ಲಿ ಉಪ ಸಮಿತಿಗಳನ್ನು ರಚಿಸಿ ಪೋಷಕರಿಗೂ ಹೆಚ್ಚಿನ ಮಾಲಿಕತ್ವ ನೀಡಬೇಕು.

- ಬೋಧನೆ ಹಾಗೂ ಕಲಿಕೆ ಸೇರಿದಂತೆ ಶಾಲಾ ಅಭಿವೃದ್ಧಿಯಲ್ಲಿ ಸ್ಥಳೀಯ ಜ್ಞಾನವನ್ನು ಬಳಸಿಕೊಳ್ಳಲು ಯೋಜನೆಗಳನ್ನು ರೂಪಿಸಬೇಕು

- ಶಾಲಾ ಸುಧಾರಣೆ ಪ್ರಕ್ರಿಯೆಯಲ್ಲಿ ವಿವಿಧ ವರ್ಗದ ಜನರು ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕು

- ಪ್ರತಿ ೩ ತಿಂಗಳಿಗೊಮ್ಮೆ ತಂದೆ-ತಾಯಿ ಪರಿಷತ್ತ್ ಸಭೆಯನ್ನು ನಡೆಸಿ ಮಕ್ಕಳ ಪ್ರಗತಿ ಅಷ್ಟೇ ಅಲ್ಲದೆ ಎಸ್.ಡಿ.ಎಂ.ಸಿ ಹಾಗೂ ಶಿಕ್ಷಕರ ಕಾರ್ಯವೈಖರಿಯನ್ನು ಪರಿಶೀಲಿಸುವಂತಹ ವ್ಯವಸ್ಥೆಯನ್ನು ಕಲ್ಪಿಸಬೇಕು

***

ಅನುಬಂಧ
ಆಕರ ಗ್ರಂಥಗಳು

- ಅನಿತಾ ಬಿ.ಕೆ. (೨೦೦೦), "ವಿಲೇಜ್, ಕ್ಯಾಸ್ಟ್ ಅಂಡ್ ಎಜ್ಯುಕೇಷನ್, ಫ್ರೇಮ್ ರಾವತ್ ಪಾರ್ ರಾವತ್ ಪಬ್ಲಿಕೇಷನ್ಸ್, ಜವಹರ್ ನಗರ, ಜೈಪುರ

- ಅನಿತಾ ಕೆ. (೧೯೯೭), "ಎಜ್ಯುಕೇಷನ್ ಫ್ಲಾನಿಂಗ್ ಫಾರ್ ಸ್ಕೂಲ್ ಎಜ್ಯುಕೇಷನ್ : ಎ ಸ್ಟಡಿ ಫಾರ್ ತ್ರೀ ಡಿಸ್ಟ್ರಿಕ್ಸ್ ಇನ್ ಕರ್ನಾಟಕ" ಅಪ್ರಕಟಿತ ಪಿ.ಎಚ್.ಡಿ ಮಹಾ ಪ್ರಬಂಧ, ಮೈಸೂರು ವಿಶ್ವವಿದ್ಯಾಲಯ, ಮೈಸೂರು

- ಅಂಜು ಗ್ರೋವರ್ (೨೦೦೨), "ಭಾರತದಲ್ಲಿ ಲಿಂಗ ಸಮಾನತೆ" ಯೋಜನಾ ತಿಂಗಳ ಪತ್ರಿಕೆ, ಸಂಪುಟ ೧೭, ಸಂಚಿಕೆ ೧೦, ಮೇ ಪುಟ. ೩೦–೩೧

- ಅರಬೋಲೆಡ, ಜೈರೋ., (೧೯೯೪), "ಪಾರ್ಟಿಸಿಪೇಷನ್ ಅಂಡ್ ಪಾರ್ಟನರ್‌ಷಿಪ್ ಇನ್ ದಿ ಕೊಲೆಂಬಿಯನ್ ಎಸ್ಕೋಲ ನ್ಯೂವ" ಇನ್ ಪಾರ್ಟನರ್‌ಷಿಪ್ಸ್ ಅಂಡ್ ಪಾರ್ಟಿಸಿಪೇಷನ್ ಇನ್ ಬೇಸಿಕ್ ಎಜುಕೇಷನ್: ಎ ಸಿರೀಸ್ ಆಫ್ ಟ್ರೈನಿಂಗ್ ಮಾಡ್ಯೂಲ್ಸ್ ಅಂಡ್ ಕೇಸ್ ಸ್ಟಡಿ ಅಬ್ಸ್ಟ್ರೇಕ್ಸ್ ಫಾರ್ ಎಜುಕೇಷನಲ್ ಪ್ಲಾನರ್ಸ್ ಅಂಡ್ ಮ್ಯಾನೇಜರ್ಸ್. ಎಡಿಟೇಡ್ ಬೈ ಸೆಲ್ಡನ್ ಶೇಫರ್. ಪ್ಯಾರೀಷ್: ಯುನಿಸ್ಕೋ, ಇಂಟರ್‌ನ್ಯಾಷನಲ್ ಇನ್ಸ್ಟಿಟ್ಯೂಟ್ ಫಾರ್ ಎಜುಕೇಷನಲ್ ಪ್ಲಾನಿಂಗ್

- ಅರವಿಂದ ಚೊಕ್ಕಾಡಿ, (೨೦೦೭), ಶಿಕ್ಷಣ ದೃಷ್ಟಿ, ಸುಮುಖ ಪ್ರಕಾಶನ, ವಿದ್ಯಾರಣ್ಯ ನಗರ, ಮಾಗಡಿ ರಸ್ತೆ, ಬೆಂಗಳೂರು.

- ಅರಂವಿಂದ ಚೊಕ್ಕಾಡಿ, (೨೦೦೭), ಬದುಕಿಗಾಗಿ ಶಿಕ್ಷಣ, ಲೋಹಿಯಾ ಪ್ರಕಾಶನ, ಕಪ್ಪಗಲ್ಲು ರಸ್ತೆ, ಬಳ್ಳಾರಿ.

- ಅಗರ್‌ವಾಲ್, ೨೦೦೦), ಆ್ಯನ್ ಅಸೆಸ್‌ಮೆಂಟ್ ಆಫ್ ಟೆಂಡ್ ಇನ್ ಆಕ್ಸಸ್ ಅಂಡ್ ರಿಟೆನ್ಷನ್, ನ್ಯಾಷನಲ್ ಇನ್ಸ್‌ಟಿಟ್ಯೂಟ್ ಆಫ್ ಎಜುಕೇಷನಲ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಶನ್, ನ್ಯೂಡೆಲ್ಲಿ.

- ಅತ್ರೇಯ ವಿ.ಬಿ ಅಂಡ್ ಚುನಕಾಂತ್ ಎಸ್.ಆರ್., (೧೯೯೬), ಲಿಟ್ರೆಸಿ ಅಂಡ್ ಎಮ್ ಪವರ್‌ಮೆಂಟ್, ಸ್ಪೆಜ್, ನ್ಯೂ ಡೆಲ್ಲಿ.

- ಆನದ್ಯಾಲ.ಬಿ.ಬಿ ತಿಲಕ್ (೨೦೦೪), ಎಜ್ಯುಕೇಷನ್ ಇನ್ ದ ಯು.ಪಿ.ಎ ಗೌರ್‍ನಮೆಂಟ್ ಕಾಮನ್ ಮಿನಿಮಮ್ ಪ್ರೋಗ್ರಾಮ್, ಎಕಾನಾಮಿಕ್ ಅಂಡ್ ಪೊಲಿಟಿಕಲ್, ವೀಕ್ಲಿ ಅಕ್ಟೋಬರ್, ಪುಟ ೪೭೧೭ – ೪೭೨೧.

- ಬಾಲರಾಜು ಎಚ್., ೨೦೦೨, ಸಮುದಾಯದಲ್ಲಿ ಭಾಗವಹಿಸುವಿಕೆಯ ಮುಖಾಂತರ ಶೈಕ್ಷಣಿಕ ಅಭಿವೃದ್ಧಿ ಬಳ್ಳಾರಿ ಜಿಲ್ಲೆ ಒಂದು ಅಧ್ಯಯನ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

- ಬಾಲರಾಜು ಎಚ್., ೨೦೦೨, ಸಮುದಾಯದಲ್ಲಿ ಭಾಗವಹಿಸುವಿಕೆಯ ಮುಖಾಂತರ ಶೈಕ್ಷಣಿಕ ಅಭಿವೃದ್ಧಿ ಬಳ್ಳಾರಿ ಜಿಲ್ಲೆ ಒಂದು ಅಧ್ಯಯನ, ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

- ಬ್ಯಾನರ್ಜಿ, ರುಕ್ಮಿಣಿ, (೧೯೯೫), 'ಡೋಂಟ್ ಬ್ಲೇಮ್ ಇಟ್ ಆನ್ ಪಾವರ್ಟಿ ಅಲೋನ್' ಬಿಸ್ನೆಸ್ ಸ್ಟ್ಯಾಂಡರ್ಡ್, ೨೩ ಡಿಸೆಂಬರ್.

- ಬ್ಯಾನರ್ಜಿ, ರುಕ್ಮಿಣಿ, (೧೯೯೮), 'ವೈ ಡೋಂಟ್ ಚಿಲ್ಡರ್ನ್ ಕಂಪ್ಲೀಟ್ ಪ್ರೈಮರಿ ಸ್ಕೂಲ್ : ಎ ಕೇಸ್ ಸ್ಟಡಿ ಆಫ್ ಎ ಲೊ-ಇನ್‌ಕಮ್ ನೈಬರ್-ಹುಡ್ ಇನ್ ಡೆಲ್ಲಿ', ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ೪ ಜುಲೈ ಆ್ಯಂಡ್ ೧೦ ಜುಲೈ.

- ಬಾಟಿ, ಕಿರಣ್ ಜೆ.ಪಿ. ಶಿವಕುಮಾರ್ ಆ್ಯಂಡ್ ಅದರ್ಸ್, (೧೯೯೭), "ಕ್ಲಾಸ್ ಸ್ಟ್ರಗಲ್" ಇಂಡಿಯಾ ಟು ಡೇ, ೧೩ ಅಕ್ಟೋಬರ್,

- ಬಾಟಿ, ಕಿರಣ್,(೧೯೯೮), ಎಜುಕೇಷನಲ್ ಡಿಪ್ರವೇಶನ್ ಇನ್ ಇಂಡಿಯಾ : ಎ ಸರ್ವೇ ಆಫ್ ಫೀಲ್ಡ್ ಇನ್‌ವೆಸ್ಟಿಗೇಶನ್ಸ್, ಪಬ್ಲಿಷ್ಡ್ ಇನ್ ಇಕಾನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ: ೪ ಜುಲೈ ಆ್ಯಂಡ್ ೧೦ ಜುಲೈ.

- ಬ್ರೇ, ಮಾರ್ಕ್, (೧೯೯೬), ಡಿಸೆಂಟ್ರಲೈಜೇಷನ್ ಆಫ್ ಎಜುಕೇಷನ್: ಕಮ್ಯೂನಿಟಿ ಫೈನಾನ್ಸಿಂಗ್ ವಾಸಿಂಗ್ಟನ್, ಡಿಸಿ: ವರ್ಲ್ಡ್ ಬ್ಯಾಂಕ್.

- ಬೂರರ್, ನೇಹಾ, (೧೯೯೫), ಬಾರ್ನ್ ಟು ವರ್ಕ್ : ಚೈಲ್ಡ್ ಲೇಬರ್ ಇನ್ ಇಂಡಿಯಾ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ.
- ಸೆನ್ಸಸ್ ಆಫ್ ಇಂಡಿಯಾ, (೨೦೦೧), ಪ್ರೈಮರಿ ಸೆನ್ಸಸ್ ಅಬ್‌ಸ್ಟ್ರಾಕ್ ಕರ್ನಾಟಕ, ಡೈರೆಕ್ಟರ್ ಜನರಲ್ ಪಾಪುಲೇಶನ್, ಡೈರಕ್ಟರೇಟ್ ಆಫ್ ಸೆನ್ಸಸ್ ಆಪರೇಶನ್, ಬೆಂಗಳೂರು.
- ಚಂದ್ರಶೇಖರ್ ಟಿ.ಆರ್. (೨೦೦೬), "ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು", ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

- ಚಂದ್ರಶೇಖರ್ ಟಿ.ಆರ್., (೨೦೦೭), ಕರ್ನಾಟಕ ಪ್ರಾದೇಶಿಕ ಅಸಮಾನತೆ, ಅಭಿವೃದ್ಧಿ ಪಥ, ಸುವರ್ಣ ಕರ್ನಾಟಕ ಸಂಪುಟ ೧, ಸಂಪಾದಕರು ಓ.ಚಿ.ಬೋರಲಿಂಗಯ್ಯ, ಗೆಜೆಟಿಯರ್ ಆಫ್ ಕರ್ನಾಟಕ ಮತ್ತು ಪ್ರಸಾರಂಗ

- ಚಂದ್ರಶೇಖರ್ ಟಿ.ಆರ್., (೨೦೦೮), ಕನಾಟಕದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ. ಸಮಾಜ ವಿಜ್ಞಾನ ಪತ್ರಿಕೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ.

- ಚಂದಶೇಖರ್ ಟಿ.ಆರ್., (೧೯೯೯). ಅಮರ್ತ್ಯಸೇನ್ ಅಭಿವೃದ್ಧಿ ಅಧ್ಯಯನಗಳು, ಕ್ರೈಸ್ಟ್ ಕಾಲೇಜ್, ಬೆಂಗಳೂರು.

- ಚಂದಶೇಖರ್ ಟಿ.ಆರ್., (೨೦೦೩). ಕರ್ನಾಟಕ ಅಭಿವೃದ್ಧಿಯ ಸಾಮಾಜಿಕ ನೆಲೆಗಳು, ಸಿ.ವಿ.ಜಿ. ಪ್ರಕಾಶನ, ಬೆಂಗಳೂರು.

- ಡಿ ಅರಬೋಲೆಡ, ವಿಕ್ಕಿ ಕೊಲ್‌ಬೆರ್ಟ್, (೧೯೯೧)., "ದ ಕೊಲೆಂಬಿಯನ್ ಎಸ್ಕೋಲ ನ್ಯೂವ ಎಜುಕೇಷನಲ್ ಎಕ್ಸಪೀರಿಯನ್ಸ್" ಬುಲೇಟಿನ್/ದ ಮೇಜರ್ ಪ್ರಾಜೆಕ್ಟ್ ಆಫ್ ಎಜುಕೇಷನ್ ಇನ್ ಲ್ಯಾಟಿನ್ ಅಮೇರಿಕಾ ಅಂಡ್ ಕೇರಿಬಿಯನ್ (ಇಂಟರ್‌ನ್ಯಾಷನಲ್).ನಂ.೨೬:೪೭-೫೨ಡಿಸಿಂಬಿ

- ಡಿಪಾರ್ಟ್‌ಮೆಂಟ್ ಆಫ್ ಎಜ್ಯೂಕೇಷನ್, (೧೯೯೬), ಸೆಲೆಕ್ಟೆಡ್ ಎಜ್ಯೂಕೇಷನಲ್ ಸ್ಟ್ಯಾಟಿಸ್ಟಿಕ್ಸ್ ಎಂಹೆಚ್‌ಆರ್‌ಡಿ., ಗವರ್ನಮೆಂಟ್ ಆಫ್ ಇಂಡಿಯಾ, ನ್ಯೂ ಡೆಲ್ಲಿ.

- ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನ್, (೨೦೦೪), ಪಾಲಿಸಿ ಪ್ಲಾನಿಂಗ್ ಯುನಿಟ್, ಗೌವರ್ನಮೆಂಟ್ ಆಫ್ ಕರ್ನಾಟಕ, ಎ ಸ್ಟಡಿ ಟು ಇವಾಲುವೆಟ್ ದಿ ಫಕ್ಷನಿಂಗ್ ಆಫ್ ಸ್ಕೂಲ್ ಡೆವಲಪ್‌ಮೆಂಟ್ ಅಂಡ್ ಮಾನಿಟರಿಂಗ್ ಕಮಿಟೀಸ್ ಇನ್ ಕರ್ನಾಟಕ–ಎನ್ ಎಕ್ಸಿಕಿಟಿವ್ ಸಮ್ಮರಿ, ಬೆಂಗಳೂರು

- ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನ್, (೨೦೦೫)., ಸಿಸಿಎಲ್–ಎನ್ ಎಲ್.ಎಸ್.ಐ.ಯು ಮತ್ತು ಎ.ಪಿ.ಎಫ್, ಗೌವರ್ನಮೆಂಟ್ ಆಫ್ ಕರ್ನಾಟಕ, ಎ ಸ್ಟಡಿ ಟು ಇವಾಲುವೆಟ್ ದಿ ಫಕ್ಷನಿಂಗ್ ಆಫ್ ಸ್ಕೂಲ್ ಡೆವಲಪ್‌ಮೆಂಟ್ ಅಂಡ್ ಮಾನಿಟರಿಂಗ್ ಕಮಿಟಿಸ್ ಇನ್ ಕರ್ನಾಟಕ

- ಡ್ರಿ.ಜೆ.ಜೆ. ಅಂಡ್ ಸೆನ್, (೧೯೯೫),. ಎ., ಬೇಸಿಕ್ ಎಜುಕೇಷನ್ ಯಾಸ್ ಎ ಪೋಲಿಟಿಕಲ್ ಇಸ್ಸ್ಯೂ, ೯(೧) ಜನರಲ್ ಆಫ್ ಎಜುಕೇಷನಲ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಷನ್ ೧

- ದೊರೆಸ್ವಾಮಿ, ಮಾಲತಿ, (೨೦೦೦), ಚೈಲ್ಡ್ ಸ್ಕೂಲಿಂಗ್ ಆಂಡ್ ಚೈಲ್ಡ್ ವರ್ಕ್ ಇನ್ ಇಂಡಿಯಾ, ಪ್ರೋಗ್ರಾಮ್ ಆಫ್ ರಿಸರ್ಚ್ ಆನ್ ಹ್ಯೂಮನ್ ಡೆವಲಪ್‌ಮೆಂಟ್, ನ್ಯಾಷನಲ್ ಕೌನ್ಸಿಲಿಂಗ್ ಆಫ್ ಎಕನಾಮಿಕ್ ರಿಸರ್ಚ್, ನ್ಯೂ ಡೆಲ್ಲಿ.
- ಎಪ್‌ಸ್ಟೈನ್, ಜೈಸಿ ಲಿವ್, (೧೯೯೫). " ಕಮ್ಯೂನಿಟಿ ಪಾರ್ಟನರ್‌ಷಿಪ್ಸ್: ಕೇರಿಂಗ್ ಫಾರ್ ದ ಚಿಲ್ಡ್ರನ್ ವಿ ಶೇರ್." ಇನ್ ಫಿ ಡೆಲ್ಟಾ ಕಪನ್. ವಿ.೭೬(ಮೇ೧೯೯೫).ಪಿಪಿ೭೦೧–೭೧೨.

- ಎಪ್‌ಸ್ಟೈನ್, ಜೈಸಿ ಲಿವ್, ಎಲ್.: ಲೂಕ್ರೇಟಿಯಾ ಕೋಟ್ಸ್: ಕರೆನ್ ಕ್ಲಾರ್ಕ್ ಸಲೀನಾಸ್: ಮಾವಿಯಾಸ್ ಪಾರ್ಟನರ್‌ಷಿಪ್ಸ್: ಯುವರ್ ಹ್ಯಾಂಡ್ ಬುಕ್ ಫಾರ್ ಆಕ್ಸ್‌ನ್." (ಇಆರ್‌ಐಸಿ:ಇಡಿ ೪೧೫೦೦೩).

- ಗವರ್ನಮೆಂಟ್ ಆಫ್ ಇಂಡಿಯಾ, (೧೯೯೩), ಸಿ.ಎ.ಬಿ.ಇ. ಕಮಿಟಿ ಆನ್ ಡಿಸೆಂಟಲೈಜ್ಡ್ ಮ್ಯಾನೇಜ್‌ಮೆಂಟ್ ಆಫ್ ಎಜುಕೇಷನ್, ಮಿನಿಸ್ಟ್ರಿ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್, ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನ್, ನ್ಯೂಡೆಲ್ಲಿ.

- ಗವರ್ನಮೆಂಟ್ ಆಫ್ ಕರ್ನಾಟಕ, (೧೯೯೯), ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್, ಡಿಪಾರ್ಟಮೆಂಟ್ ಆಫ್ ಪ್ಲಾನಿಂಗ್, ಬೆಂಗಳೂರು

- ಗವರ್ನಮೆಂಟ್ ಆಫ್ ಕರ್ನಾಟಕ, (೧೯೯೯), ಹ್ಯೂಮನ್ ಡೆವಲಪ್‌ಮೆಂಟ್ ರಿಪೋರ್ಟ್, ಡಿಪಾರ್ಟಮೆಂಟ್ ಆಫ್ ಪ್ಲಾನಿಂಗ್, ಬೆಂಗಳೂರು

- ಗವರ್ನಮೆಂಟ್ ಆಫ್ ಕರ್ನಾಟಕ, (೨೦೦೧), ಸ್ಕೂಲ್ ಡೆವಲಪ್‌ಮೆಂಟ್ ಮಾನಿಟರಿಂಗ್ ಕಮಿಟಿ (ಎಸ್.ಡಿ.ಎಂ.ಸಿ), ರೆಕಮಂಡೇಷನ್ ಆಫ್ ದಿ ಸ್ಟೇಟ್ ಟಾಸ್ಕ್‌ಪೋರ್ಸ್ ಆಫ್ ಎಜುಕೇಷನ್, ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನ್, ಬೆಂಗಳೂರು

- ಗವರ್ನಮೆಂಟ್ ಆಫ್ ಕರ್ನಾಟಕ, (೨೦೦೧), ಸ್ಕೂಲ್ ಡೆವಲಪ್‌ಮೆಂಟ್ ಆ್ಯಂಡ್ ಮಾನಿಟರಿಂಗ್ ಕಮಿಟಿ (ಎಸ್.ಡಿ.ಎಂ.ಸಿ.), ರೆಕಮಂಡೇಷನ್ ಆಫ್ ದಿ ಸ್ಟೇಟ್ ಟಾಸ್ಕ್‌ಪೋರ್ಸ್ ಆಫ್ ಎಜುಕೇಷನ್, ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನ್, ಬೆಂಗಳೂರು

- ಗರ್ವನಮೆಂಟ್ ಆಫ್ ಇಂಡಿಯಾ, (೧೯೮೬), ನ್ಯಾಷನಲ್ ಪಾಲಿಸಿ ಆನ್ ಎಜುಕೇಷನ್, ನ್ಯೂ ಡೆಲ್ಲಿ.

- ಗರ್ವನಮೆಂಟ್ ಆಫ್ ಇಂಡಿಯಾ, (೧೯೯೨), ನ್ಯಾಷನಲ್ ಪಾಲಿಸಿ ಆನ್ ಎಜುಕೇಷನ್, (ರಿವೈಸ್ಡ್), ನ್ಯೂಡೆಲ್ಲಿ.

- ಗರ್ವನಮೆಂಟ್ ಆಫ್ ಇಂಡಿಯಾ, (೧೯೯೩), ಸಿಎ.ಬಿ.ಇ. ಕಮಿಟಿ ಆನ್ ಡಿಸೆಂಟ್ರಲೈಜ್ಡ್ ಮ್ಯಾನೆಜ್‌ಮೆಂಟ್ ಆಫ್ ಎಜುಕೇಷನ್, ಮಿನಿಷ್ಟ್ರಿ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್, ಡಿಪಾರ್ಟ್‌ಮೆಂಟ್ ಆಫ್ ಎಜುಕೇಷನ್, ನ್ಯೂ ಡೆಲ್ಲಿ.

- ಗಂಗಾಧರಪ್ಪ ಎನ್. ಆರ್. (೨೦೦೪), ಶಿಕ್ಷಣದ ಮೂಲತತ್ವಗಳು, ರೇಖಾ ಪ್ರಕಾಶನ, ತರಳಬಾಳು ಬಡಾವಣೆ, ದಾವಣಗೆರೆ.

- ಗ್ಯೇನರ್, ಗಾಥಿ. (೧೯೯೮), ಡೀಸೆಂಟ್ರಲೈಜೇಷನ್ ಆಫ್ ಎಜುಕೇಷನ್: ಟೀಚರ್ ಮ್ಯಾನೇಜ್‌ಮೆಂಟ್. ವಾಸಿಂಗ್ಟನ್, ಡಿಸಿ: ವರ್ಲ್ಡ್ ಬ್ಯಾಂಕ್.

- ಗೋಪಾಲ್ ಸಿ.ಆರ್., (೨೦೦೪), ಸಾಕ್ಷರತಾ ಸಿದ್ಧಾಂತ, ಕಾರ್ಯನೀತಿ ಮತ್ತು ಆಚರಣೆ: ಅರ್ಧ ಶತಮಾನದ ಅನುಭವ, ಸಾಕ್ಷರತಾ ಅಧ್ಯಯನ, ಸಂಚಿಕೆ ೫, ಸಂಶೋಧನಾ ವಿಭಾಗ, ರಾಜ್ಯ ಸಂಪನ್ಮೂಲ ಕೇಂದ್ರ ಕರ್ನಾಟಕ.

- ಗೋವಿಂದ ಆರ್ ಆಂಡ್ ವರ್ಗೀಸ್ ಎನ್.ವಿ., (೧೯೯೩), ಕ್ವಾಲಿಟಿ ಆಫ್ ಪ್ರೈಮರಿ ಸ್ಕೂಲಿಂಗ್; ಇನ್ ಎಮ್ ಪೆರಿಕಲ್ ಸ್ಟಡಿ: ಜರ್ನಲ್ ಆಫ್ ಎಜುಕೇಷನಲ್ ಪ್ಲಾನಿಂಗ್ ಅಂಡ್ ಅಡ್ಮಿನಿಸ್ಟ್ರೇಶನ್.

- ಗೋವಿಂದ ಆರ್ ಅಂಡ್ ವರ್ಗೀಸ್ ಎನ್.ವಿ., (೧೯೯೩), 'ಕ್ವಾಲಿಟಿ ಆಫ್ ಪ್ರೈಮರಿ ಸ್ಕೂಲಿಂಗ್ : ಇನ್ ಎಮ್‌ಪೆರಿಕಲ್ ಸ್ಟಡಿ', ಜರ್ನಲ್ ಆಫ್ ಎಜುಕೇಷನಲ್ ಪ್ಲ್ಯಾನಿಂಗ್ ಅಂಡ್ ಆಡ್ಮಿನಿಸ್ಟ್ರೇಶನ್, ೬

- ಗೋವಿಂದ ಆರ್., (೧೯೯೭), ಡಿಸೆಂಟ್ರಲೈಜೆಷನ್ ಆಫ್ ಎಜುಕೇಷನಲ್ ಮ್ಯಾನೇಜ್‌ಮೆಂಟ್ ಎಕ್ಸ್‌ಪೀರಿಯನ್ಸ್ ಫ್ರಮ್ ಸೌತ್ ಏಷಿಯಾ, ಯು.ಎನ್.ಇ. ಎಸ್.ಸಿ.ಓ ; ಎನ್.ಐ.ಇ.ಪಿ.ಎ.

- ಗೋವಿಂದ ಆರ್: (೨೦೦೨ ಬಿ), ಇಂಡಿಯಾ ಎಜುಕೇಷನ್ ರಿಪೋರ್ಟ್: ಎ ಪ್ರೊಫೈಲ್ ಆಫ್ ಬೇಸಿಕ್ ಎಜುಕೇಷನ್, ಆಕ್ಸ್‌ಫರ್ಡ್ ಯೂನಿವರ್ಷಿಟಿ ಪ್ರೆಸ್, ನ್ಯೂಡೆಲ್ಲಿ.

- ಗೋವಿಂದ ಆರ್: (೨೦೦೩ಎ), ಕಮ್ಯೂನಿಟಿ ಪಾರ್ಟಿಸಿಪೇಶನ್ ಆ್ಯಂಡ್ ಎಂಪವರ್‌ಮೆಂಟ್ ಇನ್ ಪ್ರೈಮರಿ ಎಜುಕೇಷನ್ ಪ್ರೈಮರಿ ಎಜುಕೇಷನ್, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ,

- ಗೋವಿಂದ ಆರ್; (೧೯೯೭), ಡಿಸೆಂಟ್ರಲೈಜೆಷನ್ ಆಫ್ ಎಜುಕೇಷನಲ್ ಮ್ಯಾನೇಜ್ ಮೆಂಟ್ ಎಕ್ಸಪೀರಿಯನ್ಸ್ ಫ್ರಮ್ ಸೌತ್ ಏಷಿಯಾ , ಯು,ಎನ್,ಇ. ಎಸ್.ಸಿ.ಓ; ಎನ್.ಐ.ಇ.ಪಿ.ಇ

- ಗೋವಿಂದ, (೨೦೦೨), ಇಂಡಿಯಾ ಎಜುಕೇಷನ್ ರಿಪೋರ್ಟ್, ಎನ್.ಐ.ಇ.ಪಿ.ಎ ಆ್ಯಂಡ್ ಯು.ಎನ್.ಇ.ಎಸ್.ಇ.ಸಿ.ಓ.ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ

- ಗೋಲ್ಡರಿಂಗ್, ಇ.ಬಿ. (೧೯೯೪), 'ಕಮ್ಯೂನಿಟಿ ಅಂಡ್ ಪೇರೆಂಟ್ಸ್' ಪಾರ್ಟಿಷಿಪೇಷನ್ ಇನ್ ಕರಿಕ್ಯೂಲಮ್ ಡಿಸಿಷನ್ಸ್. "ಇನ್ ದ ಇಂಟರ್‌ನ್ಯಾಷನಲ್ ಎನ್‌ಸೈಕ್ಲೋಪಿಡಿಯಾ ಆಫ್ ಎಜುಕೇಷನ್. ಸೆಕಂಡ್ ಎಡಿಷನ್ ವಾಲ್ಯೂಮ್ ೨. ಬೈ ಹೂಸೆನ್, ಟಾರ್ಸ್ಟನ್ ಅಂಡ್ ಟಿ. ನಿವೆಲ್ಲೆ ಪೋಸ್ಟೆಲ್ಥ್‌ವೇಯಿಟೆ (ಎಡಿಟರ್ಸ್ ಇನ್ ಚೀಫ್). ನ್ಯೂ ಯಾರ್ಕ್: ಎಲ್ಸೆವೇರ್ ಸೈನ್ಸ್ ಲಿಮಿಟೆಡ್.

- ಜನಾರ್ದನ್, (೨೦೦೩), ಕರ್ನಾಟಕ ತಾಲ್ಲೂಕುವಾರು ಜನಸಂಖ್ಯೆ ಅಕ್ಷರಸ್ಥರು ಮತ್ತು ಸಾಕ್ಷರತೆ ೨೦೦೧, ಅಭಿವೃದ್ಧಿ ಅಧ್ಯಯನ ಪತ್ರಿಕೆ, ಸಂಪುಟ ೨ ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

- ಜಸ್ಟೀಸ್ ಆರ್.ಸಿ ಲಾಹೋತಿ, (೨೦೦೪), ಪ್ರೀಂಬಲ್; ದಿ ಸ್ಪಿರಿಟ್ ಅಂಡ್ ಬ್ಯಾಕ್‌ಬೋನ್ ಆಫ್ ದಿ ಕಾನ್ಸ್‌ಟಿಟ್ಯೂಟ್ ಆಫ್ ಇಂಡಿಯಾ; ಎಸ್ಟ್ರನ್ ಬುಕ್ ಕಂಪನಿ, ಲಕ್ನೊ

- ಜಯಕುಮಾರ್ ಅನಗೋಳ್ (ಕನ್ನಡಕ್ಕೆ), ೧೯೮೬, ಭಾರತೀಯ ಶಿಕ್ಷಣದಲ್ಲಿ ಸಮಾನತೆ, ಗುಣ ಮತ್ತು ಪರಿಮಾಣ, ಐಬಿಎಚ್ ಪ್ರಕಾಶನ, ಐದನೆಯ ಮುಖ್ಯರಸ್ತೆ, ಗಾಂಧೀನಗರ, ಬೆಂಗಳೂರು

- ಜೋಸೆಫ್ ಎ.ಥಾಮಸ್., (೨೦೦೦), ಡೈನಮಿಕ್ಸ್ ಆಫ್ ಎಜುಕೇಷನಲ್ ಡೆವಲಫ್‌ಮೆಂಟ್: ಎ ಕೇಸ್ ಸ್ಟಡಿ ಆಫ್ ಸೆಲೆಕ್ಟ್‌ಡ್ ಬ್ಯಾಕ್‌ವರ್ಡ್ ವಿಲೇಜಸ್, ಇನ್ ಕೇರಳ, ಇನ್,ವೈದ್ಯನಾಥನ್ ಎ. ಆಂಡ್ ಪಿ.ಆರ್.ಜಿ. ನಾಯರ್ (ಎಡ್) ಎಲಿಮೆಂಟರಿ ಎಜುಕೇಷನ್ ಇನ್ ರೂರಲ್ ಇಂಡಿಯಾ : ಎ ಗ್ರಾಸ್ ರೂಟ್ಸ್ ವ್ಯೂ, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

- ಜೀನ್ ಡ್ರೀಜ್ ಆ್ಯಂಡ್ ಕಿಂಗ್‌ಡಂ, ಗೀತಾ ಗಾಂಧಿ, ೨೦೦೧, "ಸ್ಕೂಲ್ ಪಾರ್ಟಿಸಿಪೇಶನ್ ಇನ್ ರೂರಲ್ ಇಂಡಿಯಾ", ರಿವ್ಯೂ ಆಫ್ ಡೆವಲಪ್‌ಮೆಂಟ್ ಎಕನಾಮಿಕ್ಸ್, ೫.

- ಕರ್ನಾಟಕ ಲೆಜಿಸ್ಲೇಟಿವ್ ಕೌನ್ಸಿಲ್, (೨೦೦೭), ಗೌವರ್ನಮೆಂಟ್ ಆಫ್ ಕರ್ನಾಟಕ, ರಿಪೋರ್ಟ್ ಆಫ್ ದಿ ಲೆಜಿಸ್ಲೇಟಿವ್ ಕಮಿಟಿ ಆನ್ ಫಕ್ಷನಿಂಗ್ ಆಫ್ ಎಸ್.ಡಿ.ಎಂ.ಸಿಸ್ ಇನ್ ದಿ ಸ್ಟೇಟ್ ಆಫ್ ಕರ್ನಾಟಕ, ಬೆಂಗಳೂರು

- ಕಬಿರ್, ನೈಲ, (೨೦೦೧), ಡಿಪವೇಶನ್, ಡಿಸ್‌ಕಿಮಿನೇಶನ್ ಅಂಡ್ ಡೆಲಿವರಿ ಕಮ್‌ಟೀಂಗ್ ಎಕ್ಸ್‌ಪ್ಲನೇಶನ್ಸ್ ಫರ್ ಚೈಲ್ಡ್ ಲೇಬರ್ ಅಂಡ್ ಎಜುಕೇಷನಲ್ ಫೆಲ್ಯೂರ್ ಇನ್ ಸೌತ್ ಏಷಿಯಾ, ವರ್ಕಿಂಗ್ ಪೇಪರ್-೧೩೫, ಇನ್ಸ್‌ಟಿಟ್ಯೂಟ್ ಆಫ್ ಡೆವಲಪ್‌ಮೆಂಟ್ ಸ್ಟಡೀಸ್.

- ಕಂಬರ್ಗಿ ಆರ್., (೧೯೯೧), ಚೈಲ್ಡ್ ಲೇಬರ್ ಇನ್ ದಿ ಇಂಡಿಯನ್ ಸಬ್‌ಕಾಂಟಿನೆಂಟ್ ಸೇಜ್, ನ್ಯೂ ಡೆಲ್ಲಿ.

- ಕುಲಕರ್ಣಿ ಎನ್.ಕೆ., (೧೯೯೭), ಸಮಗ್ರ ಶಿಕ್ಷಣ, ಮಿರಾಂಬಿಕ ಮುದ್ರಣಾಲಯ, ಶ್ರೀ ಅರವಿಂದ ಸಂಕೀರ್ಣ, ೯ನೇ ಅಡ್ಡರಸ್ತೆ, ಜೆ.ಪಿ.ನಗರ, ಬೆಂಗಳೂರು

- ಕುಲಕರ್ಣಿ ಕೆ.ಜಿ., (೨೦೦೬), ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, ಪ್ರದೀಪ ಪ್ರಕಾಶನ, ಜೆ.ಟಿ.ಕಾಲೇಜು ಹತ್ತಿರ, ಗದಗ.

- ಕ್ಯಾಂಪೇನ್ಸ್, ಹಬ್ರೆಟ್, (ಇಡಿ.) (೧೯೯೭), ಕಮ್ಯೂನಿಟಿ ಡೆವಲಪ್‌ಮೆಂಟ್ ಅರೌಂಡ್ ದ ವರ್ಲ್ಡ್: ಪ್ರಾಕ್ಟಿಸ್, ಥಿಯರಿ ರಿಸರ್ಚ್, ಟ್ರೈನಿಂಗ್. ಟೊರೆಂಟೋ, ಬಫೇಲೋ, ಅಂಡ್ ಲಂಡನ್: ಯೂನಿವರ್ಸಿಟಿ ಆಫ್ ಟೋರೆಂಟೋ ಪ್ರೆಸ್.

- ಕುಮಾರ್ ಟಿ.ಎಂ., (೨೦೦೪), ಪ್ರಾಥಮಿಕ ಶಿಕ್ಷಣ ಒಂದು ಚರ್ಚೆ, ಶ್ರೀದೇವಿ ಪ್ರಕಾಶನ, ನಾಗಸಂದ್ರ ಪೋಸ್ಟ್, ಬೆಂಗಳೂರು.

- ಕುರುಹರಿ ವೆಂಕಟ ಜಗನ್ನಾಥ್ ರಾವ್ (೨೦೦೨), "ಎನ್‌ರೋಲ್‌ಮೆಂಟ್ ಅಂಡ್ ಡ್ರಾಪೌಟ್ ಇನ್ ಪ್ರೈಮರಿ ಎಜ್ಯಕೇಷನ್ ಆಫ್ ಟ್ರೈಬಲ್ಸ್" (ಎ ಕಾಂಪ್ಯಾರಿಟಿವ್ ಸ್ಟಡಿ ಆಫ್ ಸಬ್ ಪ್ಲ್ಯಾನ್ ಏರಿಯಾಸ್ ಇನ್ ವಿಜಯನಗರ ಡಿಸ್ಟ್ರಿಕ್ಸ್, ಆಂಧ್ರ ಪ್ರದೇಶ), ಅಪ್ರಕಟಿತ ಪಿಎಚ್.ಡಿ ಮಹಾಪ್ರಬಂಧ, ಆಂಧ್ರ ವಿಶ್ವವಿದ್ಯಾಲಯ.

- ಕ್ಯಾರಿನೋ, ಇಸಿಡ್ರೋ ಡಿ. ಅಂಡ್ ಮೋನಾ ಡುಮ್ಲಾವೊ ವ್ಯಾಲಿಸ್ಕ್ಯೂ (೧೯೯೪), "ದ ಪೇರೆಂಟ್ ಲರ್ನಿಂಗ್ ಸಪೋರ್ಟ್ ಸಿಸ್ಟಮ್ (ಪಿಎಲ್‌ಎಸ್‌ಎಸ್): ಸ್ಕೂಲ್ ಅಂಡ್ ಕಮ್ಯೂನಿಟಿ ಕೊಲಬರೇಷನ್ ಫಾರ್ ರೈಸಿಂಗ್ ಪಪಿಲ್ ಅಚೀವ್‌ಮೆಂಟ್ ಇನ್ ದ ಫಿಲಿಪೈನ್ಸ್." ಇನ್ ದ ಪಾರ್ಟನರ್‌ಷಿಪ್ಸ್ ಅಂಡ್ ಪಾರ್ಟಿಸಿಪೇಷನ್ ಇನ್ ಬೇಸಿಕ್ ಎಜುಕೇಷನ್: ಎ ಸೀರೀಸ್ ಆಫ್ ಟ್ರೈನಿಂಗ್ ಮಾಡ್ಯೂಲ್ಸ್ ಅಂಡ್ ಕೇಸ್ ಸ್ಟಡಿ ಅಬ್‌ಸ್ಟ್ರ್ಯಾಕ್ಸ್ ಫಾರ್ ಎಜುಕೇಷನಲ್ ಪ್ಲಾನರ್ಸ್ ಅಂಡ್ ಮ್ಯಾನೇಜರ್ಸ್, ಎಡಿಟೆಡ್ ಜೈ ಶೆಲ್ಡನ್ ಶೆಫರ್ಸ್. ಪ್ಯಾರೀಸ್ ಯೂನೆಸ್ಕೊ, ಇಂಟರ್ ನ್ಯಾಷನಲ್ ಇನ್ಸಿಟಿಟ್ಯೂಟ್ ಫಾರ್ ಎಜುಕೇಷನಲ್ ಪ್ಲಾನಿಂಗ್

- ಕೃಷ್ಣ ಜೆ. (೨೦೦), "ಮಾನವ ಅಭಿವೃದ್ಧಿಯ ಪ್ರಾದೇಶಿಕ ಆಯಾಮಗಳ ಅಧ್ಯಯನ", ಅಪ್ರಕಟಿತ ಪಿಎಚ್‌ಡಿ ಮಹಾಪ್ರಬಂಧ, ಕನ್ನಡ ವಿಶ್ವವಿದ್ಯಾಲಯ, ಹಂಪಿ

- ಕರೂರ ಎಸ್.ಜಿ., (೧೯೯೯), ಶಿಕ್ಷಣದ ಪರಮಗುರು, ಪ್ರಸಾರಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

- ಕೊಲೆಟ್, ನಾಟ್ ಜೆ. ಅಂಡ್ ಗಿಲ್ಲೀನ್ ಪೆರ್‌ಕಿನ್ಸ್, (೧೯೯೫), ಪಾರ್ಟಿಸಿಪೇಷನ್ ಇನ್ ಎಜುಕೇಷನ್, ಎನ್ವೆರ್ನಮೆಂಟ್ ಡಿಪಾರ್ಟ್‌ಮೆಂಟ್ ಪೇಪರ್ಸ್. ಪೇಪರ್ ನಂ.೦೦೧. ಪಾರ್ಟಿಸಿಪೇಷನ್ ಸೀರಿಸ್. ವಾಸಿಂಗ್ಟನ್, ಡಿಸಿ: ದ ವರ್ಲ್ಡ್ ಬ್ಯಾಂಕ್.

- ಕ್ರೇವ್, ಎಮ್ಮ ಅಂಡ್ ಎಲಿಜಬೆತ್ ಹ್ಯಾರಿಸನ್. (೧೯೯೮). ವೂ ಇಸ್ ಡೆವಲಪ್‌ಮೆಂಟ್? ಎನ್ ಎತನೋಗ್ರಫಿ ಆಫ್ ಏಡ್. ಲಂಡನ್ ಅಂಡ್ ನ್ಯೂಯಾರ್ಕ್: ಜೆಡ್ ಬುಕ್ಸ್.

- ಕೊಥಾರಿ ಬ್ರಿಜ್ ಆಂಡ್ ಪಿ.ಜಿ.ವಿ ಶೇರಿ ಚಂದ್. ೨೦೦೩. ರೀಡಿಂಗ್ ಬಿಯಾಂಡ್ ದಿ ಅಲ್ಫಾಬೆಟ್ಸ್, ಸೇಜ್ ಪಬ್ಲಿಕೇಷನ್, ನ್ಯೂಡೆಲ್ಲಿ,

- ಲಿಕ್ಲಾರ್ಕ್, ಫ್ರನ್‌ಕೊಸ್ಸ್, (೨೦೦೧ ಬಿ), "ಚೈಲ್ಡ್ ವರ್ಕ್ಸ್ ಸ್ಕೂಲಿಂಗ್ ಅಂಡ್ ಹೌಸ್‌ಹೋಲ್ಡ್ ರಿಸೋರ್ಸ್ ಇನ್ ರೂರಲ್ ನಾರ್ತ್ ಇಂಡಿಯಾ", (ಇನ್) ರಾಮಚಂದರನ್ ಎನ್., (೨೦೦೧), ಕಮಿಂಗ್ ಟೂ ಗ್ರಿಡ್ಸ್ ವಿತ್ ರೂರಲ್ ಚೈಲ್ಡ್ ವರ್ಕ್ಸ್ ದಿ ಫುಡ್ ಸೆಕ್ಯೂರಿಟಿ ಅಪ್ರೋಚ್, ಇನ್ಸ್‌ಟಿಟ್ಯೂಟ್ ಆಫ್ ಹ್ಯೂಮನ್ ಡೆವಲಪ್‌ಮೆಂಟ್, ನ್ಯೂ ಡೆಲ್ಲಿ.

* ಲಿಕ್ಲಾರ್ಕ್, ಫ್ರನ್‌ಕೊಸ್ಸ್, (೨೦೦೧ ಎ), 'ಫ್ಯಾಕ್ಟರ್ಸ್ ಅಂಡ್ ಡಿಟರ್‌ಮಿನೆಂಟ್ಸ್ ಆಫ್ ಎಲಿಮೆಂಟರಿ ಸ್ಕೂಲ್ ಎನ್‌ರೋಲ್‌ಮೆಂಟ್ ಇನ್ ರೂರಲ್ ನಾರ್ತ್ ಇಂಡಿಯಾ : ಸೆಂಟರ್ ಡಿ ಸೈನ್ಸ್ ಹ್ಯೂಮೆನಿಸ್', ನ್ಯೂ ದೆಹಲಿ.
* ಮಧು ಎಸ್. ಪರಂಜಪೆ (೨೦೦೭) "ಅನ್ ಈವನ್ ಡಿಸ್ಟ್ರಿಬ್ಯೂಷನ್ ಆಫ್ ಎಜ್ಯುಕೇಷನ್ ಇನ್ ಮಹರಾಷ್ಟ್ರ, ರೂರಲ್, ಅರ್ಬನ್, ಜೆಂಡರ್ ಅಂಡ್ ಕ್ಯಾಸ್ಟ್ ಇನ್ ಈಕ್ವಾಲಿಟೀಸ್" ಎಕಾನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ, ಜನವರಿ ೨೦,
* ಮಿನಿಸ್ಟ್ರೀ ಆಫ್ ಎಜುಕೇಷನ್, (೧೯೬೬), ಗೌರ್ವನ್‌ಮೆಂಟ್ ಆಫ್ ಇಂಡಿಯಾ, ಎಜುಕೇಷನ್ ಅಂಡ್ ನ್ಯಾಷನಲ್ ಡೆವಲಪ್‌ಮೆಂಟ್, ಎನ್.ಸಿ.ಇ.ಆರ್.ಟಿ, ನ್ಯೂ ಡೆಲ್ಲಿ
* ಮಿನಿಸ್ಟ್ರೀ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್, (೧೯೮೬), ಗೌರ್ವನ್‌ಮೆಂಟ್ ಆಫ್ ಇಂಡಿಯಾ, ನ್ಯಾಷನಲ್ ಪಾಲಿಸಿ ಆನ್ ಎಜುಕೇಷನ್-೧೯೮೬, ನ್ಯೂಡೆಲ್ಲಿ
* ಮಿನಿಸ್ಟ್ರೀ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್, (೧೯೯೮), ಗೌರ್ವನ್‌ಮೆಂಟ್ ಆಫ್ ಇಂಡಿಯಾ, ನ್ಯಾಷನಲ್ ಪಾಲಿಸಿ ಆನ್ ಎಜುಕೇಷನ್ ಆಫ್ ೧೯೮೬ (ಯಾಸ್ ಮಾಡಿಫೈ ಇನ್ ೧೯೯೨), ನ್ಯೂ ಡೆಲ್ಲಿ
* ಮಿನಿಸ್ಟ್ರೀ ಆಫ್ ಹ್ಯೂಮನ್ ರಿಸೋರ್ಸ್ ಡೆವಲಪ್‌ಮೆಂಟ್, (೨೦೦೧), ಗೌರ್ವನ್‌ಮೆಂಟ್ ಆಫ್ ಇಂಡಿಯಾ, ಸರ್ವಶಿಕ್ಷಾ ಅಭಿಯಾನ -ಎ ಪ್ರೋಗ್ರಾಂ ಫಾರ್ ಯೂನಿರ್ವಸಲ್ ಎಲಿಮೆಂಟರಿ ಎಜುಕೇಷನ್: ಫ್ರೇಮ್ ವರ್ಕ್ ಫಾರ್ ಇಂಪ್ಲಿಮೆಂಟೇಷನ್, ನ್ಯೂ ಡೆಲ್ಲಿ
* ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನಲ್ ರಿಸರ್ಚ್ ಅಂಡ್ ಟ್ರೈನಿಂಗ್, (೧೯೯೨), ಫಿಫ್ತ್ ಆಲ್ ಇಂಡಿಯಾ ಎಜುಕೇಷನಲ್ ಸರ್ವೆ, ೨ ವಾಲ್ಯೂಮ್ಸ್, (ಎನ್.ಸಿ.ಇ.ಆರ್. ಟಿ), ನ್ಯೂ ಡೆಲ್ಲಿ
* ನ್ಯಾಷನಲ್ ಕೌನ್ಸಿಲ್ ಆಫ್ ಎಜುಕೇಷನಲ್ ರಿಸರ್ಚ್ ಅಂಡ್ ಟ್ರೈನಿಂಗ್, (೧೯೯೭), ಸಿಕ್ತ್ ಆಲ್ ಇಂಡಿಯ ಎಜುಕೇಷನಲ್ ಸರ್ವೆ, ನ್ಯಾಷನಲ್ ಟೇಬಲ್, ವಾಲ್ಯೂಮ್-೧ (ಎನ್.ಸಿ.ಇ.ಆರ್.ಟಿ), ನ್ಯೂ ಡೆಲ್ಲಿ.
* ನಂಜುಂಡಸ್ವಾಮಿ ಎಂ, (೨೦೦೭), "ಗ್ರಾಮೀಣ ಪ್ರದೇಶದಲ್ಲಿನ ಪ್ರಾಥಮಿಕ ಶಿಕ್ಷಣದ ಸಮಸ್ಯೆಗಳು", ಯೋಜನಾ ಪತ್ರಿಕೆ, ಏಪ್ರಿಲ್, ಪುಟ, ೪೬-೫೯.
* ನಾಯಕ್ ಜೆ.ಪಿ. (೧೯೬೯),ದಿ ಮೇನ್ ರೆಕಮೆಂಡೇಷನ್ಸ್ ಆಫ್ ದಿ ಎಜುಕೇಷನ್ ಕಮಿಷನ್ -ಎ ಸಮ್ಮರಿ, ಎನ್‌ಸಿಇಆರ್‌ಟಿ, ನ್ಯೂ ಡೆಲ್ಲಿ
* ನಾಯಕ್, ಜೆ.ಪಿ. (೧೯೭೫), ಇಕ್ವಾಲಿಟಿ, ಕ್ವಾಲಿಟಿ, ಮತ್ತು ಕ್ವಾಂಟಿಟಿ ದಿ ಇಲ್ಯೂಸಿವ್ ಟ್ರ್ಯಾಂಜಿಲ್ ಇನ್ ಇಂಡಿಯನ್ ಎಜುಕೇಷನ್, ಅಲೈಡ್, ನ್ಯೂ ಡೆಲ್ಲಿ,
* ನಾಯಕ್, ಜೆ.ಪಿ.; (೧೯೮೨), ದಿ ಎಜುಕೇಷನ್ ಕಮಿಷನ್ ಅಂಡ್ ಆಪ್ಟರ್, ಅಲೈಡ್, ನ್ಯೂ ಡೆಲ್ಲಿ
* ನರಸಿಂಹಚಾರ್, (೨೦೦೬), ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, ಭಾರತಿ ಪ್ರಕಾಶನ, ಸರಸ್ವತಿಪುರಂ, ಮೈಸೂರು.

- ನರಸಿಂಹಾಚಾರ್, (೨೦೦೬), ಉದಯೋನ್ಮುಖ ಭಾರತದಲ್ಲಿ ಶಿಕ್ಷಣ, ಭಾರತಿ ಪ್ರಕಾಶನ, ಸರಸ್ವತಿಪುರಂ, ಮೈಸೂರು.

- ನಿರಂಜನಾರಾಧ್ಯ, ವಿ.ಪಿ.; (೨೦೦೪), ಯೂನಿವರ್ಸಲ್ ಆಫ್ ಸ್ಕೂಲ್ ಎಜುಕೇಷನ್: ದಿ ರೋಡ್ ಅಹೆಡ್, ಬುಕ್ಸ್ ಫಾರ್ ಚೇಂಜ್, ಬೆಂಗಳೂರು.

- ನಿರಂಜನಾರಾಧ್ಯ, ವಿ.ಪಿ.; (೨೦೦೬), ಅಂಡ್ ಕಸ್ಯಫ್ ಅರುಣ್, ದಿ ಫಂಡಮೆಂಟಲ್ ಆಫ್ ದಿ ಫಂಡಮೆಂಟಲ್ ರೈಟ್ ಟೂ ಎಜುಕೇಷನ್ ಇನ್ ಇಂಡಿಯಾ; ಬುಕ್ಸ್ ಫಾರ್ ಚೇಂಜ್, ಬೆಂಗಳೂರು

- ನಿರಂಜನಾರಾಧ್ಯ. ವಿ.ಪಿ.; (೨೦೦೯), ಎ ಸ್ಟಿಲ್ ಬಾರ್ನ್ ಲೆಜಿಸ್ಲೇಷನ್, ಕ್ಯಾಂಬಟ್ ಲಾ, ಮೇ–ಆಗಸ್ಟ್

- ಪ್ರಶಾಂತ್ ಎಚ್.ಡಿ, (೨೦೦೬), ಶಾಲಾ ಶಿಕ್ಷಣದ ವಿಕೇಂದ್ರೀಕರಣ:ಎಸ್.ಡಿ.ಎಂ.ಸಿ ಕಾರ್ಯಕ್ಷಮತೆ, ಪ್ರಸಾರಾಂಗ, ಕನ್ನಡ ವಿಶ್ವ ವಿದ್ಯಾಲಯ, ಹಂಪಿ,

- ಪ್ರಶಾಂತ್ ಎಚ್.ಡಿ; (೨೦೦೪), ಶಾಲಾ ಬಿಸಿಊಟ ಅಧ್ಯಯನ ವರದಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೫೮೩೨೭೬.

- ಪ್ರಶಾಂತ್ ಎಚ್.ಡಿ; (೨೦೦೫), ಮಕ್ಕಳ ಶಿಕ್ಷಣ ಮತ್ತು ಬದಲಾಗುತ್ತಿರುವ ಪೋಷಕರ ಮನೋಭಾವ, ಅಭಿವೃದ್ಧಿ ಅಧ್ಯಯನ, ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೫೮೩೨೭೬.

- ಪ್ರಶಾಂತ್ ಎಚ್.ಡಿ; (೨೦೦೫), ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೫೮೩೨೭೬.

- ಪ್ರಶಾಂತ್ ಎಚ್.ಡಿ; (೨೦೦೬). ಎಸ್.ಡಿ.ಎಂ.ಸಿ ಹಾಗೂ ಶಿಕ್ಷಕರ ನಡುವೆ ಭಿನ್ನಮತ–ಅಪನಂಬಿಕೆ, ಗೊಂದಲ, ಅಸಹಕಾರ, ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೫೮೩೨೭೬.

- ಪ್ರಶಾಂತ್ ಎಚ್.ಡಿ: (೨೦೦೬). ಹೆಣ್ಣು ಮಕ್ಕಳ ಶಿಕ್ಷಣ: ಒಂದು ಸ್ಥೂಲ ನೋಟ, ಅಭಿವೃದ್ಧಿ ಅಧ್ಯಯನ ಸಮಾಜ ವಿಜ್ಞಾನ ಪತ್ರಿಕೆ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೫೮೩೨೭೬.

- ಪ್ರಶಾಂತ್ ಎಚ್.ಡಿ: (೨೦೦೯). ಪರ್ಯಾಯ ಅಭಿವೃದ್ಧಿ ನಾವೇನು ಮಾಡಬಹುದು, ಜನವರಿ ೨೦೦೯ರಲ್ಲಿ, ಅಭಿವೃದ್ಧಿ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ಇವರು ಸಂಘಟಿಸಿದ ರಾಜ್ಯ ಮಟ್ಟದ ಕಾರ್ಯಗಾರದಲ್ಲಿ ಮಂಡಿಸಿದ ಲೇಖನ

- ಪ್ರಶಾಂತ್ ಎಚ್.ಡಿ:(೨೦೦೯), ಶಾಲಾ ಶಿಕ್ಷಣದ ಸಾರ್ವತ್ರೀಕರಣದ: ದಲಿತ ಮಕ್ಕಳ ಸ್ಥಿತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ ವಿದ್ಯಾರಣ್ಯ, ೫೮೩೨೭೬.

- ಪ್ರಸಾದ್, ಕೆ.ವಿ. ಈಶ್ವರ್, (೧೯೮೭), ವೇಸ್ಟೇಜ್, ಸ್ಟ್ಯಾಗ್ನೇಷನ್ ಆ್ಯಂಡ್ ಇನ್ ಈಕ್ವಾಲಿಟಿ ಆಫ್ ಅಪರ್‌ಚ್ಯುನಿಟಿ ಇನ್ ರೂರಲ್ ಪ್ರೈಮರಿ ಎಜ್ಯುಕೇಶನ್ : ಎ ಕೇಸ್ ಸ್ಟಡಿ ಆಫ್ ಆಂಧ್ರ ಪ್ರದೇಶ, ಮಿನಿಸ್ಟ್ರಿ ಆಫ್ ಹ್ಯೂಮನ್ ರಿಸರ್ಚ್ ಡೆವಲಪ್‌ಮೆಂಟ್, ನ್ಯೂ ಡೆಲ್ಲಿ.

- ಪ್ರಶಾಂತ್ ಎಚ್.ಡಿ., (೨೦೦೩), ವೃದ್ಧರ ಪರಿಕಲ್ಪನೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

- ಪ್ರಶಾಂತ್ ಎಚ್.ಡಿ., (೨೦೦೫), ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

- ಪ್ರಶಾಂತ್ ಎಚ್.ಡಿ., (೨೦೦೫), ಈಶಾನ್ಯ ಕರ್ನಾಟಕದಲ್ಲಿ ಪ್ರಾಥಮಿಕ ಶಿಕ್ಷಣ ಮತ್ತು ಸಮಾಜ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ.

- ಪ್ರಶಾಂತ್ ಎಚ್.ಡಿ., (೨೦೦೬), ಹೆಣ್ಣುಮಕ್ಕಳ ಶಿಕ್ಷಣ : ಒಂದು ಸ್ಥೂಲನೋಟ, ಅಭಿವೃದ್ಧಿ ಅಧ್ಯಯನ ಪತ್ರಿಕೆ, ಸಂಪುಟ ೫, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

- ಪದ್ಮಶ್ರೀ, ಆರ್.ಪಿ (೨೦೦೪), ಕಮ್ಯೂನಿಟಿ ಪಾರ್ಟಿಸಿಪೇಷನ್ ಇನ್ ದಿ ಪ್ರೋಸಸ್ ಆಫ್ ಯೂನಿವರ್ಷಲೇಷನ್ ಆಫ್ ಎಲಿಮೆಂಟರಿ ಎಜುಕೇಷನ್: ಎನ್ ಇವ್ಯಾಲುವೆಟ್ ಸ್ಟಡಿ (ಅನ್ ಪಬ್ಲಿಷಡ್ ಥೀಸಿಸ್ ಯಾಸ್ ಪಾರ್ಟ್ ಆಫ್ ಎಂ ಎಡ್ ಡೆಸರ್ಟೇಷನ್ ರಿಕ್ವೈರ್‌ಮೆಂಟ್, ಆನ್ ಫೈಲ್ ವಿತ್ ಬೆಂಗಳೂರು ಯೂನಿವರ್ಸಿಟಿ)

- ಪ್ರೋಬ್ ಟೀಂ, (೧೯೯೯), ಪಬ್ಲಿಕ್ ರಿಪೋರ್ಟ್ ಆನ್ ಎಜುಕೇಷನ್ ಇನ್ ಇಂಡಿಯಾ, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ.

- ಪ್ರೋಬ್, (೧೯೯೯), ಪಬ್ಲಿಕ್ ರಿಪೋರ್ಟ್ ಆನ್ ಬೇಸಿಕ್ ಎಜುಕೇಷನ್ ಇನ್ ಇಂಡಿಯಾ (ಟೀಮ್), ಆಕ್ಸ್ ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

- ಪ್ರೈಂ ಮಿನಿಸ್ಟರ್ಸ್ ಹೈ ಲೆವಲ್ ಕಮಿಟಿ, (೨೦೦೬), ಗೌವರ್ನಮೆಂಟ್ ಆಫ್ ಇಂಡಿಯಾ, ಸೋಷಿಯಲ್, ಎಕಾನಮಿಕ್ ಅಂಡ್ ಎಜುಕೇಷನ್ ಸ್ಟೇಟಸ್ ಆಫ್ ದಿ ಮುಸ್ಲಿಂ ಕಮ್ಯುನಿಟಿ ಇನ್ ಇಂಡಿಯಾ, ನ್ಯೂ ಡೆಲ್ಲಿ

- ಪ್ರೋಬ್, (೧೯೯೮), ಪಬ್ಲಿಕ್ ರಿಪೋರ್ಟ್ ಆನ್ ಬೆಸಿಕ್ ಎಜ್ಯುಕೇಷನ್ ಇನ್ ಇಂಡಿಯಾ, ಆರ್ಕ್ಸ್‌ಫಡ್ ಯುನಿವರ್ಸಿಟಿ, ನ್ಯೂಡೆಲ್ಲಿ.

- ಪ್ರೋಬ್, (೧೯೯೯), ಪಬ್ಲಿಕ್ ರಿಪೋರ್ಟ್ ಆನ್ ಬೇಸಿಕ್ ಎಜುಕೇಷನ್ ಇನ್ ಇಂಡಿಯಾ (ಟೀಮ್), ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂ ಡೆಲ್ಲಿ.

- ಪ್ರೋಬ್, (೧೯೯೯), ಪಬ್ಲಿಕ್ ರಿಪೋರ್ಟ್ ಆನ್ ಬೇಸಿಕ್ ಎಜುಕೇಷನ್, ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ನ್ಯೂಡೆಲ್ಲಿ.

- ರಾಮಚಂದ್ರನ್ ವಿಮಲಾ, (೨೦೦೩ ಬಿ.), ಗೇಟಿಂಗ್ ಚಿಲ್ಡ್ರನ್ ಬ್ಯಾಕ್ ಟು ಸ್ಕೂಲ್ : ಕೇಸ್ ಸ್ಟಡಿ ಇನ್ ಪ್ರೈಮರಿ ಎಜ್ಯುಕೇಷನ್, ಸೇಜ್ ಪಬ್ಲಿಕೇಷನ್, ನ್ಯೂಡೆಲ್ಲಿ.

- ರಾಮಚಂದ್ರನ್ ವಿಮಲ, (೨೦೦೩), ಗೆಟಿಂಗ್ ಚಿಲ್ಡ್ರನ್ ಬ್ಯಾಕ್ ಟು ಸ್ಕೂಲ್ : ಕೇಸ್ ಸ್ಟಡಿ ಇನ್ ಪ್ರೈಮರಿ ಎಜುಕೇಷನ್, ಸೇಜ್ ಪಬ್ಲಿಕೇಷನ್ಸ್, ನ್ಯೂಡೆಲ್ಲಿ.

- ರೇಖಾ ವಜೀರ್, (೨೦೦೦), ದಿ ಜೆಂಡರ್ ಗ್ಯಾಪ್ ಇನ್ ಬೇಸಿಕ್ ಎಜುಕೇಷನ್ ಎನ್.ಜಿ.ಓ. ಆ್ಯಸ್ ಚೇಂಜ್ ಏಜನ್ಸಿ, ಸೇಜ್, ನ್ಯೂಡೆಲ್ಲಿ.

- ರೇಖಾ ವಜೀರ್, (೨೦೦೦), ದಿ ಜೆಂಡರ್ ಗ್ಯಾಪ್ ಇನ್ ಬೇಸಿಕ್ ಎಜುಕೇಷನ್ ಎನ್.ಜಿ.ಓ. ಆ್ಯಸ್ ಚೇಂಜ್ ಏಜನ್ಸಿ, ಸೇಜ್, ನ್ಯೂಡೆಲ್ಲಿ.

- ರೇಖಾ ಕೌಲ್, (೨೦೦೧), "ಅಸೆಸಿಂಗ್ ಪ್ರೈಮರಿ ಎಜುಕೇಷನ್ ಗೋಯಿಂಗ್ ಬಿಹ್ಯಾಂಡ್ ದಿ ಕ್ಲಾಸ್ ರೂಂ', ಎಕನಾಮಿಕ್ ಆಂಡ್ ಪೊಲಿಟಿಕಲ್ ವೀಕ್ಲಿ, ಜನವರಿ ೧೩.

- ರೇಖಾ ಕೌಲ್, (೨೦೦೧), "ಅಸೆಸಿಂಗ್ ಪ್ರೈಮರಿ ಎಜುಕೇಶನ್ ಗೋಯಿಂಗ್ ಬಿಹ್ಯಾಂಡ್ ದಿ ಕ್ಲಾಸ್‌ರೂಂ", ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವೀಕ್ಲಿ, ಜನವರಿ ೧೩.

- ರೇಖಾ ಕೌಲ್., (೧೯೯೩), ಕಾಸ್ಟ್, ಕ್ಲಾಸ್ ಆ್ಯಂಡ್ ಎಜುಕೇಷನ್, ಸೇಜ್, ನ್ಯೂಡೆಲ್ಲಿ.

- ರೇಖಾ ಕೌಲ್., (೧೯೯೩), ಕಾಸ್ಟ್, ಕ್ಲಾಸ್ ಆ್ಯಂಡ್ ಎಜುಕೇಷನ್, ಸೇಜ್, ನ್ಯೂಡೆಲ್ಲಿ.

- ರೇಖಾ ಕೌಲ್., (೧೯೯೩), ಕಾಸ್ಟ್, ಕ್ಲಾಸ್ ಆಂಡ್ ಎಜುಕೇಷನ್. ಸೇಜ್ ನ್ಯೂ ಡೆಲ್ಲಿ.

- ಶರ್ಮಾ ಜೆ.ಎಸ್. (೧೯೬೭), (ಇಡಿ) ಎಜುಕೇಷನಲ್ ಪ್ಲಾನಿಂಗ್: ಇಟ್ಸ್ ಲೀಗಲ್ ಅಂಡ್ ಕಾನ್ಸ್ಟಿಟ್ಯೂಷನಲ್ ಇಂಪ್ಲಿಕೇಷನ್ ಇನ್ ಇಂಡಿಯಾ. ದಿ ಇಂಡಿಯನ್ ಲಾ ಇನ್ಸ್ಟಿಟ್ಯೂಟ್, ಬಾಂಬೆ

- ಟಾಸ್ಕ್ ಪೋರ್ಸ್ ಆನ್ ಎಜುಕೇಷನ್. (೨೦೦೦). ಗೌವರ್ನಮೆಂಟ್ ಆಫ್ ಕರ್ನಾಟಕ, ಇಂಟರಿಮ್ ರಿಪೋರ್ಟ್ ಆಫ್ ಟಾಸ್ಕ್ ಪೋರ್ಸ್ ಆನ್ ಎಜುಕೇಷನ್, ಬೆಂಗಳೂರು

- ತಿಲಕ್ ಜೆ.ಬಿ.ಜಿ, (೧೯೯೬), 'ಹೌ ಫ್ರೀ ಈಸ್ ಫ್ರೀ ಪ್ರೈಮರಿ ಎಜುಕೇಷನ್ ಇನ್ ಇಂಡಿಯಾ', ಎಕನಾಮಿಕ್ ಆ್ಯಂಡ್ ಪೊಲಿಟಿಕಲ್ ವಿಕ್ಲಿ, ೩ ಫೆಬ್ರವರಿ.

- ತಿಲಕ್ ಜೆ.ಬಿ.ಜಿ, (೨೦೦೦ ಬಿ), 'ಡಿಟರ್ಮಿನೇಷನ್ಸ್ ಆಫ್ ಹೌಸ್ ಹೋಲ್ಡ್ ಎಕ್ಸ್‌ಪೆಂಡಿಚರ್ ಆನ್ ಎಜುಕೇಶನ್ ಇನ್ ರೂರಲ್ ಇಂಡಿಯಾ : ಎ ಸ್ಟಡಿ ಬೇಸ್ಡ್ ಆನ್ ದಿ ಎನ್.ಸಿ.ಇ.ಆರ್.ಟಿ ಸರ್ವೇ ಆನ್ ಹ್ಯೂಮನ್ ಡೆವಲಪ್‌ಮೆಂಟ್ ಇನ್ ಇಂಡಿಯಾ', ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನಲ್ ಪ್ಲಾನಿಂಗ್ ಆ್ಯಂಡ್ ಅಡ್ಮಿನಿಸ್ಟ್ರೇಷನ್, ನ್ಯೂ ಡೆಲ್ಲಿ.

- ತಿಲಕ್ ಜೆ.ಬಿ.ಜಿ, (೨೦೦೦ ಎ), 'ಹೌಸ್‌ಹೋಲ್ಡ್ ಎಕ್ಸ್‌ಪೆಂಡಿಚರ್ ಆನ್ ಎಜುಕೇಶನ್ ಇನ್ ಇಂಡಿಯಾ', ಎ ಪ್ರಿಲಿಮಿನರಿ ಎಜುಕೇಶನ್ ಆಫ್ ದಿ ೫೨ ರೌಂಡ್ ಆಫ್ ದಿ ನ್ಯಾಷನಲ್ ಸ್ಯಾಂಪಲ್ ಸರ್ವೇ, ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಶನ್ ಪ್ಲಾನಿಂಗ್ ಆ್ಯಂಡ್ ಅಡ್ಮಿನಿಸ್ಟ್ರೇಶನ್, ನ್ಯೂ ಡೆಲ್ಲಿ.

- ಥೇಕೆಡತ್ (೧೯೯೯) "ಶತಮಾನ ಅಂಚಿನಲ್ಲಿ ಶಿಕ್ಷಣ", ನವಕರ್ನಾಟಕ ಪಬ್ಲಿಕೇಷನ್ಸ್, ಬೆಂಗಳೂರು.

- ಉನ್ನಿಕೃಷ್ಣನನ್ ಜೆ.ಪಿ.ವಿ. (೧೯೯೩), ಸ್ಟೇಟ್ ಆಫ್ ಆಂಧ್ರ ಪ್ರದೇಶ, ಐಎಸ್‌ಸಿಸಿ ೬೪೫

- ಉಷಾದೇವಿ ಎಂ.ಡಿ. (೨೦೦೩), "ಗ್ರಾಸ್‌ರೂಟ್ಸ್ ಸ್ಟ್ರಕ್ಚರ್ ಇನ್ ಡಿಸೆಂಟ್ರಲೈಸ್ಡ್ ಮ್ಯಾನೆಜ್‌ಮೆಂಟ್ ಆಫ್ ಎಲಿಮೆಂಟರಿ ಎಜುಕೇಷನ್ ಇನ್ ಕರ್ನಾಟಕ : ಕ್ರಿಟಿಕಲ್ ಇಶ್ಯೂಸ್ ಇನ್ ಕೆಪಾಸಿಟಿ ಬಿಲ್ಡಿಂಗ್", ಇಂಡಿಯಾ ಸೋಶಿಯಲ್ ಸೈನ್ಸ್ ರಿವ್ಯೂ, ವಾಲ್ಯೂಮ್-೫, ನವೆಂಬರ್-ಡಿಸೆಂಬರ್ ೨, ಸೇಜ್, ನ್ಯೂಡೆಲ್ಲಿ.

- ವರ್ಲ್ಡ್ ಬ್ಯಾಂಕ್, (೧೯೯೭), 'ಡೆವಲಪ್‌ಮೆಂಟ್ ಇನ್ ಪ್ರಾಕ್ಟೀಸ್ : ಪ್ರೈಮರಿ ಎಜುಕೇಷನ್ ಇನ್ ಇಂಡಿಯಾ', ಅಲೈಡ್ ಪಬ್ಲಿಷಿಂಗ್, ನ್ಯೂ ಡೆಲ್ಲಿ .

- ವಾಸವಿ ಎ.ಆರ್, (೨೦೦೦), 'ಎಕ್ಸ್‌ಕ್ಲೂಷನ್, ಎಲಿಮಿನೇಷನ್ ಆ್ಯಂಡ್ ಆಪರ್ಚುನಿಟಿ ಪ್ರೈಮರಿ ಸ್ಕೂಲ್ಸ್ ಆ್ಯಂಡ್ ಸ್ಕೂಲಿಂಗ್ ಇನ್ ಸೆಲೆಕ್ಟೆಡ್ ರೀಜನ್ಸ್ ಆಫ್ ಇಂಡಿಯಾ', ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್, ಬೆಂಗಳೂರು.

- ವಾಸವಿ ಎ.ಆರ್, (೨೦೦೦), 'ಎಕ್ಸ್‌ಕ್ಲೂಷನ್, ಎಲಿಮಿನೇಟೆಡ್ ಅಂಡ್ ಆಪರ್ಚುನಿಟಿ ಪ್ರೈಮರಿ ಸ್ಕೂಲ್ ಆ್ಯಂಡ್ ಸ್ಕೂಲಿಂಗ್ ಇನ್ ಸೆಲೆಕ್ಟೆಡ್ ರೀಜನ್ಸ್ ಆಫ್ ಇಂಡಿಯಾ; ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಆಡ್ವಾನ್ಸ್ ಸ್ಟಡಿಸ್, ಬೆಂಗಳೂರು.

- ವೇನರ್, ಮೈರಾನ್, (೧೯೯೧), 'ದಿ ಚೈಲ್ಡ್ ಆ್ಯಂಡ್ ದಿ ಸ್ಟೇಟ್ ಇನ್ ಇಂಡಿಯಾ: ಚೈಲ್ಡ್ ಲೇಬರ್ ಆ್ಯಂಡ್ ಎಜುಕೇಷನ್ ಪಾಲಿಸಿ ಇನ್ ಕಂಪ್ಯಾರಿಟಿವ್ ಪರ್‌ಸ್ಪೆಕ್ಟಿವ್'. ಪ್ರಿನ್ಸ್‌ಟನ್ ಯುನಿವರ್ಸಿಟಿ ಪ್ರೆಸ್. ಪ್ರಿನ್ಸ್‌ಟನ್.

- ವೈದ್ಯನಾಥನ್.ಎ. ಆ್ಯಂಡ್ ಪಿ.ಆರ್.ಜಿ. ನಾಯರ್ (೨೦೦೦), ಎಲಿಮೆಂಟರಿ ಎಜ್ಯುಕೇಷನ್ ಇನ್ ರೂರಲ್ ಇಂಡಿಯಾ : ಎ ಗ್ರಾಸ್ ರೂಟ್ಸ್ ವ್ಯೂ, ಸೇಜ್. ಪಬ್ಲಿಕೇಷನ್ಸ್, ನ್ಯೂಡೆಲ್ಲಿ.